ಕನ್ನಡ ಜಾನಪದ ಅಧ್ಯಯನ
ಮೊದಲ ಘಟ್ಟ 1800-1950

ಲೇಖಕರು:

ಡಾ. ವಿಶ್ವನಾಥ ಬದಿಕಾನ

ಸಹಾಯಕ ಪ್ರಾಧ್ಯಾಪಕ

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯ, ಮಂಗಳೂರು

Kannaḍa jānapada adhyayana modala ghaṭṭa 1800-1950
The first phase of Kannada folklore studies 1800-1950

Author : **Dr. Vishwanatha Badikana**
Assistant Professor, St Aloysius Deemed to be University, Mangaluru-575003

ISBN No : 978-93-342-0710-1

Size : 1/8 demmy

Paper Used :

Pages : 336

First Impression: 2025

Copyrights: Reserved

Price : Rs.400/-

Published by : **Vishwanatha Badikana**
Door No.9.88/9(34), Flat No.407, Dhruva Residency,
Yekkur, Mangaluru – 575 002 | Mob :9449615474, 8618361841
Email:badikana65@gmail.com

Cover page Design: Anvith V.B.

Cover page Alignment : Sudhakara Acharya Attegoli

Page Alignment : Ashwitha R. Shetty

Printer :
Sirivara Prakashana
No. 37/B, 8th Cross, Laxminarayana Pura, Bangaluru-01
Mob: 9844109706 | Email: ravisirivar@gmail.com

ಕನ್ನಡ ಜಾನಪದ ಅಧ್ಯಯನ ಮೊದಲ ಘಟ್ಟ 1800–1950

ಲೇಖಕರು : **ಡಾ. ವಿಶ್ವನಾಥ ಬದಿಕಾನ**
ಸಹಾಯಕ ಪ್ರಾಧ್ಯಾಪಕರು, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯ, ಮಂಗಳೂರು–575 003

ಕೃತಜ್ಞತೆಯ ಮಾತುಗಳು

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮೊದಲ ಬ್ಯಾಚ್‌ನ ಸಂಶೋಧನಾ ವಿದ್ಯಾರ್ಥಿಯಾಗಿ 1992ರ ಆಗಸ್ಟ್‌ನಲ್ಲಿ ಸೇರಿಕೊಂಡೆ. ಆಗ ಪಿಎಚ್.ಡಿ. ಅಧ್ಯಯನಕ್ಕೆ ಕೋರ್ಸ್ ವರ್ಕ್ ಇರಲಿಲ್ಲ. ಹತ್ತು ದಿನಗಳ ಸಂಶೋಧನಾ ಕಮ್ಮಟದ ನಿರ್ದೇಶಕರಾಗಿ ಸಂಶೋಧನಾ ವಿಧಿವಿಧಾನಗಳನ್ನು ವಿವರಿಸಿದ ಕವಿ **ಜಿ.ಎಸ್. ಶಿವರುದ್ರಪ್ಪ** ಮತ್ತು ಜಾನಪದ ವಿದ್ವಾಂಸ **ಕಾಳೇಗೌಡ ನಾಗವಾರ**ರಿಗೆ, ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾದ **ಚಂದ್ರಶೇಖರ ಕಂಬಾರ**ರಿಗೆ, ಸಂಶೋಧನಾ ವಿಧಿವಿಧಾನದ ಬಗ್ಗೆ ಪಾಠ ಮಾಡಿರುವ **ಯು.ಆರ್. ಅನಂತಮೂರ್ತಿ, ಕೀರ್ತಿನಾಥ ಕುರ್ತಕೋಟಿ, ಎ.ಕೆ. ರಾಮಾನುಜನ್, ಚಿದಾನಂದ ಮೂರ್ತಿ, ಕೆ.ವಿ. ನಾರಾಯಣ, ಬಸವರಾಜ ಕಲ್ಗುಡಿ**ಯವರಿಗೆ ಹಾಗೂ ಸಂಶೋಧನೆಯೊಂದಿಗೆ ಒಡನಾಟದಲ್ಲಿದ್ದ **ಎಚ್.ಎಸ್. ರಾಘವೇಂದ್ರ ರಾವ್, ಓ.ಎಲ್. ನಾಗಭೂಷಣ ಸ್ವಾಮಿ, ಕಿ.ರಂ. ನಾಗರಾಜ್, ಲಕ್ಷ್ಮಣ ತೆಲಗಾವಿ, ಹಿ.ಚಿ. ಬೋರಲಿಂಗಯ್ಯ, ಕರೀಗೌಡ ಬೀಚನಹಳ್ಳಿ, ಟಿ.ಎಸ್. ಸತ್ಯನಾಥ, ರಹಮತ್ ತರೀಕೆರೆ, ಎ. ಸುಬ್ಬಣ್ಣ ರೈ, ಎ. ಮೋಹನ ಕುಂಟಾರ್, ಮಾಧವ ಪೆರಾಜೆ, ಕೆ.ಕೆ. ಮಕಾಳಿ**ಯವರಿಗೆ, **'ಕನ್ನಡ ಜಾನಪದ ಅಧ್ಯಯನದ ಮೊದಲಘಟ್ಟ–1800–1950'** ಎಂಬ ವಿಷಯಕ್ಕೆ ಮಾರ್ಗದರ್ಶನ ನೀಡಿರುವ ಮತ್ತು ಮುನ್ನುಡಿ ಬರೆದ **ಪುರುಷೋತ್ತಮ ಬಿಳಿಮಲೆ**ಯವರಿಗೆ, ಪೂರ್ಣಕಾಲಿಕ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಲಾದ ಈ ಗ್ರಂಥದ ಪ್ರಕಟಣೆಗೆ ಒಪ್ಪಿಗೆ ನೀಡಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಡಳಿತ ವರ್ಗಕ್ಕೆ, ಪ್ರಸ್ತುತ ಕುಲಪತಿಯಾಗಿರುವ **ಡಿ.ವಿ. ಪರಮಶಿವಮೂರ್ತಿ**ಯವರಿಗೆ, ಕುಲಸಚಿವರಾದ **ಟಿ.ಪಿ. ವಿಜಯ**ರಿಗೆ, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾದ **ರೆ. ಡಾ. ಪ್ರವೀಣ್ ಮಾರ್ಟಿಸ್**ರಿಗೆ, ಪ್ರಾಂಶುಪಾಲರಾದ **ರೆ.ಫಾ. ಪ್ರಶಾಂತ ಮಾಡ್ತ**ರಿಗೆ, ಪ್ರಾಧ್ಯಾಪಕರಾದ **ನಾ. ದಾಮೋದರ ಶೆಟ್ಟಿ, ಸರಸ್ವತಿ ಕುಮಾರಿ, ಮಹಾಲಿಂಗ ಭಟ್ಟ ಕೆ., ದಿನೇಶ್ ನಾಯಕ್, ಕ್ರಿಸ್ಟೋಫರ್ ಡಿಸೋಜ, ಪ್ರಭುಕುಮಾರ್**ಗೆ, ಪ್ರೂಫ್ ತಿದ್ದಿದ **ಸರೋಜ ಎಂ.ಕೆ.**ಗೆ, ತಾಂತ್ರಿಕ ಸಹಾಯಕರಾದ **ಆಶಯ್ ವಿ.ಬಿ.**ಗೆ, ಮುಖಪುಟ ಚಿತ್ರ ರಚಿಸಿದ **ಅನ್ವಿತ್ ವಿ.ಬಿ.**ಗೆ, ಮುಖಪುಟ ವಿನ್ಯಾಸಗೊಳಿಸಿದ **ಸುಧಾಕರ ಆಚಾರ್ಯ ಅಟ್ಟೆಗೋಳಿ**ಯವರಿಗೆ, ಒಳಪುಟ ವಿನ್ಯಾಸಗೊಳಿಸಿದ **ಅಶ್ವಿತಾ ಆರ್. ಶೆಟ್ಟಿ**ಯವರಿಗೆ, ಹಿರಿಯರಾದ **ಕಳುವಾಜೆ ಮೋಹಿನಿ ಕುಶಾಲಪ್ಪ ಗೌಡ**ರಿಗೆ, ಗೆಳೆಯರಾದ **ರವೀಂದ್ರ ಸ್ವಾಮಿ, ಟಿ. ಚಂದ್ರಶೇಖರ ಶೆಟ್ಟಿ, ಲಕ್ಷ್ಮೀನಾರಾಯಣ ಕಜೆಗದ್ದೆ, ಭರತೇಶ ಅಲಸಂಡೆಮಜಲು** ಮತ್ತು ರಂಗಸಂಗಾತಿ **ಶಶಿರಾಜ್ ಕಾವೂರ್**, ಸಿರಿವರ ಪಕಾಶನದ **ರವೀಂದ್ರ ಸಿರಿವರ** – ಹೀಗೆ ಎಲ್ಲರಿಗೂ ಧನ್ಯವಾದಗಳು ಹಾಗೂ ಕೃತಜ್ಞತೆಗಳು.

ವಿಶ್ವನಾಥ ಬದಿಕಾನ
14.02.2025

ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟದ ವೈಜ್ಞಾನಿಕ ಪರಿಶೀಲನೆ

ಕನ್ನಡ ನವೋದಯ ಸಾಹಿತ್ಯದ ಮೊದಲ ಘಟ್ಟದ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಡಾ. ಶ್ರೀನಿವಾಸ ಹಾವನೂರ ಅವರು ತಮ್ಮ 'ಹೊಸಗನ್ನಡ ಅರುಣೋದಯ' (1974) ಎಂಬ ಹೆಸರಿನ ಸಂಶೋಧನಾ ಗ್ರಂಥದಲ್ಲಿ ಅಸಾಮಾನ್ಯ ಮಾಹಿತಿಗಳನ್ನು ಒದಗಿಸಿಕೊಟ್ಟ ಆನಂತರ ಅನೇಕರು ಆ ಮಾಹಿತಿಗಳ ಸೈದ್ಧಾಂತಿಕ ವಿಶ್ಲೇಷಣೆಗಳನ್ನೂ ನಡೆಸಿದರು. ಆದರೆ ಜಾನಪದ ಅಧ್ಯಯನಗಳ ಕುರಿತು ಆ ಬಗೆಯ ಸಂಶೋಧನೆಗಳು ನಡೆಯಲೇ ಇಲ್ಲ. 1974ರಲ್ಲಿ ಡಾ. ಹಾಮಾ ನಾಯಕರು 'ಜಾನಪದ ಗ್ರಂಥಸೂಚಿ'ಯನ್ನು ಪ್ರಕಟಿಸಿದರು. ಡಾ. ನಂ. ತಪಸ್ವೀಕುಮಾರ್ ಅವರು 1981ರಲ್ಲಿ 'ಕನ್ನಡ ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ' ಬರೆದರು. ಈ ಎರಡೂ ಪುಸ್ತಕಗಳು ನೀಡಿದ ಅಪೂರ್ವ ಮಾಹಿತಿಗಳು ಕನ್ನಡ ಜಾನಪದ ಕ್ಷೇತ್ರದಲ್ಲಿ ನಡೆದ ಕೆಲಸಗಳ ಬಗ್ಗೆ ನಮ್ಮಲ್ಲಿ ಒಂದು ಬಗೆಯ ಎಚ್ಚರ ಮೂಡಿಸಿತು. ಈ ಹಿನ್ನೆಲೆಯಲ್ಲಿ 1993ರಷ್ಟು ಹಿಂದೆ, ನನ್ನ ಮಾರ್ಗದರ್ಶನದಲ್ಲಿ ಡಾ. ವಿಶ್ವನಾಥ ಬದಿಕಾನ ಅವರು 'ಜಾನಪದ ಅಧ್ಯಯನದ ಮೊದಲ ಘಟ್ಟ'ದ ಕುರಿತು ಸಮಗ್ರ ಅನ್ನಬಹುದಾದ ಸಂಶೋಧನೆಯನ್ನು ಕೈಗೆತ್ತಿಕೊಂಡರು. ಅಧ್ಯಯನದ ಮೊದಲ ಹಂತದಲ್ಲಿ ಅವರು ಕ್ಷೇತ್ರಕಾರ್ಯ, ಗ್ರಂಥಾಲಯದ ಪುಸ್ತಕಗಳ ಪರಿಶೀಲನೆ, ವಿದ್ವಾಂಸರ ವೈಯಕ್ತಿಕ ಸಂಗ್ರಹಗಳ ಪರಾಮರ್ಶೆ, ಹಲವು ಕಡೆಗಳಲ್ಲಿ ಕಾಣಿಸುವ ಉಲ್ಲೇಖಗಳು, ವಿದ್ವಾಂಸರೊಡನೆ ಚರ್ಚೆ, ಹಾಗೂ ಪತ್ರ ಮುಖೇನ ಬಗೆ ಬಗೆಯ ಮಾಹಿತಿಗಳನ್ನು ಕಲೆಹಾಕಿದರು. ಎರಡನೆಯ ಹಂತದಲ್ಲಿ ಅವರು ತಾನು ಸಂಗ್ರಹಿಸಿದ ಅಪಾರ ಮಾಹಿತಿಗಳನ್ನು ವರ್ಗೀಕರಿಸಿಕೊಂಡು ತಮ್ಮ ಅಧ್ಯಯನವನ್ನು ಮುಂದುವರೆಸಿದರು. ಹೀಗೆ ಮಾಡುವುದರ ಮೂಲಕ ಅವರಿಗೆ ಕನ್ನಡ ಜಾನಪದ ಅಧ್ಯಯನದ ಸಾಂಸ್ಕೃತಿಕ ಹಿನ್ನೆಲೆ, ಲಭ್ಯವಿರುವ ಕೃತಿಗಳ ವೈಜ್ಞಾನಿಕ ವರ್ಗೀಕರಣ ಹಾಗೂ ಪರಿಶೀಲನೆ, ಮತ್ತು ಆ ಕಾಲಘಟ್ಟದ ಸಂಶೋಧಕರ ಚಿಂತನೆಗಳ ಕುರಿತು ನಿರ್ಣಾಯಕ ಅನ್ನಬಹುದಾದ ಮಾತುಗಳನ್ನು ಹೇಳಲು ಸಾಧ್ಯವಾಯಿತು. ಬಹುಶಃ ಕನ್ನಡದಲ್ಲಿ ಇದುವರೆಗೆ ನಡೆದ ಹಾಗೂ ನಡೆಯುತ್ತಿರುವ ಜಾನಪದ ಅಧ್ಯಯನ ಹಾಗೂ ಸಂಗ್ರಹಗಳ ಸಮಗ್ರ ಪರಿಚಯ ನೀಡುವ ಕೃತಿ ಇದೊಂದೇ ಇರಬೇಕು.

ಡಾ. ಬದಿಕಾನ ಅವರು ಡಾ. ಹಾ.ಮಾ. ನಾಯಕರ 'ಜಾನಪದ ಗ್ರಂಥ ಸೂಚಿ'ಯಲ್ಲಿ ಸೇರದೇ ಇರುವ ಕೃತಿಗಳನ್ನು ಪತ್ತೆ ಹಚ್ಚಿ ಅವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ, ಪ್ರಸ್ತುತ ಅಧ್ಯಯನದಲ್ಲಿ ಒಳಗೊಳಿಸಿದ್ದಾರೆ. ಈ ಅರ್ಥದಲ್ಲಿ ಅವರು ಗ್ರಂಥ ಸೂಚಿಯನ್ನು ವಿಸ್ತರಿಸಿದ್ದಾರೆ. ಮೊದಲಘಟ್ಟದ ಅಧ್ಯಯನದ ವ್ಯಾಪ್ತಿಯನ್ನು 1796ರಿಂದ 1810ರ ವರೆಗೆ ಕರ್ನಾಟಕದ ಬೇರೆ ಬೇರೆ ಪ್ರದೇಶದಲ್ಲಿ ಸುತ್ತಾಡಿ ಮೌಲಿಕವಾದ ಮೌಖಿಕ ಸಾಮಗ್ರಿಗಳನ್ನು ಸಂಗ್ರಹಿಸಿದ ಲೆಫ್ಟಿನಂಟ್ ಕರ್ನಲ್ ಮೆಕೆಂಝಿಯಿಂದ ಆರಂಭ ಮಾಡಿ, 1955ಕ್ಕೆ ಕೊನೆಗೊಳಿಸಿದ್ದಾರೆ. ಅಂದರೆ ಸುಮಾರು 150 ವರ್ಷಗಳ ಜಾನಪದ ಅಧ್ಯಯನವನ್ನು ಇದರಲ್ಲಿ ಪರಿಶೀಲಿಸಿಲಾಗಿದೆ. ಸ್ಥೂಲವಾಗಿ ಈ ಅವಧಿಯನ್ನು ಸ್ವಾತಂತ್ರ್ಯ ಹೋರಾಟದ ಕಾಲ ಎಂದು ಕರೆಯಬಹುದು. ಸ್ವಾತಂತ್ರ್ಯದ ಅನಂತರ ಭಿನ್ನ ಬಗೆಯ ಜಾನಪದ ಅಧ್ಯಯನ ಕ್ರಮಗಳು ಆರಂಭವಾದುವು. 1954ರಲ್ಲಿ ಬಿ.ಎಸ್. ಗದ್ದಗೀಮಠರು ತಮ್ಮ 'ಕನ್ನಡ ಜನಪದ ಗೀತೆಗಳು' ಎಂಬ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದರು. 1955ರಲ್ಲಿ ಎ.ಕೆ. ರಾಮಾನುಜನ್ ಅವರ 'ಗಾದೆಗಳು' ಎಂಬ ವಿಮರ್ಶಾ ಕೃತಿಯು ಪ್ರಕಟವಾಯಿತು. 1955ರಿಂದ ಕನ್ನಡ ಜಾನಪದ ಅಧ್ಯಯನವು ತನ್ನ ಮಗ್ಗುಲನ್ನು ಬದಲಾಯಿಸಿಕೊಂಡಿತು. ಮುಖ್ಯವಾಗಿ ಅದಕ್ಕೆ ಶೈಕ್ಷಣಿಕ ಮಹತ್ವ ಪ್ರಾಪ್ತಿಸಿತು. ಈ ಅರ್ಥದಲ್ಲಿ ಡಾ. ಬದಿಕಾನರು ಮೊದಲ ಘಟ್ಟದ ಜಾನಪದ ಅಧ್ಯಯನಕ್ಕೆ ಆರಿಸಿಕೊಂಡ 150 ವರ್ಷಗಳ ಅವಧಿ ವೈಜ್ಞಾನಿಕವಾಗಿದೆ.

ಈ 150 ವರ್ಷಗಳ ಅವಧಿಯಲ್ಲಿ ಜಾನಪದ ಅಧ್ಯಯನಗಳು ಯಾವ ರೀತಿಯಲ್ಲಿ ನಡೆದುವು? ಅವುಗಳ ಸೈದ್ಧಾಂತಿಕ ನೆಲೆಗಳು ಯಾವುದಾಗಿತ್ತು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವುದರ ಮೂಲಕ ಡಾ. ವಿಶ್ವನಾಥರು ಸ್ವಾತಂತ್ರ್ಯಪೂರ್ವ ಕನ್ನಡ ಜಾನಪದ ಸಂಗ್ರಹಗಳ ಹಾಗೂ ಅಧ್ಯಯನಗಳ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ಇದಕ್ಕಾಗಿ ಅವರು ಜಾನಪದ ಅಧ್ಯಯನಗಳು ನಡೆದ 19ನೆಯ ಶತಮಾನದ ಕರ್ನಾಟಕದ ಚಾರಿತ್ರಿಕ ಸನ್ನಿವೇಶವನ್ನು ಪರಿಶೀಲನೆಗೆ ಎತ್ತಿಕೊಂಡಿದ್ದಾರೆ. ಈ ಪುಸ್ತಕದ ಬಹಳ ಮಹತ್ವದ ಭಾಗ ಇದುವೇ ಆಗಿದೆ ಎಂದು ನಾನು ಭಾವಿಸುತ್ತೇನೆ. 20ನೇ ಶತಮಾನದ ಬಹುತೇಕ ಎಲ್ಲ ಅಧ್ಯಯನಗಳಲ್ಲಿ ಕಾಣಸಿಗುವ ಕಾರ್ಯ–ಕಾರಣ ಸಂಬಂಧಗಳ ವಿಶ್ಲೇಷಣೆಯ ಚೌಕಟ್ಟು ಇಲ್ಲಿಯೂ ಮುಂದುವರೆದಿದೆ. ಈ ಕುರಿತು ಲೇಖಕರು ಹೇಳಿಕೊಂಡ ಮಹತ್ವದ ಮಾತುಗಳು ಹೀಗಿವೆ–'ಆ ಕಾಲದ ಸಂಗ್ರಹಗಳಲ್ಲಿ ಹಾಡುಗಳಿಗೇ ಸಿಂಹಪಾಲು ಸಂದಿದೆ. ದೇಸೀ ವಿದ್ವಾಂಸರು ಜಾನಪದ ಹಾಡುಗಳತ್ತಲೇ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ಇಂಥ ಸಂದರ್ಭದಲ್ಲಿ ಯಾವ ಬಗೆಯ ಹಾಡುಗಳನ್ನು ಇವರು ಸಂಗ್ರಹಿಸಿದ್ದಾರೆ ಎಂಬ ಪ್ರಶ್ನೆಯೊಂದನ್ನು ಕೇಳಿಕೊಳ್ಳಲಾಗುವುದು. ಹಾಗೂ ಎರಡನೆಯದಾಗಿ, ಹಾಡುಗಳತ್ತಲೇ

ವಿದ್ವಾಂಸರ ಗಮನಹರಿಯಲು ಕಾರಣಗಳೇನು? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಲಾಗುವುದು. ಹೀಗೆ ಮಾಡಿದಾಗ ಘಟನೆಗೂ ಹಾಗೂ ಆ ಘಟನೆ ಸಂಭವಿಸಲು ಕಾರಣವಾದ ಅಂಶಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಇದನ್ನು ಸ್ವಲ್ಪ ಬೇರೆ ರೀತಿಯಾಗಿ ಹೇಳಬೇಕೆಂದರೆ, ನಾವು ಯಾವ ಕಾರಣವನ್ನು ಕಂಡುಕೊಳ್ಳುತ್ತೇವೆಯೋ ಆ ಕಾರಣವನ್ನು ತೆಗೆದರೆ ಅದರ ಪರಿಣಾಮವೂ ಇರುವುದಿಲ್ಲ ಎಂದು ಭಾವಿಸಲಾಗುವುದು. ಒಂದು ಪ್ರಶ್ನೆ ಮಾತ್ರ ಅಪರಿಹಾರ್ಯವಾಗಿ ಉಳಿದುಬಿಡುತ್ತದೆ. ಅದು ಕಾಲದ ಸಮಸ್ಯೆ. ನಾವು ಊಹಿಸುವ ಅಥವಾ ತರ್ಕಿಸುವ ಕಾರಣಗಳು ಹಾಗೂ ಅದರ ಕಾರಣಗಳ ಪರಿಣಾಮವಾಗಿ ಆ ಘಟನೆ ಸಂಭವಿಸಿದೆಯೇ ಎಂದು ಕೇಳಿದರೆ ಉತ್ತರಿಸುವುದು ಕಷ್ಟ. ಪ್ರಸ್ತುತ ಅಧ್ಯಯನದಲ್ಲಿ ಅಂಥ ತಾತ್ವಿಕ ಪ್ರಶ್ನೆಗಳಿಗೆ ಮುಖಾಮುಖಿಯಾಗಿಲ್ಲ. ಅದರ ಬದಲು ಜಾನಪದ ಸಂಗ್ರಹ ಹಾಗೂ ಅಧ್ಯಯನಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳುತ್ತಾ ಅದಕ್ಕೆ ನಮ್ಮ ಸಾಂಸ್ಕತಿಕ, ಸಾಮಾಜಿಕ ಹಾಗೂ ರಾಜಕೀಯ ಸಂದರ್ಭದಲ್ಲಿ ಕಾರಣಗಳನ್ನು ಊಹಿಸಲಾಗುವುದು. ನಾವು ಯಾವ ಕಾರಣಗಳನ್ನು ತರ್ಕಿಸುತ್ತೇವೆಯೋ ಅದರೊಳಗೆ ಆ ಘಟನೆ ಸಂಭವಿಸಲು ಬೇಕಾದ ಕಾರಣಗಳು ಹುದುಗಿರುತ್ತವೆ ಎಂದು ಭಾವಿಸಲಾಗಿದೆ. ಜಾನಪದ ಅಧ್ಯಯನಕ್ಕೆ ಕಾರಣವಾದ ಅಂಶಗಳನ್ನು ದೇಸೀ ಚಳುವಳಿಗಳಲ್ಲಿ ಕಂಡುಕೊಳ್ಳಲು ಸಾಧ್ಯವೆಂದು ನನ್ನ ನಂಬಿಕೆ. ಹೀಗೆಂದಾಗ ಸ್ವಾತಂತ್ರ್ಯಪೂರ್ವ ಕರ್ನಾಟಕದ ಸ್ಥಿತಿಗತಿಗೆ ಹಾಗೂ ಜಾನಪದ ಸಂಗ್ರಹಗಳ ನಡುವಿನ ಸಂಬಂಧವನ್ನು ನೇರ ಹಾಗೂ ಸರಳವೆಂದು ಭಾವಿಸಬಾರದು. ಜಾನಪದ ಸಂಗ್ರಹಗಳು ಪ್ರಕಟಿಸುವ ಮೌಲ್ಯ ವಿನ್ಯಾಸಕ್ಕೂ ಅಂಥ ಸಂಗ್ರಹಗಳು ಹುಟ್ಟಿ ಕೊಂಡಿರುವ ಚಾರಿತ್ರಿಕ ಸಂದರ್ಭಗಳ ನಡುವೆ ಇಂಥ ಸರಳವಾದ ಸಂಬಂಧ ಇರುತ್ತವೆಂದು ಭಾವಿಸಲಾಗದು. ಈ ಬಗೆಯ ಅಧ್ಯಯನಗಳು ಸಮಾಜದ ಪ್ರತಿಬಿಂಬ ಆಗಿರುವುದಿಲ್ಲ. ಬದಲು ಅವುಗಳ ನಡುವೆ ಸಂಬಂಧ ಹೆಚ್ಚು ಸಂಕೀರ್ಣವಾಗಿರುತ್ತದೆ. ಸಮಾಜದಲ್ಲಿ ಕಾಣಿಸಿಕೊಳ್ಳುವ ಬದಲಾವಣೆಗಳು ತಮ್ಮಷ್ಟಕ್ಕೆ ಸ್ವತಂತ್ರವಾಗಿ ಏನೂ ಘಟಿಸುವುದಿಲ್ಲ. ಅವು ಒಂದು ನಿರ್ದಿಷ್ಟ, ಚಾರಿತ್ರಿಕ ಬೆಳವಣಿಗೆಯ ಪರಿಣಾಮವಾಗಿರುತ್ತದೆ. ಚಾರಿತ್ರಿಕ ಬದಲಾವಣೆಯಲ್ಲಿ ಕೆಲವು ಸಂಗತಿಗಳು ಪ್ರಮುಖವಾಗಿ ಮುನ್ನೆಲೆಗೆ ಬರುತ್ತವೆ ಹಾಗೂ ಇನ್ನು ಕೆಲವು ಹಿನ್ನೆಲೆಗೆ ಸರಿದುಬಿಡುತ್ತವೆ. ಸಂಗ್ರಹ ಹಾಗೂ ಅಧ್ಯಯನಗಳ ಸಂದರ್ಭದಲ್ಲಿ ಪ್ರಾಮುಖ್ಯ ಪಡೆಯುವ ವಿವರಗಳು ಆಯಾ ವಿದ್ವಾಂಸರು ಪ್ರತಿನಿಧಿಸುವ ಸಾಮಾಜಿಕ ಸಮುದಾಯದ ಆಲೋಚನಾ ಕ್ರಮದೊಂದಿಗೆ ಸಂಬಂಧವನ್ನು ಪಡೆದಿರುತ್ತವೆ. 19ನೆಯ ಶತಮಾನದ ಬದಲಾವಣೆಗಳು ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಕರ್ನಾಟಕದ ಸಾಮಾಜಿಕ ರಚನೆಯ ಮೇಲೆ ಹಾಗೂ ಜಾನಪದ ಅಧ್ಯಯನದ ಮೇಲೆ ನಿರ್ಣಾಯಕವಾದ ಪರಿಣಾಮ ಬೀರಿದೆ. ಅಂಥ ಪರಿಣಾಮಗಳು ನಿರ್ದಿಷ್ಟ ಸಾಮಾಜಿಕ ಸಮುದಾಯದ ಮನಸ್ಥಿತಿಯೊಂದಿಗೆ ಹೊಂದಿರುವ ಸಂಬಂಧವನ್ನು ವಿಶ್ಲೇಷಿಸಲಾಗುವುದು.

ಯಾಕೆಂದರೆ ಅಧ್ಯಯನಗಳಾಗಲಿ, ಸಂಗ್ರಹಗಳಾಗಲಿ ಅವು ನಡೆದ ಪರಿಸರದ ಪ್ರತಿಫಲನ ಮಾತ್ರ ಆಗಿರುವುದಿಲ್ಲ. ಬದಲು ಅವುಗಳು ನಿರ್ದಿಷ್ಟ ಸನ್ನಿವೇಶವೊಂದನ್ನು ಎದುರಿಸಲು ವಿದ್ವಾಂಸರು ಕಂಡುಕೊಂಡ ಪ್ರಯತ್ನಗಳಾಗಿರುತ್ತವೆ. ಹೊಸ ಸನ್ನಿವೇಶವೊಂದು ಎದುರಾದಾಗ ಅದನ್ನು ಎದುರಿಸಲು ಹಳೆಯ ರಚನೆಗಳಿಂದ ಸಾಧ್ಯವಾಗುವುದಿಲ್ಲ. ಬದಲು ಹೊಸರಚನೆಗಳನ್ನು ನಿರ್ಮಿಸಿಕೊಳ್ಳಬೇಕಾಗುತ್ತದೆ. ಹೀಗೆ ಜಾನಪದ ಸಂಗ್ರಹ ಹಾಗೂ ಅಧ್ಯಯನಗಳನ್ನು ಅವು ಹುಟ್ಟಿಕೊಂಡ ಕಾಲದ ಚಾರಿತ್ರಿಕ ಸಂದರ್ಭದಲ್ಲಿರಿಸಿ ಚರ್ಚಿಸುವ ಹಾಗೂ ಅವನ್ನು ನಿರ್ದಿಷ್ಟ ಸಮುದಾಯದ ಮನಸ್ಥಿತಿಯೊಂದಿಗೆ ವಿಶ್ಲೇಷಿಸುವ ಕೆಲಸವನ್ನು ಇಲ್ಲಿ ಮಾಡಲಾಗಿದೆ'. ಲೇಖಕರ ಈ ಮಾತುಗಳು ಪ್ರಸ್ತುತ ಅಧ್ಯಯನಕ್ಕೆ ಭದ್ರವಾದ ಬುನಾದಿ ಮತ್ತು ಚೌಕಟ್ಟನ್ನು ಹಾಕಿಕೊಟ್ಟಿದೆ ಎಂಬುದಕ್ಕೆ ಈ ಕೃತಿಯೇ ಅತ್ಯುತ್ತಮ ಸಾಕ್ಷಿ.

ಕನ್ನಡ ಸಾಹಿತ್ಯದ ಮೊದಲಘಟ್ಟ ಮತ್ತು ಜಾನಪದ ಅಧ್ಯಯನಗಳ ಮೊದಲ ಘಟ್ಟಗಳು 19ನೆಯ ಶತಮಾನದ ಕರ್ನಾಟಕ ಸಮಾಜವು ಪಡೆದ ಚಾರಿತ್ರಿಕ ಅವಸ್ಥಾಂತರಗಳು ಹಾಗೂ ಅದೇ ಹೊತ್ತಿನ ಕರ್ನಾಟಕದ ಇಂಗ್ಲಿಷ್ ವಿದ್ಯಾವಂತ ವರ್ಗದ ವೈಚಾರಿಕತೆಯೊಂದಿಗೆ ಗಾಢವಾದ ಸಂಬಂಧ ಹೊಂದಿರುವುದನ್ನು ಪ್ರಸ್ತುತ ಪುಸ್ತಕ ಸೊಗಸಾಗಿ ದಾಖಲಿಸಿದೆ. ಅಂದರೆ ನಿರ್ದಿಷ್ಟವಾದ ಕಾಲಘಟ್ಟವೊಂದರಲ್ಲಿ ಏನು ನಡೆದಿದೆಯೆಂಬುದನ್ನು ಮೊದಲು ಇಲ್ಲಿ ವಿವರಿಸಿಕೊಳ್ಳಲಾಗಿದೆ. ಅನಂತರದ ಹಂತದಲ್ಲಿ ಅವು ಯಾಕೆ ನಡೆದಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಈ ನಿಟ್ಟಿನಲ್ಲಿ ಪುಸ್ತಕದ ಎರಡನೇ ಭಾಗದಲ್ಲಿ ನಡೆಸಿದ ಚರ್ಚೆಗಳು ಬಹಳ ಮಹತ್ವದ್ದವು. ಈ ಭಾಗದಲ್ಲಿ ಡಾ. ಬದಿಕಾನ ಹೇಳಿರುವ ಮಾತುಗಳು ಬಹಳ ಮುಖ್ಯವಾದುದು'–1800–1947ರ ನಡುವಣ ಅವಧಿಯು ನಾಡು ತೀವ್ರಗತಿಯಲ್ಲಿ ವಸಾಹತೀಕರಣಕ್ಕೆ ಒಳಪಟ್ಟ ಕಾಲವಾಗಿದೆ. ಹಾಗೂ ಈ ಕಾರಣಕ್ಕೆ ರಾಷ್ಟ್ರೀಯ ಹೋರಾಟ ಹುಟ್ಟಿಕೊಂಡು ಜನರು ಸಾಂಸ್ಕೃತಿಕ ಅನನ್ಯತೆಯ ಹುಡುಕಾಟಕ್ಕೆ ತೊಡಗಿದ ಸಂದರ್ಭವಾಗಿದೆ. ಚಾರಿತ್ರಿಕ ಸಂದರ್ಭವು ಜಾನಪದ ಸಂಗ್ರಹ ಅಧ್ಯಯನಗಳ ಮೇಲೆ ನಿರ್ಣಾಯಕವಾದ ಪರಿಣಾಮವನ್ನು ಬೀರಿರಲೇಬೇಕು ಎಂಬ ಪ್ರಮೇಯವನ್ನು ಆಧರಿಸಿ ಅಂಥ ಸ್ಥಿತಿಯನ್ನು ವಿಶ್ಲೇಷಿಸಲಾಗಿದೆ. ಬದಲಾದ ಚಾರಿತ್ರಿಕ ಸನ್ನಿವೇಶವೊಂದನ್ನು ಎದುರಿಸಲು ಜಾನಪದ ವಿದ್ವಾಂಸರುಗಳು ಯಾವ ಬಗೆಯ ಪ್ರಯತ್ನಗಳಲ್ಲಿ ತಲ್ಲೀನರಾದರು ಎಂಬ ಸೂಕ್ಷ್ಮವಾದ ಪರಿಶೀಲನೆ ನಡೆಸಲಾಗಿದೆ. ಪರಿಶೀಲನೆಯ ಪರಿಣಾಮವಾಗಿ ಕರ್ನಾಟಕದ ಉದೀಯಮಾನ ಮಧ್ಯಮವರ್ಗದ ವೈಚಾರಿಕತೆಯೇ ಜಾನಪದ ಅಧ್ಯಯನವನ್ನು ನಿಯಂತ್ರಿಸಿದೆ ಎಂಬ ನಿರ್ಣಯವು ಈ ಶತಮಾನದ ಮೊದಲ ಭಾಗದಲ್ಲಿ ಕರ್ನಾಟಕದ ವಿದ್ಯಾವಂತ ವರ್ಗವು ತನ್ನ ಸಾಂಸ್ಕೃತಿಕ ಅನನ್ಯತೆಯ ಹುಡುಕಾಟಕ್ಕಾಗಿ ನಡೆಸಿದ ಪ್ರಯತ್ನವೊಂದರ ಪರಿಶೀಲನೆಯೇ ಆಗಿದೆ'.

ಪುಸ್ತಕದ ಮೂರನೆಯ ಭಾಗದಲ್ಲಿ ಸ್ವಾತಂತ್ರ್ಯಪೂರ್ವ ಜಾನಪದ ಸಂಗ್ರಹಗಳ ವಿಮರ್ಶಾತ್ಮಕ ಪರಿಶೀಲನೆಯಿದೆ. ಈ ವರೆಗೆ ನಡೆದ ಅಧ್ಯಯನಗಳು ಅಸಮಗ್ರವೂ, ಅಸಮರ್ಪಕವೂ ಆಗಿರುವುದನ್ನು ಸ್ಥಾಪಿಸಿ ಅಧ್ಯಯನದ ಅಗತ್ಯವನ್ನು ಇಲ್ಲಿ ಮನಗಾಣಿಸಲಾಗಿದೆ. ಅನಂತರ ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಪ್ರಕಟವಾದ ಸಂಗ್ರಹಗಳನ್ನು ಅವುಗಳ ವಸ್ತುರೂಪವನ್ನು ಗಮನದಲ್ಲಿರಿಸಿಕೊಂಡು

1. ಜಾನಪದ ಸಾಹಿತ್ಯ ಸಂಗ್ರಹಗಳು
2. ಭೌತಿಕ ಜಾನಪದದ ಕುರಿತಾದ ಸಂಗ್ರಹಗಳು
3. ಸಾಮಾಜಿಕ ಆಚರಣೆಗಳ ಕುರಿತಾದ ಸಂಗ್ರಹಗಳು ಹಾಗೂ
4. ಪ್ರದರ್ಶನ ಕಲೆಗಳ ಕುರಿತಾದ ಸಂಗ್ರಹಗಳು

–ಎಂದು ವರ್ಗೀಕರಿಸಲಾಗಿದೆ. ಈ ವರ್ಗೀಕರಣ ಕ್ರಮವು ಸ್ವಲ್ಪ ಹಳೆಯದೇ ಆಗಿದ್ದರೂ ಕನ್ನಡ ಜಾನಪದದ ಯಾವ ಪ್ರಕಾರದಲ್ಲಿ ಹೆಚ್ಚು ಕೆಲಸ ನಡೆದಿದೆ ಹಾಗೂ ಯಾವ ಪ್ರಕಾರದಲ್ಲಿ ಕಡಿಮೆ ಕೆಲಸ ನಡೆದಿದೆಯೆಂದು ಗುರುತಿಸಿಕೊಳ್ಳಲು ಸಹಾಯ ಮಾಡಿದೆ. ಪುಸ್ತಕದ ನಾಲ್ಕನೆಯ ಭಾಗದಲ್ಲಿ ಸುಮಾರು 70 ಕೃತಿಗಳ ಸಂಕ್ಷಿಪ್ತ ಪರಿಚಯವಿದೆ. ಪ್ರತಿಯೊಂದು ಸಂಗ್ರಹಗಳ ಉದ್ದೇಶ, ವಸ್ತು, ವರ್ಗೀಕರಣ ವಿಧಾನ, ಮುನ್ನುಡಿ ಹಿನ್ನುಡಿಗಳಲ್ಲಿ ಸಂಪಾದಕರ, ಇತರರ ಮಾತುಗಳನ್ನು ವಿವರವಾಗಿ ಗಮನಿಸಲಾಗಿದೆ. ಆಯಾ ಸಂಗ್ರಹಕರ ಮಾತುಗಳನ್ನು ಉದ್ಧರಿಸುವುದರ ಜೊತೆಗೆ ತಮ್ಮ ಸಂಗ್ರಹಗಳ ಬಗೆಗೆ ಸಂಪಾದಕರೇ ಹೊಂದಿರುವ ನಿಲುವುಗಳನ್ನು ಖಚಿತಪಡಿಸಲಾಗಿದೆ. ಇದೊಂದು ಶ್ರಮಸಾಧ್ಯವಾದ ಕೆಲಸ. ಈ ಕೆಲಸವನ್ನು ಬದಿಕಾನರು ಅಚ್ಚುಕಟ್ಟಾಗಿ ನೆರವೇರಿಸಿದ್ದಾರೆ. ಕೊನೆಯ ಭಾಗದಲ್ಲಿ, ಪುಸ್ತಕದ ಎರಡನೆಯ ಭಾಗದಲ್ಲಿ ರೂಪಿಸಿಕೊಂಡ ಪ್ರಮೇಯವನ್ನು ಲಭ್ಯವಿರುವ ಕೃತಿಗಳ ಸಾಕ್ಷಿಯಲ್ಲಿ ಪರಿಶೀಲಿಸಿ, ಪ್ರಮೇಯವನ್ನು ರುಜುವಾತುಪಡಿಸಲಾಗಿದೆ. ಗ್ರಂಥದ ಕೊನೆಯಲ್ಲಿ ಮೊದಲ ಹಂತದ ಸಂಗ್ರಹಗಳು ಪ್ರಕಟಿಸಿದ 21 ಗುಣಲಕ್ಷಣಗಳನ್ನು ಪಟ್ಟಿಮಾಡಲಾಗಿದೆ. ಅವುಗಳೆಂದರೆ;

1. ಹಾಡುಗಳ ಪ್ರಾಧಾನ್ಯ
2. ಹಾಡುವಿಕೆಗೆ ಪ್ರಾಧಾನ್ಯ
3. ರಮ್ಯ ಶೀರ್ಷಿಕೆಗಳತ್ತ ಒಲವು
4. ಸ್ತ್ರೀ ಪ್ರಾಧಾನ್ಯ
5. ನೀತಿ ಪ್ರಾಧಾನ್ಯ

6. ಪ್ರಣಯ ಪ್ರಾಧಾನ್ಯ
7. ಗ್ರಾಮ ಜೀವನದ ಬಗೆಗೆ ಒಲವು
8. ಚರಿತ್ರೆಯ ಬಗೆಗೆ ಭಾವುಕ ಒಲವು
9. ದೇಸೀ ಛಂದಸ್ಸಿನ ಬಗೆಗೆ ಒಲವು
10. ಸೌಂದರ್ಯವಾದಿ ದೃಷ್ಟಿಕೋನ
11. ದಾಖಲಾತಿಯ ಉತ್ಸಾಹ
12. ಜಾನಪದ ಕಣ್ಮರೆಯಾಗುತ್ತಿರುವ ಭಯ
13. ವಸಾಹತೀಕರಣಕ್ಕೆ ತೀವ್ರ ಪ್ರತಿಭಟನೆ
14. ಸಂಘರ್ಷಾತೀತ ನಿಲುವುಗಳು
15. ಪರಿಷ್ಕರಣೆ ನಡೆಸುವಿಕೆ
16. ಬಂಧುತ್ವದ ನವೀಕರಣ
17. ಕುಟುಂಬ ಕೇಂದ್ರಿತ ವರ್ಗೀಕರಣ
18. ದೇಸೀ ಭೌದ್ಧಿಕತೆಯ ಮಂಡನೆ
19. ದೇಸೀ ವೈದ್ಯದ ಮಂಡನೆ
20. ಸಾಹಿತ್ಯ ಕೇಂದ್ರಿತ ಚರ್ಚೆ
21. ಸಂಗ್ರಹಗಳ ಸಾಂದರ್ಭಿಕ ವಿವರಗಳ ಗೈರುಹಾಜರಿ

ಇಂಥ ಬಹಳ ಅಗತ್ಯವಾದ ಮತ್ತು ಮುಖ್ಯವಾದ ಒಳನೋಟಗಳ ಪಟ್ಟಿಯನ್ನು ನೀಡಿದ ಬದಿಕಾನರು ಮುಂದೆ, ಜಾನಪದ ಸಂಗ್ರಹ ಕಾರ್ಯಗಳಲ್ಲಿ ಕಂಡುಬರುವ ಪ್ರಾದೇಶಿಕ ಅಸಮತೋಲನಗಳಿಗೆ ಕಾರಣಗಳನ್ನು ಕಂಡು ಹುಡುಕಿದ್ದಾರೆ. ಪಾಶ್ಚಾತ್ಯ ಹಾಗೂ ದೇಸೀ ವಿದ್ವಾಂಸರ ಕೆಲಸಗಳಲ್ಲಿ ಕಂಡುಬರುವ ಮುಖ್ಯ ವ್ಯತ್ಯಾಸಗಳನ್ನು ಪರಿಶೀಲಿಸಿದ್ದಾರೆ.

ಹೀಗೆ ಈ ಕೃತಿಯು 'ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟ'ದ ಬಗ್ಗೆ ಬಹಳ ಮಹತ್ವದ ಮಾಹಿತಿಗಳನ್ನು ನೀಡುವುದರ ಜೊತೆಗೆ ಅವುಗಳ ಸೈದ್ಧಾಂತಿಕ ಹಿನ್ನೆಲೆಯನ್ನೂ ಆಳವಾದ ಪರಿಶೀಲನೆ ಒಳಪಡಿಸಿದೆ. ಮೊದಲಘಟ್ಟದ ಜಾನಪದ ಸಂಗ್ರಹಗಳು ಕನ್ನಡ ನವೋದಯದ ನೈತಿಕತೆಗೆ ಬದ್ಧವಾಗಿ, ವಸಾಹತೀಕರಣಕ್ಕೆ ಒಳಗಾಗುತ್ತಲೇ ಅದಕ್ಕೆ ತಮ್ಮ ವಿರೋಧವನ್ನು ಸೂಚಿಸಿದ ಬಗ್ಗೆ ಇಲ್ಲಿ ಕುತೂಹಲ ಹುಟ್ಟಿಸುವ ವಿಶ್ಲೇಷಣೆ ಇದೆ. ಸಂಗ್ರಾಹಕರು ತಾವು ಬದುಕಿದ ಕಾಲಘಟ್ಟದ ಅವಶ್ಯಕತೆಗಳನ್ನು ಬಹಳ ಜವಾಬ್ದಾರಿಯಿಂದ

ಅರಿತುಕೊಂಡು ಕನ್ನಡ ಜಾನಪದ ಅಧ್ಯಯನಕ್ಕೆ ಸುಭದ್ರವಾದ ಅಡಿಗಲ್ಲನ್ನು ಹಾಕಿದ್ದರು ಎಂಬ ಅಂಶವನ್ನು ಡಾ. ವಿಶ್ವನಾಥ ಬದಿಕಾನರು ತುಂಬ ಸ್ಪಷ್ಟವಾಗಿ ಈ ಗ್ರಂಥದಲ್ಲಿ ನಿರೂಪಿಸಿದ್ದಾರೆ. ಗ್ರಂಥದ ಕೊನೆಯಲ್ಲಿ ಅವರು ನೀಡಿರುವ ಪುಸ್ತಕ, ಲೇಖನ ಮತ್ತು ವರದಿಗಳೂ ಬಹಳ ಉಪಯುಕ್ತವಾದವು.

ವಿಸ್ತಾರವಾದ ಓದು, ಕಠಿಣವಾದ ಕ್ಷೇತ್ರಕಾರ್ಯ ಮತ್ತು ಪ್ರಖರವಾದ ವಿಶ್ಲೇಷಣೆಗಳಿಂದೊಡಗೂಡಿದ ಈ ಗ್ರಂಥವನ್ನು ರಚಿಸಿದ ಡಾ. ಬದಿಕಾನರಿಗೆ ಅಭಿನಂದನೆಗಳು. ಜಾನಪದ ಅಧ್ಯಯನಕಾರರೆಲ್ಲರೂ ಓದಬೇಕಾದ ಮಹತ್ವದ ಕೃತಿಯಿದು.

ಪುರುಷೋತ್ತಮ ಬಿಳಿಮಲೆ

ಬೆಂಗಳೂರು

ದಶಂಬರ 25, 2024

ಲೇಖಕರ ಮಾತು

'ಪಾಪ್ಯುಲರ್ ಆಂಟಿಕ್ವಿಟಿ' ಪದಕ್ಕೆ 1846ರಲ್ಲಿ ವಿಲಿಯಂ ಥಾಮ್ಸ್ ಬಳಸಿದ ಪದ 'ಫೋಕ್‌ಲೋರ್'. ಈ ಪದಕ್ಕೆ ಸಂವಾದಿಯಾಗಿ ಹಾ.ಮಾ. ನಾಯಕರು 'ಜಾನಪದ' ಪದ ಬಳಸಿದರು. 1974ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಾ.ಮಾ. ನಾಯಕರ 'ಕನ್ನಡ ಜಾನಪದ ಗ್ರಂಥಸೂಚಿ'ಯನ್ನು ಪ್ರಕಟಿಸಿತು.

'ಕನ್ನಡ ಜಾನಪದ ಅಧ್ಯಯನದ ಮೊದಲಘಟ್ಟ' (1800–1950) ಕೃತಿಯು ಜಾನಪದ ಅಧ್ಯಯನಗಳ ಅಧ್ಯಯನ ಗ್ರಂಥ. ಪ್ರಸ್ತುತ ಕೃತಿಗೆ 1800ರಿಂದ 1973ರ ವರೆಗೆ ಪ್ರಕಟವಾದ 'ಕನ್ನಡ ಜಾನಪದ ಗ್ರಂಥಸೂಚಿ'ಯ 532 ಕೃತಿಗಳು, ಲೇಖನಗಳ ಸಂಗ್ರಹಗಳ ಗ್ರಂಥಸೂಚಿಯನ್ನು ಮೂಲ ಆಕರವಾಗಿಸಿಕೊಂಡು, ಅವುಗಳಲ್ಲಿ 1800ರಿಂದ ಆರಂಭಗೊಂಡು 1950ರ ವರೆಗಿನ 150 ವರ್ಷಗಳಲ್ಲಿ 148 ಜಾನಪದ ಸಂಗ್ರಹಗಳು, ಲೇಖನಗಳ ಗ್ರಂಥಸೂಚಿಗಳನ್ನು ಬಳಸಿಕೊಳ್ಳಲಾಗಿದೆ.

1800 ರಿಂದ 1900ರ ನೂರು ವರ್ಷದಲ್ಲಿ 35 ಸಂಗ್ರಹಗಳು ಬಂದಿವೆ. ಇವುಗಳಲ್ಲಿ ಮೂವರು ದೇಸೀ ವಿದ್ವಾಂಸರ – 5 ಇಂಗ್ಲಿಷ್ ಸಂಗ್ರಹಗಳು, 2 ಕನ್ನಡ ಸಂಗ್ರಹಗಳು; 17 ಮಂದಿ ವಿದೇಶಿ ವಿದ್ವಾಂಸರ 16 ಇಂಗ್ಲಿಷ್ ಸಂಗ್ರಹಗಳು 6 ಕನ್ನಡ ಸಂಗ್ರಹಗಳು; ಮಂಗಳೂರು ಬಾಸೆಲ್ ಮಿಶನ್ ಪ್ರೆಸ್‌ನ 10 ಸಂಗ್ರಹಗಳು ಹಾಗೂ ಬೆಂಗಳೂರು ಬುಕ್ ಡಿಪೋದವರ ಒಂದು ಸಂಗ್ರಹ – ಹೀಗೆ ಇಂಗ್ಲಿಷಿನಲ್ಲಿ 24 ಸಂಗ್ರಹಗಳು, ಕನ್ನಡದಲ್ಲಿ 11 ಸಂಗ್ರಹಗಳು ಬಂದಿವೆ. ಅವುಗಳು;

ಇಂಗ್ಲಿಷ್ ಸಂಗ್ರಹಗಳು

1. ಎ.ಜೆ. ದುಬೊಯಿಸ್ – 'ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಆಂಡ್ ಟ್ರೆಡಿಷನ್ಸ್' (1816)
2. ಥಾಮಸ್ ಫೌಲ್ಕ್ಸ್– 'ಲೆಜೆಂಡ್ಸ್ ಆಫ್ ಶ್ರಿನ್ ಆಫ್ ಹರಿಹರನ್ ಇನ್ ದಿ ಪ್ರೊವಿನ್ಸ್ ಆಫ್ ಮೈಸೂರು' (1826)

3. ಯು.ಎನ್.ನರಸಿಂಹಯ್ಯಂಗಾರ್ – 'ದಿ ಭೂತಸ್ ಆಪ್ ನಾಗರ ಮಲನಾಡಿಯನ್ ಮೈಸೂರು'(1870), 'ದಿ ಲೆಜೆಂಡ್ಸ್ ಆಫ್ ತುಂಗಾ–ಭದ್ರಾ ರಿವರ್', 'ಆನ್ ದಿ ಡ್ರಾವಿಡಿಯನ್ ಎಲಿಮೆಂಟ್ ಇನ್ ಸಂಸ್ಕೃತ್ ಡಿಕ್ಷನರಿಸ್' 'ಮರಸ ವಕ್ಕಲಿಗರು' (1871),

4. ಚಾರ್ಲ್ಸ್ ಇ. ಗ್ರೋವರ್ – 'ದ ಫೋಕ್‌ಸಾಂಗ್ಸ್ ಆಫ್ ಸದರ್ನ್ ಇಂಡಿಯಾ' (1871)

5. ಕೆ.ಜೆ. ಬ್ರಿಗೆಲ್ ಮತ್ತು ಸ್ಟೋಲ್ಜ್ (ಮಂಗಳೂರು) – 'ಎ ಗ್ರಾಮರ್ ಆಫ್ ದಿ ತುಳು ಲಾಂಗ್ವೇಜ್' (1871)

6. ಆರ್.ಎಫ್.ಕಿಟ್ಟೆಲ್–'ಕೂರ್ಗ್ ಸುಪರ್‌ಸ್ಟಿಶನ್ಸ್'; 'ದಿ ಡೆಮನ್ಸ್ ಇನ್ ಕೂರ್ಗ್'; 'ಮೆರೇಜ್ ಇನ್ ಕೂರ್ಗ್', 'ಲೆಜೆಂಡ್ಸ್ ಇನ್ ಮೆನ್ಡಿರಿಸ್ ಆಫ್ ಮೈಸೂರು: ಆನ್ ದಿ ಕರ್ನಾಟಕ ವೈಷ್ಣವದಾಸಸ್'(1873)

7. ಲೆ. ಕರ್ನಲ್ ಮೆಕೆಂಜಿ–'ದಿ ಕುವಾಡಿ ಆಫ್ ದಿ ಹಾಸನ್ ಡಿಸ್ಟ್ರಿಕ್ಟ್'; 'ದಿ ವಿಲೇಜ್ ಫೀಸ್ಟ್' (1874)

8. ವಾಲ್ಹೌಸ್ ಎಂ.ಜೆ. – 'ಆನ್ ಬಿಹಾಫ್ ಆಫ್ ದಿ ಭೂತಾಸ್ – ಡೆವಿಲ್ ಆಂಡ್ ಗೋಸ್ಟ್ ವರ್ಷಿಪ್ ಇನ್ ವೆಸ್ಟರ್ನ್ ಇಂಡಿಯಾ' (1874)

9. ಮೇರಿ ಇ. ಇಸಾಬೆಲ್ಲಾ ಫ್ರೆರೆ – 'ಓಲ್ಡ್ ಡೆಕ್ಕನ್ ಡೇಸ್. ಓರ್ ಹಿಂದೂ ಫೇರಿ ಲೆಜೆಂಡ್ಸ್–ಕರೆಂಟ್ ಇನ್ ಸೌದರ್ನ್ ಇಂಡಿಯಾ' (1881)

10. ಜೆ.ಎಫ್. ಫ್ಲೀಟ್–'ಎ ಸೆಲೆಕ್ಷನ್ ಆಫ್ ಕನರೀಸ್ ಬ್ಯಾಲೆಡ್' (1885)

11. ಮಹಾಲಿಂಗ ನಟೇಶ ಶಾಸ್ತ್ರಿ – 'ಫೋಕ್‌ಲೋರ್ ಇನ್ ಸದರ್ನ್ ಇಂಡಿಯಾ' (1888)

12. ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು – 'ದಿ ಪ್ರೊವರ್ಬ್ ಇನ್ ತುಳು' (1889)

13. ಜಿ.ಎಲ್.ಗೊಮ್ಮೆ 'ಕೂರ್ಗ್ ಫೋಕ್‌ಲೋರ್' (1889)

14. ಜಾರ್ಜಿನಾ ಕಿಂಗ್ಸ್ ಕೋಟ್, ನಟೇಶ ಶಾಸ್ತ್ರ – 'ಟೇಲ್ ಆಫ್ ದಿ ಸನ್ ಓರ್ ಫೋಕ್‌ಲೋರ್ ಆಫ್ ಸೌತ್ ಇಂಡಿಯಾ' (1890)

15. ಸ್ಟರಕ್(ಸಂ) – 'ಡಿಸ್ಟ್ರಿಕ್ಟ್ ಮ್ಯಾನುಯಲ್ ಆಫ್ ಸೌತ್ ಕೆನರಾ Vol-I' (1894)

16. ಶಡ್ರೇಹ್ ಇಮಾನ್, ಯು.ಎನ್.ನರಸಿಂಹ ರಾವ್ – 'ಪೋಪ್ಯುಲರ್ ಕೆನರೀಸ್ ಪ್ರೊವರ್ಬ್ಸ್ ಆಂಡ್ ದೆಯರ್ ಇಂಗ್ಲಿಷ್ ಇಕ್ವಲೆಂಟ್ಸ್' (1894)

17. ಎ.ಸಿ.ಬರ್ನೆಲ್ – 'ದಿ ಡೆವಿಲ್ ವರ್ಶಿಪ್ ಆಫ್ ದ ತುಳುವಾಸ್' (1937) [ಇಂಡಿಯನ್ ಆಂಟಿಕ್ವೇರಿ ಸಂಪುಟಗಳು 1894–1897 (ಸಂ:ಎ.ಸಿ.ಟೆಂಪಲ್)]

ಕನ್ನಡ ಸಂಗ್ರಹಗಳು

1. ಲೆ. ಕರ್ನಲ್ ಮೆಕೆಂಜಿಯು ಸಂಗ್ರಹಿಸಿರುವ 'ಕರ್ನಾಟಕದ 134 ಕೈಫಿಯತ್ತುಗಳು' (1792)
2. ಜಾನ್‌ಲೇಡನ್–ಶ್ರೀರಂಗಪಟ್ಟಣದ ಕೆಡುಗಾಲ'(1803)
3. ಬಾಸೆಲ್ ಮಿಶನ್ ಪ್ರೆಸ್ – 'ಕನ್ನಡ ಗಾದೆಗಳು' (1847), 'ಸಹಸ್ರ ಗಾಥಾಮೃತ ಕಲಶವು' (ಒನ್ ಥೌಂಸಡ್ ಕೆನರೀಸ್ ಪ್ರೋವರ್ಬ್ಸ್) 'ಸಹಸ್ರಾರ್ಧ ತುಳು ಗಾದೆಗಳು' (1874)
4. ಅಗಸ್ಟ್ ಮೆನ್ನರ್ – 'ಪಾಡ್ದನೊಳು',(ತುಳು ಪಾಡ್ದನಗಳ ಸಂಗ್ರಹ) 'ಕೊಡವ ಪಡಿಮೆ' (1886), 'ಭೂತಸೇವೆ', 'ಲಾವಣೀ ಪದ ಸಂಗ್ರಹವು – 1ನೇ ಭಾಗ' (1891)
5. ಬೆಂಗಳೂರು ಬುಕ್ ಡಿಪೋ – 'ಬಾಗಿಲು ತಡೆಯುವ'
6. ನಟೇಶ್ ಶಾಸ್ತ್ರಿ – 'ದಕ್ಷಿಣ ಭಾರತದ ಜನಪದ ಕಥೆಗಳು' (1893)

1900 ರಿಂದ 1950ರ ಅವಧಿಯಲ್ಲಿ 113 ಸಂಗ್ರಹಗಳು ಪ್ರಕಟವಾಗಿವೆ. ಅವುಗಳಲ್ಲಿ; 7 ಇಂಗ್ಲಿಷ್ ಸಂಗ್ರಹಗಳು ಹಾಗೂ 106 ಕನ್ನಡ ಸಂಗ್ರಹಗಳು ಬಂದಿವೆ.

ಇಂಗ್ಲಿಷ್ ಸಂಗ್ರಹಗಳು : ದೇಸಿ ವಿದ್ವಾಂಸರು

1. ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್–'ಬುಕ್ ಆಫ್ ಪ್ರೋವರ್ಬ್ಸ್', 'ತ್ರಿ ಹಂಡ್ರೆಡ್ ಕೆನರೀಸ್ ಪ್ರೋವರ್ಬ್ಸ್' (1903)
2. ಶಿವಲಿಂಗ ಶೆಟ್ಟಿ ಗೋಪಾಳ ದುರದುಂಡಿ, 'ಲಾವಣಿಪದಗಳು' (1912)
3. ಯು.ಎನ್.ನರಸಿಂಗರಾವ್, 'ಎ ಹ್ಯಾಂಡ್ ಬುಕ್ ಆಫ್ ಕೆನರೀಸ್ ಪ್ರೋವರ್ಬ್ಸ್ ವಿತ್ ಇಂಗ್ಲಿಷ್ ಎಲಿಮೆಂಟ್ಸ್' (1912)
4. ಬಿ.ಎ.ಸಾಲೆತ್ತೂರ್, 'ಫೋಕ್‌ಸಾಂಗ್ಸ್ ಆಫ್ ದಿ ತುಳುವಾಸ್' (1927)
5. ಮಾಸ್ತಿ ವೆಂಕಟೇಶ ಅಯ್ಯಂಗಾರ್, 'ಫೋಕ್‌ಸಾಂಗ್ಸ್ ಇನ್ ದಿ ಕರ್ನಾಟಕ' (1931)
6. ಎಲ್.ಎ. ಕೃಷ್ಣ ಅಯ್ಯರ್, 'ದಿ ಮೈಸೂರ್ ಟ್ರೈಬ್ಸ್ ಆಂಡ್ ಕ್ಯಾಸ್ಟ್ಸ್' (1941)

ಸ್ವಾತಂತ್ರ್ಯಪೂರ್ವ ಕಾಲಘಟ್ಟದ ಆರಂಭದ 100 ವರ್ಷಗಳಲ್ಲಿ (1800–1900) ಇಂಗ್ಲಿಷ್ ಮತ್ತು ಕನ್ನಡದಲ್ಲಿ 35 ಸಂಗ್ರಹ ಮತ್ತು ಲೇಖನಗಳು ಬಂದಿವೆ. ನಂತರದ 50 ವರ್ಷಗಳಲ್ಲಿ (1900–1950) ಇಂಗ್ಲಿಷ್ ಮತ್ತು ಕನ್ನಡದಲ್ಲಿ 113 ಸಂಗ್ರಹ ಮತ್ತು ಲೇಖನಗಳು ಬಂದಿವೆ.

ಆರಂಭದ 100 ವರ್ಷಗಳಲ್ಲಿ ವಿದೇಶಿ ವಿದ್ವಾಂಸರ ಇಂಗ್ಲಿಷ್ ಲೇಖನಗಳು, ಸಂಗ್ರಹಗಳು ಸಂಖ್ಯೆಯ ದೃಷ್ಟಿಯಿಂದ ಕಡಿಮೆಯೆಂದು ಕಾಣಿಸಿದರೂ ಅಧ್ಯಯನದ ದೃಷ್ಟಿಯಿಂದ ಬಹುದೊಡ್ಡವು. ಇದು ಯಾಕೆ? ಏನು? ಹೇಗೆ? ಎಂಬ ಬಗ್ಗೆ ಅಧ್ಯಯನದ ಸಾಂಸ್ಕೃತಿಕ ಹಿನ್ನೆಲೆ ಭಾಗದಲ್ಲಿ ಚರ್ಚಿಸಿ, ಪೂರಕ ವಿಚಾರಗಳನ್ನು ಕೃತಿಯ ವಿಶ್ಲೇಷಣೆ ಹಾಗೂ ಫಲಿತಗಳು ಭಾಗದಲ್ಲಿ ವಿಸ್ತಾರವಾಗಿ ನೀಡಲಾಗಿದೆ.

ಒಟ್ಟು ಕೃತಿಯ ಅಂದವಿರುವುದೇ ಕೃತಿ ಪರಿಶೀಲನೆ ಭಾಗದಲ್ಲಿ. ಅಧ್ಯಯನಕಾರರು ಈ ಭಾಗವನ್ನು ಕುತೂಹಲದಿಂದ ಓದಬೇಕೆಂಬುದು ನನ್ನಾಸೆ. ಇಲ್ಲಿ ಬಳಸಲಾದ ಹೆಚ್ಚಿನ ಸಂಗ್ರಹ ಕೃತಿಗಳೂ ಸದ್ಯ ಓದುಗರ ಕೈಗೆ ಸಿಗಲಾರವು. ಆ ಸಂಗ್ರಹಗಳ ಮುನ್ನುಡಿಯಿಂದ ಆಯ್ದಭಾಗಗಳನ್ನು ಉದ್ಧರಿಸಿ ಕೊಡಲಾಗಿದೆ. ಮೊದಲ ಘಟ್ಟದ ಜಾನಪದ ಅಧ್ಯಯನಗಳ ಸಂಗ್ರಹಗಳಲ್ಲಿ, ಲೇಖನಗಳಲ್ಲಿ ಸಾಂಸ್ಕೃತಿಕ ಹಿನ್ನೆಲೆಯನ್ನು ಅರಿತುಕೊಂಡು ದೇಶೀ ವಿದ್ವಾಂಸರು ವಿಸ್ತಾರವಾದ ಮುನ್ನುಡಿಗಳನ್ನು ಬರೆದು, ಜಾನಪದವನ್ನು ಸಂಗ್ರಹಿಸುವ, ಆ ಮೂಲಕ ದೇಸೀತನವನ್ನು ಉಳಿಸುವ ಅಗತ್ಯದ ವಿವರಗಳನ್ನು ನೀಡಿರುವುದನ್ನು ಗಮನಿಸಬಹುದು.

ಕೃತಿಯಲ್ಲಿ ಮತ್ತೆಮತ್ತೆ ಚರ್ಚಿಸಿಕೊಳ್ಳಬೇಕಾದ ವಿಚಾರ ದೇಸೀ ಚಿಂತನೆ ಹಾಗೂ ಜನಪದರ ಒಗ್ಗಟ್ಟಿನ ಬದುಕು. ಇದಕ್ಕಾಗಿ ಬಳಸಿರುವ ಸಂಗ್ರಹಗಳು ಜನಪದ ವೈದ್ಯ ಹಾಗೂ ಜನಪದ ಗೀತೆಗಳು, ಲಾವಣಿಗಳು, ತುಳು ಆರಾಧನೆ ಮತ್ತು ಪಾಡ್ದನಗಳ ಸಂಗ್ರಹ.

ಜನಪದ ವೈದ್ಯದ ಬಗ್ಗೆ ಬಂದಿರುವ ಸಂಗ್ರಹಗಳು ಕಡಿಮೆಯಾದರೂ ನಾಟಿ ಅಥವಾ ಹಳ್ಳಿ ವೈದ್ಯದ ಸಂಗ್ರಹಗಳ ಮೂಲಕ ಇಂಗ್ಲಿಷ್ ಔಷಧಿಯ ಎದುರು ಹಳ್ಳಿ ಔಷಧವನ್ನು ನಿಲ್ಲಿಸಲಾಗಿದೆಯೆಂಬುದಂತು ಸತ್ಯ. ಸ್ವಾತಂತ್ರ್ಯಪೂರ್ವದಲ್ಲಿ ನೂರಕ್ಕೆ ನೂರ ಮಂದಿ ಹಳ್ಳಿ ಔಷಧಿಯನ್ನು ನಂಬಿದ್ದರು. ಇಂದಿಗೂ ನಾಟಿ ಔಷಧಿಯನ್ನು ಜನ ನಂಬಿದ್ದಾರೆ. ಆದರೆ ಕಾನೂನು ವ್ಯವಸ್ಥೆಯಲ್ಲಿ, ಆಹಾರ ಶೈಲಿಯಲ್ಲಿ ದೊಡ್ಡ ಬದಲಾವಣೆಯಾದುದರಿಂದ ನಾಟಿವೈದ್ಯರು ಔಷಧಿ ನೀಡಲು ಭಯಪಡುತ್ತಿದ್ದಾರೆ. ಒಂದಾನೊಂದು ಕಾಲದಲ್ಲಿ ಪ್ರಕೃತಿಯಲ್ಲಿ ಸುಲಭವಾಗಿ ಲಭಿಸುವ ಆಹಾರ ರೂಪದ ಸಸ್ಯೌಷಧಿಜನ್ಯ ತಿನಿಸುಗಳು ಸಾವಯವ ನೆಲೆಯಲ್ಲಿ ಬಳಕೆಯಾಗುತ್ತಿತ್ತು. ಆಗ ಅದು ಔಷಧಿಯೂ ಆಹಾರವೂ ಆಗಿತ್ತು.

200 ವರ್ಷಗಳ ಹಿಂದೆನೇ ನಮ್ಮ ಭಾಷೆ ಮತ್ತು ಆಹಾರ ವ್ಯವಸ್ಥೆಯ ನೆಲೆಯಲ್ಲಿ ಹೇಗೆ ಗೊಂದಲಕ್ಕೊಳಪಡಿಸಿದ್ದಾರೆಂಬುದು ಈಗ ನಮಗೆ ಅರಿವಾಗುತ್ತಿದೆ. ಆದರೆ ಜನಪದರಿಗೆ ಭಾಷೆ ಹಾಗೂ ಆಹಾರದ ವಿಚಾರದಲ್ಲಿ ಗೊಂದಲಗಳಿರಲಿಲ್ಲ. ತಾವೇ ಬೆಳೆವ ಆಹಾರಕ್ಕೆ ಯಾವ ಗೊಬ್ಬರದ ಅಗತ್ಯವೂ ಇರಲಿಲ್ಲ. ಗೊಬ್ಬರ, ಬೀಜ, ಬಿತ್ತನೆಗಳನ್ನು ತಾವೇ ತಯಾರಿಸುತ್ತಿದ್ದರು. ಆ ದಿನಗಳಲ್ಲಿ ಜನಪದರಿಗೆ ತಾವು ಮಾತನಾಡುವ ಭಾಷೆಗೆ, ಆಹಾರಕ್ಕೆ ಯಾವುದೇ ಕಡಿವಾಣವಿರಲಿಲ್ಲ. ಈಚಿನ ದಿನಗಳಲ್ಲಿ ಬಹುಸಂಸ್ಕೃತಿ, ಬಹುಭಾಷೆ, ಬಹುರಾಷ್ಟ್ರೀಯತೆಯೆಂಬ ಪರಿಕಲ್ಪನೆಯ ಹಿಂದೆ ನಮ್ಮ ಸಂಸ್ಕೃತಿ ಹಾಗೂ ಭಾಷೆ ಎರಡೂ ಹರಾಜಾಗಿವೆ. ಮತ್ತೆ ಸರಿಪಡಿಸದಷ್ಟು ಹಾಳಾಗಿವೆ.

ಹಾಡಿನ ಸಂಗ್ರಹಗಳು ವಿದೇಶಿ ಸಾಹಿತ್ಯ ಸಂಸ್ಕೃತಿಗೆ ಸವಾಲಾಗಿಯೇ ನಿಂತಿವೆಯೆಂದರೆ ತಪ್ಪಾಗಲಾರದು. ಉದಾಹರಣೆಗೆ, ಹುಟ್ಟಿದ ಹಳ್ಳಿಹಳ್ಳಿಯ ಹಾಡು, ಮಲ್ಲಿಗೆದಂಡೆ, ಗರತಿಹಾಡು, ಜೀವನಸಂಗೀತ ಇತ್ಯಾದಿ ಸಂಗ್ರಹಗಳ ಸಂಗ್ರಹಕಾರರ ಮನೋಧರ್ಮ ಇದೇ ಆಗಿತ್ತು. ಬ್ರಿಟಿಷ್ ಸಂಸ್ಕೃತಿಯು ಹಾಡು, ಕುಡಿತ, ಕುಣಿತದಲ್ಲೇ ಪ್ರಮುಖವಾಯಿತು. ಇದನ್ನರಿತ ದೇಸೀ ವಿದ್ವಾಂಸರು ನಮ್ಮ ಸಂಸ್ಕೃತಿ ಹಳ್ಳಿ ಬದುಕೆಂದೇ ಪ್ರತಿಪಾದಿಸಲು ಜನಪದವನ್ನು ಮುಂದಿಟ್ಟರು. ಬಹಳಷ್ಟು ಸಂಗ್ರಹಗಳ ಮುನ್ನುಡಿಗಳಲ್ಲಿ ಇದೇ ಅಭಿಪ್ರಾಯಗಳನ್ನು ಬರೆದರು. ಇದರ ಉದ್ದೇಶ ಜನಪದರ ಮನಸ್ಸು ವಿಚಲಿತವಾಗದಿರಲೆಂದೇ ಆಗಿತ್ತು. ಬ್ರಿಟಿಷರು ಬರುವುದಕ್ಕಿಂತ ಮೊದಲು ಸಂಸಾರವನ್ನು ಕಟ್ಟುವ ಸಾಂಸ್ಕೃತಿಕ ನೆಲೆಯಲ್ಲಿ ಹಾಡುಗಳು ಅಭಿವ್ಯಕ್ತಿಗೊಳ್ಳುತ್ತಿತ್ತು. ಕಾಲಕ್ರಮೇಣ ಬದಲಾಗುತ್ತಿರುವ ಆಳ್ವಿಕೆ ಜನರನ್ನು ಗೊಂದಲ್ಲಕ್ಕೀಡು ಮಾಡಿತು. ರಾಜರ ಆಳ್ವಿಕೆಯಲ್ಲಿ ಸ್ವಾತಂತ್ರ್ಯವಿಲ್ಲದಿದ್ದರೂ ಬದುಕಿಗೆ ನ್ಯಾಯವಿತ್ತು. ಮರ್ಯಾದೆಯಲ್ಲಿ ಬದುಕುವುದಕ್ಕೆ ಭಯವಿರಲಿಲ್ಲ. ತಪ್ಪು ಮಾಡಿದವರಿಗೆ ಮಾತ್ರ ಗಡಿಪಾರೆಂಬ ಶಿಕ್ಷೆಯಿತ್ತು. ಬ್ರಿಟಿಷರ ಆಳ್ವಿಕೆಯಲ್ಲಿ ಗಡಿಪಾರೆಂಬ ಕರೆಗಿಂತಲೂ ತಾವೇ ಸ್ವಯಂ ಘೋಷಣೆ ಮಾಡಿಕೊಂಡು ಊರು ಬಿಟ್ಟು ಓಡುತ್ತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬರುವ ಮೊದಲು ಅಂದರೆ ಪ್ರಗತಿಶೀಲ ಕಾಲಘಟ್ಟದಲ್ಲಿ ಜನನಾಯಕರ ಪರಿಸ್ಥಿತಿ ಇದಕ್ಕಿಂತ ಬೇರೆಯಾಗಿರಲಿಲ್ಲ.

ಜನಪದರು ಒಗ್ಗಟ್ಟಾಗಲು ಹಾಡಿಗಿಂತ ದೊಡ್ಡ ಅಸ್ತ್ರ ಬೇರೊಂದಿಲ್ಲವೆಂಬುದು ವಿದೇಶಿ ವಿದ್ವಾಂಸರಿಗೆ ಚೆನ್ನಾಗಿ ಅರ್ಥವಾಗಿತ್ತು. ವಿದೇಶಿ ವಿದ್ವಾಂಸರ ಆಗಮನವೇ ವಿಚಿತ್ರ. ಅದು ಧಾರ್ಮಿಕ ಹಾಗೂ ಆರ್ಥಿಕ ನೆಲೆಯ ಮುಖವಾಡವಾಗಿತ್ತು. ಕೆಲವರು ವಿವಿಧ ದೇಶಗಳಿಂದ ಧರ್ಮಪ್ರಚಾರದ ನೆಲೆಯಲ್ಲಿಯೂ, ಇನ್ನು ಕೆಲವರು ನೇರ ಗ್ರೇಟ್‌ಬ್ರಿಟನ್ನಿನ ಆಡಳಿತಾಧಿಕಾರಿಯಾಗಿ ಬಂದರು. ಕರ್ನಲ್ ಮೆಕೆಂಜಿ, ಜಾನ್ ಲೇಡನ್, ಚಾರ್ಲ್ಸ್ ಇ. ಗೋವರ್, ಜೆ.ಎಫ್.ಫ್ಲೀಟ್, ಅಗಸ್ಟ್ ಮೆನ್ನರ್, ಎ.ಸಿ.ಬರ್ನೆಲ್ ಮುಂತಾದವರು ಕನ್ನಡ, ತುಳು, ಕೊಡವ ಭಾಷೆಗಳಲ್ಲಿ ಹೆಚ್ಚಾಗಿ ಗೀತ ಪ್ರಕಾರಗಳನ್ನೇ ಸಂಗ್ರಹಿಸಿದರು.

ಚಾರ್ಲ್ಸ್ ಇ. ಗೋವರ್ ಕನ್ನಡದ ಗೀತೆಗಳನ್ನು ಸಂಗ್ರಹಿಸಿ ಇಂಗ್ಲಿಷಿಗೆ ಅನುವಾದಿಸಿದ. ಫ್ಲೀಟ್ ಇಂಡಿಯನ್ ಆಂಟಿಕ್ವೇರಿಯಲ್ಲಿ 1885ರಿಂದ 1890ರ ವರೆಗೆ 14ರಿಂದ 19ರ ವರೆಗಿನ ಸಂಪುಟಗಳಲ್ಲಿ ಆಯ್ದ ಕ್ಯಾನರೀಸ್ ಬ್ಯಾಲೆಡ್‌ಗಳನ್ನು ಪ್ರಕಟಿಸಿದ. ಜನರು ಸಂಘಟನೆಗಾಗಿ ಲಾವಣಿ ಹಾಡಿದರೆ, ಆಡಳಿತಾಧಿಕಾರಿಗಳಾಗಿ ಬಂದವರು ಹಾಡುಗಳಲ್ಲೇ ಜನಪದರ ಬದುಕನ್ನು ಅರ್ಥೈಸಿಕೊಂಡು ಮೇಲಧಿಕಾರಿಗಳಿಗೆ ವರದಿ ತಯಾರಿಸಿದರು. ಜನಪದರು ಆದಾಯ ತೆರಿಗೆಯಂತಹ ಕಾನೂನಿಗೆ ಲಾವಣಿಗಳಲ್ಲಿ ಉತ್ತರಿಸಿದರು. ಇನ್ನು ಕರಾವಳಿ ಕರ್ನಾಟಕದಲ್ಲಿ ಸಾಂಸ್ಕೃತಿಕ ಭಿನ್ನತೆ ವ್ಯಕ್ತವಾಯಿತು. ವಿದೇಶಿ ವಿದ್ವಾಂಸರು ಭೂತಾರಾಧನೆಯನ್ನು 'ಡೆವಿಲ್' ಎಂದು ಹೇಳಿಕೊಂಡು ಬಂದರು. ಭೂತಗಳ ಪಾಡ್ದನಗಳನ್ನು ಪ್ರಪ್ರಥಮಬಾರಿಗೆ ಸಂಗ್ರಹಿಸಿ ಇಂದಿನ ಅಧ್ಯಯನಕಾರರ ಮೂಲಪಠ್ಯ ನಂತರ ಪಠ್ಯಗಳ ಚರ್ಚೆಗೆ ನಾಂದಿ ಹಾಡಿದರು. ರೆ। ಫಾ। ಕಿಟ್ಟೆಲ್ ಕನ್ನಡದ ಮೊದಲ ನಿಘಂಟನ್ನು ಸಂಗ್ರಹಿಸಿ ಇಂದಿನ ಭಾಷಾ ಬೆಳವಣಿಗೆಗೆ ಬೇಕಾಗುವ ಮೂಲ ಪದಗಳನ್ನು ಪುಸ್ತಕದಲ್ಲಿ ಅಚ್ಚುಹಾಕಿಸಿದ. ತಿಳಿದೋ ತಿಳಿಯದೆಯೋ ಹೀಗೆ ಕನ್ನಡ ಜಾನಪದ ಅಧ್ಯಯನದ ಮೊದಲಘಟ್ಟ ಆರಂಭಗೊಂಡಿತ್ತು. ಆಧಿಕಾರಿಗಳ ವರದಿಗಾಗಿ ಸಂಗ್ರಹವಾದ ಗೀತೆ, ಲಾವಣಿ, ಕತೆಗಳು ಇಂಡಿಯನ್ ಆಂಟಿಕ್ವೇರಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿತ್ತು. ಹೀಗೆ ಈ ದೇಶದಲ್ಲಿ ಪ್ರಾಕೃತಿಕ ಸಂಪನ್ಮೂಲ ಮಾತ್ರವಲ್ಲ ಮಾನವ ಸಂಪನ್ಮೂಲವೂ ಯಥೇಚ್ಛವಾಗಿದೆಯೆಂದು ವಿದೇಶಿಯರಿಗೆ ಸ್ಪಷ್ಟವಾಯಿತು. ಆಡಳಿತಕ್ಕಾಗಿ ಬಂದ ವಿದೇಶಿಯರು ಇತಿಹಾಸಕಾರರಾಗಿ, ಭಾಷಾ ವಿಜ್ಞಾನಿಗಳಾಗಿ, ಜಾನಪದ ತಜ್ಞರಾಗಿ ಮಾರ್ಪಾಡುಗೊಂಡು ಈ ನೆಲದ ನಿಜವಾದ ಸಾಂಸ್ಕೃತಿಕ ಸಂಪತ್ತನ್ನು ಒಗ್ಗೂಡಿಸುವಲ್ಲಿ ಪ್ರಯತ್ನಿಸಿದರು. ಮುಂದೊಂದು ದಿನ ಇದು ಅಧ್ಯಯನದ ಶಿಸ್ತಾಗಬಹುದೆಂಬ ಕಲ್ಪನೆ.

14.02.2025

ಡಾ. ವಿಶ್ವನಾಥ ಬದಿಕಾನ, ಸಹಾಯಕ ಪ್ರಾಧ್ಯಾಪಕ

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯ, ಮಂಗಳೂರು

ಪರಿವಿಡಿ

ಭಾಗ 1

ಪ್ರಸ್ತಾವನೆ 1–7

ಭಾಗ 2

ಕನ್ನಡ ಜಾನಪದ ಅಧ್ಯಯನದ ಸಾಂಸ್ಕೃತಿಕ ಹಿನ್ನೆಲೆ 8–25

ಭಾಗ 3

ಸಮೀಕ್ಷೆ ಹಾಗೂ ವರ್ಗೀಕರಣ 26–62

ಭಾಗ 4

ಮೊದಲ ಘಟ್ಟದ ಜಾನಪದ ಕೃತಿಗಳ ಪರಿಶೀಲನೆ 63–254

ಭಾಗ 5

ಮೊದಲ ಘಟ್ಟದ ಜಾನಪದ ಅಧ್ಯಯನಗಳ ವಿಶ್ಲೇಷಣೆ 255–274

ಭಾಗ 6

ಮೊದಲ ಘಟ್ಟದ ಜಾನಪದ ಅಧ್ಯಯನಗಳ ಫಲಿತಗಳು 275–277

ಭಾಗ 7

ಅನುಬಂಧ ಒಂದು : ಪದಸೂಚಿ 278–290

ಅನುಬಂಧ ಎರಡು : ಮೊದಲ ಘಟ್ಟದ ಕೃತಿಗಳು ಲೇಖನಗಳು 291–303

ಅನುಬಂಧ ಮೂರು : ಪರಾಮರ್ಶನ ಗ್ರಂಥಗಳು 304–317

ಭಾಗ 1

ಪ್ರಸ್ತಾವನೆ

ಒಂದು ಸಂಸ್ಕೃತಿಯ ನೈಜ ನೆಲೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಜಾನಪದವು ಹೆಚ್ಚು ಸಹಕಾರಿಯಾಗಿದೆ ಎಂಬ ನಂಬಿಕೆ ಗಟ್ಟಿಗೊಳ್ಳುತ್ತಿದೆ. ಪರಂಪರೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಜಾನಪದವು ತುಂಬ ಉಪಯುಕ್ತವಾದ ಆಕರ ಮೂಲವಾಗಿದೆ ಎಂಬ ವಾದಗಳು ಎಲ್ಲೆಡೆಯೂ ಕೇಳಿ ಬರುತ್ತಿದೆ. ಕನ್ನಡದ ಸಂದರ್ಭದಲ್ಲಿಯೂ ಪರಂಪರೆಯ ಗ್ರಹಿಕೆಗೆ ಸಾಮಾಗ್ರಿಯೆಂಬಂತೆ ಜಾನಪದವನ್ನು ಬಳಸಿಕೊಂಡು ಆಧುನಿಕ ನಿರ್ವಚನೆ ನಡೆಯುತ್ತಿದೆ.

ಇಷ್ಟಿದ್ದರೂ ಪರಂಪರೆ ಹಾಗೂ ಜಾನಪದ ಬಗೆಗಿನ ವಿದ್ವತ್ತು ಬೆಳೆದಿರುವುದು ಆಧುನಿಕ ಕಾಲದಲ್ಲಿಯೇ ಎಂಬುದನ್ನು ಗಮನಿಸಬೇಕು. **'ಆಧುನಿಕತೆ'** ಎಂಬುದನ್ನು **'ಫ್ರೆಂಚ್‌ಕ್ರಾಂತಿ'**ಯ ಅನಂತರದ ಬೆಳವಣಿಗೆ ಎಂದು ಭಾವಿಸಿದರೆ, ಜಾನಪದ ಅಧ್ಯಯನವು ಆಧುನಿಕತೆಗೆ ವಿರುದ್ಧವಾಗಿ ಕಾಣಿಸಿಕೊಂಡಿತು.

ಕೈಗಾರಿಕೀಕರಣ, ಊಳಿಗಮಾನ್ಯ ವ್ಯವಸ್ಥೆಯ ಶೈಥಿಲ್ಯ, ಹೊಸ ಅರಿವಿನ ಉಗಮ– ಇವುಗಳು ಆಧುನಿಕತೆಯ ಮುಖ್ಯ ಗುಣಗಳಾಗಿದ್ದರೆ, ಇವುಗಳಿಗೆ ವಿರೋಧವಾಗಿರುವುದನ್ನು ಜಾನಪದದ ಗುಣವೆಂದು ಭಾವಿಸಲಾಯಿತು. 1846 ರವರೆಗೆ ಇಂದು ನಾವು ಬಳಸುತ್ತಿರುವ 'ಜಾನಪದ' ಎಂಬ ಪದಕ್ಕೆ **'ಪಾಪ್ಯುಲರ್ ಆಂಟಿಕ್ವಿಟಿ'** ಎಂಬ ಪದವೇ ಬಳಕೆಯಲ್ಲಿದ್ದುದನ್ನು ನೆನೆಪಿಸಿಕೊಳ್ಳಬೇಕು. **'ಆಂಟಿಕ್ವಿಟಿ'** ಎಂಬ ಪದವನ್ನು ಆಧುನಿಕತೆಗೆ

ವಿರುದ್ಧವಾಗಿ ಹಳೆಯದಾದ, ವಾಡಿಕೆಯಲ್ಲಿಲ್ಲದ, ಪುರಾತನ ಅವಶೇಷಗಳು – ಎಂಬ ಅರ್ಥದಲ್ಲಿಯೇ ಬಳಸಲಾಗಿದೆ. ಮುಂದೆ **'ಫೋಕ್‌ಲೋರ್'** ಎಂಬ ಪದ ಜನಪ್ರಿಯವಾದರೂ ಅದರಲ್ಲಿ ಸಾಂಪ್ರದಾಯಿಕ ಜೀವನದ ವಿವರಗಳನ್ನು ಅಡಕಗೊಳಿಸಿ ಅಧ್ಯಯನ ಮಾಡಲಾಯಿತು. ಜಾನಪದ ಅಧ್ಯಯನವು ಹೀಗೆ ಪ್ರಾಚೀನಾನ್ವೇಷಣೆಗೆ ಮಾತ್ರ ಬದ್ಧವಾದದಕ್ಕೆ ಕಾರಣ ಸ್ಪಷ್ಟವೇ ಇದೆ.

ಒಂದು ಇಡೀ ಶಿಸ್ತನ್ನು ಆಧುನಿಕತೆಗೆ ವಿರುದ್ಧವಾಗಿ ನಿಲ್ಲಿಸಿ, ನಿರ್ವಚಿಸಿ, ವ್ಯಾಖ್ಯಾನಿಸಿದಾಗ ಆ ಶಿಸ್ತಿಗೆ ಒಳಪಡುವ ಎಲ್ಲ ವಿಷಯಗಳನ್ನು ಪುರಾತನವಾದುದು ಎಂಬಂತೆ ವಿವರಿಸಿಕೊಳ್ಳಲಾಗುವುದು. ಒಂದು ನಿರ್ದಿಷ್ಟ ಉದ್ದೇಶವನ್ನು ಈ ಬಗೆಯ ವ್ಯಾಖ್ಯಾನಗಳು ಈಡೇರಿಸುತ್ತವೆ ನಿಜ. ಆದರೆ ಅಂತಹ ವ್ಯಾಖ್ಯಾನಗಳೇ ಸಾರ್ವತ್ರಿಕ ಆಗಿರಲು ಬಹುಶಃ ಸಾಧ್ಯವಿಲ್ಲ. ಯಾಕೆಂದರೆ ಜಾನಪದವನ್ನು ನಾವು ಎಷ್ಟೇ ಪ್ರಯತ್ನಪಟ್ಟು **'ಆಧುನಿಕ'** ಅಲ್ಲವೆಂದರೂ ಅದರಲ್ಲಿ ಆಧುನಿಕತೆಯ ಲಕ್ಷಣಗಳು ಇರಲೇಬೇಕು. ಏಕೆಂದರೆ ಜಾನಪದ ಪರಿಕಲ್ಪನೆಯೇ ಆಧುನಿಕ ಕಾಲದ್ದು. ಒಂದು ವೇಳೆ ಆಧುನಿಕ ಪೂರ್ವದ ಅಂಶಗಳು ಅವುಗಳಲ್ಲಿ ಇದೆಯೆಂದು ವಾದಿಸುವುದಾದರೆ ಅಂತಹ ವಾದವನ್ನು ಅಲ್ಲಗಳೆಯಬೇಕಾಗಿಲ್ಲ. ಮುಖ್ಯ ವಿಚಾರವೆಂದರೆ ಅಂತಹ ಆಧುನಿಕವಲ್ಲದ ವಿಚಾರಗಳನ್ನು ಆಧುನಿಕ ಸಮಾಜಕ್ಕೆ ಮರುಹೊಂದಿಸಿ ವ್ಯಾಖ್ಯಾನಿಸಿಕೊಳ್ಳಲಾಗುತ್ತಿದೆ. ಆಧುನಿಕತೆಯು ಆಧುನಿಕವಲ್ಲದನ್ನು ಚರ್ಚೆಗೆ ಎತ್ತಿಕೊಳ್ಳಲು ಕೂಡ ಸಾಧ್ಯವಿಲ್ಲ. ನಾವೆಲ್ಲ ಜಾನಪದದ ಬಗೆಗೆ ಚರ್ಚಿಸುತ್ತಿದ್ದೇವೆ ಎಂದರೆ ಅದು ಆಧುನಿಕವಾಗಿದೆಯೆಂದೇ ಅರ್ಥ. ಆಧುನಿಕ ನಿರೂಪಣೆಗಳು ಜಾನಪದವನ್ನು ಆಧುನಿಕ ಅಲ್ಲದ್ದು ಎಂದು ಹೇಳುವ ಹೊತ್ತಿನಲ್ಲಿಯೇ ಜಾನಪದವು ಆಧುನಿಕವೂ ಸಮಕಾಲೀನವೂ ಆಗಿರುತ್ತದೆ.

ಜಾನಪದವನ್ನು ಮೇಲಿನ ಚೌಕಟ್ಟಿನಲ್ಲಿರಿಸಿ ನೋಡಿದಾಗ ಎರಡು ಪ್ರಶ್ನೆಗಳು ಎದುರಾಗುತ್ತವೆ.

ಅ. ಜಾನಪದ ಅಧ್ಯಯನ ಯಾವ ಕಾರಣಕ್ಕೆ ಅಗತ್ಯವಾಯಿತು? ಹಾಗೂ ಸಂಸ್ಕೃತಿಯೊಂದರ ಯಾವ ಬಗೆಯ ಅವಶ್ಯಕತೆಯನ್ನು ಅದು ಈಡೇರಿಸಿತು?

ಆ. ಜಾನಪದ ಅಧ್ಯಯನವನ್ನು ಹೇಗೆ ಪುನರ್ ಸಂಘಟಿಸಲಾಗಿದೆ? ಹಾಗೂ ಹಾಗೆ ಸಂಘಟಿಸುವುದರ ಮೂಲಕ ಯಾವ ಬಗೆಯ ವ್ಯಾಖ್ಯಾನಕ್ಕೆ ಬೇಕಾದ ನೆಲೆಗಳನ್ನು ಸಿದ್ಧಪಡಿಸಿಕೊಳ್ಳಲಾಗುತ್ತಿದೆ?

ಎರಡೂ ಪ್ರಶ್ನೆಗಳು ಮೂಲತಃ ಒಂದೇ ಪ್ರಶ್ನೆಯ ಭಿನ್ನರೂಪಗಳಾಗಿವೆ. ಜಾನಪದ ಪಠ್ಯವಾಗಲೀ, ಅದನ್ನು ಅಧ್ಯಯನ ಮಾಡಿದ ವಿದ್ವಾಂಸನೊಬ್ಬನ ವ್ಯಾಖ್ಯಾನಿತ ಪಠ್ಯವಾಗಲಿ

ಮೂಲತಃ ನಿಯೋಗತ್ಮಕವಾದ ರಚನೆ ಎಂಬುದನ್ನು ಮರೆಯಬಾರದು. ಒಂದು ನಿರ್ದಿಷ್ಟ ಉದ್ದೇಶವನ್ನು ಸಾಧಿಸಲು ಅವನ್ನು ಬಳಸಿಕೊಳ್ಳಲಾಗುತ್ತಿದೆ. ಇಂತಹ ಕೆಲಸಗಳು ಯಾಕಾಗಿ ನಡೆಯುತ್ತಿವೆ ಎಂಬ ಪ್ರಶ್ನೆಯನ್ನು ಒಡ್ಡುವುದರಿಂದ ವ್ಯವಸ್ಥಿತ ವಿಶ್ಲೇಪಣೆ ಸಾಧ್ಯವಾದೀತು.

ಪಾಶ್ಚಾತ್ಯ ದೇಶದಲ್ಲಿ ಆಧುನಿಕತೆಗೆ ವಿರುದ್ಧವಾದ ರೀತಿಯಲ್ಲಿ ಜಾನಪದವನ್ನು ವ್ಯಾಖ್ಯಾನಿಸಿಲಾಗಿದೆ. ಅಲ್ಲಿನ ವಿದ್ವಾಂಸರು ಜಾನಪದ ಮಾಹಿತಿಗಳನ್ನು ಆಧಕುನಿಕತೆಗೆ ವಿರುದ್ಧವಾಗಿಯೇ ಪುನರ್ ಸಂಘಟಿಸಿಕೊಂಡರು. ಅಧ್ಯಯನ ಕ್ರಮವು ವಸಾಹತು ಕಾಲಘಟ್ಟದಲ್ಲಿ ಭಾರತವನ್ನು ಪ್ರವೇಶಿಸಿತು. ಹಾಗಾದರೆ ಭಾರತದಲ್ಲಿಯೂ ಜಾನಪದವನ್ನು ಆಧುನಿಕತೆಗೆ ವಿರುದ್ಧ ನಿಲ್ಲಿಸಲಾಯಿತೆ? ಪ್ರಶ್ನೆಗೆ ಬಹಳ ಸರಳವಾಗಿ ಹೌದು ಅಥವಾ ಅಲ್ಲ ಎಂಬಂತೆ ಉತ್ತರ ಕೊಡಲಾಗುವುದಿಲ್ಲ. ಯಾಕೆಂದರೆ ಪಾಶ್ಚಾತ್ಯರು ನೀಡಿರುವ ಅರ್ಥದಲ್ಲಿ ಭಾರತಕ್ಕೆ ಆಧುನಿಕತೆ ಇನ್ನೂ ಪ್ರವೇಶಿಸಿರಲಿಲ್ಲ. ಯಾವುದನ್ನು ಆಧುನಿಕ ಪೂರ್ವ ಸಮಾಜದ ಲಕ್ಷಣಗಳೆಂದು ಹೇಳಲಾಗುತ್ತಿದೆಯೋ ಅವೆಲ್ಲವೂ ಇನ್ನೂ ಭಾರತೀಯ ಸಮಾಜದಲ್ಲಿ ಉಳಿದಿದೆ. ಅಂದರೆ ಈಗ ಸುಮಾರು 200–300 ವರ್ಷಗಳ ಹಿಂದಿನ ಸ್ಥಿತಿಯೊಂದರಲ್ಲಿ ಆಧುನಿಕತೆಯನ್ನು ಗುರುತಿಸುವುದು ಕಷ್ಟ. ಇದು ಹೌದಾದರೆ ಪಾಶ್ಚಾತ್ಯರು ಜಾನಪದವನ್ನು ಗ್ರಹಿಸಿದ ಹಾಗೆ ಭಾರತೀಯ ಸಮಾಜಕ್ಕೆ ಗ್ರಹಿಸಲು ಸಾಧ್ಯವಿಲ್ಲ. ಜೊತೆಗೆ ಯುರೋಪಿನ ಸಮರೂಪೀ ಸಮಾಜಕ್ಕೆ ವಿರುದ್ಧವಾದ ರೀತಿಯಲ್ಲಿ ಭಾರತೀಯ ಸಮಾಜ ಬಹುಮುಖಿಯಾಗಿದೆ. ಇಂತಹ ಸಮಾಜದಲ್ಲಿ ಜಾನಪದವು ನಿರ್ವಹಿಸುವ ಕೆಲಸಗಳೇನು? ಹಾಗೂ ಜಾನಪದ ಅಧ್ಯಯನವು ವಸಾಹತು ಕಾಲಘಟ್ಟದಲ್ಲಿ ಭಾರತದಲ್ಲಿ ಕಾಣಿಸಿಕೊಂಡಿತು ಎಂದು ಒಪ್ಪುವುದಾದರೆ ಅದರ ಚಾರಿತ್ರಿಕ ಕಾರಣಗಳೇನು? ಜಾನಪದ ಪ್ರಕಾರಕ್ಕೂ, ಅದನ್ನು ಅಧ್ಯಯನ ಮಾಡಿದ ವಿದ್ವಾಂಸರನ್ನೂ ಒಳಗೊಂಡಿರುವ ಸಾಮಾಜಿಕ ವರ್ಗದ ಸೈದ್ಧಾಂತಿಕತೆಗೂ ಏನಾದರೂ ಸಂಬಂಧವಿದೆಯೇ? ಜಾನಪದ ಅಧ್ಯಯನದ ಉಗಮ ಹಾಗೂ 18–19ನೆಯ ಶತಮಾನಗಳಲ್ಲಿ ಭಾರತೀಯ ಸಮಾಜ ಎದುರಿಸಿದ ಬಿಕ್ಕಟ್ಟುಗಳಿಗೂ ನಡುವಣ ಸಂಬಂಧ ಯಾವ ಬಗೆಯದು? ಪಾಶ್ಚಾತ್ಯರು ಅದನ್ನು ಅಧ್ಯಯನ ಮಾಡಿದ ಕ್ರಮಕ್ಕೂ ಭಾರತೀಯರು ಅದನ್ನು ಅಧ್ಯಯನ ಮಾಡಿದ ಕ್ರಮಕ್ಕೂ ನಡುವೆ ಇರುವ ಸಾಮಾನ್ಯ ಹಾಗೂ ಭಿನ್ನಾಂಶಗಳು ಯಾವುವು? ಎಂಬಿತ್ಯಾದಿ ಸೈದ್ಧಾಂತಿಕ ಪ್ರಶ್ನೆಗಳನ್ನು ಕೇಳಿಕೊಂಡರೆ ಅಧ್ಯಯನದ ಉದ್ದೇಶ ಸ್ಪಷ್ಟವಾಗುತ್ತದೆ.

ಅ. ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ನಡೆದ ಜಾನಪದ ಸಂಗ್ರಹ ಹಾಗೂ ಅಧ್ಯಯನಗಳನ್ನು ವಿವರವಾಗಿ ಪರಿಶೀಲಿಸುವುದು.

ಆ. ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನದ ಸೈದ್ಧಾಂತಿಕ ನೆಲೆಗಳ ವಿಶ್ಲೇಷಣೆ ನಡೆಸುವುದು.

ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟ

ಕನ್ನಡದಲ್ಲಿ ಇದುವರೆಗೆ ನಡೆದ ಹಾಗೂ ನಡೆಯುತ್ತಿರುವ ಜಾನಪದ ಅಧ್ಯಯನ ಹಾಗೂ ಸಂಗ್ರಹಗಳ ಸಮಗ್ರ ಪರಿಚಯ ನೀಡುವ ಗ್ರಂಥಸೂಚಿ ಲಭ್ಯವಿಲ್ಲ. **ಹಾ.ಮಾ. ನಾಯಕರು** ಸಂಪಾದಿಸಿಕೊಟ್ಟ **'ಕನ್ನಡ ಜಾನಪದ ಗ್ರಂಥಸೂಚಿ'** (1974) ಯಲ್ಲಿ 1800ರಿಂದ 1973ರ ವರೆಗೆ ಪ್ರಕಟವಾದ 532 ಕೃತಿಗಳ, ಲೇಖನಗಳ ಬಗೆಗೆ ಮಾಹಿತಿ ನೀಡಲಾಗಿದೆ. ಆದರೆ ಅದರಲ್ಲಿ ಸೇರದೇ ಇರುವ ಕೃತಿಗಳ ಸಂಖ್ಯೆ ಬಹಳವಿದೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ನಡೆದ ಕೆಲಸಗಳ ಬಗೆಗೆ ಸಮಗ್ರವಾದ ಹಾಗೂ ಸವಿವರವಾದ ಗ್ರಂಥಸೂಚಿಯೊಂದನ್ನು ಸಿದ್ಧಪಡಿಸುವ ಅಗತ್ಯವಿದೆ. ಕಾಲಾಂತರದಲ್ಲಿ ಎಷ್ಟೋ ಕೃತಿಗಳ ಹೆಸರುಗಳೇ ಮರೆತುಹೋಗಿ ಬಿಡುವ ಸಾಧ್ಯತೆಯಿದೆ. ಕಾರಣ, ಬೇರೆ ಬೇರೆ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ಪಠ್ಯವನ್ನು ಪರಿಚಯಿಸಿಕೊಳ್ಳಬೇಕಾಗಿದೆ. ಇಂಥ ಮಾಹಿತಿಗಳು ಜಾನಪದ ಸಂಗ್ರಹ ಹಾಗೂ ಅಧ್ಯಯನಗಳು ನಡೆದು ಬಂದ ದಾರಿಕಡೆಗೆ ಬೆಳಕು ಚೆಲ್ಲುವುದಲ್ಲದೆ, ಜಾನಪದವನ್ನು ಚಾರಿತ್ರಿಕವಾಗಿ ಅಧ್ಯಯನ ಮಾಡುವವರಿಗೆ ಮೂಲ ಆಕರಗಳಾಗಿಯೂ ಸಹಕರಿಸುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ಸಾಕಷ್ಟು ಶ್ರಮವಹಿಸಿ ಅಂಥ ಮಾಹಿತಿಗಳನ್ನು ಕಲೆಹಾಕಿ ಕಾಲಾನುಕ್ರಮದಲ್ಲಿ ಜೋಡಿಸಲಾಗಿದೆ. ಕೆಲಸಕ್ಕೆ ಗ್ರಂಥಾಲಯಗಳು, ವೈಯಕ್ತಿಕ ಸಂಗ್ರಹಗಳು, ಉಲ್ಲೇಖಗಳು ಹಾಗೂ ಪತ್ರ ಮುಖೇನ ಸಂಗ್ರಹಿಸಿದ ಮಾಹಿತಿಗಳು ಮುಂತಾದ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಲಭ್ಯವಿರುವ ಮಾಹಿತಿಯ ಪ್ರಕಾರ ಕನ್ನಡದಲ್ಲಿ ಜಾನಪದ ಅಧ್ಯಯನವನ್ನು ಆರಂಭಿಸಿದವನು **ಲೆಫ್ಟಿನಂಟ್ ಕರ್ನಲ್ ಮೆಕೆಂಜಿ**. ಸುಮಾರು 1796ರಿಂದ 1810ರ ವರೆಗೆ ಕರ್ನಾಟಕದ ಬೇರೆ ಬೇರೆ ಪ್ರದೇಶದಲ್ಲಿ ಸುತ್ತಾಡಿದ ಆತ ಕರ್ನಾಟಕಕ್ಕೆ ಸಂಬಂಧಪಟ್ಟ ಐತಿಹ್ಯಗಳನ್ನು ಸಂಗ್ರಹಿಸಿದ್ದಾನೆ. ಮೆಕೆಂಜಿಯಿಂದಲೇ ಆರಂಭಿಸಲಾದ ಅಧ್ಯಯನವನ್ನು 1955ಕ್ಕೆ ಕೊನೆಗೊಳಿಸಲಾಗಿದೆ. ಅಧ್ಯಯನಕ್ಕೆ ಬಹುಮಟ್ಟಿಗೆ ಸ್ವಾತಂತ್ರ್ಯ ಸಿಕ್ಕಿರುವುದು ಒಂದು ಘಟ್ಟ. ರಾಷ್ಟ್ರೀಯ ಹೋರಾಟ ಒಂದರ್ಥದಲ್ಲಿ ಸ್ವಾತಂತ್ರ್ಯ ಪಡೆಯುವುದರೊಂದಿಗೆ ಕೊನೆಗೊಂಡಿತು. ಸ್ವಾತಂತ್ರ್ಯ ಅನಂತರ ಭಿನ್ನ ಬಗೆಯ ಅಧ್ಯಯನ ಕ್ರಮಗಳು ಆರಂಭವಾದುವು. ಜಾನಪದಕ್ಕೆ ಸಂಬಂಧಿಸಿದಂತೆ ಮಾತನ್ನು ಹೆಚ್ಚು ನಿಖರವಾಗಿ ಅನ್ವಯಿಸಿಕೊಳ್ಳಲು ಕಷ್ಟವಾಗುತ್ತದೆ. ಆದರೂ 1954ರಲ್ಲಿ **ಬಿ.ಎಸ್. ಗದ್ದಗೀಮಠರು** ತಮ್ಮ **'ಕನ್ನಡ ಜನಪದ ಗೀತೆಗಳು'** ಎಂಬ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದರು. 1955ರಲ್ಲಿ **ಎ.ಕೆ. ರಾಮಾನುಜನ್** ಅವರ **'ಗಾದೆಗಳು'** ಎಂಬ ವಿಮರ್ಶಾ ಕೃತಿಯು ಪ್ರಕಟವಾಯಿತು. 1955ರಿಂದ ಕನ್ನಡ ಜಾನಪದ ಅಧ್ಯಯನವು ತನ್ನ ಮಗ್ಗುಲನ್ನು ಬದಲಾಯಿಸಿಕೊಂಡಿತು. ಮುಖ್ಯವಾಗಿ ಅದಕ್ಕೆ ಶೈಕ್ಷಣಿಕ ಮಹತ್ವ ಪ್ರಾಪ್ತಿಸಿತು.

ಅಧ್ಯಯನದ ಎರಡನೆಯ ಉದ್ದೇಶವೆಂದರೆ, ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನದ ಸೈದ್ಧಾಂತಿಕ ನೆಲೆಗಳನ್ನು ವಿಶ್ಲೇಷಿಸುವುದು. ಸ್ವಾತಂತ್ರ್ಯಪೂರ್ವ ಕನ್ನಡ ಜಾನಪದ ಸಂಗ್ರಹಗಳ ಹಾಗೂ ಅಧ್ಯಯನಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ನಾವು ಅಧ್ಯಯನಗಳು ನಡೆದ 19ನೆಯ ಶತಮಾನದ ಕರ್ನಾಟಕದ ಚಾರಿತ್ರಿಕ ಸನ್ನಿವೇಶವನ್ನು ತಿಳಿದುಕೊಳ್ಳಬೇಕು. ಇದು ಅಂತಿಮವಾಗಿ ನಮ್ಮ ಸಾಂಸ್ಕೃತಿಕ ಸಂದರ್ಭ ಒಂದರ ವಿಶ್ಲೇಷಣೆಯೇ ಆಗುತ್ತದೆ. ಈ ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಮುಖ್ಯವಾದ ಕೆಲವು ಸಾಂಸ್ಕೃತಿಕ ಪ್ರಶ್ನೆಗಳನ್ನು ಕೇಳಿಕೊಳ್ಳಲಾಗಿದೆ.

ಅಧ್ಯಯನಗಳ ಪ್ರಧಾನ ಸಮಸ್ಯೆಯೆಂದರೆ ಕಾರಣಗಳ ಸಾರ್ವತ್ರೀಕರಣ. ಒಂದು ಘಟನೆ ಅದು ನಡೆದ ಅನಂತರ ವಿಶ್ಲೇಷಣೆಗೆ ದಕ್ಕುತ್ತದೆ. ಹಾಗೂ ಅಧ್ಯಯನಕಾರನು ಅದಕ್ಕೆ ಕೆಲವು ಕಾರಣಗಳನ್ನು ಕೊಡುತ್ತಾನೆ. ಕಾರಣಗಳು ತಾರ್ಕಿಕವಾಗಿರುತ್ತವೆ ನಿಜ. ಆದರೆ ಅದೇ ಕಾರಣದಿಂದ ಆ ಕಾರ್ಯ ಸಂಭವಿಸಿತು ಎಂದು ನಿಖರವಾಗಿ ಹೇಳುವುದು ಹೇಗೆ? ಮಗು ಅತ್ತದ್ದರಿಂದ **ಅಜ್ಜಿ ಕಥೆ** ಹೇಳಿದಳು ಎಂಬುದು ನಿಜವಾಗಿರಬಹುದು. ಆದರೆ ಇದರ ಸಹಾಯದಿಂದ ಮಗು ಅಳುವಾಗಲೆಲ್ಲ ಅಜ್ಜಿ ಕಥೆಯನ್ನೇ ಹೇಳುತ್ತಾಳೆ ಎಂಬ ತೀರ್ಮಾನವನ್ನು ತೆಗೆದುಕೊಳ್ಳಲು ಸಾಧ್ಯವೇ? ಬಹುಶಃ ಸಾಧ್ಯವಿಲ್ಲ. ಯಾಕೆಂದರೆ ಸಾಮಾಜಿಕ ಜಗತ್ತಿನಲ್ಲಿ ವಿಷಯಗಳು ಅವು ಇರುವಂತೆಯೇ ಪುನರಾವರ್ತನೆ ಆಗುವ ಸಾಧ್ಯತೆ ಕಡಿಮೆ. ಅಥವಾ ಇಲ್ಲ. ಜೊತೆಗೆ ಮಾನವನ ವಿಶಿಷ್ಟ ಪ್ರಜ್ಞೆಗೂ ಸ್ಥಾನವಿಲ್ಲ. ಇದರ ಜೊತೆಗೆ ಇನ್ನೊಂದು ಸಮಸ್ಯೆಯಿದೆ. ಅದೆಂದರೆ ಘಟನೆಯೊಂದಕ್ಕೆ ವಿಶ್ಲೇಷಣೆಯಲ್ಲಿ ಕಂಡುಕೊಂಡ ಕಾರಣವನ್ನು ಮಾತ್ರ ಮುಖ್ಯವೆಂದು ಭಾವಿಸುವುದು. ಇದರಿಂದಾಗಿ ಬೇರೆ ಕೆಲವು ಕಾರಣಗಳು ಗೌಣವಾಗಿ ಬಿಡುವ ಸಾಧ್ಯತೆಯಿದೆ. ಉದಾಹರಣೆಗೆ, ಸ್ವಾತಂತ್ರ್ಯ ಪೂರ್ವಕಾಲಘಟ್ಟದಲ್ಲಿ ಬಂದಿರುವ ಸಂಗ್ರಹಗಳಲ್ಲಿ ಹಾಡುಗಳಿಗೇ ಸಿಂಹಪಾಲು ಸಂದಿದೆ. ದೇಸೀ ವಿದ್ವಾಂಸರು ಜಾನಪದ ಹಾಡುಗಳತ್ತಲೇ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ಇಂಥ ಸಂದರ್ಭದಲ್ಲಿ ಯಾವ ಬಗೆಯ ಹಾಡುಗಳನ್ನು ಇವರು ಸಂಗ್ರಹಿಸಿದ್ದಾರೆ ಎಂದು ಪ್ರಶ್ನೆಯೊಂದನ್ನು ಕೇಳಿಕೊಳ್ಳಲಾಗುವುದು. ಹಾಗೂ ಎರಡನೆಯದಾಗಿ, ಹಾಡುಗಳತ್ತಲೇ ವಿದ್ವಾಂಸರ ಗಮನಹರಿಯಲು ಕಾರಣಗಳೇನು? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಲಾಗುವುದು. ಹೀಗೆ ಮಾಡಿದಾಗ ಘಟನೆಗೂ ಹಾಗೂ ಆ ಘಟನೆ ಸಂಭವಿಸಲು ಕಾರಣವಾದ ಅಂಶಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಇದನ್ನು ಸ್ವಲ್ಪ ಬೇರೆ ರೀತಿಯಾಗಿ ಹೇಳಬೇಕೆಂದರೆ, ನಾವು ಯಾವ ಕಾರಣವನ್ನು ಕಂಡುಕೊಳ್ಳುತ್ತೇವೆಯೋ ಆ ಕಾರಣವನ್ನು ತೆಗೆದರೆ ಅದರ ಪರಿಣಾಮವೂ ಇರುವುದಿಲ್ಲ ಎಂದು ಭಾವಿಸಲಾಗುವುದು. ಒಂದು ಪ್ರಶ್ನೆ ಮಾತ್ರ ಅಪರಿಹಾರ್ಯವಾಗಿ ಉಳಿದುಬಿಡುತ್ತದೆ.

ಅದು ಕಾಲದ ಸಮಸ್ಯೆ. ನಾವು ಊಹಿಸುವ ಅಥವಾ ತರ್ಕಿಸುವ ಕಾರಣಗಳು ಹಾಗೂ ಅದರ ಕಾರಣಗಳ ಪರಿಣಾಮವಾಗಿ ಆ ಘಟನೆ ಸಂಭವಿಸಿದೆಯೇ ಎಂದು ಕೇಳಿದರೆ ಉತ್ತರಿಸುವುದು ಕಷ್ಟ. ಪ್ರಸ್ತುತ ಅಧ್ಯಯನದಲ್ಲಿ ತಾತ್ವಿಕ ಪ್ರಶ್ನೆಗಳಿಗೆ ಮುಖಾಮುಖಿಯಾಗಿಲ್ಲ. ಅದರ ಬದಲು ಜಾನಪದ ಸಂಗ್ರಹ ಹಾಗೂ ಅಧ್ಯಯನಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳುತ್ತಾ ಅದಕ್ಕೆ ನಮ್ಮ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಸಂದರ್ಭದಲ್ಲಿ ಕಾರಣಗಳನ್ನು ಊಹಿಸಲಾಗುವುದು. ನಾವು ಯಾವ ಕಾರಣಗಳನ್ನು ತರ್ಕಿಸುತ್ತೇವೆಯೋ ಅದರೊಳಗೆ ಆ ಘಟನೆ ಸಂಭವಿಸಲು ಬೇಕಾದ ಕಾರಣಗಳು ಹುದುಗಿರುತ್ತವೆ ಎಂದು ಭಾವಿಸಲಾಗಿದೆ.

ಜಾನಪದ ಅಧ್ಯಯನಕ್ಕೆ ಕಾರಣವಾದ ಅಂಶಗಳನ್ನು ಸ್ವಾತಂತ್ರ್ಯಪೂರ್ವ ದೇಸೀ ಚಳುವಳಿಗಳಲ್ಲಿ ಕಂಡುಕೊಳ್ಳಲು ಸಾಧ್ಯವೆಂದು ನನ್ನ ನಂಬಿಕೆ. ಹೀಗೆಂದಾಗ ಸ್ವಾತಂತ್ರ್ಯಪೂರ್ವ ಕರ್ನಾಟಕದ ಸ್ಥಿತಿಗತಿಗೆ ಹಾಗೂ ಜಾನಪದ ಸಂಗ್ರಹಗಳ ನಡುವಿನ ಸಂಬಂಧವನ್ನು ನೇರ ಹಾಗೂ ಸರಳವೆಂದು ಭಾವಿಸಬಾರದು. ಜಾನಪದ ಸಂಗ್ರಹಗಳು ಪ್ರಕಟಿಸುವ ಮೌಲ್ಯ ವಿನ್ಯಾಸಕ್ಕೂ ಅಂಥ ಸಂಗ್ರಹಗಳು ಹುಟ್ಟಿಕೊಂಡಿರುವ ಚಾರಿತ್ರಿಕ ಸಂದರ್ಭಗಳ ನಡುವೆ ಇಂಥ ಸರಳವಾದ ಸಂಬಂಧ ಇರುತ್ತವೆಂದು ಭಾವಿಸಲಾಗದು. ಈ ಬಗೆಯ ಅಧ್ಯಯನಗಳು ಸಮಾಜದ ಪ್ರತಿಬಿಂಬ ಆಗಿರುವುದಿಲ್ಲ. ಬದಲು ಅವುಗಳ ನಡುವೆ ಸಂಬಂಧ ಹೆಚ್ಚು ಸಂಕೀರ್ಣವಾಗಿರುತ್ತದೆ. ಸಮಾಜದಲ್ಲಿ ಕಾಣಿಸಿಕೊಳ್ಳುವ ಬದಲಾವಣೆಗಳು ತಮ್ಮಷ್ಟಕ್ಕೆ ಸ್ವತಂತ್ರವಾಗಿ ಏನೂ ಘಟಿಸುವುದಿಲ್ಲ. ಅವು ಒಂದು ನಿರ್ದಿಷ್ಟ, ಚಾರಿತ್ರಿಕ ಬೆಳವಣಿಗೆಯ ಪರಿಣಾಮವಾಗಿರುತ್ತದೆ. ಚಾರಿತ್ರಿಕ ಬದಲಾವಣೆಯಲ್ಲಿ ಕೆಲವು ಸಂಗತಿಗಳು ಪ್ರಮುಖವಾಗಿ ಮುನ್ನೆಲೆಗೆ ಬರುತ್ತವೆ ಹಾಗೂ ಇನ್ನು ಕೆಲವು ಹಿನ್ನೆಲೆಗೆ ಸರಿದುಬಿಡುತ್ತವೆ. ಸಂಗ್ರಹ ಹಾಗೂ ಅಧ್ಯಯನಗಳ ಸಂದರ್ಭದಲ್ಲಿ ಪ್ರಾಮುಖ್ಯ ಪಡೆಯುವ ವಿವರಗಳು ಆಯಾ ವಿದ್ವಾಂಸರು ಪ್ರತಿನಿಧಿಸುವ ಸಾಮಾಜಿಕ ಸಮುದಾಯದ ಆಲೋಚನಾ ಕ್ರಮದೊಂದಿಗೆ ಸಂಬಂಧವನ್ನು ಪಡೆದಿರುತ್ತವೆ.

19ನೆಯ ಶತಮಾನದ ಬದಲಾವಣೆಗಳು ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಕರ್ನಾಟಕದ ಸಾಮಾಜಿಕ ರಚನೆಯ ಮೇಲೆ ಹಾಗೂ ಜಾನಪದ ಅಧ್ಯಯನದ ಮೇಲೆ ನಿರ್ಣಾಯಕವಾದ ಪರಿಣಾಮ ಬೀರಿದೆ. ಅಂಥ ಪರಿಣಾಮಗಳು ನಿರ್ದಿಷ್ಟ ಸಾಮಾಜಿಕ ಸಮುದಾಯದ ಮನಸ್ಥಿತಿಯೊಂದಿಗೆ ಹೊಂದಿರುವ ಸಂಬಂಧವನ್ನು ವಿಶ್ಲೇಷಿಸಲಾಗುವುದು. ಯಾಕೆಂದರೆ ಅಧ್ಯಯನಗಳಾಗಲಿ, ಸಂಗ್ರಹಗಳಾಗಲಿ ಅವು ನಡೆದ ಪರಿಸರದ ಪ್ರತಿಫಲನ ಮಾತ್ರ ಆಗಿರುವುದಿಲ್ಲ. ಬದಲು ಅವುಗಳು ನಿರ್ದಿಷ್ಟ

ಸನ್ನಿವೇಶವೊಂದನ್ನು ಎದುರಿಸಲು ವಿದ್ವಾಂಸರು ಕಂಡುಕೊಂಡ ಪ್ರಯತ್ನಗಳಾಗಿರುತ್ತವೆ. ಹೊಸ ಸನ್ನಿವೇಶವೊಂದು ಎದುರಾದಾಗ ಅದನ್ನು ಎದುರಿಸಲು ಹಳೆಯ ರಚನೆಗಳಿಂದ ಸಾಧ್ಯವಾಗುವುದಿಲ್ಲ. ಬದಲು ಹೊಸರಚನೆಗಳನ್ನು ನಿರ್ಮಿಸಿಕೊಳ್ಳಬೇಕಾಗುತ್ತದೆ. ಶಿವರಾಮ ಪಡಿಕ್ಕಲ್ ವಿಶ್ಲೇಷಿಸಿರುವಂತೆ "ಒಂದು ನಿರ್ದಿಷ್ಟ ಸನ್ನಿವೇಶವನ್ನು ನಿಭಾಯಿಸಲು ಹಾಗೂ ತನ್ನ ಸಮತೋಲನ ಕಾಪಾಡಲು ಸಮಾಜ ಸ್ವಯಂಪ್ರೇರಿತ ಪ್ರಕ್ರಿಯೆ ಇದು"(1988:7). ಹೀಗೆ ಜಾನಪದ ಸಂಗ್ರಹ ಹಾಗೂ ಅಧ್ಯಯನಗಳನ್ನು ಅವು ಹುಟ್ಟಿಕೊಂಡ ಕಾಲದ ಚಾರಿತ್ರಿಕ ಸಂದರ್ಭದಲ್ಲಿರಿಸಿ ಚರ್ಚಿಸುವ ಹಾಗೂ ಅವನ್ನು ನಿರ್ದಿಷ್ಟ ಸಮುದಾಯದ ಮನಸ್ಥಿತಿಯೊಂದಿಗೆ ವಿಶ್ಲೇಷಿಸುವ ಕೆಲಸವನ್ನು ಮಾಡಲಾಗಿದೆ.

ಕನ್ನಡ ಜಾನಪದ ಹಾಗೂ ಅಧ್ಯಯನಗಳ ಸ್ವರೂಪವನ್ನು 19ನೆಯ ಶತಮಾನದ ಕರ್ನಾಟಕ ಸಮಾಜವು ಪಡೆದ ಚಾರಿತ್ರಿಕ ಅವಸ್ಥಾಂತರಗಳು ಹಾಗೂ ಇದೇ ಹೊತ್ತಿನ ಕರ್ನಾಟಕದ ಇಂಗ್ಲಿಷ್ ವಿದ್ಯಾವಂತ ವರ್ಗದ ವೈಚಾರಿಕತೆಯೊಂದಿಗೆ ಸಂಬಂಧಿತವಾಗಿಯೇ ಚರ್ಚಿಸಲಾಗಿದೆ.

*****

ಭಾಗ 2

ಕನ್ನಡ ಜಾನಪದ ಅಧ್ಯಯನದ ಸಾಂಸ್ಕೃತಿಕ ಹಿನ್ನೆಲೆ

ವಸಾಹತೀಕರಣ, ರಾಷ್ಟ್ರೀಯ ಹೋರಾಟ, ಉದೀಯಮಾನ ಮಧ್ಯಮ ವರ್ಗ ಹಾಗೂ ಇತರ ಚಳುವಳಿಗಳು

ಕನ್ನಡ ಜಾನಪದ ಅಧ್ಯಯನವು ಕಳೆದ 200 ವರ್ಷಗಳ ಅವಧಿಯ ಚೌಕಟ್ಟಿನಲ್ಲಿ ಬೆಳೆದು ನಿಂತಿದೆ. ಪ್ರಾರಂಭದ ಒಂದು ಶತಮಾನದ ಅವಧಿಯಲ್ಲಿ ಕನ್ನಡ ಜಾನಪದ ಬಗೆಗೆ ಅಷ್ಟೇನೂ ಪ್ರಮುಖ ಕೆಲಸಗಳು ನಡೆಯದಿದ್ದರೂ ಆ ಸಂದರ್ಭದಲ್ಲಿ ಪಾಶ್ಚಾತ್ಯರು ಜಾನಪದ ಸಂಗ್ರಹ ಹಾಗೂ ಅಧ್ಯಯನಗಳಿಗೆ ಮೊದಲುಗೊಂಡರು. ಮೊದಲ ಘಟ್ಟದಲ್ಲಿ ನಡೆದ ಕನ್ನಡ ಜಾನಪದ ಅಧ್ಯಯನಕ್ಕೂ ಹಾಗೂ ಆ ಕಾಲದ ಸಾಂಸ್ಕೃತಿಕ ಹಿನ್ನೆಲೆಗೂ ನೇರವಾದ ಸಂಬಂಧವಿದೆ.

ಹದಿನೆಂಟನೆಯ ಶತಮಾನದ ಉತ್ತರಾರ್ಧ, ಹತ್ತೊಂಬತ್ತನೆಯ ಶತಮಾನ ಹಾಗೂ ಇಪ್ಪತ್ತನೆಯ ಶತಮಾನದ ಪೂರ್ವಾರ್ಧಗಳ ಮಧ್ಯೆ ಭಾರತದಲ್ಲಿ ಕಂಡು ಬಂದ ರಾಷ್ಟ್ರೀಯ ಚಳುವಳಿಗಳು, ರಾಷ್ಟ್ರೀಯ ಹೋರಾಟ ಹಾಗೂ ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳಿಂದ ಒಟ್ಟು ಜನಜೀವನ ಕ್ರಮ ರೂಪುಗೊಂಡಿದೆ. ಪಾಶ್ಚಾತ್ಯರ ಆಗಮನ ಭಾರತೀಯರ ಸಾಮಾಜಿಕ ಜೀವನಕ್ರಮದ ಮೇಲೆ ನೇರ ಪರಿಣಾಮ ಬೀರಿತು. ಇದರಿಂದಾಗಿ ಭಾರತೀಯರ ಯೋಚನಾಕ್ರಮವು ಹೊಸ ದಿಕ್ಕಿಗೆ ಹರಿಯಿತು. ಹೊಸ ಶಿಕ್ಷಣವ್ಯವಸ್ಥೆ ಬಂತು. ಹಿಂದೂಧರ್ಮ ಸುಧಾರಣಾ ಪಂಥಗಳು ಸ್ಥಾಪಿತವಾದವು. **'ಮುದ್ರಣಯಂತ್ರಗಳು'**, **'ಪತ್ರಿಕೋದ್ಯಮ'**ಗಳು ಬೆಳಕಿಗೆ

ಬಂದವು.[1] ಮೊದಲ ಘಟ್ಟದ ಜಾನಪದ ಅಧ್ಯಯನಕ್ಕೆ ಕನ್ನಡ ಪತ್ರಿಕೆಗಳ ಸಹಕಾರ ಗಮನೀಯ. ಮುದ್ರಣಯಂತ್ರ ಹಾಗೂ ನೂರಾರು ಪತ್ರಿಕೆಗಳು ಆ ಸಂದರ್ಭದಲ್ಲಿ ಬೆಳಕಿಗೆ ಬಂದುವು. ಅವೆಲ್ಲವುಗಳು ಜಾನಪದಕ್ಕೆ ಹೆಚ್ಚಿನ ಒತ್ತುಕೊಟ್ಟವು. (ಶ್ರೀನಿವಾಸ ಹಾವನೂರ, 1975)

18. 19 ಹಾಗೂ 20ನೆಯ ಶತಮಾನದ ಸ್ಥೂಲನೋಟ

ಪಾಶ್ಚಾತ್ಯರ ಸಂಪರ್ಕದಿಂದಾಗಿ ಭಾರತದಲ್ಲಿ ರಾಜಕೀಯ ಹಾಗೂ ಸಾಮಾಜಿಕ ಸ್ಥಿತ್ಯಂತರಗಳು ಕಾಣಿಸಿಕೊಂಡವು. **ವಾಸ್ಕೋಡಿಗಾಮನ** ಆಗಮನ ಕಾಲದಿಂದಲೇ ಯೂರೋಪಿಯನ್ನರ ಸಂಪರ್ಕವು ಭಾರತಕ್ಕೆ ಒದಗಿ ಬಂದಿದ್ದರೂ ಒಟ್ಟು ಜನಜೀವನದ ಮೇಲೆ ವಿಶೇಷ ಪರಿಣಾಮವಾಗಿರಲಿಲ್ಲ. ಕ್ರಿ.ಶ.1757ರಲ್ಲಿ **ಪ್ಲಾಸೀ ಕದನ**ದಲ್ಲಿ **ಸಿರಾಜುದೌಲ**ನು ಸೋತಂದಿನಿಂದ ಪಾಶ್ಚಾತ್ಯರ ಪ್ರಭಾವವು ಗಾಢವಾಗಿ ಬೆಳೆಯಿತು. 1765ರಲ್ಲಿ ಸಮಗ್ರ ಬಂಗಾಳ ಹಾಗೂ ಬಿಹಾರ ಇವುಗಳ ಆಡಳಿತವು ಬ್ರಿಟಿಷರ ಆಳ್ವಿಕೆಗೆ ಒಳಗಾಯಿತು. ಪಶ್ಚಿಮ ದಿಕ್ಕಿನಿಂದ ಬಂದ ಬ್ರಿಟಿಷರು ಪೂರ್ವದ ಬದಿಯಿಂದ ಭಾರತದ ಆಕ್ರಮಣಕ್ಕೆ ತೊಡಗಿದರು.

18ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಭಾರತದಲ್ಲಿ **ಊಳಿಗಮಾನ್ಯ** ಪದ್ಧತಿಯಿಂದಾಗಿ ಉತ್ಪಾದನೆಯಲ್ಲಿ ವಿಘಟನೆ ಕಂಡುಬಂತು. ಇದರ ಜೊತೆಯಲ್ಲೇ ರೈತರು ಹಾಗೂ ಕುಶಲಕರ್ಮಿಗಳು ಹೆಚ್ಚುಹೆಚ್ಚಾಗಿ ಊಳಿಗಮಾನ್ಯ ವ್ಯವಸ್ಥೆಯ ಶೋಷಣೆಗೆ ಒಳಗಾಗುವುದೂ ವರ್ತಕರು ಹಾಗೂ ಲೇವಾದೇವಿಗಾರರನ್ನು ಹೆಚ್ಚು ಅವಲಂಭಿಸುವುದೂ ಕಾಣಬಂದಿತು. ದಮನಕ್ಕೊಳಗಾದ ಹಾಗೂ ಹಸಿವಿನಿಂದ ಕಂಗಾಲಾಗಿದ್ದ ಜನಸಮುದಾಯಗಳು ಎಲ್ಲೆಡೆಗಳಲ್ಲಿಯೂ ಸಾಮೂಹಿಕ ಪ್ರತಿಭಟನೆಯ ಮೂಲಕ ಇದಕ್ಕೆ ಪ್ರತಿಕ್ರಿಯೆಯನ್ನು ತೋರಿದವು. ಇದರ ಪರಿಣಾಮವಾಗಿ ಮೊಗಲ್ ಸಾಮ್ರಾಜ್ಯ ಅವನತಿಗೊಂಡಿತು. ಈ ಸಂದರ್ಭದಲ್ಲಿ ಯೂರೋಪಿಯನ್ನರು ಭಾರತದಾದ್ಯಂತ ದೊಡ್ಡ ವಾಣಿಜ್ಯ ಕೇಂದ್ರಗಳನ್ನು ವಸತಿಗಳನ್ನು ನಿರ್ಮಿಸುವುದಕ್ಕೆ ತೊಡಗಿದರು.

ಇದರ ಪರಿಣಾಮವಾಗಿ ನಾಡಿನ ಐತಿಹಾಸಿಕ ಭವಿತವ್ಯ ಬೇರೊಂದು ತಿರುವನ್ನೇ ಪಡೆದುಕೊಂಡಿತು. ಆರ್ಥಿಕವಾಗಿ ಹಿಂದುಳಿದಿದ್ದ ಹಾಗೂ ರಾಜಕೀಯವಾಗಿ ವಿಭಜಿತವಾಗಿದ್ದ ಭಾರತ ದೇಶ ಬ್ರಿಟಿಷ್ ವಸಾಹತುವಾದಿಗಳ ಆಕ್ರಮಣಕ್ಕೆ ಬಲಿಯಾಯಿತು. ಭಾರತೀಯ ಉಪಖಂಡದ ಸುವಿಶಾಲ ಪ್ರದೇಶದಲ್ಲಿ ಸುಮಾರು ನೂರು ವರ್ಷಗಳ ಅವಧಿಯಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿಕೊಂಡರು. ಭಾರತವನ್ನು ನೇರವಾಗಿ ಲೂಟಿ

ಮಾಡುವುದರಿಂದ ಆರಂಭಿಸಿ, ಬ್ರಿಟಿಷ್ ಆಕ್ರಮಣಕಾರರು ಕ್ರಮಕ್ರಮವಾಗಿ ಇದನ್ನು **ಗ್ರೇಟ್‌ಬ್ರಿಟನ್ನಿ**ನ ಕೃಷಿ ಹಾಗೂ ಕಚ್ಚಾವಸ್ತುಗಳ ಉಪಾಂಗವಾಗಿ ಪರಿವರ್ತಿಸಿ ಬಿಟ್ಟರು. ಮೊದಲಿಗೆ ಇದನ್ನು ತಮಗೆ ಕಚ್ಚಾ ವಸ್ತುಗಳು ಹಾಗೂ ಆಹಾರ ಸಾಮಾಗ್ರಿಗಳನ್ನು ಪೂರೈಸುವ ಕೇಂದ್ರವಾಗಿ ಮಾಡಿದರು. ಆ ರೀತಿಯಲ್ಲಿ ಭಾರತವನ್ನು ಜಾಗತಿಕ ಮಾರುಕಟ್ಟೆಯ ಪರಿಧಿಯೊಳಕ್ಕೆ ಸೆಳೆದುಕೊಂಡರು.

ಹೀಗಾಗಿ **ಗ್ರೇಟ್‌ಬ್ರಿಟನ್ನಿ**ನ ವಸಾಹತುಶಾಹಿ ಪ್ರಭುತ್ವ ಭಾರತದ ಆರ್ಥಿಕತೆಯ ಮೇಲೆ ಘೋರ ಪರಿಣಾಮಗಳನ್ನು ಉಂಟುಮಾಡಿತು. ಹೋಲಿಕೆಯಲ್ಲಿ ಅಗ್ಗವಾಗಿದ್ದ ಬ್ರಿಟಿಷ್ ಸಿದ್ಧವಸ್ತುಗಳು ಭಾರತದ ಕರಕುಶಲ ಕಲೆಯ ಅನೇಕ ಶಾಖೆಗಳನ್ನು ನಾಶಮಾಡಿತು. ಹಾಗೂ ಬ್ರಿಟಿಷ್ ವಸಾಹತುವಾದಿಗಳು ಕ್ರಮೇಣ ಭಾರತದಲ್ಲಿ ಖಾಸಗಿ ಭೂ–ಒಡೆತನದ ವ್ಯವಸ್ಥೆಯನ್ನು ಜಾರಿಗೆ ತಂದರು. ನಾಡಿನ ಇತಿಹಾಸದಲ್ಲಿ ಇದೇ ಮೊದಲಬಾರಿಗೆ ಭೂಮಿ ಕೊಂಡುಕೊಳ್ಳುವ ಹಾಗೂ ಮಾರುವ ಸರಕಾಗಿ ಪರಿಣಮಿಸಿತು. ಭೂಮಾಲೀಕರು ವಸಾಹತುವಾದಿಗಳಿಗೆ ಸಾಮಾಜಿಕ ಬೆಂಬಲವನ್ನು ನೀಡುವ ಶಕ್ತಿಯಾಗಿ ಮೂಡಿ ನಿಂತರು. ರೈತರ ಮೇಲೆ ವಿಧಿಸಲಾಗುತ್ತಿದ್ದ ತೆರಿಗೆಗಳು ಇತಿಮಿತಿಯಿಲ್ಲದೆ ಬೆಳೆದವು.

ಇದೇ ವೇಳೆಯಲ್ಲಿ ಮುಂಬಯಿ, ಮದ್ರಾಸ್ ಮೊದಲಾದ ವ್ಯಾಪಾರ ಸ್ಥಳಗಳು ರಾಜಕೀಯ ವ್ಯವಹಾರ ಕೇಂದ್ರಗಳಾದವು. ದಕ್ಷಿಣ ಭಾರತದಲ್ಲಿ ಬ್ರಿಟಿಷರ ಅಧಿಕಾರವನ್ನು ವಿರೋಧಿಸಿ ಮೈಸೂರು ಸಂಸ್ಥಾನ ಪ್ರಬಲ ಪ್ರತಿಭಟನೆ ತೋರಿತು. ದಕ್ಷಿಣ ಕರ್ನಾಟಕದಲ್ಲಿ ಹೈದರಾಲಿ ಹಾಗೂ ಅವನ ಮಗ ಟಿಪ್ಪುಸುಲ್ತಾನ ಮಾತ್ರ ಬ್ರಿಟಿಷರಿಗೆ ಮಲೆತು ನಿಂತನು. ಕ್ರಿ.ಶ. 1799ರ **ಶ್ರೀರಂಗಪಟ್ಟಣದ ಕೊನೆಯ ಕಾಳಗ**ದಲ್ಲಿ ಟಿಪ್ಪುವು ಮಡಿದಾಗ ಬ್ರಿಟಿಷರಿಗೆ ಅನೇಕ ಹೊಸ ಪ್ರದೇಶಗಳು ವಶವಾದುವಲ್ಲದೆ, ಇಡೀ ಮೈಸೂರು ಸಂಸ್ಥಾನದ ಆಡಳಿತವೇ ಅವರ ಕೈಗೆ ಬಂತು. 1761ರಲ್ಲಿ **ಮೊದಲ ಆಂಗ್ಲೋ–ಮರಾಠ ಯುದ್ಧ**ದಲ್ಲಿ ಪೇಶ್ವೆಗಳನ್ನು ಬ್ರಿಟಿಷರು ಸೋಲಿಸಿದರು. ಹಾಗೂ 1818ರ ಖಡಕಿಯ ಯುದ್ಧದಲ್ಲಿ ಮರಾಠ ಸಾಮ್ರಾಜ್ಯವು ಸಂಪೂರ್ಣ ನಾಶವಾಯಿತು. ಅಂದಿನಿಂದ ಬ್ರಿಟಿಷರಿಗೆ ಸರಿಸಮಾನವಾಗಿ ಸೆಣಸಾಡಬಲ್ಲ ಯಾವ ದೊಡ್ಡ ರಾಜರೂ ದಕ್ಷಿಣಭಾರತದಲ್ಲಿ ಉಳಿಯಲಿಲ್ಲ.

ಕರ್ನಾಟಕದಲ್ಲಿ ಬ್ರಿಟಿಷರ ಆಡಳಿತಕ್ಕೆ ಒಳಗಾದ ಮೊತ್ತಮೊದಲಿನ ಪ್ರದೇಶ ಟಿಪ್ಪುವಿನಿಂದ ದೊರೆತ **'ಕೆನರಾ'** (1799). ಮರುವರ್ಷ **ಹೈದರಾಬಾದ್ ನಿಜಾಮ**ನು ಬಳ್ಳಾರಿ ವಿಭಾಗವನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟನು. ಖಡಕಿಯ ಯುದ್ಧವು ಜರುಗುವುದಕ್ಕೆ ಒಂದು ವರುಷ ಮೊದಲೇ ಬ್ರಿಟಿಷರು **ಪೇಶ್ವೆ**ಯವರಿಂದ ಧಾರವಾಡ ಪ್ರಾಂತ್ಯವನ್ನು ಪಡೆದಿದ್ದರು. ಪೇಶ್ವೆ ಆಳ್ವಿಕೆಯು ಅಳಿದ ಮೇಲೆ ಮುಂಬಯಿ ಕರ್ನಾಟಕದ ಬಹುಭಾಗವು ಬ್ರಿಟಿಷರ

ಕೈವಶವಾಯಿತು. ಅದಕ್ಕೂ ಉತ್ತರದ ಪ್ರದೇಶಗಳಾದ ರಾಯಚೂರು, ಕಲ್ಬುರ್ಗಿ, ಬೀದರ್ ಜಿಲ್ಲೆಗಳು ಮಾತ್ರ ನಿಜಾಮನ ವಶದಲ್ಲೇ ಉಳಿದವು. ಸಣ್ಣ ಪುಟ್ಟ ಸಂಸ್ಥಾನಗಳಲ್ಲೊಂದಾದ ಕೊಡಗು 1834ರಲ್ಲಿ ಬ್ರಿಟಿಷರ ಅಧೀನವಾಯಿತು. ಹೀಗೆ, 19ನೆಯ ಶತಮಾನದ ಆರಂಭದಲ್ಲಿಯೇ ಕರ್ನಾಟಕವನ್ನು ಆಡಳಿತ ದೃಷ್ಟಿಯಿಂದ ಹಲವಾರು ತುಂಡುಗಳಾಗಿ ಮಾಡುವ ಕಾರ್ಯವು ಮುಗಿದಿದ್ದಿತು. ವಿಭಜನೆಯು ಇತರ ಯಾವುದೇ ಒಂದು ಭಾಷಾ ಪ್ರದೇಶದಲ್ಲಿ ನಡೆದಿರಲಿಲ್ಲ. ಇದು ಸಾಲಲಿಲ್ಲವೆಂಬಂತೆ **'ಕೆನರಾ'**ವನ್ನು 1860ರಲ್ಲಿ ಒಡೆದು ಉತ್ತರಕನ್ನಡ ಜಿಲ್ಲೆಯನ್ನು ಸೃಷ್ಟಿಸಿ ಮುಂಬಯಿ ಪ್ರಾಂತ್ಯಕ್ಕೆ ಸೇರಿಸಲಾಯಿತು. ನೆರೆಯಲ್ಲಿದ್ದ ಆ ಎರಡೂ ಪ್ರದೇಶಗಳ ಪ್ರಾಂತ್ಯ ಮಟ್ಟದ ರಾಜಧಾನಿಗಳಲ್ಲಿ ಒಂದು ಪೂರ್ವಕ್ಕೆ (ಮದ್ರಾಸ್) ಮುಖ ಮಾಡಿದ್ದರೆ, ಇನ್ನೊಂದು ಪಶ್ಚಿಮದತ್ತ (ಮುಂಬಯಿ) ಮುಖಮಾಡಿತು. ಶತಮಾನದಲ್ಲಿ 'ಕನ್ನಡನಾಡು' ಅರ್ಧ ಬ್ರಿಟಿಷರ ಅಧಿಪತ್ಯದಲ್ಲಿಯೂ, ಇನ್ನರ್ಧ ಬೇರೆಬೇರೆ ಸಂಸ್ಥಾನಿಕರ ವಶದಲ್ಲಿಯೂ ಉಳಿಯಿತು. ವಿವಿಧ ಆಡಳಿತಗಳಲ್ಲಿ ಹೀಗೆ ಹರಿದು ಹಂಚಿದ್ದ ಪರಿಣಾಮವಾಗಿ ಕನ್ನಡಿಗರು ಶೈಕ್ಷಣಿಕ ಮತ್ತಿತರ ರಂಗಗಳಲ್ಲಿ ಹಿಂದೆ ಬಿದ್ದರು.

ಆಡಳಿತಾತ್ಮಕವಾಗಿ ರಾಜ್ಯ–ಪ್ರಾಂತ್ಯಗಳನ್ನು ವಿಂಗಡಿಸುವುದರೊಂದಿಗೆ ಬ್ರಿಟಿಷರು ಪಾಶ್ಚಾತ್ಯ ನಾಗರಿಕ ಸೌಕರ್ಯದ ಅಂಶಗಳನ್ನು ವಿಸ್ತರಿಸತೊಡಗಿದರು. ಕ್ರಿ.ಶ.1862ರ ಹೊತ್ತಿಗೆ ಪ್ರಮುಖ ನಗರಗಳಾದ ಕಲ್ಕತ್ತ, ಮದ್ರಾಸ್, ಮುಂಬಯಿಗಳು ರೈಲುಮಾರ್ಗದಿಂದ ಜೋಡಿಸಲ್ಪಟ್ಟವು. ತಂತಿ ಸಂಪರ್ಕ, ಅಂಚೆ ವ್ಯವಸ್ಥೆಗಳು ಇದೇ ಸಂದರ್ಭದಲ್ಲಿ ಸುಧಾರಣೆಗೊಂಡವು. ಗ್ರಂಥಪ್ರಸಾರಕ್ಕೆ ನೆರವಾಗತಕ್ಕ **ಬುಕ್–ಪೋಸ್ಟ್** ವ್ಯವಸ್ಥೆಯೂ ಪ್ರಥಮತಃ ಆಚರಣೆಯಲ್ಲಿ ಬಂತು. ಈ ರೀತಿ ಬ್ರಿಟಿಷರ ಹೊಸ ರಾಜ್ಯಭಾರದ ಪರಿಣಾಮವಾಗಿ ಮಧ್ಯಯುಗದ **ಪಾಳೆಗಾರಿಕೆ**ಯು (ಫ್ಯೂಡಲಿಸಮ್) ಅಂತ್ಯಗೊಂಡಿತು. 'ರಾಜ ಯಾರಾದರೇನು, ರಾಗಿ ಬೀಸುವುದು ತಪ್ಪಿದ್ದಲ್ಲ' ಎಂಬ ಗಾದೆಯಂತೆ ಜನತೆ, ಇಂಗ್ಲಿಷರ ರಾಜಕೀಯ ರಾಜ್ಯಭಾರದಲ್ಲಿ ಇಲ್ಲವಾದರು. ಕವಿಗಳು ಕೇವಲ ರಾಜಾಶ್ರಯವನ್ನು ನಂಬಿ ಬದುಕಬೇಕಾಗಿದ್ದ ಸ್ಥಿತಿಯು ಕ್ರಮೇಣ ಹೋಯಿತು. ಆದರೆ ಈ ರೀತಿಯ ಯಾವುದೇ ಬದಲಾವಣೆಗಳು ಕರ್ನಾಟಕದಲ್ಲಿ ನಡೆಯಲಿಲ್ಲ. ಅಂದರೆ ಪಂಡಿತ ಪೋಷಣೆಗೆ ಹೆಸರಾದ ಮೈಸೂರು ಸಂಸ್ಥಾನವು ಇನ್ನೊಂದು ಮಧ್ಯಯುಗೀನ ಪರಂಪರೆಯನ್ನು ಮುಂದುವರೆಸಿತು ಹಾಗೂ ಈ ಸ್ವರೂಪವು ನಿಜಾಮ–ಕರ್ನಾಟಕದಲ್ಲಿ ಸ್ವಲ್ಪ ಮಟ್ಟಿಗೆ ಉಳಿದುಕೊಂಡಿತು.

ಹತ್ತೊಂಬತ್ತನೆಯ ಶತಮಾನದಲ್ಲಿ ಪಾಶ್ಚಾತ್ಯ ಸಂಪರ್ಕವು ಭಾರತಕ್ಕೆ ಆಡಳಿತ ಹಾಗೂ ವ್ಯವಹಾರ, ಮುದ್ರಣ ಯಂತ್ರ, ಕ್ರೈಸ್ತ ಮತಪ್ರಚಾರ, ಹಾಗೂ ಹೊಸ ಶಿಕ್ಷಣಪದ್ಧತಿ ಹಾಗೂ ಹೊಸ ವಿಚಾರಸರಣಿ ನಾಲ್ಕು ಬಗೆಯಲ್ಲಿ ಒದಗಿಬಂತು.

ಆಡಳಿತ ಹಾಗೂ ವ್ಯವಹಾರ

'ವಸಾಹತುಶಾಹಿ' ಬ್ರಿಟಿಷರು ಭಾರತವನ್ನು ವಶಪಡಿಸಿಕೊಂಡದ್ದು ದೇಶದ ರಾಜಕೀಯ ಪರಿಸ್ಥಿತಿಯನ್ನಷ್ಟೆ ಅಲ್ಲದೆ ಆರ್ಥಿಕ ಪರಿಸ್ಥಿತಿಯನ್ನೂ ಬದಲಿಸಿತು. ಬಂಡವಾಳಶಾಹಿ ಬೆಳವಣಿಗೆಯ ಮಾರ್ಗ ಹಿಡಿದಿದ್ದ ಬ್ರಿಟಿಷರಾದರೋ ಭಾರತದ ಸಂಪತ್ತನ್ನು ಗಳಿಸಿಕೊಳ್ಳುವ ಆಕರವನ್ನಾಗಿ ಕಂಡುಕೊಂಡರು. ಅಲ್ಲದೆಯೇ ವಸಾಹತು ಭಾರತದ ಜನರು ತಮ್ಮ ಆರ್ಥಿಕ ಸ್ಥಿತಿಯಲ್ಲಿ ಯಾವುದೇ ಅಮೂಲಾಗ್ರ ಬದಲಾವಣೆಗಳನ್ನು ಉಂಟು ಮಾಡದಾಗಿದ್ದರು. ದೇಶದ ಮುಂದಿನ ರಾಜಕೀಯ ಇತಿಹಾಸವು ಭಾರತೀಯ ಜನರು ವಸಾಹತು ವೇಗದಿಂದ ತಮ್ಮನ್ನು ಸ್ವತಂತ್ರಗೊಳಿಸಿಕೊಳ್ಳಲು ನಡೆಸಿದ ಹೋರಾಟದ ಇತಿಹಾಸವೇ ಆಗಿದ್ದಿತು.

ಭಾರತದ ಮೇಲೆ ವಿಜಯ ಸಾಧಿಸುವ ಸಮಯದಲ್ಲಿ ಬ್ರಿಟಿಷರು ಭಾರತದಿಂದ ನಾನಾ ಭಾರತೀಯ ರಾಜರ ಹಾಗೂ ಸಾಮಂತ ಪ್ರಭುಗಳ ಖಜಾನೆಗಳನ್ನು ಲೂಟಿ ಮಾಡಿ ಪಡೆದ ಅಪರಿಮಿತ ಸಂಪತ್ತನ್ನು ತಮ್ಮ ದೇಶಕ್ಕೆ ರಫ್ತು ಮಾಡಿದರು ಹಾಗೂ ರೈತರಿಂದ ವಸೂಲು ಮಾಡಲಾಗುತ್ತಿದ್ದ ಭೂಕಂದಾಯವೇ ವಸಾಹತು ಆದಾಯದ ಮುಖ್ಯ ಆಕರವಾಗಿದ್ದಿತು. ಆದಾಯದ ಪರಮಾವಧಿಯನ್ನು ಖಚಿತಪಡಿಸಿ ಕೊಳ್ಳುವುದಕ್ಕೋಸ್ಕರ ಶಾಶ್ವತ ಭೂಗಂದಾಯ ಇತ್ಯರ್ಥ ವ್ಯವಸ್ಥೆ, ರೈತವಾರಿ ಪದ್ಧತಿ, ಮೌಜವಾರ್ ಪದ್ಧತಿಯೆಂಬ ಮೂರು ವಿಭಿನ್ನ ಭೂಗಂದಾಯ ವಿಧಾನಗಳನ್ನು ಜಾರಿಗೆ ತಂದ ಬ್ರಿಟಿಷ್ ಅಧಿಕಾರಿಗಳ ಪ್ರಯೋಗಗಳು ಭಾರತೀಯ ರೈತರಿಗೆ ಭಾರೀ ಅನಾನುಕೂಲವನ್ನೇ ಉಂಟು ಮಾಡಿದವು. ಆದ್ದರಿಂದ ವಸಾಹತು ಭಾರತದಲ್ಲಿ ರೈತರ ಸ್ಥಿತಿಗತಿಗಳು ಸಾಮಂತಶಾಹಿ ಕಾಲದಲ್ಲಿದ್ದದಕ್ಕಿಂತ ಹೆಚ್ಚು ಕೀಳಾಗಿದ್ದುವು.

ಬ್ರಿಟಿಷ್ ವಸಾಹತು ಭಾರತದ ಬಡಜನರನ್ನು ಆರ್ಥಿಕ ಸ್ಥಿತಿಯಲ್ಲಿ ತೊಳಲಾಡುವಂತೆ ಮಾಡಿತಾದರೂ ಅವರ ಆಡಳಿತ ಪದ್ಧತಿ ಸಾಮಂತಶಾಹಿ ಕಾಲಕ್ಕಿಂತ ಹೆಚ್ಚು ದಕ್ಷವಾಗಿತ್ತು. ಬ್ರಿಟಿಷರ ಆಡಳಿತದಲ್ಲಿ ಅವರ ಸ್ವಾರ್ಥ ಸಾಧನೆ ಎಷ್ಟೇ ಇರಲಿ, ಆ ಕ್ರಮದಲ್ಲಿಯ ಸುವ್ಯವಸ್ಥೆ, ಬಿಗುವು ಆ ಹಿಂದಿನ ದೇಶಿಯ ರಾಜ್ಯಭಾರಗಳಲ್ಲಿ ವಿಶ್ಲೇಷಣೆ 17–18ನೆಯ ಶತಮಾನಗಳಲ್ಲಿ ಇರಲಿಲ್ಲ. ಅಧಿಕಾರಿಗಳು ಇಡೀ ಜಿಲ್ಲೆಯೊಂದನ್ನು ಸಮರ್ಥವಾಗಿ ನಿಯಂತ್ರಿಸುತ್ತಿದ್ದಾಗ ಅವರ ಆಡಳಿತದ ಹಿಡಿತವು ದೇಶದ ಹಳ್ಳಿಹಳ್ಳಿಗೂ ಪಸರಿಸಿತು. ವ್ಯಾವಹಾರಿಕವಾಗಿ ಯೂರೋಪಿನ ಔದ್ಯೋಗಿಕ ಸುಧಾರಣೆಗಳು ಒಂದೊಂದಾಗಿ ಭಾರತದಲ್ಲಿ ಕಾಣಿಸತೊಡಗಿದವು. ಉದ್ಯಮ, ಕೈಗಾರಿಕೆಗಳಿಗೆ ಸಂಬಂಧಿಸಿದ ಯಂತ್ರ ಸಾಮಾಗ್ರಿ, ಅಧುನಿಕ ಸಂಚಾರಸಾಧನ ಇವುಗಳಲ್ಲಿ ಕೆಲವು ಭಾರತೀಯರ ಊಹೆಗೂ ನಿಲುಕದಿದ್ದವುಗಳು. ಅದರಂತೆ ಅತ್ಯಂತ ಭಿನ್ನವಾದ ಪಾಶ್ಚಾತ್ಯ ನಾಗರಿಕತೆಯು ಜನಕ್ಕೆ

ಆಕರ್ಷಕವಾಗಿ ತೋರಿತು. ಮುಖ್ಯವಾಗಿ ಅವರ ಚಿಕಿತ್ಸಕ ಮನೋವೃತ್ತಿ, ವ್ಯವಹಾರಿಕ ದೃಷ್ಟಿ, ಜಾತಿಗಳ ಮೇಲು ಕೀಳುಗಳೆಣಿಸಿದ ವ್ಯವಹರಣೆ ಇವು ಬಹುಜನ ಭಾರತೀಯರ ಬದುಕಿನಲ್ಲಿ ಹರಡುತ್ತ ನಡೆದು, ಅವರ ಜೀವನ ದೃಷ್ಟಿಯನ್ನು ಬದಲಿಸತೊಡಗಿದವು.

19ನೆಯ ಶತಮಾನದ ಪ್ರಥಮಾರ್ಧದಲ್ಲಿ ಭಾರತೀಯ ಅರ್ಥ ವ್ಯವಸ್ಥೆಯ ಸ್ಥಿತಿಗತಿಗಳ ಲಕ್ಷಣವನ್ನು ನಿರೂಪಿಸುತ್ತ 'ಭಾರತದಲ್ಲಿ ಬ್ರಿಟಿಷ್ ಆಡಳಿತ' – ಎಂಬ ಲೇಖನದಲ್ಲಿ ಕಾರ್ಲ್‌ಮಾರ್ಕ್ಸ್ ಹೀಗೆಂದು ಬರೆದರು. "ಒಂದು ವಿಷಯದಲ್ಲಿ ಯಾವುದೇ ಸಂದೇಹವೂ ಉಳಿಯುವಂತಿಲ್ಲ. ಬ್ರಿಟಿಷರು ಹಿಂದೂಸ್ಥಾನದ ಮೇಲೆ ಹೊರಿಸಿದ ಕಷ್ಟಾನಿಷ್ಟಗಳು ಮೂಲತಃ ಭಿನ್ನ ಸ್ವರೂಪವಾಗಿವೆ ಹಾಗೂ ಇಡೀ ಹಿಂದೂಸ್ಥಾನ ಹಿಂದೆಂದೂ ಅನುಭವಿಸದಿದ್ದಂಥ ಅತ್ಯಂತ ತೀವ್ರ ಸ್ವರೂಪದ ಕಷ್ಟಾನಿಷ್ಟಗಳೇ ಆಗಿವೆ. ಹಿಂದೂಸ್ತಾನದಲ್ಲಿ ಒಂದಾದ ಮೇಲೆ ಒಂದರಂತೆ ಕಾಲನುಕ್ರಮದಲ್ಲಿ ನಡೆದ ಅಂತರ್ ಯುದ್ಧಗಳು, ಆಕ್ರಮಣಗಳು, ಕ್ರಾಂತಿಗಳು, ವಿಜಯಗಳು ಹಾಗೂ ಕ್ಷಾಮಗಳು ಆಶ್ಚರ್ಯಕರವೆನಿಸುವಷ್ಟು ಸಂಕೀರ್ಣವೂ, ತೀವ್ರವೂ, ವಿನಾಶಕಾರಿಯೂ ಆಗಿದ್ದವು. ಆದರೆ ಅವು ಅದರ ಮೇಲ್ಮೆಯನ್ನು ಭೇದಿಸಲಾರದೆ ಹೋಗಿದ್ದವು. ಭಾರತೀಯ ಸಮಾಜದ ಇಡೀ ಚೌಕಟ್ಟನ್ನೇ ಇಂಗ್ಲೆಂಡ್ ಮುರಿದುಹಾಕಿದೆ. ಅದು ಪುನಃ ಚೇತರಿಸಿಕೊಳ್ಳುವ ಲಕ್ಷಣಗಳು ಇನ್ನೂ ಕಂಡಿಲ್ಲ" (ಆಧುನಿಕ ಯುಗದಲ್ಲಿ ಭಾರತೀಯ ತತ್ತ್ವಶಾಸ್ತ್ರ 1990:167–168)

ಮುದ್ರಣ ಯಂತ್ರ

ಭಾರತದ ಸಾಂಸ್ಕೃತಿಕ ಪುನರ್‌ಜೀವನ ಒದಗಿ ಬಂದ ಅಮೂಲ್ಯ ಸಾಮಾಗ್ರಿ ಎಂದರೆ ಮುದ್ರಣ ಯಂತ್ರ. ಒಂದು ಕೈಯಲ್ಲಿ **ಬೈಬಲ್,** ಅದರ ಬೆನ್ನಿಗೇ ಮುದ್ರಣ ಸಾಮಾಗ್ರಿ ಇವನ್ನು ಹಿಡಿದುಕೊಂಡು ಬಂದ ಮಿಷನರಿಗಳು, ಕ್ರೈಸ್ತಪಾದ್ರಿಗಳು ಸ್ವಮತ ಪ್ರಸಾರದ ಕಾರ್ಯದಲ್ಲಿ ತೊಡಗಿದರು. ಆ ನಿಮಿತ್ತದಿಂದ ಶಿಕ್ಷಣ, ಸಾಹಿತ್ಯ ಕ್ಷೇತ್ರಗಳಲ್ಲಿ ನೇರವಾಗಿ ಪ್ರವೇಶಿಸಿದರು.

ಭಾರತದಲ್ಲಿ ಕ್ರೈಸ್ತಧರ್ಮದ ಪ್ರಸಾರವಾಗಬೇಕಾದರೆ ಇಲ್ಲಿಯ ಭಾಷೆಗಳಲ್ಲಿಯೇ ಗ್ರಂಥರಚನೆ ಮಾಡಬೇಕೆಂಬುದನ್ನು ಮೊದಲಿಗೆ ಮನಗಂಡವರು ಗೋವೆಯ ಜೆಸುಯೆಟ್ ಪಾದ್ರಿ.[2] ಕ್ರಿ.ಶ.1844ರಲ್ಲಿ **ಲಿಯೊನಾರ್ಥೊ ಸಿನ್ನಾಮಿ** ಎಂಬ ಹೆಸರಿನ ಜೆಸುಯೆಟ್ ಪಾದ್ರಿ ಗೋವೆಗೆ ಬಂದರು. ಮರುವರ್ಷವೇ ಅವರನ್ನು ಕೆನಾರಕ್ಕೆ ಕಳುಹಿಸಲಾಯಿತು. ಅಲ್ಲಿ ನಾಲ್ಕು ವರ್ಷ ಕಳೆದರೂ ಅವರಿಗೆ ಯಶಸ್ಸು ಸಿಗಲಿಲ್ಲ. ಈ ಕಾರಣದಿಂದ ಅವರು ಮೈಸೂರು ಸಂಸ್ಥಾನಕ್ಕೆ ಬಂದರು. ಮೈಸೂರು ಪ್ರದೇಶಕ್ಕೆ ತಮಿಳುನಾಡಿನಿಂದ ಮಿಶನರಿಗಳು ಆಗಾಗ ಬಂದು ಹೋಗುತ್ತಿದ್ದರೂ ಅಲ್ಲಿ ಮೊತ್ತಮೊದಲು ಮಿಶನ್ ಕೇಂದ್ರವನ್ನು

ಸಿನ್ನಮಿಯೇ ಸ್ಥಾಪಿಸಿದರು. ಶ್ರೀರಂಗಪಟ್ಟಣ, ಮೈಸೂರುಗಳಲ್ಲಿ ಇದ್ದುಕೊಂಡು ಇವರು ಮತ ಪ್ರಚಾರವನ್ನು ಕೈಗೊಂಡರು.

ಹದಿನೇಳನೆಯ ಶತಮಾನದ ಸಮಕಾಲೀನ ಗ್ರಂಥಚರಿತ್ರಕಾರರಾದ ಸೋಮರ್ ಮೊಗಲ್ ಹಾಗೂ ಸೊತ್‌ವೆಲ್ ಇವರು ಸಿನ್ನಾಮಿಯು ಕನ್ನಡದಲ್ಲಿ ಪುಸ್ತಕಗಳನ್ನು ಬರೆದಿದ್ದಾರೆಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಈ ಆಧಾರದ ಮೇಲೆ ಸಿನ್ನಾಮಿಯಾದಿಯಾಗಿ ಬಂದ ಕನ್ನಡ ಬರವಣಿಗೆಗಳು – ಕ್ರೈಸ್ತಧರ್ಮದ ರಹಸ್ಯ ತತ್ವಗಳನ್ನು ಕುರಿತ ಸುದೀರ್ಘ ಪ್ರಶ್ನೋತ್ತರ; ಅದರ ಸಾರ ರೂಪ; ಕ್ರೈಸ್ತ ಸಂತರ ಜೀವನ ಚರಿತ್ರೆ; ಕ್ರೈಸ್ತಮತದ ಸಮರ್ಥನೆ; ಮೈಸೂರು ಜನರ ಜಾತಿಗಳು, ಮೂಢನಂಬಿಕೆಗಳು ಇವುಗಳ ಖಂಡನೆ; ಕನ್ನಡ ವ್ಯಾಕರಣ; ಕನ್ನಡ ಕೋಶ. (ಶ್ರೀನಿವಾಸ ಹಾಮನೂರ 1975) ಅದಕ್ಕಾಗಿ ಹದಿನಾರನೆಯ ಶತಮಾನದಲ್ಲಿ ಮುದ್ರಣಾಲಯವನ್ನು ಸ್ಥಾಪನೆ ಮಾಡುವುದರೊಂದಿಗೆ ಕೊಂಕಣಿ, ಮರಾಠಿ ಭಾಷೆಗಳಲ್ಲಿ ಅಲ್ಲದೆ ತಮಿಳು, ಮಲೆಯಾಳಂಗಳಲ್ಲಿಯೂ ಗ್ರಂಥರಚನೆ ಮಾಡಿದ (16–18ನೆಯ ಶತಮಾನದಲ್ಲಿ) ಮತೀಯ ಕೃತಿಗಳು ಹಾಗೂ ಭಾಷಾಭ್ಯಾಸದ ಸ್ಥಾನಗಳು ಎಂಬೀ ದ್ವಿಮುಖ ಗ್ರಂಥರಚನೆಯ ಪರಂಪರೆ ಇಲ್ಲಿಂದ ಮೊದಲಾಯಿತು.

ವಿಲಿಯಂ ಕೇರಿಯು ಬಂಗಾಲದ ಶ್ರೀರಾಮಪುರ ಪ್ರೆಸ್ಸಿನಲ್ಲಿ ಕ್ರಿ.ಶ. 1817ರಲ್ಲಿ ಎ ಗ್ರಾಮರ್ ಆಫ್ ದಿ ಕರ್ನಾಟಕ ಲಾಂಗ್‌ವೇಜ್ ಹಾಗೂ 1823ರಲ್ಲಿ ಸಾವಿರ ಪುಟಗಳಿಗೆ ಮಿಕ್ಕಿದ ಬೈಬಲಿನ ಕನ್ನಡಾನುವಾದ ಕೃತಿಯನ್ನು ಹೊರತಂದನು. ಇದೇ ಕಾಲಕ್ಕೆ ಮದ್ರಾಸ್ ಹಾಗೂ ಬಳ್ಳಾರಿಗಳಲ್ಲಿಯೂ ಕನ್ನಡ ಗ್ರಂಥ ರಚನೆ, ಮುದ್ರಣಗಳು ಸಾಗಿದ್ದವು. ಕ್ರಿ.ಶ.1804ರ ಸುಮಾರಿಗೆ ಸ್ಥಾಪಿತವಾದ ಮದ್ರಾಸಿನ ಫೋರ್ಟಸೆಂಟ್ ಜಾರ್ಜ್ ಕಾಲೇಜಿನ ಅಚ್ಚುಕೂಟದಿಂದ ತಮಿಳು, ತೆಲುಗು ಭಾಷಾ ಪುಸ್ತಕಗಳು ಅದಾಗಲೇ ಹೊರಬಂದಿದ್ದವು.

ಕ್ರಿ.ಶ. 1817ರಲ್ಲಿ **ಜಾನ್‌ಹ್ಯಾಂಡ್** ಹಾಗೂ ಅವನ ಸಂಗಡಿಗರು ಶ್ರೀರಾಮಪುರದ ದೇಸೀ ಕ್ರಿಸ್ತಿಯನ್‌ನಾಗಿದ್ದ ಪಿತಾಂಬರಸಿಂಹನ 'ನೆನಹುಗಳು', 'ಏಸುಕ್ರಿಸ್ತನ ಅವತಾರ', 'ಪರಿಶುದ್ಧಿಯ ಮಾರ್ಗ ವಿವರಣೆ' ಇವುಗಳ ಅನುವಾದವನ್ನು ಸಿದ್ಧಗೊಳಿಸಿದರು. ಮರುವರ್ಷವೇ ಬಳ್ಳಾರಿಗೆ ಬಂದು 2–3 ವರ್ಷಗಳಲ್ಲಿಯೆ ಕನ್ನಡ ವ್ಯಾಕರಣ ಕೋಶ ಹಾಗೂ ಬೈಬಲ್ಲಿನ ಅನುವಾದ ಇವು ಮೂರರ ಹಸ್ತಪ್ರತಿಗಳನ್ನು ಸಿದ್ಧಗೊಳಿಸಲಾಯಿತು. ಕ್ರಿ.ಶ.1820ರಲ್ಲಿ ಮುದ್ರಣ ಮುಗಿದು ಹೊರಬಂದ ಕೃತಿಯು ಸಂಪೂರ್ಣವಾಗಿ ಕನ್ನಡ ಭಾಷೆ ಹಾಗೂ ಲಿಪಿಯಲ್ಲಿರುವ ಆದ್ಯ ಮುದ್ರಿತ ಗ್ರಂಥವಾಗಿದೆ.

ಕ್ರಿ. ಶ. 1850ರ ಸುಮಾರಿಗೆ ಬೆಂಗಳೂರಲ್ಲಿ ಕೆಥೋಲಿಕರ ಕನ್ನಡ ಗ್ರಂಥೋದ್ಯಮವು ಮತ್ತೆ ಕಾಣಿಸಿಕೊಂಡಿತು. **'ಕೆಥೋಲಿಕ್ ಪ್ರೆಸ್'** ಅಸ್ತಿತ್ವಕ್ಕೆ ಬಂದಂದಿನಿಂದ 30ಕ್ಕೂ

ಮೇಲ್ಪಟ್ಟು, ಕನ್ನಡ ಗ್ರಂಥಗಳು ಹೊರಬಂದವು. 'ದೈವಪರೀಕ್ಷೆ' (1862) 'ಸತ್ಯವೇದ ಪರೀಕ್ಷೆ' (1852), 'ದಿವ್ಯಮಾತೃಕೆ' (1862), 'ಸುಕೃತಮಂತ್ರಗಳು' (1866) ಹೀಗೆ ಹಲವು ಕೃತಿಗಳು ಬಂದುವು.

ಕ್ರಿಸ್ತಮತ ಪ್ರಚಾರ

ಕ್ರಿ.ಶ. 1587ರ ಸುಮಾರಿಗೆ ಹಳೆಯ ಮೈಸೂರು ರಾಜ್ಯದಲ್ಲಿ ಕೂಡ ಕ್ರೈಸ್ತ ಮಿಷನರಿಗಳ ಚಟುವಟಿಕೆಯಿತ್ತು. ಮೈಸೂರಿನ ದೊರೆಗಳು ಈ ಕಾರ್ಯಕ್ಕೆ ತಮ್ಮ ಅನುಮತಿ ನೀಡಿದ್ದು ಮೈಸೂರು ರಾಜ್ಯದಲ್ಲಿ ಕ್ರೈಸ್ತಧರ್ಮ ಬಲವಾಗಿ ಕಾಲೂರಲು ಸಾಧ್ಯವಾಯಿತು.[3] ಗೋವೆಯ **ಸಂತ ಫ್ರಾನ್ಸಿಸ್ ಕ್ಸೇವಿಯರ**ನ ಮತಪ್ರಚಾರ ಕಾರ್ಯವು ಅದ್ಭುತ ಎನ್ನುವ ರೀತಿಯಲ್ಲಿ ಆರಂಭವಾಗಿದ್ದರಿಂದ ಇದರ ಗಾಳಿ ಕರ್ನಾಟಕದಲ್ಲೂ ಬೀಸಿ ಇತರ ಮತಸ್ಥರು ಕ್ರೈಸ್ತಮತಕ್ಕೆ ಮತಾಂತರ ಹೊಂದಿದರು. ಎಲ್ಲಾ ಕಾರಣಗಳಿಂದಾಗಿ ಕರ್ನಾಟಕದಲ್ಲಿ ಕ್ಯಾಥೋಲಿಕ್ ಕ್ರೈಸ್ತರು ಅಧಿಕ ಸಂಖ್ಯೆಯಲ್ಲಿ ಕಾಣಿಸಿಕೊಂಡರು.

ಕ್ರಿ.ಶ. 1810 ರಲ್ಲಿ ಬಳ್ಳಾರಿಯಲ್ಲಿ ನೆಲಸಿ ತನ್ನ ಮತಪ್ರಚಾರ ಕಾರ್ಯವನ್ನು ಆರಂಭಿಸಿದ ಲಂಡನ್ ಮಿಷನ್ ಕನ್ನಡನಾಡಿನಲ್ಲಿ ಪ್ರಾರಂಭವಾದ ಮೊತ್ತಮೊದಲ ಪ್ರಾಟೆಸ್ಟೆಂಟ್ ಪಂಥವೆಂದು ಹೇಳಲಾಗಿದೆ. ಇದೇ ಸಮಯದಲ್ಲಿ ಮೈಸೂರಿನಲ್ಲಿ **ಡೇನಿಷ್ಸ್ ಲುಥೇರನ್ ಮಿಷನ್** ತನ್ನ ಕಾರ್ಯವನ್ನು ಆರಂಭಿಸಿತು. **ಲಂಡನ್ ಮಿಷನ್** 1820ರಲ್ಲಿ ಬೆಳಗಾವಿಯ ಸುತ್ತಮುತ್ತ ಹಾಗೂ ಮಂಗಳೂರಿನಲ್ಲಿ ಕಾರ್ಯನಿರತವಾಯಿತು. ಇದೇ ಸಂದರ್ಭಕ್ಕೆ ವೆಸ್ಲಿಯನ್ ಮಿಷನ್ ಮೈಸೂರಿನಲ್ಲಿ ತನ್ನ ಕಾರ್ಯವನ್ನು ಆರಂಭಿಸಿತು. ಕ್ರಿ.ಶ.1834ರಲ್ಲಿ ಬಾಸೆಲ್ ಮಿಷನ್ ಮಂಗಳೂರಿನಲ್ಲಿ ಮತ ಪ್ರಚಾರಕ್ಕೆ ತೊಡಗಿತು. ಮುಂದುವರಿದು 1837ರ ಅನಂತರ ಧಾರವಾಡ, ಬೆಟಗೇರಿ, ತುಮಕೂರು, ಶಿವಮೊಗ್ಗ, ಹಾಸನಗಳಲ್ಲಿ **ಬಾಸೆಲ್ ಮಿಷನ್**ನವರು, ಹುಬ್ಬಳ್ಳಿ, ಬೆಟಗೇರಿ, ಗುಳೆದಗುಡ್ಡಗಳಲ್ಲಿ ಸಿರಿಯನ್ ಕ್ರಿಶ್ಚಯನ್ನರು ಹಾಗೂ ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರು, ಬೆಳ್ತಂಗಡಿ, ಉಡುಪಿ, ಬ್ರಹ್ಮಾವರಗಳಲ್ಲಿ ನೆಲೆನಿಂತು ಸೇವಾ ಕಾರ್ಯವನ್ನು ಮುಂದುವರಿಸಿದರು.

ಆದುದರಿಂದ ಭಾರತದಲ್ಲಿ ಕ್ರೈಸ್ತಧರ್ಮ ಪ್ರಸಾರವಾಗಬೇಕಾದರೆ ದೇಸೀ ಭಾಷೆಗಳಿಗೆ ಬೈಬಲನ್ನು ಅನುವಾದಿಸಿ ಮುದ್ರಿಸುವುದು ಹೆಚ್ಚು ಸೂಕ್ತವೆಂಬ ತೀರ್ಮಾನಕ್ಕೆ ಮಿಷನರಿಗಳು ಬರಬೇಕಾಯಿತು. ಈ ನಿಟ್ಟಿನಲ್ಲಿ ದಕ್ಷಿಣಭಾರತದ ಹಲವು ಪ್ರಮುಖ ದೇಸೀ ಭಾಷೆಗಳ ಲಿಪಿಯನ್ನು ಪ್ರಥಮ ಹಂತದಲ್ಲಿ ಅಧ್ಯಯನಿಸುವ ಕಾರ್ಯಕ್ಕೆ ಮಿಷನರಿಗಳು ತೊಡಗಿದರು. ತಮಿಳು, ಕನ್ನಡ, ತೆಲಗು, ಕೊಂಕಣಿ, ತುಳು ಮೊದಲಾದ ಭಾಷೆಗಳಲ್ಲಿ ಕಲ್ಲಚ್ಚಿನ ಪ್ರತಿಗಳನ್ನು ತೆಗೆಯಲು ಪ್ರಯತ್ನಿಸಿದರು. ಇದೇ ಸಂದರ್ಭಕ್ಕೆ ಅಕ್ಷರಗಳ ಆವಿಷ್ಕಾರವನ್ನು

ಇವರು ಮಾಡಬೇಕಾಯಿತು. ಕಲ್ಲಚ್ಚಿನಲ್ಲಿ ತೆಗೆಯುವ ಪ್ರತಿಗಳು ಅಸ್ಪಷ್ಟವೂ, ಲಾಭದಾಯಕವೂ ಅಲ್ಲದೇ ಹೆಚ್ಚು ಶ್ರಮಪಟ್ಟು ಮಾಡಬೇಕಾದ ಕೆಲಸವಾದ ಕಾರಣ ಕ್ರಿ.ಶ.1456ರಲ್ಲಿ ಕಂಡುಹುಡುಕಿದ ಮುದ್ರಣಯಂತ್ರವನ್ನು ದೇಸೀ ಭಾಷೆಗಳಿಗೆ **ಬೈಬಲ್**‌ಗಳನ್ನು ಅನುವಾದಿಸಲು ಬಳಸಿದರು. ಹೀಗೆ ಮುದ್ರಣ ಯಂತ್ರದೊಂದಿಗೆ ಭಾರತದಲ್ಲಿ ಹೊಸಶಿಕ್ಷಣ ಕ್ರಮ ಜಾರಿಯಾದುದರಿಂದ, ಪ್ರಶ್ನೆಪತ್ರಿಕೆಗಳು ಪಠ್ಯಪುಸ್ತಕಗಳ ತಯಾರಿ ಆರಂಭವಾಯಿತು. ಮತಪ್ರಸಾರದ ಜೊತೆಜೊತೆಗೆ ಮುದ್ರಣಯಂತ್ರದ ಬಳಕೆ, ಹೊಸಶಿಕ್ಷಣ ಕ್ರಮ ಬಳಕೆಗೆ ಬಂತು. ಹೀಗೆ ಪ್ರಾರಂಭವಾದ ಮುದ್ರಣಕಾರ್ಯ ದೇಸೀ ಬರವಣಿಗೆಗಳ ಪ್ರಕಟನೆಗೂ ಅನುಕೂಲವೊದಗಿಸಿ ಕೊಟ್ಟಿತು.

ಹೊಸ ಶಿಕ್ಷಣ ಪದ್ಧತಿ ಹಾಗೂ ಹೊಸ ವಿಚಾರ ಸರಣಿ

ಪಾಶ್ಚಾತ್ಯ ಸಂಪರ್ಕಕ್ಕೆ ಮೊದಲು ನಾಡಿನಲ್ಲಿ ಪ್ರಾಥಮಿಕ ಸ್ವರೂಪದ ಶಿಕ್ಷಣವನ್ನು ನೀಡುವ ಶಾಲೆಗಳು ಬಹುಪಾಲು ಎಲ್ಲ ಹಳ್ಳಿಗಳಲ್ಲಿಯೂ ಇದ್ದುವು. ಅಲ್ಲಿ ಪರಂಪರಾಗತ ಪದ್ಧತಿಯ ಪ್ರಕಾರ ಧೂಳಾಕ್ಷರ, ಕಡತ, ಹಸ್ತಪ್ರತಿ ಇವುಗಳ ಮೂಲಕ ಮಕ್ಕಳಿಗೆ ಓದು ಹಾಗೂ ಬರಹಗಳನ್ನು ಚೆನ್ನಾಗಿ ಮಾಡಿಕೊಡಲಾಗುತ್ತಿತ್ತು.

ಪಾಶ್ಚಾತ್ಯ ಸಂಪರ್ಕಗಳಲ್ಲಿ ಹೊಸಶಿಕ್ಷಣ ಕ್ರಮವೇ ಎದ್ದು ಕಾಣುವಂತಹದ್ದು. ತಮ್ಮ ಅನುಕೂಲಕ್ಕೆಯೇ ಆಗಲಿ ಸರಕಾರವೂ ಮಿಷನರಿ ಜನರೂ ಇಂಗ್ಲಿಷ್ ಶಾಲೆಗಳನ್ನು ತೆರೆದೊಡನೆ ಭಾರತೀಯರು ಆ ವಿದ್ಯಾಪ್ರವಾಹದಲ್ಲಿ ಬಿದ್ದರು. ಅವರ ಅಧ್ಯಯನಕ್ಕಾಗಿ ಕಾದಿದ್ದ ಆಧುನಿಕ ವಿಜ್ಞಾನ, ಪ್ರಪಂಚ ಪರಿಚಯ, ಇಂಗ್ಲಿಷ್ ವಾಙ್ಮಯ ಎಲ್ಲವೂ ಅವರಿಗೆ ಹೊಸತೊಂದು ಜಗತ್ತನ್ನು ತೆರೆದು ತೋರಿದುವು.

1833ರಲ್ಲಿ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಸ್ವಂತ ಖರ್ಚಿನಲ್ಲಿ ಇಂಗ್ಲಿಷ್ ಪಾಠ ಹೇಳುವ ಮೊದಲನೆಯ ಶಾಲೆಯನ್ನು ಪ್ರಾರಂಭಿಸಿದರು.

ಸಂಪರ್ಕಗಳ ಅಪ್ರತ್ಯಕ್ಷ ಪರಿಣಾಮವೆಂಬಂತೆ ಜೀವನದ ರೀತಿ ನೀತಿ ಮೌಲ್ಯಗಳು ಮಾರ್ಪಟ್ಟವು. ಜನತೆಯಲ್ಲಿ ಸ್ವಾಭಿಮಾನ ಹಾಗೂ ಸ್ವತಂತ್ರ ವಿಚಾರಸರಣಿ ಒಡಮೂಡಿದ್ದವು. ಮಿಷನರಿಗಳು ಹಿಂದೂ ಧರ್ಮವನ್ನು ಮನಸಾರೆ ತೆಗಳಿ, ಜನರನ್ನು ಅಧರ್ಮದಿಂದ ವಿಮುಖರನ್ನಾಗಿ ಮಾಡಬಯಸಿದಷ್ಟು ಜನತೆಯಲ್ಲಿ ತಮ್ಮ ಪುರಾತನ ಮತತತ್ವ ಪರಂಪರೆಗಳಲ್ಲಿ ಅಭಿಮಾನ ಹೆಚ್ಚುತ್ತ ನಡೆಯಿತು. ಇದೇ ಸಂದರ್ಭದಲ್ಲಿ 1816ರಲ್ಲಿ ಪ್ರಕಟವಾದ **ಅಬ್ಬೆ ದುಬೋಯೆ**ಯನ 'ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಆಂಡ್ ಸೆರೊಮೊನಿಸ್' ಕೃತಿಯನ್ನು ಹಿಂದೂ ಧರ್ಮದ ಅನುಯಾಯಿಗಳು ಪ್ರಬಲವಾಗಿ ವಿರೋಧಿಸಿದರು.

ಹೊಸ ರೀತಿಯ ವಿದ್ಯಾಭ್ಯಾಸ ಇಡೀ ಭಾರತದಲ್ಲೂ ಕರ್ನಾಟಕದಲ್ಲೂ ಗರಿಗೆದರಿತು. 1857ರ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬಳಿಕ ಭಾರತದ ಮೂರು ಪ್ರಮುಖ ಪಟ್ಟಣಗಳಾದ ಕಲ್ಕತ್ತಾ, ಮುಂಬಯಿ, ಮದ್ರಾಸುಗಳಲ್ಲಿ ಪಾಶ್ಚಾತ್ಯ ಕ್ರಮದ ಶಿಕ್ಷಣವನ್ನು ನೀಡುವ ವಿಶ್ವವಿದ್ಯಾಲಯಗಳ ಸ್ಥಾಪನೆಯಾಯಿತು. 1881ರ ಹೊತ್ತಿಗೆ ಮುಂಬಯಿ–ಕರ್ನಾಟಕದಲ್ಲಿ 600 ಪ್ರಾಥಮಿಕ ಶಾಲೆಗಳು, ಹಳೆಯ ಮೈಸೂರಿನಲ್ಲಿ 2000 ಪ್ರಾಥಮಿಕ ಶಾಲೆಗಳಿದ್ದವು. ಅಲ್ಲದೆ 1858ರಲ್ಲಿ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜು, ಹಾಗೂ 1879ರಲ್ಲಿ ಮಂಗಳೂರಿನಲ್ಲಿ ಸರ್ಕಾರಿ ಕಾಲೇಜು ಜನ್ಮ ತಾಳಿತು. ವಸಾಹತೀಕರಣದ ಪ್ರಭಾವದಿಂದ ಭಾರತದ ಆರ್ಥಿಕ ತಳಹದಿಯಲ್ಲಾದ **'ರಚನಾ ನಿರಸನ'** ಹಾಗೂ **'ರಚನೀಕರಣ'**ಗಳ ಸಂಬಂಧಿತ ಪರಿಣಾಮಗಳನ್ನು ಅನ್ಯಾನ್ಯ ಕ್ಷೇತ್ರಗಳಲ್ಲಿಯೂ ಗುರುತಿಸಬಹುದು. ಆಧುನಿಕ ವಿದ್ಯಾಭ್ಯಾಸ ಕ್ರಮವಂತೂ ಭಾರತೀಯ ಚಿಂತನ ಕ್ರಮದಲ್ಲಿಯೇ ಗಮನಾರ್ಹ ಬದಲಾವಣೆಯನ್ನುಂಟು ಮಾಡಿತು.

ಕನ್ನಡನಾಡಿನಲ್ಲಿ 19ನೆಯ ಶತಮಾನದ ಅಂತ್ಯ, 20ನೆಯ ಶತಮಾನದ ಆರಂಭದ ದಶಕಗಳು ಬಹುಮುಖ್ಯವಾದುವು. ಇಡೀ ದೇಶದಲ್ಲಿ ಹೊಸ ಚೈತನ್ಯ ಹರಿದಾಡುತ್ತಿತ್ತು. ರಾಜಾರಾಂ ಮೋಹನರಾಯರಿಂದ ಬಂಗಾಳದಲ್ಲಿ ಸುಧಾರಣ ಯುಗ, ಪಾಶ್ಚಾತ್ಯ ರೀತಿಯ ಶಿಕ್ಷಣದ ಯುಗ ಆರಂಭವಾಗಿತ್ತು. ಸ್ವಾಮಿ ವಿವೇಕಾನಂದ, ದಯಾನಂದ ಸರಸ್ವತಿ ಮೊದಲಾದವರ ಪ್ರಭಾವ ಭಾರತದ ಎಲ್ಲಾ ಭಾಗಗಳಲ್ಲಿ ಹೊಸ ಚೈತನ್ಯವನ್ನು, ಚಿಂತನೆಯನ್ನು ಪ್ರಚೋದಿಸುತ್ತಿದ್ದವು.

ಬ್ರಹ್ಮ ಸಮಾಜ ಹಾಗೂ ಪಾಶ್ಚಾತ್ಯ ವೈಚಾರಿಕತೆ

ಇಂಗ್ಲಿಷ್ ವಿದ್ಯಾಭ್ಯಾಸ ಹಾಗೂ ಅದರ ಬಗೆಗಿನ ಅವಿಮರ್ಶಿತ ಆಕರ್ಷಣೆಯಿಂದಾಗಿ ಭಾರತದ ವಿದ್ಯಾವಂತ ವರ್ಗ ದೇಸೀ ಪರಂಪರೆಯಿಂದ ಬೇರ್ಪಟ್ಟಿತು. “English educated Indians did tend to dier rom mass o their countrymen in their ood, dress, manners, language, religious belies, social practices and political ideas.” (ಶಿವರಾಮ ಪಡಿಕ್ಕಲ್, 1987) ಪಾಶ್ಚಾತ್ಯ ವೈಚಾರಿಕತೆ ದೇಸೀ ವಿದ್ಯಾವಂತರ ಒಡಲಿನಲ್ಲಿದ್ದು ದೇಸೀಯರನ್ನು ಟೀಕಿಸುವ, ವಿಡಂಬಿಸುವ ಕಾರ್ಯದಲ್ಲಿ ತೊಡಗಿದ್ದ ಸ್ಥಿತಿ ಉಂಟಾಯಿತು. ಈ ಸ್ಥಿತಿಯಿಂದಾಗಿ ದೇಸೀ ವಿದ್ಯಾವಂತರು ತಮ್ಮ ಪರಂಪರಾಗತ ನೆಲೆಯತ್ತ ವಾಲಿಕೊಂಡರು. ದೇಶದಾದ್ಯಂತ ಏಕರೀತಿಯ ಶಿಕ್ಷಣಾ ಕ್ರಮದಿಂದಾಗಿ ಏಕರೀತಿಯಲ್ಲಿ ವಿಚಾರ ಮಾಡುತ್ತಿದ್ದ ವಿದ್ಯಾವಂತ ಮನಸ್ಥಿತಿ, ಮುದ್ರಣ ಹಾಗೂ ಪತ್ರಿಕೆಗಳ ಬೆಳವಣಿಗೆಗಳು ಈ ವಿದ್ಯಾಮಾನದ ಬೆಳವಣಿಗೆಗೆ ಕಾರಣವಾದುವು. ಇಂತಹ ಒಂದು ಸ್ಥಿತಿಯಲ್ಲಿ

ಭಾರತೀಯ ವಿದ್ಯಾವಂತ ವರ್ಗ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳಲು ನಡೆಸಿದ ಯತ್ನವಾಗಿ **ಬ್ರಹ್ಮಸಮಾಜವು** ಕಾಣಿಸಿಕೊಳ್ಳುತ್ತದೆ. **ರಾಜಾರಾಮ್ ಮೋಹನರಾಯ್** ಪಾಶ್ಚಾತ್ಯ ವೈಚಾರಿಕತೆಯ ಉತ್ಸಾಹಿ ಸಮರ್ಥಕರು. ಸುಧಾರಣಾವಾದಿ ನಿಲುವು ಪಾಶ್ಚಾತ್ಯ ವಿಚಾರಸರಣಿಯು ಭಾರತೀಯ ತಾತ್ವಿಕತೆಯನ್ನು ಗಾಳಿಗೆ ತೂರುವ ಅಪಾಯವನ್ನು ಎದುರಿಸುವಲ್ಲಿ ನೆರವಾಯಿತು. ಇದೇ ಸಂದರ್ಭಕ್ಕೆ ಭಾರತೀಯ ಧಾರ್ಮಿಕ ಗ್ರಂಥಗಳನ್ನು, ವೇದ ಉಪನಿಷತ್ತುಗಳನ್ನು ತಮ್ಮ ಉದಾರವಾದಿ ನಿಲುವಿನಿಂದ, ಪಶ್ಚಿಮದ ವೈಚಾರಿಕ ನೆಲೆಯಿಂದ ವ್ಯಾಖ್ಯಾನಿಸಿದರು. ಇದರಿಂದ ಸನಾತನ ಹಿಂದೂ ಧರ್ಮದ ತಾತ್ವಿಕ ಸಂವಿಧಾನವನ್ನು ಒಪ್ಪಿಕೊಂಡು ಅದನ್ನು ಆಧುನಿಕ ಯುಗಕ್ಕೆ ಒಗ್ಗುವಂತೆ ಸುಧಾರಿಸಲು ಅವರಿಗೆ ಸಾಧ್ಯವಾಯಿತು ಹಾಗೂ ಸನಾತನ ಧರ್ಮವು ತನ್ನ ಕಾಳಿಕೆಗಳನ್ನು ಕಳೆದು ಪರಿಶುದ್ಧ ಧರ್ಮವಾಗಿ ನೆಲೆಗೊಳ್ಳಬೇಕೆನ್ನುವುದು ಅವರ ಹಂಬಲವಾಗಿತ್ತು. ಸತಿಪದ್ಧತಿಯ ವಿರೋಧ, ಸ್ತ್ರೀ ಶಿಕ್ಷಣ, ಜಾತಿಪದ್ಧತಿಯ ವಿರೋಧ, ಬಾಲ್ಯವಿವಾಹ ಹಾಗೂ ವಿಧವಾ ವಿವಾಹಗಳ ನಿರಾಕರಣೆ ಮೊದಲಾದ ಕಾರ್ಯಗಳಲ್ಲಿ ಈ ನಿಲುವು ವ್ಯಕ್ತವಾಯಿತು. ಮೋಹನ್‌ರಾಯ್ ಪಾಶ್ಚಾತ್ಯ ವೈಚಾರಿಕ ನೆಲೆಯಿಂದ ಹಾಗೂ ಅದರ ವಿಮರ್ಶಾತ್ಮಕ ಧೋರಣೆಗನುಗುಣವಾಗಿ ಭಾರತದ ವೇದಾಂತ ಧರ್ಮದ ಪ್ರತಿಪಾದನೆಯನ್ನು ಮಾಡಿದರು. ಏಕಕಾಲಕ್ಕೆ ಪಾಶ್ಚಾತ್ಯ ವಿಚಾರಗಳನ್ನು ಭಾರತೀಯ ವೇದಾಂತ ಧಾರ್ಮಿಕತೆಯನ್ನು ಒಪ್ಪಿಕೊಳ್ಳಲು ಸುಧಾರಣಾವಾದವು ಅವಕಾಶವನ್ನು ಕಲ್ಪಿಸಿತು. "Ram Mohan believed not in writing on a clean slate but it completing a hal written slate". ಆದುದರಿಂದ ಧಾರ್ಮಿಕ ವೇದಾಂತ ಸಂವಿಧಾನವನ್ನು ಒಪ್ಪಿ ಸುಧಾರಣೆಯ ಪ್ರತಿಪಾದನೆ ಮಾಡಿದ **'ಮಧ್ಯಮವರ್ಗೀಯ'**ರು ರಾಜಕೀಯವಾಗಿ ಬ್ರಿಟಿಷ್ ರಾಜವ್ಯವಸ್ಥೆಯನ್ನು ಒಪ್ಪಿ ಸಂವಿಧಾನಾತ್ಮಕ ಸ್ವಾತಂತ್ರ್ಯ ಹೋರಾಟವನ್ನು ಕೈಗೊಂಡರು. (ಶಿವರಾಮ ಪಡಿಕ್ಕಲ್: 1987:51)

ಆರ್ಯಸಮಾಜ ಹಾಗೂ ಹಿಂದೂ ಪುನರುತ್ಥಾನವಾದ

ಭಾರತದ ರಾಷ್ಟ್ರೀಯ ಹೋರಾಟದ ಎರಡನೆಯ ಹಂತದಲ್ಲಿ ಬ್ರಿಟಿಷ್ ಆಡಳಿತ ಹಾಗೂ ಪಶ್ಚಿಮದ ವೈಚಾರಿಕತೆಗೆ ವಿರೋಧವು ವಿದ್ಯಾವಂತ ವರ್ಗದವರಿಂದಲೇ ಬಂತು. ಇದಕ್ಕೆ ಕಾರಣಗಳು :

1. ಭಾರತೀಯ ವಿದ್ಯಾವಂತ ವರ್ಗವನ್ನು ಪಾಶ್ಚಾತ್ಯರು ಕೀಳಾಗಿ ಕಂಡದ್ದು.
2. ಭಾರತೀಯರ ಹೆಮ್ಮೆಯನ್ನು ಚುಚ್ಚಲಾರಂಭಿಸಿದ್ದು.

ಪಾಶ್ಚಾತ್ಯರ ಸುಸಂಸ್ಕೃತ ಪರಿಕಲ್ಪನೆಯ ಗುರಿಮುಟ್ಟುವುದಕ್ಕೆ ಭಾರತೀಯ ವಿದ್ಯಾವಂತ ವರ್ಗಕ್ಕೆ ಕಷ್ಟವಾಯಿತು. ಈ ನೆಲೆಯಲ್ಲಿ ಭಾರತೀಯ ವಿದ್ಯಾವಂತ ವರ್ಗವು ಪಾಶ್ಚಾತ್ಯರಿಗೆ ಅನುಗುಣವಾಗಿ ಒಗ್ಗುವ ಸಾಹಸವನ್ನು ಕೈ ಬಿಟ್ಟು, ಸನಾತನ ಸಂಸ್ಕೃತಿಗೆ ಮರಳುವುದರೊಂದಿಗೆ, ತಾತ್ವಿಕ ವಿಶಿಷ್ಟತೆಯೊಂದಿಗೆ ಸೈದ್ಧಾಂತಿಕವಾಗಿ ತನ್ನ ಕಾರ್ಯವನ್ನು ಭಾರತದಾದ್ಯಂತ ಹಮ್ಮಿಕೊಂಡಿತು.

ಇಂಗ್ಲಿಷ್ ವಿದ್ಯಾಭ್ಯಾಸದ ಸ್ಪರ್ಶವಿಲ್ಲದ ದಯಾನಂದ ಸರಸ್ವತಿಯವರು 'ಆರ್ಯಸಮಾಜ'ದ ನೇತಾರರಾದರು. ಅಲ್ಲದೆ ಮಿಶನರಿಗಳ ಟೀಕೆಗೆ ತೀವ್ರ ವಿರೋಧವನ್ನು ಸೂಚಿಸಿದರು. ಬ್ರಿಟಿಷ್ ಆಡಳಿತ ಅವಮಾನದಿಂದ ನೊಂದ ಭಾರತೀಯ ವಿದ್ಯಾವಂತನಿಗೆ ಸಾಂತ್ವನದ ತಾಣದಂತೆ ಆರ್ಯಸಮಾಜವು ಕೆಲಸ ಮಾಡಿತು. 19ನೆಯ ಶತಮಾನದ ಉತ್ತರಾರ್ಧದಲ್ಲಿ ಉದೀಯಮಾನ ಮಧ್ಯಮ ವರ್ಗಕ್ಕೆ ಸಾಂಸ್ಕೃತಿಕವಾಗಿ ಒಂದು ನೆಲೆಯ ಅಗತ್ಯವಿತ್ತು. ತನ್ನದೇ ಗುಣ–ವೈಶಿಷ್ಟ್ಯ ಹೆಮ್ಮೆಗಳ ಸಾಂತ್ವನದ ಅಗತ್ಯವಿತ್ತು. ಬ್ರಿಟಿಷ್ ಆಡಳಿತ ತಂದ ಭ್ರಮನಿರಸನ, ಆತಂಕ, ಅವಮಾನಗಳಿಂದ ಬಿಡಿಸಬಲ್ಲ ತಾತ್ವಿಕತೆಯ ಅನಿವಾರ್ಯತೆಯಿತ್ತು. ಹಿಂದೂ ಪುನರುತ್ಥಾನವಾದುವು ಈ ಅಗತ್ಯವನ್ನು ಪೂರೈಸಿತು.

ಥಿಯೋಸೋಫಿಕಲ್ ಸೊಸೈಟಿ ಹಾಗೂ ಭಾರತೀಯ ಅಧ್ಯಾತ್ಮವಾದ

ಈ ಚಳುವಳಿಯು ವಿದ್ಯಾವಂತ ವರ್ಗದಿಂದ ಪ್ರತೀತ ಹಾಗೂ ವೇದಾಂತ ಧರ್ಮ ಕೇಂದ್ರಿತವಾದ ಸಾಮಾಕ ಚಳುವಳಿಯಾಗಿದೆ. 1882ರಲ್ಲಿ ಸ್ಥಾಪಿತವಾದ ಸಂಸ್ಥೆಯ ನೇತೃತ್ವವನ್ನು 1893ರಲ್ಲಿ ಡಾ. ಅನಿಬೆಸೆಂಟರು ವಹಿಸಿಕೊಂಡರು. ಧಾರ್ಮಿಕ ಪ್ರಜ್ಞೆಯುಳ್ಳ ಸೊಸೈಟಿಯು ತನ್ನ ಬೇರುಗಳನ್ನು ದೇಶೀಯ ಸಂಸ್ಕೃತಿಯಲ್ಲಿ ಹುಡುಕುತ್ತಿದ್ದ ಇಂಗ್ಲಿಷ್ ವಿದ್ಯಾವಂತರಿಗೆ ಭಾರತೀಯ ಗ್ರಾಮೀಣ ಆರ್ಥಿಕತೆಯ ಪುನಶ್ಚೇತನದ ಮಾತು ಪ್ರಿಯವಾಗುವಂತೆ ಮಾಡಿತು. ಗಾಂಧೀಯವರ ಗ್ರಾಮಸ್ವರಾಜ್ಯದ ಪರಿಕಲ್ಪನೆಯ ಬೇರುಗಳು ಸಂಸ್ಥೆಯ ಧೋರಣೆಗಳಿಂದ ಬಂದವುಗಳು.

ರಾಮಕೃಷ್ಣ ಪರಮಹಂಸ ಹಾಗೂ **ಸ್ವಾಮಿ ವಿವೇಕಾನಂದರು** ವೇದಾಂತ ವಾದವನ್ನು ಎತ್ತಿ ಹಿಡಿದರು. 19ನೆಯ ಶತಮಾನದ ಕೊನೆಯ ದಶಕಗಳು ಹಾಗೂ 20ನೆಯ ಶತಮಾನದ ಮೊದಲ ದಶಕಗಳಲ್ಲಿ ವಿವೇಕಾನಂದರ ವಿಚಾರಧಾರೆ ಭಾರತದಲ್ಲಿ ಪ್ರಾಭಾವಿಯಾಗಿತ್ತು. ವೇದ ಉಪನಿಷತ್ತುಗಳನ್ನು ಅಧರಿಸಿ ಭಾರತೀಯ ಹಿಂದೂಧರ್ಮದ ವೈಜ್ಞಾನಿಕತೆ, ಆಧ್ಯಾತ್ಮಿಕ ಶ್ರೇಷ್ಠತೆಗಳನ್ನು ವಿವೇಕಾನಂದರು ಎತ್ತಿಹಿಡಿದರು. ದೀನ–ದರಿದ್ರರ ಉದ್ಧಾರ, ವೇದಾಂತ ಧರ್ಮದ ಮೂಲಮಂತ್ರವಾಗಬೇಕೆಂದು ಸಾರಿದ ವಿವೇಕಾನಂದರು ಧಾರ್ಮಿಕ ಕಂದಾಚಾರಗಳನ್ನು ವಿರೋಧಿಸಿದರು.

ಭಾರತೀಯ ಸಮಾಜದ ಮೇಲೆ ಇವುಗಳು ಬೀರಿದ ಪರಿಣಾಮ

ಭಾರತದಲ್ಲಿ ಸಾಂಪ್ರದಾಯಿಕ ವ್ಯವಸ್ಥೆಯ ಆಂತರಿಕ ಅಗತ್ಯದಿಂದ ಬಂಡವಾಹಿಶಾಹೀ ನಾಗರಿಕತೆಯ ಉಗಮವಾಗಲಿಲ್ಲ. ಹಳೆಯ ಊಳಿಗಮಾನ್ಯ ವ್ಯವಸ್ಥೆಯನ್ನು ನಾಶ ಮಾಡಿ ಅದರ ಗರ್ಭದಿಂದ ಬಂಡವಾಳಶಾಹಿ ವ್ಯವಸ್ಥೆ ಹುಟ್ಟಿದ ರೀತಿಗೂ ಭಾರತದಲ್ಲಿ ವಸಾಹತುಶಾಹೀ ಆಡಳಿತದ ಫಲವಾಗಿ ಆದ ಬದಲಾವಣೆಗಳಿಗೂ ವ್ಯತ್ಯಾಸವಿದೆ. ಬಂಡವಾಳಶಾಹೀ ಇಂಗ್ಲೆಂಡಿನ ವಸಾಹತುದೇಶವಾಗಿ ಭಾರತವು ಒಳಗಾಯಿತು. ಅಲ್ಲದೆ ಅಲ್ಲಿನ ಕ್ರಿಯೆ ಪ್ರಕ್ರಿಯೆಗಳಿಗೆ ಸ್ಪಂಧಿಸಿತು. ಇವು ಯುರೋಪು ನಾಗರಿಕತೆಯ ಜೊತೆಗೆ ಸಂಬಂಧವನ್ನು ಪಡೆದಿರುವ ಹಾಗೂ ಅದರೊಂದಿಗೆ ಬೆಳೆದಿರುವ ಪ್ರಕ್ರಿಯೆ. **ಡಿ.ಆರ್. ನಾಗರಾಜ್** ಹೇಳುವಂತೆ. "ಕೊಲೀನಿಯಲ್ ಅನುಭವಗಳ ಬಗ್ಗೆ ಮಾತನಾಡುವಾಗ ಎಲ್ಲವೂ ತಲೆ ಕೆಳಗಾಗುತ್ತದೆ. ಮೂಲ ದೇಶದಲ್ಲಿ ದೇವತೆಯಂತೆ ಕಂಡದ್ದು ರಾಕ್ಷಸನ ಹಾಗೆ ಕಾಣುತ್ತದೆ." (1983:26) **ವಸಾಹತೀಕರಣ**ವೆನ್ನುವುದು ಯಾವುದಾದರೊಂದು ಕ್ಷೇತ್ರದ ಸೀಮಿತ ಪ್ರಕ್ರಿಯೆ ಅಲ್ಲ. ಅದು ನಾಡೊಂದರಲ್ಲಿ ಅಮೂಲಾಗ್ರ ಪರಿವರ್ತನೆಯನ್ನುಂಟು ಮಾಡಿದ ಮಹಾನ್ ಘಟನೆ.

ವಸಾಹತೀಕರಣದ ಮೊದಲ ಹಂತದಲ್ಲಿ ಬ್ರಿಟಿಷರು ಭಾರತೀಯ ವಿದ್ಯಾವಂತರ ಗಮನ ಸೆಳೆದರು. ಇಂಗ್ಲಿಷ್ ಶಿಕ್ಷಣವು ತಮಗೆ ಹಾಗೂ ಸಮಗ್ರ ಮಾನವ ಜನಾಂಗಕ್ಕೆ ಅಗತ್ಯವಾದ ಮೌಲ್ಯ ಸರಣಿಯನ್ನು ನೀಡುತ್ತದೆ ಎಂದು ಸಹಜವಾಗಿಯೇ ಇವರು ನಂಬಿದ್ದರು.

ಇಂಗ್ಲಿಷ್ ಶಿಕ್ಷಣದೊಂದಿಗೆ ಆ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಪ್ರಬಲವಾಗಿದ್ದ ತಾತ್ವಿಕ ನಿಲುವುಗಳೂ ಭಾರತಕ್ಕೆ ಬಂದುವು. ನಿಲುವುಗಳು ಭಾರತೀಯ ಪರಂಪರೆಯೊಡನೆ ಮುಖಾಮುಖಿಯಾದುವು. ದೇಸೀ ಸಂಸ್ಕೃತಿಗಿಂತ ಆಳುವವರ ಸಂಸ್ಕೃತಿ ಪ್ರಬಲವಾಯಿತು. ಪಾಶ್ಚಾತ್ಯರ ಉದಾರವಾದ, ಮಾನವತಾವಾದಗಳಿಗೆ ಭಾರತೀಯ ವಿದ್ಯಾವಂತ ವರ್ಗ ಬಲಿಯಿತು. ಸಮಾನ ಶಿಕ್ಷಣನೀತಿ, ಜಾತಿಮತಗಳಿಲ್ಲದ ಆಡಳಿತ ವ್ಯವಸ್ಥೆಗಳು ಇವರಿಗೆ ಪ್ರಿಯವಾದುವು. ವಿದ್ಯಾವಂತ ವರ್ಗ ಆಗ ಭಾರತದ ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿದ್ದ ಭಾರತದ ಗಣ್ಯ ಪ್ರಜೆಗಳಾಗಿದ್ದರು. ಹಾಗೂ ಸಹಜವಾಗಿಯೇ ಭಾರತದ ಪ್ರಾಚೀನ ಸಾಂಸ್ಕೃತಿಕ ಮೌಲ್ಯಗಳಿಂದ ಸಿಡಿದು ನಿಲ್ಲುವಂತಾದರು. ಈ ನೆಲೆಯಲ್ಲಿ ರಾಜರಾಮ್ ಮೋಹನ್‌ರಾಯ್ ಪಾಶ್ಚಾತ್ಯ ವೈಚಾರಿಕ ನೆಲೆಗಳಿಂದ ಭಾರತೀಯ ವಿಚಾರಗಳನ್ನು ವ್ಯಾಖ್ಯಾನಿಸಲು ಹೊರಟದ್ದು, ಕಂದರದ ನಡುವೆ ಸಮತೋಲನ ಕಾಪಾಡಿಕೊಳ್ಳುವ ಒಂದು ಉಪಾಯವೇ ಆಗಿತ್ತು. ಮುಂದೆ ಮಧ್ಯಮ ವರ್ಗದವರು

ಸಂಪೂರ್ಣ ಪಾಶ್ಚಿಮಾತ್ಯ ವೈಚಾರಿಕತೆಗೆ ಒಲಿದರು. ಲಾಲಲಜಪತರಾಯ ರಂತಹ **'ತೀವ್ರಗ್ರಾಮಿ'** (ರ್‍ಯಾಡಿಕಲ್) ನಾಯಕರೂ ಪಾಶ್ಚಾತ್ಯ ಪ್ರಕೃತಿ ವಿಜ್ಞಾನ, ಸಾಮಾಜಿಕ ಶಾಸ್ತ್ರಗಳ ಅಧ್ಯಯನದ ಅಗತ್ಯಗಳನ್ನು ಪ್ರತಿಪಾದಿಸಿದರು. ಇಂತಹ ಅಧ್ಯಯನವು ಭಾರತೀಯರನ್ನು ಶುದ್ಧಾಂಗವಾಗಿ ಪಾಶ್ಚಾತ್ಯೀಕರಣಕ್ಕೆ ಒಳಗು ಮಾಡುವುದಿಲ್ಲ. ಬದಲಾಗಿ ಇಂತಹ ವಿದ್ಯಾವಂತರು ಆಧುನಿಕ ಭಾರತೀಯರಾಗುತ್ತಾರೆ ಎಂದು ಹೇಳಿದರು (ಶಿವರಾಮ ಪಡಿಕ್ಕಲ್ 1987:46) "...ವಸಾಹತುಶಾಹಿಯ ಮುಖ್ಯ ಗುರಿಯೆಂದರೆ ದೇಶಿಯ ಸಂಸ್ಕೃತಿಗಳ ಬಹುಮುಖತ್ವಗಳನ್ನು ಪರಿವರ್ತಿಸುವುದು; ಅವುಗಳ ಅನನ್ಯತೆಯನ್ನು ನಾಶಮಾಡಿ ಅವುಗಳನ್ನು ಸಾಂಸ್ಕೃತಿಕ ವಸಾಹತುಗಳನ್ನಾಗಿ ಪರಿವರ್ತಿಸುವುದು. ಇಂಥ ಸಂದರ್ಭದಲ್ಲಿ ಪರಸ್ಪರ ವಿನಿಮಯದ ಬದಲು ಯಜಮಾನಿಕೆಯೇ ಮುಖ್ಯವಾಗುತ್ತದೆ. ವಸಾಹತುಶಾಹಿಯ ಉದ್ದೇಶಗಳು ಪೂರ್ತಿ ಈಡೇರದಿದ್ದರೂ ದೇಶೀಯ ಸಂಸ್ಕೃತಿಯಲ್ಲಿ ಏರುಪೇರು ಉಂಟಾಗುತ್ತದೆ. ವಸಾಹತುಶಾಹಿ ಅನುಭವದಿಂದಾಗಿ ಪ್ರಾದೇಶಿಕ ಸಂಸ್ಕೃತಿಯ ಗಮನ ತನ್ನ ವಾಸ್ತವ ಸ್ವರೂಪದ ಮೇಲೆ ಕುದುರುತ್ತದೆ. ಅದು ಹೇರಬಯಸುವ ಏಕಾಕೃತಿಯ ಅವಾಸ್ತವಿಕತೆಯ ವಿರುದ್ಧ ಪ್ರಾದೇಶಿಕ ಸಂಸ್ಕೃತಿ ಮಾಡುವ ಉಪಾಯವೆಂದರೆ ತನ್ನ ಪ್ರಾದೇಶಿಕ ವಾಸ್ತವಗಳ ಬಗ್ಗೆ ಗಾಢವಾಗಿ ಬದ್ಧವಾಗುವುದು." (ರಾಜೇಂದ್ರ ಚೆನ್ನಿ–1989:57) ಈ ರೀತಿ ಬದ್ಧತೆಯೊಂದಿಗೆ ದೇಶೀಯರು ತಮ್ಮ ಪ್ರಸ್ತುತ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಿದರು. ಇದರಿಂದಾಗಿ ವಸಾಹತುಶಾಹಿಯ ಮೂಲಕ ಹಾಗೂ ಅದರ ಮಾಧ್ಯಮವಾದ ಇಂಗ್ಲಿಷ್ ಶಿಕ್ಷಣದ ಮೂಲಕ ಮಾನವ ಕೇಂದ್ರಿತ ಚಿಂತನೆ ಭಾರತೀಯ ಸಂವೇದನೆಯನ್ನು ಪ್ರವೇಶಿಸಿತು. ಅಲ್ಲದೆ ವ್ಯಕ್ತಿಯ ನಡವಳಿಕೆಯನ್ನು ಸಾಂಸ್ಕೃತಿಕ ಅನನ್ಯತೆಯ ನೆಲೆಯಲ್ಲಿ ನೋಡುವ ಧೋರಣೆ ಬೆಳೆಯಿತು. ಹಾಗೂ ಇದೇ ಸಂದರ್ಭಕ್ಕೆ ಸಮಾಜ ಸುಧಾರಕ ಪಂಥಗಳು ಹೆಚ್ಚು ಪ್ರಭಾವಶಾಲಿಯಾದುವು. ಇದಕ್ಕೆ ಸಂಸ್ಕೃತಿಯ ರಚನೆಯಲ್ಲುಂಟಾದ ಬದಲಾವಣೆಗಳು ಕಾರಣವಾದುವು. ಇದರ ಪರಿಣಾಮವೇ ಸುಶಿಕ್ಷಿತ ಮಧ್ಯಮವರ್ಗವೊಂದು ಸೃಷ್ಟಿಯಾಯಿತು.

ಸಾಂಪ್ರದಾಯಿಕ ಭಾರತದ ಮೌಲ್ಯಗಳು ಹಾಗೂ ಪಾಶ್ಚಾತ್ಯ ವೈಚಾರಿಕತೆಗಳ ನಡುವಿನ ಅಸಹಜ ಮೈತ್ರಿಯನ್ನು ಮೈಗೂಡಿಸಿಕೊಂಡ ಇಂಗ್ಲಿಷ್ ವಿದ್ಯಾವಂತ ವರ್ಗ ಒಂದು ಕಡೆಯಲ್ಲಿ ಸಾಂಪ್ರದಾಯಿಕ ಭಾರತದಿಂದ ದೇಸೀ ಜೀವನಕ್ರಮದಿಂದ ಬೇರ್ಪಟ್ಟಿತು. ಆದರೆ ಇನ್ನೊಂದೆಡೆಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯಿಂದ ವರ್ಗ ಸ್ವೀಕರಿಸಲ್ಪಡಲಿಲ್ಲ. ವ್ಯಕ್ತಿವಾದದ ಬೆಳವಣಿಗೆಯೂ ಇದಕ್ಕೆ ಪೂರಕವಾಯಿತು. ಭಾರತೀಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ನಡುವೆ 19ನೆಯ ಶತಮಾನದ ಇಂಗ್ಲಿಷ್ ವಿದ್ಯಾವಂತ ವರ್ಗ ತ್ರಿಶಂಕುವಾಗಿ ಉದ್ಭವಿಸಿತು ಹಾಗೂ ತ್ರಿಶಂಕು ಸ್ಥಿತಿಯನ್ನು ಅನುಭವಿಸಿತು. ವರ್ಗ 'ಪರಕೀಯ'

ವಾಯಿತು. ಅಂದರೆ ತನ್ನ ಕೀಳರಿಮೆಯ ಕಾರಣದಿಂದ, ಪಾಶ್ಚಾತ್ಯ ಸಂಸ್ಕೃತಿಯೊಂದಿಗೆ ಗುರುತಿಸಿಕೊಳ್ಳಲಾರದ, ವ್ಯಕ್ತಿ ವಿಶಿಷ್ಟ ಪಾಶ್ಚಾತ್ಯ ತಾತ್ವಿಕತೆಯನ್ನು ಒಪ್ಪಿಕೊಂಡುದರಿಂದ ದೇಶಿಯ ಸಂಸ್ಕೃತಿಯೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳಲಾರದ ಸ್ಥಿತಿಯಿಂದಾಗಿ ಭಾರತೀಯ **'ಧೀಮಂತವರ್ಗ'** (ಇಂಟೆಲಿಜೆನ್ಸಿಯಾ) ತನ್ನ **'ಸಾಂಸ್ಕೃತಿಕ ಅನನ್ಯತೆ'** (ಕಲ್ಚರಲ್ ಐಡೆಂಟಿಟಿ) ಗಾಗಿ ತಡಕಾಡಬೇಕಾಗಿ ಬಂತು. (ಶಿವರಾಮ ಪಡಿಕ್ಕಲ್ 1987:48) ಅಂಬಳಿಕೆ ಹಿರಿಯಣ್ಣ ಅವರ ಪ್ರಕಾರ, "ಯಾವುದೇ ಒಂದು ಸಂಸ್ಕೃತಿ ಸಮೂಹ ಮತ್ತೊಂದರಿಂದ ಬೇರೆಯಾಗುವ ವಿಶಿಷ್ಟ ಅಂಶಗಳನ್ನು ದೃಢವಾಗಿ ಹೊಂದಿದ್ದು ತನ್ನ ಪ್ರತ್ಯೇಕ ಅಸ್ತಿತ್ವವನ್ನು ಪ್ರದರ್ಶಿಸಿದರೆ ಅದು ಆ ಸಮೂಹದ 'ಸಾಂಸ್ಕೃತಿಕ ಅನನ್ಯತೆ' ಆಗುತ್ತದೆ. ತಮ್ಮನ್ನು ತಾವು ಗುರುತಿಸಿ ಕೊಳ್ಳುವ ತಮ್ಮ ಸ್ವಂತಿಕೆಯನ್ನು ಪ್ರದರ್ಶಿಸುವ ಆ ಮೂಲಕ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಒಂದು ಪ್ರಕ್ರಿಯೆ 'ಸಾಂಸ್ಕೃತಿಕ ಅನನ್ಯತೆ'. ವಾಸ್ತವವನ್ನು ಮೀರುವ ಅನನ್ಯತೆಯ ಹುಡುಕಾಟದ ಗುರು." (ಸೈದ್ಧಾಂತಿಕ ಜಾನಪದ 1992:1–2)

ಪರಕೀಯವಾದ ತನ್ನ ಸಾಂಸ್ಕೃತಿಕ ಅನನ್ಯತೆಗಾಗಿ ಹೋರಾಡುತ್ತಿದ್ದ ಚಿಕ್ಕ ಧೀಮಂತ ವರ್ಗವೇ 19ನೆಯ ಶತಮಾನದ ಭಾರತದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ರಂಗಗಳಲ್ಲಿ ಕ್ರಿಯಾಶೀಲವಾಗಿದ್ದುದು. ಮಾತ್ರವಲ್ಲದೆ ಪ್ರಸಿದ್ಧ ಸಮಾಜ ಸುಧಾರಕ ಬ್ರಹ್ಮಸಮಾಜ, ಆರ್ಯಸಮಾಜ, ಥಿಯೋಸೊಫಿಕಲ್ ಸೊಸೈಟಿ ಮೊದಲಾದ ಸಂಸ್ಥೆಗಳೂ ಕಾರ್ಯ ನಿರ್ವಹಿಸಿದವು. ಹಾಗೂ ಭಾರತದಲ್ಲಿ ಇಂಗ್ಲಿಷ್ ಶಿಕ್ಷಣದ ಮೂಲಕ ಪ್ರವೇಶಿಸಿದ ವ್ಯಕ್ತಿ ಕೇಂದ್ರಿತ ಮಾನವತಾವಾದವು, ವ್ಯಕ್ತಿನಿರಪೇಕ್ಷವಾದ ಧಾರ್ಮಿಕ ಹಾಗೂ ತಾತ್ತ್ವಿಕ ಪರಂಪರೆಯಲ್ಲಿ ಮೂಲಭೂತವಾದ ಬದಲಾವಣೆಗಳನ್ನು ತಂದಿತು. ಇದರಿಂದ ಒಂದು ಬಗೆಯಲ್ಲಿ ಚೈತನ್ಯ ಕಳೆದುಕೊಂಡ ಪರಂಪರೆ ಮರುಚೇತನ ಪಡೆಯುವುದಕ್ಕೆ ಸಾಧ್ಯವಾಯಿತು.

ಬ್ರಿಟಿಷ್ ರಾಜಸತ್ತೆಯ ಆಡಳಿತ ಭಾರತದ ಹಳೆಯ ರಚನೆಗಳ ಮುಂದೆ ಹೊಸ ಸವಾಲನ್ನು ಇರಿಸಿತು. ಅದರ ಫಲವಾಗಿ ದೇಸೀ ವಾಸ್ತವಿಕತೆಯು 'ರಚನೀಕರಣ' ಹಾಗೂ 'ರಚನಾನಿರಸನ'ಗಳಿಗೆ ಒಳಗಾಯಿತು.[4] ಇದೇ ಪರಿಣಾಮವನ್ನು 19ನೆಯ ಶತಮಾನದಲ್ಲಿ ಭಾರತದ ರಾಜಕೀಯ, ಸಾಂಸ್ಕೃತಿಕ, ಬೌದ್ಧಿಕ ರಂಗದಲ್ಲಿ ಪ್ರಮುಖರಾಗಿದ್ದ ಭಾರತೀಯ ಇಂಗ್ಲಿಷ್ ವಿದ್ಯಾವಂತ ವರ್ಗದಲ್ಲಿ ಕಾಣಬಹುದು. ಪ್ರೊ. ಬಿಪಿನ್‌ಚಂದ್ರರ ಮಾತುಗಳಲ್ಲಿ ಸಮರ್ಥಿಸುವುದಾದರೆ, "Colonial Modernization involved not only Indian Economy, but also the patterns o Social, Political, Administrative and Cultural lie."

"18ನೆಯ ಶತಮಾನದಲ್ಲಿ ಮೊಗಲ್ ಸಾಮ್ರಾಜ್ಯದ ಪತನ ವ್ಯಾಪಕ ಆರ್ಥಿಕ ಅರಾಜಕತೆ ಹಾಗೂ ಭಾರತವು ಕ್ರಮೇಣ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡುದು– ಇವು ಚರ್ಚೆಗೊಳ್ಳುತ್ತಿರುವ ಕಾಲಘಟ್ಟದಲ್ಲಿ ಸಾರ್ವತ್ರಿಕ, ಸಾಂಸ್ಕೃತಿಕ ಅವನತಿಗೆ ದಾರಿ ಮಾಡಿಕೊಟ್ಟವು. ಅದೇ ಹೊತ್ತಿನಲ್ಲಿ ಸಂಸ್ಕೃತಿಯ ಕೆಲವು ವಲಯಗಳಲ್ಲಿ ಯಶಸ್ಸುಗಳನ್ನು ಹಾಗೂ ಸ್ಮರಣಾರ್ಹ ಸಾಂಸ್ಕೃತಿಕ ಕೃತಿಗಳನ್ನು ಸೃಜಿಸಲಾಯಿತು. ಸಾಹಿತ್ಯದಲ್ಲಿ ಹಿಂದಿನಂತೆ ಕಾವ್ಯದ ಕಡೆಗೆ ಗಮನ ಹರಿಸಲಾಯಿತು. ಆದರೆ 19ನೆಯ ಶತಮಾನದ ಮೊದಲರ್ಧದಲ್ಲಿ ಹೊಸ ವಿದ್ಯಾಮಾನಗಳು ಕಾಣಿಸಿಕೊಂಡವು. ಅನೇಕ ಭಾರತೀಯ ಭಾಷೆಗಳಲ್ಲಿ ಗದ್ಯಕೃತಿಗಳು, ಸಮಕಾಲೀನ ವಿಷಯಗಳ ಕುರಿತು ಪತ್ರ ಸಂಕಲನಗಳು ಹಾಗೂ ಅದುವರೆವಿಗೂ ಭಾರತದಲ್ಲಿ ತಿಳಿದು ಬಂದಿದ್ದ ಪತ್ರಿಕೋದ್ಯಮ ಕಾಣಿಸಿಕೊಳ್ಳತೊಡಗಿತು. ಬರಹಗಳೇನೂ ಬ್ರಿಟಿಷ್ ಮಾದರಿಗಳ ನೇರ ಅನುಕರಣೆಗಳಾಗಿರಲಿಲ್ಲ. ಹೊಸ ವಿಷಯಗಳನ್ನು ವಿವೇಚಿಸ ತೊಡಗಿದುದರಿಂದ ಹೊಸ ಶೈಲಿಗೆ ಸರಿಹೊಂದುವಂತೆ ಒಂದು ಇಡೀ ಹೊಸ ಶಬ್ದ ಭಂಡಾರವನ್ನೇ ವಿಕಾಸಗೊಳಿಸಲಾಯಿತು. ಇದರ ಜೊತೆಗೆ ವಾಸ್ತುಶಿಲ್ಪ ಹಾಗೂ ಚಿತ್ರಕಲೆಗೆ ಒತ್ತುಕೊಟ್ಟರು.

ಆದುದರಿಂದ ಪಾಶ್ಚಾತ್ಯರ ಆಗಮನ ಭಾರತೀಯರ ಸಾಂಸ್ಕೃತಿಕ ಜೀವನಕ್ರಮದ ಮೇಲೆ ನೇರ ಪರಿಣಾಮ ಬೀರಿತು. ಪರಕೀಯರ ಆಳ್ವಿಕೆಗೆ ತುತ್ತಾದ ನಾಡಿನ ಸಂಸ್ಕೃತಿಯಲ್ಲಿ ಒಂದು ನಿರ್ದಿಷ್ಟ ಘಟ್ಟದಲ್ಲಿ ಪರಕೀಯ ಶಿಕ್ಷಣದ ಕಾರಣಕ್ಕಾಗಿಯೇ ಸ್ವ–ಪ್ರಜ್ಞೆ ಉಂಟಾಯಿತು. ತಮ್ಮನ್ನು ಆಳುತ್ತಿರುವ ಸಂಸ್ಕೃತಿ ತಮ್ಮ ಸಂಸ್ಕೃತಿಗಿಂತ ಶ್ರೇಷ್ಠವಾದದ್ದು ಎಂಬ ಅಂತರ್ಗತ ಅರಿವಿನಿಂದ ಪ್ರಕ್ರಿಯೆ ಆರಂಭವಾಯಿತು.

19ನೆಯ ಶತಮಾನದ ಅಂತ್ಯ ಹಾಗೂ 20ನೆಯ ಶತಮಾನದ ಆರಂಭದ ಎರಡು ದಶಕಗಳಲ್ಲಿ ಭಾರತೀಯ ಸಾಂಸ್ಕೃತಿಕ ಜೀವನದಲ್ಲಿ ಬದಲಾವಣೆಯನ್ನು ತಂದುವು. ಭಾರತೀಯರು ತಮ್ಮ ಸ್ವಂತಿಕೆಯನ್ನು ಗುರುತಿಸಿಕೊಳ್ಳಲು ಇಂಗ್ಲಿಷ್ ಸಂಸ್ಕೃತಿಯ ಗಟ್ಟಿ ಚಿಪ್ಪಿನಿಂದ ಕಳಚಿಕೊಳ್ಳಲು ಯತ್ನಿಸಿದರು. ರಾಷ್ಟ್ರೀಯತೆ ಹಾಗೂ ದೇಶಭಕ್ತಿ ಪ್ರಜ್ಞೆ ಎಲ್ಲೆಡೆ ತೀವ್ರವಾಗಿ ಜಾಗೃತಗೊಂಡಿರುವುದರಿಂದ ತಂತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳುವ ಹಾಗೂ ವೃದ್ಧಿಸಿಕೊಳ್ಳುವ ಭಾವನೆ ಎಲ್ಲ ಕಡೆಯೂ ರೂಢವಾಯಿತು. ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ, ಆಡಳಿತ, ರಾಜಕೀಯ ಭಾವನೆ ಹಾಗೂ ಚಳುವಳಿಗಳಲ್ಲಿ ಮುಂಚೂಣಿಯಲ್ಲಿದ್ದ ಜನತೆ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಬಗೆಗೆ ಅಭಿಮಾನ ತಳೆಯಲಾರಂಭಿಸಿದರು. ಈ ರೀತಿಯಲ್ಲಿ ರಾಷ್ಟ್ರೀಯತೆ ಹಾಗೂ ದೇಶಭಕ್ತಿ ಭಾವನೆಗಳ ಬಲದೊಂದಿಗೆ ಸಾಂಸ್ಕೃತಿಕ ಅನನ್ಯಗಳ ಹುಡುಕಾಟದಲ್ಲಿ ಕನ್ನಡಿಗರು ಆಸಕ್ತಿ ತೋರಿದರು.

ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟ

19ನೆಯ ಶತಮಾನದ ಮೊದಲ ದಶಕದಿಂದ ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಪಾಶ್ಚಾತ್ಯರೇ ಆರಂಭಿಕರು. ಹಾಗೂ ಇದೇ ಸಂದರ್ಭದಲ್ಲಿ ಭಾರತೀಯರಿಗೆ ಪಾಶ್ಚಾತ್ಯ ಶಿಕ್ಷಣ ಕೊಡಬೇಕೆನ್ನುವ ಬ್ರಿಟಿಷ್ ಸರಕಾರದ ಕ್ರಮದಿಂದಾಗಿ ಭಾರತೀಯ ಸುಶಿಕ್ಷಿತರಲ್ಲಿ ಸ್ವರಾಜ್ಯ ಸಂಪಾದನೆಗಾಗಿ ರಾಷ್ಟ್ರೀಯ ಚಳುವಳಿ ಮೂಡಿತು. ಆದರೆ ಅಶಿಕ್ಷಿತರಾದ ಗ್ರಾಮಾಂತರ ಜನರು ಚಳುವಳಿಯಲ್ಲಿ ಆಸಕ್ತಿ ವಹಿಸಲಿಲ್ಲ. ಇದನ್ನು ಮನಗಂಡ **ಭೀಮಕವಿ** ಹಾಗೂ ಇತರರು ಗ್ರಾಮಾಂತರ ಜನರಿಗೆ ಚಳುವಳಿಯ ಪರಿಕಲ್ಪನೆ, ರಾಷ್ಟ್ರೀಯ ಭಾವೈಕ್ಯ ಜಾಗೃತಗೊಳ್ಳುವುದಕ್ಕೆ ಪ್ರಯತ್ನಿಸಿದರು. ಚಳುವಳಿಯ ನೇತೃತ್ವ ವಹಿಸಿಕೊಂಡ ಧುರೀಣರು ದೇಶದ ಉದ್ದಗಲಕ್ಕೂ ಸಂಚರಿಸಿ ವಿದೇಶಿಯರ ದುರಾಡಳಿತವನ್ನು ಕಣ್ಣಿಗೆಕಟ್ಟುವಂತೆ ವಿವರಿಸಿ ಆ ಮೂಲಕ ರಾಷ್ಟ್ರೀಯ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಕರೆಕೊಟ್ಟರು. ಭಾಷೆ ಹಾಗೂ ಆಶಿಕ್ಷಿತತೆಯಿಂದಾಗಿ ರಾಷ್ಟ್ರೀಯ ನಾಯಕರ ವಿಚಾರಗಳನ್ನು ಗ್ರಾಮಾಂತರ ಪ್ರದೇಶದ ಜನರು ತಿಳಿದುಕೊಳ್ಳಲು ಅಸಮರ್ಥರಾದುದರಿಂದ ರಾಷ್ಟ್ರೀಯ ಚಳುವಳಿಯಲ್ಲಿ ಆಸಕ್ತಿವಹಿಸಲಿಲ್ಲ. ಈ ಸಂದರ್ಭದಲ್ಲಿ ಸುಶಿಕ್ಷಿತರು ಒಂದು ರೀತಿಯ ತ್ರಿಶಂಕು ಸ್ಥಿತಿಗೆ ಸಿಲುಕಿದರು. ಅತ್ತ ಪಾಶ್ಚಾತ್ಯರಿಗೆ ವಿರೋಧವಾಗಿ ಚಳುವಳಿಗೆ ಧುಮುಕಿದರು. ಇತ್ತ ಚಳುವಳಿಗೆ ಜನಸಂಪರ್ಕವಿಲ್ಲದೆ ಗ್ರಾಮೀಣ ಜನರ ಪ್ರೋತ್ಸಾಹ ಸಿಗದೆ ಹತಾಶರಾದರು. ಪಾಶ್ಚಾತ್ಯರನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದ ಹಾಗೂ ದೇಶೀಯ ಸಂಸ್ಕೃತಿಯಿಂದ ಸಂಪೂರ್ಣವಾಗಿ ದೂರ ಉಳಿಯದ ಸುಶಿಕ್ಷಿತ ಮಧ್ಯಮ ವರ್ಗವು ದೇಶೀಯರಿಗೆ ಸುಲಭವಾಗಿ ತಲುಪುವ ಭಾಷೆಗಳಲ್ಲಿ ಕಾವ್ಯ, ಜನಪದ ಗೀತೆ, ಹಾಡು, ಲಾವಣಿ ಇತ್ಯಾದಿಗಳನ್ನು ರಚಿಸುವುದಕ್ಕೆ ತೊಡಗಿದರು.

ರಾಷ್ಟ್ರೀಯ ಹೋರಾಟದ ನೆಲೆಯಲ್ಲಿ ಸಾಹಿತ್ಯದ ಕಡೆಗೆ ಸುಶಿಕ್ಷಿತ ಭಾರತೀಯರ ಗಮನ ಸೆಳೆಯಿತು. ಜನಪದ ಸಾಹಿತ್ಯಗಳ ಸಂಗ್ರಹದ ಕೆಲಸವೂ ಜೊತೆ ಜೊತೆಗೆ ನಡೆಯಿತು. ಮೊದಲು ಜನಪದ ಸಂಗ್ರಹದ ಕಡೆಗೆ ಹೆಚ್ಚು ಆಸಕ್ತಿ ತೋರಿದರು. ಅಲ್ಲಿಯವರೆಗೆ ಮೌಖಿಕ ರೂಪದಲ್ಲಿದ್ದ ಸಾಹಿತ್ಯವು ಲಿಖಿತರೂಪವನ್ನು ಪಡೆದು ಕೊಂಡಿರಲಿಲ್ಲ. **ನಡಕೇರಿಯಂಡ ಚಿಣ್ಣಪ್ಪ** (ಪಟ್ಟೋಲೆಪಳಮೆ 1919) **ಮಧುರ ಚೆನ್ನ, ಹಲಸಂಗಿ ಗೆಳೆಯರು** (ಜೀವನ ಸಂಗೀತ 1933, ಮಲ್ಲಿಗೆದಂಡೆ 1933) ಹಾಗೂ **ಬೆಟಗೇರಿ ಕೃಷ್ಣಶರ್ಮ** (ಗರತಿಯ ಹಾಡು 1930) ಇತರರು ಜನಪದ ಹಾಡುಗಳ ಸಂಗ್ರಹ ಕಾರ್ಯದಲ್ಲಿ ತೊಡಗಿದರು. 1937ರಲ್ಲಿ ಮಾಸ್ತಿಯವರು ಎರಡು ದೊಡ್ಡ ಲೇಖನವನ್ನು ಬರೆದು ಜನಪದ ಸಾಹಿತ್ಯ ಧ್ವಜವನ್ನು ಮತ್ತಷ್ಟು ಏರಿಸಿದರು. 'ಕರ್ನಾಟಕದ ಜನಪದ ಸಾಹಿತ್ಯ' ಎಂಬ ಲೇಖನದಲ್ಲಿ **"**..... ಇದು ಹರಿಜನರಲ್ಲಿ ಸಿಕ್ಕಿದ ಪದ್ಯ. ಯಾವ ತಪೋಜೀವನದಲ್ಲಾಗಲಿ, ಅರಮನೆಯಲ್ಲಾಗಲಿ, ಇದಕ್ಕೆ ಮೀರಿದ ಸಂಸ್ಕೃತಿ ದೊರೆಯಲಾರದು.... ಅಸಂಸ್ಕೃತರು ಎನ್ನಬಹುದಾದ ಜನರಲ್ಲಿ ಕಾಣುವ ಸಂಸ್ಕೃತಿಯ

ಮೆರುಗನ್ನು ನೋಡಿ ಯಾರಾದರು ಆಶ್ಚರ್ಯಪಡಬೇಕು" ಎಂದರು. (ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ 1981:83)

ಮೊದಲ ಘಟ್ಟದ ಜನಪದ ಸಂಗ್ರಹ ಹಾಗೂ ಅವುಗಳ ಸಾಂಸ್ಕೃತಿಕ ಅಗತ್ಯವು ದೇಶಭಕ್ತಿ ಹಾಗೂ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸುವ, ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಜೊತೆಗೆ ಪ್ರಾದೇಶಿಕವಾಗಿ ಜಾಗೃತವಾಗುವ, ಪರಕೀಯ ಆಳ್ವಿಕೆಯಿಂದ ಸಂಪೂರ್ಣ ಸ್ವತಂತ್ರರಾಗುವ, ಪಾಶ್ಚಾತ್ಯ ಸಾಹಿತ್ಯಕ್ಕಿಂತ ದೇಶೀಯ ಸಾಹಿತ್ಯದಲ್ಲಿ ಏನೂ ಕಡಿಮೆಯಿಲ್ಲ ಎಂಬ ಸ್ವದೇಶಾಭಿಮಾನ ಬೆಳೆಸುವ, ಸಂಸ್ಕೃತಿಯನ್ನು ಉದಾರವಾಗಿ ನೋಡುವ ಅಂಶಗಳಲ್ಲಿ ನಿಯಂತ್ರಣಗೊಂಡಿದೆ.

ಕೊನೆ ಟಿಪ್ಪಣಿಗಳು:

1. ಪತ್ರಿಕೋದ್ಯಮ: ಮೊದಲ ಘಟ್ಟದ ಜಾನಪದ ಅಧ್ಯಯನಕ್ಕೆ ಕನ್ನಡ ಪತ್ರಿಕೆಗಳ ಸಹಕಾರ ಗಮನೀಯ. ಮುದ್ರಣಯಂತ್ರ ಮತ್ತು ನೂರಾರು ಪತ್ರಿಕೆಗಳು ಈ ಸಂದರ್ಭದಲ್ಲಿ ಬೆಳಕಿಗೆ ಬಂದುವು. ಅವೆಲ್ಲವುಗಳು ಜಾನಪದಕ್ಕೆ ಹೆಚ್ಚಿನ ಒತ್ತುಕೊಟ್ಟವು. (ವಿವರಗಳಿಗೆ ನೋಡಿ, ಶ್ರೀನಿವಾಸ ಹಾವನೂರ 1975)
2. ಕ್ರಿ.ಶ.1844ರಲ್ಲಿ ಲಿಯೊನಾರ್ಥೊ ಸಿನ್ನಾಮಿ ಎಂಬ ಹೆಸರಿನ ಜೆಸುಯಿಟ್ ಪಾದ್ರಿ ಗೋವೆಗೆ ಬಂದನು. ಮರುವರ್ಷವೇ ಅವನನ್ನು ಕೆನಾರಕ್ಕೆ ಕಳುಹಿಸಲಾಯಿತು. ಅಲ್ಲಿ ನಾಲ್ಕು ವರ್ಷ ಕಳೆದರೂ ಅವನಿಗೆ ಯಶಸ್ಸು ಸಿಗಲಿಲ್ಲ. ಈ ಕಾರಣದಿಂದ ಅವನು ಮೈಸೂರು ಸಂಸ್ಥಾನಕ್ಕೆ ಬಂದನು. ಮೈಸೂರು ಪ್ರದೇಶಕ್ಕೆ ತಮಿಳುನಾಡಿನಿಂದ ಮಿಶನರಿಗಳು ಆಗಾಗ ಬಂದು ಹೋಗುತ್ತಿದ್ದರೂ ಅಲ್ಲಿ ಮೊತ್ತ ಮೊದಲು ಮಿಶನ್ ಕೇಂದ್ರವನ್ನು ಸಿನ್ನಮಿಯೇ ಸ್ಥಾಪಿಸಿದನು. ಶ್ರೀರಂಗಪಟ್ಟಣ, ಮೈಸೂರುಗಳಲ್ಲಿ ಇದ್ದುಕೊಂಡು ಈತ ಮತ ಪ್ರಚಾರವನ್ನು ಕೈಗೊಂಡನು. ಹದಿನೇಳನೆಯ ಶತಮಾನದ ಸಮಕಾಲೀನ ಗ್ರಂಥಚರಿತ್ರಕಾರರಾದ ಸೋಮರ್ ಮೊಗಲ್ ಮತ್ತು ಸೊತ್‌ವೆಲ್ ಇವರು ಸಿನ್ನಾಮಿಯು ಕನ್ನಡದಲ್ಲಿ ಪುಸ್ತಕಗಳನ್ನು ಬರೆದಿದ್ದಾನೆಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಈ ಆಧಾರದ ಮೇಲೆ ಸಿನ್ನಾಮಿಯಾದಿಯಾಗಿ ಬಂದ ಕನ್ನಡ ಬರವಣಿಗೆಗಳು – ಕ್ರೈಸ್ತಧರ್ಮದ ರಹಸ್ಯ ತತ್ವಗಳನ್ನು ಕುರಿತ ಸುದೀರ್ಘ ಪ್ರಶ್ನೋತ್ತರ; ಅದರ ಸಾರ ರೂಪ; ಕ್ರೈಸ್ತ ಸಂತರ ಜೀವನ ಚರಿತ್ರೆ; ಕ್ರೈಸ್ತ ಮತದ ಸಮರ್ಥನೆ; ಮೈಸೂರು ಜನರ ಜಾತಿಗಳು, ಮೂಢ ನಂಬಿಕೆಗಳು ಇವುಗಳ ಖಂಡನೆ; ಕನ್ನಡ ವ್ಯಾಕರಣ; ಕನ್ನಡ ಕೋಶ (ವಿವರ:ಶ್ರೀನಿವಾಸ ಹಾಮನೂರ 1975)
3. ಟಿಪ್ಪುಸುಲ್ತಾನನ ಕಾಲದಲ್ಲಿ ಇಲ್ಲಿಯ ಕ್ರೈಸ್ತರ ಮೇಲೆ ದೊಡ್ಡದೊಂದು ಅಘಾತವಾಯಿತು. ಕ್ರೈಸ್ತರು ಇಂಗ್ಲಿಷರಿಗೆ ಸಹಾಯ ಮಾಡಬಹುದೆಂಬ ಗುಮಾನಿಯ ಮೇಲೆ ಟಿಪ್ಪುಸುಲ್ತಾನನು ಕನ್ನಡ ಜಿಲ್ಲೆ ಬಿದನೂರುಗಳಲ್ಲಿನ ಸುಮಾರು 30,000 ಕ್ರೈಸ್ತರನ್ನು ಬಂಧಿಸಿ ಶ್ರೀರಂಗಪಟ್ಟನಕ್ಕೆ ಕರೆದೊಯ್ದ. ಸೆರೆಮನೆಯಲ್ಲಿ ವಿವಿಧ ಹಿಂಸೆಗಳನ್ನು ಅನುಭವಿಸಿದ ಇವರಲ್ಲಿ ಕೆಲವೇ ಸಹಸ್ರ ಜನ ಸೆರೆಮನೆಯಿಂದ ಬಿಡುಗಡೆ ಹೊಂದಿ ವಿರಾಜಪೇಟೆ, ಮಂಗಳೂರು, ಪಯ್ಯನ್ನೂರುಗಳಿಗೆ ಹಿಂತಿರುಗಿ ಅಲ್ಲಿ ನೆಲೆಸಲಾರಂಭಿಸಿದರು.
4. 'ರಚನೀಕರಣ'(ಸ್ಟ್ರಕ್ಚರಲೈಸೇಶನ್) ಮತ್ತು 'ರಚನಾನಿರಸನ'(ಡಿಸ್ಟ್ರಕ್ಚರಲೈಸೇಶನ್) ಎಂಬ ಕನ್ನಡ ಪದಗಳ ಬಳಕೆಯನ್ನು ಮೊದಲು ಬಳಸಿದವರು ಶಿವರಾಮ ಪಡಿಕ್ಕಲ್ ಅವರು. ವಿವರಗಳಿಗೆ ನೋಡಿ: 'ಕನ್ನಡ ಕಾದಂಬರಿಯ ಮೊದಲ ಹೆಜ್ಜೆ' 1981)

ಭಾಗ 3

ಜಾನಪದ ಅಧ್ಯಯನದ ಸಮೀಕ್ಷೆ ಹಾಗೂ ವರ್ಗೀಕರಣ

ಪಶ್ಚಿಮದ ರಾಷ್ಟ್ರಗಳಲ್ಲಿ ಜಾನಪದ ಸಂಗ್ರಹಕಾರ್ಯ, ಅಧ್ಯಯನ ಕ್ರಮಗಳು ಎರಡುನೂರು ವರ್ಷಗಳ ಹಿಂದೆಯೇ ಶಾಸ್ತ್ರೀಯವಾಗಿ ಆರಂಭವಾಯಿತು. 1702ರ ವೇಳೆಗೆ ಫಿನ್ಲೆಂಡಿನಲ್ಲಿ **ಕಾರ್ಲೆಕ್ರಾಹ್ನ** (1886) **ಅಂಟಿಅರ್ನೆ** (1910) ಮುಂತಾದವರು ಅಲ್ಲಿಯ ಜಾನಪದ ಸಂಗ್ರಹಕ್ಕೆ ಕಾರಣರಾದರು. **ಕಾರ್ಲೆಕ್ರಾಹ್ನ** ಹಾಗೂ **ಜ್ಯೂಲಿಯಸ್ ಕ್ರಾಹ್ನ** ಇವರಿಂದ ಜಗತ್ತಿನ ಪ್ರಸಿದ್ಧ ಜನಪದ ಮಹಾಕಾವ್ಯ **'ಕಲೇವಾಲಾ'** ಸಂಗ್ರಹಿಸಲು ಸಾಧ್ಯವಾಯಿತು. 1812ರ ವೇಳೆಗೆ ಜರ್ಮನಿಯ ಗ್ರಿಮ್ ಸಹೋದರರಾದ **ಜೇಕಬ್ ಗ್ರಿಮ್** (1884) ಹಾಗೂ **ವಿಲ್‌ಹೆಲ್ಮ್** (1884) ಜಾನಪದ ಅಧ್ಯಯನಕ್ಕೆ ವೈಜ್ಞಾನಿಕ ದೃಷ್ಟಿಯನ್ನು ಮೂಡಿಸಿದರು. ಭಾಷಾಶಾಸ್ತ್ರದ ದೃಷ್ಟಿಯಿಂದ, ಸಾಹಿತ್ಯದ ದೃಷ್ಟಿಯಿಂದ, ತಾವು ಸಂಗ್ರಹಿಸಿದ ಜನಪದ ಕಥೆಗಳನ್ನು ಅಪಾರ ಟಿಪ್ಪಣಿಗಳೊಡನೆ, ವಿವರಣಾತ್ಮಕ ಪ್ರಬಂಧಗಳೊಡನೆ 1819ರಲ್ಲಿ ಪ್ರಕಟಿಸಿದರು. ಇನ್ನೊಬ್ಬ ವಿದ್ವಾಂಸರಾದ ಸ್ಟಿತ್‌ಥಾಮ್ಸನ್ 1928–1937ರ ನಡುವಿನ ಅವಧಿಯಲ್ಲಿ **'ಜನಪದ ಕಥೆಯ ವರ್ಗಗಳು'** (ದಿ ಟೈಪ್ಸ್ ಆಫ್ ಫೋಕ್‌ಟೇಲ್ಸ್) ಹಾಗೂ ಆರು ಸಂಪುಟಗಳಲ್ಲಿ **'ಜನಪದ ಸಾಹಿತ್ಯದ ಆಶಯ ಸೂಚಿ'** (ದಿ ಮೊಟಿಫ್ ಇನ್‌ಡೆಕ್ಸ್ ಆಫ್ ಫೋಕ್ ಲಿಟ್‌ರೇಚರ್) ಎಂಬ ಎರಡು ಉಪಯುಕ್ತ ಪುಸ್ತಕಗಳನ್ನು ಪ್ರಕಟಿಸಿದರು. ಹೀಗೆ 17–18ನೇ ಶತಮಾನದಲ್ಲಿ ಪ್ರಪಂಚದಾದ್ಯಂತ ಜಾನಪದ ಸಂಗ್ರಹ, ವರ್ಗೀಕರಣ ಹಾಗೂ ವಿಶ್ಲೇಷಣೆಗಳು ಗಂಭೀರವಾಗಿ ನಡೆದುವು. ಇದೇ ಸಂದರ್ಭಕ್ಕೆ ಭಾರತವು ವಸಾಹತೀಕರಣಕ್ಕೆ ಒಳಗಾಯಿತು.

ಸ್ವದೇಶದ ಅಧ್ಯಯನದೊಂದಿಗೆ ಪಾಶ್ಚಾತ್ಯರು ವೈವಿಧ್ಯಮಯವಾದ ಸಂಸ್ಕೃತಿಯುಳ್ಳ ಭಾರತದಲ್ಲೂ ತಮ್ಮ ಅಧ್ಯಯನವನ್ನು ಪ್ರಾರಂಭಿಸಿದರು.

ಭಾರತದಲ್ಲಿ ಜನಪದ ಸಂಗ್ರಹ ಹಾಗೂ ಅಧ್ಯಯನಗಳ ಕಡೆಗೆ ಮೊದಲು ಕಣ್ಣು ತೆರೆಯಿಸಿದವರು. ಆಂಗ್ಲ ಆಡಳಿತಗಾರರು, ಪಾಶ್ಚಾತ್ಯ ವಿದ್ವಾಂಸರು ಹಾಗೂ ಕ್ರೈಸ್ತ ಧರ್ಮ ಪ್ರಚಾರಕರು, 1784ರಲ್ಲಿ ಕಲ್ಕತ್ತದಲ್ಲಿ ಸರ್. ವಿಲಿಯಂ ಜೋನ್ಸ್ **'ಅಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್'** ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. 1874ರಲ್ಲಿ ಕರ್ನಲ್ ಮೆಕೆಂಜಿಯು ಬರೆದ **'ಗ್ರಾಮ ದೇವತೆ'**ಯ ಹಬ್ಬ (ದಿ ವಿಲೇಜ್ ಫೀಸ್ಟ್) ಲೇಖನವು ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯಲ್ಲಿ ಪ್ರಕಟಿಸಲಾಯಿತು. ಈತ ಬೆಂಗಳೂರಿನ **ಅಕ್ಕಿತಿಮ್ಮನ ಹಳ್ಳಿಯ** ಗ್ರಾಮದೇವತೆಯ ಹಬ್ಬ ಹಾಗೂ ಕನ್ನಡದ ಇತರ ಕಡೆಗಳ ಊರಮ್ಮ–ಮಾರಮ್ಮಗಳ ಹಬ್ಬಗಳನ್ನು ಕುತೂಹಲಕರವಾಗಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ. ಕ್ರೈಸ್ತ ಪಾದ್ರಿ **ಅಬೆದುಬೋಯ್** ಎಂಬಾತ 1792ರಿಂದ 1823ರ ವರೆಗೆ ದಕ್ಷಿಣ ಭಾರತದ ವಿವಿಧ ಪ್ರಾಂತಗಳಲ್ಲಿ ಆ ಜನತೆಯ ಅನೇಕ ಸಂಪ್ರದಾಯಗಳು, ಆಚರಣೆಗಳು, ಧಾರ್ಮಿಕ ನಂಬಿಕೆ ನಡಾವಳಿಗಳನ್ನೂ ಹಿಂದೂ ಸಂಸ್ಕೃತಿಯನ್ನೂ ಅರ್ಥಮಾಡಿಕೊಂಡು 1816ರಲ್ಲಿ 'ಹಿಂದೂ ಮ್ಯಾನರ್, ಕಸ್ಟಮ್ಸ್ ಆ್ಯಂಡ್ ಸೆರ್‌ಮೊನಿಸ್' ಗ್ರಂಥವನ್ನು ಪ್ರಕಟಿಸಿದ. ವಿದ್ವಾಂಸನಾದ **ಜಾನ್‌ಲೇಡನ್** ಎಂಬವನು 1802ರಲ್ಲಿ **'ಶ್ರೀರಂಗಪಟ್ಟಣದ ಕೆಡುಗಾಲ'** ಕುರಿತು ಕಥನ ಗೀತವೊಂದನ್ನು ಇಂಗ್ಲಿಷಿಗೆ ಭಾಷಾಂತರಿಸಿ ಕನ್ನಡ ಜನಪದ ಕಾವ್ಯಲೋಕವನ್ನು ಇತರ ವಿದ್ವಾಂಸರಿಗೆ ಪರಿಚಯಿಸಿ ಕೊಟ್ಟಂತಾಯಿತು. ಆಮೇಲೆ ಸುಮಾರು 56 ವರ್ಷಗಳ ಅವಧಿಯಲ್ಲಿ ಕನ್ನಡ ಜಾನಪದ ಕ್ಷೇತ್ರದಲ್ಲಿ ಯಾವುದೇ ಕೆಲಸಗಳು ನಡೆಯಲಿಲ್ಲ. ಹಾಗೂ ಯಾವುದೇ ಸಂಗ್ರಹಗಳು ಪ್ರಕಟಗೊಳ್ಳಲಿಲ್ಲ. 1856ರಲ್ಲಿ **ಮೋಗ್ಲಿಂಗ್** ಎಂಬ ವಿದೇಶಿ ವಿದ್ವಾಂಸನೊಬ್ಬನು **'ಕನ್ನಡ ಗಾದೆಗಳು'** ಎಂಬ 151 ಪುಟಗಳ ಗ್ರಂಥ ಪ್ರಕಟಿಸಿದ್ದು ಗಮನಾರ್ಹ. ಗ್ರಂಥದಲ್ಲಿ 3547 ಗಾದೆಗಳಿವೆ. 1871ರಲ್ಲಿ **'ದಕ್ಷಿಣ ಭಾರತದ ಜನಪದ ಗೀತೆಗಳು'** (ದಿ ಫೋಕ್ ಸಾಂಗ್ಸ್ ಆಫ್ ಸದರನ್ ಇಂಡಿಯ–1886) ಎಂಬ ಗ್ರಂಥವನ್ನು ಪ್ರಕಟಿಸಿದ **ಚಾರ್ಲ್ಸ್ ಇ. ಗೋವರ್** ಈ ಕಾಲಘಟ್ಟದಲ್ಲಿ ಪ್ರಮುಖರಲ್ಲಿ ಒಬ್ಬ. ದಕ್ಷಿಣ ಭಾರತದ ತೆಲುಗು, ತಮಿಳು, ಮಲೆಯಾಳಿ, ಕೊಡಗು, ಬಡಗ ಭಾಷೆಯ ಗೀತೆಗಳೊಂದಿಗೆ **'ಕೆನಾರೀಸ್ ಫೋಕ್ ಸಾಂಗ್ಸ್', 'ಕೊಡವ ಫೋಕ್ ಸಾಂಗ್ಸ್'** ಎಂಬ ಶೀರ್ಷಿಕೆಯಲ್ಲಿ ಹಲವಾರು ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದಾತ. ಜೊತೆಗೆ **ಇಂಡಿಯನ್ ಆ್ಯಂಟಿಕ್ವೇರಿ** ಪತ್ರಿಕೆಯಲ್ಲಿ **'ಕನ್ನಡ ಲಾವಣಿಗಳ ಸಂಗ್ರಹ'** (ಎ ಸೆಲೆಕ್ಷನ್ ಆಫ್ ಕೆನರೀಸ್ ಬ್ಯಾಲಡ್ಸ್–1885) ಎಂಬೊಂದು ಪ್ರಾಸ್ತಾವಿಕ ಲೇಖನವನ್ನು ಬರೆದ. ಗೋವರ್ ಅನಂತರ ಜೆ.ಎಫ್.ಫ್ಲೀಟ್ ಕೆಲವು ಐತಿಹಾಸಿಕ ಕಥನ ಗೀತೆಗಳನ್ನು

ಕನ್ನಡದಲ್ಲಿ ಸಂಗ್ರಹಿಸಿದ. ಒಟ್ಟು 17 ಕಥನ ಗೀತೆಗಳಿವೆ. ಅವುಗಳಲ್ಲಿ ಐದು ಐತಿಹಾಸಿಕ ಕಥನಗೀತೆಗಳು, ಹಾಗೂ ಉಳಿದವು ಆದಾಯ ತೆರಿಗೆ, ಇಂಗ್ಲೆಂಡ್ ದೇಶದ ವೈಭವ ಹಾಗೂ ಬಡ್ಡಿ ವ್ಯವಹಾರ ನಿರತ ಹಳ್ಳಿಯ ಶ್ರೀಮಂತನೊಬ್ಬನ ಕೊಲೆಯಾದ ವಿಷಯವನ್ನು ಒಳಗೊಂಡಿದೆ. **ರೆವರೆಂಡ್ ಎಫ್. ಕಿಟ್ಟೆಲ್** ಕರ್ನಾಟಕದ ಜಾನಪದ ಕ್ಷೇತ್ರಕ್ಕೂ ಕನ್ನಡ ಸಾಹಿತ್ಯ ಕ್ಷೇತ್ರಕ್ಕೂ ಸಲ್ಲಿಸಿದ ಸೇವೆ ಮಹತ್ತರವಾದುದು. ಕಿಟ್ಟೆಲ್‌ನ 'ಓನ್ ದಿ ಡ್ರವೀಡಿಯನ್ ಎಲಿಮೆಂಟ್ ಇನ್ ಸಾನ್‌ಸ್ಕೃತ್ ಡಿಕ್ಷಣರೀಸ್' (1872) ಎಂಬ ಸಂಶೋಧನಾತ್ಮಕ ಲೇಖನಗಳನ್ನೊಳಗೊಂಡ ಕೃತಿ ಹಾಗೂ **'ಶಬ್ದಾರ್ಥ ಕೋಶ'** (1884) ಇಂದಿಗೂ ಅಮೂಲ್ಯ ಕೊಡುಗೆಯಾಗಿದೆ. ಕನ್ನಡ ಜಾನಪದದ ಮೊದಲ ಘಟ್ಟದ ಬಗೆಗೆ ಇದುವರೆಗೆ ನಡೆದ ಅಧ್ಯಯನಗಳು ಹಲವು. ಅವುಗಳು,

ಜೀ.ಶಂ. ಪರಮಶಿವಯ್ಯ

1967ರಲ್ಲಿ ಜೀ.ಶಂ. ಪರಮಶಿವಯ್ಯನವರ 'ಸ್ವಾತಂತ್ರ್ಯಪೂರ್ವ ಕನ್ನಡ ಜನಪದ ಸಾಹಿತ್ಯ ಸಂಗ್ರಹ' ಲೇಖನ ಪ್ರಕಟವಾಯಿತು. ಲೇಖನದಲ್ಲಿ ಪಾಶ್ಚಾತ್ಯ ಹಾಗೂ ದೇಶಿ ವಿದ್ವಾಂಸರು ಕನ್ನಡ ಜಾನಪದಕ್ಕೆ ಸಲ್ಲಿಸಿದ ಸೇವೆಯ ಕುರಿತು ಚರ್ಚಿಸಲಾಗಿದೆ. "ಕನ್ನಡ ಜಾನಪದ ಸಾಹಿತ್ಯ ಸಂಗ್ರಹಣೆ ಕಳೆದ ಶತಮಾನದಲ್ಲಿ ಆಗಿಯೇ ಇಲ್ಲವೆಂದು ಸೋಗ ವ್ಯಕ್ತಪಡಿಸುತ್ತಾ, ಫ್ಲೀಟ್ ಇಂಡಿಯನ್ ಅಂಟಿಕ್ವೆರಿ ಪತ್ರಿಕೆಯಲ್ಲಿ ಪ್ರಕಟಿಸಿದ ಅಲ್ಪಸ್ವಲ್ಪ ಸಾಹಿತ್ಯವನ್ನು ಬಿಟ್ಟರೆ ಆ ಕ್ಷೇತ್ರ ಸಂಪೂರ್ಣವಾಗಿಯೇ ನಿರ್ಲಕ್ಷಿಸಲ್ಪಟ್ಟಿದೆ ಎನ್ನುತ್ತಾರೆ". "20ನೆಯ ಶತಮಾನದ ಆದಿಭಾಗದಲ್ಲಿ ಎರಡು ಮೂರು ದಶಕಗಳು ಉರುಳಿ ಹೋದರೂ ಕನ್ನಡದಲ್ಲಿ ಜನಪದ ಸಾಹಿತ್ಯವೊಂದಿದೆ ಎನ್ನುವ ವಿಚಾರವೇ ಬಹುಜನಕ್ಕೆ ತಿಳಿಯದಂತೆ ದಿವ್ಯ ನಿರ್ಲಕ್ಷ್ಯವನ್ನು ತೋರಿದರು. ನಾಡಿನ ಮೂಲೆಮೂಲೆಯ ಶಾಸನಗಳನ್ನೆಲ್ಲ ಹುಡುಕಿ-ತಡಕಿ ಪರಿಶೀಲಿಸಲಾಯಿತು. ಅಪಾರ ಓಲೆಯ ಗರಿಯ ಗ್ರಂಥಗಳ ದೊಡ್ಡ ಪರಿಶೋಧನೆಯನ್ನೇ ನಡೆಸಿ ಕನ್ನಡ ಕವಿಚರಿತೆಯನ್ನು ಕಾಣಲು ಸಾಧ್ಯವಾಯಿತು. ಊರು-ಊರಿಗೂ ತಿರುಗಿ ಗಜೆಟಿಯರುಗಳನ್ನು ಹೊರತರಲು ಸಾಧ್ಯವಾಯಿತು. ಆದರೆ ಹಳ್ಳಿಗರ ಬಾಯಲ್ಲಿ ಮಾತ್ರ ಉಳಿದು ಆಧುನಿಕ ನಾಗರಿಕತೆಯ ಪ್ರಭಾವದಿಂದ ಯಾವ ಗಳಿಗೆಯಲ್ಲಿ ಬೇಕಾದರೂ ನಶಿಸಿ ಹೋಗುವ ಸಾಧ್ಯತೆಯಿದ್ದ ಜನಪದ ಸಾಹಿತ್ಯವನ್ನು ಮಾತ್ರ ಉಪೇಕ್ಷಿಸಲಾಯಿತು." (1967, ಪು:43) ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, "ಸ್ವಾತಂತ್ರ್ಯಪೂರ್ವ ಜನಪದ ಸಾಹಿತ್ಯ ಸಂಕಲನಗಳಲ್ಲಿ ಏನೇ ಕೊರತೆಯಿರಲಿ ರಸಜ್ಞರಿಂದ ಸಂಗ್ರಹಿತವಾಗಿ, ಸಂಪಾದಿತವಾಗಿ ಹೊರಬಂದಿರುವ ಆಕೃತಿಗಳೆಲ್ಲವೂ ಆದಷ್ಟು ಒಪ್ಪವಾಗಿ, ಆಕರ್ಷಕವಾಗಿ ಪ್ರಕಟವಾಗಿವೆ. ಬೆರಳೆಣಿಸುವಷ್ಟು

ಕೃತಿಗಳು ಕಣ್ಣಿಗೆ ಕಂಡರೂ ದೊರೆತಿರುವಷ್ಟು ಸಾಹಿತ್ಯದ ಮೌಲ್ಯವೇನು? ಅದರ ಸತ್ವವೇನು? ಎಂದು ನೋಡಿದಾಗ ನಿಜಕ್ಕೂ ಆಶ್ಚರ್ಯವಾಗುತ್ತದೆ. ನವೋದಯ ಕಾಲದಲ್ಲಿ ತಲೆಯೆತ್ತಿಕೊಂಡ ಭಾವಗೀತೆಗಳ ವರ್ಣರಂತ ಪ್ರಪಂಚದಂತೆಯೇ ಜಾನಪದ ಭಾವಗೀತೆಗಳು ತಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಹೆಚ್ಚು ಅರ್ಥಗರ್ಭಿತವಾಗಿ, ಮೋಹಕವಾಗಿ ರಸಿಕರ ಮನಸ್ಸನ್ನು ಸೂರೆಗೊಳ್ಳುತ್ತವೆ. ಇಂಗ್ಲಿಷಿನ ಪ್ರಭಾವದಿಂದ ಕನ್ನಡದಲ್ಲಿ ಭಾವಗೀತೆ ಎನ್ನುವ ಸಾಹಿತ್ಯ ಪ್ರಕಾರವೊಂದು ಹುಟ್ಟಿಕೊಳ್ಳುವ ಪೂರ್ವದಲ್ಲಿ ಎಷ್ಟೋ ವರ್ಷಗಳಿಂದ ಕನ್ನಡದಲ್ಲಿ ಸುಂದರ ಭಾವಗೀತೆಗಳು ಇದ್ದವು ಎನ್ನುವುದಕ್ಕೆ ಅಪೂರ್ವ ಜಾನಪದ ಸಾಹಿತ್ಯ ಸಂಕಲನಗಳನ್ನು ವಿದ್ವಾಂಸರು ನೋಡಬೇಕಾದುದು ಅಗತ್ಯ. 'ಭಾವಗೀತೆ' ಎನ್ನುವ ಹೆಸರು ಆ ಹಾಡುಗಳಲ್ಲಿಲ್ಲವಾದರೂ ಭಾವಗೀತೆಯ ಸರ್ವಲಕ್ಷಣಗಳಿಂದಲೂ ಕೂಡಿರುವ ಜನಪದ ಗೀತೆಗಳ ಕನ್ನಡ ಸಾಹಿತ್ಯ ಭಂಡಾರದ ಅನರ್ಘ್ಯ ರತ್ನಗಳು." (1967, ಅ:49)

1967ರಲ್ಲಿ ಜೀ.ಶಂ. ಪರಮಶಿವಯ್ಯನವರ 'ಜನಪದ ಸಾಹಿತ್ಯ ಸಂಗ್ರಹಣೆಯಲ್ಲಿ ನಮ್ಮ ಹೊಣೆ' ಲೇಖನ ಪ್ರಕಟವಾಯಿತು. ಲೇಖನದಲ್ಲಿ "ಜನಪದ ಸಾಹಿತ್ಯವನ್ನು ವಿಶ್ವಕ್ಕೆ ಮೊದಲು ಪರಿಚಯ ಮಾಡಿಕೊಟ್ಟ ಕೀರ್ತಿ ಪಾಶ್ಚಾತ್ಯ ವಿದ್ವಾಂಸರಿಗೇ ಸಲ್ಲಬೇಕು. ಕಳೆದ ಶತಮಾನದಲ್ಲಿಯೇ ಅಲ್ಲಿಷ್ಟು ಇಲ್ಲಿಷ್ಟು ಭಾರತೀಯ ಜನಪದ ಸಾಹಿತ್ಯ ಸಂಗ್ರಹಿತವಾಗುವ ಸೌಭಾಗ್ಯ ಒದಗಿ ಬಂದು, ಭಾರತ ಜನಪದ ಸಾಹಿತ್ಯದ ತವರು ಎಂಬ ಕೀರ್ತಿಗೆ ಭಾಜನವಾಯಿತು. ಅಪೂರ್ವ ಗಾದೆಗಳೂ ಕಥೆಗಳೂ ಗೀತೆಗಳೂ ಇಂಗ್ಲಿಷಿಗೆ ಅನುವಾದಿತವಾದವು. ಭಾರತೀಯ ವಿದ್ವಾಂಸರನೇಕರು ತಮ್ಮ ತಾಯಿ ನಾಡಿನ ಸಂಪತ್ತಿನ ಕಡೆ ದೃಷ್ಟಿ ಹರಿಸಿ ಸಂಗ್ರಹಕಾರ್ಯದ ವಿಶಿಷ್ಟ ಹೊಣೆಯನ್ನು ಹೊತ್ತರು. ಆದರೆ ಕಾಶ್ಮೀರ, ರಾಜಸ್ಥಾನ, ಬಂಗಾಳ, ಅಸ್ಸಾಂ ಮುಂತಾದ ಕೆಲವು ಉತ್ತರದ ರಾಜ್ಯಗಳಲ್ಲಿ ನಡೆದ ಕೆಲಸ ದಕ್ಷಿಣ ಭಾರತದಲ್ಲಿ ನಡೆಯಲಿಲ್ಲ. ಕರ್ನಾಟಕದಲ್ಲಿಯಂತೂ ಕ್ಷೇತ್ರ ನಿರ್ಲಕ್ಷಿತವಾಗಿಯೇ ಉಳಿಯಿತು. ಏನಿದ್ದರೂ ಗೀತ ಸಾಹಿತ್ಯದಲ್ಲಿ ಮಾತ್ರ ಗಣನೀಯ ಸಾಧನೆಯನ್ನು ಕೆಲವು ಉತ್ಸಾಹಿ ಕಾರ್ಯಕರ್ತರು ತೋರಿದ್ದಾರೆ." (1977:153–154) "ಜೊತೆಗೆ ಕನ್ನಡ ಜನಪದ ಗೀತೆಗಳ ಸಂಗ್ರಹಕಾರ್ಯ 3–4 ದಶಕಗಳ ಹಿಂದೆಯೇ ಕರ್ನಾಟಕದಲ್ಲಿ ಆರಂಭವಾಯಿತು. ಮಾಸ್ತಿ, ಬೇಂದ್ರೆ, ಬಿ.ಎಂ.ಶ್ರೀ ಮೊದಲಾದ ಕವಿವರ್ಯರು ಜನಪದ ಸಾಹಿತ್ಯದ ಸತ್ವವನ್ನು ಕುರಿತು ಅಲ್ಲಲ್ಲಿ ಬರೆದು, ಮುಂದಿನ ಕಾರ್ಯಕರ್ತರಿಗೆ ಉತ್ಸಾಹ ತುಂಬಿದರು. ಈ ರೀತಿಯ ಪ್ರೋತ್ಸಾಹದಿಂದಾಗಿ ಸುಮಾರು 2 ಗೀತಗಳ ಸಂಕಲನಗಳು ಪ್ರಕಟವಾದುವು. ಸ್ವಾತಂತ್ರ್ಯಪೂರ್ವದಲ್ಲಿ ಹೀಗೆ ಆರಂಭವಾದ ಸಾಹಿತ್ಯ ಸಂಗ್ರಹ ಯಾತ್ರೆ ಸಾಕಷ್ಟು ಮಂದಗತಿಯಲ್ಲೇ ಸಾಗಿ 1946ರ ವೇಳೆಗೆ ಪ್ರಕಟವಾದ

ಮತಿಘಟ್ಟ ಸಹೋದರರ **'ನಾಡಪದಗಳು'** ಕೃತಿಯ ಮೂಲಕ ಒಂದು ಘಟ್ಟವನ್ನು ಮುಟ್ಟಿತು. ಹೀಗೆ ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾರಂಭವಾದ ಸಂಗ್ರಹಕಾರ್ಯವು ಸ್ವಾತಂತ್ರ್ಯ ನಂತರದಲ್ಲೂ ಮುಂದುವರಿಯಿತು. ಕನ್ನಡ ಜನಪದ ಸಾಹಿತ್ಯ ಸಂಗ್ರಹಣೆ, ಪ್ರಕಟನೆ ಉತ್ತಮ ಸ್ಥಿತಿಯನ್ನು ಕಂಡುದುದು ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಮಾತ್ರ" (1967,ಆ:158) ಎಂದು ಅಭಿಪ್ರಾಯಪಟ್ಟಿದ್ದಾರೆ. ಕನ್ನಡ ಜಾನಪದ ಸಂಗ್ರಹಗಳ ವೈಜ್ಞಾನಿಕ ಕ್ಷೇತ್ರಕಾರ್ಯದ ಕಡೆಗೆ ಗಮನಹರಿಸಿ ಮೊದಲ ಘಟ್ಟದ ಕೆಲಸಗಳ ಬಗೆಗೆ ಹೆಮ್ಮೆ ಪಡುವುದರೊಂದಿಗೆ ವ್ಯಾಪಕವಾದ ಸಂಗ್ರಹಗಳಿಗೆ ಮೊದಲ ಘಟ್ಟದಲ್ಲಿ ಅವಕಾಶ ಆಗಿಲ್ಲವೆಂದು ಹೇಳಿದ್ದಾರೆ.

1969ರಲ್ಲಿ ಜೀ.ಶಂ. ಪರಮಶಿವಯ್ಯನವರ **'ಜಾನಪದ ಅಧ್ಯಯನ'** ಲೇಖನ ಪ್ರಕಟವಾಯಿತು. "ಕನ್ನಡ ಜಾನಪದ ಸಂಗ್ರಹ ಹಾಗೂ ಅಧ್ಯಯನಗಳ ಐತಿಹಾಸಿಕ ವಿವೇಚನೆಯನ್ನು ನಡೆಸುವಾಗ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಎಂದು ಎರಡು ಪ್ರಮುಖ ವಿಭಾಗಗಳನ್ನು ಮಾಡಿಕೊಳ್ಳಬಹುದು" ಎನ್ನುತ್ತಾರೆ. "ಸ್ವಾತಂತ್ರ್ಯ ಕಾಲವನ್ನು ನಿರ್ದೇಶಿಸುವ ಒಂದು ಗಡಿಯ ಗೆರೆ ಮಾತ್ರ. ಏಕೆಂದರೆ ಕನ್ನಡ ಜಾನಪದ ಕ್ಷೇತ್ರದ ಯಾವುದೇ ಪ್ರಮುಖವಾದ ಘಟ್ಟವನ್ನು ಅದು ಗುರುತಿಸುವುದಿಲ್ಲ. ಸ್ವಾತಂತ್ರ್ಯಕ್ಕೆ ಮೊದಲು ಹಾಗೂ ಅನಂತರದ ದಿನಗಳ ಸಂಗ್ರಹ ಹಾಗೂ ಅಧ್ಯಯನಗಳನ್ನು ಗಮನಿಸಿದಾಗ ಅಂಥ ಮಹತ್ವಪೂರಿತ ಬದಲಾವಣೆ ಎದ್ದು ತೋರುವುದಿಲ್ಲ. ಜನಪದ ಸಾಹಿತ್ಯಕ್ಕೆ ವಿಶೇಷವಾಗಿ ಗೀತ ಸಾಹಿತ್ಯಕ್ಕೆ ಸೀಮಿತವಾದಂತೆ ನಡೆದ ಕಾರ್ಯವನ್ನು ಗಮನಿಸಿದಾಗ ಕನ್ನಡದಲ್ಲಿ ಜಾನಪದ ಅಧ್ಯಯನ ಎನ್ನುವುದು ಇನ್ನೂ ತನ್ನ ಶೈಶವದ ದಿನಗಳನ್ನು ದಾಟಿಲ್ಲ ಎನ್ನುವ ಮಾತು ನೆನ್ನೆ ಮೊನ್ನೆಯವರೆಗೂ ಅನ್ವಯವಾಗುತ್ತಿತ್ತು." (1969 ಇ:491)

"ಕಾಲದ ದೃಷ್ಟಿಯಿಂದ ವಿಭಜಿಸಿಕೊಂಡು ಹೆಮ್ಮೆ ಪಡಬಹುದಾದಷ್ಟು ವಿಪುಲ ಸಾಹಿತ್ಯ ಇನ್ನೂ ಬೆಳಕು ಕಾಣಬೇಕು. ಜಾನಪದದ ಒಂದು ಶಾಖೆಯನ್ನು ಮಾತ್ರ ಪ್ರತಿನಿಧಿಸುವ ಗೀತ ಸಂಕಲನಗಳು ಅಷ್ಟಿಷ್ಟು ಪ್ರಕಟವಾಗಿದ್ದರೂ ಸುಸಂಬದ್ಧತೆ ಶಾಸ್ತ್ರೀಯ ದೃಷ್ಟಿ, ದಕ್ಷಸಂಪಾದನೆ ಎಷ್ಟು ಕೃತಿಗಳಲ್ಲಿ ಕಂಡುಬರುತ್ತದೆ ಎನ್ನುವುದು ದೊಡ್ಡ ಸಮಸ್ಯೆ. ಸಂಗ್ರಹ ಕಾರ್ಯದಲ್ಲಿ, ಪ್ರಕಟಣೆಯಲ್ಲಿ, ಪ್ರಸಾರದಲ್ಲಿ ಅನೇಕ ನ್ಯೂನ್ಯತೆಗಳನ್ನು ಬಹುಪಾಲು ಕೃತಿಗಳಲ್ಲಿ ತೋರುವ ಸಾಧ್ಯತೆ ಇದ್ದೂ ಕೆಲವು ಉತ್ತಮ ಸಂಕಲನಗಳನ್ನು ಕೆಲವರ ಸಾಧನೆ, ಸಾಹಸಗಳನ್ನು ಮರೆಯುವಂತಿಲ್ಲ."(1969 ಇ:492) ಅಧ್ಯಯನವನ್ನು ಗೀತೆ, ಕಥನಗೀತೆ, ಜನಪದ ಕಥೆ ಹಾಗೂ ಗಾದೆ, ಒಗಟುಗಳು ಎಂಬುದಾಗಿ ಮೂರು ಭಾಗಗಳಾಗಿ ವರ್ಗೀಕರಿಸಿಕೊಂಡಿದ್ದಾರೆ. ವರ್ಗೀಕರಣದಲ್ಲಿ ಆಯಾ ಕಾಲಘಟ್ಟದಲ್ಲಿ (ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಘಟ್ಟದಲ್ಲಿ) ಪ್ರಕಟವಾದಂತಹ

ಸಂಕಲನಗಳನ್ನು ಗುರುತಿಸಲಾಗಿದೆ. ಇಂಥಹ ಸಂಗ್ರಹಕಾರರಲ್ಲಿ "ಸಂಗ್ರಹಿಸಿದ ಸಾಹಿತ್ಯವನ್ನು ಕೃತಿಯಾಗಿ ಪ್ರಕಟಿಸಿರುವವರು, ಸಂಗ್ರಹಿಸಿರುವ ಸಾಹಿತ್ಯವನ್ನು ಅಲ್ಲಲ್ಲಿ ಲೇಖನಗಳ ಮೂಲಕ ಪರಿಚಯಿಸಿರುವವರು, ಸಂಗ್ರಹಿಸಿರುವ ಸಾಹಿತ್ಯವನ್ನು ಲೇಖನ ರೂಪದಲ್ಲಾಗಲೀ, ಹಾಗೂ ಕೃತಿ ರೂಪದಲ್ಲಾಗಲೀ ಪ್ರಕಟಿಸದಿರುವವರು" (1969:513) ಎಂಬುದಾಗಿ ಮೂರು ವರ್ಗಗಳನ್ನು ಮಾಡಿಕೊಳ್ಳಬಹುದು ಎಂದು ಗುರುತಿಸುತ್ತಾರೆ.

1979ರಲ್ಲಿ ಜೀ.ಶಂ.ಪರಮಶಿವಯ್ಯನವರ **'ಜಾನಪದ'** ಕೃತಿಯಲ್ಲಿ **'ಕರ್ನಾಟಕ ಜಾನಪದ ಅಧ್ಯಯನದ'** ಪ್ರಬಂಧ ಪ್ರಕಟವಾಯಿತು. ಲೇಖನದಲ್ಲಿ ಕನ್ನಡ ಜಾನಪದವನ್ನು 1800ರಿಂದ 1900ರವರೆಗೆ : ಆರಂಭಯುಗ, 1900ರಿಂದ 1947ರ ವರೆಗೆ : ನವೋದಯ ಯುಗ, 1948ರಿಂದ 1966ರ ವರೆಗೆ: ಪೂರಕ ಯುಗ, ಹಾಗೂ 1967 ರಿಂದ ಈವರೆಗೆ : ವೈಜ್ಞಾನಿಕ ಯುಗ ನಾಲ್ಕು ಯುಗಗಳಲ್ಲಿ ವರ್ಗೀಕರಿಸಿಕೊಂಡಿದ್ದಾರೆ. ಅವರ ಪ್ರಕಾರ, "ವರ್ಗೀಕರಣ ನಾಲ್ಕು ಯುಗಗಳಲ್ಲಿ ಆರಂಭಯುಗ ಕಾಲದ ದೃಷ್ಟಿಯಿಂದ ತುಂಬಾ ವಿಸ್ತಾರವಾದರೂ 19ನೆಯ ಶತಮಾನದ ಹಾಗೂ ಇಪ್ಪತ್ತನೆಯ ಶತಮಾನದ ಆದಿಭಾಗದವರೆಗೆ ಎಲ್ಲಾ ಕ್ಷೇತ್ರಗಳ ಅಧ್ಯಯನವೂ ರೂಪುಗೊಳ್ಳುತ್ತಿತ್ತು. ಹಾಗೂ 19ನೆಯ ಶತಮಾನದ ಜಾನಪದ ಕೃತಿಗಳನ್ನು ಪರಿಗಣಿಸುವಾಗ ಆ ಅವಧಿಯಲ್ಲಿ ಪ್ರಕಟವಾದ ಕೆಲವು ಅತ್ಯುತ್ತಮ ಲೇಖನಗಳನ್ನು ಉಪೇಕ್ಷಿಸುವಂತಿಲ್ಲ. ಕಿಟ್ಟೆಲ್, ಮೆಕೆಂಝಿ, ನರಸಿಂಹಯ್ಯಂಗಾರ್ ಮುಂತಾದವರು ಇಂಡಿಯನ್ ಆಂಟಿಕ್ವೇರಿ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟಿಸಿದ ಲೇಖನಗಳು ಮಹತ್ವವಾದುವು. ಭೂತಾರಾಧನೆ ಸ್ಮಾರಕ ಕಲೆಗಳು, ಮೊರಸು ಒಕ್ಕಲಿಗರು, ಕುಲವಾಡಿಗರು ಮೊದಲಾದ ಅನೇಕ ಉಪಯುಕ್ತ ವಿಷಯಗಳ ಮೇಲೆ ಜಾನಪದ ಲೇಖನಗಳು ಆಗಾಗ ಕಾಣುತ್ತಲೇ ಇದ್ದವು."(1979:69)

ಮೊದಲ ಘಟ್ಟದಲ್ಲಿ ಪ್ರಕಟವಾದ ಬಹುಮುಖ್ಯವಾದ 10 ಸಂಕಲನಗಳು "ಕಾಲದೃಷ್ಟಿ, ಸಾಹಿತ್ಯಕ ಮೌಲ್ಯ ಹಾಗೂ ಸಂಗ್ರಾಹಕರು, ಸಂಪಾದಕರು – ಅವುಗಳನ್ನು ಕಲೆಹಾಕುವಲ್ಲಿ ತೋರಿರುವ ಅನನ್ಯ ಶ್ರದ್ಧೆ"(1979:74) ದೃಷ್ಟಿಯಿಂದ ಕನ್ನಡ ಜನಪದ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ಉಲ್ಲೇಖಕ್ಕೆ ಕಾರಣವಾಗಿವೆ.

1985ರಲ್ಲಿ ಜೀ ಶಂ ಪರಮಶಿವಯ್ಯನವರ 'ಜಾನಪದ ಅಧ್ಯಯನ ರೂಪುಗೊಳ್ಳುವ ಬಗೆ' ಲೇಖನ ಪ್ರಕಟವಾಯಿತು. "ಹತ್ತೊಂಬತ್ತನೆಯ ಶತಮಾನದ ಮೊದಲ ಎರಡು ದಶಕಗಳಲ್ಲಿ ಜಾನಪದದ ಬಗೆಗೆ ಹೆಚ್ಚು ಆಸಕ್ತಿ ಕಂಡು ಬಂದಂತೆ ತೋರುವುದಿಲ್ಲ. ಶ್ರೀಕಂಠೇಗೌಡ, ಎಂ.ಎಸ್. ಪುಟ್ಟಣ್ಣ, ಹನುಮಂತಪ್ಪ ಗೌಡ, ಉತ್ತಂಗಿ ಚನ್ನಪ್ಪ ಮೊದಲಾದವರು ತಕ್ಕಮಟ್ಟಿಗಿನ ಕೆಲಸ ಮಾಡಿದರೂ ಜಾನಪದವನ್ನು ನೇರವಾಗಿ

ಸಂಗ್ರಹಿಸಿ ಸ್ವತಂತ್ರ ಸಂಕಲನಗಳನ್ನು ಯಾರೂ ತಂದಂತೆ ಕಂಡು ಬರುವುದಿಲ್ಲ. ಆದುದರಿಂದ ಈ ಅವಧಿಯನ್ನು 'ನಮ್ಮ ಜಾನಪದ ಅಧ್ಯಯನದ ಬರಡುಗಾಲ' ಎಂದು ಕರೆಯಬಹುದು ಹಾಗೂ ಆವರು ಮುಂದುವರಿದು 1930ರ ಈಚಿನ ಅವಧಿ ನಮ್ಮ ಜಾನಪದ ಸಾಹಿತ್ಯದ ದೃಷ್ಟಿಯಿಂದ ಬಹುಮಹತ್ವದ ಸುಗ್ಗಿಯನ್ನು ತಂದಿತು ಎನ್ನಬಹುದು. ಇದಕ್ಕೆ ಬಹುಮಟ್ಟಿಗೆ ಕಾರಣರಾದವರು ವಿಜಾಪುರ ಜಿಲ್ಲೆಯ ವಿದ್ವಾಂಸರು. ಹಲಸಂಗಿ ಚೆನ್ನಮಲ್ಲಪ್ಪ, ರೇವಪ್ಪ ಹಾಗೂ ಲಿಂಗಪ್ಪ" (ಮಧುರಚೆನ್ನ ಕಾಪಸೆ ರೇವಪ್ಪ ಹಾಗೂ ಸಿಂಪಿ ಲಿಂಗಣ್ಣ) ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನು ಕೊಟ್ಟರು. ಬಿಜಾಪುರ ಜಿಲ್ಲೆಯ ತದ್ದೇವಾಡ ಪ್ರಾಂತದ ಹಾಡುಗಳನ್ನೊಳಗೊಂಡ **'ಗರತಿಯ ಹಾಡು', 'ಮಲ್ಲಿಗೆ ದಂಡೆ', 'ಜೀವನ ಸಂಗೀತ'** – ಮೂರು ಸಂಕಲನಗಳು 1931ರಿಂದ 1935ರ ಅವಧಿಯಲ್ಲಿ ಪ್ರಕಟಗೊಂಡು ಕರ್ನಾಟಕದಾದ್ಯಂತ ಜನಪದ ಸಾಹಿತ್ಯದ ಪರಿಮಳ ಹರಿದಾಡಿ ಉತ್ಸಾಹ, ಆಸಕ್ತಿಗಳು ಬೆಳೆಯಲೂ ಕಾರಣವಾಯಿತು" (1985:26) ಎಂದು ಹೇಳಿದ್ದಾರೆ.

ಡಿ.ಕೆ. ರಾಜೇಂದ್ರ

1970ರಲ್ಲಿ ಡಿ.ಕೆ. ರಾಜೇಂದ್ರರ 'ಕಳೆದ ಶತಮಾನದ ಜಾನಪದ ಸಂಗ್ರಹಕಾರರು' ಲೇಕನದಲ್ಲಿ ಕನ್ನಡ ಜಾನಪದ ಕ್ಷೇತ್ರದಲ್ಲಿ ಸೇವೆಸಲ್ಲಿಸಿದ ಗೋವರ್, ಕಿಟ್ಟೆಲ್, ಫ್ಲೀಟ್ ಮೂವರು ಆಂಗ್ಲ ವಿದ್ವಾಂಸರನ್ನು ಪರಿಚಯಿಸಲಾಗಿದೆ. "ನಮ್ಮ ನಾಡಿನ ಜಾನಪದ ಕ್ಷೇತ್ರದಲ್ಲಿ ಕೈ ಹಾಕಿದ ವ್ಯಕ್ತಿಗಳಲ್ಲಿ ಆಂಗ್ಲರು ಮೊದಲಿಗರು. ಅವರ ಸಂಗ್ರಹ ದೃಷ್ಟಿ ಸೀಮಿತದಲ್ಲಿ ಗಮನಿಸಬೇಕಾದ ಕೆಲವು ಅಂಶಗಳನ್ನು ಅರಿವು ಮಾಡಿಕೊಟ್ಟಿದ್ದಾರೆ." (1970ಅ:1)

1871ರಲ್ಲಿ ಪ್ರಕಟವಾದ **ಚಾರ್ಲ್ಸ್ ಇ. ಗೋವರ್**ನ 'ಫೋಕ್‌ಸಾಂಗ್ಸ್ ಆಫ್ ಸೌತ್ ಇಂಡಿಯಾ' ಕೃತಿಯ ಬಗ್ಗೆ ಬರೆಯುತ್ತಾ – "ದಕ್ಷಿಣ ಭಾರತದ ಹಲವು ಭಾಷೆಗಳ ಸಾಲಿನಲ್ಲಿ **'ಕೆನರೀಸ್ ಫೋಕ್‌ಸಾಂಗ್ಸ್'** ಎಂಬ ಶೀರ್ಷಿಕೆಯಲ್ಲಿ ಅನೇಕ ದಾಸರಪದಗಳನ್ನು ಜನಪದ ಗೀತೆಗಳು ಎಂದು ಭ್ರಮಿಸಿ ಇವರು ಸಂಗ್ರಹಿಸಿದ್ದಾರೆ. ಇವರ ದೃಷ್ಟಿ ಜಾನಪದವನ್ನೇ ಕುರಿತಾದರೂ ಇವರು ಸಂಗ್ರಹಿಸಿದ್ದು ಮಾತ್ರ ದಾಸರ ಪದಗಳನ್ನು. ಆದರೆ ಜಾನಪದವನ್ನು ಸಂಗ್ರಹಿಸುವ ಒಂದು ಗೀಳಿಗೆ ನಾಂದಿಯನ್ನು ಹಾಡಿದ ಕೀರ್ತಿ ಇವರಿಗೆ ಸಲ್ಲಬೇಕಾಗುತ್ತದೆ. ಹಾಗೂ ಇವುಗಳನ್ನು ಹಾಡುವವರು ಹಾಗೂ ರಚಿಸಿದವರು ಒಂದು ಗೊತ್ತಾದ ವರ್ಗಕ್ಕೆ ಸೇರಿದವರು." (1970ಅ:3–1).

ಮೊತ್ತಮೊದಲ ಬಾರಿಗೆ ಅಪಾರ ಸಂಖ್ಯೆಯಲ್ಲಿ ಗಾದೆಗಳನ್ನು ಸಂಗ್ರಹಿಸಿ ಈ ರೂಪದಲ್ಲಿ ಬೆಳಕಿಗೆ ತಂದ ಕೀರ್ತಿ ರೆ। ಫರ್ಡಿನಂಡ್ ಕಿಟ್ಟೆಲ್ ಅವರಿಗೆ ಸಲ್ಲುತ್ತದೆ.

ತಮ್ಮ ಕನ್ನಡ ಪದಕೋಶದಲ್ಲಿ ಗಾದೆಗಳ ಬಳಕೆಯ ಕಾರಣವನ್ನು ಹೀಗೆ ತಿಳಿಸುತ್ತಾರೆ. "ಇಲ್ಲಿಯ ಬಹುತೇಕ ಪದಗಳ ಅರ್ಥವನ್ನು ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಲೇಖಕರ ಕೃತಿಗಳ ನಿದರ್ಶನಗಳಿಂದ ಮಾತ್ರವಲ್ಲದೆ, ಗಾದೆಗಳಿಂದಲೂ ವಿವರಿಸಲಾಗಿದೆ ಎಂದಿದ್ದಾರೆ. ಗಾದೆಗಳನ್ನು ಸಂಗ್ರಹಿಸುವಲ್ಲಿ ಹೀಗೆ ಅವರ ದೃಷ್ಟಿಕೋನವೇ ಬೇರೆಯಾಗಿದ್ದರೂ ಒಂದಲ್ಲ ಒಂದು ರೀತಿಯಲ್ಲಿ ಜಾನಪದಕ್ಕಾಗಿ ದುಡಿದಿದ್ದಾರೆ". (1970ಅ:8–9)

ಜಾನ್ ಎಫ್. ಫ್ಲೀಟ್ ಲಾವಣಿ ಸಂಗ್ರಹಗಳ ಬಗ್ಗೆ ಬರೆಯುತ್ತಾ, "ಎಲ್ಲಾ ಲಾವಣಿಗಳೂ ಇಂಗ್ಲಿಷರನ್ನು ಕುರಿತು ಅವರ ದೌರ್ಜನ್ಯವನ್ನು ಕುರಿತಾದುವುಗಳು. ಮತ್ತೆ ಕೆಲವು ಇತರ ವಿಷಯಕ್ಕೆ ಸಂಭಂದಿಸಿದವುಗಳಾಗಿವೆ. ಜನತೆಯ ಮನ್ನಣೆ ಎಂಥದು ಎಂಬುದನ್ನು ಅರಿಯುವ ಉದ್ದೇಶ ಇರಬಹುದು. ಇದರಿಂದಾಗಿ ಅಪೂರ್ವವಾದ ಇತರ ಅನೇಕ ಜಾನಪದ ಭಾಗಗಳನ್ನು ಗಮನಿಸದೆ ಹೋಗಿದ್ದಾರೆ. ಇವರು ಸಂಗ್ರಹಿಸಿರುವ ಲಾವಣಿಗಳ ಇನ್ನೊಂದು ವೈಶಿಷ್ಟ್ಯವೆಂದರೆ ರಚಿತವಾದ ಕೆಲವೇ ದಿನಗಳಲ್ಲಿ ಇವುಗಳನ್ನು ಸಂಗ್ರಹಿಸುವುದರಿಂದ ಅವುಗಳೆಲ್ಲ ಶುದ್ಧ ರೂಪದಲ್ಲಿ ಉಳಿದಿರಲು ಸಾಧ್ಯ" ಎಂದು ವಿಮರ್ಶಿಸಿದ್ದಾರೆ. (1970ಅ:5)

1970ರಲ್ಲಿ ಪ್ರಕಟವಾದ **ಡಿ.ಕೆ.ರಾಜೇಂದ್ರರ 'ಶತಮಾನದ ಆದ್ಯ ಜಾನಪದ ಸಂಗ್ರಹಕಾರರು'** ಸ್ವಾತಂತ್ರ್ಯಪೂರ್ವ ಘಟ್ಟದಲ್ಲಿ ಕನ್ನಡ ಜಾನಪದದ ಕುರಿತಾಗಿ ಬಂದ ಅಧ್ಯಯನಗಳನ್ನು ಗುರುತಿಸಲಾಗಿದೆ. "ಜನಾಂಗದ ಜೀವಾಳ, ಜಾನಪದ, ಜನತೆಯ ಸಂಸ್ಕೃತಿ ಜಾನಪದದಲ್ಲಿ ಅಡಗಿದೆ. ಅದರ ಒಡಲನ್ನು ಬೇಧಿಸದೆ ನಮ್ಮ ಜನತೆಯ ಗತ ವೈಭವವನ್ನು ಸಂಸ್ಕೃತಿಯ ತಿರುಳನ್ನು ತಿಳಿಯಲು ಸಾಧ್ಯವಿಲ್ಲ ಎಂಬುದನ್ನು ಯಾರು ಅರಿತುಕೊಂಡಂತೆ ಕಂಡು ಬರುವುದಿಲ್ಲ." (1970ಆ:10) ಎಂದು ವಿವರಿಸುತ್ತಾರೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 'ಕನ್ನಡ ನಾಡಿನ ಲಾವಣಿ ಸಾಂಗತ್ಯ' (1919) ಲೇಖನವನ್ನು ಹಾಗೂ 'ಗರತಿಯ ಹಾಡು' (1931) 'ಜೀವನ ಸಂಗೀತ' (1933) ಹಾಗೂ ವಿ.ವೆ.ತೊರ್ಕೆಯವರ 'ಹಳ್ಳಿಯ ಹಾಡುಗಳು' (1933) ಸಂಕಲನಗಳ ಮುನ್ನುಡಿ ಭಾಗಗಳ ಚರ್ಚೆಯಿದೆ.

"ಇಪ್ಪತ್ತನೆಯ ಶತಮಾನದ ಮೊದಲ 2–3 ದಶಕಗಳಲ್ಲಿನ ಸಂಗ್ರಹಕಾರ್ಯ ಹಾಗೂ ಅದರ ಸಂರಕ್ಷಣೆಯ ಕಾರ್ಯ ಪ್ರಮಾಣದಲ್ಲಿ ನಡೆಯಿತಾದರೂ, ಇದಕ್ಕೊಂದು ಐತಿಹಾಸಿಕ ಮಹತ್ವವಿದೆ. ಈ ಅವಧಿಯಲ್ಲಿ ಕೆಲವೇ ಮಂದಿ ಇದರಲ್ಲಿ ಭಾಗವಹಿಸಿದರೂ ವೈವಿಧ್ಯ ಪೂರ್ಣವಾದ ರೀತಿಯಲ್ಲಿ ಸಂಗ್ರಹಕಾರ್ಯ ನಡೆಸಿದ್ದಾರೆ. ಜನತೆಯಿಂದ

ಕಣ್ಮರೆಯಾಗುತ್ತಿದ್ದ ಜನಪದ ಅರಿವು ಮತ್ತೆ ಚೇತನಗೊಳ್ಳಲು ಶ್ರಮಿಸಿದ್ದಾರೆ. ನಿಷ್ಠೆಯಿಂದ ಹಾಗೂ ನಿಷ್ಪೃಹತೆಯಿಂದ ದುಡಿದಿದ್ದಾರೆ. ಮನೆಮನೆಗೆ ಸುತ್ತಿ ಪ್ರಚಾರ ಮಾಡಿದ್ದಾರೆ. ಜಾನಪದ ಜೀರ್ಣೋದ್ಧಾರ ಕಾರ್ಯದಲ್ಲಿ ಪ್ರಚಾರ ಕಾರ್ಯ ಮುಖ್ಯ ಎಂಬುದನ್ನು ತೋರಿಸಿದ್ದಾರೆ." (1970ಆ:15–16) ಮೊದಲ ಘಟ್ಟದಲ್ಲಿ ಕನ್ನಡ ಜಾನಪದ ಸಂಗ್ರಹಕ್ಕೆ ತೊಡಗಿದವರ ಪ್ರವೃತ್ತಿಯನ್ನು ಲೇಖಕರು ಗುರುತಿಸಿದ್ದಾರೆ. ಕಳೆದ ಶತಮಾನದಲ್ಲಿ ವಿದೇಶೀ ವಿದ್ವಾಂಸರೂ ಶತಮಾನದಲ್ಲಿ ದೇಶೀ ವಿದ್ವಾಂಸರು ಸಂಗ್ರಹಕ್ಕೆ ತೊಡಗಿದರು.

ನಂ.ತಪಸ್ವೀಕುಮಾರ್

1972ರಲ್ಲಿ ನಂ. ತಪಸ್ವೀಕುಮಾರ್‌ರ **'ಗಾದೆಗಳ ಸಂರಕ್ಷಣೆ'** ಎಂಬ ಕೃತಿಯಲ್ಲಿ ಪಾಶ್ಚಾತ್ಯ ಹಾಗೂ ದೇಸೀ ವಿದ್ವಾಂಸರು ಮಾಡಿದ ಕೆಲಸವನ್ನು ಸಮೀಕ್ಷೆ ಮಾಡಲಾಗಿದೆ. ಪ್ರಪಂಚದಾದ್ಯಂತ ಗಾದೆಗಳ ಸಂಗ್ರಹಕಾರ್ಯ ಪ್ರಾಚೀನ ಭಾಷೆಯಲ್ಲಿ **'ತಲುಮೇಲು ನಾನ್ನೂರು'** ಎಂಬ ಗಾದೆ ಸಂಗ್ರಹ ಕ್ರಿ.ಶ.ದ ಆರಂಭದಲ್ಲೇ ಬಂದಿದೆ. ಕನ್ನಡದಲ್ಲಿ ಬಾಸೆಲ್ ಮಿಶನ್ನಿನವರು ಸಂಗ್ರಹಿಸಿದ **'ತುಳು ಗಾದೆಗಳ ಸಂಗ್ರಹ',** ಕಿಟ್ಟೆಲ್‌ಕೋಶದ 4,260 ಕನ್ನಡ ಗಾದೆಗಳು **'ಕರ್ನಾಟಕ ಲೋಕೋಕ್ತಿ ನಿಧಾನ'** (1912) ಎಂಬ ಗ್ರಂಥವಾಗಿ ಪ್ರಕಟವಾಗಿದೆ.

1979ರಲ್ಲಿ ತಪಸ್ವೀಕುಮಾರ್‌ರ 'ಕನ್ನಡ ಒಗಟುಗಳ ಅಧ್ಯಯನದ ಹಿನ್ನೆಲೆ' ಲೇಖನದಲ್ಲಿ 1920ಕ್ಕಿಂತ ಹಿಂದೆಯೇ ಒಗಟುಗಳ ಮಹತ್ವ, ಭಾರತೀಯ ಹಾಗೂ ಪಾಶ್ಚಾತ್ಯ ವಿದ್ವಾಂಸರ ಗಮನಹರಿಸಿರುವುದನ್ನು, ಶಂ.ಬಾ.ಜೋಶಿಯವರ **'ಮಕ್ಕಳ ಒಡಪು'** (1940) ಕೃತಿಯಲ್ಲಿ 214 ಒಗಟುಗಳನ್ನು, ದೇವುಡು ನರಸಿಂಹಶಾಸ್ತ್ರಿಯವರ 'ಕರ್ನಾಟಕ ಸಂಸ್ಕೃತಿ' ಕೃತಿಯ ಕನ್ನಡ ಒಗಟುಗಳ ಉದ್ಧರಣೆಗಳನ್ನು ಗಮನಿಸಲಾಗಿದೆ. **ಶಂ.ಬಾ.ಜೋಶಿಯವರು** ಹಾಗೂ **ದೇವುಡು** ಮೊದಲಾದ ಸ್ವಾತಂತ್ರ್ಯ ನಂತರದ ಸುಮಾರು 12 ಸಂಕಲನಗಳನ್ನು ಗಮನಿಸಿದ್ದಾರೆ.

1981ರಲ್ಲಿ ನಂ. ತಪಸ್ವೀಕುಮಾರ್ ಅವರ 'ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ' ಕೃತಿಯಲ್ಲಿ 1980ರ ಕೊನೆಯವರೆಗೆ ಜಗತ್ತಿನಲ್ಲಿ ವಿಶೇಷವಾಗಿ ಕನ್ನಡದಲ್ಲಿ ಜಾನಪದ ಅಧ್ಯಯನ ನಡೆದು ಬಂದ ದಾರಿ ಹಾಗೂ ಜನಪದ ವಿಜ್ಞಾನದ ಗೊತ್ತುಗುರಿಗಳನ್ನು ಸ್ಥೂಲವಾಗಿ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. "ಜಾನಪದ ಅಧ್ಯಯನದ ಇತಿಹಾಸ ಮಂಜುಗವಿದು ಮರೆಯಾಗಿಯೇ ಉಳಿದು ಬಂದಿದೆ." **ರಿಚರ್ಡ್ ಎಂ. ಡಾರ್ಸನ್,** ಬ್ರಿಟಿಷ್ ಜಾನಪದ ತಜ್ಞರು ಕ್ಷೇತ್ರ ಸೇವೆಯನ್ನು ನಡೆಸಿದ ಬಗೆಯನ್ನು ಗುರುತಿಸಿ **'ಬ್ರಿಟಿಷ್ ಫೋಕ್‌ಲೋರಿಸ್ಟಿಕ್ಸ್: ಹಿಸ್ಟರಿ'** ಎಂಬ ಉಪಯುಕ್ತ ಬೃಹತ್ ಕೃತಿಯನ್ನು ಹಿಂದೆಯೇ ರಚಿಸಿ, ಒಂದು ದಾಖಲೆ ಸ್ಥಾಪಿಸಿದ್ದಾರೆ.

ಕೃತಿಯಲ್ಲಿ ಕನ್ನಡ ಜಾನಪದ ಅಧ್ಯಯನವನ್ನು 1900 ಕ್ಕಿಂತ ಹಿಂದಿನ ಕಾಲ : ಪೋಷಕ ಯುಗ; 1901ರಿಂದ 1930ರ ಅವಧಿ : ಅರುಣೋದಯ ಕಾಲ; 1931ರಿಂದ 1950ರ ಅವಧಿ: ಪ್ರಥಮ ಸುವರ್ಣ ಸಂಚಯ ಘಟಕ; 1951ರಿಂದ 1960ರ ಅವಧಿ : ಸಮೃದ್ಧ ಸುಗ್ಗಿಯ ಕಾಲ; 1961ರಿಂದ 1970ರ ಅವಧಿ : ಸಮನ್ವಂತರ ದಶಕ; 1971ರಿಂದ 1980ರ ಅವಧಿ : ದ್ವಿತೀಯ ಸುವರ್ಣ ಸಂಚಯ ಘಟ್ಟ (1981:25–26) – ಆರು ಭಾಗಗಳಾಗಿ ವಿಂಗಡಿಸಲಾಗಿದೆ.

ಪೋಷಕ ಯುಗವನ್ನು ವಿಶ್ವ ಜಾನಪದಾಧ್ಯಯನದ ಹಿನ್ನೆಲೆ, ಪಾಶ್ಚಾತ್ಯ ಜಾನಪದಾಧ್ಯಯನದ ಹಿನ್ನೆಲೆ ಹಾಗೂ ಭಾರತೀಯ ಜಾನಪದಾಧ್ಯಯನದ ಹಿನ್ನೆಲೆ – ಎಂಬುದಾಗಿ (ಪು.26–66) ಮೂರು ಒಳ ವಿಭಾಗ ಮಾಡಿಕೊಳ್ಳಲಾಗಿದೆ. ಯುಗದ ಹಿನ್ನೆಲೆಯಲ್ಲೂ ಜಾಗತಿಕ ಮಟ್ಟದಲ್ಲಿ, ಪಾಶ್ಚಾತ್ಯರಲ್ಲಿ ಹಾಗೂ ಭಾರತೀಯರಲ್ಲಿ ಜಾನಪದ ಅಧ್ಯಯನ ನಡೆದ ಬಗೆಗಿನ ಇತಿಹಾಸವನ್ನು ನೀಡಲಾಗಿದೆ.

ವಿಶ್ವಜಾನಪದ ಅಧ್ಯಯನದ ಹಿನ್ನೆಲೆಯಲ್ಲಿ 17ನೇ ಶತಮಾನ ಹಾಗೂ ಅದಕ್ಕಿಂತ ಪೂರ್ವದಲ್ಲಿ ಕವಿಗಳು ಕಂಡ ಜಾನಪದ ದೃಷ್ಟಿಕೋನವನ್ನು ಹಾಗೂ ಆಗಿನ ಕಾಲದಲ್ಲಿನ ಜಾನಪದ ಸಂದರ್ಭವನ್ನು ವಿವರಿಸುತ್ತಾರೆ. ಪಾಶ್ಚಾತ್ಯ ಜಾನಪದ ಅಧ್ಯಯನದ ಹಿನ್ನೆಲೆಯಲ್ಲಿ **ಗ್ರೀಮ್ ಸಹೋದರ**ರಿಂದ ತೊಡಗಿ **ಆರ್.ಎಂ.ಡಾರ್ಸನ್** ವರೆಗೆ ಹಲವು ಜನ ಜಾನಪದ ವಿದ್ವಾಂಸರನ್ನು ಗುರುತಿಸಲಾಗಿದೆ. ಭಾರತೀಯ ಜಾನಪದ ಅಧ್ಯಯನದ ಹಿನ್ನೆಲೆಯಲ್ಲಿ ಕರ್ನಲ್ ಮೆಕೆಂಝಿಯಿಂದ ಕಿಟ್ಟೆಲ್‌ವರೆಗೆ ಹಾಗೂ ಹಲವು ಪತ್ರಿಕೆಗಳು ಸಂಸ್ಥೆಗಳು ಕನ್ನಡ ಜಾನಪದದ ಬಗೆಗೆ ದುಡಿದುದನ್ನು ಗಮನಿಸಲಾಗಿದೆ.

ಪೋಷಕಯುಗದಲ್ಲಿ ಭಾರತೀಯ ಜಾನಪದಾಧ್ಯಯನದ ಹಿನ್ನೆಲೆ ಹಾಗೂ ಅರುಣೋದಯ ಕಾಲದಲ್ಲಿ ಕನ್ನಡ ಜನಪದ ಸಾಹಿತ್ಯಾಧ್ಯಯನದ ಹಿನ್ನೆಲೆ ಹಾಗೂ ಪ್ರಥಮ ಸುವರ್ಣ ಸಂಚಯ ಘಟ್ಟ – ಮೂರು ಕಾಲಘಟ್ಟಗಳು ಸ್ವಾತಂತ್ರ್ಯಪೂರ್ವ ಕನ್ನಡ ಜಾನಪದ ಅಧ್ಯಯನಕ್ಕೆ ಆಕರ ಸಾಮಾಗ್ರಿಗಳ ದೃಷ್ಟಿಯಿಂದ ಹೆಚ್ಚು ಉಪಯುಕ್ತ ಭಾಗವಾಗಿದೆ. ಅರುಣೋದಯ ಕಾಲದಲ್ಲಿ ಕನ್ನಡ ಜಾನಪದ ಅಧ್ಯಯನಕ್ಕೆ ಆಕರ ಸಾಮಾಗ್ರಿಗಳ ದೃಷ್ಟಿಯಿಂದ ಹೆಚ್ಚು ಉಪಯುಕ್ತ ಭಾಗವಾಗಿದೆ. ಈ ಕಾಲದಲ್ಲಿ ಕನ್ನಡ ಜಾನಪದ ಸಂಗ್ರಹಗಳು ಆದದ್ದೇ ಕಡಿಮೆ. ಆ ಸಂದರ್ಭಕ್ಕೆ ಒಟ್ಟು 9 ಕೃತಿಗಳನ್ನು ಪರಿಚಯಿಸಿದ್ದಾರೆ. ಪ್ರಥಮ ಸುವರ್ಣ ಘಟ್ಟದಲ್ಲಿ ಇನ್ನೂ ಹಲವು ಸಂಗ್ರಹ ಕೃತಿಗಳು ಪ್ರಕಟಗೊಂಡವು. ಕೆಲವು ಇತಿಮಿತಿಗಳಿದ್ದರೂ 25ರಷ್ಟು ಕೃತಿಗಳನ್ನು ಒದಗಿಸಿದ ಮೊದಲ ಘಟ್ಟದ ಜಾನಪದ ಅಧ್ಯಯನಕ್ಕೆ ಉಪಯುಕ್ತ ಆಕರ ಗ್ರಂಥವಾಗಿದೆ.

1982ರಲ್ಲಿ ನಂ.ತಪಸ್ವೀಕುಮಾರರ ಪಿಎಚ್.ಡಿ. ಮಹಾಪ್ರಬಂಧ **'ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ'** ಕೃತಿಯ ಮುನ್ನುಡಿಯಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಗೀತ ಸಾಹಿತ್ಯದ ಬಗ್ಗೆ ಆದ ಅಧ್ಯಯನಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಮೊದಲ ಘಟ್ಟದಲ್ಲಿ ಪ್ರಕಟವಾದ 12 ಗೀತ ಸಂಕಲನಗಳನ್ನೂ ಹಾಗೂ 2 ವಿಮರ್ಶಾ ಸಂಕಲನಗಳನ್ನು ಗಮನಿಸಲಾಗಿದೆ.

ಹಾ.ಮಾ. ನಾಯಕ

1974ರಲ್ಲಿ ಹಾ.ಮಾ. ನಾಯಕರು ಸಂಪಾದಿಸಿದ **'ಕನ್ನಡ ಜಾನಪದ ಗ್ರಂಥಸೂಚಿ'** ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನಕ್ಕೆ ಉತ್ತಮ ಮೂಲ ಆಕರಗ್ರಂಥ. 1974ರ ವರೆಗಿನ 532 ಗ್ರಂಥಗಳನ್ನು ಗಮನಿಸಲಾಗಿದೆ. ಅವುಗಳನ್ನು ಜನಪದ ಮಹಾಕಾವ್ಯ, ಲಾವಣಿ ಕಥೆ, ಐತಿಹ್ಯ, ಕಥೆ; ಭಾಷಾಂತರ–ರೂಪಾಂತರ, ಗಾದೆ, ಒಗಟು, ನಾಟಕ ರಂಗಭೂಮಿ, ವಿಚಾರ ವಿಮರ್ಶೆ, ಸಂಶೋಧನೆ ಹಾಗೂ ಸಂಕೀರ್ಣ ಎಂಬುದಾಗಿ ಏಳು ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಪ್ರತಿ ವಿಭಾಗದಲ್ಲಿಯೂ ಗ್ರಂಥಗಳನ್ನು ಅಕಾರಾದಿಯಾಗಿ ಪಟ್ಟಿ ಮಾಡಿ ಕೃತಿಗಳು, ಕೃತಿಕಾರರ ಹಾಗೂ ಪ್ರಕಾಶಕರ ವಿವರವಾದ ಸೂಚಿಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ. ಪ್ರತಿಯೊಂದು ಪುಸ್ತಕದ ವರ್ಣನೆಯಲ್ಲೂ ಎರಡು ಭಾಗ ಮಾಡಲಾಗಿದ್ದು, ಮೊದಲನೆಯ ಭಾಗದಲ್ಲಿ ಪುಸ್ತಕದ, ಸಂಪಾದಕರ ಇಲ್ಲವೇ ಲೇಖಕರ ಹೆಸರು, ಪ್ರಕಾಶಕರ ಹೆಸರು ಹಾಗೂ ಊರು, ಪ್ರಕಟನೆಯ ವರ್ಷ ಹಾಗೂ ಪುಟ ಸಂಖ್ಯೆಗಳೊಂದಿಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. 1891ರಿಂದ 1947ರ ವರೆಗೆ ಸಂಗ್ರಹವಾದ 50 ಸಂಕಲನಗಳನ್ನು ಹಾಗೂ ಲೇಖನಗಳನ್ನು ಗುರುತಿಸಲಾಗಿದೆ.

ಸುಶೀಲಾ ಪಟ್ಟಣಶೆಟ್ಟಿ

1974ರಲ್ಲಿ 'ಜಾನಪದ ಸಾಹಿತ್ಯ ದರ್ಶನ ಭಾಗ–1' ಸಂಕಲನದಲ್ಲಿ ಸುಶೀಲಾ ಪಟ್ಟಣಶೆಟ್ಟಿಯವರ 'ಕನ್ನಡ ಜನಪದ ಸಾಹಿತ್ಯದ ಸಂಕಲನ ಕೃಷಿ' ಲೇಖನ ಪ್ರಕಟವಾಯಿತು. 125 ಜನಪದ ಸಂಗ್ರಹಗಳನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ. "ಪಶ್ಚಿಮ ರಾಷ್ಟ್ರಗಳಲ್ಲಿ ಜನಪದ ಸಾಹಿತ್ಯ ಅಧ್ಯಯನ, ಸಂಗ್ರಹಗಳ ಚರಿತ್ರೆಗೆ ಸುಮಾರು ಎರಡುನೂರು ವರ್ಷಗಳ ಇತಿಹಾಸವುಂಟು. ಪೌರಸ್ತ್ಯರಿಗೆ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಪಾದಾರ್ಪಣ ಮಾಡುವ ಸ್ಫೂರ್ತಿ ಒದವಿದುದು ಪಾಶ್ಚಾತ್ಯರಿಂದ ಎಂಬ ದೃಷ್ಟಿಕೋನದೊಂದಿಗೆ ಗ್ರಾಮೀಣ ವ್ಯಕ್ತಿಗಳ ನಾಲಗೆಯ ಮೇಲೆ ಉಳಿದ ನಾಗರಿಕತೆಯ ಪ್ರಭಾವದಿಂದ ಯಾವ ಗಳಿಗೆಯಲ್ಲೂ ನಷ್ಟವಾಗಿ ಹೋಗಬಹುದಾದ ಜನಪದ ಸಾಹಿತ್ಯ ಉಪೇಕ್ಷಿಸಲ್ಪಟ್ಟಿತು. ಇಂಥ ಪರಿಸ್ಥಿತಿಯಲ್ಲಿ

ಕರ್ನಾಟಕದ ಹಲವು ವ್ಯಕ್ತಿಗಳು ಮುಂದೆ ಬಂದು ಕಾರ್ಯಾರಂಭ ಮಾಡಿದರು. ಆದ್ದರಿಂದ ಅದ್ಯರ ವರೆಗೆ ನಡೆದ ಕಾರ್ಯದ ಸ್ಥೂಲ ಸಮೀಕ್ಷೆ ಲೇಖನದ ಉದ್ದೇಶ" (1974:163–164) ಎಂದು ಹೇಳಿದ್ದಾರೆ.

ಜ್ಯೋತಿ ಹೊಸೂರ

1974ರಲ್ಲಿ 'ಜಾನಪದ ಸಾಹಿತ್ಯ ದರ್ಶನ ಭಾಗ–1' ಸಂಕಲನದಲ್ಲಿ ಜ್ಯೋತಿ ಹೊಸೂರರ 'ಕನ್ನಡ ಜನಪದ ಸಾಹಿತ್ಯ ವಿಮರ್ಶಾ ಕೃಷಿ' ಲೇಖನದಲ್ಲಿ ಜಾನಪದ ಅಧ್ಯಯನವನ್ನು ಆರಂಭಕಾಲದ ವಿಮರ್ಶೆ (1920–1950), ನಡುಗಾಲದ ವಿಮರ್ಶೆ (1951–1955) ಹಾಗೂ ಹೊಸಗನ್ನಡದ ವಿಮರ್ಶೆ (1966–1971) ಎಂದು ಮೂರು ಹಂತಗಳಲ್ಲಿ ವರ್ಗೀಕರಣ ಮಾಡಲಾಗಿದೆ.

ಪ್ರತಿಪಾದನೆ, ಪ್ರಶಂಸೆ ಹಾಗೂ ಚಿಕಿತ್ಸಕತೆ ಇವು ಕ್ರಮವಾಗಿ ಒಂದೊಂದು ಹಂತದ ವಿಮರ್ಶೆಯಲ್ಲಿ ಅಭಿವ್ಯಕ್ತವಾಗಿರುವ ಅಂಶವೆಂದು ವಿಮರ್ಶೆ ಮಾಡಿದ್ದಾರೆ. ಜ್ಯೋತಿ ಹೊಸೂರುರ ಪ್ರಕಾರ, "ಜನಪದ ಸಾಹಿತ್ಯದ ಬಗ್ಗೆ ಬರೆದ ಮೊದಲ ಲೇಖನದಿಂದ ಆರಂಭಿಸಿ ಸುಮಾರು 1950ನೆಯ ಇಸ್ವಿಯವರೆಗಿನ ವಿಮರ್ಶಾತ್ಮಕ ಬರವಣಿಗೆಗಳಲ್ಲಿ ಆರಂಭಕಾಲದ ವಿಮರ್ಶೆಯ ಪ್ರತಿಪಾದನೆ ನಿಚ್ಚಳವಾಗಿ ಕಾಣುತ್ತದೆ. ಪ್ರತಿಪಾದನೆಯ ಅವರ ಪ್ರಯತ್ನ ಫಲಿಸಿತು. ಕೆಲವೇ ದಿನಗಳಲ್ಲಿ ಸಾಹಿತ್ಯಕ್ಕೆ ಎಲ್ಲೆಡೆಗಳಿಂದ ಮನ್ನಣೆ ಸಿಕ್ಕಿತು. ಒಮ್ಮೆ ಮನ್ನಣೆ ಸಿಕ್ಕ ಮೇಲೆ ಪ್ರತಿಪಾದನೆ ಅನವಶ್ಯಕ. ಆದುದರಿಂದ ಮುಂದಿನ ಬರವಣಿಗೆಗಳಲ್ಲಿ ಜನಪದ ಸಾಹಿತ್ಯದ ನಡುಗಾಲದ ವಿಮರ್ಶೆಯ ಪ್ರಶಂಸೆ ಆರಂಭವಾಯಿತು. ಎಲ್ಲರೂ ಅದರಲ್ಲಿಯ ಸೊಗಸನ್ನು ಎತ್ತಿ ತೋರಿಸಿ ಹಿರಿಮೆಯನ್ನು ಹೊಗಳತೊಡಗಿದರು. ಸುಮಾರು 1951ರಿಂದ 1965ರ ಅವಧಿಯಲ್ಲಿಯ ಬರವಣಿಗೆಗಳಲ್ಲಿ ಭಾಷಣಗಳಲ್ಲಿ ಪ್ರಶಂಸೆಯ ಗುಣ ಎದ್ದು ಕಾಣುತ್ತದೆ. ಅಲ್ಲಲ್ಲಿ ಪ್ರತಿಪಾದನೆ ಇಣಿಕಿದರೂ ಕಾಲಾವಧಿಯ ಪ್ರಧಾನ ಗುಣ ಪ್ರಶಂಸೆ, ಅಭ್ಯಾಸ ಮುಂದುವರಿಯಿತು. ಹೊಸಗನ್ನಡದ ವಿಮರ್ಶೆಯ ವೈಚಾರಿಕತೆ ಬೆಳೆಯಿತು. ತತ್ಪರಿಣಾಮವಾಗಿ ಜನಪದ ಸಾಹಿತ್ಯದ ವ್ಯವಸ್ಥಿತ ಅಭ್ಯಾಸ ಮಾಡಬೇಕು. ಅದರ ಗುಣದೋಷ ಅರಿತುಕೊಳ್ಳಬೇಕು. ವಿವಿಧ ದೃಷ್ಟಿಕೋನಗಳಿಂದ ಮೌಲ್ಯ ಮಾಪನ ಮಾಡಬೇಕು ಚಿಕಿತ್ಸಕತೆ ಅಭ್ಯಾಸಗಳಲ್ಲಿ ಮೂಡಿತು... ಯಾವುದೇ ಹಂತ ವಿಮರ್ಶೆ ಇರಲಿ, ಅದು ಒಂದೇ ರೂಪದಲ್ಲಿ ಹುಟ್ಟಿಲ್ಲ; ಒಂದೇ ಪ್ರಮಾಣದಲ್ಲಿ ಹುಟ್ಟಿಲ್ಲ. ಬಿಡಿ ಬರಹಗಳು ಪತ್ರಿಕೆಗಳಲ್ಲಿ ಬೆಳಕು ಕಂಡು ವಿಮರ್ಶಾ ಕೃಷಿಗೆ ಶ್ರೀಕಾರ ಹಾಕಿದವು. ಜಾನಪದ ಪ್ರೇಮಿ ವಿದ್ವಾಂಸರು ವಿವಿಧ ಪ್ರಸಂಗಗಳಲ್ಲಿ ಮಾಡಿದ ಎಷ್ಟೋ ಭಾಷಣಗಳು ಅನಂತರ ಲಿಪಿ ಬದ್ಧಗೊಂಡವು. ಜನಪದ ಸಂಕಲನ

ಮುನ್ನುಡಿ, ಪೀಠಿಕೆ, ಪ್ರಸ್ತಾವನೆ ಇತ್ಯಾದಿಗಳ ರೂಪದಲ್ಲಿ ಕೆಲವು ವಿಮರ್ಶೆಗಳು ಬಂದುವು." (1974:186–187)

"1920ರಿಂದ 1972ರ ವರೆಗೆ ಬಂದಂತಹ 30 ಸಂಗ್ರಹಗಳ ಮುನ್ನುಡಿಯನ್ನು ಗಮನಿಸಿಕೊಂಡು ಹಾಗೂ ಹಲವು ಭಾಷಣ, ಲೇಖನಗಳನ್ನು ಗಮನಿಸಿಕೊಂಡು, ಅವರೆಲ್ಲರೂ ಕನ್ನಡ ಜಾನಪದದ ಬಗೆಗೆ ಕಂಡ ದೃಷ್ಟಿಕೋನವನ್ನು ವಿವರಿಸಿದ್ದಾರೆ. ಜನಪದ ಸಾಹಿತ್ಯ ವಿಮರ್ಶಾಕೃಷಿಯು ಆರಂಭಕಾಲ, ನಡುಗಾಲ ಹಾಗೂ ಹೊಸಕಾಲಗಳಲ್ಲಿ ತೃಪ್ತಿದಾಯಕವಾಗಿ ಸಾಗಿ ಬಂದಿದೆ. ನಡುನಡುವೆ ಗತಿ ಕುಂಠಿತಗೊಂಡಂತೆ ಕಂಡರೂ ಆಯಾಕಾಲದ ಆಶಯದ ಬದಲಾವಣೆಯೊಂದಿಗೆ ಹೊಸತನ ರೂಢಿಸಿಕೊಳ್ಳುತ್ತ ವಿಮರ್ಶೆ ಮುನ್ನಡೆದು ಬಂದಿದೆ. ಹೊಸಗಾಲದಲ್ಲಿ ಹೊಸತನದ ತೀವ್ರತೆ ಹೆಚ್ಚಿಗಿದೆ. ಭವಿಷ್ಯತ್ತಿನಲ್ಲಿ ಬರಬೇಕಾಗಿರುವ ವೈವಿಧ್ಯಪೂರ್ಣವಾದ, ವ್ಯವಸ್ಥಿತವಾದ ಹಾಗೂ ಸಮತೂಕದ ವಿಮರ್ಶೆಗೆ ತಕ್ಕ ಹಿನ್ನೆಲೆ ಈಗ ನಿರ್ಮಾಣವಾಗಿದೆ." (1974:208)

ಕೆ. ಮರುಳಸಿದ್ದಪ್ಪ

1974ರಲ್ಲಿ ಕೆ. ಮರುಳಸಿದ್ದಪ್ಪರ **'ಭಾರತೀಯ ಜಾನಪದ ಸಮೀಕ್ಷೆ'** ಎಂಬ ಅನುವಾದಿತ ಕೃತಿಯ ಪೀಠಿಕೆಯಲ್ಲಿ ಭಾರತೀಯ ಜಾನಪದ ಅಧ್ಯಯನ ಆರಂಭದ ಕಾಲದ ಬಗೆಗಿನ ವಿವರಣೆ ನೀಡಲಾಗಿದೆ. "ಭಾರತವು ವಿವಿಧ ಪ್ರಾಚೀನ ಸಂಸ್ಕೃತಿಯನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ದೀರ್ಘ ಪರಂಪರೆಯನ್ನು ಹೊಂದಿದೆ. ಆದುದರಿಂದ ಕಥೆಗಳು, ಹಾಡುಗಳು, ಒಗಟುಗಳು ಮುಂತಾದುವುಗಳ ವಿಶ್ಲೇಷಣೆ ವಿವಿಧ ಸ್ತರಗಳಲ್ಲಿ ನಡೆದು ಜಾನಪದದ ವಿಕಾಸವನ್ನು ಗುರುತಿಸಬೇಕಾಗುತ್ತದೆ. ಏಕೆಂದರೆ ಭಾರತೀಯ ನಾಗರಿಕತೆಯ ಬೇರುಗಳು ಪುರಾತನ ಅವಶೇಷಗಳಲ್ಲಿ ಹೂತು ಹೋಗಿವೆ" ಎಂದು ಅಭಿಪ್ರಾಯ ಪಡುತ್ತಾರೆ. ಕೃತಿಯಲ್ಲಿ ನಾಗರಿಕ ಸಂಸ್ಕೃತಿಯು ಹುಟ್ಟುವ ಭಾರತದಲ್ಲಿ ಪಾಶ್ಚಾತ್ಯರು ಜಾನಪದ ಸೇವೆ ಮಾಡಿದ ಬಗೆ ಹಾಗೂ ಹಲವು ಜಾನಪದ ಸಿದ್ಧಾಂತಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ತೀ.ನಂ. ಶಂಕರನಾರಾಯಣ

1970ರಲ್ಲಿ ತೀ.ನಂ.ಶಂಕರನಾರಾಯಣರ 'ಕನ್ನಡ ಜನಪದ ಸಾಹಿತ್ಯಕ್ಕೆ ತೀ.ನಂ.ಶ್ರೀಯವರ ಕೊಡುಗೆ' ಲೇಖನದಲ್ಲಿ, "ತೀ.ನಂ.ಶ್ರೀಯವರು ಜನಪದ ಸಾಹಿತ್ಯಕ್ಕೆ ನೀಡಿರುವ ಕೊಡುಗೆಯ ಸ್ವರೂಪವೇನು? ಅವರ ಕೆಲಸಕ್ಕೆ ಇರುವ ಐತಿಹಾಸಿಕ

ಮಹತ್ವವೇನು? ಹಾಗೂ ಅವರ ಸಂಬಂಧವಾದ ಬರಹಗಳ ಅಂತಃಸತ್ವವೇನು ಎಂಬುದನ್ನು ವಿಚಾರ ಮಾಡುವುದು ಲೇಖನದ ಉದ್ದೇಶವಾಗಿದೆ" (1978:87) ಎಂದು ಹೇಳಿಕೊಂಡಿದ್ದಾರೆ. ತೀ.ನಂ.ಶ್ರೀಯವರು ಸ್ವತಃ ಕ್ಷೇತ್ರಕಾರ್ಯದಿಂದ ಜನಪದ ಸಾಹಿತ್ಯವನ್ನು ಸಂಗ್ರಹಿಸಿಲ್ಲವೆಂದೇ ಶಂಕರನಾರಾಯಣ ತೀ.ನಂ.ಶ್ರೀಯವರ ಸಾಧನೆಯನ್ನು ವಿವರಿಸುತ್ತಾರೆ. "ಜನಪದ ಸಾಹಿತ್ಯವೆಂದರೆ ವಿದ್ವಾಂಸರು ತಿರಸ್ಕಾರದಿಂದ ಕಾಣುತ್ತಿದ್ದ ಅಂದಿನ ವರ್ಷಗಳಲ್ಲಿ ತೀ.ನಂ.ಶ್ರೀ. ವಿಷಯದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ್ದು ಕ್ಷೇತ್ರದಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಪ್ರೇರಣೆ ಹಾಗೂ ಪ್ರೋತ್ಸಾಹ ನೀಡಿದ್ದು ಬಹು ಮುಖ್ಯವಾದ ಅಂಶವಾಗಿದೆ. ಜನಪದ ಸಾಹಿತ್ಯಕ್ಕೆ ತೀ.ನಂ.ಶ್ರೀಯವರ ಕೊಡುಗೆಯೇನೆಂಬುದನ್ನು ವಿಚಾರ ಮಾಡುವಾಗ ಎಲ್ಲಾ ಅಂಶಗಳನ್ನು ಅಗತ್ಯವಾಗಿ ಗಮನಿಸಬೇಕಾಗುತ್ತದೆ.(1978:88)

"ಭಾರತೀಯ ಕಾವ್ಯಮಿಮಾಂಸೆಯ ತತ್ವಗಳನ್ನು ಸ್ಪಷ್ಟಗೊಳಿಸುವುದಕ್ಕಾಗಿ ತೀ.ನಂ.ಶ್ರೀಯವರು ಜನಪದ ಕಾವ್ಯವನ್ನು ಉಪಯೋಗಿಸಿಕೊಂಡಿರುವುದು ಜನಪದ ಸಾಹಿತ್ಯಕ್ಕೆ ಕೊಟ್ಟ ಪರಮಾವಧಿ ಗೌರವವನ್ನು ಸೂಚಿಸುವ ಅತ್ಯಂತ ಮಹತ್ವಪೂರ್ಣವಾದ ಸಂಗತಿಯಾಗಿದೆ."(1978:98)

ದೇ. ಜವರೇಗೌಡ

1978ರಲ್ಲಿ ದೇ. ಜವರೇಗೌಡರ **'ಜಾನಪದ ಗೀತಾಂಜಲಿ'** (ಕನ್ನಡ ಜನಪದ ಗೀತೆಗಳು) ಸಂಕಲನದ ಮುನ್ನುಡಿಯಲ್ಲಿ ಜನಪದ ಸಾಹಿತ್ಯದ ಚರಿತ್ರೆ ಭಾರತದಲ್ಲಿ ಜಾನಪದ ಸಂಗ್ರಹದ ಆರಂಭ ಹಾಗೂ ಕರ್ನಾಟಕದಲ್ಲಿ ಜನಪದ ಸಾಹಿತ್ಯದ ಸಂಗ್ರಹ ಕಾರ್ಯ ಆರಂಭವಾದ ಬಗ್ಗೆ ಸ್ಥೂಲ ಸಮೀಕ್ಷೆ ಮಾಡಲಾಗಿದೆ. ಕನ್ನಡ ಜಾನಪದದ ಬಗೆಗೆ ದುಡಿಯುತ್ತಿರುವ ಹತ್ತುಜನ ಜನಪದ ವಿದ್ವಾಂಸರನ್ನು ಗುರುತಿಸಲಾಗಿದೆ. ಮಾಸ್ತಿಯವರ **'ಕನ್ನಡ ಲಾವಣಿ ಸಾಂಗತ್ಯ'** (1925) ಹಲಸಂಗಿ ಸಹೋದರರು ಸಂಗ್ರಹಿಸಿದ 'ಗರತಿಯ ಹಾಡು' (1931), 'ಜೀವನ ಸಂಂಗೀತ' (1933) ಹಾಗೂ 'ಮಲ್ಲಿಗೆದಂಡೆ' (1933), **ವಿಠೋಭ ವೆಂಕಟನಾಯಕ ತೊರ್ಕೆ**ಯವರ **'ಹಳ್ಳಿಯ ಹಾಡುಗಳು'** (1933), **ಅರ್ಚಕ ಬಿ.ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿಹಳ್ಳಿಯ ಹಾಡು'** (1933), **ಗೋರೂರು ರಾಮಸ್ವಾಮಿ ಅಯ್ಯಂಗಾರ್** ಹಾಗೂ **ಬಿ.ಎನ್.ರಂಗಸ್ವಾಮಿಯವರ 'ಹಳ್ಳಿಯ ಹಾಡು'** (1938), ಹಾಗೂ **ಮತಿಘಟ್ಟ ಸಹೋದರರ 'ನಾಡಪದಗಳು'** (1943) ಮೊದಲಾದ ಗೀತ ಸಂಕಲನಗಳನ್ನು ಉಲ್ಲೇಖಿಸಲಾಗಿದೆ.

ಬಿ.ಎಸ್. ಗದ್ದಗಿಮಠ, ಕ.ರಾ. ಕೃಷ್ಣರಾವ್, ಜೀ.ಶಂ. ಪರಮಶಿವಯ್ಯ, ಎಲ್.ಆರ್. ಹೆಗಡೆ ಮೊದಲಾದವರ ವೈಜ್ಞಾನಿಕ ದೃಷ್ಟಿಕೋನದ ಕ್ಷೇತ್ರ ಕಾರ್ಯವನ್ನು

ಹಾಗೂ ಗೊ.ರು. ಚೆನ್ನಬಸಪ್ಪ, ಕರೀಂಖಾನ್, ಕೆ.ವಿ. ಸುಬ್ಬಣ್ಣ, ಚಂದ್ರಶೇಖರ ಕಂಬಾರ, ಎಚ್.ಎಲ್. ನಾಗೇಗೌಡ, ಕಾಳೇಗೌಡ ನಾಗವಾರ ಮೊದಲಾದವರ ಕೊಡುಗೆಗಳನ್ನು ನೆನಪಿಸಲಾಗಿದೆ.

ಸೋಮಶೇಖರ ಇಮ್ರಾಪುರ

1979ರಲ್ಲಿ ಸೋಮಶೇಖರ ಇಮ್ರಾಪುರರ **'ನಮ್ಮ ಜಾನಪದ ಸಮೀಕ್ಷೆ'** ಎಂಬ ಕೃತಿಯಲ್ಲಿ ಭಾರತ ಹಾಗೂ ಕರ್ನಾಟಕದಲ್ಲಿ ಕಳೆದ ಒಂದೆರಡು ಶತಮಾನಗಳಿಂದಲೂ ನಡೆದ ಹಾಗೂ ಈಗ ನಡೆಯುತ್ತಿರುವ ಜಾನಪದ ಅಧ್ಯಯನದ ಸ್ವರೂಪ, ಸಾಧನೆ–ಸಿದ್ಧಿ, ನೆಲೆ–ಬೆಲೆಗಳ ಸ್ಥೂಲ ಪರಿಚಯ ಮಾಡಿಕೊಡಲಾಗಿದೆ. ಕೃತಿಯಲ್ಲಿ ಭಾರತ ಹಾಗೂ ಕರ್ನಾಟಕದಲ್ಲಿ ಆದ ಜಾನಪದ ಅಧ್ಯಯನದ ಸ್ವರೂಪ ಹಾಗೂ ಕರ್ನಾಟಕದಲ್ಲಿ ಜಾನಪದ ಸಂಗ್ರಹಗಳ ಬಗೆಗೆ ಬಂದ ಹೆಚ್ಚಿನ ಕೃತಿಗಳ ಪಟ್ಟಿಯನ್ನು ಗಮನಿಸಲಾಗಿದೆ. ಫೋಕ್–ಫೋಕ್‌ಲೋರ್ ಪದಗಳ ವ್ಯತ್ಯಾಸ ಹಾಗೂ ಜಾನಪದ ಪದ ನಿಷ್ಪತ್ತಿ ಕುರಿತ ಸಂಕ್ಷಿಪ್ತ ಪರಿಚಯ ಇದೆ. "19ನೇ ಶತಮಾನದ ಮೊದಲ ದಶಕದಲ್ಲಿ ಪಾಶ್ಚಾತ್ಯ ವಿದ್ವಾಂಸರಿಂದ ತೊಡಗಿ, 20ನೇ ಶತಮಾನದ ಎಂಟು ದಶಕಗಳ ತನಕ ಅಂದರೆ ಸುಮಾರು 175 ವರ್ಷಗಳ ಅವಧಿಯಲ್ಲಿ ಸುಮಾರು 600 ಆಗಬಹುದು", "ಕನ್ನಡ ಸಾಹಿತ್ಯಕ್ಕೆ ನವೋದಯ ಕಾಲ ಪ್ರಾಪ್ತವಾಗುವವರೆಗೂ; ಜನಪದ ಸಾಹಿತ್ಯ ಹಾಗೂ ಸಂಗ್ರಹಕ್ಕೆ ಕಾಸಿನ ಕಿಮ್ಮತ್ತೂ ದಕ್ಕಲಿಲ್ಲವೆಂದು ತೋರುತ್ತದೆ. ಇಂಥ ವಿಷಮ ಪರಿಸರದಲ್ಲೂ ಕೆಲವು ವಿದ್ವಾಂಸರು ನಡೆಸಿದ ಸಂಗ್ರಹಣೆ ಹಾಗೂ ಆ ಧೋರಣೆಯ ಅಧ್ಯಯನ ನಿಜಕ್ಕೂ ಸ್ತುತ್ಯ ಹಾಗೂ ಪ್ರಥಮ ಪ್ರಯತ್ನಗಳಾಗಿದ್ದು, ಅವು ಚಾರಿತ್ರಿಕ ಮಹತ್ವಕ್ಕೂ ಭಾಜನವಾಗುತ್ತಿವೆ" (1979:26) ಎಂದಿದ್ದಾರೆ.

ಕಳೆದ ಶತಮಾನದಿಂದ ವರೆಗೂ ಬಂದ ಜಾನಪದ ಸಂಗ್ರಹಣೆಗಳನ್ನು ಜಾನಪದ ದೃಷ್ಟಿ, ಧೋರಣೆ ಹಾಗೂ ಸಾಧನೆಯನ್ನು, ಸ್ಥೂಲವಾಗಿ 19ನೇ ಶತಮಾನದ ಸಾಧನೆ, 20ನೇ ಶತಮಾನದ ಪೂರ್ವಾರ್ಧದ ಸಾಧನೆ ಹಾಗೂ 20ನೇ ಶತಮಾನದ ಉತ್ತರಾರ್ಧದ ಸಾಧನೆ ಎಂದು ಮೂರು ಘಟ್ಟದಲ್ಲಿ ವರ್ಗೀಕರಿಸಲಾಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಕನ್ನಡ ಜಾನಪದ ಸಂಗ್ರಹಕ್ಕೆ ಆಂಗ್ಲರು ದಾರಿ ಮಾಡಿಕೊಟ್ಟರು. ಅವರಲ್ಲಿ ಗೋವರ್, ಫ್ಲೀಟ್ ಹಾಗೂ ಕಿಟ್ಟೆಲ್ಲರು ಪ್ರಮುಖರಾಗುತ್ತಾರೆ. 20ನೆಯ ಶತಮಾನದ ಪೂರ್ವಾರ್ಧದಲ್ಲಿ ಸಂಗ್ರಹವಾದ 25 ಕೃತಿಗಳನ್ನು ಗಮನಿಸಲಾಗಿದೆ. ಇದೇ ಸಂದರ್ಭಕ್ಕೆ ಬಂದಂತಹ ಜಾನಪದದ ಬಗೆಗಿನ ವಿಮರ್ಶೆಗಳು, ವಿಮರ್ಶಾಕೃತಿಗಳನ್ನು ಲೇಖನಗಳ ವಿವರಣೆಯನ್ನು ಬಳಸಿಕೊಳ್ಳಲಾಗಿದೆ.

ಕೆಲವು ಮಿತಿಗಳಿದ್ದರೂ ಕೃತಿಗಳು ದೊರೆತ ಉಲ್ಲೇಖ, ಅವುಗಳ ಪ್ರಕಟಣಾ ವರ್ಷ, ಪ್ರಕಶಾನಗಳನ್ನು ಸ್ಪಷ್ಟವಾಗಿ ನಮೂದಿಸಿಲ್ಲ. ಮೊದಲ ಘಟ್ಟದ ಜಾನಪದ ಅಧ್ಯಯನದ ದೃಷ್ಟಿಯಿಂದ ಲೇಖನ ಉತ್ತಮವಾದ ಆಕರಸಾಮಗ್ರಿಗಳನ್ನು ಒದಗಿಸುತ್ತವೆ.

1985ರಲ್ಲಿ ಪ್ರಕಟವಾದ ಅವರ 'ಭಾಷಿಕ ಹಾಗೂ ಸಾಹಿತ್ಯಕ ಬಗೆಗಗಳು' ಲೇಖನದಲ್ಲಿ "ಜನಪದ ಸಾಹಿತ್ಯವೆಂದು ಪ್ರತ್ಯೇಕಿಸುವಾಗ ಭಾಷೆಯ ಉಪಯೋಗದ ದೃಷ್ಟಿಯಿಂದ ಸಾಹಿತ್ಯಿಕ ಹಾಗೂ ಭಾಷಿಕ ಬಗೆಗಳೆರಡನ್ನು ಒಟ್ಟಾಗಿ ಸೇರಿಸಬೇಕಾಗಿದೆ" ಎಂದು ಹೇಳಿದ್ದಾರೆ. "ಭಾರತದ ಇತರ ಪ್ರಾಂತಗಳಂತೆ ಕರ್ನಾಟಕದಲ್ಲೂ ಜಾನಪದ ಸಂಗ್ರಹಣೆ ಪ್ರಾರಂಭವಾದುದು ಸುಮಾರು 19ನೆಯ ಶತಮಾನದ ಮೊದಲ ದಶಕದಿಂದ. ಅದು ಸಂಗ್ರಹಣೆಗೆ ನಾಂದಿಯಾದರೂ ಪಾಶ್ಚಾತ್ಯ ವಿದ್ವಾಂಸರಿಂದ ಜನಪದ ಸಾಹಿತ್ಯದ ಒಂದು ಪ್ರಕಾರವಾದ ಗೀತ ಸಾಹಿತ್ಯದಿಂದಲೇ ಪ್ರಾರಂಭವಾದ ಸಂಗ್ರಹಗಳು ಕಳೆದ ಶತಮಾನದವರೆಗೂ ತಮ್ಮದೇ ಅಧಿಪತ್ಯವನ್ನು ಉಳಿಸಿಕೊಂಡು ಬಂದಂತಿದೆ. ಒಟ್ಟು ಈ ವರೆಗಿನ ಕನ್ನಡ ಜಾನಪದ ಸಾಹಿತ್ಯ ಸಾಮಗ್ರಿಯಲ್ಲಿ ಪ್ರತಿಶತ 50ಕ್ಕೂ ಮಿಕ್ಕು ಗೀತ ಸಾಹಿತ್ಯ ಸಂಗ್ರಹಗಳಿವೆ. ಜನಪದ ಸಾಹಿತ್ಯವೆಂದರೆ ಜನಪದ ಕಾವ್ಯವೆಂದೇ ಭಾವಿಸಿದ್ದ ವಿದ್ವಾಂಸರು ಉಳಿದ ಸಾಹಿತ್ಯ ಪ್ರಕಾರಗಳಾದ ಜನಪದ ಕಥೆ, ಗಾದೆ, ಒಗಟು ಪ್ರಕಾರಗಳ ಕಡೆಗೆ ಲಕ್ಷ್ಯಕೊಡಲಿಲ್ಲ. ಒಗಟು ಕುರಿತು 20ನೆಯ ಶತಮಾನದ ಪೂರ್ವಾರ್ಧ ಹಾಗೂ ಉತ್ತರಾರ್ಧದ ಮೊದಲ ದಶಕದವರೆಗೆ ಹತ್ತಾರು ಸಂಗ್ರಹಗಳು ಬಂದಿದ್ದರೂ ಅವುಗಳ ನಿಜವಾದ ಶಾಸ್ತ್ರಬದ್ಧ ಸಂಗ್ರಹವಾಗಲಿ, ಅಧ್ಯಯನವಾಗಲಿ ನಡೆದದ್ದು 1967ರಿಂದ ಈಚೆಗೆ"(1985:3–4) ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಮಲ್ಲಿಕಾರ್ಜುನ ಲಠ್ಠೆ

1979ರಲ್ಲಿ ಪ್ರಕಟವಾದ ಮಲ್ಲಿಕಾರ್ಜುನ ಲಠ್ಠೆಯವರ, 'ಜನಪದ ಸಾಹಿತ್ಯ ನಡೆದು ಬಂದ ದಾರಿ' ಎಂಬ ಲೇಖನದಲ್ಲಿ ಸ್ವಾತಂತ್ರ್ಯಪೂರ್ವ ಕಾಲಘಟ್ಟದ ಕನ್ನಡ ಜಾನಪದ ಅಧ್ಯಯನವನ್ನು ಭಿನ್ನರೀತಿಯಲ್ಲಿ ಗುರುತಿಸಲಾಗಿದೆ. ಕನ್ನಡ ಜನಪದ ಸಾಹಿತ್ಯದ ಪ್ರಾಚೀನತೆಯನ್ನು ಶಾಸನ ಸಾಹಿತ್ಯದ ಉಲ್ಲೇಖದಿಂದ ಎತ್ತಿಕೊಳ್ಳಲಾಗಿದೆ. ಲೇಖನದಲ್ಲಿ ಜನಪದ ಕವಿಗಳು, ಹಾಡುಗಾರರು, ಹಾಗೂ ವಿಮರ್ಶಕರ ಪಟ್ಟಿಯನ್ನು ಕೊಡುತ್ತಾರೆ. ಸಂಗ್ರಹಕರಾದ ಮಧುರಚೆನ್ನ, ಸಿಂಪಿಲಿಂಗಣ್ಣ, ಧೂಲಾಸಾಹೇಬ, ಬೆಟಗೇರಿ ಕೃಷ್ಣಶರ್ಮ, ಬೈಲಹೊಂಗಲದ ದೊಡ್ಡ ಭಾವೆಪ್ಪ ಮೂಗಿ, ಸುಬೇದಾರ ಮಾಸ್ತರರು, ತಲ್ಲೂರ ರಾಯನಗೌಡ, ಶಿವೇಶ್ವರ ದೊಡ್ಡಮನಿ, ಮುದೇನೂರ ಸಂಗಣ್ಣ, ಗದ್ದಗೀಮಠ, ಈಶ್ವರ ಚಿಂತಾಮಣಿ ಶಂಬಾಜೋಶಿ ಮೊದಲಾದವರ ಉಲ್ಲೇಖವಿದೆ.

ರಾಮೇಗೌಡ

1981ರಲ್ಲಿ ಪ್ರಕಟವಾದ ರಾಮೇಗೌಡರ 'ಕರ್ನಾಟಕದಲ್ಲಿ ಜಾನಪದ ಅಧ್ಯಯನದ ಪ್ರಗತಿ' ಲೇಖನದಲ್ಲಿ ಮೊದಲ ಘಟ್ಟದ ಜಾನಪದ ಅಧ್ಯಯನಕ್ಕೆ ಒದಗಿಬಂದ ಪ್ರೇರಣೆಯನ್ನು ಹೇಳಲಾಗಿದೆ. "ಕರ್ನಾಟಕದಲ್ಲಿ ಜಾನಪದ ಅಧ್ಯಯನ ಆರಂಭವಾದುದು ಈಚೇಗಾದರೂ ಕುರಿತ ಉಲ್ಲೇಖಗಳು ಪ್ರಾಚೀನ ಕಾಲದಿಂದಲೂ ದೊರೆಯುತ್ತದೆ. ಕವಿರಾಜ ಮಾರ್ಗಕಾರ, ಮಧುರ ಕವಿಗಳು ಜನಪದ ಸಾಹಿತ್ಯವನ್ನು ಆ ಕಾಲದಲ್ಲೇ ಉದಾತ್ತೀಕರಿಸಿದ್ದಾರೆ. ಯಕ್ಷಗಾನಕ್ಕೆ ಸಂಬಂಧಿಸಿದ ಉಲ್ಲೇಖಗಳು ಬಹಳ ಹಿಂದಿನಿಂದಲೇ ಕಾವ್ಯಗಳಲ್ಲಿ ಉಪಲಬ್ಧವಿದೆ. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದ ವ್ಯೂಮದಲ್ಲಿದ್ದುದಲ್ಲದೆ, ಅದರ ಜೊತೆಯಲ್ಲಿ ನಿರಂತರವಾಗಿ ಹರಿದಿರುವುದನ್ನು ಕಾಣಬಹುದು. ಇಷ್ಟಾದರೂ ಜಾನಪದ ಸಂಗ್ರಹ, ಅಧ್ಯಯನಗಳು ವ್ಯವಸ್ಥಿತವಾಗಿ ಆರಂಭವಾದುದು ಮಾತ್ರ ತೀರ ಇತ್ತೀಚೆಗೆಂಬುದು ವಾಸ್ತವ ವಿಷಯ.

ಜಾನಪದದ ಸಂಗ್ರಹ ಕುರಿತಂತೆ ಆಸಕ್ತಿ ಕ್ರಮಬದ್ಧವಾಗಿ ಕಾಣಿಸಿಕೊಂಡದ್ದು ನವೋದಯ ಚಳುವಳಿಯೊಡನೆ. ಕನ್ನಡ ಸಾಹಿತ್ಯದಲ್ಲಾದ ನವೋದಯ ಚಳುವಳಿಗೂ ಪಾಶ್ಚಾತ್ಯ ಸಂಪರ್ಕ ಕಾರಣವಿರುವಂತೆ, ಕರ್ನಾಟಕ ಜಾನಪದ ಅಧ್ಯಯನದ ಆರಂಭಕ್ಕೂ ಪಾಶ್ಚಾತ್ಯ ಲೇಖಕರೇ ಕಾರಣರಾಗಿದ್ದಾರೆ. ಇವರಲ್ಲಿ ಗೋವರ್, ಫ್ಲೀಟ್ ಹಾಗೂ ಕಿಟ್ಟೆಲ್ ಪ್ರಮುಖರಾಗಿರುತ್ತಾರೆ. ಗೋವರ್ ದಾಸರಪದಗಳನ್ನೂ ಫ್ಲೀಟ್ ಐತಿಹಾಸಿಕ ಲಾವಣಿಗಳನ್ನೂ ಕಿಟ್ಟೆಲ್ ಗಾದೆಗಳನ್ನೂ ಸಂಗ್ರಹಿಸಿ ಕನ್ನಡ ಜಾನಪದ ಪ್ರವರ್ತಕರೆಂದು ಪ್ರಸಿದ್ಧರಾಗಿದ್ದಾರೆ. ಇವರ ಪ್ರಕಾರ ಕನ್ನಡದಲ್ಲಿ ಜಾನಪದ ಅಧ್ಯಯನ ರೂಪುಗೊಳ್ಳಲು ಎರಡು ಮುಖ್ಯ ಕಾರಣಗಳಿದ್ದವು. 1. ಬದುಕನ್ನು ಆಪ್ತವಾಗಿ ನೋಡಲು ಆರಂಭಿಸಿದುದು. 2. ಜನಪದ ಸಾಹಿತ್ಯದ ಸೊಗಸಿಗೆ ಮಾರು ಹೋದದ್ದು."(1981:2–3) ಇವರೆಲ್ಲರೂ ಜನಪದ ಗೀತೆಗಳ ಕಡೆಗೇ ಹೆಚ್ಚಿನ ಒಲವು ತೋರಿಸಿದರು. ಜಾನಪದ ಕ್ಷೇತ್ರಕ್ಕೆ ಸಾಹಿತ್ತಿಕ ಹಿನ್ನೆಲೆಯಿಂದ ಪ್ರವೇಶಿಸಿದರು. ಇದರ ಪರಿಣಾಮವೇ ಮೊದಲ ಘಟ್ಟದ ಸಂಕಲನಗಳಲ್ಲಿ ಸಾಹಿತ್ಯಕ್ಕೆ ಹೆಚ್ಚು ಮಹತ್ವ ಸಂದಿದೆ.

ಶ್ರೀಕೃಷ್ಣ ಭಟ್ ಅರ್ತಿಕಜೆ

1983ರಲ್ಲಿ ಪ್ರಕಟವಾದ ಶ್ರೀಕೃಷ್ಣಭಟ್ ಅರ್ತಿಕಜೆಯವರ **'ಸಹಸ್ರಾರ್ಧ ತುಳು ಗಾದೆಗಳು'** ಕೃತಿಯ ಪ್ರಸ್ತಾವನೆ ಭಾಗದಲ್ಲಿ ತುಳುಭಾಷೆಯಲ್ಲಿ ಸಂಗ್ರಹವಾದ ಗಾದೆಗಳ ಸಂಗ್ರಹದ ಕುರಿತು ಚರ್ಚಿಸಲಾಗಿದೆ. ಕೃತಿಯ ಪ್ರಸ್ತಾವನೆಯಲ್ಲಿ "1842ರಿಂದ ಆರಂಭಿಸಿ ಸುಮಾರು 1925ರವರೆಗೆ ಕ್ರೈಸ್ತ ಮಿಶನರಿಗಳು ಪ್ರಕಟಿಸಿದ ತುಳು ಕೃತಿಗಳಿಂದ ನಮ್ಮವರಿಗೆ

ಸ್ಫೂರ್ತಿಯುಂಟಾಯಿತು. ಪಾಶ್ಚಾತ್ಯರ ಸಾಹಿತ್ಯ ಸೇವೆಯಿಂದ ಪ್ರಭಾವಿತರಾದ ದೇಶೀಯ ವಿದ್ವಾಂಸರು ಸುಮಾರು 1940ರವರೆಗೆ ಕೆಲವು ವರ್ಷಗಳ ಕಾಲ ಕೃತಿಗಳನ್ನು ರಚಿಸಿ ತುಳು ಭಾಷೆ ಹಾಗೂ ಸಾಹಿತ್ಯದ ಏಳಿಗೆಗಾಗಿ ದುಡಿದರು."(1983:12)

ಜಿ.ವಿ.ಡಿ

1984ರಲ್ಲಿ ಪ್ರಕಟವಾದ **'ಜಾನಪದ ಚಿಂತನ'** ಸಂಕಲನದಲ್ಲಿ ಜಿ.ವಿ.ಡಿ.ಯವರ 'ಕನ್ನಡದಲ್ಲಿ ಜಾನಪದ ಕಲ್ಪನೆ'ಯ ಕುರಿತಾಗಿ ಚರ್ಚಿಸಲಾಗಿದೆ. "ಜಾನಪದ ಕಲ್ಪನೆ ಕನ್ನಡದಲ್ಲಿ ಇತ್ತೀಚಿನದೇನಲ್ಲ. ಒಂದು ಶತಮಾನದ ಚರಿತ್ರೆ ಕಲ್ಪನೆಗಿದೆ. ಜನತೆಯಲ್ಲಿ ಕಲ್ಪನೆಯಿತ್ತು. 1933ರಲ್ಲಿ ಸಸಿಯಾಗಿ ಇಂದು ವ್ಯಕ್ತವಾಗಿದೆ ಸುಭದ್ರ ಬೇರು ಬಿಟ್ಟಿದೆ." (1984:32) ಮೊದಲ ಘಟ್ಟದ ಕನ್ನಡ ಜಾನಪದ ಅಧ್ಯಯನದ ಕುರಿತು ಸ್ಥೂಲನೋಟವನ್ನು ಕೃತಿ ಒದಗಿಸಿ ಕೊಡುತ್ತದೆ. ನೋಟ ಮಾತ್ರ ಉದಾರವಾದುದು. ಮಾಸ್ತಿಯವರಿಂದ ಗದ್ದಗಿಮಠರ ವರೆಗಿನ 15 ಜನ ಕನ್ನಡ ಕವಿಗಳು, ಸಾಹಿತಿಗಳು, ಜನಪದ ಸಾಹಿತ್ಯವನ್ನು ಬೇರೆಬೇರೆ ಹೆಸರಿನಿಂದ ಕರೆದಿರುವುದನ್ನು ಲೇಖನದಲ್ಲಿ ಪಟ್ಟಿಮಾಡಲಾಗಿದೆ.

ಅಂಬಳಿಕೆ ಹಿರಿಯಣ್ಣ

1987ರಲ್ಲಿ ಪ್ರಕಟವಾದ **'ಜಾನಪದ ವೀಕ್ಷಣೆ'** ಸಂಕಲನದಲ್ಲಿ ಅಂಬಳಿಕೆ ಹಿರಿಯಣ್ಣ ಅವರ 'ಸ್ವಾತಂತ್ರ್ಯಪೂರ್ವ ಗೀತ ಸಾಹಿತ್ಯ' ಲೇಖನದಲ್ಲಿ ಮೊದಲ ಘಟ್ಟದ ಜಾನಪದ ಅಧ್ಯಯನದಲ್ಲಿನ ಗೀತ ಸಾಹಿತ್ಯದ ಬಗ್ಗೆ ಅಧ್ಯಯನಿಸಲಾಗಿದೆ. "ಜಾನಪದ ಸಾಮಗ್ರಿಗೆ ಅನ್ವಯವಾಗುವ ಸಿದ್ಧಾಂತವನ್ನಾಗಲಿ, ಅಧ್ಯಯನ ವಿಧಾನವನ್ನಾಗಲಿ ಕಾಣುವುದು ದುರ್ಲಭ. ಜಾನಪದ ಸಾಮಾಗ್ರಿಯ ಸಂಗ್ರಹಣೆ ಹಾಗೂ ಅಧ್ಯಯನದಲ್ಲಿ ನಮ್ಮವರು ತೋರಿದ ನಿರ್ಲಕ್ಷವೇ ಇದಕ್ಕೆ ಕಾರಣ. ಕರ್ನಾಟಕದಲ್ಲಿ ಜಾನಪದ ಅಧ್ಯಯನವೆಂದರೆ ಸಂಗ್ರಹಕಾರ್ಯ ನಡೆಸುವುದೆಂದೆನಿಸಿದೆ. ಪಾಶ್ಚಾತ್ಯ ವಿದ್ವಾಂಸರ ಪ್ರೇರಣೆಯಿಂದ ಪ್ರಾರಂಭವಾದ ಕನ್ನಡ ಜನಪದ ಸಾಹಿತ್ಯ ಸಂಗ್ರಹಗಳು ಇಂದಿನವರೆಗೂ ನಡೆದು ಬಂದಿದೆ." (1987ಆ:130–113) ಲೇಖನದಲ್ಲಿ ಜನಪದ ಗೀತಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಡುತ್ತಾರೆ. "ಶ್ರೀ ಹನುಮಂತ ಜೋಶಿಯವರಿಂದ ಎಲ್. ಗುಂಡಪ್ಪನವರ ವರೆಗೆ 200ರಷ್ಟು ಜನ ಸಂಗ್ರಾಹಕರು ಜನಪದಗೀತಗಳ ಬಗೆಗೆ ಒತ್ತು ಕೊಟ್ಟಿರುವುದನ್ನು ವಿವರಿಸುತ್ತಾರೆ. ಸ್ವಾತಂತ್ರ್ಯಪೂರ್ವ ಗೀತ ಸಾಹಿತ್ಯದ ಚರಿತ್ರೆಯಲ್ಲಿ 1935ರ ಗಡುವು ಮತ್ತೊಂದು ನಿಟ್ಟಿನಿಂದಲೂ ಮಹತ್ವದ್ದು. ಕನ್ನಡ ಸಾಹಿತ್ಯದ ನವೋದಯ ಕಾಲ ಅದು. ಕನ್ನಡ ನವೋದಯ ಸಾಹಿತ್ಯದ ನವೋದಯವನ್ನು ತನ್ನ ಜೊತೆಜೊತೆಯಲ್ಲಿಯೇ ಸಾರಿತು. ನೇರವಾಗಿ ಸಂಗ್ರಹ

ಕಾರ್ಯಕ್ಕಿಳಿಯದೆ ಜನಪದ ಗೀತ ಸಾಹಿತ್ಯದ ಶಕ್ತಿ ಹಾಗೂ ಭಾವ ಸಂಪತ್ತನ್ನು ಎತ್ತಿ ತೋರಿಸಿದ್ದೇ ಅಲ್ಲದೆ ಜಾನಪದ ಧೋರಣೆಯಲ್ಲಿಯೇ ಅವುಗಳ ಮೌಲ್ಯಮಾಪನ ನಡೆಸುವ ಪ್ರಯತ್ನ ನಡೆದುವು. ಮಾಸ್ತಿಯವರು 'ಕರ್ನಾಟಕ ಜನಪದ ಸಾಹಿತ್ಯ' (1937) ಎಂಬ ಲೇಖನ ಬರೆದು ಗೀತ ಸಾಹಿತ್ಯದ ಹಿರಿಮೆಯನ್ನು ಎತ್ತಿ ಹೇಳಿದರು. ಜನಪದ ಸಾಹಿತ್ಯಕ್ಷೇತ್ರದಲ್ಲಿ ಆಗಬೇಕಾಗಿರುವ ಕೆಲಸದತ್ತ ಬೊಟ್ಟು ಮಾಡಿ ಸಂಗ್ರಹ ಮತ್ತಷ್ಟು ತ್ವರಿತವಾಗಿ ಆಗಬೇಕಾದುದರ ಅವಶ್ಯಕತೆಯನ್ನು ಎತ್ತಿ ಹೇಳಿದರು." (1987ಅ:138–139) ಎಂದು ವಿವರಿಸುತ್ತಾರೆ.

1989ರಲ್ಲಿ ಪ್ರಕಟವಾದ 'ಕರ್ನಾಟಕದಲ್ಲಿ ಜಾನಪದ ಅಧ್ಯಯನ ನಡೆದು ಬಂದದಾರಿ' ಲೇಖನದಲ್ಲಿ ಕನ್ನಡ ಜಾನಪದಕ್ಕಾಗಿ ದುಡಿದ ಕನ್ನಡಿಗರ ಸ್ಥೂಲ ಚಿತ್ರ ನೀಡಲಾಗಿದೆ. ಶಾಸನಗಳಿಂದ ತೊಡಗಿ ಕವಿ–ಕಾವ್ಯ–ಪರಂಪರೆಯನ್ನು ಗಮನಿಸುತ್ತಾ, 20ರಷ್ಟು ಸಂಕಲನಗಳನ್ನು ಪರಿಚಯಿಸಲಾಗಿದೆ. "ಕನ್ನಡದಲ್ಲಿ ಜಾನಪದ ಅಧ್ಯಯನ ರೂಪುಗೊಳ್ಳಲು ಬಹುಮಟ್ಟಿಗೆ ನಮ್ಮ ನವೋದಯ ಪಂಥದ ಬರಹಗಾರರು ನೆರವಾಗಿದ್ದಾರೆ. ಬದುಕನ್ನು ಆಪ್ತವಾಗಿ ನೋಡಲು ಇವರು ಆರಂಭಿಸಿದುದು ಇದಕ್ಕೆ ಮುಖ್ಯ ಕಾರಣ. ಜಾನಪದ ಸಾಹಿತ್ಯ ಸೊಗಸಿಗೆ ಮಾರುಹೋದುದು ಮತ್ತೊಂದು ಕಾರಣ. ಭಾರತೀಯ ಹಾಗೂ ಅನ್ಯ ಭಾಷೆಗಳಲ್ಲಿ ಪ್ರಕಟಗೊಂಡಿದ್ದ ವಿವಿಧ ಬರಹಗಳ ಮೂಲಕ ಜಾನಪದದ ಸೊಗಸನ್ನು ಮನಗೊಂಡು ಸಂಪೂರ್ಣ ಸಾಹಿತ್ಯಿಕ ಆಸಕ್ತಿಯಿಂದಲೇ ಕನ್ನಡ ಜನಪದ ಸಾಹಿತ್ಯದ ವಿವೇಚನೆಗೆ ಇವರು ತೊಡಗಿದರು. ಆದ್ದರಿಂದಲೇ ಇವರ ಸಂಗ್ರಹಗಳಲ್ಲಿ ಆಯ್ಕೆ ಎದ್ದು ಕಾಣುವುದು." (1989ಆ:66)

ಲಕ್ಷ್ಮಣ ತೆಲಗಾವಿ

1947ರಲ್ಲಿ ಲಕ್ಷ್ಮಣ ತೆಲಗಾವಿ **'ಜನಪದ ವೀರಸಾಹಿತ್ಯ : ಚಾರಿತ್ರಿಕ ವಿವೇಚನೆ'** ಕೃತಿಯಲ್ಲಿ ಕರ್ನಾಟಕದಾದ್ಯಂತ ನಡೆಯುವ ಸಾಂಪ್ರದಾಯಿಕ ಆಚರಣೆಗಳನ್ನು ಗಮನದಲ್ಲಿರಿಸಿಕೊಂಡು ಚಾರಿತ್ರಿಕ ವೀರರ ಬಗೆಗೆ ಬಂದ ಲಾವಣಿ, ಕಥನಗೀತೆಗಳು, ಹಾಡುಗಳು, ಪಾಡ್ದನಗಳು ಮೊದಲಾದವುಗಳನ್ನು ಅಧ್ಯಯನಿಸಿದ್ದಾರೆ. "ಇತಿಹಾಸ ಪ್ರಜ್ಞೆಯ ಅಭಾವದ ಮೂಲಕ, ನಾಗರಿಕ ಜೀವನದ ಇತಿಹಾಸ–ಸಂಸ್ಕೃತಿಗಳ ವಿವರಗಳಲ್ಲೂ ನಮಗೆ ವಾಸ್ತವವಾಗಿ ದೊರೆಯುವುದಿಲ್ಲವೆಂದ ಮೇಲೆ ಜಾನಪದ ಸಾಂಸ್ಕೃತಿಕ, ಸಾಮಾಜಿಕ ಜೀವನದ ಇತಿಹಾಸವು ನಮಗೆ ಎಲ್ಲಿ ದೊರೆಯಬೇಕು? ಹೇಗೆ ದೊರೆಯಬೇಕು? ಎನ್ನುತ್ತಾ ನಾಗರಿಕ ಲೋಕದ ಇತಿಹಾಸ–ಸಂಸ್ಕೃತಿಗಳನ್ನು ಅವರ ಖಚಿತ ವಾಙ್ಮಯದ ಮೂಲಕ, ವಾಸ್ತವ ದೃಷ್ಟಿಯ ಸಂಶೋಧಕರು, ಅಲ್ಪ–ಸ್ವಲ್ಪ ಸತ್ಯೇತಿಹಾಸದ ಸಂಗತಿಗಳನ್ನು

ಕಂಡುಹಿಡಿಯಬಹುದು." (1987:10–19) ಜನಪದ ಕಥನ ಗೀತೆಗಳಲ್ಲಿ ಪೌರಾಣಿಕ, ಐತಿಹಾಸಿಕ, ಧಾರ್ಮಿಕ, ಕೌಟುಂಬಿಕ ಹಾಗೂ ಸಾಮಾಜಿಕ ವಸ್ತುಗಳುಳ್ಳ ವಿಪುಲ ಸಂಗ್ರಹಗಳು ದೊರೆಕುತ್ತವೆನ್ನುವುದು ಮೇಲ್ನೋಟಕ್ಕೆ ಕಂಡು ಬರುವ ಅಂಶ. ಚಾರಿತ್ರಿಕ ಗೀತೆಗಳನ್ನು, ಕಾವ್ಯವನ್ನು ಗಮನಿಸಿರುವ ತಜ್ಞರು ಅವುಗಳನ್ನು ಅಸಮಗ್ರ ಐತಿಹಾಸಿಕ ಕಾವ್ಯಗಳು, ಸಮಗ್ರ ಐತಿಹಾಸಿಕ ಕಾವ್ಯಗಳು ಹಾಗೂ ಅಸ್ಪಷ್ಟ ಐತಿಹಾಸಿಕ ಕಾವ್ಯಗಳು ಎಂದು ಮೂರು ಭಾಗ ಮಾಡುತ್ತಾರೆ.

ಕೃತಿಯಲ್ಲಿ ಅಧ್ಯಯನಕ್ಕಾಗಿ ನೂರಕ್ಕಿಂತಲೂ ಹೆಚ್ಚು ಐತಿಹಾಸಿಕ ಲಾವಣಿಗಳ, ಕಥನಗೀತೆಗಳ ಸಂಗ್ರಹಗಳನ್ನು ಗಮನಿಸಲಾಗಿದೆ. ಅಧ್ಯಯನಕ್ಕೆ ಬಳಸಲಾದ ಲಾವಣಿಗಳ ಸಂಗ್ರಹಗಳು ಮೊದಲ ಘಟ್ಟದ ಅಧ್ಯಯನಕ್ಕೆ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತವೆ.

ಜಯಲಕ್ಷ್ಮೀ ಸೀತಾಪುರ

1987ರಲ್ಲಿ ಪ್ರಕಟವಾದ ಜಯಲಕ್ಷ್ಮೀ ಸೀತಾಪುರರ **'ಮಂಡ್ಯ : ಜನಪದ ಕೊಡುಗೆ'** ಲೇಖನದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಜಾನಪದಕ್ಕಾಗಿ ದುಡಿದ ದೇಶಿ ಹಾಗೂ ವಿದೇಶಿ ವಿದ್ವಾಂಸರನ್ನು ಗಮನಿಸಲಾಗಿದೆ. "ಯುರೋಪಿನ ಬೇರೆಬೇರೆ ಭಾಗಗಳಲ್ಲಿ 18ನೇ ಶತಮಾನದ ಆದಿಭಾಗದಲ್ಲಿ ಆರಂಭವಾದ ವಿವಿಧ ಸಂಸ್ಕೃತಿಗಳ ಅಧ್ಯಯನದ ಅಂಗವಾಗಿ ಜಾನಪದ ಅಧ್ಯಯನ ಆರಂಭವಾಯಿತೆಂದು ಹೇಳಬಹುದು. ಜಾನಪದ ಅಧ್ಯಯನ ಕಾರ್ಯಕ್ಕಾಗಿ ಪಾಶ್ಚಾತ್ಯ ವಿದ್ವಾಂಸರು ಜಾನಪದ ಸಂಗ್ರಹಕ್ಕೆ ನಾಂದಿ ಹಾಡಿದರು. ಪಾಶ್ಚಾತ್ಯ ವಿದ್ವಾಂಸರಂತೆ ಕನ್ನಡದಲ್ಲಿ ಜಾನಪದ ಅಧ್ಯಯನಕ್ಕೆ ತಳಹದಿ ಹಾಕಿದವರು ಎಂ.ಎಲ್. ಶ್ರೀಕಂಠೇಶ್ವಗೌಡರು. (1852–1926) ಮಂಡ್ಯದವರೇ ಆದ ಇವರು ಜನಪದ ಗಾದೆ, ಒಗಟುಗಳನ್ನು ಸಾಹಿತ್ಯ ಕೃತಿಗಳಲ್ಲಿ ಹೇರಳವಾಗಿ ಬಳಸಿಕೊಂಡಿದ್ದಾರೆ. 1933ರಲ್ಲಿ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ಎಂಬ ಗ್ರಂಥವನ್ನು ಅರ್ಚಕ ಬಿ. ರಂಗಸ್ವಾಮಿಯವರು ಹೊರತಂದರು. ಇವರು ತಮ್ಮ ಹುಟ್ಟೂರಿನಲ್ಲಿ ದೊರೆಯಬಹುದಾದ ಎಲ್ಲಾ ಜಾನಪದ ಸಾಮಗ್ರಿಯನ್ನು ಕಲೆಹಾಕಿ ಅಲ್ಲಿನ ಜನಪದ ಸಂಸ್ಕೃತಿಯ ಒಂದು ಚಿತ್ರವನ್ನೇ ಕೊಟ್ಟಿದ್ದಾರೆ." (1987:37)

ಪುರುಷೋತ್ತಮ ಬಿಳಿಮಲೆ

1990ರಲ್ಲಿ ಪ್ರಕಟವಾದ ಪುರುಷೋತ್ತಮ ಬಿಳಿಮಲೆಯವರ 'ಕನ್ನಡದಲ್ಲಿ ಜಾನಪದಕ್ಕಾಗಿ ದುಡಿದವರು' ಲೇಖನದಲ್ಲಿ ಜಾನಪದಕ್ಕಾಗಿ ದುಡಿದ ಮಹತ್ವದ ಕೆಲವು ಮಹನೀಯರ ಕಿರುಪರಿಚಯವನ್ನು ಮಾಡಿಕೊಡಲಾಗಿದೆ. "ಇಂದು ಕನ್ನಡದಲ್ಲಿ ಅತ್ಯಂತ ವಿಸ್ತಾರವಾಗಿ

ನಡೆಯುತ್ತಿರುವ ಜಾನಪದ ಅಧ್ಯಯನ ಶತಮಾನದ ಆದಿಯಲ್ಲೇ ಆರಂಭವಾಯಿತು. ಜಾನಪದಕ್ಕಾಗಿ ದುಡಿದ, ದುಡಿಯುತ್ತಿರುವ ಸಂಖ್ಯೆ ಸಾವಿರವನ್ನು ಮೀರುತ್ತದೆ. ಅವರ ಕೃತಿಗಳು ಎಷ್ಟೋ ಸಾವಿರ" (1990ಅ:22). ಕನ್ನಡದಲ್ಲಿ ಜಾನಪದಕ್ಕಾಗಿ ದುಡಿದ ವಿದೇಶಿಯರಾದ ಲೆ.ಕರ್ನಲ್ ಮೆಕೆಂಝಿ (1654), ಜೆ.ಎಫ್. ಫ್ಲೀಟ್ (1885) ರೆ। ಫಾ। ಕಿಟ್ಟೆಲ್ (1932–1973) ಮೊದಲಾದವರು 'ಕರ್ನಾಟಕ ಜಾನಪದ'ವನ್ನು ಕನ್ನಡೇತರಿಗೆ ಪರಿಚಯಿಸಿದರು. ಮುಂದೆ ದೇಸೀ ವಿದ್ವಾಂಸರು ಕ್ಷೇತ್ರದಲ್ಲಿ ಕೆಲಸ ಮಾಡಲು ಅನುಕೂಲವಾಯಿತು. "ವಿ.ಎನ್. ನರಸಿಂಹ ಅಯ್ಯಂಗಾರ್ (1874) ಎಂಬವರು 'ಭೂತಾರಾಧನೆ'ಯ ಬಗೆಗೆ 'ಇಂಡಿಯನ್ ಆ್ಯಂಟಿಕ್ವೇರಿ'ಯಲ್ಲಿ ಬರೆದರು. ದೇಶಿ ವಿದ್ವಾಂಸರಲ್ಲಿ ನಡಕೇರಿಯಂಡ ಚಿಣ್ಣಪ್ಪ (1924–ಪಟ್ಟೋಲೆ ಪಳಮೆ) ಆದ್ಯರು. ಮುಂದೆ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ (1925–'ಕನ್ನಡ ಲಾವಣಿ ಸಾಂಗತ್ಯ'), ಹಲಸಂಗಿ ಗೆಳೆಯರು (ಮಧುರ ಚೆನ್ನ, ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ ಹಾಗೂ ಧೂಲಾ ಸಾಹೇಬ (1931) 'ಗರತಿಹಾಡು') ಮುಂತಾದವರ 10ರಷ್ಟು ಸಂಕಲನಗಳನ್ನು ಲೇಖನದಲ್ಲಿ ಗಮನಿಸಿದ್ದಾರೆ. ಈ ಮಧ್ಯೆ ಶ್ರೀಕಂಠೆಗೌಡ, ಹನುಮಂತೇಗೌಡ, ಎಚ್.ಕೆ. ಮಲ್ಲಪ್ಪ, ಪ್ರಹ್ಲಾದ್ ನರೇಗಲ್ಲ, ಬೇಟಗೇರಿ ಕೃಷ್ಣಶರ್ಮ ಮೊದಲಾದವರು ಜಾನಪದದ ಬಗೆಗೆ ಅಭಿಮಾನ ಹುಟ್ಟುವಂತ ಲೇಖನ ಬರೆದರು."

ಕನ್ನಡ ಜಾನಪದಕ್ಕಾಗಿ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರದಲ್ಲಿ ದುಡಿದ ಮಧುರಚೆನ್ನಪ್ಪ, ಸಿಂಪಿಲಿಂಗಣ್ಣ, ಮತಿಘಟ್ಟ ಕೃಷ್ಣಮೂರ್ತಿ, ಎಸ್.ಕೆ. ಕರೀಂಖಾನ್, ಎಲ್.ಆರ್. ಹೆಗಡೆ, ಎಚ್.ಎಲ್. ನಾಗೇಗೌಡ, ಹಾ.ಮಾ. ನಾಯಕ ಹಾಗೂ ಹಿ.ಚಿ. ಬೋರಲಿಂಗಯ್ಯ ಮೊದಲಾದ ಜಾನಪದ ವಿದ್ವಾಂಸರನ್ನು ಲೇಖನದಲ್ಲಿ ಗಮನಿಸಲಾಗಿದೆ.

1992 ರಲ್ಲಿ ಪ್ರಕಟವಾದ ಅವರ 'ಕನ್ನಡ ಜಾನಪದಕ್ಕೆ ಸ್ವಾತಂತ್ರ್ಯಪೂರ್ವ ದೇಶೀ ವಿದ್ವಾಂಸಕೊಡುಗೆ' ಲೇಖನದಲ್ಲಿ ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನದ ಹಿಂದಿನ ಸೈದ್ಧಾಂತಿಕ ಚೌಕಟ್ಟನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಎಚ್.ಕೆ.ಮಲ್ಲಪ್ಪ, ಮಧುರ ಚೆನ್ನ, ಮಾಸ್ತಿ ಹಾಗೂ ದೇವುಡು ಅವರ ಪ್ರಸ್ತಾವನೆಯ ಮಾತುಗಳನ್ನು ಉಲ್ಲೇಖಿಸುತ್ತಾ ಮೂರು ಅಂಶಗಳನ್ನು ಗುರುತಿಸಿದ್ದಾರೆ.

"1. ಬರಹಗಳಲ್ಲಿ ದೇಸೀ ಸಂಸ್ಕೃತಿಯ ಬಗೆಗೆ ಭಾವುಕವಾದ ಒಲವು ಕಂಡು ಬರುತ್ತದೆ. ಒಲವು ಪ್ರಶಂಸಾಪರವಾಗಿದ್ದು ಉದಾರವಾದೀ ನಿಲುವನ್ನು ಹೊಂದಿದೆ.

ಜಾನಪದವು ದೇಸೀ ಸಂಸ್ಕೃತಿಯ ಅತ್ಯುತ್ತಮ ಮಾದರಿ ಎಂಬಂತೆ ಗ್ರಹೀತವಾಗಿದೆ. ವಾಸ್ತವವಾಗಿ ಈ ಬಗೆಯ ಕೆಲಸಗಳು ಆ ಕಾಲದಲ್ಲಿ ನಡೆಯುತ್ತಿದ್ದ ವಸಾಹತೀಕರಣ ಮೂಲದ ಪಾಶ್ಚಾತ್ಯೀಕರಣ ಒಂದು ಬಗೆಯ ಪ್ರತಿಕ್ರಿಯೆಯೂ ಹೌದು ಪ್ರತಿಭಟನೆಯೂ ಹೌದು.

2. ವಿದ್ವಾಂಸರ ದೃಷ್ಟಿಯಲ್ಲಿ ಅಖಿಲಭಾರತ ಮಟ್ಟದಲ್ಲಿ ಕಂಡುಬರುವ ವೈದಿಕ ಸಂಸ್ಕೃತಿಯ ಸ್ವರೂಪಕ್ಕೂ ಪ್ರಾದೇಶಿಕವಾಗಿ ಕಂಡು ಬರುವ ಜನಪದ ಸಂಸ್ಕೃತಿಗೂ ಮಧ್ಯೆ ಯಾವುದೇ ಸಂಘರ್ಷವಿಲ್ಲ. ಅಥವಾ ಇವರ ದೃಷ್ಟಿಯಿಂದ ಸಂಘರ್ಷ ಇರಕೂಡದು. ದೇವುಡು ಅವರ ಮಾತಲ್ಲಾದರೆ ಇವೆಲ್ಲವೂ ಒಂದೇ ಅಚ್ಚಿನಲ್ಲಿ ಬಿದ್ದು ಒಂದೇ ಜಾತಿಯ ಪಂಕ್ತಿಯಾಗುವುದಕ್ಕೆ ಸಿದ್ಧವಾಗುತ್ತಿರುವ ಒಂದು ಲೋಹದ ತುಂಡುಗಳು. ಸಂಸ್ಕೃತಿಯ ಸ್ವರೂಪವನ್ನು ಸಂಘರ್ಷಾತೀತಗೊಳಿಸುವ ಪ್ರವೃತ್ತಿಯದು.

3. ಇವರಲ್ಲಿ ಬಹಳ ಜನರಿಗೆ ಜಾನಪದ ಎಂದರೆ 'ಜನಪದ ಸಾಹಿತ್ಯ', ಜನಪದ ಸಾಹಿತ್ಯ ಎಂದರೆ ಮೂಲತಃ ಭಾವನಾತ್ಮಕವಾದ ನಿಲುವಿನಲ್ಲಿ ಕವಿತ್ವಕ್ಕೆ ಮನ್ನಣೆ ಸಂದಾಯ ವಾಗುತ್ತದೆ. ಕವಿಗಳ ಬಗೆಗಿನ ನಿಲುವು ಲಿಖಿತ ಸಾಹಿತ್ಯದಿಂದ ನಿಷ್ಪನ್ನವಾಗಿದೆ." (1992ಆ:24)

ಈ ಮಾತುಗಳನ್ನು ಬೇರೆ ಬೇರೆ ಕೃತಿಗಳ ಮೂಲಕ ಸಮರ್ಥಿಸುವ ಬಿಳಿಮಲೆಯವರು ಲೇಖನದ ಕೊನೆಯಲ್ಲಿ ತೀರ್ಮಾನವನ್ನು ಕೊಡುತ್ತಾರೆ. "ಶತಮಾನದ ಕೊನೆಯಲ್ಲಿ ನಿಂತು ಶತಮಾನದ ಪೂರ್ವಾರ್ಧದಲ್ಲಿ ನಡೆದ ಜಾನಪದ ಕೆಲಸಗಳನ್ನು ಅವಲೋಕಿಸಿದಾಗ ಅವುಗಳಲ್ಲಿ ಸಾಕಷ್ಟು ದೋಷಗಳು ಕಂಡು ಬರುವುದು ಸಹಜ. ತಂತ್ರಜ್ಞಾನ ಇನ್ನೂ ಜನ ಜೀವನವನ್ನು ಪೂರ್ಣವಾಗಿ ಆಕ್ರಮಿಸಿಕೊಳ್ಳದ ಸಂದರ್ಭ ಅದಾದ್ದರಿಂದ, ಅಂದಿನ ಸಂಗ್ರಹಗಳು ಬಹಳ ಬಾರಿ ಅವೈಜ್ಞಾನಿಕವಾಗಿರುವುದು ಅನಿವಾರ್ಯವಾಯಿತು. ಪಾಠ ಕಲ್ಪನೆ, ಪ್ರಕಾರ ಕಲ್ಪನೆಗಳಲ್ಲಿ, ಕ್ರಾಂತಿಕಾರಿ ಬದಲಾವಣೆಗಳು ಸಂಭವಿಸಿದ ಕಾಲದಲ್ಲಿ ನಾವು ಸ್ವಾತಂತ್ರ್ಯಪೂರ್ವ ದೇಸೀ ವಿದ್ವಾಂಸರ ಸಂಗ್ರಹಗಳನ್ನು ಬಹಳ ಜಾಗ್ರತೆಯಾಗಿ ಉಪಯೋಗಿಸಬೇಕಾಗುತ್ತದೆ. ಜೊತೆಗೆ ಎಷ್ಟೋ ಸಂಗ್ರಹಗಳನ್ನು ಅನುಮಾನದಿಂದಲೂ ನೋಡ ಬೇಕಾಗುತ್ತದೆ." (1992ಆ:29)

ಬಿಳಿಮಲೆಯವರು ಇತರರು ಮಾಡುವ ಸಮೀಕ್ಷೆಗಿಂತ ಭಿನ್ನವಾಗಿ ಅಧ್ಯಯನಕಾರರ ಕೆಲಸಗಳ ಹಿಂದಿನ ಧೋರಣೆಗಳನ್ನು ವಿಶೇಷವಾಗಿ ಪರಿಶೀಲಿಸಿದ್ದಾರೆ. ಹಾಗೂ ಆ ಬಗೆಯ ಕೆಲಸಗಳನ್ನು ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಮಂಡಿಸಲು ಪ್ರಯತ್ನಿಸಿದ್ದಾರೆ.

ಜಾನಪದ ಕೆಲಸಗಳನ್ನು ವಸಾಹತೀಕರಣದ ಹಿನ್ನೆಲೆಯಲ್ಲಿ ಗುರುತಿಸುವ "ಆ ಬಗೆಯ ಕೆಲಸಗಳು ವಸಾಹತೀಕರಣದ ಪ್ರತಿಕ್ರಿಯೆಗೆ ಒಂದು ಬಗೆಯ ಪ್ರತಿಭಟನೆಯೂ ಹೌದು."(1992ಆ: 26) ಈ ಪುಟ್ಟ ಲೇಖನವು ಮೊದಲ ಘಟ್ಟದ ಅಧ್ಯಯನಕ್ಕೆ ಒಂದು ಸುಭದ್ರ ತಾತ್ವಿಕ ಬುನಾದಿಯನ್ನು ಒದಗಿಸಿದೆ.

ಜವಾಹರಲಾಲ್ ಹಂಡೂ

1991ರಲ್ಲಿ ಪ್ರಕಟವಾದ ಜವಾಹರಲಾಲ್ ಹಂಡೂ ಅವರ 'ದಕ್ಷಿಣ ಭಾರತದ ಜಾನಪದ ಅಧ್ಯಯನಗಳು–ಅಭಿವೃದ್ಧಿ ಹಾಗೂ ಬೆಳವಣಿಗೆ' ಲೇಖನದಲ್ಲಿ ದ್ರಾವಿಡ ಭಾಷೆಯನ್ನಾಡುವ ತಮಿಳು, ತೆಲುಗು, ಕನ್ನಡ ಹಾಗೂ ಮಲೆಯಾಳಿ ಭಾಷೆಗಳಲ್ಲಿ ಆದ ಜಾನಪದ ಕೆಲಸವನ್ನು ಗಮನಿಸಲಾಗಿದೆ. ದಕ್ಷಿಣ ಭಾರತದ ಜಾನಪದ ಅಧ್ಯಯನವನ್ನು ಮಿಷನರಿಗಳ ಅವಧಿ: 1800–1900, ರಾಷ್ಟ್ರೀಯತೆಯ ಅವಧಿ: 1900–1950 ಹಾಗೂ ಶೈಕ್ಷಣಿಕ ಅವಧಿ: 1950–1980 (1991:606–612) ಎಂದು ಮೂರು ಹಂತಗಳಲ್ಲಿ ವರ್ಗೀಕರಿಸಲಾಗಿದೆ.

ಎ.ವಿ. ನಾವಡ

1993ರಲ್ಲಿ ಎ.ವಿ.ನಾವಡರ 'ಕರ್ನಾಟಕ ಜಾನಪದ ಅಧ್ಯಯನಕ್ಕೆ ವಿದೇಶಿ ವಿದ್ವಾಂಸರ ಕೊಡುಗೆ' ಲೇಖನ ಪ್ರಕಟವಾಯಿತು. "ಕರ್ನಾಟಕದ ಜಾನಪದ ಅಧ್ಯಯನಕ್ಕೆ ತಳಹದಿ ಹಾಕಿದವರು ವಿದೇಶೀ ವಿದ್ವಾಂಸರು. ಇದರ ಫಲವಾಗಿ ಜಾನಪದವು ಭಾರತಶಾಸ್ತ್ರದ ಒಂದು ಕವಲಾಗಿ ಬೆಳೆದು ಬರತೊಡಗಿತು. ಜಾನಪದವು ಶಾಸ್ತ್ರಬದ್ಧ ಅಧ್ಯಯನಕ್ಕಾಗಿ ಬರತೊಡಗಿದ್ದು 1872ರಲ್ಲಿ. **ಜೇಮ್ಸ್ ಬರ್ಗಿಸ್** ಆರಂಭಿಸಿದ **ಇಂಡಿಯನ್ ಅಂಟಿಕ್ವೇರಿ**ಯಲ್ಲಿ ಜಾನಪದವನ್ನು ಪ್ರಾಚೀನ ಉಳಿಕೆಯ ಶಾಸ್ತ್ರವೆಂದಷ್ಟೇ ಪರಿಗಣಿಸಿದೆ ಸಮಕಾಲದ ಜನಪದ ಕತೆ, ನಂಬಿಕೆ, ಗಾದೆ, ಸಂಪ್ರದಾಯ, ಆಚರಣೆಗಳನ್ನು ಕುರಿತ ಅನೇಕ ಲೇಖನಗಳನ್ನು ಪ್ರಕಟಿಸಲು ಸಾಧ್ಯವಾಯಿತು."(1993:81–82)

ಲೇಖನದಲ್ಲಿ ಕರ್ನಾಟಕದಲ್ಲಿ ಜಾನಪದ ಅಧ್ಯಯನವು ಬೆಳೆದು ಬಂದ ನೆಲೆಯನ್ನು ಗುರುತಿಸಲಾಗಿದೆ. ವಿದೇಶಿ ವಿದ್ವಾಂಸರ (ಮಿಶನರಿಗಳ) ಮೂಲಕ ಬೆಳೆದು ಬಂದ ಜಾನಪದ ಅಧ್ಯಯನಗಳನ್ನು ಮತಪ್ರಚಾರ ಹಾಗೂ ಮತಾಂತರದ ಉದ್ದೇಶಕ್ಕಾಗಿ ಹಾಗೂ ಸ್ಥಳೀಯ ಸಂಸ್ಕೃತಿಯ ಮೇಲಿನ ಕುತೂಹಲ ಹಾಗೂ ಆಡಳಿತ ನಿರ್ವಹಣೆಯ ಸುಸೂತ್ರತೆಗಾಗಿ ಎಂದು ಎರಡು ನೆಲೆಯಲ್ಲಿ ಚರ್ಚಿಸಲಾಗಿದೆ.

ಮೊದಲ ಘಟ್ಟದ ಅಧ್ಯಯನದ ಇತಿಮಿತಿಗಳು

ಕನ್ನಡ ಜಾನಪದ ಅಧ್ಯಯನದ ಬಗೆಗೆ ಉತ್ತಮ ಹಾಗೂ ಸಮಗ್ರ ಸಮೀಕ್ಷೆಯೊಂದು ಇದುವರೆಗೆ ಬಂದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅದರಲ್ಲೂ ಮೊದಲ ಘಟ್ಟದ ಜಾನಪದ ಅಧ್ಯಯನದ ಬಗ್ಗೆ ಯಾವುದೇ ಸಮರ್ಪಕವಾದ ಸಮೀಕ್ಷೆ ಪ್ರಕಟವಾಗಿಲ್ಲ. ಸಮೀಕ್ಷೆಯೇ ಇಲ್ಲದ ಸಂದರ್ಭದಲ್ಲಿ ವಿಮರ್ಶೆಯನ್ನು ನಿರೀಕ್ಷಿಸಲಾಗದು.

ಪಾಶ್ಚಾತ್ಯ ಮಿಷನರಿಗಳು ಕನ್ನಡ ಜಾನಪದದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕೆಲಸ ಮಾಡಿದರು. ಕನ್ನಡ ಜಾನಪದದಲ್ಲಿ ಕೆಲಸ ಮಾಡಿದವರ ಬಗ್ಗೆ ಸಮೀಕ್ಷೆ ನಡೆಸಲು ಅವರಿಗೆ ಆಕರ ಸಾಮಗ್ರಿಗಳೇ ಇರಲಿಲ್ಲವಾದ್ದರಿಂದ ಸಮೀಕ್ಷೆಯಂತೂ ದೂರವೇ ಉಳಿಯಿತು. ವಿದೇಶಿ ವಿದ್ವಾಂಸರ ಪ್ರಮುಖ ಉದ್ದೇಶ ಮತಪ್ರಚಾರ. ಆದರೂ ತಮ್ಮ ವಿದ್ವತ್ತನ್ನು, ಬೋಧನೆಯನ್ನು ಭಾರತೀಯ ಸಂಸ್ಕೃತಿಯ ಚೌಕಟ್ಟಿನಿಂದ ಹೊರತಾಗಿ ಪ್ರಚಾರಮಾಡಲು, ಅರ್ಥೈಸಿಕೊಳ್ಳಲು ಅವಕಾಶ ಒದಗಲಿಲ್ಲ. ಈ ಸಂದರ್ಭದಲ್ಲಿ ಭಿನ್ನ ಸಂಸ್ಕೃತಿ, ಭಾಷೆ, ಸಂಪ್ರದಾಯ ಶಿಸ್ತುಗಳನ್ನು ಪಾಶ್ಚಾತ್ಯರು ಅರ್ಥಮಾಡಿಕೊಂಡು, ಆ ಮೂಲಕ ಮತಪ್ರಚಾರಕ್ಕೆ ದಾರಿ ಮಾಡಿಕೊಂಡರು. ಉದಾಹರಣೆಗೆ, ಅಬ್ಬೆ ದುಬೋಯೆಯನ **'ಹಿಂದೂ ಮ್ಯಾನರ್ಸ್ ಕಸ್ಟಮ್ಸ್ ಆಂಡ್ ಸೆರೆಮೋನೀಸ್'**(1816) ಗ್ರಂಥ ಗಮನೀಯ.

ಮೊದಲಬಾರಿಗೆ ಕನ್ನಡ ಜಾನಪದ ಅಧ್ಯಯನದ ಬಗ್ಗೆ ಮಾಹಿತಿ ನೀಡಿದವರು **ಜೀ.ಶಂ.ಪರಮಶಿವಯ್ಯ** ಹಾಗೂ **ಹಾ.ಮ.ನಾಯಕರು**. 1967ರಲ್ಲಿ ಜೀ.ಶಂ.ಪರಮಶಿವಯ್ಯ ಎರಡು ಲೇಖನಗಳನ್ನು ಪ್ರಕಟಿಸಿದರು. 'ಸ್ವಾತಂತ್ರ್ಯಪೂರ್ವ ಕನ್ನಡ ಜನಪದ ಸಾಹಿತ್ಯ' (1967) ಹಾಗೂ 'ಜನಪದ ಸಾಹಿತ್ಯ ಸಂಗ್ರಹಣೆಯಲ್ಲಿ ನಮ್ಮ ಹೊಣೆ' (1967) ಎಂಬ ಶೀರ್ಷಿಕೆಯ ಎರಡೂ ಲೇಖನಗಳು ಕನ್ನಡ ಜಾನಪದವನ್ನು ಭಾರತೀಯ ಸಂದರ್ಭದಲ್ಲಿ ಗುರುತಿಸಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟಂತೆ ತೋರುತ್ತದೆ. 1974ರಲ್ಲಿ ಪ್ರಕಟವಾದ **'ಕನ್ನಡ ಜಾನಪದ ಗ್ರಂಥಸೂಚಿ'** ಗ್ರಂಥದಲ್ಲಿ ಆ ವರೆಗೆ ಪ್ರಕಟವಾದ 532 ಗ್ರಂಥಗಳನ್ನು ದಾಖಲಿಸಿದ್ದಾರೆ. ಗ್ರಂಥಸೂಚಿಯ ಉದ್ದೇಶ ಪ್ರಕಟವಾದ ಗ್ರಂಥಗಳನ್ನು ಅಧ್ಯಯನ ಮಾಡುವುದಲ್ಲವಾದ್ದರಿಂದ ವಿಶ್ಲೇಷಣೆಯನ್ನು ನಿರೀಕ್ಷಿಸಲಾಗಿದೆ. ಡಿ.ಕೆ. ರಾಜೇಂದ್ರ (1974), ನಂ.ತಪಸ್ವಿಕುಮಾರ್ (1972) ಸುಶೀಲಾ ಪಟ್ಟಣಶೆಟ್ಟಿ (1974), ಜ್ಯೋತಿ ಹೊಸೂರ (1974), ಕೆ. ಮರುಳ ಸಿದ್ಧಪ್ಪ (1974), ತೀ.ನಂ. ಶಂಕರನಾರಾಯಣ (1978), ದೇಜವರೇಗೌಡ (1978), ಮಲ್ಲಿಕಾರ್ಜುನ ಎಸ್. ಲಠ್ಠೆ (1979), ಮೊದಲಾದವರ ಬರಹಗಳು ಜಾನಪದವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸದೆ ಪರಿಚಯಿಸುವುದಕ್ಕೆ

ಸೀಮಿತವಾಗಿದೆ. ಜೊತೆಗೆ ಅವೆಲ್ಲವೂ ಪ್ರಾಸಂಗಿಕವಾದ ಬರಹಗಳು, ಕೃತಿಗಳ ಪಟ್ಟಿ ಮಾಡುತ್ತಲೇ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ಮೊದಲ ಹಂತದ ಬರಹಗಳಲ್ಲಿ ಇಂತಹ ಪಟ್ಟಿ ಮಾಡುವಿಕೆ ಅತ್ಯಂತ ಸಹಜವಾದುದು.

ಸೋಮಶೇಖರ ಇಮ್ರಾಪುರ (1979), ರಾಮೇಗೌಡ (1981), ನಂ. ತಪಸ್ವೀಕುಮಾರ್ (1981) ಇವರ ಲೇಖನಗಳು ಸಾಕಷ್ಟು ಮಾಹಿತಿಯನ್ನು, ವಿವರವನ್ನು ನೀಡುತ್ತವೆ. ಇಮ್ರಾಪುರ ಹಾಗೂ ತಪಸ್ವೀಕುಮಾರ್ ಇವರ ಲೇಖನಗಳು ಲಭ್ಯವಿರುವ ಕೃತಿಗಳ ವಿವರವಾದ ಪರಿಚಯ ಮಾಡಿಕೊಡುವುದಕ್ಕೆ ಬದ್ಧವಾಗಿವೆ. ಒಟ್ಟು ಜಾನಪದ ಅಧ್ಯಯನವನ್ನು ಬಹಳ ಉದಾರವಾದಿ ನೆಲೆಯಿಂದ ನೋಡುವ ಇವರು ಜಾನಪದದ ಅಧ್ಯಯನಕ್ಕೆ ಮೂಲ ಪ್ರೇರಣೆಯೇನು? ಎಂಬುದನ್ನು ಚರ್ಚಿಸುತ್ತಾರೆ. ಕನ್ನಡ ಜಾನಪದ ಅಧ್ಯಯನದ ಸಾಂಸ್ಕೃತಿಕ ಹಿನ್ನೆಲೆಯನ್ನು ವಿಶ್ಲೇಷಿಸುವಾಗ ಲೇಖನ ಹೆಚ್ಚು ಉಪಯೋಗಕ್ಕೆ ಬಂದಿದೆ.

ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನದಲ್ಲಿ ಗೀತ–ಸಂಕಲನಗಳೇ ಯಾಕೆ ಹೆಚ್ಚು ಬಂದಿವೆ? ಗದ್ಯ ಹಾಗೂ ಇತರ ಪ್ರಕಾರಗಳತ್ತ ನಮ್ಮ ಜಾನಪದ ವಿದ್ವಾಂಸರು ಯಾಕೆ ಗಮನಹರಿಸಿಲ್ಲ? ಮೊದಲ ಘಟ್ಟದ ಜಾನಪದ ವಿದ್ವಾಂಸರ ಕ್ಷೇತ್ರಕಾರ್ಯ ವಿಧಾನ ಯಾವುದು? ಕೃತಿಗಳನ್ನು ಸಂಪಾದಿಸಿದ ರೀತಿ ಯಾವುದು? ಎಂಬಿತ್ಯಾದಿ ಮುಖ್ಯ ಪ್ರಶ್ನೆಗಳತ್ತ ಇವರು ಗಮನಹರಿಸಿಲ್ಲ. ಆ–ವಿಮರ್ಶಾತ್ಮಕವಾದ ಇಂತಹ ಅಧ್ಯಯನಗಳ ಹಿಂದಿನ ಧೋರಣೆ ವಿಶೇಷ ಪರಿಶೀಲನೆಗೆ ಅರ್ಹವಾದುದು.

ಜೀ.ಶಂ.ಪರಮಶಿವಯ್ಯ (1979) ಹಾಗೂ ಅಂಬಳಿಕೆ ಹಿರಿಯಣ್ಣ (1989) ಅವರ ಲೇಖನಗಳು ಬಹುಮಟ್ಟಿಗೆ ಒಂದೇ ವಿಧವಾಗಿದ್ದು ಒಟ್ಟು ಅಧ್ಯಯನದ ವ್ಯಾಪ್ತಿಯನ್ನು ಒಂದು ಬೀಸಿನಲ್ಲಿ ಹಿಡಿದಿಡುವ ಪ್ರಯತ್ನವಾಗಿದೆ. ಎ.ವಿ. ನಾವಡ ವಿದೇಶಿ ವಿದ್ವಾಂಸರು ಅಧ್ಯಯನಕ್ಕೆ ತೊಡಗಿದ ಎರಡು ನೆಲೆಯನ್ನು ಗುರುತಿಸುತ್ತಾರೆ. ಮಿಷನರಿಗಳ ಕಾಲಘಟ್ಟದ ಸಂಗ್ರಹ ಕಾರ್ಯವನ್ನು ಪರಿಚಯಿಸಲಾಗಿದ್ದು ಕನ್ನಡಿಗರಿಗೆ ಇದು ಯಾವ ರೀತಿ ಪ್ರೇರಣೆ ಆಗಿದೆಯೆಂಬುದನ್ನು ಚರ್ಚಿಸಿಲ್ಲ. ಪುರುಷೋತ್ತಮ ಬಿಳಿಮಲೆ (1992) ಯವರು ತಮ್ಮ ಲೇಖನದಲ್ಲಿ ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನಗಳ ಹಿಂದಿನ **ಸೈದ್ಧಾಂತಿಕ ನೆಲೆ**ಯನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಅಧ್ಯಯನದ ಮುಂದಿನ ಹಂತಕ್ಕೆ ಬಿಳಿಮಲೆಯವರ ಲೇಖನ ಒಂದು ಸುಭದ್ರ ಚೌಕಟ್ಟನ್ನು ಒದಗಿಸಿ ಕೊಡುತ್ತದೆ.

ಅಧ್ಯಯನದ ಆಕರ ಹಾಗೂ ವರ್ಗೀಕರಣ

ಜಾನಪದದಲ್ಲಿ ಬಹಳ ದೊಡ್ಡ ಸಮಸ್ಯೆ ಇರುವುದು ಅದರ ಎಲ್ಲೆಗಳನ್ನು ಗುರುತಿಸುವುದರಲ್ಲಿ. ಅತ್ಯಂತ ವಿಶಾಲವೂ ವ್ಯಾಪಕವೂ ಸಂಸ್ಕೃತಿಯ ಸಮಗ್ರ ವ್ಯವಹಾರಗಳನ್ನು ಒಳಗೊಳ್ಳುವ ಜಾನಪದದ ವ್ಯಾಪ್ತಿಯೊಳಗಡೆ ಯಾವುದು ಸೇರ್ಪಡೆಯಾಗುವುದಿಲ್ಲ ಎಂದು ನಿರ್ಣಯಿಸುವುದು ಬಹಳ ಕಷ್ಟದ ಕೆಲಸವಾಗಿದೆ. ಜಾನಪದವನ್ನು ನಿರ್ವಚಿಸಿದ ವಿದ್ವಾಂಸರಲ್ಲಿಯೂ ಕೂಡ ಜಾನಪದದ ಸ್ವರೂಪ ಹಾಗೂ ವ್ಯಾಪ್ತಿಯ ಬಗೆಗೆ ಏಕಾಭಿಪ್ರಾಯವಿಲ್ಲ. ಅಲನ್ ಡಂಡಸ್ ಜಾನಪದವನ್ನು ಗ್ರಾಮಾಂತರ ಬದುಕಿಗೆ ಮಾತ್ರ ಸೀಮಿತಗೊಳಿಸದೆ ಅದರ ವ್ಯಾಪ್ತಿಯನ್ನು ಹಿಗ್ಗಲಿಸಿದರು. ಅವರ ಪ್ರಕಾರ, "ಸಮಾನವಾದ ಅಂಶವನ್ನು ಹೊಂದಿರುವ ಯಾವ ಒಂದು ಗುಂಪಾದರೂ ಒಂದು ಜಾನಪದ ವರ್ಗ ಎಂದೆನಿಸಿಕೊಳ್ಳುತ್ತದೆ. ಆದರೆ ಈ ವರ್ಗಕ್ಕೆ ಸೇರಿದ ಜನರಿಗೆ ಸಮಾನ ಪರಂಪರೆ ಇರಬೇಕು. ಪರಂಪರೆಯು ಒಂದು ವೃತ್ತಿಯಾಗಿರಬಹುದು. ಧರ್ಮವಾಗಿರಬಹುದು ಅಥವಾ ಒಂದು ಭಾಷೆಯಾಗಿರಬಹುದು." **(ಅಲನ್ ಡಂಡಸ್** 1995:2–3) ಜನಪದ ವರ್ಗದ ಮೌಖಿಕ ರೂಪದ ತಿಳುವಳಿಕೆಯೇ ಜಾನಪದವಾಗುತ್ತದೆ. ಅರ್ಥದಲ್ಲಿ ಜಾನಪದವು ಗ್ರಾಮೀಣ ಜನರ ಅಥವಾ ಅಶಿಕ್ಷಿತರಲ್ಲಿ ಮಾತ್ರ ಇರದೆ ನಗರದಲ್ಲಿ ಹಾಗೂ ಶಿಕ್ಷಿತರಲ್ಲಿ ಇರಬಹುದು. ಜಾನಪದದ ಬಗೆಗಿನ ಅರಿವಿನಲ್ಲಿ ಮೊದಲ ಘಟ್ಟದ ಅಧ್ಯಯನಕ್ಕೆ ಕೆಳಗಿನ ವಿಷಯಗಳ ಬಗೆಗೆ ಲಭ್ಯವಿರುವ ಗ್ರಂಥ ಹಾಗೂ ಲೇಖನಗಳನ್ನು ಬಳಸಿಕೊಳ್ಳಲಾಗಿದೆ.

ಜಾನಪದ ಸಾಹಿತ್ಯದ ಬಗೆಗೆ ನಡೆದ ಅಧ್ಯಯನಗಳು ಹಾಗೂ ಸಂಗ್ರಹಗಳು

ವರ್ಗೀಕರಣದಲ್ಲಿ ಹಾಡುಗಳು, ಕಥನ ಕಾವ್ಯಗಳು, ಕಥೆಗಳು, ಐತಿಹ್ಯಗಳು, ಲಾವಣಿಗಳು, ಪಾಡ್ದನಗಳು, ನಂಬಿಕೆಗಳು, ಗಾದೆಗಳು ಹಾಗೂ ಒಗಟುಗಳು ಸೇರ್ಪಡೆಯಾಗುತ್ತವೆ.

ಭೌತಿಕ ಜಾನಪದದ ಬಗೆಗೆ ನಡೆದ ಅಧ್ಯಯನಗಳು ಹಾಗೂ ಸಂಗ್ರಹಗಳು

ವರ್ಗೀಕರಣದಲ್ಲಿ ಜನಪದ ವೈದ್ಯ, ಆಹಾರ ಪದ್ಧತಿ, ವಾಸ್ತು ಹಾಗೂ ಶಿಲ್ಪಗಳು ಸೇರ್ಪಡೆಯಾಗುತ್ತವೆ.

ಆಚರಣೆಗಳ ಬಗೆಗೆ ನಡೆದ ಅಧ್ಯಯನಗಳು ಹಾಗೂ ಸಂಗ್ರಹಗಳು

ವರ್ಗೀಕರಣದಲ್ಲಿ ಮಾನವನ ಹುಟ್ಟಿನಿಂದ ಸಾಯುವಲ್ಲಿವರೆಗೆ ನಡೆಸುವ ಜೀವನಾವರ್ತನದ ಆಚರಣೆಗಳು ಹಾಗೂ ವರ್ಷಕ್ಕೆ ಬದಲಾವಣೆ ಹೊಂದುವಾಗ

ನಡೆಸುವ ವಾರ್ಷಿಕಾವರ್ತನದ ಆಚರಣೆಗಳು ಸೇರ್ಪಡೆಯಾಗುತ್ತವೆ. ಜಾತಿಯ ಕುರಿತು ನಡೆಸಿದ ಅಧ್ಯಯನಗಳು ಈ ಗುಂಪಿನಲ್ಲಿಯೇ ಬರುತ್ತವೆ.

ಪ್ರದರ್ಶನ ಕಲೆಗಳು ಹಾಗೂ ಆಚರಣೆಗಳ ಬಗೆಗೆ ಪಡೆದ ಅಧ್ಯಯನಗಳು ಹಾಗೂ ಸಂಗ್ರಹಗಳು

ವರ್ಗೀಕರಣದಲ್ಲಿ ಭೂತಾರಾಧನೆ, ಯಕ್ಷಗಾನ, ಕ್ರೀಡೆ ಮತ್ತಿತರ ವಿಷಯಗಳು ಸೇರ್ಪಡೆಯಾಗುತ್ತವೆ.

ನಾಲ್ಕು ರೀತಿಯ ವರ್ಗೀಕರಣಗಳಿಗೆ ಸಂಬಂಧಿಸಿದಂತೆ ಸಂಗ್ರಹಗಳು ಹಾಗೂ ಸಂಕಲನಗಳು, ಲೇಖನಗಳು, ವರದಿಗಳು, ಭಾಷಣಗಳು ಹಾಗೂ ಸಂಶೋಧನ ರೀತಿಯ ಅಧ್ಯಯನಗಳು ಐದು ರೂಪದಲ್ಲಿ ಮಾಹಿತಿಗಳನ್ನು ಆಕರಗಳಾಗಿ ಬಳಸಿಕೊಳ್ಳಲಾಗಿದೆ.

ಈಗಾಗಲೇ ಸ್ಪಷ್ಟಪಡಿಸಿರುವಂತೆ ಆರಂಭಿಕ ಹಂತದಿಂದ 1955ರ ವರೆಗಿನ ಸಂಗ್ರಹ ಹಾಗೂ ಅಧ್ಯಯನಗಳನ್ನು ಪರಾಮರ್ಶಿಸಲಾಗಿದೆ. ಕಾಲಾವಧಿಯಲ್ಲಿ ಸುಮಾರು 150 ಕೃತಿಗಳು ಪ್ರಕಟವಾಗಿವೆ. ಲಭ್ಯವಿರುವ ಮಾಹಿತಿಗಳ ವೈಜ್ಞಾನಿಕ ವರ್ಗೀಕರಣವು ಸಾಕಷ್ಟು ಸಮಸ್ಯಾತ್ಮಕವಾಗಿದೆ.

ಪಾಶ್ಚಾತ್ಯ ದೇಶದಲ್ಲಿ **ಆರ್.ಎಸ್. ಬಾಗ್ಸ್,** ಪ್ರಾನ್ಸಿಸ್ ಲಿ.ಅಟ್ಲಿ. ಅಲೆನ್ ಡಂಡನ್, ಅಲೆಕ್ಸಾಂಡರ್ ಕ್ರಾಪೆ, ಸ್ಮಿತ್‌ಥಾಮ್ಸನ್ ಮೊದಲಾದವರು ಜಾನಪದವನ್ನು ಬೇರೆಬೇರೆ ರೀತಿಯಲ್ಲಿ ವರ್ಗೀಕರಿಸುವ ಪ್ರಯತ್ನ ಮಾಡಿದ್ದಾರೆ. ಕನ್ನಡದಲ್ಲಿ ಡಾ. ಹಾ.ಮಾ. ನಾಯಕರು ಬಾಗ್ಸ್‌ನ ವರ್ಗೀಕರಣವನ್ನು ಅನುಸರಿಸಿಕೊಂಡು ಜಾನಪದವನ್ನು ಸಾಹಿತ್ಯಿಕ, ಭಾಷಿಕ, ವೈಜ್ಞಾನಿಕ ಹಾಗೂ ಕ್ರಿಯಾತ್ಮಕ ಬಗೆ ಎಂದು ವರ್ಗೀಕರಿಸಿದ್ದಾರೆ. ಆದರೆ ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಯಾರೂ ಕೂಡ ಇಂಥ ಪ್ರಯತ್ನವನ್ನು ಮಾಡಿಲ್ಲ. ಅಧ್ಯಯನಕಾರರು ಬಹುಮಟ್ಟಿಗೆ ಜಾನಪದದ ಪ್ರಕಾರಗಳನ್ನು ಗಮನದಲ್ಲಿರಿಸಿಕೊಂಡು ವರ್ಗೀಕರಣ ಮಾಡಿದ್ದಾರೆ.

ದೇವುಡು ನರಸಿಂಹಶಾಸ್ತ್ರಿಯವರು ಜಾನಪದವನ್ನು ಹಾಡು, ಕಥೆ, ಒಗಟು ಹಾಗೂ ಗಾದೆ ಎಂಬ ನಾಲ್ಕು ವಿಭಾಗ ಮಾಡಿಕೊಳ್ಳುತ್ತಾರೆ. ಹಾಡುಗಳನ್ನು ಗಂಡಸರ ಹಾಗೂ ಹೆಂಗಸರ ಹಾಡುಗಳೆಂದು ಎರಡು ವಿಭಾಗ ಮಾಡುತ್ತಾರೆ. ಗಂಡಸರ ಹಾಡುಗಳಲ್ಲಿ ಲಾವಣಿ, ವಿನೋದದ ಪದಗಳು, ವಿಶೇಷ ಪದಗಳು ಎಂದು ಮೂರು ಒಳ ವಿಭಾಗ ಮಾಡುತ್ತಾರೆ. ಹೆಂಗಸರ ಹಾಡುಗಳಲ್ಲಿ ಬ್ರಾಹ್ಮಣಿಯರ ಹಾಗೂ ಶೂದ್ರಾಣಿಯರ

ಹಾಡುಗಳೆಂದು ಎರಡು ಒಳ ಗುಂಪು ಮಾಡುತ್ತಾರೆ. ವಿನೋದ ಪದಗಳನ್ನು ಮತ್ತೆ ಆರು ಭಾಗಗಳಾಗಿ ವಿಂಗಡಿಸಿ, ಅವುಗಳನ್ನು ಅರ್ಥವಿಲ್ಲದ ಹಾಡುಗಳು, ಜಗಳಗಳು, ತಂದನಾನಾ ಪದಗಳು, ಕೋಲಾಟದ ಪದಗಳು, ತುಂಡು ಪದಗಳು, ಹಾಸ್ಯದ ಪದಗಳೆಂದು ಕರೆಯುತ್ತಾರೆ. ವಿಶೇಷ ಪದಗಳನ್ನು ಜಾತ್ರೆಯ ಪದಗಳು, ಕಾಮನ ಪದಗಳು, ಮಾನವಮಿಯ ಪದಗಳೆಂದು ವಿಭಾಗಿಸುತ್ತಾರೆ. ಹಾಗೂ ದಾಸರ ಪದಗಳು, ತತ್ವಪದಗಳು, ಇವುಗಳ ಜೊತೆ ಸೇರುತ್ತವೆ. ಬ್ರಾಹ್ಮಣಿಯ ಹಾಗೂ ಶೂದ್ರಾಣಿಯ ಹಾಡುಗಳು ನಿತ್ಯ ವರ್ಗ ಹಾಗೂ ನೈಮಿತ್ತಿಕ ವರ್ಗವೆಂದು ಮರುವಿಂಗಡಣೆಯಾಗುತ್ತದೆ. ಶಾಸ್ತ್ರದ ಹಾಡುಗಳು ನೈಮಿತ್ತಿಕ ವರ್ಗದಲ್ಲಿ ಸೇರುತ್ತವೆ. ಗಂಡಸರ ಹಾಡು ಲಯ ಪ್ರಧಾನವಾದುದೆಂದೂ ಹೆಂಗಸರ ಹಾಡು ರಾಗ ಪ್ರಧಾನವಾದುದೆಂದೂ ಕೊರವಂ ಯಕ್ಷಗಾನಗಳು ಚಂಪೂ ಜಾತಿಗೆ ಸೇರಿದ ಪ್ರಬಂಧಗಳಾಗಿವೆ. ರಾಗ ವೈವಿಧ್ಯ, ತಾಳ ವೈವಿಧ್ಯಗಳುಳ್ಳವೆಂದೂ ಹೇಳುತ್ತಾರೆ. (1935)

ಎಂ. ಬಿರಾದಾರ ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಪ್ರಕಾರಗಳನ್ನು "ಭಾಷಾ ದೃಷ್ಟಿಯಿಂದ ಗದ್ಯ, ಪದ್ಯ ಹಾಗೂ ಮಿಶ್ರ ಎಂದೂ ಸಾಹಿತ್ಯದೃಷ್ಟಿಯಿಂದ ಕಥೆ, ಹಾಡು, ಒಡಪು, ಗಾದೆ, ಕುಣಿತ, ಬಯಲಾಟ, ಹಾಗೂ ಪಡೆನುಡಿ ಎಂದು ಏಳು ಪ್ರಕಾರಗಳಾಗಿ ವಿಂಗಡಿಸುತ್ತಾರೆ. ಹಾಡುಗಳನ್ನು ಗಂಡಸರವು ಹಾಗೂ ಹೆಂಗಸರವು ಎಂಬ ವಿಭಾಗ ಮಾಡಿ ಅವುಗಳಲ್ಲಿ ಬೀಸುವ, ಕುಟ್ಟುವ ಹಾಡು, ಮಗುವನ್ನು ತೊಟ್ಟಿಲಿಗೆ ಹಾಕುವಾಗ ಸಾಮೂಹಿಕವಾಗಿ ಹಾಡುವ ಬಾಗೇಣದ ಹಾಡು, ಜೋಗುಳ(ಲಾಲಿ) ಹಾಡು, ಹೆಣ್ಣು ಮೈನೆರೆದಾಗ ಹಾಡುವ ಶೋಭಾನದ ಹಾಡು, ಮದುವೆಯ ಹಾಡು, ಗೌರಿಹುಣ್ಣಿಮೆ ತಿಂಗಳಲ್ಲಿ ವಿಶೇಷವಾಗಿ ಹಾಡುವ ಶೀಗೇ ಗೌರಿ ಹಿಂಡು, ಮಣ್ಣ ಪೂಜೆಯ ಕಾಲದಲ್ಲಿ ಹಾಡುವ ಗುಳ್ಳವ್ವನ ಹಾಡು, ಮಳೆರಾಯ ಅಥವಾ ಜೋಕುಮಾರನ ಹಾಡು, ಚೌಡಕಿಹಾಡು, ಕೊರವಂಹಾಡು ಮೊದಲಾದ ಒಳವಿಭಾಗಗಳನ್ನು ಮಾಡಿಕೊಂಡಿದ್ದಾರೆ. ಗಂಡಸರ ಹಾಡುಗಳಲ್ಲಿ ಹೋಳೀ ಹಾಡು, ಹಂತಿಯ ಅಥವಾ ಕಣದ ಹಾಡು. ಕಾಳನ್ನು ಮನೆಗೆ ತರುವಾಗ ಗೀತಿಸುವ ಬಲೋರಿ ಹಾಡು, ನೀರೆತ್ತುವ ಅಥವಾ ನೇಗಿಲು ಹೊಡೆಯುವ ಕಾಲದಲ್ಲಿ ಹಾಡುವ ಮಟ್ಟಿಯ ಹಾಡು, ದೀಪಾವಳಿಯ ಕಾಲದಲ್ಲಿ ದನಕಾಯುವ ಹುಡುಗರು ಹಾಡುವ ಪೀಡೆಯ ಹಾಡು. ಡೊಳ್ಳಿನ ಹಾಡು, ಶ್ರೀಶೈಲ ಯಾತ್ರೆಯ ಕಾಲದಲ್ಲಿ ಹಾಡುವ ಕಂಬಿಯ ಹಾಡುಗಳು, ಕರಪಲ್ಲವದ ಹಾಡು, ಬೆಡಗಿನ ಪದಗಳು, ಗೊಂದಲಿಗರ ಹಾಡು, ಕೊರವಂ ಹಾಡಿನಂಥ ಸಂಗ್ರಾಮದ ಜನಪದ ಹಾಡು, ಮಂಗಳಾರತಿಯ ಪದಗಳು, ಮಕ್ಕಳ ಹಾಡು, ಮುಂತಾಗಿ ಒಳವಿಭಾಗ ಮಾಡಿಕೊಳ್ಳಲಾಗಿದೆ".(1974 : 69–90)

ಎನ್.ಆರ್.ನಾಯಕ ಅವರ 'ಕರಾವಳಿ ಪ್ರದೇಶದ ಜಾನಪದ ಸಾಹಿತ್ಯ ಪ್ರಕಾರಗಳು' (1974:107–125) ಲೇಖನದಲ್ಲಿ ಗೀತೆ, ಕತೆ, ರೂಪಕ, ಒಗಟು ಐದು ವಿಭಾಗ ಮಾಡಲಾಗಿದೆ. ಗೀತೆಗಳನ್ನು ಹೆಂಗಸರ ಹಾಡು ಹಾಗೂ ಗಂಡಸರ ಹಾಡುಗಳೆಂದು ವಿಭಾಗಿಸಿಕೊಂಡು ಅವುಗಳಲ್ಲಿ ಒಳವಿಭಾಗ ಮಾಡಲಾಗಿದೆ. ಹೆಂಗಸರ ಹಾಡುಗಳಲ್ಲಿ ಭಾವಗೀತಾತ್ಮಕ ತ್ರಿಪದಿಗಳು, ಭಕ್ತಿಯ ಹಾಡುಗಳು, ಶಾಸ್ತ್ರದ ಹಾಡುಗಳು, ಆರತಿಯ ಹಾಡುಗಳು, ರಾಮಾಯಣ ಮಹಾಭಾರತದ ಹಾಡುಗಳು, ಕಥೆಯ ಹಾಡುಗಳು ಹಾಗೂ ಕುಣಿತದ ಹಾಡುಗಳೆಂಬ ಪ್ರಕಾರಗಳನ್ನು ಗುರುತಿಸಲಾಗಿದೆ. ಗಂಡಸರ ಹಾಡುಗಳಲ್ಲಿ ಸಿಡುಬು ಮೊದಲಾದ ಸಾಂಕ್ರಾಮಿಕ ರೋಗಗಳನ್ನು ಊರಿಂದ ಹೊರಡಿಸುವ ಸಲುವಾಗಿ ಹಾಕಿಕೊಂಡು ಕುಣಿಯುವ ಕಾಡ್ಯಕುಣಿತ, ಸುಗ್ಗಿ ಕುಣಿತ, ತುಳಸಿಪೂಜ ಕುಣಿತ, ಗುಮಟೆ ಪದ, ಭಾರತ ರಾಮಾಯಣಗಳನ್ನು ಹಾಡುವ ವೃತ್ತಿಗಾಯಕರ ಜೋಗಿಪದ, ಶ್ರಮಚರಿ ಹಾಕಿದ ಪದ, ಮಕ್ಕಳ ಗೀತೆಗಳು ಎಂಬುದಾಗಿ ಗುರುತಿಸಲಾಗಿದೆ.

ಎಂ.ಎಂ. ಕಲುಬುರ್ಗಿಯುವರು ಗದ್ಯ–ಪದ್ಯ–ದೃಶ್ಯ ಪ್ರಕಾರಗಳೆಂದು ವರ್ಗೀಕರಿಸಿದ್ದಾರೆ. ಪದ್ಯ ಪ್ರಕಾರದಲ್ಲಿ ಉಪಜೀವನದ ಹಾಡು, ಉತ್ಸಾಹದ ಹಾಡು, ಉತ್ಸವದ ಹಾಡು ಎಂದು ಮೂರು ಉಪವರ್ಗಗಳನ್ನು ಹೆಸರಿಸಿ ಲಾವಣಿಗಳನ್ನು ಉಪಜೀವನದ ಹಾಡುಗಳೆಂದು ಕರೆಯುತ್ತಾರೆ.(1974:9–13)

ಜ್ಯೋತಿ ಹೊಸೂರ ಎರಡು ರೀತಿಯ ವರ್ಗೀಕರಣವನ್ನು ಮಾಡುತ್ತಾರೆ. ಮೊದಲ ವರ್ಗೀಕರಣವನ್ನು "ಜನಪದ ವಾಙ್ಮಯ: ನುಡಿ, ನುಡಿಗಟ್ಟು, ಗಾದೆ, ಒಗಟು, ಒಡಪು, ಗೀತೆ, ಕಥೆ, ನಾಟಕ; ಜನಪದ ಕ್ರಿಯೆ: ಸನ್ನೆ, ಅಭಿನಯ, ನೃತ್ಯ, ಸಂಗೀತ, ಆಟ–ನೋಟ, ಉಡುಗೆ–ಅಡಿಗೆ; ಜನಪದ ಧರ್ಮ: ದೇವರು, ಧರ್ಮ ನೀತಿಯ ಬಗೆಗೆ ಜನರ ಕಲ್ಪನೆ ಭಾವನೆ, ಉಪಾಸನೆ ವಿಧಿ–ವಿಧಾನಗಳು; ಜನಪದ ವಿಜ್ಞಾನ: ವೈದ್ಯ, ಮಾಟ, ಮಂತ್ರ, ಭವಿಷ್ಯ, ಮಳೆ–ಬೆಳೆ, ದನಕರುಗಳ ಲಕ್ಷಣಾಧಿಗಳ ವಿಚಾರ, ಕಾರ್ಯಕಾರಣ ಸೂಚಿ ನಂಬುಗೆ; ಜನಪದ ಸಂಪ್ರದಾಯ: ರೂಢಿ, ಆಚಾರ, ಮೂಢನಂಬಿಕೆ"; (1971:17–21) ಇನ್ನೊಂದು ವರ್ಗೀಕರಣದಲ್ಲಿ ಆರಂಭಕಾಲ (1920–1950), ನಡುಗಾಲ (1950–1965), ಹಾಗೂ ಹೊಸಕಾಲ (1965–1973) ಎಂದು ಮೂರು ವಿಭಾಗ ಮಾಡಿಕೊಂಡಿದ್ದಾರೆ.

ಸೋಮಶೇಖರ ಇಮ್ರಾಪುರ 'ನಮ್ಮ ಜಾನಪದ ಸಮೀಕ್ಷೆ' (1979) ಕೃತಿಯಲ್ಲಿ 19ನೆಯ ಶತಮಾನದ ಸಾಧನೆ, 20ನೆಯ ಶತಮಾನದ ಪೂರ್ವಾರ್ಧದ ಸಾಧನೆ, ಹಾಗೂ 20ನೆಯ ಶತಮಾನದ ಉತ್ತರಾರ್ಧದ ಸಾಧನೆ (1979: 19–76) ಎಂದು ಮೂರು ರೀತಿಯಲ್ಲಿ ವಿಂಗಡಿಸಿದ್ದಾರೆ.

ಜೀ. ಶಂ. ಪರಮಶಿವಯ್ಯ ತಮ್ಮ **'ಜಾನಪದ'** (1979) ಕೃತಿಯಲ್ಲಿ 1860 ರಿಂದ 1900ರ ವರೆಗೆ ಆರಂಭಯುಗ, 1901ರಿಂದ 1947ರ ವರೆಗೆ ನವೋದಯ ಯುಗ, 1948ರಿಂದ 1966ರ ವರೆಗೆ ಪೂರಕ ಯುಗ ಹಾಗೂ 1967ರಿಂದ ಚಿನವರೆಗೆ ವೈಜ್ಞಾನಿಕ ಯುಗ(1979:67–86) ಎಂದು ನಾಲ್ಕು ರೀತಿಯ ವಿಂಗಡನೆ ಮಾಡಿಕೊಂಡಿದ್ದಾರೆ.

ನಂ. ತಪಸ್ವೀ ಕುಮಾರ್ ತಮ್ಮ **'ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ'** (1981) ಕೃತಿಯಲ್ಲಿ ಇನ್ನೂ ಕನ್ನಡ ಸಾಹಿತ್ಯಾಧ್ಯಯನದ ಇತಿಹಾಸದಲ್ಲಿ ಪ್ರಮುಖವಾದ ಆರು ಘಟ್ಟಗಳನ್ನು ಗುರುತಿಸಿಕೊಂಡು ಆಯಾ ಅವಧಿಯ ಧೋರಣೆಯನ್ನು ಆಧರಿಸಿ, ಅವುಗಳನ್ನು 1900ಕ್ಕಿಂತ ಹಿಂದಿನಕಾಲ : ಪೋಷಕಯುಗ, 1901 ರಿಂದ 1930ರ ಅವಧಿ : ಅರುಣೋದಯ ಕಾಲ, 1931 ರಿಂದ 1950ರ ಅವಧಿ : ಪ್ರಥಮ ಸುವರ್ಣ ಸಂಚಯ ಘಟಕ, 1951ರಿಂದ 1960ರ ಅವಧಿ : ಸಮೃದ್ಧ ಸುಗ್ಗಿಯ ಕಾಲ, 1961 ರಿಂದ 1970ರ ಅವಧಿ : ನವಮನ್ವಂತರ ದಶಕ ಹಾಗೂ 1970 ರಿಂದ 1980ರ ಅವಧಿ: ದ್ವಿತೀಯ ಸುವರ್ಣ ಸಂಚಯ ಘಟ್ಟ ಎಂದು ಆರು ವಿಭಾಗಗಳನ್ನಾಗಿ ವರ್ಗೀಕರಿಸುತ್ತಾರೆ.

ಪೋಷಕ ಯುಗವನ್ನು ಮತ್ತೆ ವಿಶ್ವಜಾನಪದಾಧ್ಯಯನದ ಹಿನ್ನೆಲೆ, ಪಾಶ್ಚಾತ್ಯ ಜಾನಪದಾಧ್ಯಯನದ ಹಿನ್ನೆಲೆ, ಹಾಗೂ ಭಾರತೀಯ ಜಾನಪದಾಧ್ಯಯನದ ಹಿನ್ನೆಲೆ (1981:25–190) ಎಂದು ಮೂರು ಒಳ ವಿಭಾಗಗಳನ್ನಾಗಿ ಮಾಡಿಕೊಳ್ಳಲಾಗಿದೆ.

ಲಕ್ಷ್ಮಣ ತೆಲಗಾವಿಯವರು 'ಜನಪದ ವೀರಸಾಹಿತ್ಯ–ಚಾರಿತ್ರಿಕ ವಿವೇಚನೆ' (1987) ಎಂಬ ಲೇಖನದಲ್ಲಿ ಚಾರಿತ್ರಿಕ ಗೀತೆಗಳನ್ನು, ಕಾವ್ಯಗಳನ್ನು, ಪಾಡ್ದನಗಳನ್ನು ಲಾವಣಿಗಳನ್ನು ಗಮನದಲ್ಲಿರಿಸಿಕೊಂಡು ಅಸಮಗ್ರ ಐತಿಹಾಸಿಕ ಕಾವ್ಯಗಳು, ಸಮಗ್ರ ಐತಿಹಾಸಿಕ ಕಾವ್ಯಗಳು ಹಾಗೂ ಅಸ್ಪಷ್ಟ ಐತಿಹಾಸಿಕ ಕಾವ್ಯಗಳು(1987: 10–19) ಎಂದು ಮೂರು ವಿಭಾಗ ಮಾಡಿರುತ್ತಾರೆ.

ಜವಾಹರಲಾಲ್ ಹಂಡೂ ತಮ್ಮ **'ದಕ್ಷಿಣ ಭಾರತದ ಅಧ್ಯಯನಗಳು–ಅಭಿವೃದ್ಧಿ ಹಾಗೂ ಬೆಳವಣಿಗೆ'** (1991) ಲೇಖನದಲ್ಲಿ ದ್ರಾವಿಡ ಭಾಷೆಗಳಿಂದ ತಮಿಳು, ತೆಲುಗು, ಕನ್ನಡ ಹಾಗೂ ಮಲೆಯಾಳಿಗಳಲ್ಲಿ ಆದ ಜಾನಪದ ಕೆಲಸವನ್ನು ಮಿಷನರಿಗಳ ಅವಧಿ (1800–1900), ರಾಷ್ಟ್ರೀಯತೆಯ ಅವಧಿ (1900–1950) ಹಾಗೂ ಶೈಕ್ಷಣಿಕ ಅವಧಿ (1950–1980), (1991–606) ಎಂದು ಮೂರು ಹಂತಗಳಲ್ಲಿ ವರ್ಗೀಕರಿಸಿಕೊಂಡಿದ್ದಾರೆ.

ವರ್ಗೀಕರಣ ಕ್ರಮವು ಸಂಕ್ಷಿಪ್ತವಾಗಿದ್ದು, ಅವರೇ ಇದನ್ನು ಮುಂದೆ 1800–1850ರ ವರೆಗಿನ ಅವಧಿ, 1850–1890ರ ವರೆಗಿನ ಅವಧಿ, 1890–1930ರ ವರೆಗಿನ ಅವಧಿ, 1930–1955ರ ವರೆಗಿನ ಅವಧಿ ಹಾಗೂ 1955 ರಿಂದ ವರೆಗೆ (1991:606) ಎಂಬುದಾಗಿ ಇನ್ನಷ್ಟು ವಿವರಣಾತ್ಮಕ ಹಂತಗಳಾಗಿ ವಿಭಾಗಿಸಿಕೊಂಡಿದ್ದಾರೆ.

ಮೊದಲ ಹಂತವು ಸಂಗ್ರಹದ ದೃಷ್ಟಿಯಲ್ಲಿ ಮುಖ್ಯ ಅವಧಿಯಲ್ಲ. ಕಾಲಾವಧಿಯಲ್ಲಿ ಕೃಷಿಯತ್ತು, ಜನಪದ ಕಲೆಗಳು, ಪಂಚತಂತ್ರದ ಕಥೆಗಳ ಸಂಗ್ರಹ ಲಭ್ಯ. **ಅಬೆದುಬಾಯಿ**ಯ, ಮೇರಿಫ್ರಿರೇ, ಮೆಕೆಂಝಿ, ಮೊದಲಾದವರು ಜಾನಪದಕ್ಕಾಗಿ ದುಡಿದರು.

ಎರಡನೆಯ ಹಂತವು ಮಹಾದಂಗೆಯ ಅವಧಿಯನ್ನು ಒಳಗೊಂಡಿದೆ. ಅಲ್ಲದೆ 1872ರಲ್ಲಿ **ಇಂಡಿಯನ್ ಅಂಟಿಕ್ವೇರಿ** ಪತ್ರಿಕೆಯೂ ಹೊರಬಂತು. ಮೋಗ್ಲಿಂಗ್, ಫ್ಲೀಟ್, ಗೋವರ್ ಮೊದಲಾದ ವಿದ್ವಾಂಸರು ಸೇವೆಗೈದರು.

ಮೂರನೆಯ ಹಂತವು ಕನ್ನಡದ ವಿದ್ವಾಂಸರ ಸಂಗ್ರಹಕ್ಕೆ ತೊಡಗಿದ ಘಟ್ಟ. ಕಾಲಾವಧಿಯಲ್ಲಿ ಬಾಸೆಲ್ ಮಿಶನರಿಗಳು ಗಾದೆಗಳ ಸಂಗ್ರಹವನ್ನು ಮುದ್ರಿಸಿದರು. ಅಲ್ಲದೆ ಎಚ್.ಕೆ. ಮಲ್ಲಪ್ಪ, ನಡಕೇರಿಯಂಡ ಚಿಣ್ಣಪ್ಪ, ಮಾಸ್ತಿ ಮೊದಲಾದವರು ಜಾನಪದ ಸಂಗ್ರಹಕಾರ್ಯಕ್ಕೆ ತೊಡಗಿದರು. ಹಾಗೂ ಸಂಗ್ರಹದ ಜೊತೆಗೆ ಲಾವಣಿಗಳ ಕುರಿತು, ಕನ್ನಡ ಜನಪದ ಸಾಹಿತ್ಯದ ಕುರಿತು ವಿಮರ್ಶಾತ್ಮಕ ಲೇಖನಗಳನ್ನು ಬರೆದರು.

ನಾಲ್ಕನೆಯ ಹಂತವು ಮೊದಲ ಘಟ್ಟದ ಪ್ರಮುಖ ಹಂತ. ರಾಷ್ಟ್ರೀಯ ಏಕತೆಗಾಗಿ ಹೋರಾಟ – ಚಳುವಳಿಗಳು, ದೇಸೀ ಸಂಸ್ಕೃತಿಯ ಕಡೆಗೆ ಒಲವು, ಏಕೀಕರಣದ ಚಳುವಳಿಗಳು ಪ್ರಬಲವಾದುವು. ಜೊತೆಗೆ ಜನಪದ ಗೀತೆಗಳು, ಪ್ರಚಾರ ಮಾಧ್ಯಮವಾದವು, ಗೀತೆಗಳ ಹೊಸರಚನೆ, ಹಾಗೂ ಸಂಗ್ರಹಕಾರ್ಯವೂ ಆರಂಭವಾಯಿತು. ಬೆಟಗೇರಿ ಕೃಷ್ಣಶರ್ಮ, ಹಲಸಂಗಿ ಗೆಳೆಯರು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಬಿ.ಎನ್.ರಂಗಸ್ವಾಮಿ, ಎಚ್.ಎಸ್.ಅಚ್ಚಪ್ಪ, ಎಲ್. ಗುಂಡಪ್ಪ ಮೊದಲಾದ ವಿದ್ವಾಂಸರು ಸಂಗ್ರಹಕ್ಕೆ ಸಂಪಾದನೆಗೆ ತೊಡಗಿದರು.

ಐದನೆಯ ಘಟ್ಟದಲ್ಲಿ ಶೈಕ್ಷಣಿಕವಾದ ಅಧ್ಯಯನಗಳು ಆರಂಭವಾದುವು. ಎಂ.ಫಿಲ್. ಪಿ.ಎಚ್.ಡಿ. ಪದವಿಗಳು, ಸ್ನಾತಕೋತ್ತರ ಪದವಿಗಳು, ಡಿಪ್ಲೋಮಾ ತರಗತಿಗಳು ಆರಂಭವಾದುವು.

ಮೇಲಿನ ಹತ್ತು ಜನ ವಿದ್ವಾಂಸರು ಮಾಡಿಕೊಂಡ ವರ್ಗೀಕರಣಕ್ಕೆ ಅದರದ್ದೇ ಆದ ಸಮಸ್ಯೆಗಳಿವೆ. ದೇವುಡು, ಬಿರಾದಾರ್, ಎನ್.ಆರ್.ನಾಯಕ ಪ್ರಕಾರಗಳನ್ನು

ಗಮನದಲ್ಲಿರಿಸಿಕೊಂಡು ಸರಳವಾದ ರೀತಿಯ ವರ್ಗೀಕರಣ ಮಾಡಿದ್ದಾರೆ. ಈ ಬಗೆಯ ವರ್ಗೀಕರಣ ತುಂಬ ಸೀಮಿತವಾಗಿದ್ದು, ಜಾನಪದದ ಇತರ ಪ್ರಕಾರಗಳನ್ನು ಗೌಣಗೊಳಿಸುತ್ತವೆ. ಯಾವಪ್ರಕಾರಗಳಲ್ಲಿ ಹೆಚ್ಚು ಕೆಲಸವಾಗಿದೆ ಎಂಬ ಬಗ್ಗೆ ಮಾಹಿತಿ ದೊರಕುತ್ತವೆಯಾದರೂ ಯಾವ ಪ್ರಕಾರಗಳು ಸೊರಗಿವೆ ಎಂಬ ಕುರಿತು ಈ ಭಾಗವನ್ನು ಮಾತ್ರ ಮುನ್ನಲೆಗೆ ತರುತ್ತವೆ. ಎಂ.ಎಂ. ಕಲುಬುರ್ಗಿಯವರು ಮಾಡಿಕೊಂಡ ರೂಪಸಂಬಂಧೀ ವರ್ಗೀಕರಣದಿಂದ ವಿಶೇಷ ಪ್ರಯೋಜನ ಏನೂ ಇಲ್ಲ. ಅಧ್ಯಯನಕ್ಕೆ ಬೇಕಾದ ಸೂಕ್ಷ್ಮ ನೆಲೆಗಳನ್ನು ಅವು ವರ್ಗೀಕರಿಸಿ ಕೊಡುವುದಿಲ್ಲ. ಉಳಿದ ವಿದ್ವಾಂಸರು ಬಹುಮಟ್ಟಿಗೆ ಕಾಲಾನುಕ್ರಮವಾದ ವರ್ಗೀಕರಣವನ್ನು ನಡೆಸಿದ್ದಾರೆ. ಈ ಬಗೆಯ ವರ್ಗೀಕರಣಗಳನ್ನು ಜಾನಪದದ ಆಂತರಿಕ ಸತ್ವವನ್ನು ಗಮನಿಸಿಕೊಂಡು ಮಾಡಲಾಗಿಲ್ಲ. ಮೇಲಾಗಿ ವಿದ್ವಾಂಸರು ಜಾನಪದೇತರ ಕಾರಣಗಳನ್ನು ಗಮನದಲ್ಲಿರಿಸಿಕೊಂಡು, ವರ್ಗೀಕರಣವನ್ನು ನಡೆಸಿದಂತಿದೆ. ಜೊತೆಗೆ ಕಾಲನುಕ್ರಮ ವರ್ಗೀಕರಣವು ಜಾನಪದದ ಅನೇಕ ಪ್ರಕಾರಗಳಲ್ಲಿ ಯಾವ ಪ್ರಕಾರದಲ್ಲಿ ಹೆಚ್ಚು ಕೆಲಸ ನಡೆದಿದೆ ಹಾಗೂ ಯಾವ ಪ್ರಕಾರದಲ್ಲಿ ಹೆಚ್ಚು ಕೆಲಸ ನಡೆದಿಲ್ಲ ಎಂಬ ಕುರಿತು ವಿಶ್ಲೇಷಣೆ ನಡೆಸಲು ಅನುವು ಮಾಡಿಕೊಡುವುದಿಲ್ಲ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನವನ್ನು ಮೌಖಿಕ ಸಾಹಿತ್ಯ, ಭೌತಿಕ ಸಾಹಿತ್ಯ, ಸಾಮಾಜಿಕ ಆಚರಣೆಗಳು, ಪ್ರದರ್ಶನ ಕಲೆಗಳು, ಅಧಯನ ಕೃತಿಗಳು ಹಾಗೂ ಲೇಖನಗಳು ಎಂದು ಐದು ರೀತಿಯಿಂದ ವರ್ಗೀಕರಿಸಿಕೊಳ್ಳಲಾಗಿದೆ. ಇಲ್ಲಿನ ಮೊದಲ ನಾಲ್ಕು ಬಗೆಯನ್ನು ಡಂಡಸ್ ಸೂಚಿಸಿದ್ದಾರೆ (ಉದ್ಧೃತ : ಜವಹಾರ್‌ಲಾಲ್ ಹಂಡೂ 1991: 73–90)

ಈ ವರ್ಗೀಕರಣವನ್ನು ಅನುಸರಿಸಿದಾಗ ಜಾನಪದದ ಎಲ್ಲಾ ಮುಖಗಳ ಬಗೆಗೆ ಒಂದು ಸಮಗ್ರ ಚಿತ್ರ ಮೂಡುತ್ತದೆ. ಇದರಿಂದಾಗಿ ಯಾವ ಪ್ರಕಾರದಲ್ಲಿ ಹೆಚ್ಚು ಕೆಲಸ ನಡೆದಿದೆ ಹಾಗೂ ಯಾವ ಪ್ರಕಾರದಲ್ಲಿ ಹೆಚ್ಚು ಕೆಲಸ ನಡೆದಿಲ್ಲ ಎಂಬುದರ ಬಗೆಗೆ ಒಂದು ಬಗೆಯ ಅರಿವು ಮೂಡುತ್ತದೆ. ಇದರ ಸಹಾಯದಿಂದ ಸಂಗ್ರಹಗಳ ಹಿಂದಿನ ಸೈದ್ಧಾಂತಿಕ ನೆಲೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ವರ್ಗೀಕರಣಗಳ ಆಧಾರದಲ್ಲಿ ಮುಂದೆ ಮೊದಲ ಘಟ್ಟದಲ್ಲಿ ಜಾನಪದ ಆಧ್ಯಯನಕ್ಕೆ ಬಳಸಿಕೊಂಡ ವರ್ಗೀಕರಣ ಹಾಗೂ ಪ್ರಕಟಗೊಂಡ ಕೃತಿಗಳು

ಮೌಖಿಕ ಸಾಹಿತ್ಯ

ಗೀತೆಗಳು ಹಾಗೂ ಹಾಡುಗಳ ಸಂಗ್ರಹಗಳು

1. 1871 – ಚಾರ್ಲ್ಸ್ ಇ. ಗೋವರನ 'ದಿ ಫೋಕ್‌ಸಾಂಗ್ಸ್ ಆಫ್ ಸದರನ್ ಇಂಡಿಯಾ'
2. 1908 – ಶಂಕರನಾರಾಯಣ ಕೂಡ್ಲಿಕರ್‌ರು ಸಂಗ್ರಹಿಸಿದ 'ಕನ್ನಡ ಆರತಿಗಳ
3. 1931 – ಹಲಸಂಗಿ ಚನ್ನ ಮಲ್ಲಪ್ಪ, ಲಿಂಗಪ್ಪ, ರೇವಪ್ಪನವರ 'ಗರತಿಯ ಹಾಡು'
4. 1933 – ವಿಠೋಬ ವೆಂಕನಾಯಕನ ತೊರ್ಕೆಯವರ 'ಹಳ್ಳಿಯ ಹಾಡುಗಳು'
5. 19933 – ಅರ್ಚಕ ಬಿ.ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡುಗಳು'
6. 1935 – ಕಾಸಪೆ ರೇವಪ್ಪನವರ 'ಮಲ್ಲಿಗೆ ದಂಡೆ'
7. 1935 – ಬಿ.ಎಸ್.ರಂಗಸ್ವಾಮಿಯವರ 'ಕೆಲವು ಹಳ್ಳಿಯ ಹಾಡುಗಳು'
8. 1935 – ಎಸ್.ವಿ.ರಂಗಣ್ಣನವರ 'ಹಳ್ಳಿಯ ಹಾಡುಗಳು'
9. 1938 – ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಹಳ್ಳಿಯ ಹಾಡುಗಳು'
10. 1938 – ಬಿ.ಎನ್.ರಂಗಸ್ವಾಮಿಯವರ 'ಹಳ್ಳಿಯ ಹಾಡುಗಳು'
11. 1940 – ಬಿ.ಎನ್.ರಂಗಸ್ವಾಮಿಯವರ 'ಹಳ್ಳಿಯ ಪದಗಳು'
12. 1940 – ಎನ್.ಅನಂತ ರಂಗಾಚಾರ್‌ರ 'ಮಾನೌಮಿ ಚೌಪದ'
13. 1943 – ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರ 'ಹಳ್ಳಿಯ ಬಾಳು'
14. 1947 – ಎಲ್.ಗುಂಡಪ್ಪನವರ 'ನಾಡಪದಗಳು'
15. 1948 – ತೀ.ನಂ.ಶ್ರೀಕಂಠಯ್ಯನವರ 'ಹೆಣ್ಣು ಮಕ್ಕಳ ಪದಗಳು'
16. 1949 – ಕೆ.ಆರ್.ಲಿಂಗಪ್ಪನವರ 'ಮಾನೌಮಿ ಪದಗಳು'

ಲಾವಣಿಗಳ ಹಾಗೂ ಪಾಡ್ದನಗಳ ಸಂಗ್ರಹಗಳು

1. 1803 – ಜಾನಲೇಡನ್‌ನ 'ಶ್ರೀರಂಗ ಪಟ್ಟಣದ ಕೆಡುಗಾಲ' – ಎರಡು ಲಾವಣಿಗಳು
2. 1885 – ಜೆ.ಎಫ್. ಫ್ಲೀಟರನ 'ಎ ಸೆಲೆಕ್ಷನ್ ಆಫ್ ಕ್ಯಾನರೀಸ್ ಬ್ಯಾಲೆಡ್ಸ್'

3. 1886 – ಎ.ಮೆನ್ನರ್‌ನ ತುಳು 'ಪಾಡ್ದೆನೊಳು'
4. 1902 – ಚಿಕ್ಕವರದಶೆಟ್ಟಿ ಹಾಗೂ ಎಂ.ಆರ್. ವೆಂಕಟಾಚಲ ಶೆಟ್ಟಿಯವರ 'ತುರಾಲಾವಣಿ –ಜವಾಬುಗಳು'
5. 1905 – ಲಿಂಗಣ್ಣನವರ ರಾಮಲಿಂಗಣ್ಣನವರ 'ಚಿತ್ರದುರ್ಗದ ಲಡಾಯಿ ಲಾವಣಿ'
6. 1933 – ತೇಲುಪಂಡ ಶಾಂಭವಾನಂದ ಸ್ವಾಮಿಯವರ 'ಸೊಳ್ಳೆಪಾಟ್'
7. 1933 – ಸಿಂಪಿಲಿಂಗಣ್ಣ ಹಾಗೂ ಪಿ.ಧೂಲಾರವರ 'ಜೀವನ ಸಂಗೀತ'
8. 1936 – ಸಿ.ರಂಗಯ್ಯನವರ 'ವೀರಮಣಿ ಒಬವ್ವ'
9. 1940 – 'ಮಾಯೆಕೊಂಡದ ಮುತ್ತಿಗೆ ಅಥವಾ ರಣಧೀರ ಹಿರೇ ಮದಕರಿ ನಾಯಕ' (ಸಂಗ್ರಹಕಾರರ ಹೆಸರಿಲ್ಲ)
10. 1944 – 'ಪಾಳೆಯಗಾರರ ಕೋಲು ಪದಗಳು' (ಸಂಗ್ರಹಕಾರರ ಹೆಸರಿಲ್ಲ)

ಜನಪದ ಕತೆಗಳ ಹಾಗೂ ಐತಿಹ್ಯಗಳ ಸಂಗ್ರಹ

1. 1840 – ವಿಲ್ಸರ್ ಎಲಿಯೆಟ್ ಅನುವಾದಿಸಿರುವ 'ಇಸೋಪಿನ ನೀತಿ ಕತೆಗಳು'
2. 1881 – ಮೇರಿ ಫ್ರೇರೇ ಅವರ 'ಒಲ್ಡ್ ಡೆಕ್ಕನ್ ಡೇಸ್'
3. 1900 – ಶ್ರೀಕಂಠೇಶ ಗೌಡರ 'ಜನಪದ ಕಥೆಗಳು'
4. 1931 – ತೀ.ನಂ.ಶ್ರೀಕಂಠಯ್ಯನವರ 'ಮಕ್ಕಳಿಗೆ ಹೇಳುವ ಕಥೆಗಳು'
5. 1941 – ಜಿ.ಪಿ.ರಾಜರತ್ನಂ ಅನುವಾದ 'ರಾಯನರಿ' ಎಂಟು ಕಥೆಗಳು, 'ಜಾತಕ ಕತೆಗಳು' '

ಗಾದೆಗಳ ಸಂಗ್ರಹಗಳು

1. 1847 – ಬಾಸೆಲ್ ಮಿಶನರಿಗಳ ಪ್ರಕಟಣೆ 'ಕನ್ನಡ ಗಾದೆಗಳು'
2. 1874 – 'ಸಹಸಾರ್ಥ ತುಳು ಗಾದೆಗಳು'
3. 1886 – 'ಕೊಡವ ಪಡಿಮೆ'
4. 1894 – ಹನುಮಂತ ಗೋವಿಂದ ಜೋಶಿಯವರ 'ಸಾಮತಿ ಸಂಗ್ರಹ'
5. 1896 – ಗೇಬ್ರಿಯಲ್ ಬರ್ಗೇರರ '1000 ತುಲು ಪ್ರೋವರ್ಬ್ಸ್'

6. 1912 – ಯು.ಬಿ.ನರಸಿಂಗರಾವ್‌ರವರ 'ಕ್ಯಾನರೀಸ್ ಪ್ರೋವರ್ಬ್ಸ್'
7. 1919 – ಮರು ಮುದ್ರಣಗೊಂಡ 'ಕರ್ನಾಟಕ ಲೋಕೋಕ್ತಿ ನಿಧಾನ'(1880 ಪ್ರಥಮ ಮುದ್ರಣ)
8. 1944 – ಎಚ್.ಎಸ್.ಅಚ್ಚಪ್ಪನವರ 'ಕನ್ನಡ ಗಾದೆಗಳು' '

ಒಗಟುಗಳು ಹಾಗೂ ಒಡಪುಗಳ ಸಂಗ್ರಹ

1. 1931 – ಶ್ಯಾಮಲಾ, ಶ್ಯಾಮರಾವ್ ಹಾಗೂ ಎಚ್. ಜೋಶಿ ಅವರ 'ಕನ್ನಡ ಒಗಟುಗಳು'
2. 1945 – ನಾರಾಯಣರಾವ್, ಸೀತಾಬಾಯಿ ದೇಶಪಾಂಡೆ ಹಾಗೂ ಹೊಂಬಾಳಿ ಬಂಧುಗಳ 'ಹೊಸ ಮಾದರಿಯ ಒಗಟುಗಳು'
3. 1964 – ಶಂ.ಬಾ.ಜೋಷಿಯವರ 'ಮಕ್ಕಳ ಒಡಪುಗಳು ಹಾಗೂ ಒಡಪುಗಳು'

ಭೌತಿಕ ಜಾನಪದ

ಜನಪದ ವೈದ್ಯ

1. 1930 – ಶಿವರಾಮ್ ಬಾ ಅವರ 'ರೋಗಚಿಕಿತ್ಸೆಯು'
2. 1943 – ವೆಂಕಟರಾವ್ ಕೋರಡ್ಕಲ್ ಅವರ 'ಮನೆಮದ್ದು'

ಸಾಮಾಜಿಕ ಆಚರಣೆಗಳು

ಆಚರಣೆ, ನಂಬಿಕೆ, ಸಂಪ್ರದಾಯ ಹಾಗೂ ಇತಿಹಾಸ

1. 1972 – ಲೆ.ಕ. ಮೆಕೆಂಜಿ 'ಕರ್ನಾಟಕದ ಕೈಫ಼ಿಯತ್ತುಗಳು'
2. 1816 – ಅಬ್ಬೆ ಜೆ. ದುಬೋಯೆಯ 'ದಿ ಹಿಂದೂ ಮ್ಯಾನರ್ಸ್ ಕಸ್ಟಮ್ಸ್ ಅಂಡ್ ಸೆರೆಮೊನೀಸ್' '
3. 1915 – ನದೋಳ್ಗೆ ಶೀನಪ್ಪ ಹೆಗ್ಗಡೆಯವರ 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಹಾಗೂ ಭೂತಾಳ ಪಾಂಡ್ಯರಾಯನ ಅಳಿಯ ಕಟ್ಟು' '
4. 1924 – ನಡಕೇರಿಯಂಡ ಚಿಣ್ಣಪ್ಪನವರ 'ಪಟ್ಟೋಲೆ ಪಳಮೆ'
5. 1929 – ನಂದೋಳ್ಗೆ ಶೀನಪ್ಪ ಹೆಗ್ಗಡೆಯವರ 'ತುಳುವಾಲ ಬಲಿಯೇಂದ್ರ'

ಪ್ರದರ್ಶನ ಕಲೆಗಳಿಗೆ ಸಂಬಂಧಿಸಿದ ಯಾವುದೇ ಸಂಗ್ರಹಗಳು ಮೊದಲ ಘಟ್ಟದಲ್ಲಿ ಪ್ರಕಟಗೊಂಡಿಲ್ಲ. ಅವುಗಳ ಬಗ್ಗೆ ಸಿಗುವ ಕೆಲವು ಬಿಡಿಬರಹಗಳನ್ನು ಅಧ್ಯಯನ ಕೃತಿಗಳು ಹಾಗೂ ಲೇಖನಗಳು ಭಾಗದಲ್ಲಿ ಕೊಡಲಾಗಿದೆ.

ಅಧ್ಯಯನ ಕೃತಿಗಳು ಹಾಗೂ ಲೇಖನಗಳು

ವಿಮರ್ಶಾ ಕೃತಿಗಳು ಹಾಗೂ ಲೇಖನಗಳು

1. 1891 – ಬಾಸೆಲ್ ಮಿಶನ್ ಪ್ರೆಸ್‌ರವರ ಕಿರು ಪುಸ್ತಕ 'ಭೂತ ಸೇವೆ'
2. 1898 – ಎ.ಸಿ.ಬರ್ನೆಲ್‌ನ ಲೇಖನಗಳು 'ದಿ ಡೆವಿಲ್ ವರ್‌ಷಿಪ್ ಆಫ್ ತುಳುವಾಸ್'
3. 1935 – ದೇವುಡು ನರಸಿಂಹಶಾಸ್ತ್ರೀಯವರ 'ಕರ್ನಾಟಕ ಸಂಸ್ಕೃತಿ'
4. 1936ರಲ್ಲಿ ಪ್ರಹ್ಲಾದ ಕುಲಕರಣಿಯವರು ಪ್ರಕಟಿಸಿರುವ 'ನಾಣ್ಣುಡಿ' ಕೃತಿ
5. 1936 – ಭಾಸ್ಕರಾನಂದ ಸಾಲೆತೂರು ಬರೆದ 'ಏನ್‌ಷಿಯಂಟ್ ಕರ್ನಾಟಕ ಸಂ.1: ಹಿಸ್ಟರಿ ಆಫ್ ತುಳುವಾಸ್'
6. 1945 – ಮುಳಿಯ ತಿಮ್ಮಪ್ಪಯ್ಯನವರ ಸಂಶೋಧನೆ ಲೇಖನಗಳು 'ಪಾರ್ತಿಸುಬ್ಬ'
7. 1870 – ವಿ.ಎನ್.ನರಸಿಂಹಯ್ಯಂಗಾರ್ ಅವರ 'ದಿ ಭೂತಾಸ್ ಆಫ್ ನಗರ ಮಲನಾಡ್ ಇನ್ ಮೈಸೂರ್'
8. 1972 – ವಿ.ಎನ್.ನರಸಿಂಹಯ್ಯಂಗಾರ್ ಅವರ 'ಲಜೆಂಡ್ಸ್ ಆಫ್ ದಿ ಒರಿನ್ ಆಫ್ ದಿ ತುಂಗಭದ್ರ ರಿವರ್'
9. 1873 – ರೆ। ಫಾ। ಕಿಟ್ಟೆಲ್‌ರ 'ಕೂರ್ಗ್ ಸುಪರ್‌ಸ್ಟೀಷನ್'
10. 1874 – ಕರ್ನಲ್ ಮೆಕೆಂಜಿಯ 'ದಿ ವಿಲೇಜ್ ಫೀಸ್ಟ್'
11. 1875 – ಎಂ.ಜೆ.ವಾಲ್‌ಹೌಸ್‌ನ 'ಆನ್ ಬಿಹಾಫ್ ಆಫ್ ದ ಭೂತಾಸ್ ಡೆವಿಲ್ ಅಂಡ್ ಗೋಸ್ಟ್ ವರ್‌ಷಿಪ್ ಇನ್ ವೆಸ್ಟರನ್ ಇಂಡಿಯಾ'
12. 1875 – ಎಚ್.ಕೆ.ಮಲ್ಲಪ್ಪನವರ 'ಕನ್ನಡ ಗಾದೆಗಳ ಜೀರ್ಣೋದ್ಧಾರ'
13. 1919 – ಪರಿಷತ್ಪತ್ರಿಕೆ ಪ್ರಕಟ – ಸಿ.ಹನುಮಂತೇಗೌಡರ 'ಲಾವಣಿಗಳು' ಲೇಖನ
14. 1919 – ಪರಿಷತ್ಪತ್ರಿಕೆ ಪ್ರಕಟ 'ನಂಜುನಗೂಡಿನ ಲಾವಣಿ'

15. 1923 – ಚನ್ನಮಲ್ಲಪ್ಪ ಹಾಗೂ ಧೂಲಾ ಸಾಹೇಬರ 'ಬೀಸುವ ಕಲ್ಲಿನ ಹಾಡು' ಹಾಗೂ 'ಲಾವಣಿಯ ಲಾವಣ್ಯ'

16. 1923 – ತೀ.ನಂ.ಶ್ರೀಕಂಠಯ್ಯನವರ 'ಕೆರೆದ ಹಾರ' (ತ್ರಿಪದಿಗಳ ವಿಶ್ಲೇಷಣೆ)

17. 1924 – ಪರಿಷತ್ಪತ್ರಿಕೆ ಪ್ರಕಟ ಹಲಸಂಗಿ ಚೆನ್ನಮಲ್ಲಪ್ಪನವರ 'ಹಳ್ಳಿಯ ಹಾಡುಗಳು'

18. 1925 – ಮಾಸ್ತಿ ವೆಂಕಟೇಶ ಅಯ್ಯಂಗಾರರ 'ಕನ್ನಡ ನಾಡಿನ ಲಾವಣಿ ಸಾಂಗತ್ಯ'

19. 1928 – ಪ್ರಹ್ಲಾದ ನರೇಗಲ್ಲರ 'ಜನಪದಗೀತೆ ಗಾಯತ್ರಿ'

20. 1930 – ಬೆಟಗೇರಿ ಕೃಷ್ಣಶರ್ಮರ 'ಹಳ್ಳಿಯ ಹಾಡುಗಳು'

21. 1930 – ಮಾಸ್ತಿ ಹಾಗೂ ಬಿ. ಎಂ. ಶ್ರೀಯವರ 'ಜನಪದ ಸಾಹಿತ್ಯದ ಮಹತ್ವ'

22. 1930 – ಮಾಸ್ತಿಯವರ 'ಫೋಕ್ ಸಾಂಗ್ಸ್ ಇನ್ ದಿ ಕರ್ನಾಟಕ'

23. 1931 – ತೀ.ನಂ.ಶ್ರೀಕಂಠಯ್ಯನವರ 'ಮಕ್ಕಳಿಗೆ ಹೇಳುವ ಕಥೆಗಳು'

24. 1936 – ಮಾಸ್ತಿಯವರ 'ಕರ್ನಾಟಕ ಜನಪದ ಸಾಹಿತ್ಯ'

25. 1939 – ವಿ.ಕುಲಕರ್ಣಿಯವರ 'ಕರ್ನಾಟಕ ಜನಪದ ಸಾಹಿತ್ಯ'

26. 1939 – ಆರ್.ವಿ.ಜಾಗಿರ್‌ದಾರರ 'ಕರ್ನಾಟಕ ಸಂಸ್ಕೃತಿಯ ಸ್ವರೂಪ'

27. 1940 – ಸಾವಿತ್ರಿ ಬಾಯಿ ನಾಗನಗೌಡರ 25ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಿಣಿ ಭಾಷಣ

28. 1943 – ಎಂ.ಆರ್.ಲಕ್ಷ್ಮಮ್ಮ ಅವರ 'ಕೊಂತೆಮ್ಮನ ಪದ'

29. 1944 – ಚನ್ನಪ್ಪ ಉತ್ತಂಗಿ ಹಾಗೂ ಸಿಂಪಿ ಲಿಂಗಣ್ಣರ 28ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ

30. 1945 – ಎಂ.ಎಸ್.ಅನಂತಪದ್ಮನಾಭನವರ 'ಕೊಡಗಿನ ಜನಪದ ಸಾಹಿತ್ಯ'.

*****

ಭಾಗ 4

ಕೃತಿ ಪರಿಶೀಲನೆ : ಮೌಖಿಕ ಜಾನಪದ, ಭೌತಿಕ ಜಾನಪದ, ಆಚರಣೆಗಳು, ಪ್ರದರ್ಶನ ಕಲೆಗಳು

ಮೌಖಿಕ ಜಾನಪದ

ಹಾಡುಗಳು, ಲಾವಣಿಗಳು, ಪಾಡ್ದನಗಳು, ಕಥೆಗಳು, ಗಾದೆಗಳು, ಒಗಟುಗಳು ಹಾಗೂ ಒಡಪುಗಳ ಕುರಿತಾಗಿ ನಡೆದ ಸಂಗ್ರಹಗಳನ್ನು ಪರಾಮರ್ಶಿಸಲಾಗಿದೆ. ಮೌಖಿಕ ಜಾನಪದಕ್ಕೆ ಸಂಬಂಧಿಸಿದಂತೆ ಸುಮಾರು 62 ಕೃತಿಗಳು ಪ್ರಕಟವಾಗಿವೆ. ಇವುಗಳಲ್ಲಿ ಈಗ ನಮಗೆ ಲಭ್ಯವಿರುವ ಕೃತಿಗಳು 38 ಮಾತ್ರ.

ಹಾಡುಗಳು

ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟದಲ್ಲಿ ಜನಪದ ಹಾಡುಗಳನ್ನು ಮೊತ್ತ ಮೊದಲಿಗೆ ಸಂಗ್ರಹಿಸಿದವರು ವಿದೇಶಿ ವಿದ್ವಾಂಸರು. 1871ರಲ್ಲಿ **ಚಾರ್ಲ್ಸ್ ಗೋವರನ 'ದಿ ಫೋಕ್ ಸಾಂಗ್ಸ್ ಆಫ್ ಸದರ್ನ್ ಇಂಡಿಯಾ'** ಪ್ರಕಟವಾಯಿತು. ನಂತರ 1908ರಲ್ಲಿ ದೇಶಿ ವಿದ್ವಾಂಸರಾದ **ಶಂಕರನಾರಾಯಣ ಕೂಡ್ಳಿಕರ್ 'ಕನ್ನಡ ಆರತಿಗಳ ಸಂಗ್ರಹ'**ವನ್ನು ಹೊರತಂದರು. 1908ರಿಂದ 1931ರ ತನಕ ಸುಮಾರು 24 ವರ್ಷಗಳ ಅಂತರದಲ್ಲಿ ಹಾಡುಗಳ ಸಂಗ್ರಹ ಆಗಲಿಲ್ಲ. 1931ರಲ್ಲಿ **ಹಲಸಂಗಿ ಸಹೋದರರಿಂದ 'ಗರತಿಯ ಹಾಡು'** ಸಂಗ್ರಹ ಪ್ರಕಟವಾಯಿತು. ಅನಂತರ 1947ರ ವರೆಗೆ ಹಾಡುಗಳನ್ನೇ ಕುರಿತಂತೆ 14 ಸಂಗ್ರಹಗಳು, ವಿಮರ್ಶೆಗಳು ಮುಂತಾಗಿ ಹಾಡುಗಳ ಬಗೆಗೆ 17 ಸಂಗ್ರಹಗಳು ಪ್ರಕಟವಾದುವು.

1871ರಲ್ಲಿ ಚಾರ್ಲ್ಸ್ ಇ. ಗೋವರ್‌ನ 'ದಿ ಫೋಕ್ ಸಾಂಗ್ಸ್ ಆಫ್ ಸದರ್ನ್ ಇಂಡಿಯಾ' 28 ಪುಟಗಳ ಪ್ರಸ್ತಾವನೆಯ ಕೃತಿಯಲ್ಲಿ ದಕ್ಷಿಣ ಭಾತರದ ಜನಪದ ಹಾಡುಗಳಲ್ಲಿ ಉಲ್ಲೇಖಿತವಾಗಿರುವ ದ್ರಾವಿಡ ಸಂಸ್ಕೃತಿಯ ವಿವರಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿದೆ. **ಕಾಲ್ಡ್‌ವೆಲ್‌ನ 'ಕಂಪೇರಿಟಿವ್ ಗ್ರಾಮರ್ ಆಫ್ ಡ್ರವಿಡಿಯನ್ ಲಾಂಗ್‌ವೇಜಸ್'** (1850) ಕೃತಿಯ ಚರ್ಚೆಯಿದೆ. ಗೋವರ್‌ನ ಕೃತಿಯಲ್ಲಿ ಒಟ್ಟು ಎಂಟು ಭಾಗಗಳಿವೆ. ಇವೆಲ್ಲವುಗಳು **'ಇಂಡಿಯನ್ ಆ್ಯಂಟಿಕ್ವೇರಿ'** ಪತ್ರಿಕೆಯಲ್ಲಿ ಪ್ರಕಟವಾದವುಗಳು. ಮೊದಲ ಘಟ್ಟದ ಅಧ್ಯಯನಕ್ಕೆ ಕ್ಯಾನರೀಸ್ ಸಾಂಗ್ಸ್ ಹಾಗೂ ಕೂರ್ಗ್ ಸಾಂಗ್ಸ್ ಎರಡು ಭಾಗಗಳನ್ನು ಮಾತ್ರ ಗಮನದಲ್ಲಿರಿಸಿಕೊಳ್ಳಲಾಗಿದೆ. ಈ ಭಾಗಗಳು ಕನ್ನಡ ಜಾನಪದ ಅಧ್ಯಯನಕ್ಕೆ ಗೀತೆಗಳ ಕುರಿತಂತೆ ಸಿಗುವ ಬಹಳ ಪ್ರಾಚೀನ ಉಲ್ಲೇಖವಾಗಿದೆ. ಗೋವರ್ ಪ್ರಕಾರ:

The songs divided into several classes:

1. "Moral songs, dealing with subjects described in the last para"
2. "Proverbial philosophy. This is a very large class."
3. "songs representing the Adwaita system, illed with high morality but strongly patheistic, and hence exhibiting the most curious paradoxes regarding human conduct".
4. "Ancient Tamil Songs o the period when Dravidianism and Brahminism were struggling or the mastery-when men like Tiruvalluve and Sivavaakyer used their tongues and pens inavour o deism and against the ceremonial polytheism o the Brahmans- when the bet men poured out what are distinctly called Songs o sorrow, and were very Jermeiahs in weeping over the corruptions that surged upon the hand".
5. "Theological chants o considerable length that can scarcely be called songs at all, containing asa they do regular ethical essarys".
6. "Ceremonial songs, belonging chiely to the Hill ribes. The Badaga and Coorg songs o this class are especially worthy o attention. Interesting examples will appear in the ollowing pages."
7. "Labour songs, only met with among the working classes. They are generally composed in the nice rules o poesy".
8. "Mother's songs, composed or and sung to children. There are many such, but it is not easy or a European to gather them". (1981: 12-13) ಎಂಬುದಾಗಿದೆ.

ಗ್ರಂಥದಲ್ಲಿ ಕನ್ನಡ ವೃತ್ತಿಗಾಯಕರ ಒಂದು ಪ್ರಮುಖ ವರ್ಗವನ್ನು ಪರಿಚಯ ಮಾಡಿಕೊಡಲಾಗಿದೆ. **'ದಾಸ'** ಎಂಬ ಹೆಸರಿನಲ್ಲಿ ಗುರುತಿಸಿರುವ ನಾಯಕ ಭಿಕ್ಷಾಟನೆಯನ್ನು ವೃತ್ತಿಯಾಗಿ ಹೊಂದಿದವನು. ಹಾಡುವುದನ್ನು ಬಿಟ್ಟು ಇನ್ನಾವ ಉದ್ಯೋಗವೂ ಅವನ ಪಾಲಿಗಿಲ್ಲ. ಮದುವೆಗಳಲ್ಲಿ, ಹಬ್ಬಗಳಲ್ಲಿ, ಸಂಸ್ಕಾರ ಕ್ರಿಯೆಗಳಲ್ಲಿ, ಹುಣ್ಣಿಮೆ ಸಂಕ್ರಾತಿಗಳಲ್ಲಿ, 'ದಾಸ'ನನ್ನು ಬರಮಾಡಿಕೊಂಡು ಉಡುಗೊರೆ ಕೊಡುವ ಪದ್ಧತಿ ಇತ್ತು. ಗೋವರ್: 1871:13 ದಕ್ಷಿಣ ಭಾರತದ ಜನಪದ ಗೀತೆಗಳನ್ನು ವಿಭಾಗಮಾಡಿಕೊಂಡು ಕೃತಿಯಲ್ಲಿ ದಕ್ಷಿಣ ಭಾರತದ ಬೇರೆ ಬೇರೆ ಭಾಷೆಗಳ ಗೀತೆಗಳ ಸಂದರ್ಭವನ್ನು ಹೇಳಲಾಗಿದೆ.

ಗೋವರ್ ಪ್ರಕಟಿಸಿದ ಗೀತೆಗಳನ್ನು ಪರಿಗಣಿಸುವುದಾದರೆ, ಸಂಗ್ರಹದಲ್ಲಿರುವ ಗೀತೆಗಳು ಕನ್ನಡದಲ್ಲಿ ಸಂಗ್ರಹವಾಗಿ ದಾಖಲೆಗೊಂಡಿರುವ ಮೊದಲ ಸಂಕಲನ. ಗೋವರ್ ಕೃತಿಯಲ್ಲಿ ತೆಲುಗು, ತಮಿಳು, ಮಲೆಯಾಳಂ, ಬಡಗ ಹಾಗೂ ಕೊಡಗು, ಜನಪದ ಗೀತೆಗಳ ಸಾಲಿನಲ್ಲಿ ದಾಸರ ಪದಗಳನ್ನು ಕನ್ನಡ ಗೀತೆಗಳೆಂದು ಕರೆಯಲಾಗಿದೆ. ಗೋವರ್ ಕೃತಿಯಲ್ಲಿ **ಕ್ಯಾನರೀಸ್ ಸಾಂಗ್ಸ್**ಗಳನ್ನು ಅರ್ಥೈಸಿದ್ದು ಹೀಗೆ: "But it is now time that the songs should speak or themselves. They are arranged in order o language and subject. As my irst introduction to this literature was through the canarese Dasarapadas, I give them irst. `Pada is our English word `Pad', Latin Ped-is, and means a oot, corresponding with the English term o the same meaning. It means a song or poem, because it is composed o et or goes to paces. `Dasa' means a servant or slave, and is the name given to those who devote themselves or are devoted by their parents, so the serviced God. They are usually attached to some pagoda or temple and perorm all menial duties there. In process o time Dasas or Dasara have become a singing caste and have traditions and customs as other castes. Those not attached to a pagoda usually obtain a livelihood by begging. Tobe a men in the puranic system is to serve god in the most acceptable method possible." (1981: 16-17) **ಕ್ಯಾನರೀಸ್ ಸಾಂಗ್ಸ್** ಕೃತಿಯನ್ನು ಕನ್ನಡ ಜಾನಪದ ವಿದ್ವಾಂಸರು ಅರ್ಥ ಮಾಡಿಕೊಂಡದ್ದು ದಾಸರಹಾಡುಗಳೆಂದೇ. ಕ್ಯಾನರೀಸ್ ಸಾಂಗ್ಸ್‌ಗಳು ಜಾನಪದ ಹಾಡುಗಳಲ್ಲವೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಜೀ.ಶಂ. ಪರಮಶಿವಯ್ಯನವರ ಪ್ರಕಾರ "ಅನೇಕ ಹಾಡುಗಳಲ್ಲಿ ಪುರಂದರ ವಿಠಲ, ವಿಷ್ಣು ಮುಂತಾದ ಅಂಕಿತಗಳೂ ಬರುತ್ತವೆ. ಕನ್ನಡ ಮೂಲವನ್ನು ಕೊಟ್ಟಿಲ್ಲವಾದರೂ ಕೆಲವು ಪದಗಳನ್ನು ದಾಸರ ಕೀರ್ತನಗಳೊಡನೆ ಗುರುತಿಸುವ ಸಾಧ್ಯತೆಯೂ ಇದೆ.

"O all good things the best are three, wives, lands, and countless gain which is the dearest riend to thee".

ಯಾರು ಹಿತವರು ನಿನಗೆ?ಮೂವರೊಳಗೆ, ನಾರಿಯೋ? ಧಾರುಣಿಯೋ? ಬಲುಧನ ಸಿರಿಯೋ? ಎಂಬ ಪುರಂದರದಾಸರ ಪ್ರಸಿದ್ಧ ಕೀರ್ತನೆಗಳನ್ನು ನೇರವಾಗಿಯೇ ಗುರುತಿಸುವ ನಿದರ್ಶನಗಳು ಹೇರಳವಾಗಿ ಸಿಗುತ್ತವೆ." (1979:39–40)

ಗೋವರ್ ಕ್ಯಾನರೀಸ್ ಸಾಂಗ್ಸ್‌ಗಳನ್ನು ನಾಲ್ಕು ವಿಭಾಗ ಮಾಡಿದ್ದಾರೆ.

"the irst three are or our songs describe the attacks o death and the uncertainty o lie. The nest point out that inward purity is required by God rather than outward services. The third class contain out pourings against the sorrows o lie, its pain and darkness. Lastly are several collections o proverbs".(1987:17)

ಗೋವರ್‌ನ ಕೃತಿಯಲ್ಲಿ 28 ಕ್ಯಾನರೀಸ್ ಸಾಂಗ್ಸ್‌ಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿರುವ 28 ಗೀತೆಗಳಿಗೂ ಅಡಿಟಿಪ್ಪಣಿ ನೀಡಲಾಗಿದೆ. ಪ್ರತೀ ಭಾಗದ ಹಾಡುಗಳನ್ನು ಭಾರತೀಯ ಸಂದರ್ಭದಲ್ಲಿ ಅರ್ಥೈಸುವುದಕ್ಕೆ ಪ್ರಯತ್ನಿಸಲಾಗಿದೆ. ಭಗವದ್ಗೀತೆ, ಪುರಾಣ, ಬ್ರಾಹ್ಮಣೀಕರಣ, ಹಿಂದೂ ಮನೋಧರ್ಮದಲ್ಲಿ ಜನ ಯಾವರೀತಿ ಅಭಿವ್ಯಕ್ತಿಸುತ್ತಿದ್ದರೆಂಬುದರ ವಿವರವಿದೆ.

ಗೋವರ್ ಕರ್ನಾಟಕದಲ್ಲಿ ಬರೆದ ಇನ್ನೊಂದು ಪ್ರಮುಖ ಲೇಖನ **'ಕೂರ್ಗ್‌ಸಾಂಗ್ಸ್' ರೆ..** ರೈಟರ್ ಎಂಬಾತನು **'ಮ್ಯಾನ್ವಲ್ ಆಫ್ ಕೂರ್ಗ್'** ಎಂಬ ಗ್ರಂಥದಲ್ಲಿ ಕೊಡಗು, ಮಲಬಾರ್ ಹಾಗೂ ತಮಿಳು ಜನರ ಆಚರಣೆಯನ್ನು ವಿವರಿಸಲು ಪ್ರಯತ್ನಿಸಿದ್ದಾನೆ. ಕೊಡಗಿನ **'ಹುತ್ತರಿ'** (ಹೊಸಾಕ್ಕಿ) ಆಚರಣೆ, ತಮಿಳುನಾಡಿನ 'ಪೊಂಗಲ್' ಹಾಗೂ ಮಲಬಾರಿನ **'ಪುದಿಯರಿ'** ಆಚರಣೆಯನ್ನು ಸಮಾಪನ ಮಾಡಲಾಗಿದೆ. ಅವುಗಳನ್ನು ಗಮನದಲ್ಲಿರಿಸಿಕೊಂಡು ಬ್ರಾಹ್ಮಣ ಹಾಗೂ ಬ್ರಾಹ್ಮಣೇತರಲ್ಲಿ ಯಾವ ರೀತಿಯಲ್ಲಿ ಹೊಸ ಅಕ್ಕಿಯ ಆಚರಣೆ ಇರುತ್ತದೆಂಬುದನ್ನು ಚರ್ಚಿಸಲಾಗಿದೆ. ಹುತ್ತರಿಗೆ ಸಂಬಂಧಿಸಿದಂತೆ ಕತೆಗಳನ್ನೂ ಜನಪದ ಆಟಗಳನ್ನು ಸಂಕ್ಷಿಪ್ತವಾಗಿ ಕೊಡಲಾಗಿದೆ.

ಕೊಡವರಲ್ಲಿ ತಮ್ಮ ಆಚರಣೆಗಳಲ್ಲಿ, ಹುಟ್ಟು ಸಾವಿನ ಸಂದರ್ಭದಲ್ಲಿ ಹಾಡುವ ಹಾಡುಗಳನ್ನು ಸಂಗ್ರಹಿಸಿಕೊಡಲಾಗಿದೆ. ಒಟ್ಟು ನಾಲ್ಕು ಕೊಡವರ ಗೀತೆಗಳಿವೆ. ಅವುಗಳು; 1. Coorg Huttari or Harvest Song (ಕೊಡಗು ಹುತ್ತರಿ ಅಥವಾ ಸುಗ್ಗಿ ಹಾಡು) 2. Wedding Song (ಮದುವೆಯ ಹಾಡು), 3. uneral Songs and (ಶವಸಂಸ್ಕಾರದ ಹಾಡು), 4. Children's Rhymes (ಶಿಶು ಪ್ರಾಸಗಳು).

ಪ್ರತೀ ಹಾಡುಗಳಲ್ಲಿ ಕಷ್ಟ ಶಬ್ದಗಳಿಗೆ ಅರ್ಥವನ್ನು ನೀಡಲಾಗಿದೆ. ಹುತ್ತರಿ ಹಾಡು ಹೊಸ ಬೆಳೆಯನ್ನು ಮನೆಗೆ ತರುವುದರ ಕುರಿತಾಗಿ ಮಾಡುವ ಆಚರಣೆ. ಈ ಸಂದರ್ಭದಲ್ಲಿ ಪೈರನ್ನು ಮನೆಗೆ ತಂದು ಪೂಜೆ ಮಾಡುತ್ತಾರೆ. ಕೊಡವರಲ್ಲಿ ಮದುವೆಯ ಕಾರ್ಯಕ್ರಮ ಆಚರಣಾತ್ಮಕವಾದದ್ದು. ಹಾಗೆಯೇ ಪ್ರತಿಯೊಬ್ಬನ ಸಾವು ಆದಾಗ ವೀರನೊಬ್ಬನ ಸಾವನ್ನು ಸಂಕೇತಿಸುವ ಆಚರಣೆ ನೇರವೇರುತ್ತದೆ. ಕೊಡವರಲ್ಲಿ ಮಕ್ಕಳ ಹಾಡನ್ನು ಬೇರೆ ಬೇರೆ ಸಂದರ್ಭದಲ್ಲಿ ಕಾಣಬಹುದು. ಸುಮಾರು ಹತ್ತು ವಿಧದಲ್ಲಿ ಮಕ್ಕಳ ಹಾಡನ್ನು ಸಂಗ್ರಹಿಸಲಾಗಿದೆ.

ದಕ್ಷಿಣಭಾರತದ ಜನಪದ ಗೀತೆಗಳನ್ನು ಸಮೀಕ್ಷಾತ್ಮಕವಾಗಿ ವಿವರಿಸಲಾಗಿದೆ. ಸಂಗ್ರಹವಾದ ಹಾಡುಗಳೆಲ್ಲವೂ ಕನ್ನಡದಲ್ಲಿದ್ದು ಅವುಗಳನ್ನು ಗೋವರ್ ಪ್ರತ್ಯೇಕ ಸಂದರ್ಭದಲ್ಲಿ ಸಂಗ್ರಹಿಸಿ, ಅವುಗಳನ್ನು ಇಂಗ್ಲೀಷಿಗೆ ಅನುವಾದಿಸಿದ್ದಾನೆ. ಅನುವಾದಿಸುವಾಗ ಅನುಮಾನ ಬಂದ ಪ್ರಾದೇಶಿಕ ಪದಗಳಿಗೆ ಸಂದರ್ಭಕ್ಕನುಸಾರವಾಗಿ ವಿವರಣೆ ನೀಡಿದ್ದಾನೆ

ಗ್ರೋವರ್‌ನ ಕೃತಿ ಇಂದಿಗೂ ಒಂದು ಮಾದರಿ ಸಂಗ್ರಹವಾಗಿಯೇ ಉಳಿದಿದೆ. ಆತನು ದಾಸರ ಪದಗಳನ್ನು ಸಂಗ್ರಹಿಸಿದ್ದಾನೆ. ಎಂಬುದು ನಿಜ ಆದರೆ ಅದನ್ನು ಮೌಖಿಕ ರೂಪಗಳಿಂದ ಸಂಗ್ರಹಿಸಿದ್ದಾನೆ ಎಂಬುದನ್ನು ಮರೆಯಬಾರದು. ಅರ್ಥದಲ್ಲಿ ಭಿನ್ನ ಪಾಠಗಳಿರುವ ಇವುಗಳನ್ನು ಜಾನಪದ ಪಠ್ಯಗಳೆನ್ನಲು ಏನೂ ತೊಂದರೆ ಇಲ್ಲ.

1893ರಲ್ಲಿ **'ಬಾಗಿಲು ತಡೆಯುವ ಪದಗಳು'** ಸಂಗಹ ಪ್ರಕಟವಾಯಿತು. ದಕ್ಷಿಣ ಕರ್ನಾಟಕಕ್ಕೆ ಸಂಬಂಧಿಸಿರುವ ಸಂಗ್ರಹದಲ್ಲಿ ಬಾಗಿಲು ತಡೆವ ಇಪ್ಪತ್ತೊಂದು ಪದಗಳಿವೆ. ಇವುಗಳನ್ನು ಮದುವೆಯ ಸಂದರ್ಭದಲ್ಲಿ ಹಾಡುತ್ತಾರೆ

1908ರಲ್ಲಿ **ಶಂಕರನಾರಾಯಣ ಕೂಡ್ಲಿಕರ** ಎಂಬುವರು **'ಕನ್ನಡ ಆರತಿಗಳ ಸಂಗಹ'** ಎಂಬ ಗೀತ ಸಂಗ್ರಹವನ್ನು ಹೊರತಂದರು. ಇದು ಹೆಣ್ಣು ಮಕ್ಕಳ ಹಾಡುಗಳ ಸಂಗ್ರಹ. ಹಾಡುಗಳನ್ನು ಪ್ರಥಮ ಬಾರಿಗೆ ಈತ ಸಂಗ್ರಹಿಸಿದ. ಇಲ್ಲಿಯ ಆರತಿ ಹಾಡುಗಳು ಮದುವೆಯ ಸಂದರ್ಭದಲ್ಲಿ ಹೇಳುವ ಹಾಡುಗಳಾಗಿವೆ.

1931ರಲ್ಲಿ **'ಗರತಿಯ ಹಾಡುಗಳ'** ಸಂಗ್ರಹ ಪ್ರಕಟವಾಯಿತು. ಇದು ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಜನಪ್ರಿಯ ತ್ರಿಪದಿಗಳ ಸಂಗ್ರಹ. ಹಲಸಂಗಿ ಸಹೋದರರಾದ ಚೆನ್ನಮಲ್ಲಪ್ಪ, ಲಿಂಗಪ್ಪ, ಹಾಗೂ ರೇವಪ್ಪ ಇವರು ಜಂಟಿಯಾಗಿ ಇದನ್ನು ಹೊರತಂದರು. ಸಂಕಲನದಲ್ಲಿ ಗರತಿಯೊಬ್ಬಳ ಕುರಿತಂತೆ ಹಾಡುವ 800 ತ್ರಿಪದಿ ಹಾಡುಗಳಿವೆ. ಸಂಕಲನದಲ್ಲಿ ಬಿ. ಎಂ. ಶ್ರೀಕಂಠಯ್ಯನವರು ಬರೆದ ಪ್ರಸ್ತಾವನೆ, ದ.ರಾ. ಬೇಂದ್ರೆಯವರು ಬರೆದ ಪರಿಚಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಬರೆದ ಆಶೀರ್ವಾದ, ಹಾಗೂ ಸಿಂಪಿಲಿಂಗಣ್ಣ ಬರೆದ ಅರಿಕೆಗಳಿವೆ.

ಸಂಗ್ರಹದ ಪ್ರಕಾಶಕರಾದ ವಿನೀತ ರಾಮಚಂದ್ರರಾಯರು ಪ್ರಕಾಶಕರ ನುಡಿ ಭಾಗದಲ್ಲಿ ಸಂಕಲನದ ಬಗ್ಗೆ ಹೀಗೆ ಹೇಳಿಕೊಂಡಿದ್ದಾರೆ. "ಕನ್ನಡ ಸಾಹಿತ್ಯ ಪ್ರಪಂಚದ ಚರಿತ್ರೆಯಲ್ಲಿ **'ಗರತಿಯ ಹಾಡು'** ಪ್ರಕಾಶನವು ಚಿರಸ್ಮರಣೀಯವಾದ ಘಟನೆಯಾಗಿದೆ. 'ಸ್ತ್ರೀಣಾಂ ಅಶಿಕ್ಷಿತ ಪಟುತ್ವಂ' ಎಂಬ ಸಂಸ್ಕೃತ ಸೂಕ್ತಿಯ ಸತ್ಯತೆಯನ್ನು ಮನಗಾಣಬೇಕಾದರೆ ಗರತಿಯ ಹಾಡಿನಲ್ಲಿ ಪ್ರಕಟವಾದ, ಕರ್ನಾಟಕದ ಗ್ರಾಮಾಂತರದ ಹೆಣ್ಣುಮಕ್ಕಳು ಬೀಸುವಾಗ, ತೊಟ್ಟಿಲು ತೂಗುವಾಗ, ಮನೆಗೆಲಸ ಮಾಡುವಾಗ ತಾವೇ ಕಟ್ಟಿ ಹಾಡಿದ ತ್ರಿಪದಿಗಳನ್ನು ಸಹೃದಯ ಸಾಹಿತ್ಯ ಭಕ್ತರು ಓದಲೇಬೇಕು" (1956:4)

ಸಂಗ್ರಹದ ಪ್ರಸ್ತಾವನೆಯನ್ನು ಬರೆಯುತ್ತಾ ಬಿ.ಎಂ.ಶ್ರೀಯವರು ರೀತಿಯ ಅಭಿಪ್ರಾಯಕ್ಕೆ ಬರುತ್ತಾರೆ. "ಕಾಡು ಜನರೂ, ಒಕ್ಕಲಿಗರೂ, ಹೆಂಗಸರೂ, ಮಕ್ಕಳೂ– ಶಾಸ್ತ್ರ ಕಾವ್ಯಗಳ ಪರಿಚಯವೇ ಇಲ್ಲದ ಜನಸಾಮಾನ್ಯರೆಲ್ಲರೂ ನಾಡಿನ ಮಟ್ಟನ್ನು ಎಂದರೆ ಅಷ್ಟು ಮಟ್ಟಿಗೆ ಛಂದಸ್ಸನ್ನು ಬಲ್ಲರು. ಹಿಂದಿನಿಂದ ಬಂದ ಹಾಡನ್ನು ತಲೆಮೊರೆಯಾಗಿ ಕಲಿತು ಹೇಳುವುದಲ್ಲದೆ, ಹೊಸ ಹಾಡನ್ನೂ ಕಟ್ಟ ಬಲ್ಲರು. ಆದಿಕಾಲದಲ್ಲಿ ಇನ್ನೂ ಕವಿತ್ವವೂ ಶಾಸ್ತ್ರವೂ ಶೈಶವದೆಶೆಯಲ್ಲಿದ್ದಾಗ, ಹಳ್ಳಿಯಲ್ಲಿ ಹೊಲದ ಕಣದಲ್ಲಿ, ಹಬ್ಬ–ಹುಣ್ಣಿಮೆಗಳಲ್ಲಿಯೂ ಸುಖ–ದುಃಖ ಸಂದರ್ಭಗಳಲ್ಲಿಯೂ ಜನರು ಸೇರಿ ತಮ್ಮ ರಸಭಾವಗಳನ್ನು ಹಾಡಿಕೊಂಡು ಕುಣಿಯುತ್ತಿದ್ದರು. ಕುಣಿತದ ಹೆಜ್ಜೆಗಳೇ ತಾಳ. ಹಾಡಿನ ಅಭಿನಯವೇ ಕುಣಿತ. ಇದೇ ಜನರ ಆಟ–ಪಾಟ, ಕುಯಿಲು, ಕುಡಿತ, ಕೋಲಾಟ, ಬೇಟೆ, ಮದುವೆ, ಸಾವು, ಕಾಳಗದ ಸೋಲು–ಗೆಲವುಗಳು, ಬಾಳಿಕೆಯ ಕಷ್ಟಸುಖಗಳು, ವೀರ ಸಾಹಸಕಾರ್ಯಗಳು, ದೈವಾನುಭವ, ದೈವಭಕ್ತಿ ಇವೇ ಮೊದಲಾದ ಎಲವನ್ನು ಎಲ್ಲಾ ವಿಷಯಗಳನ್ನೂ ಕುಣಿಯುತ್ತಾ ಹಾಡುಕಟ್ಟುತ್ತಿದ್ದರು. ಹೆಂಗಸರೂ, ಕೆಲಸಗಾರರು ಕೆಲಸದ ಬಳಲಿಕೆಯನ್ನು ಹಾಡಿನ ರಾಗದಲ್ಲಿ, ಗೀತದ ಆನಂದದಲ್ಲಿ ಮರೆಸುತ್ತಿದ್ದರು. ಕಟ್ಟುವಾಗ, ಬೀಸುವಾಗ, ಮಗುವನ್ನು ತೂಗುವಾಗ, ಮದುವೆಗಾಗಿ ನಲಿಯುವಾಗ, ಸಾವಿಗಾಗಿ ಅಳುವಾಗ, ಭಾರವನ್ನೆತ್ತುವಾಗ, ಬಂಡಿಯನ್ನು ಹೊಡೆಯುವಾಗ, ದೋಣಿಯನ್ನು ನಡೆಸುವಾಗ, ಹೆಂಗಸರೂ ಗಂಡಸರೂ ಹಾಡುಗಳನ್ನು ಹೇಳುತ್ತಿದ್ದರು, ಕಟ್ಟುತ್ತಿದ್ದರು. ಹೀಗೆ ನೃತ್ಯದ ಉಲ್ಲಾಸವನ್ನು ಪ್ರಕಾಶಗೊಳಿಸುತ್ತಾ ಉದ್ಯೋಗ ಆಯಾಸ ವನ್ನು ಪರಿಹಾರ ಮಾಡುತ್ತಾ, ಆಗ್ಗೆ ಹೇಳುವ ಉಸಿರಿಗೆ ತಕ್ಕ ಹಾಗೆ ರಾಗವನ್ನು ಹೊಂದಿಸುತ್ತಾ, ಜನರ ಸರ್ವಸಾಧಾರಣವಾದ ಮನೋಭಾವವನ್ನು ವಿಶದಗೊಳಿಸುತ್ತಾ ಹುಟ್ಟಿದುವು ಹಾಡುಗಳು. ಹಾಗೂ ಹಾಡಿನ ಮರಿಗಳು"(1931:5–6) ಎನ್ನುತ್ತಾರೆ.

"ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೇ ಅಲ್ಲ, ಆಳವನ್ನು ಕೂಡ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ–ಇಂಗ್ಲಿಷ್ ಸಾಹಿತ್ಯಗಳ,

ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢ ಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಹಾಗೂ ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ ದೇಶವತ್ಸಲರೂ ಶ್ರದ್ಧೆಯಿಂದ ಮೂಲೆಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಒಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು. ಆಗ ಆ ಸಾಹಿತ್ಯವನ್ನೆಲ್ಲಾ ಅಮೂಲಾಗ್ರವಾಗಿ ಪರಿಶೋಧಿಸಿ, ಅದರ ಸ್ವರೂಪವನ್ನು ನಿರ್ಣಯಿಸಿ ಇವುಗಳ 'ಸತ್ಯ–ಸೌಂದರ್ಯ–ಸುಖ'ಗಳನ್ನು ಅನುಭವಿಸಿ, ಇವುಗಳ ವರ್ಚಸ್ಸು ಹೊಸ ಸಾಹಿತ್ಯದಲ್ಲಿ ಮೂಡುವಂತೆ ಮಾಡಬಹುದು. ಇವುಗಳ ಛಂದಸನ್ನು ತಮಿಳು, ತೆಲುಗು, ಕೊಡಗು, ತುಳು ಮುಂತಾದ ಭಾಷೆಗಳ ಮೂಲ ಛಂದಸ್ಸುಗಳೊಡನೆ ಹೋಲಿಸಿ ದ್ರಾವಿಡ ಭಾಷೆಗಳ ಮೂಲ ಛಂದಸ್ಸಿನ ರಹಸ್ಯವನ್ನು ಅರಿಯಬಹುದು" (1931:8–9) ಎಂದು ಹೇಳುತ್ತಾರೆ.

ದ.ರಾ.ಬೇಂದ್ರೆಯವರು **ತ್ರಿಪದಿ ಸಂಕಲನ**ವನ್ನು ಹೀಗೆ ಪರಿಚಯಿಸುತ್ತಾರೆ. "ಸಾಹಿತ್ಯವಲ್ಲದ ಜೀವನವಿಲ್ಲ. ಜೀವನದ ತಿರುಳಿನಲ್ಲಿ ಕೀಳು–ಮೇಲೆಂದಿಲ್ಲ, ಎಲ್ಲ ಜೀವನವೂ ಅದ್ಭುತವಾದ ರಸಾಯನವು. ಇದನ್ನು ಉಣ್ಣದಿದ್ದವರಿಲ್ಲ. ಶಬ್ದ ಮಾತ್ರವೆಲ್ಲ ಕಾವ್ಯವೆಂದೂ, ಜೀವಮಾತ್ರವೆಲ್ಲ ಕವಿಯೆಂದೂ ಒಬ್ಬ ಜ್ಞಾನಿಯು ಹೇಳಿದ್ದಾನೆ. ಆದರೆ ಜೀವನು ಆತ್ಮನಿದ್ದೂ, ಅದರ ಅರಿವಲ್ಲದುದರಿಂದ ಪರಿವೆಯೆಲ್ಲದುದರಿಂದ ತೊಳಲಿ ಬಳಲುವಂತೆ ಜೀವನವೊಂದು ಕಾವ್ಯ. ನಾಟಕ ಎಂಬ ಅನುಭವವಿಲ್ಲದೆ ಸಂಸಾರವನ್ನೂ ಅಪಾರವತ್ತಾಗಿ ಕಾಣುತ್ತಲಿದ್ದಾನೆ. ಜನಪದ ಸಾಹಿತ್ಯದ ಅಂತಃ ಸ್ಫೂರ್ತಿಯೂ ಶ್ರದ್ಧೆಯಲ್ಲಿದೆ. ಅದರ ದೃಷ್ಟಿಯಲ್ಲಿ ಜೀವನವೇ ಕಾವ್ಯ. ಆ ಜೀವನ ಎಂಬ ಭೇದವು ಅದಕ್ಕಿಲ್ಲ. ಅದಕ್ಕಾಗಿಯೇ ನಾಯಕ–ನಾಯಿಕೆಯರ ಮಹತ್ವವಾಗಲಿ, ಕಥಾವಸ್ತುವಿನ ಗುರುತ್ವವಾಗ್ಲಿ ಅದಕ್ಕೆ ಬೇಕಾಗಿಲ್ಲ. ರಾಮ–ಕೃಷ್ಣರೇ ಬೇಕೆಂದಿಲ್ಲ; ರಾವಣ–ದುರ್ಯೋಧನರೇ ಅಗತ್ಯ ಎಂತಲ್ಲ, ಸೀತಾ ವನವಾಸ, ದ್ರೌಪದೀ ವಸ್ತ್ರಾಪಹರಣವು ಅವಶ್ಯವಾಗಿಲ್ಲ. ಎಲ್ಲಾ ಜೀವನವೇ ಎಲ್ಲಿ ಕಾವ್ಯವರಗಿದೆಯೋ ಅಲ್ಲಿ ಗುರು ಲಘುಗಳ ಭೇದವೇಕೆ? ರಹಸ್ಯವನ್ನು ನಾವು ಜನಪದ ಸಾಹಿತ್ಯದಲ್ಲಿ ಕಾಣಬಹುದು"(1931:0–10–11) ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಜೀವನವೇ ದೇವತೆಯಾದ, ತ್ರಿಪದಿ ಛಂದದಲ್ಲಿ ಹೊರಹೊಮ್ಮಿದ 'ಗರತಿಯ ಹಾಡಿ' ನ ಋಷಿಗಳು, ಹೆಣ್ಣು ಮಕ್ಕಳು, ನಮ್ಮ ತಾಯಿ ತಂಗಿಯರು, ಅಮ್ಮ ಅಕ್ಕಂದಿರು, ಮಡದಿ ಮಕ್ಕಳು, ಹಾಗೆ ವಿಚಾರಿಸಿ ನೋಡಿದರೆ ಅವರದೇ ನಿಜವಾದ ಕಾವ್ಯ. ಉಳಿದುದು ಕಾವ್ಯದ ಛಾಯೆ. ತೋಟಕ್ಕ ಹೋದನ್ನ ಊಟಕ್ಕೆ ಬರಲಿಲ್ಲ । ತೋಟದ ಹೂವ ತಲೆತುಂಬ । ಇಟಗೊಂಡು । ಊಟದ ಹಂಬಲ ಮರೆತಾನ ॥ ಕೋಪವ್ಯಾಕಣ್ಣಯ್ಯ ಕೊಳ್ಳೊ ಕಾಲಿಗೆ ನೀರ । ಬಾಯ ತಂಬುಳದ ಉಗಳಣ್ಣ । ನೀ ಬರುವ । ದಾರಿಯ ನೋಡಿ ಬಡವಾದೆ ॥ ಎಂದು ತಂಗಿಯು ಅಣ್ಣನಿಗೆ ಹೇಳುವ ಮಾತಿಬಲ್ಲಿಯೂ ಸರದಾರ ಬರುವಾಗ ಸುರಿದಾವ ಮಲ್ಲಿಗೆ । ದೊರೆ ನನ್ನ ತಮ್ಮ ಬರುವಾಗ । ಯಾಲಕ್ಕಿ । ಗೊನೆ ಬಾಗಿ ಹಾಲ ಸುರಿದಾವ ॥ ಎಂದು ಅಕ್ಕನು ತಮ್ಮನಿಗಾಗಿ ಹೇಳುವ ಮಾತಿನಲ್ಲಿಯೂ ತಾಯಿ ಕಾಣದ ಜೀವ ತಾವೂರಿ ಬಾವೂರಿ । ಭಾಳ ಬಿಸಲಾನ ಅವರೀಯ । ಹೂವಾಂಗ । ಬಾಡತಿನಿ ಕರೆದೊಯ್ಯ ॥ ಎಂದು ಮಗಳು ತಾಯಿಗೆ ಹೇಳುವ ಮಾತಿನಲ್ಲಿಯೂ ಅಚ್ಚುಮಲ್ಲಿಗೆ ಹೂವ ಮುಚ್ಚಿ ಮಾರುವ ಜಾಣ । ನಾ ಕೇಳುವೆನಿದರ ಬೆಲೆಹೇಳೊ । ತಂಗೀಗಿ । ಸುರುಳಿಗೂದಲದ ಸುಗಣೀಗಿ ॥ ಎಂದು ಅಕ್ಕನು ತಂಗಿಯ ನಲ್ಲನಿಗೆ ಹೇಳುವ ಮಾತಿನಲ್ಲಿಯೂ, ಆಡಿ ಬಾ ಎನ ಕಂದ ಅಂಗಾಲ ತೊಳದೇನ । ತೆಂಗಿನಕಾಯಿ । ಎಳನೀರ । ತಕ್ಕೊಂಡು ಬಂಗಾರ ಮೋರೆ ತೊಳದೇನ ॥ ಬಾರೋ ಬಾರೋ ನನ್ನ ಬಾಲ ಚಕ್ರವರ್ತಿ । ನಾಲಿಗೆಯ ಮೇಲೆ ಸರಸೋತಿ । ಇರುವಂಥ । ಬಾಲಕ ಹಾಲ ಕುಡಿ ಬಾರೊ ॥ ಎಂದು ತಾಯಿ ಮಕ್ಕಳಿಗೆ ಹೇಳುವ ಮಾತಿನಲ್ಲಿಯೂ ಯಾವ ಕಾಂತಿಯಿಲ್ಲ? ಕಾಂತತೆಯಿಲ್ಲ?

ನಿಜವಾಗಿಯೂ ಒಬ್ಬ ಅದಿಮಾಯೆಯೇ ಜೀವವನ್ನು ಆಡಿಸಲು ನಿಂತಂತೆ ಭಾಸವಾಗಿ ಬಿಡುವುದು. ಆ ಹೃದಯ, ಆ ದುಃಖ ಸಹಿಷ್ಣುತೆ, ವಜ್ರ ಕುಸುವ ಆಸಾಧಾರಣೋಕ್ತಿ, ಧ್ವನಿಪ್ರಾಣವಾದ ಸ್ವಭಾವ ಸರಳ, ವಸ್ತು ಸಹಜ ನಿವೇದನ ಪದ್ಧತಿ–ಒಂದೆರೆಡೇ –ಇವೆಲ್ಲ ಹೆಣ್ಣಿಗೆ ಹುಟ್ಟುಗುಣವಾಗಿವೆ" (1931: 11–713)ಎಂದು ಅಭಿಪ್ರಾಯ ಪಡುತ್ತಾರೆ.

'ಗರತಿಯ ಹಾಡು' ಸಂಕಲನದಲ್ಲಿ ಬೀಸುವ ಕಲ್ಲಿನ ಪದಗಳೂ, ಮಕ್ಕಳ ಲಾಲಿಗಳೂ ಇವೆ. ಬೀಸುವ ಕಲ್ಲಿನ ಕುರಿತಂತೆ ಒಂಭತ್ತು ತ್ರಿಪದಿಗಳ ಸಂಗ್ರಹವಿದೆ. ಬೀಸುವ ಕಲ್ಲಿಗೆ ದೇಶವ ತಿರುಗ್ಯಾರೆ । ಸಕಲ ಸಂಪನರ ಮಗಳೀಗೆ । ನೀಲಮಗೆ । ರಾಜ್ಯ ತಿರುಗ್ಯಾರೆ ಬಸವಯ್ಯ ॥ ಅಕ್ಕಿ ಬೀಸುವ ಕಲ್ಲೆ ಸಕ್ಕರೆ ಒಡಗಲ್ಲೆ । ಶೆಟ್ಟಿ ತಮ್ಮಯ್ಯ ಅರಮನೆ । ರಾಗಿಕಲ್ಲೆ । ಹಟ್ಟಿ ಬಾಗಿಲಿಗೆ ದನಿದೋರೆ ॥" (1931:37)

"ಮಕ್ಕಳಿಗಾಗಿ ಹಾಡುವಾಗ ಮಕ್ಕಳಿಗೆ ಆ ಹಾಡಿನ ಮಾತು ತಿಳಿಯಲಿ ಬಿಡಲಿ ಸಾಮಾನ್ಯವಾಗಿ ತಾಯಿಯು ತನ್ನ ದುಃಖವನ್ನು ನುಂಗಿ ತನ್ನ ಸುಖವನ್ನೇ ನನೆಸಿ ಹಾಡುವಳು" (1931:13) "**ಬೀಸುವ ಕಲ್ಲಿನ ಪದ**ಗಳಲ್ಲಿ ಹೆಣ್ಣಿನ ದುಃಖವು ಹಿಡಿಸಲಾರದೆ ಹೊರಬೀಳುವದು. ಅತ್ತೆಮನೆಯ ಸೊಸೆಗೆ ಬೀಸುವ ಕಲ್ಲಿನ ಬಳಿಯೇ ತವರುಮನೆ. ಅದರ ಗರ್ಗರ ಸಪ್ಪಳವೇ ಏಕಾಂತ. ಶೋಕ ಕ್ಷೋಭೆಗಳಿಂದ ಎದೆಯನ್ನು ಅತ್ತು ಹಾಡಿ ಹಗುರವಾಗಿ ಮಾಡಿಕೊಳ್ಳಲು ಅವರಿಗೆ ಬೇರೆ ಎಡೆಯೆಲ್ಲಿ? ಬೇರೆ ಸಮಯವಾದರೂ ದೊರೆಯುವುದೇ?"[1] (1931–13)

"ಗರತಿಯ ಹಾಡಿನ ತ್ರಿಪದಿಗಳಲ್ಲಿ ಕಂಡು ಬರುವ ಕೆಲವು ವೈಲಕ್ಷಣಗಳನ್ನು ಕುರಿತು ಒಂದೆರಡು ಮಾತುಗಳನ್ನು ಬರೆಯುವುದುಚಿತವಾಗಿದೆ. ಹಾಡುಗಳಲ್ಲಿ ಪಾಠಂತರಗಳಿಗೆ ಎಣೆಯಿಲ್ಲ. ಬಾಯಿಗೆ ಸಿಕ್ಕ ಬೆಣ್ಣೆಯ ಮುದ್ದೆಯನ್ನು ಬೇಕು ಬೇಕಾದಂತೆ ಮಿದ್ದುವ ಹಾಗೆ ಹೆಂಗಳೆಯರು ಇವುಗಳನ್ನು ಹಾಡು ಹಾಡುವಾಗಲೆ ತಿದ್ದುವರು. ಆದಕಾರಣ ಇವುಗಳ ಕನ್ನಡ ತಿರುಳಿನಲ್ಲಿ ಕೆಲವು ಸಕ್ಕದ ಹರಳುಗಳು ಕಂಂಡುಬರುವವು. ಆದರೆ ಆ ಸಂಸ್ಕೃತ ಪದಗಳನ್ನು ಆಯ್ದುಕೊಳ್ಳುವರಲ್ಲಿಯೂ ಎಂಥ ನೈಸರ್ಗಿಕವಾದ ರಸಿಕತೆ, ಜಾಣ್ಮೆ, ನೈಪುಣ್ಯ. ನುಡಿಯಲ್ಲಿ ಹೀಗೆ ಬೆರಕೆ ಕಂಡುಬಂದರೂ, ವಾಕ್ಯರಚನೆಯಲ್ಲಿ ಕನ್ನಡವು ಅಚ್ಚಳಿಕೆಯದೆ ಇದೆ. ಕನ್ನಡವು ಎದೆಯ ಬಗೆಗಳನ್ನೆಲ್ಲ ಕನ್ನಡಿಸುವದೆಂಬುದನ್ನು ಹಾಡುಗಳಲ್ಲಿ ಕಂಡುಕೊಳ್ಳಬೇಕು. ಪ್ರಸಾದವು ಹಾಡುಗಳ ಹುಟ್ಟುಗುಣವಾಗಿದೆ. ಆದರೂ ಒಂದು ಬಗೆಯ ಗಾಂಭೀರ್ಯವು ತಾನೇ ತಾನಾಗಿ ಅದರ ಜೊತೆಯಲ್ಲಿಯೇ ಸೇರಿಕೊಂಡು ಬರುವುದನ್ನು ಪ್ರತಿ ಪದ್ಯಗಳಲ್ಲಿಯೂ ಕಾಣಬಹುದು." (1931:16)

"ಮಾದಯ್ಯ ಬರುವಾಗ ಮಾಳೆಲ್ಲ ಜುಮ್ಮೆಂದೂ । ಮಾಳದಲಿ ಗರಿಕೆ ಚಿಗುರ್ಯಾವ । ಮಾದೇವ । ಮೂಡ್ಲಲ್ಲಿ ಮಳೆಯು ಸುರಿದಾವೊ ॥" (1931:46) "ಹಾಲುಂಡ ತವರೀಗಿ ಏನೆಂದು ಹಾಡಲೆ । ಹೊಳೆದಂಡಿಲಿರುವ ಕರಕೀಯ । ಕುಡಿಮಂಗ । ಹಬ್ಬಲೆ ಅವರ ರಸಬಳ್ಳಿ ॥" "ಗಂಜೀಯ ಕುಡಿದರು ಗಂಡನ ಮನಿಲೇಸ । ಅಂದಣದ ಮ್ಯಾಲ ಚವುರವ । ಸಾರಿದರ । ಹಂಗೀನ ತವರು ಮನಿ ಸಾಕ 1931:53) "ತೊಟ್ಟಿಲ ಹೊತ್ಕೊಂಡು ತವರು ಬಣ್ಣ ಉಟ್ಕೊಂಡು । ಅಪ್ಪ ಕೊಟ್ಟೆಮ್ಮಿ ಹೊಡಕೊಂಡು । ತೌರೂರು । ತಿಟ್ಟಹತ್ತಿ ನಿಂದು ನೋಡ್ಯಾಳೋ ॥" (1931:56) "ಬೀದರ ಹೈದ್ರಾಬಾದುಗಳ ಉತ್ತರದ ತುದಿಯಿಂದ ನೀಲಗಿರಿ ಕೊಯೆ ಮತ್ತೂರಿನ ದಕ್ಷಿಣದ ತುದಿಯವರೆಗೆ ಹಬ್ಬಿರುವ ಕರ್ನಾಟಕವು ಒಂದೆಂಬುದಕ್ಕೆ ಒಂದು ನಿದರ್ಶನವು ಹಾಡುಗಳಲ್ಲಿದೆ. ಅಲ್ಪ ಸ್ವಲ್ಪ ಪಾಠಬೇದದಿಂದ ಇವುಗಳಲ್ಲಿ ಅರ್ಧಕರ್ಧ ಹಾಡುಗಳು ಎಲ್ಲ ಕನ್ನಡ

ಮನೆಗಳಲ್ಲಿ ಹರಡಿಕೊಂಡಿರಲು ಸಾಕು. ಜನಪದ ವೇದವೇ ಎಲ್ಲ ಕನ್ನಡಿಗರಿಗೂ ಸಾಮಾನ್ಯವಾದ ತಾಯ ಮೊಲೆಹಾಲು ಎಂಬುದು ಇದನ್ನೋದಿದವರ ಅನುಭವಕ್ಕೆ ಬಾರದೆ ಇರದು. ಅನುಭವದಿಂದ ಉಂಟಾಗುವ ಐಕ್ಯಭಾವವು ಅಂತಿಂತಹದಲ್ಲ. ಪ್ರಜಾಪ್ರಭುತ್ವದ ಕಾಲದಲ್ಲಿ ಜನಸಾಮಾನ್ಯದ ಹೃದಯದೊಳಗಿನ ಸುಖದ ಕಾನಸೆಂತಹದೆಂಬುದನ್ನು ಕಂಡುಕೊಳ್ಳಲು ಇದರಂತಹ ಬೇರೆ ಕೈಗನ್ನಡಿಯಿಲ್ಲ. ಅದರಲ್ಲಿಯೂ ಸ್ತ್ರೀದಾಕ್ಷಿಣ್ಯವುಳ್ಳ ಕಾಲದ ಜನರೆಲ್ಲರೂ ಸ್ತ್ರೀಯರ ಪರಂಪರಾಗತ ಸಾಹಿತ್ಯವನ್ನು ಓದಲೇಬೇಕು. ಸ್ತ್ರೀ ಹೃದಯವು ಲಾಸ್ಯವಾಡುತ್ತಿದೆ. ಸಾಹಿತ್ಯ ಸಂಸ್ಕಾರದ ದೃಷ್ಟಿಯಿಂದಲೂ ಮಹತ್ವವಿದೆ.” (1931:18)

ಸಂಕಲನಕ್ಕೆ ಅರಿಕೆ ಬರೆಯುತ್ತಾ ಸಿಂಪಿಲಿಂಗಣ್ಣನವರು ಹೀಗೆ ಹೇಳುತ್ತಾರೆ. "ಗರತಿಯ ಹಾಡು ನಮ್ಮ ಸ್ತ್ರೀ ಜೀವನದ ಒಳಗನ್ನಡಿ; ಅದು ನಮ್ಮ ಹೆಣ್ಣು ಮಕ್ಕಳ ಹೃದಯದ ಪಡಿಗನ್ನಡಿ. ಅದರಲ್ಲಿ ಮಮತೆಯ ಮಾಧುರ್ಯವು ಮೈವತ್ತಿದೆ. ಪ್ರೇಮದ ಸತ್ವವು ಅಳವಟ್ಟಿದೆ. ಅದರಲ್ಲಿ ಹೆಣ್ಣಿನ ತ್ಯಾಗಬುದ್ಧಿಯು ತುಳುಕುತ್ತಿದೆ. ಕೌಟುಂಬಿಕ ಬಾಳಿನ ರಸವು ಪರಿಪಾಕಗೊಂಡಿದೆ. ಅದು ಜೀವನದ ಜೀವಾಳವಾಗಿದೆ. ಸುಖದ ಸೆಲೆಯಾಗಿದೆ. ಅದು ನಮ್ಮಿಂದ ದೂರವಾದಂತೆ ಬಾಳು ಕಿಚ್ಚಿನ ಕುಂಡವಾಗುತ್ತದೆ. ಗರತಿ ತ್ಯಾಗದ ಪುತ್ಥಳಿ. ತನ್ನವರೆಂದರೆ ಆಕೆಗೆ ಮಮತೆಯ ಚಿನ್ನ. ಪತಿಗೆ ಅರ್ಧಾಂಗಿಯಾಗಿ ಕೂಡುವಳು. ಮಕ್ಕಳಿಗೆ ರಕ್ತ–ರಸಗಳನ್ನು ದಾನವಾಗಿ ಕೊಡುವಳು. ಹುಟ್ಟಿದ ಮನೆಗೆ ಎರವಾಗಿ, ಕೊಟ್ಟ ಮನೆಗೆ ಹೆಸರಾಗುವಳು. “ತಾವರಿಯ ಗಿಡ ಹುಟ್ಟಿ ದೇವರಿಗೆ ನೆರಳಾದಿ । ನಾ ಹುಟ್ಟಿ ಮನೆಗೆ ಎರವಾದೆ । ಹಡದವ್ವ । ನೀ ಕೊಟ್ಟ ಮನೆಗೆ ಹೆಸರಾದೆ ॥” (1931: 49)

“ಆಕೆ ಆಡಿ ಬಂದ ಕಂದನ ಅಂಗಾಲು ತೊಳೆಯುವಳು. ತೆಂಗಿನ ನಾರಿನಿಂದ ಮಗುವಿನ ಬಂಗಾರಿ ಮಾರಿಯನ್ನು ತೊಳೆಯ ಬಲ್ಲಳು. ತವರವರು ತನ್ನನ್ನು ಸರ ಮುತ್ತು ಮಾಡಿ ಸಲಹಿದರೂ, ಅತ್ತೆಯ ಮನೆಯಲ್ಲಿ ಅರವತ್ತು ಗಂಗಾಳಗಳನ್ನು ಬೆಳಗಲಿಕ್ಕೆ ಬೇಸರಿಯವಳು. ಭಾವಯ್ಯ ಮುನಿದರೆ ಬಲಗಾಲ ಹಿಡಿಯಲಿಕ್ಕೂ, ಭಾವಯ್ಯನ ಮಡದಿ ನೆಗೆಣ್ಣಿ ಮುನಿದರೆ ಬಾರಕ್ಕನೆಂದು ಕರೆಯಲಿಕ್ಕೂ ಸಿದ್ಧಳಾಗುವಳು. ಮಾರಾಯರು ಬೈದರೆ ಕಣ್ಣೀರು ಕರೆಯದವಳು. ಮಾರಾಯರ ತಮ್ಮ ಮೈದುನ ಬೈದರೆ ಮಾಡಿಲ್ಲದ ಮಳೆ ಸುರಿದಂತೆ ಅಳುವಳು. ಅತ್ತಿಗೆಯೆಂದರೆ ಆಕೆಯ ಪಾಲಿಗೆ ಹೆತ್ತಾಯಿ. ಬೆಣ್ಣೆಯಲ್ಲಿ ಮುಳ್ಳು ಮುರಿದಂತೆ ಮಾತಾಡಿದರೂ ನೆಗೆಣ್ಣಿಯ ಮಾತು ಕ್ಷಮ್ಯವೇ. ಹೊಟ್ಟೆಯ ಕೂಸು ತೊಡೆಯ ಮೇಲೆ ಮಲಗಿದ್ದರೂ ಬೀಸುವ ಕಾರ್ಯ ನಡೆಸುವ ಬಂಟಳು

ಶ್ರಮದಲ್ಲಿಯೂ ಹಿಗ್ಗು ಸೂಸುವಳು. ಹಾಡುತ್ತಲೇ ದುಡಿಯುವಳು. ಆಸರಿಕೆ ಅಳೆದಿಟ್ಟವಳು. ಬೇಸರಿಕೆ ಬರೆದಿಟ್ಟವಳು. ಆಕೆಯ ತ್ಯಾಗಕ್ಕೆ ಇದಕ್ಕಿಂತಲೂ ಹೆಚ್ಚಿನ ಉದಾಹರಣೆಗಳು ಇನ್ನೇನು ಬೇಕು?" (1931:23)

ಆಕೆ ಪ್ರೇಮದ ಕಣಿ, ಕೂಲಿ ಮಾಡಿದರೂ, ಕೋರಿಹೊತ್ತರೂ ಗರತಿಗೆ ಆಕೆಯ **ಪತಿಯು ಸರದಾರನೇ,** ಅರಸನೇ, ಮಾರಾಯರೇ ಒರಗೆಯ ಪತಿಪುರುಷನು ಹಣಚಿ ಬಟ್ಟಿನ ಮೇಲೆ ಹರಿದಾಡುವ ಕುಂಕುಮವಿದ್ದ ಹಾಗೆ, ಅವನಿಂದ ಆಕೆ ತವರು ಮರೆಯುವಳು. ಆತನು ಸರದೊಳಗೆ ಇರುವ ಗುಳದಾಳಿಯಂತೆ ಸರ್ವ ಬಳಗದಲ್ಲಿ ಶ್ರೇಷ್ಟನು. ಅವನಿಂದ ಸರ್ವ ಬಳಗವನ್ನು ಮರೆಯುವಳು. ಆತನ ನಗೆ ಹಚ್ಚಡದ ಪದರದೊಳಗಿನ ಅಚ್ಚಮಲ್ಲಿಗೆ ಹೂವಿದ್ದಂತೆ. ಪತಿಯ ರೂಪು ಕಮಲದ ಹೂ, ಆತನ ಸಹವಾಸ ಮಲ್ಲಿಗೆಯ ಮಾಯೆ. ಬೆಂದಿರುಹಿ ಸಾಗಿದ ರಾಯರ ಕಾಲಹಿಮ್ಮಡಿ ಕಾಣಿಸಿದರೂ ಅದು ಕುಲವೇ, ಚಂದರನಿಗಿಂತ ಬಲು ಚೆಲುವಾಗಿರುವುದು, ಅರಸರ ದಯದಿಂದ ದೊರಕೊಂಡ ಅರಿಸಿಣ, ಕುಂಕುಮ, ಗೋದಮಲ್ಲಿಗೆಯ ನನದಂಡೆ ಇವೇ ಆಕೆಯ ಸಕಲೈಶ್ವರ್ಯ ಪತಿಯು ಇನ್ನೊಬ್ಬಳನ್ನು ಲಗ್ನವಾಗುವ ಸಂದರ್ಭವು ಕಾಣಿಸಿಕೊಂಡಾಗ, ಮಕ್ಕಳಾಗಲಿಲ್ಲವೆಂದು ಬೇರೊಂದು ಲಗ್ನವೇ?–ನಾನು ಚೆಲುವೆಯಲ್ಲವೆಂದು ಇನ್ನೊಬ್ಬಳೊಡನೆ ವಿವಾಹವೇ? ಎಮ್ದು ಶಂಕಿತಳಾಗಿ ಪತಿದೇವನಲ್ಲಿ ಹೊಟ್ಟೆ ಹೊಕ್ಕು ಹೇಳಿಕೊಳ್ಳುವ ಆಕೆಯ ಮಾತು ಹೊಟ್ಟೆಯೊಳಗಿನ ಹರಳು ಕರಗಿಸುವಂಥದು. ಹಾಗೆ ಮಾತಾಡುವದಕ್ಕೆ ಹಿನ್ನೆಲೆ ಯಾವುದೆಂದರೆ, ಅಲ್ಲಿ ಹೃದಯದ ಮಾತು ಹೃದಯಕ್ಕೆ ಅರ್ಥವಾಗುವುದು.

ರಾಯ ಬರತಾರಂತ ರಾತ್ರೀಲಿ ನೀರಿಟ್ಟ । ರನ್ನ ಬಚ್ಚಲಕ ಮಣಿಹಾಕಿ । ಕೇಳೇನ । ಸಣ್ಣವಳ ಮ್ಯಾಲ ಸವತ್ಯಾಕ ॥ ಅಂಗಿಯ ಮ್ಯಾಲಂಗಿ ಛಂದೋನೊ ನನ ರಾಯ । ರಂಬಿ ಮ್ಯಾಲ ರಂಬಿ ಪ್ರತಿರಂಬಿ । ಬಂದರ । ಛಂದೋನೊ ರಾಯ ಮನಿಯಾಗ ॥ ಪುನರ್ವಿವಾಹಕ್ಕೆ ಇರಬಹುದಾದ ಎರಡು ಕಾರಣಗಳಿಗೂ ಸಮಾಧಾನ ಹೇಳುವಳು. ಮಕ್ಕಳಾಗಲಿಲ್ಲವೆ? ಹಾಗಾದರೆ ನಾನಿನ್ನೂ ಸಣ್ಣವಳು, ಅವಕಾಶ ಮೀರಿಲ್ಲ. ತಾನು ಕುರೂಪಿಯೇ, ಅಲ್ಲ, ರಂಭೆಯ ಮೇಲೆ ಪ್ರತಿರಂಭೆ ಬರುವುದು ಛಂದವಲ್ಲ, ಇಷ್ಟಾಗಿಯೂ ಬೇರೊಬ್ಬ ಸ್ತ್ರೀಯಳ ಅವಶ್ಯಕತೆಯಿದ್ದರೆ ಅದಕ್ಕೆ ತನ್ನ ಒಪ್ಪಿಗೆಯಿರುವುದನ್ನು ಸೂಚಿಸುವಳು.

ಗಂಡ ಪಂಡಿತ ರಾಯ ರಂಡೀಯ ಮಾಡಿದರ । ಭಂಡ ಮಾಡುವವರ ಮಗಳಲ್ಲ । ಕೊರಳಾನ । ಗುಂಡು ಬೇಡಿದರ ಕೊಡುವೇನ ॥ ಸತಿಯ ಔದಾರ್ಯವನ್ನು ದುರುಪಯೋಗಪಡಿಸಿಕೊಂಡ ಪತಿಯು ಅಡ್ಡಹಾದಿ ಹಿಡಿದುದನ್ನು ಯಾರಾದರೂ ಹಿತಚಿಂತಕರು ಆಕೆಯ ಕಿವಿಗೆ ಸುದ್ದಿ ತಗುಲಿಸುವರು. ಆಗ ಸಹ ಆ ಬಾಲೆ ಸೈಗೆಡಲಾರಳು.

ಚಿಂತಾಕು ಇಟಗೊಂಡು ಚಿಪ್ಪಾಟೆ ಬಳವಾಕೆ । ಚಿಂತಿಲ್ಲವೇನ ನಿನಗಿಷ್ಟು । ನಿಮರಾಯ । ಅಲ್ಲೊಬ್ಬಳ ಕೂಡ ನಗತಾನೆ ॥ ಎಂಬ ಮಾತಿಗೆ ಮರು ನುಡಿಯುವುದೇನೆಂದರೆ–

ನಕ್ಕರ ನಗಲೆವ್ವ ನಗೆಮುಖದ ಕಾದಿಗೆ । ನಾ ಮುಚ್ಚಿ ಮುಡಿವ ಪರಿಮಳ । ದಾ ಹೂವ । ಅವಳೊಂದು ಬಾರಿ ಮುಡಿಯಲಿ ॥ ಅತಿಶಯದ ಸಹನೆಯು ಒಮ್ಮೊಮ್ಮೆ ಹೇಡಿತನಕ್ಕಿಳಿಯಬಲ್ಲದು, ಹೇಸಿತನಕ್ಕೆಳಸಬಹುದು. ಆದರೆ ಗರತಿ ಹೊತ್ತು ನೋಡಿ, ಸಹನೆ ಮೀರಿದ ಚಂಡಿಯೂ ಆಗಿ ನಿಲ್ಲುವಳು. ಆಗ ಆಕೆಗೆ ಯಾರು ?

ಪರಿಮಳದರಸರು ಪರನಾರಿಗೋದರ । ಮನಿಮಡದಿ ಬಾಯಿ ಬಿಡಬ್ಯಾಡ । ತಾವ್ತಮ್ಮ । ಮನಹೇಸಿ ಮನೆಗೆ ಬರತಾರ ॥ ಎಂದು ಸಂತವಿಸಿಕೊಳ್ಳುವ ಹೆಣ್ಣೇ ಹಿಂದುಗಡೆಯಲ್ಲಿ–

ಹೆರವರೆಣ್ಣಿಗಾಗಿ ಹೊರಗ ಮಲಗುವ ಜಾಣ । ಗಿಡದ ಮ್ಯಾಲೆರಡು ಗಿಣಿಕೂತು । ನುಡಿದಾವ। ವರವನ್ನೊ ರಾಯ ನಿನ ಜೀವ ॥ ಎಂದು ಕಿಡಿಕಾರುವ ಕಿಂಕಾಳಿಯಾಗಿ ನಿಲ್ಲುವಳು.

ಗರತಿ ಹಚ್ಚಿಕೊಂಡವರಿಗೆ ಚೊಚ್ಚಿಲ ಮಗಳಾಗುವಳಾದರೂ ಬಿಟ್ಟಾಡಿಕೊಳ್ಳುವ ವೈರಿಯ ಮನೆಯ ಮುಂದೆ ಬಿಚ್ಚುಗತ್ತಿಯಾಗಿ ಹೊಳೆಯುವಳೆಂಬುದನ್ನು ಲಕ್ಷಿಸತಕ್ಕದ್ದಾಗಿದೆ.

ಆರ್‍ಯಾಣದಡವ್ಯಾಗ ಯಾರಾಣಿ ಕೊಡಲೆವ್ವ । ಸೂರ್‍ಯಾ ನಿನ್ನಾಣಿ ಶಿವನಾಣಿ । ಕೊಟ್ಟೀನ । ಆರಾಣ್ಯ ಗೆದ್ದು ಬರುವೇನ ॥ ಎಂಬುದೇ ಆಕೆಯ ಹೂಣಿಕೆ; ಅದೇ ರಭಸವೇ ಜೀವನ ಸಂಗ್ರಾಮದಲ್ಲಿ ಹೋರಾಡುವುದಕ್ಕೆ ಆಕೆಗೆ ಬಲವನ್ನು ನೀಡುವದು. ಅಂಥ ಗರತಿಯರ ಸಂತಾನವೇ ರಾಜ್ಯ ಕಟ್ಟಿ ಆಳಿತು, ಜ್ಞಾನಸಿದ್ಧಿಯನ್ನು ಪಡೆಯಿತು. ಅಷ್ಟೈಶ್ವರ್ಯಗಳನ್ನು ಪ್ರಪಂಚಕ್ಕೆ ನೀಡಿತು. ಆ ಕಥೆಗೆ ಕಾರಣಳಾದ ಗರತಿಯ ಅಂತರಂಗದ ಚಿತ್ರವೇ ಗರತಿಯ ಹಾಡಿನಲ್ಲೆಲ್ಲ ಚಿತ್ರಿತವಾಗಿದೆ.” (1931: 23–26)

“ಗರತಿಯ ಬಾಳಿನ ಪ್ರತಿಬಿಂಬವಾಗಿ ಗರತಿಯ ಹಾಡು ಅಂದು ಕಾಣಿಸಿಕೊಂಡರೆ, ಇಂದು ಗರತಿಯ ಹಾಡಿನ ಪ್ರತಿಭೆಯಲ್ಲಿ ಗರತಿಯ ಬಾಳು ಪಡಿಮೂಡಬೇಕಾಗಿದೆ” (1931–29), "ಶ್ರೀಯವರೂ ಮಾಸ್ತಿಯವರು ತಮ್ಮ ಮೆಚ್ಚಿಕೆಯ ಮಾತುಗಳಲ್ಲಿ ಸಂಕಲನವನ್ನು ಮನಸಾರೆ ಕೊಂಡಾಡಿದ್ದಾರೆ. ಕನ್ನಡದ ಪ್ರಥಮ ಸಂಕಲನವಾದ ಗರತಿಯ ಹಾಡು ಗೃಹಿಣೀ ಗೀತ ಮಾತ್ರ. ಅದರಲ್ಲೂ ಬೀಸುವಾಗ ತೂಗುವಾಗ ಹಾಡಿಕೊಳ್ಳುವ ಸಾಹಿತ್ಯ ಎಂದು ಹೇಳಿಕೊಂಡಿದ್ದಾರೆ.” (ದಕ್ಷಿಣ ಕರ್ನಾಟಕದ ಕಾವ್ಯ ಪ್ರಕರಗಳು 1979:42)

ಬಿ.ಎಂ. ಶ್ರೀಕಂಠಯ್ಯ, ದ.ರಾ. ಬೇಂದ್ರೆ, ಮಾಸ್ತಿ ಹಾಗೂ ಸಿಂಪಿಲಿಂಗಣ್ಣನವರಿಂದ ಉದಾರವಾಗಿ ಹೊಗಳಿಸಿಕೊಂಡ ಕೃತಿಯಲ್ಲಿ ಒಟ್ಟು 800 ತ್ರಿಪದಿಗಳಿವೆ. ಎಂಟುನೂರು ತ್ರಿಪದಿಗಳನ್ನು ಸಂಗ್ರಹಕರು 23 ಬಗೆಯಲ್ಲಿ ವಿಂಗಡಿಸಿಕೊಂಡಿದ್ದಾರೆ. ಅವುಗಳೆಂದರೆ ಪರಂಪರೆ, ಸ್ತುತಿ, ತವರು, ಮನೆ–ತಾಯತಂದೆ, ಅಣ್ಣ–ಅಕ್ಕತಂಗಿ–ಅತ್ತಿಗೆ ನಾದಿನಿಯರು, ಗೆಳತಿ, ಅತ್ತೆಯ ಮನೆಯಕಷ್ಟ ಮನಸ್ತಾಪ, ಸತಿಪತಿ, ಬಸುರೆ–ಬಾಣಂತಿ, ಲಾಲಿ, ಮಗ–ಮಗಳು–ಸೊಸೆ, ಹರಕೆ, ಬಂಜೆ, ವೈಧವ್ಯ, ಹಾಸ್ಯ, ಪೌರಾಣಿಕ, ಐತಿಹಾಸಿಕ, ವರ್ಣನೆ, ಸಂವಾದ, ಪ್ರಾರ್ಥನೆ, ಪರ್ಯಾಯ ನೀತಿ, ಸ್ಪಷ್ಟ ನೀತಿ, ಕೊನೆ ಕೃತಿಯ ಕೊನೆಯಲ್ಲಿ ಬಳಕೆಯ ಮಾತಿನ ಪದ ಪ್ರಯೋಗಗಳು, ಹಾಗೂ ಶಬ್ದಕೋಶವನ್ನು ನೀಡಲಾಗಿದೆ.

ಕೃತಿಯ ಕೇಂದ್ರಬಿಂದುವಾಗಿ **ಗರತಿ** ಇರುತ್ತಾಳೆ. ಆಕೆಯೊಂದಿಗೆ ಕುಟುಂಬದ ಬಂಧುತ್ವದ ಸಂಬಂಧವಿದೆ. ಗರತಿಯು ಕುಟುಂಬದಲ್ಲಿ ಪವಿತ್ರ ಸ್ಥಾನವನ್ನು ಹೊಂದಿರುತ್ತಾಳೆ. ಗರತಿಯ ಬದುಕು ಎರಡು ಕುಟುಂಬಗಳ ನಡುವಿನ ಅಂತರದಲ್ಲಿ ಹೆಣೆದು ಕೊಂಡಿರುತ್ತದೆ. ಆಕೆಗೆ ತವರೂರು ಹಾಗೂ ಅತ್ತೆ ಮನೆ ಎರಡೂ ಮುಖ್ಯವಾಗಿರುತ್ತದೆ. ಆಕೆಯ ತವರು ಮನೆಯಲ್ಲಿ ತಾಯ್ತಂದೆ, ಅಣ್ಣ, ತಮ್ಮ, ಅಕ್ಕ, ತಂಗಿ, ಅತ್ತಿಗೆ, ನಾದಿನಿ, ಮೊದಲಾದವರು ಪ್ರೀತಿ ಪಾತ್ರರಾಗಿರುತ್ತಾರೆ. ಅವರೆಲ್ಲರೂ ಆಕೆಯ ಕಷ್ಟಗಳಲ್ಲಿ ಭಾಗಿಗಳು. ಗರತಿಗೆ ತನ್ನ ತವರೂರು ಆಗಾಗ ನೆನಪಾಗದಿಲ್ಲ.

"ಹೆಣ್ಣುಮಕ್ಕಳ ದುಃಖ ಹೆತ್ತವ್ವ ಬಲ್ಲಳು । ಹುತ್ತದ ಒಳಗಿರೋ ಸರಪಽನ । ಬೇಗೆಯ । ನೆತ್ತೀ ಮೇಲಿರುವ ಶಿವ ಬಲ್ಲ ॥" (1979: 55) "ನನ್ನ ತವರವರು ಕನಕ ಮುತ್ತಿನೋರು । ಕಣಕದಿವರು ಧನಿಕರು । ಅಣ್ಣಯ್ಗೋಳು । ಅಣಕದಿಂದಾವಲೆ ಬರೆದಾರು॥"(1979:56)

ಗರತಿಗೆ ತವರುಮನೆಯಷ್ಟೇ ಶ್ರೇಷ್ಟವಾಗಿರುವುದು ಅತ್ತೆ ಮನೆ. ಅತ್ತೆ ಮನೆಯ ಕಷ್ಟ ಸುಖ. ಮಕ್ಕಳ ಲಾಲನೆ–ಪಾಲನೆ–ಪೋಷಣೆ, ಮಗ–ಮಗಳು–ಸೊಸೆಯು ಭವಿಷ್ಯದ ಬಗೆಗೆ ಜಾಗೃತೆ ಗರತಿಯ ಬದುಕಿನ ಗುರಿಯಾಗಿರುತ್ತದೆ. ಕುಟುಂಬದಲ್ಲಿ ಗರತಿಯ ಪಾತ್ರ ಮಗಳಾಗಿ, ಸೊಸೆಯಾಗಿ, ತಾಯಿಯಾಗಿ ಹಾಗೂ ಅಜ್ಜಿಯಾಗಿ ರೂಪುಗೊಂಡಿರುತ್ತದೆ. ಗರತಿಯ ಬಾಳಲ್ಲಿ ಬಂಜೆತನ, ವೈಧವ್ಯತನ ತಂದರೆ ಆಕೆಯನ್ನು ಸಮಾಜ ಗುರುತಿಸುವುದು. ಪರಕೀಯಳೆಂಬ ಅರ್ಥದಲ್ಲಿ ಮಕ್ಕಳಿರದಿದ್ದರೆ,

"ಬಾಲರಿಲ್ಲದ ಬಾಳ್ವಿ ಬಾಳೆಯಿಲ್ಲದ ತೋಟ । ಗಂಧ ಕಸ್ತೂರಿ ಪರಿಮಳ । ಒಳಗಿದ್ದು । ರಂಭೆ ನೀ ಬಾಳೆ ಫಲವಿಲ್ಲ ॥" (1979:107) ಎಂದು ಹೇಳುತ್ತಾರೆ.

ಗರತಿಗೆ ವೈಧವ್ಯ ಬಂದರೆ, "ಗಂಡನಿಲ್ಲದ ಬಾಲಿ ದಂಡನಾಳಿದರೇನ । ಪುಂಡೀಯ ಹೂವು ಹೊಲತುಂಬ । ಅರಳಿದರ । ಚಂಡು ಹೂವಿನ ಹೊಲವ ॥" (1979:108) ಎಂದು ಆಕೆಯನ್ನು ನಿಂದಿಸುತ್ತಾರೆ.

ಹೀಗೆ ಸಮಾಜವೊಂದರಲ್ಲಿ ಹೆಣ್ಣಿನ ಬದುಕು ಗರತಿಯಾಗಿ ಜನರ ಕೃಪೆಗೆ ಒಳಗಾಗಿರುತ್ತದೆ. ಆಕೆಯ ಕುಟುಂಬದಲ್ಲಿ ಆಗುವ ಏರುಪೇರುಗಳನ್ನು ಘಟನೆಗಳನ್ನು ಸ್ವೀಕರಿಸಿವುದು ಅವಳ ಕರ್ತವ್ಯವಾಗಿರುತ್ತದೆ.

ಸಂಕಲನದ ಭಾಷೆ ಸರಳವಾಗಿದ್ದು, ಹಾಡುಗಳೆಲ್ಲವೂ ತ್ರಿಪದಿ ಛಂದಸ್ಸಿನಲ್ಲಿ ರಚನೆಯಾಗಿವೆ. ಸಂಕಲನದ ಹಾಡುಗಳೆಲ್ಲವೂ ಒಂದು ನಿರ್ದಿಷ್ಟ ಚೌಕಟ್ಟಿನೊಳಗಡೆ ಸಂಗ್ರಹಗೊಂಡಂತೆ ತೋರುತ್ತದೆ. ಗರತಿಯ ಬಗ್ಗೆ ಇರುವ ಎಲ್ಲಾ ಬಗೆಯ ಅರ್ಥವನ್ನು ಹೊಂದಿರುವ ಸಂಗ್ರಹವಾಗಿಲ್ಲವೆಂಬ ಅನುಮಾನವಿದೆ. ಗರತಿಯನ್ನು ಉದಾರವಾಗಿ ನೋಡಿರುವುದಂತೂ ಸ್ಪಷ್ಟ. ಆಕೆಯ ತವರು, ಕುಟುಂಬ, ಬಂಧುಗಳ ಬಗೆಗೆ ಹೆಚ್ಚು ಒತ್ತುಕೊಟ್ಟು ಸಂಗ್ರಹಿಸಿರುವುದಂತೂ ಹಾಡುಗಳಲ್ಲಿ ತಾನೇ ಸ್ಪಷ್ಟವಾಗಿದೆ. ಗರತಿಯ ಬಗೆಗೆ ಇರುವ ಉದಾರವಾದೀ ನೆಲೆಯ ಹಾಡುಗಳಿಗೆ ಮಾತ್ರ ಅವಕಾಶ ಸಂದಿದೆ. ಸ್ವಾತಂತ್ರ್ಯಪೂರ್ವ ಜನಪದಗೀತ ಸಂಗ್ರಹಗಳಲ್ಲಿ ಇಂಥ ಧೋರಣೆಯೇ ಏಕೆ ಕಾಣಿಸಿಕೊಂಡಿದೆ ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

1933ರಲ್ಲಿ **ವಿಠೋಭ ವೆಂಕನಾಯಕ ತೊರ್ಕೆ**ಯವರು ಸಂಗ್ರಹಿಸಿದ **'ಹಳ್ಳಿಯ ಹಾಡುಗಳು'** ತ್ರಿಪದಿ ಸಂಕಲನವು ಉತ್ತರಕನ್ನಡ ಜಿಲ್ಲೆಯ ತೊರ್ಕೆ ಎಂಬಲ್ಲಿ ಪ್ರಕಟವಾಯಿತು. 38 ಪುಟಗಳಲ್ಲಿ ಸಂಕಲನದಲ್ಲಿ 150 ತ್ರಿಪದಿ ಪದ್ಯಗಳಿವೆ. ತೊರ್ಕೆಯ ಕನ್ನಡ ಶಾಲಾ ಉಪಶಿಕ್ಷಕರಾಗಿದ್ದ ವಿ.ವೆ.ತೊರ್ಕೆಯವರಿಗೆ ಕನ್ನಡತಾಯಿಯ ಸೇವೆ ಮಾಡುವುದು ಬಹು ಹಿಗ್ಗಿನ ಕೆಲಸವಾಗಿತ್ತು. ಸಂಗ್ರಹಕ್ಕೂ ಮೊದಲು ಇವರ ಕವಿತಾಕಲಾಪವೆಂಬ ಒಂದು ಚಿಕ್ಕ ಪದ್ಯಾವಳಿ ಕೃತಿಯು ಪ್ರಕಟವಾಗಿದೆ. ವಿ.ವೆ. ತೊರ್ಕೆಯವರು ಸಂಕಲನದ ಮುನ್ನುಡಿಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ. "ಬಳ್ಳಿಗಳಲ್ಲಿರುವ ಕಂಪಿಡಿದ ಒಳ್ಳರಲುಗಳನ್ನು ತಿರಿದು ತಂದು ದಂಡೆಗಟ್ಟುವಂತೆ ಹಳ್ಳಿಯ ಕನ್ನಡಮ್ಮನ ನುಡಿಗಳನ್ನು ಆರಿಸಿ ಹೆಣೆದು ಅಚ್ಚು ಮೆಚ್ಚಾಗಿ ಹಾಡುತ್ತಿರುವುದನ್ನು ಆಲಿಸಿದೆ. ಹಾಡುಗಳನ್ನು ಕೂಡಿಸಿ ಕನ್ನಡಿಗರ ಮುಂದಿಡುವುದಕ್ಕೆ ಹವಣಿಸಿದೆ. ನನ್ನ ಬಗೆಯ ಬಯಕೆಯೇ ಇದು. ನನ್ನ ಹಳ್ಳಿಯ ಅಕ್ಕ ತಂಗಿಯರು ಹಾಡುವ ಹಾಡುಗಳಲ್ಲಿಯೂ ಕೆಲವು ತೊಡಕಿನ ನುಡಿಗಳನ್ನು ಬದಿಗಿರಿಸಿ ಹೊತ್ತಿಗೆಯಲ್ಲಿರುವ ರೂಪಕ್ಕೆ ತಂದು ಕನ್ನಡಮ್ಮಗೆ ಅರ್ಪಿಸಿದ್ದೇನೆ." (1933: ಮುನ್ನುಡಿ)

ಸಂಕಲನದಲ್ಲಿರುವ 150 ತ್ರಿಪದಿಗಳೂ ಸಹ ಬಿಡಿಬಿಡಿಯಾಗಿದ್ದು ಸ್ವತಂತ್ರವಾಗಿವೆ. ಅನೇಕ ಹಾಡುಗಳು ಮಹಾಭಾರತದ ಉಲ್ಲೇಖವನ್ನು ಒಳಗೊಂಡಿದೆ. ಗರತಿಯ ಹಾಡು ಸಂಕಲನದಂತೆಯೇ ಇಲ್ಲೂ ಬಂಧುತ್ವದ ಸಂಬಂಧವನ್ನು ಹೇಳುವ ಹಾಡುಗಳಿವೆ. ತವರುಮನೆ ಹಾಗೂ ಅತ್ತೆಮನೆಯಲ್ಲಿ ಹೆಣ್ಣೊಬ್ಬಳು ಹೊಂದಿರುವ ಸ್ಥಾನವನ್ನು ಇಲ್ಲಿಯ ಹಾಡುಗಳಲ್ಲಿ ಕಂಡುಕೊಳ್ಳಬಹುದು. ಅನೇಕ ಹಾಡುಗಳು ಗರತಿಯ ಬದುಕಿನ ಬಗೆಗೆ ಭಿನ್ನವಾದ ಧೋರಣೆಯನ್ನು ಪ್ರಕಟಿಸುತ್ತವೆ.

ಸಂಗ್ರಹಕಾರರ ಅಭಿಪ್ರಾಯದ ಪ್ರಕಾರ, ಹಲವು ಹಾಡುಗಳನ್ನು ಸಂಗ್ರಾಹಕರು ಪರಿಷ್ಕರಿಸಿಕೊಂಡಿದ್ದಾರೆ. ಪರಿಷ್ಕರಣ ಕೆಲಸವು ತ್ರಿಪದಿಗಳನ್ನು ಹೆಚ್ಚು ಉದಾತ್ತಗೊಳಿಸಿದೆ.

1933ರಲ್ಲಿ ಹೇಮಗಿರಿಯ **ಅರ್ಚಕ ಬಿ. ರಂಗಸ್ವಾಮಿ 'ಹುಟ್ಟಿದ ಹಳ್ಳಿ: ಹಳ್ಳಿಯ ಹಾಡುಗಳು'** ಕೃತಿಯನ್ನು ಪ್ರಕಟಿಸಿದರು. ಜಾನಪದದ ಸಮಗ್ರದೃಷ್ಟಿಗೆ ಅಳವಡುವ ಬಹುಪಾಲು ವಿಷಯಗಳನ್ನು ಕೃತಿಯಲ್ಲಿ ಕಾಣಬಹುದು. ರಂಗಸ್ವಾಮಿಯವರು ತಮ್ಮ ಹುಟ್ಟೂರನ್ನು ಪರಿಚಯ ಮಾಡಿಕೊಳ್ಳುವುದರ ಜೊತೆಗೆ ಅಲ್ಲಿನ ಆಚಾರ-ವಿಚಾರ ಸಂಪ್ರದಾಯ, ಹಬ್ಬ, ನಂಬಿಕೆ, ಆಡನುಡಿ ಮುಂತಾದ ವಿಷಯಗಳನ್ನೂ ಗೀತೆ, ಲಾವಣಿ, ಗಾದೆ ಮುಂತಾದ ಜಾನಪದ ಪ್ರಕಾರಗಳ ಸಾಹಿತ್ಯವನ್ನು ತಮ್ಮ ಗ್ರಾಮದ ಬದುಕನ್ನು ವಿವರಿಸುವಾಗ ಸಾಂದರ್ಭಿಕವಾಗಿ ಹಾಡುಗಳ ಹಾಗೂ ಗಾದೆಗಳ ಸಂಗ್ರಹಗಳನ್ನು ನೀಡಿದ್ದಾರೆ. ಕರ್ನಾಟಕದ ಇತರ ಸಂಗ್ರಹಕಾರರು ಗೀತಸಾಹಿತ್ಯದತ್ತಲೇ ದೃಷ್ಟಿ ಹರಿಸಿರುವಾಗ ರಂಗಸ್ವಾಮಿಯವರು ಸಮಗ್ರ ಜನಜೀವನವನ್ನೇ ಅಭ್ಯಸಿಸಿರುವುದು ಕೃತಿಯ ಮಹತ್ವದ ಭಾಗ. ಮಂಡ್ಯ ಜಿಲ್ಲೆಯಲ್ಲಿನ ಕೃಷ್ಣರಾಜಪೇಟೆಯ ಬಂಡೀಹೊಳೆಯ 120 ಸಂಪ್ರದಾಯಗಳನ್ನು ಕೃತಿ ಪರಿಚಯಿಸುತ್ತದೆ. ಕರ್ನಾಟಕದ ಯಾವ ಗ್ರಾಮದ ಸಂಸ್ಕೃತಿಗೆ ಬೇಕಾದರೂ ಅನ್ವಯಿಸಿಕೊಳ್ಳುವಷ್ಟು ವಿಷಯಗಳು ಸಂಕಲನಗೊಂಡ ಕನ್ನಡ ಜಾನಪದ ಇತಿಹಾಸ ಒಂದು ಮಹತ್ವದ ಕೃತಿ. ನವೋದಯ ಕಾಲದ ಜಾನಪದ ಸಂಗ್ರಾಹಕರಲ್ಲಿ ಗಮನಾರ್ಹವಾದ ಸೇವೆ ಸಲ್ಲಿಸಿದರಲ್ಲಿ ರಂಗಸ್ವಾಮಿಯವರೂ ಒಬ್ಬರು. ವಿಶ್ವಕರ್ನಾಟಕ ಪತ್ರಿಕೆಯಲ್ಲಿ 'ಪಾಮರ ಸಾಹಿತ್ಯವನ್ನು ಉದಾಸೀನ ಮಾಡಬೇಡಿ' ಎಂಬ ಲೇಖನದಿಂದ ಪ್ರಭಾವಿತರಾಗಿ, ಜನಪದ ಪ್ರಪಂಚಕ್ಕಿಳಿದು ಪಾಮರರ ಸ್ವತ್ತನ್ನು ಪರಿಚಯ ಮಾಡಿಕೊಳ್ಳುವ ಸಾಹಸ ಮಾಡಿದರು. ತಮ್ಮ ಹಳ್ಳಿಯನ್ನೇ ಸಂಗ್ರಹದ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು ಹಳ್ಳಿ ಸಮಾಜದ ನಡೆನುಡಿ, ಆಚಾರ ವಿಚಾರ, ಹಬ್ಬ ಹುಣ್ಣಿಮೆಗಳು, ಕಲೆ, ಸಾಹಿತ್ಯ, ಬಡತನ, ಸಿರಿತನ, ಗ್ರಾಮ್ಯಭಾಷೆಯ ವೈಖರಿ, ಸಂಸ್ಕೃತಿಯ ನೈಜತೆ, ಜೀವನಕ್ರಮ, ಪೌರಾಣಿಕ-ಐತಿಹಾಸಿಕ-ಸಾಮಾಜಿಕ ವಿಷಯಗಳು, ಜನಪದ ನಂಬಿಕೆ, ಗೀತೆ, ಗಾದೆ, ಕಥೆ, ನುಡಿಗಟ್ಟು ಇತ್ಯಾದಿ ಬಂಡೀಹೊಳೆಗ್ರಾಮಕ್ಕೆ ಸಂಬಂಧಿಸಿದಂತೆ

ಒಂದು ವಿಶ್ವಕೋಶವನ್ನೇ ರಚಿಸಿದರು. ಪ್ರತಿಯೊಬ್ಬ ಜನಪದ ಸಾಹಿತ್ಯ ಸಂಗ್ರಾಹಕನಿಗೂ ಮೇಲ್ಪಂಕ್ತಿಯಾಗುವ ಕೃತಿ ಗ್ರಾಮಜೀವನದ ಸಮಗ್ರ ಚಿತ್ರಣವನ್ನು ಒದಗಿಸುತ್ತದೆ. ಊರಿನ ದಕ್ಷಿಣದ ಏಳೂರಮ್ಮನ ತೋಪು, ಏಳೂರ ಸಿಡಿಗಳು ಅಲ್ಲಿಗೆ ಬರುತ್ತಿದ್ದ ಬಗೆ, ಸುಗ್ಗಿಯ ಕುಣಿತ ಮುಂತಾದುವನ್ನು ಸುಂದರವಾಗಿ ಚಿತ್ರಿಸಲಾಗಿದೆ. ಹಾಗೂ ಇಂದು ಪ್ರಸಿದ್ಧವಾಗಿರುವ ಅನೇಕ ಜನಪದ ಗೀತೆಗಳು ಸಂಕಲನದಲ್ಲಿ ದೊರೆಯುತ್ತವೆ. ಗ್ರಾಮಾಂತರ ಸಂಸ್ಕೃತಿಯ ನೈಜ ಚಿತ್ರಣವಿದೆ. ಜನಪದ ಗೀತೆ, ಗಾದೆ, ಕತೆಗಳ ಸಂಗ್ರಹಗಳು ಸಾಕಷ್ಟಿದ್ದರೂ ವಕ್ತೃಗಳಾದ ವೃತ್ತಿಗಾಯಕರ ಸಾಹಿತ್ಯವಾಗಲೀ, ಅವರ ವಿವರವಾಗಲೀ ಕೃತಿಯಲ್ಲಿ ಲಭ್ಯವಿಲ್ಲ.

ಒಂದು ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಅಲ್ಲಿನ ಜಾನಪದದ ಎಲ್ಲಾ ವಿವರಗಳನ್ನೂ ಒಟ್ಟಾರೆ ಕಲೆಹಾಕುವ ಕೆಲಸ ಕನ್ನಡದಲ್ಲಿ ನಡೆದದ್ದು ಇದೇ ಮೊದಲು. ಹಾಗೂ ಕನ್ನಡ ಜನಪದ ಸಾಹಿತ್ಯವನ್ನು ಗಮನಿಸಿದರೆ, ಶತಮಾನದ ಮೊದಲ ಆರು ದಶಕಗಳಲ್ಲಿ ನಡೆದಿರುವ ಸಂಗ್ರಹಕಾರ್ಯಗಳೆಲ್ಲವೂ ಜನಪದ ಕಾವ್ಯಕ್ಕೆ ಮಾತ್ರ ಸೀಮಿತವಾದ ನೆಲೆಯಲ್ಲಿ ರಂಗಸ್ವಾಮಿಯವರ ಜಾನಪದ ಸಂಕಲನವು ಮೊದಲ ಕೃತಿಯಾಗಿದೆ.

ತೀ.ನಂ. ಶ್ರೀಕಂಠಯ್ಯನವರು ಹೇಳುವಂತೆ, "ಸಂಕಲನ ಕಾರ್ಯ ಒಂದಕ್ಕಾಗಿಯೇ ಕನ್ನಡಿಗರು ಶ್ರೀಮಾನ್ ರಂಗಸ್ವಾಮಿಯವರಿಗೆ ಕೃತಜ್ಞರಾಗಿರಬೇಕು. ಒಟ್ಟಿನ ಮೇಲೆ ಗ್ರಂಥವು ಹಳ್ಳಿಯ ಬದುಕಿನ 'ವಿಶ್ವಕೋಶ' ಎನ್ನಬಹುದು. ಓದಲು ಮೊದಲು ಮಾಡಿದರೆ ಮುಗಿಸಿ ಕೆಳಗಿಡಬೇಕೆನ್ನುವ ಪುಸ್ತಕದಲ್ಲಿ ನಿಜವಾದ ಕೊರತೆಯೆಂದರೆ ಅದು ಕ್ರಮ ವಿಹೀನತೆ. ನಮ್ಮ ಜನಜೀವನದಲ್ಲಿ ಅಭಿಮಾನವಿರತಕ್ಕವರೆಲ್ಲರೂ ಸಂಗ್ರಹಿಸಬೇಕಾದ ಗ್ರಂಥವಿದು."(1970: 114–116)

ಒಂದು ಹಳ್ಳಿಯ ಜೀವನ ಚರಿತ್ರೆಯನ್ನು ಹಿಡಿದಿಟ್ಟಿದೆ. ಜಾನಪದ ದೃಷ್ಟಿಯಿಂದ ಗ್ರಾಮವೊಂದನ್ನು ಆರಿಸಿಕೊಂಡು ಯಾವ ಯಾವ ಮುಖದಿಂದ ಅಧ್ಯಯನ ಮಾಡಬಹುದು. ಸಂಸ್ಕೃತಿಯ ಸೆಲೆಗಳು ಯಾವ ರೂಪದಲ್ಲಿ ತೋರಿಬರುತ್ತವೆ ಎಂಬುದಕ್ಕೆ ಶ್ರೇಷ್ಠ ಮಾದರಿ ಗ್ರಂಥ.

ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟದಲ್ಲಿ ಕೊಡಗಿನಿಂದ **ನಡಕೇರಿಯಂಡ ಚಿಣ್ಣಪ್ಪನವರ 'ಪಟ್ಟೋಲೆ ಪಳಮೆ'** (1924) ಹಾಗೂ **ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ–ಹಳ್ಳಿಯ ಹಾಡುಗಳು'** (1933) ಇವೆರಡು ಗ್ರಂಥಗಳು. ವಾಸ್ತವವಾಗಿ ಇದಕ್ಕೆ ಮುಖ್ಯಕಾರಣ ಸಂಗ್ರಹಕಾರರಿಗೆಲ್ಲ ಜನಪದ ಸಾಹಿತ್ಯವೆಂದರೆ ಗೀತೆಗಳು ಮಾತ್ರ. ಉಳಿದ ಜಾನಪದ ಪ್ರಕಾರಗಳು ಜನಪದ ಸಾಹಿತ್ಯ ಅಲ್ಲವೆಂಬ ಕಲ್ಪನೆಯಿದ್ದದ್ದು. ಕಥೆ, ಗಾದೆ,

ಒಗಟು, ನಂಬಿಕೆ, ಆಚಾರ–ವಿಚಾರಗಳು, ಆಚರಣೆಗಳು ಜನಮನವನ್ನು ಆಕರ್ಷಿಸದಿದ್ದುದು. ಅವೆಲ್ಲವುಗಳೂ ಒಂದೇಟಿಗೆ ಸಂಗ್ರಹಕನಿಗೆ ದೊರೆಯದಿದ್ದದ್ದೂ ಕಾರಣವಾಗಿರಬಹುದು. ಆದರೆ ದಕ್ಷಿಣಕನ್ನಡದಲ್ಲಿ ತುಳು ಪಾಡ್ದನಗಳ ಸಂಗ್ರಹವು 1880ರ ಸಂದರ್ಭದಲ್ಲಿ ಆರಂಭಗೊಂಡಿದ ಎಂಬದು ಗಮನಾರ್ಹ.

1935ರಲ್ಲಿ ಹಲಸಂಗಿ ಗೆಳೆಯರಲ್ಲಿ ಒಬ್ಬರಾದ **ಕಾಸಪೆ ರೇವಪ್ಪನವರು** ಎರಡು ತಿಂಗಳು ಶ್ರಮಪಟ್ಟು ಸಂಗ್ರಹಿಸಿದ **'ಮಲ್ಲಿಗೆ ದಂಡೆ'** ಎಂಬ ಹಾಡುಗಳ ಸಂಕಲನ ಪ್ರಕಟವಾಯಿತು. ಗ್ರಂಥಕ್ಕೆ ಮುನ್ನುಡಿ ಬರೆದ ಹಲಸಂಗಿ ಮಧುರಚೆನ್ನರು, "ಹೆಣ್ಣು ಮಕ್ಕಳ ಹಾಡುಗಳಲ್ಲಿ ತ್ರಿಪದಿಗೆ ಸಂಬಂಧಿಸಿರುವವುಗಳೇ ತೀರ ಹೆಚ್ಚು. ಕೆಲವೇ ವೃತ್ತಗಳು ಭಾವಕ್ಕೆ ತಕ್ಕಂತೆ ಬೇರೆ ಬೇರೆ ವಿವಿಧ ಮುಟ್ಟುಗಳಿಂದ ಹಾಡಲ್ಪಡುವುದನ್ನು ಬಗೆದರೆ ನಮಗೆ ಏಕಮೇವ ಪರಮಾತ್ಮನ ಅನಂತತೆಯೇ ನೆನಪಾಗುವುದು. ಹಾಡುಗಳನ್ನು ಪ್ರತ್ಯಕ್ಷವಾಗಿ ಅವುಗಳ ನೆಲೆಯರಿತ ಹೆಣ್ಣುಮಕ್ಕಳ ಬಾಯಿಯಿಂದ ಹಾಡಿಸಿ ಕೇಳಿದರೆ, ವಾಚಕರಿಗೆ ಮಾತಿನ ಮನವರಿಕೆಯಾಗಿ ಅತ್ಯಾಶ್ಚರ್ಯವಾಗದಿರದು. ದೇವತಾಸ್ತುತಿಯ ಹಾಡುಗಳು ಶುದ್ಧ ರಗಳೆಯ ವೃತ್ತಗಳಾಗಿರುವುದನ್ನು ನೆನೆದರೆ ಅತ್ಯಗಾಧವೆನಿಸುವುದು. ದ್ರೌಪದಿಯ ಹಾಡು ಭೋಗ ಷಟ್ಪದಿಯಾಗಿರುವುದನ್ನು ಬಗೆದರೆ ಹೆಣ್ಣು ಮಕ್ಕಳ ಹಾಡುಗಳ ಸಂಶೋಧನದ ಮಹತ್ವವು ಸ್ಪಷ್ಟವಾಗಿ ವಿದಿತವಾಗುವಂತಿದೆ." "ಇನ್ನು ಹಾಡುಗಳ ಭಾಷೆ. ಕೇವಲ ಇದ್ದಕ್ಕಿದ್ದಂತೆ ಗ್ರಾಮ್ಯವಾಗಿಯೇ ಅದನ್ನು ಇಡಬೇಕೆಂದು ಕೆಲವರ ಅಭಿಪ್ರಾಯ. ತುಸುಮಟ್ಟಿಗೆ ಸಂಸ್ಕರಿಸಿ ಗ್ರಾಂಥಿಕ ಸ್ವರೂಪಕ್ಕೆ ತರಬೇಕೆಂದು ಇನ್ನು ಕೆಲವರ ಅಭಿಪ್ರಾಯ. ಆದರೆ ಇವೆರಡೂ ಮಾತುಗಳೂ ಪುಸ್ತಕದಲ್ಲಿ ಸರಿಯಾಗಿ ಸಾಧಿಸಲಿಲ್ಲ. ಕೆಲವು ಹಾಡುಗಳು ಹಾಗೂ ಇವೆ. ಇನ್ನು ಕೆಲವು ಹೀಗೂ ಇಡಲ್ಪಟ್ಟಿವೆ. ಮುಂದಿನವರು ಕೆಲಸವನ್ನು ತಕ್ಕಂತೆ ಸರಿಪಡಿಸಿಕೊಳ್ಳಲಿ." "ಹಾಡುಗಳಲ್ಲಿ ಅಕ್ಷರಗಳನ್ನು ಎಳೆದೆಳೆದು ಉಚ್ಚರಿಸಿ ಗಣಪೂರ್ತಿಗೊಳಿಸುವ ರೂಢಿಯುಂಟು. ಆ ಮೇರೆಗೆ ಅಂಥಲ್ಲಿ ಅವಗ್ರಹ ಚಿಹ್ನೆದಿಂದ ಸೂಚಿಸಲಾಗಿದೆ. ಅಲ್ಲದೆ ಕೆಲ ಕೆಲವು ಕಡೆಗಳಲ್ಲಿ ಒಂದು ಚರಣದಲ್ಲಿರಬೇಕಾದದ್ದಕ್ಕಿಂತ ಹೆಚ್ಚು ಇಲ್ಲವೆ ಕಡಿಮೆ ಗಣಗಳಿರುವುದುಂಟು. ಆದರೆ ಇಂಥ ಸಂದರ್ಭಗಳು ಬಹಳ ಕಡಿಮೆ."(1935:9–10)

'ಮಲ್ಲಿಗೆ ದಂಡೆ' ಸಂಕಲನದ ಹಾಡುಗಳನ್ನು ಒಂಭತ್ತು ಭಾಗಗಳಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಅವುಗಳು: 1. ದೇವಾಸ್ತುತಿ 2. ಪ್ರಣಯಾಂತರ 3. ಭಾವಗೀತೆಗಳು 4. ಕಥೆಯ ಹಾಡುಗಳು 5. ಮದುವೆಯ ಹಾಡು 6. ಸೋಬಾನದ ಹಾಡುಗಳು 7. ಇತರ ವಿಧಾನಗಳು 8. ಅತ್ತೆಮನೆಯ ಕಾಟ ಹಾಗೂ 9. ಹಾಸ್ಯದ ಹಾಡುಗಳು. ಒಟ್ಟು 48 ಹಾಡುಗಳಲ್ಲಿ ಹೆಚ್ಚಿನವು ತ್ರಿಪದಿ ಅಥವಾ ತ್ರಿಪದಿಗೆ ಸಮೀಪವಾದ

ಮಟ್ಟುಗಳಿಗೆ ಸೇರಿದ್ದು. ತ್ರಿಪದಿಯ ಪೂರ್ವಾರ್ಧಗಳನ್ನು ಹೊಂದಿರುವ ಛಂದಸ್ಸಿನಲ್ಲಿವೆ. ಅದಲ್ಲದೆಯೇ ರಗಳೆ ಜಾತಿಯ ಲಲಿತ ರಗಳೆ, ಮಂದಾನಿಲ ರಗಳೆ ಹಾಡುಗಳಿವೆ. ಷಟ್ಪದಿ ಛಂದಸ್ಸಿನ ಕುಸುಮ ಹಾಗೂ ಭೋಗ ಷಟ್ಪದಿ ರಚನೆಯ ಹಾಡುಗಳಿವೆ. ಹಾಗೂ ಸಾಂಗತ್ಯವನ್ನು ಹೋಲುವ ರಚನೆಗಳಿವೆ. ಇವೆಲ್ಲವು ದೇಸಿ ಮಟ್ಟುಗಳೆಂದು ಕರೆಸಿಕೊಳ್ಳುವ ಛಂದಸ್ಸು ಹಾಗೂ ಹಾಡುವ ಮಟ್ಟುಗಳಾಗಿವೆ.

'ಮಲ್ಲಿಗೆ ದಂಡೆ' ಹಾಡುಗಳ ಸಂಗ್ರಹದ ಕೊನೆಯಲ್ಲಿ ಉತ್ತಮವಾದ ಟೀಕೆ ಟಿಪ್ಪಣಿಗಳನ್ನು ಕೊಡಲಾಗಿದೆ. ಟೀಕೆ ಟಿಪ್ಪಣಿಯು ಪ್ರತೀ ಹಾಡಿನ ಸರಳ ಭಾವಾನುವಾದ, ಹಾಡಿನ ಛಂದಸ್ಸು ಹಾಗೂ ಕಠಿಣ ಪದಗಳ ಅರ್ಥವನ್ನು ಒಳಗೊಂಡಿದೆ. ಪ್ರತೀ ಭಾಗದ ಹಾಡುಗಳಿಗೂ ಒಂದು ವಿಸ್ತೃತವಾದ ಪೂರ್ವ ಪೀಠಿಕೆಯನ್ನು ಕೊಡಲಾಗಿದೆ.

ದೇವತಾಸ್ತುತಿ– "ಮೊದಲನೆಯ ವಿಭಾಗದೊಳಗಿನ ವಿವಿಧ ದೇವತಾಸ್ತೋತ್ರಗಳು ತರ್ಕದ ನೆರಳು ಮುಟ್ಟದ ಸರಳ ಸ್ವಭಾವದ ನಾರಿಯರ ಹೃದಯದಿಂದ ಹೊರಹೊಮ್ಮಿದವುಗಳು. ನಾವು ಅವರ ದೃಷ್ಟಿಯಿಂದ ಇವುಗಳನ್ನು ಹಾಡಿಕೊಂಡರೆ ಅವರಂತೆ ಒಂದು ಗಳಿಗೆ ನಾವು ಅನಿರ್ವಚನೀಯ ಭಕ್ತಿ ಭರದಿಂದ ಬಾಗದಿರಲಾರೆವು." (ಕಾಪಸೆ ರೇವಪ್ಪ 1990:138) ಪ್ರದೇಶಗಳಿಗನುಗುಣವಾಗಿ ಭಕ್ತರಿರುತ್ತಾರೆ. ಆ ಭಕ್ತರು ದೇವತಾಸ್ತುತಿಯಲ್ಲಿ ದೇವರ ಮಹಿಮೆಯನ್ನು ಕೊಂಡಾಡುವುದರಲ್ಲಿ ಮಗ್ನರಾಗಿರುತ್ತಾರೆ. ಇಂತಹ ಬೇರೆ ಬೇರೆ ಪ್ರದೇಶಗಳ ನಾಲ್ಕೈದು ಹಾಡುಗಳನ್ನು ಸಂಗ್ರಹದಲ್ಲಿ ಕೊಡಲಾಗಿದೆ. ಗಣಪತಿಯ ಸ್ತೋತ್ರ, ಸೊಲ್ಲಾಪುರದ ಸಿದ್ಧರಾಮೇಶ್ವರ ಸ್ತೋತ್ರ, ಪಂಡಾರಾಪುರದ ವಿಠೋಬನ ಸ್ತೋತ್ರ ಹಾಗೂ ಎಡವೂರ ವೀರಭದ್ರನ ಸ್ತೋತ್ರ – ನಾಲ್ಕು ಹಾಡುಗಳಲ್ಲಿ ದೇವತಾಸ್ತುತಿಯ ಸಾಂಪ್ರದಾಯಿಕ ವಿವರಗಳಿವೆ. ಜನಪದರು ದೇವರನ್ನು ನೆನಪು ಮಾಡುವ, ಪೂಸುವ ವಿಧಾನಗಳಿವೆ. ಇದು ಅವರ ಮನೋಧರ್ಮಕ್ಕೆ ಸಂಬಂಧಿಸಿದುದು.

ಪ್ರಣಯಾಂತರ–ಭಾಗದಲ್ಲಿ ಸಂಗ್ರಹಿಸಿದ ಹಾಡುಗಳು ಆರು. ವಾರಿ ರುಮ್ಮಾಲ ಸ್ತುತಿ, ಹಣ್ಣ ಬಂದಾವ ಹಣ್ಣ, ಸುಬ್ಬುಂಬು ರಾತೂರಿ, ಕೊರವಂಜೇಣ್ ಹಾಡು ಹಾಗೂ ಗಂಗೀ ಗೌರಿ ಹಾಡು. ಇಲ್ಲಿನ ಕೊನೆಯ ಎರಡು ಹಾಡುಗಳು ಭಾವಗೀತೆಯಂತೆ ತೋರುತ್ತದೆಂದು ಸಂಗ್ರಾಹಕರು ಹೇಳಿಕೊಂಡಿದ್ದಾರೆ. ಭಾಗದ ಹಾಡುಗಳಿಗೆ ಪೂರ್ವ ಪೀಠಿಕೆಯಾಗಿ ಕೊಟ್ಟಿರುವ ವಿವರಗಳು ಬೇರೆ ಬೇರೆ ಕೃತಿಗಳಲ್ಲಿ, ಭಿನ್ನ ಸಂದರ್ಭದಲ್ಲಿ ಮಾಡಿರುವ ನಿರ್ವಚನಗಳಾಗಿವೆ. ಸಂಸಾರ ಸಾಗರದಲ್ಲಿ ಆಗುವ ಘಟನೆಗಳೇ ಪದ್ಯ ರೂಪದಲ್ಲಿವೆ.

ಭಾವಗೀತೆಗಳು – "ಹೃದಯೋದ್ರೇಕಕ್ಕೆ ಕಾರಣವಾಗುವ ಯಾವುದೊಂದು ಒಂಟಿ ಸಂಗತಿಯನ್ನು ಕುರಿತು, ಅದರ ಬೇರೆ–ಬೇರೆ ಮಗ್ಗಲುಗಳನ್ನು ಒಂದೊಂದಾಗಿ ಬಣ್ಣಿಸುತ್ತ ಬಂದ ಹಾಗೆಲ್ಲ ಶ್ರೋತೃವಿನ ಅಂತರಂಗದಲ್ಲಿ ಭಾವಾವೇದವು ಏಳುತ್ತದೆ. ಇಂತಹ ಹಾಡುಗಳಿಗೆ 'ಭಾವಗೀತ'ಗಳೆಂದು ನಾಮಕರಣ ಮಾಡಲಾಗಿದೆ. ಹಾಡುಗಳಲ್ಲಿ ಒಂದೇ ಪಾತ್ರವು ತನ್ನ ಸ್ವಗತವನ್ನು ಕಲ್ಲು ಕರಗುವಂತೆ ಬಣ್ಣಿಸಿರುವುದುಂಟು" (ಕಾಸಪೆ ರೇವಪ್ಪ 1991: 150) ಎಂದು ಸಂಗ್ರಹಕಾರರು ಅಭಿಪ್ರಾಯಪಡುತ್ತಾರೆ. ಒಟ್ಟು ಮೂರು ಹಾಡುಗಳಿವೆ. ಕೂಸಿನ ಹಾಡು, ಎತ್ತಿನ ಹಾಡು ಹಾಗೂ ಮಳೀ ಹಾಡು. ಹಾಡುಗಳಲ್ಲಿ ಮಗುವನ್ನು ಕಳೆದುಕೊಂಡ ತಾಯಿಯ ಹುಡುಕಾಟವನ್ನೂ, ಎತ್ತುಗಳನ್ನು ದುಡಿಸಿಕೊಂಡು ತನ್ನ ಕೆಲಸವನ್ನು ಮಾತ್ರ ಪೂರೈಸಿಕೊಳ್ಳುವ ದನಿಕನ ಸ್ವಭಾವವನ್ನು ಹಾಗೂ ಮಳೆ ಬಂದಾಗ ಒಕ್ಕಲಿಗನಿಗಾಗುವ ಸಂತೋಷ, ಬರಬಂದಾಗ ಆಗುವ ದುಃಖದ ವಿವರಗಳು ಪ್ರಕಟವಾಗಿವೆ.

ಕಥೆಯ ಹಾಡುಗಳು – "ರಾಜರಾಣಿಯ ಕಥೆಗಳು, ಜಕಣಿಯರ ಕಥೆಗಳು ಮುಂತಾದ ಜಾನಪದ ಕಥಾ ಸಾಹಿತ್ಯದ ಪರಿಚಯವಿಲ್ಲದವರಾದರೂ ಉಂಟೆ? ಅಂತಹ ಕಥೆಗಳೇ ಮಕ್ಕಳ ಹಾಡುಗಳಿಗೂ ವಿಷಯವಾಗಿ ಅವರ ಜೀವನದ ರಥಕ್ಕೆ ನೆರವುಗೋಲಿನಂತೆ ಸಹಾಯಕವಾಗಿರುತ್ತವೆ. ಕೆಲಸ–ಬೊಗಸೆ ಮಾಡುವಾಗ ಇಂತಹ ಕಥಾಗೀತೆಗಳನ್ನು ಹಾಡುತ್ತ ತಮ್ಮ ದುಡಿತದ ಶ್ರಮವನ್ನು ಮರೆಯುವರು. ಅಲ್ಲದೆ ಅವರ ಜೀವನದ ಕಷ್ಟನಷ್ಟಗಳಿಗೆ ಎದೆಗೂಡುವ ಬಲವನ್ನು ಇವುಗಳೇ ಅವರಿಗೆ ಪೂರೈಸುವವು, ಸದ್ಯದ ಶ್ರಮವನ್ನು ಮರೆಯಿಸುವವು. ನಾಳಿನ ಚಿಂತೆಯನ್ನು ಬಯಲು ಮಾಡುವವು. ಅದಕ್ಕಿಂತಲೇ ಅಂತಹ ಜನಪದ ಸಾಹಿತ್ಯಕ್ಕೆ ಜೀವನದ ಸಾಹಿತ್ಯವೆಂದು ಎನ್ನುವುದು" (ಕಾಸಪೆ ರೇವಪ್ಪ 1990:153) ಎಂದು ಸಂಗ್ರಾಹಕರು ಅಭಿಪ್ರಾಯಪಟ್ಟಿದ್ದಾರೆ. ಕಥೆಯ ವಸ್ತುಗಳೇ ಇಲ್ಲಿಯ ಹಾಡುಗಳಲ್ಲಿ ವ್ಯಕ್ತವಾಗಿವೆ. ಒಂದು ಘಟನೆಯ ಸಂದರ್ಭವನ್ನು ಹೇಳುವುದರ ಮೂಲಕ ನೀತಿಯನ್ನು ಪ್ರಕಟಪಡಿಸುವುದು ಹಾಡುಗಳ ಪ್ರಮುಖ ಆಶಯವಾಗಿದೆ. ಭಾಗದಲ್ಲಿ ಕಥೆಯ ರೂಪದ ಆರು ಹಾಡುಗಳಿವೆ. ಅವುಗಳು; ಆಕಳ ಹಾಡು, ಎಳ್ಳಾಮಾಸೀ ಹಾಡು, ಅಕ್ಕಮಹಾದೇವಿ ಹಾಡು, ಬರಹದ ಹಾಡು, ದ್ರೌಪದಿಯ ಹಾಡು, ದಂಡ ಬಂತವ್ವ ದಂಡದ ಹಾಡುಗಳಾಗಿವೆ. 'ಆಕಳಹಾಡು' ಗೋವಿನ ಹಾಡಿನ ಕಥೆಯನ್ನು ನಿರೂಪಿಸುತ್ತದೆ. 'ಎಳ್ಳಾಮಾಸೀ ಹಾಡು' ಶ್ರೀಮಂತನ ಮಗಳ ಕೊಲೆಗೆ ಯುವಕನೊಬ್ಬ ಮೊದಲುಗೊಂಡ ಕಥೆಯನ್ನು ಒಳಗೊಂಡಿದೆ. 'ಅಕ್ಕಮಹಾದೇವಿಯ ಹಾಡ'ನ್ನು ಹೆಣ್ಣುಮಕ್ಕಳು 'ಜೈನರ ಹಾಡು' ಎಂದು ಕರೆಯುತ್ತಾರೆ. ಕಥೆಯು ತಾಯಿ–ಮಗಳ ಸಂವಾದವಾಗಿದೆ. 'ಬರದ ಹಾಡು' ಅಣ್ಣ–ತಮ್ಮಂದಿರಿಬ್ಬರ ಕಥೆಯಾಗಿದೆ. 'ದ್ರೌಪದಿಯ ಹಾಡು' ದ್ರೌಪದಿಯ ವಸ್ತ್ರಾಪಹರಣದ ಘಟನೆಯನ್ನು ಒಳಗೊಂಡಿದೆ.

'ದಂಡ ಬಂತವ್ವ ದಂಡ' ಹಾಡು ದಂಡಿಗೆ ಹೋದ ಅಧಿಕಾರಿಯೊಬ್ಬ ಸಾಮಾನ್ಯ ಹೆಣ್ಮಗಳ ರೂಪವನ್ನು ಕಂಡು ಮೋಹಗೊಳ್ಳುವ ಕಥೆಯಾಗಿದೆ.

ಮದುವೆಯ ಹಾಡುಗಳು – ಭಾಗದಲ್ಲಿ ಹನ್ನೊಂದು ಹಾಡುಗಳಿವೆ. ಅವುಗಳು; ಭಾಟಗೀ ಹಾಡು, ಒಳಕಲ್ಲ ಪೂ ಹಾಡು, ಅರಿಷಿಣ ಹಚ್ಚೊ ಹಾಡು, ಐರಾಣಿಯ ಹಾಡು, ಸಂಡಿಗೆ ಕಡಿಯುವ ಹಾಡು, ನೂಲು ಸುತ್ತುವ ಹಾಡು, ಅಡಿಕೆ ಆಡುವ ಹಾಡು, ಭೂಮದ ಹಾಡು, ಬೀಗರ ಹಾಡು, ಹಾಗೂ ಕೂಸು ಒಪ್ಪಿಸುವ ಹಾಡು. "ವಿಭಾಗವು ಹೆಣ್ಣು ಮಕ್ಕಳ ಸಂಹಿತೆಯಿದ್ದಂತೆ. ಲಗ್ನದ ಬೇರೆಬೇರೆ ವಿಧಾನಗಳ ಪ್ರಸಂಗಗಳಲ್ಲಿ ಇವುಗಳನ್ನು ಹಾಡುವರು. ದಾಂಪತ್ಯವು ಜೀವನದ ಬಹುಮುಖ್ಯ ವಿಭಾಗವಾಗಿರುವುದರಿಂದ ಅದು ಒಂದು ಮಹಾಪವಿತ್ರ ಯಜ್ಞದಂತೆ ಅವರಿಗೆ ತೋರಿದ್ದು ಆಶ್ಚರ್ಯವಲ್ಲ. ಇವು ಕೇವಲ ರಂಜನೆಯ ಹಾಡುಗಳಲ್ಲದ್ದರಿಂದ ಇವುಗಳನ್ನು ಬೇರೆ ದೃಷ್ಟಿಯಿಂದ ಒಂದೊಂದು ವಿಧಾನಕ್ಕೂ ಎಷ್ಟೆಷ್ಟೋ ಹಾಡುಗಳು ಸಿಕ್ಕಬಹುದಾದರೂ, ನಾವು ಒಂದೊಂದು ಹಾಡನ್ನು ಕೊಟ್ಟಿದ್ದೇವೆ." (ಕಾಸಪೆ ರೇವಪ್ಪ 1990:161)

'**ಭಾಟಗೀ ಹಾಡ**'ನ್ನು ಮದುವೆಯ ನಿಶ್ಚಿತಾರ್ಥದ ಸಂದರ್ಭದಲ್ಲಿ ಹಾಡುವುದು. 'ಒಳಕಲ್ಲ ಪೂ ಹಾಡು' ಮದುವೆಯ ತಯಾರಿಕೆಯಲ್ಲಿ ಒರಳು, ಬೀಸುಕಲ್ಲನ್ನು ಪೂಸುವ ಹಾಡು. ಅರಿಷಿಣ ಹಚ್ಚೊ ಹಾಡುಗಳಲ್ಲಿ ಎರಡು ವಿಧ. ಒಂದು ಗಂಡಿಗೆ ಹಚ್ಚುವ ವಿಧಾನದ ನಿರೂಪಣೆಯಾದರೆ, ಇನ್ನೊಂದು ಹೆಣ್ಣಿಗೆ ಅರಿಷಿಣವನ್ನು ಹಚ್ಚುವುದನ್ನು ನಿರೂಪಿಸುತ್ತದೆ. 'ಐರಾಣಿಯ ಹಾಡು' ಮದುವೆ ಸಮಾರಂಭದ ಎರಡನೆಯ ದಿನದ ವಿಧಾನವನ್ನು ಒಳಗೊಂಡಿದೆ. ಸಂಡಿಗೆ ಕಡಿಯುವ ಹಾಡನ್ನು ಐರಾಣಿಯ ವಿಧಾನದ ನಂತರದಲ್ಲಿ ಹಾಡುವರು. ಅರಿಷಿಣ ಹಚ್ಚುವಾಗ, ಅಕ್ಕಿ ಕಾಳು ಹಾಕುವಾಗ, ಹೆಣ್ಣು ಒಪ್ಪಿಸಿಕೊಡುವಾಗ ಮೊದಲಾಗಿ ಮದುವೆಯ ಸಂದರ್ಭದಲ್ಲಿ ಬೇರೆಬೇರೆ ಆಚರಣ ವಿಧಿಗಳನ್ನು ವಿವರಿಸುತ್ತದೆ.

ಸೋಬನದ ಹಾಡುಗಳು – ಆರು ಹಾಡುಗಳಿವೆ. "ಹೆಣ್ಣು ಮಕ್ಕಳು ವರ್ಣಿಸಿದ ಶೃಂಗಾರದಲ್ಲಿ ಒಂದು ಸಹಜವಾದ ಜೋಕೆಯಿದೆ. ಗಂಡಸರ ಹಾಡುಗಳಲ್ಲಿ ರೂಪವರ್ಣನೆಯು ಮೂರು ವಿಧದಲ್ಲಿ ಮೂಡಲ್ಪಟ್ಟಿದೆ. ಹೀಗೆ ನಾಲ್ಕು ವಿಧಗಳಲ್ಲಿ ಸೋಬಾನದ ಹಾಡುಗಳನ್ನು ವಿಭಾಗಿಸಿಕೊಂಡಿದ್ದಾರೆ. 'ಮನಸ ಜೈನರ ಮಡದಿ ಉಣಿ' ಎಂಬ ಹಾಡಿನಲ್ಲಿ ಇಡೀ ಯೌವನಕ್ಕೆ ಸಂಬಂಧವಾಗುವ ಉಪಮೆಗಳಿವೆ. ಇದು ಒಂದು ವಿಧ. 'ಹಿಂಬಳಿ ಮುಂಬಳಿ' ಹಾಗೂ 'ರನ್ನ ದುಡುಗುಣಿ' ಎಂಬೆರಡು ಹಾಡುಗಳಲ್ಲಿ ಮೈಮೇಲಿನ ಅಲಂಕಾರಗಳ ವರ್ಣನೆಯಿಂದ ಶೃಂಗಾರಕ್ಕೆ ಬಣ್ಣ ಕೊಡಲು ಯತ್ನಿಸಲಾಗಿದೆ.

ಇದು ಎರಡನೆಯ ವಿಧ. ಇನ್ನು 'ಹಸು ಮಗಳ ನೀಲಮ್ಮ' ಹಾಗೂ 'ಹಣೆ' ಎಂಬೆರಡು ಹಾಡೂಗಳಲ್ಲಿ 'ಅಕ್ಕ ಭಾವಗ ವರನಂದ', 'ನಾರೀಗಿ ತಮಗ ವರನಂದ' ಮುಂತಾದ ಮಾತುಗಳಿಂದ ಪರ್ಯಾಯದಿಂದ ರೂಪವನ್ನು ವರ್ಣಿಸಿದಂತಿದೆ. ಇದು ಮೂರನೆಯ ವಿಧ. 'ಬಾಲಿ ತಾ ಮೈ ನೆರೆದು' ಎಂಬ ಹಾಡಿನ ಮೊದಲಿನ ನಾಲ್ಕು ನುಡಿಗಳಲ್ಲಿ ಋತು ಸಮಯದ ತಾತ್ಕಾಲಿಕ ಮುಖಲಕ್ಷಣ ಮುಂತಾದವುಗಳ ಸೊಗಸಾದ ವರ್ಣನೆಯಿದೆ. ಇದು ನಾಲ್ಕನೆಯ ವಿಧ" (ಕಾಸಪ ರೇವಪ್ಪ 1990: 168–169) ಮದುವೆ ಹೆಣ್ಣು ಮಾಡುವ ಆಚರಣೆಗಳ ವಿವರವಿದೆ.

ಇತರ ವಿಧಾನಗಳು – "ಮದುವೆ ಶೋಭನಗಳ ನಂತರ ಬರುವ ವಿಧಾನದ ಹಾಡುಗಳನ್ನೆಲ್ಲ, ವಿಭಾಗದಲ್ಲಿ ಕೂಡಿಸಬೇಕೆಂದು ನಮ್ಮ ಇಚ್ಛೆ. ಹೆಣ್ಣು ಮಕ್ಕಳು ಚೊಚ್ಚಿಲು ಬಸಿರಾದಾಗ ಐದನೆಯ ಇಲ್ಲವೆ ಏಳನೆಯ ತಿಂಗಳಲ್ಲಿ ಒಂದು ವಿಧಾನವು ಜರುಗಿಸಲ್ಪಡುತ್ತದೆ. ಹಾಗೂ ಹಡೆದಾಗ ಕೂಸಿಗೆ ನಾಮಕರಣ ಮಾಡುವ ಕಾಲಕ್ಕೆ ಇನ್ನೊಂದು ವಿಧಾನವು ಜರುಗಿಸಲ್ಪಡುತ್ತದೆ. ಬಹುಶಃ ಇಲ್ಲಿಗೆ ವಿಧಾನಗಳೆಲ್ಲ ಮುಗಿದಂತಾಗುವವು"(ಕಾಸಪೆ ರೇವಪ್ಪ ರೇವಪ್ಪ 1990: 172) ಒಟ್ಟು ನಾಲ್ಕು ಹಾಡುಗಳಿವೆ. 'ಕುಬಸಾ ಮಾಡೂ ಹಾಡು', 'ಬಯಕೆಯ ಹಾಡು', 'ಬೇನೆ ತಿನ್ನುವ ಹಾಡು' ಹಾಗೂ 'ತೊಟ್ಟಿಲಲ್ಲಿ ಹಾಕುವ ಹಾಡು'. ಮೊದಲ ಮೂರು ಹಾಡುಗಳು ಗರ್ಭಿಣಿಗೆ ಮಾಡುವ ಬಯಕೆಯ ಆಚರಣೆಗಳು. ಕೊನೆಯ ಹಾಡು ಹುಟ್ಟಿದ ಮಗುವನ್ನು ತೊಟ್ಟಿಲಿಗೆ ಹಾಕುವ ಕ್ರಮದ ನಿರೂಪಣೆ.

ಅತ್ತೆ ಮನೆಯ ಕಾಟ – "ವಿಭಾಗದಲ್ಲಿ ಅತ್ತೆಯ ಮನೆಯ ತ್ರಾಸದ ಹಾಗೂ ತವರು ಮನೆಯ ಆಸೆಯ ಹಾಡುಗಳನ್ನು ಸಂಗ್ರಹಿಸಿದೆ" (ಕಾಸಪೆ ರೇವಪ್ಪ 1990:174) ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಅತ್ತೆ ಮನೆಯಲ್ಲಿ ಸೊಸೆಗೆ ಮಗಳ ನಂತರದ ಸ್ಥಾನವೇ ಇರುವುದು. ಅತ್ತೆಯೊಂದಿಗೆ ಹಾಗೂ ನಾದಿನಿಯೊಂದಿಗೆ ಹೊಂದಿಕೊಂಡು ಬದುಕುವುದಕ್ಕೆ ಸೊಸೆಗೂ ಸ್ವಲ್ಪ ಕಷ್ಟವಾಗಿತ್ತದೆ. ಆಗ ಆಕೆಗೆ ತವರು ಮನೆ ಆದರ್ಶವಾಗುತ್ತದೆ. ಗಂಡನ ಮನೆ ನರಕವಾಗುತ್ತದೆ. ನೆಲೆಯಲ್ಲಿ ಎರಡು ಹಾಡುಗಳನ್ನು ಕೊಡಲಾಗಿದೆ. 'ಅತ್ತೆ ಸೊಸೆಯರ ಜಗಳ' ಹಾಗೂ 'ಶಾಂವಕ್ಕಿ ಕುಟ್ಟಂದ್ರ' ಎರಡೂ ಹಾಡುಗಳಲ್ಲಿ ಹೆಣ್ಣೊಬ್ಬಳು ಅತ್ತೆಮನೆಯಲ್ಲಿರುವ ಎರೆಲ್ಲರಿಂದಲೂ ಹೇಗೆ ಅವಗಣನೆಗೆ ಒಳಗಾಗಿರುವುದನ್ನು ವಿವರಿಸಲಾಗಿದೆ.

ಹಾಸ್ಯದ ಹಾಡುಗಳು – ವಿಭಾಗದಲ್ಲಿರುವ ಹಾಡುಗಳು ನಕ್ಕು ನಗಿಸುವಂತಹವುಗಳು.

ಹಾಸ್ಯವು ಒಂದು ರೀತಿಯ ಅಟ್ಟಹಾಸದಂತೆ ನಿರೂಪಿತವಾಗಿದೆ. ಭಾಗದಲ್ಲಿ ನಾಲ್ಕು ನಿರೂಪಣಾ ಕ್ರಮದಲ್ಲಿದೆ. ಒಂದು ರೀತಿಯ ನಾಟಕೀಯ ಗುಣ ಗಮನೀಯ. 'ಕಿವುಡರ ಹಾಡು' ಕುಟುಂಬವೊಂದರಲ್ಲಿ ಪರಸ್ಪರ ಕಿವುಡರಾಗಿರುವುದನ್ನು ಹಾಗೂ ಮುಂದೆ ಅದರಿಂದಾಗುವ ಅನಾಹುತವನ್ನು ವಿವರಿಸುತ್ತದೆ. 'ಜೀವನ ಹಾಡು' ಯಕ್ಷಿಣಿಯೊಬ್ಬಳ ಕಥೆ. ಒಬ್ಬ ಗುಬ್ಬಿ–ಕಾಗೆಗಳ ಕಾಟದಿಂದ ಮೋಸ ಹೋಗುತ್ತಾನೆ. ಆ ಕೋಪವನ್ನು ಯಕ್ಷಿಣಿಗೆ ಹೊಡೆಯುವುದರಲ್ಲಿ ತಣಿಯುತ್ತದೆ. ಆಕೆಯ ಶಾಪಕ್ಕೆ ಹೊಸ ಬೆಳೆ ನಾಶವಾಗುವ ಕಥೆ ಇಲ್ಲಿದೆ. 'ಮಂಗ್ಯಾನ ಹಾಡು' ಕೋತಿಗಳ ವಿಚಿತ್ರ ನಡವಳಿಕೆಯನ್ನು ನಿರೂಪಿಸುವ ಹಾಡು.

ಸ್ವಾತಂತ್ರ್ಯಪೂರ್ವ ಸಂದರ್ಭದಲ್ಲಿ (1935) ಪ್ರಕಟವಾದ ಸಂಕಲನವು ಜನಪದ ಜೀವನದ ಸಂಸ್ಕೃತಿಯನ್ನು ಪ್ರಕಟಿಸುತ್ತದೆ. ಒಬ್ಬಾಕೆ ಹೆಣ್ಣಿನ ಸುತ್ತ, ಆಕೆಯ ತವರು–ಅತ್ತೆ ಮನೆ, ಗಂಡ–ಮಗು ಹಾಗೂ ಆಕೆಯ ಬೆಳವಣಿಗೆ ಕುರಿತಂತೆ ಆಗುವ ಜೈವಿಕ ಆಚರಣೆಗಳು ಪ್ರಧಾನವಾಗಿ ದಾಖಲೆಯಾಗಿವೆ. ಇಡೀ ಸಂಕಲನದಲ್ಲಿ ಜೀವ ಪರವಾದ ಒಂದು ನಿಲುವು ಅದಮ್ಯವಾದ ರೀತಿಯಲ್ಲಿ ಪ್ರಕಟವಾಗಿದೆ. ಜೀವ ಪರತೆಯು ಬದುಕಿನ ಒಳ್ಳೆಯ ಹಾಗೂ ಕೆಟ್ಟ ಗುಣಗಳೆರಡನ್ನು ಒಪ್ಪಿಕೊಂಡಿದೆ.

1934ರಲ್ಲಿ **ರಾಮಚಂದ್ರ ವೆಂಕಟೇಶ ಕರಗುದರಿ**ಯವರು ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿದ್ದ ಗಣಪತಿ ಮೇಳದ ಪದ್ಯಗಳನ್ನು ಸಂಗ್ರಹಿಸಿ **'ಕೋಲು ಹಾಡು'** ಎಂಬ ಕೃತಿಯನ್ನು ಪ್ರಕಟಿಸಿದರು.

1935ರಲ್ಲಿ **ಬಿ.ಎನ್. ರಂಗಸ್ವಾಮಿ**ಯವರು **'ಕೆಲವು ಹಳ್ಳಿಯ ಹಾಡು'**ಗಳನ್ನು ಸಂಗ್ರಹಿಸಿದರು. ಪ್ರಬುದ್ಧ ಕರ್ನಾಟಕ ಪತ್ರಿಕೆಯ ಸಂ.16, ಸಂ.2ರ 72–73 ಪುಟಗಳಲ್ಲಿ ಸಂಗ್ರಹಿಸಿದ 15 ತ್ರಿಪದಿಗಳು ಪ್ರಕಟವಾದುವು. ಬಸುರಿ, ಬಾಣಂತಿ, ಮಗು, ತವರು, ಸಂಗಾತಿ ಎಂಬ ಉಪಶೀರ್ಷಿಕೆಗಳನ್ನು ಕೊಟ್ಟು ಗೀತೆಗಳನ್ನು ವಿಷಯಾನುಸಾರ ವಿಂಗಡಿಸಲಾಗಿದೆ. ಆದರೆ ರಂಗಸ್ವಾಮಿಯವರು ಸಂಗ್ರಹಿಸಿರುವ ತ್ರಿಪದಿಗಳು ದಕ್ಷಿಣ ಕರ್ನಾಟಕದ ಬಯಲು ಪ್ರದೇಶದವುಗಳಾಗಿದ್ದು, ಆಡನುಡಿಯ ಬೆಡಗನ್ನು ಉಳಿಸಿಕೊಳ್ಳದೆ ತಿದ್ದಿ ನಯಗೊಳಿಸಿದ್ದಾರೆಂಬ ಅಭಿಪ್ರಾಯವಿದೆ.

1935ರಲ್ಲಿ **ಯಸ್.ವಿ. ರಂಗಣ್ಣ 'ಹಳ್ಳಿಯ ಹಾಡುಗಳು'** ಎಂಬ ತ್ರಿಪದಿಗಳ ಸಂಕಲನವನ್ನು ಪ್ರಕಟಿಸಿದರು. ಗಜರಾಜ, ಬಂಜೆ, ಬಿಡಿನುಡಿ, ವ್ಯಾಘ್ರ ಎಂಬ ಉಪಶೀರ್ಷಿಕೆಗಳುಳ್ಳ ಹಲವು ಜನಪದ ತ್ರಿಪದಿಗಳ ಜೊತೆಗೆ 'ತಂದನಾನ' ಕಥನ ಗೀತೆಗಳನ್ನೂ ಅವುಗಳ ಮೂಲ ರೂಪ ಹಾಗೂ ಧಾಟಿ ಬದಲಾಗದಂತೆ ಸಂಕಲಿಸಿದ್ದಾರೆ.

'ಬಂಜೆ;' ಶೀರ್ಷಿಕೆಯ ತ್ರಿಪದಿಗಳು ರಸವತ್ತಾಗಿವೆ. 'ವ್ಯಾಗ್ರ' ಎಂಬ ಕಥನ ಗೀತ ವಿಶಿಷ್ಟತರವಾಗಿದ್ದು ತಾಯಿ ಹಾಗೂ ವೀರ ಗಂಡು ಮಕ್ಕಳಿಬ್ಬರ ನಡುವೆ ನಡೆದ ಸಂವಾದ ರೂಪದಲ್ಲಿವೆ.[2]

1938ರಲ್ಲಿ ಪ್ರಕಟವಾದ **'ಹಳ್ಳಿಯ ಹಾಡುಗಳು'** ಸಂಕಲನವನ್ನು **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಸಂಪಾದಿಸಿದ್ದಾರೆ. ಇಲ್ಲಿಯ ಹಾಡುಗಳ ಸಂಗ್ರಹಕ್ಕೆ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಬಿ.ಎನ್.ರಂಗಸ್ವಾಮಿ, ಗೊರೂರು ಕೃಷ್ಣಯ್ಯಂಗಾರ್ ಹಾಗೂ ಇತರ ಹಳ್ಳಿಯ ಮಿತ್ರರು ಸೇರಿರುತ್ತಾರೆ ಎಂದು ಮಾಲೆಯ ಸಂಪಾದಕರು ಕೃತಿಯ ಆರಂಭದಲ್ಲಿ ಹೇಳಿಕೊಂಡಿದ್ದಾರೆ. ಸಂಗ್ರಹದ ಪ್ರಸ್ತುತತೆ ಹಾಗೂ ಚಾರಿತ್ರಿಕ ಮಹತ್ವದ ಕುರಿತಂತೆ ಸಂಪಾದಕರಾದ **ಎಚ್.ಎಂ. ಶಂಕರನಾರಾಯಣರಾವ್** ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. "ಹೊಸಗನ್ನಡ ಸಾಹಿತ್ಯದ ಪುನರುಜೀವನ ಕಾಲದಲ್ಲಿ, ಜನಪದ ಸಾಹಿತ್ಯದ ಪುನರ್‌ಜೀವನ ಮೊದಲಾಯಿತೆಂದು ಹೇಳಿದರೆ ಅದೇನೂ ಅತಿಶಯೋಕ್ತಿಯಲ್ಲ. ಕನ್ನಡದಲ್ಲಿ ಕೃತಿರಚನೆಗೆ ಅನುಕೂಲವಾದ ಅಚ್ಚಕನ್ನಡದ ನುಡಿಗಟ್ಟನ್ನೂ ಕನ್ನಡ ಛಂದಸ್ಸಿನ ತಾಯಿಬೇರುಗಳನ್ನು ಸಾಹಿತ್ಯದಲ್ಲಿ ಆಚಾರ್ಯ ಶ್ರೀಯವರು ಕಂಡುಕೊಂಡರು. ಜನಪದ ಸಾಹಿತ್ಯವನ್ನು ಸಂಗ್ರಹಿಸುವುದರ ಮೂಲಕ ಲೇಖನ ಹಾಗೂ ಭಾಷಣಗಳ ಮೂಲಕ ವಿದ್ವಾಂಸರು ಸಾಹಿತ್ಯವನ್ನು ಹೊರಗೆಳೆದು, ಇದರಲ್ಲಿ ಹುದುಗಿದ್ದ ಸೌಂದರ್ಯವನ್ನು ತೋರಿಸಿಕೊಟ್ಟು ಪ್ರಚುರಪಡಿಸಿದರು. ಈಗ ಇದು ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನದ ವಿಷಯವಾಗಿರುವುದರಿಂದ, ಇತ್ತೀಚಿನ ದಿನಗಳಲ್ಲಿ ಇದರ ಪ್ರಕಟನೆ ಪ್ರವಾಹ ರೂಪದಲ್ಲಿ ಬರುತ್ತಿದೆ. ಪ್ರವಾಹ ನಮ್ಮಲ್ಲಿ ಅದ್ಭುತ ಭಾವನೆಯನ್ನುಂಟು ಮಾಡುತ್ತದೆ. ಅದರ ವಿಸ್ತಾರ ನಮ್ಮನ್ನು ಬೆರಗುಗೊಳಿಸುತ್ತದೆ. ಅಂತೆಯೇ ಅದರ ರಭಸ ನಮ್ಮಲ್ಲಿ ಭಯವನ್ನುಂಟು ಮಾಡುತ್ತದೆ. ಅದರ ಆಳವನ್ನಂತೂ ಕಂಡವರಿಲ್ಲ. ಅದು ಭೋರ್ಗರೆದು ಬರುವ ರಭಸಕ್ಕೆ ಕದಡಿದ ನೀರಿನೊಡನೆ ಕಸಕಡ್ಡಿಗಳೂ ನೊರೆ ಗುಳ್ಳೆಗಳೂ–ಹೆಚ್ಚೇನು? ದಾರಿಯಲ್ಲಿ ಅಡ್ಡ ಬಂದ ಪದಾರ್ಥಗಳು ತೇಲಿಬರುತ್ತವೆ. ಯಾರ ಕೈಗೂ ಸಿಕ್ಕದಂತೆ ಕೊಚ್ಚಿಕೊಂಡು ಹೋಗುತ್ತವೆ. ಆದರೆ ಗೊತ್ತುಗುರಿಯಿಲ್ಲದೆ ಅಡ್ಡಾದಿಡ್ಡಿಯಾಗಿ ಹರಿಯುತ್ತದೆ. ಇದೇ ಪ್ರವಾಹ ತಿಳಿಯಾಗಿ ತನ್ನ ನೆಲೆಯನ್ನು ಕಂಡು ಕೊಂಡಾಗ ಎಷ್ಟು ಸ್ವಚ್ಛವಾಗಿ ಶುಭ್ರವಾಗಿ ಸ್ಫಟಿಕ ನಿರ್ಮಲವಾಗಿ ಸಜ್ಜನರ ಮನಸ್ಸಿನಂತೆ ಪ್ರಸನ್ನ ರಮಣೀಯವಾಗಿ ಕಂಗೊಳಿಸುತ್ತದೆ. ಆದರೆ ತಿಳಿನೀರು ಆಸ್ವಾದ ಯೋಗ್ಯವಾಗಿರುವುದಲ್ಲದೆ, ನಯನ ಮನೋಹರವಾಗಿರುತ್ತದೆ. ಮಾತು ಪ್ರಕೃತ ಗ್ರಂಥಕ್ಕೂ ಅನ್ವಯಿಸುತ್ತದೆ. ಪುಸ್ತಕದಲ್ಲಿ ಕಾಣುವುದು ನಿರ್ಮಲ ಭಾವದ, ಮನಸ್ಸಿಗೆ ಸುಖ ಸಂತೋಷಗಳನ್ನು ತರುವ ತ್ರಿಪದಿಗಳು ಹಾಗೂ ಹಾಡುಗಳು. ನಮ್ಮ ಜನಪದ ಸಂಸ್ಕೃತಿ ಹಾಡುಗಳಲ್ಲಿ ಕೆನೆಗಟ್ಟಿ ನಿಂತಿದೆ.

ಕೆನೆಹಾಲಿನ ಸತ್ವದ ಸಾರಸಂಗ್ರಹ ತಿನ್ನಲು ಅದು ಬಲುರುಚಿ. ಅದರಿಂದ ದೇಹಕ್ಕೆ ಶಕ್ತಿ, ಮುಖಕ್ಕೆ ಕಾಂತಿ, ಮನಸ್ಸಿಗೆ ಆನಂದ ಕೃತಿಯಲ್ಲಿ ಮೂಡಿಬಂದಿರುವ ದೇವರಲ್ಲಿ ದೃಢವಾದ ಭಕ್ತಿ ನಂಬಿಕೆಗಳು, ಸಂಸಾರದ ವಿವಿಧ ಮುಖಗಳು, ಜೀವನೋತ್ಕರ್ಷಕಾರಕವಾದ ನೀತಿ ಬೋಧೆ, ಸುಂದರವಾದ ಪ್ರಕೃತಿ, ಪ್ರಕೃತಿ ವರ್ಣನೆಗಳು–ಇವು ಮನಸ್ಸಿಗೆ ಆನಂದವನ್ನೂ ಬದುಕಿಗೆ ಧೈರ್ಯವನ್ನೂ ಕೊಡುತ್ತದೆ. ನೆಲದಿಂದ ಕಾಲು ಕಿತ್ತಲಾಗದ, ಆರಡಿಗಿಂತ ಎತ್ತರಕ್ಕೆ ಬೆಳೆಯಲಾರದ ಮನುಷ್ಯನ ಕಲುಷಿತ ಮನಸ್ಸನ್ನು ನಿರ್ಮಲಗೊಳಿಸಿ, ಅದನ್ನು ಊರ್ಧ್ವಗಾಮಿಯಾಗಿ ಮಾಡಿ ಸಂಸ್ಕಾರಗೊಳಿಸುತ್ತದೆ. ಹಾಡುಗಳು, ನೂರಾರು ವರ್ಷಗಳಿಂದ ಇಂಥ ಸಾಹಿತ್ಯ ನಮ್ಮ ಜನರ ಬದುಕನ್ನು ನಡೆಸಿತು, ತಿದ್ದಿತು. ಸಂಸ್ಕಾರಗೊಳಿಸಿತು. ಮುಂದೆಯೂ ಇದು ಕೆಲಸವನ್ನು ಮಾಡುವುದರಲ್ಲಿ ಸಂದೇಹವಿಲ್ಲ. ಪ್ರಕೃತ ಗ್ರಂಥವೇ ಹೇಳಿಕೆಗೆ ಸಾಕ್ಷಿಯಾಗಿ ನಿಲ್ಲುತ್ತದೆ." (1938:10)

"ಸಂಗ್ರಹದಲ್ಲಿ ನಾವು ಪ್ರಕಟಿಸಿರುವ ತ್ರಿಪದಿಗಳು ಮುಖ್ಯವಾಗಿ ಹಾಸನ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಪ್ರಚಾರದಲ್ಲಿರುವುವು. ಎರಡು ಜಿಲ್ಲೆಗಳಲ್ಲಿ ಕೂಡ ಜನರ ಬಾಯಲ್ಲಿರುವ ಎಲ್ಲಾ ಹಾಡುಗಳನ್ನೂ ನಾವು ಕೂಡಿಸಲು ಸಾಧ್ಯವಾಗಲಿಲ್ಲ. ನಾವು ಮುಖ್ಯವಾಗಿ ಹೆಣ್ಣು ಮಕ್ಕಳ ತ್ರಿಪದಿಗಳನ್ನು ಮಾತ್ರ ಕೊಟ್ಟಿದ್ದೇವೆ. ಇವುಗಳಲ್ಲದೆ ಗಂಡಸರು ಹಾಡುವ ತೇರಿನ ಹಾಡು, ಜಾತ್ರೆಯ ಹಾಡು, ಕೋಲಾಟದ ಪದಗಳು, ರಂಗದ ಕುಣಿತದ ಪದಗಳು, ಸುಗ್ಗಿಯ ಹಾಡು, ಬಿತ್ತನೆ ಹಾಡು, ಮುಂತಾದುವು ಮೇಲಿನ ತ್ರಿಪದಿಗಳನ್ನು ಸಂಗ್ರಹಿಸುತ್ತಿರುವಾಗ ನಮಗೆ ದೊರೆತಿವೆ. ಅವುಗಳನ್ನು ಇನ್ನೊಂದು ಸಂಗ್ರಹದಲ್ಲಿ ಪ್ರಕಟಿಸಬೇಕೆಂದು ಮಾಡಿದ್ದೇವೆ." (1938:12)

ದೇವರು, ಪ್ರಕೃತಿ ವರ್ಣನೆ ಹಾಗೂ ಸಂಸಾರಕ್ಕೆ ಸಂಬಂಧಿಸಿದ ಹಾಡುಗಳನ್ನು ವರ್ಗೀಕರಿಕೊಳ್ಳಲಾಗಿದೆ. "ನಾವು ಹಳ್ಳಿಯವರಿಂದ ಇವುಗಳನ್ನು ಸಂಗ್ರಹಿಸಿದ ಕಾಲದಲ್ಲಿ ಇವು ಮೂರು ಭಾಗಕ್ಕೆ ಸೇರಿದುವೆಂದು ನಮಗೆ ಹಾಡುಗಳನ್ನು ಹೇಳಿದವರು ಹೇಳಲಿಲ್ಲ. ಪ್ರತಿಯೊಂದು ಭಾಗದಲ್ಲೂ ಹತ್ತು ಹದಿನೈದು ವಿಷಯಗಳ ಮೇಲೆ ಹಾಡುಗಳು ಇರುವುದು ಸರಿಯಷ್ಟೇ. ಭಾಗಗಳನ್ನೆಲ್ಲಾ ಮಾಡಿದವರು ನಾವೇ. ಅನೇಕ ವೇಳೆ ಒಂದೇ ವಿಷಯಕ್ಕೆ ಸಂಬಂಧಿಸಿದ ತ್ರಿಪದಿಗಳು ಒಂದೊಂದು ಕಡೆ ಒಂದೊಂದು ದೊರೆತಿವೆ. ಅವುಗಳನ್ನೆಲ್ಲಾ ಹೋಲಿಸಿಕೊಂಡು ಬೇರೆ ಬೇರೆ ವಿಷಯಗಳಿಗೆ ಸೇರಿಸಿದ್ದೇವೆ." (1938:14)

ಇಲ್ಲಿಯ ಹಾಡುಗಳನ್ನು ಹೇಗೆ ಸಂಗ್ರಹಿಸಿದುದು? ಯಾರಿಂದ ಸಂಗ್ರಹಿಸಿದುದು? ಹಾಗೂ ಯಾವ ಸಂದರ್ಭದಲ್ಲಿ ಸಂಗ್ರಹಿಸಿರುವುದು? ಎಂಬುದರ ಬಗ್ಗೆ ಸಂಗ್ರಾಹಕರು ಸ್ಪಷ್ಟವಾದ ನಿಲುವನ್ನು ವ್ಯಕ್ತಪಡಿಸಿದ್ದಾರೆ. "ಹಳ್ಳಿಯ ಹಾಡುಗಳನ್ನು ಸಂಗ್ರಹಿಸುವುದು

ಈಗ ಇಪ್ಪತ್ತು ವರ್ಷದ ಕೆಳಗೆ ಸುಲಭವಾಗಿದ್ದಷ್ಟು ಈಗ ಸುಲಭವಾಗಿಲ್ಲ. ಇದಕ್ಕೆ ಮುಖ್ಯ ಕಾರಣ ಆ ಹಾಡುಗಳು ಜನರ ಬಾಯಿಂದ ಮರೆಯಾಗುತ್ತಿರುವುದೇ ಆಗಿದೆ. ಕೆಲವು ಕಡೆಯಲ್ಲಂತೂ ರೈತನಿಗೆ ಹಾಡುಗಳು ಹೊಸದಾಗಿಯೇ ಕಾಣುತ್ತಿವೆ. ಈಗ ನಮ್ಮ ಸೀಮೆಗೆ ಕವಿದಿರುವ ಮಂಕಿನ ಬಹುಭಾಗವು ಹಳ್ಳಿಗಳಿಗೆ ಸೇರಿಕೊಂಡಿದೆ. ರೈತನ ಜೀವನ ಪೂರ್ಣವಾಗಿ ಅಮುಕಿ ಹೋಗಿದೆ. ರಾಗಿಯ ಮುದ್ದೆಯನ್ನೂ ಮೆಣಸಿನಕಾಯಿ ನೀರನ್ನೂ ಸಂಪಾದಿಸುವುದಕ್ಕೆ ಮನೆ ಮಕ್ಕಳೆಲ್ಲಾ ದುಡಿದರೂ ಸಾಲದಿರುವಾಗ ಅವನಿಗೆ ಇನ್ನಾವುದರ ಮೇಲೂ ಆಸೆಯುಂಟಾಗದಿರುವುದು ಸ್ವಾಭಾವಿಕವಾಗಿದೆ. ಪರಿಸ್ಥಿತಿಯಲ್ಲಿ ಅವನ ಸಾಹಿತ್ಯವು ಅವನ ಕಣ್ಣಿಗೇ ಮರೆಯಾಗಿದೆ" (1938:14) ಎನ್ನುತ್ತಾರೆ.

"ಹಾಡುಗಳಲ್ಲಿ ಬಹುಭಾಗ ಹಳ್ಳಿಯ ಹಳಬರಿಂದ ಸಂಗ್ರಹಿಸಿದುದು. ಈಗಿನ ಕಾಲದ ಪಡ್ಡೆ ಹುಡುಗರಾದ ಹಳ್ಳಿಯ ರೈತರಿಗೂ ರೈತಗಿತ್ತಿಯರಿಗೂ ಹಾಡುಗಳು ಚೆನ್ನಾಗಿ ಗೊತ್ತೇ ಆಗದೆ ಇರುವುದರಿಂದ ಸಂಗ್ರಹದಲ್ಲಿ ಅವರಿಂದ ನಮಗೆ ಯಾವ ಉಪಕಾರವೂ ಆಗಲಿಲ್ಲ. ಮನೆಮುಂದೆ ಬಯಲಾಟ ನಡೆಯುತ್ತಿದ್ದರೂ ಅದನ್ನು ಬಿಟ್ಟು 20–30 ಮೈಲಿ ಬಸ್ಸಿನಲ್ಲಿ ಸಿನಿಮಾಗಳನ್ನು ನೋಡಲು ಓಡುವ ಗೌಡರುಗಳಿಂದ ಇಂತಹ ಸಂಗ್ರಹ ಕಾರ್ಯಗಳಿಗೆ ಹೆಚ್ಚು ಸಹಾಯ ದೊರೆಯುವುದು ಸಾಧ್ಯವಿಲ್ಲ. ಆದುದರಿಂದ ಹಾಡುಗಳಿಗೆಲ್ಲಾ ನಾವು ಹಳ್ಳಿಯ ಮುದುಕಿಯರನ್ನೇ ಶರಣು ಹೋಗಬೇಕಾಯಿತು. ಒಂದು ಹಳ್ಳಿಯಲ್ಲಿ ಮುಖಂಡನಾದ ಗೌಡನೊಬ್ಬನನ್ನು 'ನಿನ್ನ ಊರಿನಲ್ಲಿ ಹಳೆಯ ಪದಗಳು ಯಾರಿಗೆ ಬರುತ್ತವೋ ನಮ್ಮೆದುರಿಗೆ ಹೇಳಿಸು' ಎಂದು ನಾವು ಕೇಳಿದಾಗ ಅವನು 'ಸ್ವಾಮಿ, ಅವೆಲ್ಲಾ ಯಾರಿಗೆ ಬರುತ್ತವೋ ಅವೆಲ್ಲಾ ಯಾರಿಗೆ ಈಗ ಬೇಕಾಗಿದೆ. ನಾನೂ ಗ್ರಾಮಫೋನು ತರಿಸಿದ್ದೇನೆ. ಬೇಕಾದ ಹಾಗೆ ಅದರ ಸಂಗೀತ ಕೇಳಬಹುದು' ಎಂದನು. ಹಳ್ಳಿಗಳಲ್ಲಿ ಮದುವೆ ಮುಂತಾದ ಕಾಲಗಳಲ್ಲಿ ಹಳ್ಳಿಯವರಿಂದ ಹೇಳಿಸುತ್ತಿದ್ದ ಹಳೆಯ ಕಾಲದ ಹಾಡುಗಳೆಲ್ಲ ಮರೆಯಾಗುತ್ತಿವೆ. ಬಡವರಾದವರು ಹಬ್ಬ ಹರಿದಿನಗಳಲ್ಲಿ ಜೀವಕ್ಕೆ ಒಮ್ಮು ಸ್ಫೂರ್ತಿಯನ್ನು ಉತ್ಸಾಹವನ್ನೂ ಕೊಡಲು ಹುಡುಕುತ್ತಿದ್ದ ಹಾಡುಗಳು ಅವರ ಜೀವನ ಕದನದ ಆರ್ತನಾದದಲ್ಲಿ ಕಿವಿಗೇ ಕೇಳಿಸದೆ ಲೀನವಾಗಿದೆ. ಹಳ್ಳಿಯಲ್ಲೊ ಹುಟ್ಟಿ ಬೆಳೆದ ಹಳ್ಳಿಯ ಸಾಹಿತ್ಯಗಳು ನಮಗೇಕೆ ಎಂದು ಕೇಳುವ ಹಳ್ಳಿಗರೂ ಇದ್ದಾರೆ" (1938: 12–14) ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಂಗ್ರಹಕಾರರು ಹಾಡುಗಳ ಸಂಗ್ರಹದ ಸಂದರ್ಭದಲ್ಲಿ ಎಚ್ಚರವಹಿಸಬೇಕಾದ ಕೆಲವೊಂದು ಸೂತ್ರಗಳನ್ನು ಗಮನಕ್ಕೆ ತಂದಿರುತ್ತಾರೆ ಹಾಗೂ ಸಂಗ್ರಹದಲ್ಲಿ ಆ ಕುರಿತಂತೆ ಎಚ್ಚರ ವಹಿಸಿ ಹಾಡುಗಳನ್ನು ಸಂಕಲಿಸಿದ್ದಾರೆ. "ಹಳ್ಳಿಯ ಹಾಡುಗಳನ್ನು ಸಂಗ್ರಹಿಸಲು

ಹೊರಡುವವರಿಗೆ ಸ್ಥಳಪುರಾಣಗಳೂ ಕಟ್ಟುಕಥೆಗಳೂ ರೈತರಲ್ಲಿ ಬಳಕೆಯಲ್ಲಿರುವ ಎಲ್ಲಾ ಮಾತುಗಳೂ ಚೆನ್ನಾಗಿ ಗೊತ್ತಿರಬೇಕು. ಇಲ್ಲದಿದ್ದರೆ ಹಾಡುಗಳಲ್ಲಿ ಅನೇಕ ಪದಗಳ ಅರ್ಥವೇ ಆಗುವುದಿಲ್ಲ. ಸಾಧಾರಣವಾಗಿ ಬಳಕೆಯಲ್ಲಿರುವ ಪದಗಳೂ ಕೂಡ ರೈತನ ಬಾಯಿಂದ ಬರುವಾಗ ಒಂದೊಂದು ಸಲ ಹೊಸ ಪದಗಳಂತೆಯೇ ತೋರುತ್ತವೆ. ಶಂಖ ಎಂಬುದಕ್ಕೆ ಸೊಂಕು, ಸೋಂಕು ಎಂದು ಅವನು ಹೇಳಿದರೆ ಅದನ್ನು ತಿಳಿದು ಕೊಳ್ಳಲು ಸ್ವಲ್ಪ ಕಷ್ಟವಾಗುತ್ತದೆ. ರೈತನ ಬಾಯಿಂದ ಪದಗಳನ್ನು ಕೇಳದೆ ಇದ್ದರೆ ಹಾಡುಗಳ ಸರಿಯಾದ ರೂಪವು ನಮಗೆ ತಿಳಿಯಲು ತೊಡಕಾಗುತ್ತದೆ. ಕಾರಣದಿಂದ ನಮಗೆ ಅರ್ಥವಾಗಲಿಲ್ಲವೆಂದು ನಾವು ಹಾಡುಗಳನ್ನು ಸಾಹಿತ್ಯವನ್ನೂ ತಿದ್ದುವುದೂ ಕೂಡ ನಮಗೆ ಅಪಾಯಕರವಾದುದು. ಆದುದರಿಂದ ನಾವು ಅರ್ಥವಾಗಲಿ, ಆಗದಿರಲಿ ಹಾಡುಗಳನ್ನು ಅವು ದೊರೆತಂತೆಯೇ ಪ್ರಕಟಿಸಿದ್ದೇವೆ. ಹಳ್ಳಿಯ ಹಾಡುಗಳನ್ನು ಸಂಗ್ರಹಿಸಲು ಹೊರಡುವವರಿಗೆ, ಒಂದೇ ಬಗೆಯಾದ ಹಾಡುಗಳೂ ಒಂದು ಹಾಡಿನಲ್ಲೇ ಒಂದೇ ಚರಣ ವ್ಯತ್ಯಾಸವಾಗಿ ಒಂದರಂತೆ ಒಂದು ಇರುವ ಹಾಡುಗಳೂ ಅನೇಕವಾಗಿ ದೊರೆಯುವುದು ಅನುಭವಕ್ಕೆ ಬರುವುದು.” (1938:15)

ಹಾಡುಗಳನ್ನು ಸಂಗ್ರಹಿಸಿರುವ ವಿಧಾನವನ್ನು ನಿದರ್ಶನವೊಂದರ ಮೂಲಕ ಹೇಳಿದ್ದಾರೆ. “ಹಾಡುಗಳಲ್ಲಿ ಸ್ವಲ್ಪಸ್ವಲ್ಪ ವ್ಯತ್ಯಾಸಗಳಿದ್ದು ಒಂದೇ ಬಗೆಯ ಇಷ್ಟೊಂದು ಹಾಡುಗಳು ಇರಲು ಕಾರಣವೇನೆಂದೂ ನಾವು (ಗೊರೂರು ರಾಮಸ್ವಾಮಿ ಅಯ್ಯಂಗಾರ್, ಬಿ.ಎನ್.ರಂಗಸ್ವಾಮಿ, ಗೊರೂರು ಕೃಷ್ಣಯ್ಯಂಗಾರ್ ಹಾಗೂ ಇತರ ಮಿತ್ರರು) ಯೋಚಿಸುತ್ತಿರುವಾಗ ನಮಗೆ ಒಂದು ಅನುಭವವುಂಟಾಯಿತು. ಗುಂಡಲು ಪೇಟೆಯಿಂದ ನಂಜನಗೂಡಿಗೆ ಹೋಗುತ್ತಿದ್ದ ಗಾಡಿಯೊಂದರಲ್ಲಿ ನಾವು ರಾತ್ರಿ ಕುಳಿತಿದ್ದೆವು. ಗಾಡಿ ನಿಧಾನವಾಗಿ ಹೋಗುತ್ತಿದ್ದುದರಿಂದ ಪ್ರಯಾಣದ ಬೇಸರಿಕೆ ಹೆಚ್ಚಾಗಿದ್ದಿತು. ಗಾಡಿಯವನಿಗೆ ಒಂದು ಪದ ಹೇಳು ಎಂದೆವು. ಅವನು ಬರೋಕಿಲ್ಲ ಎಂದನು. ಆಗ ನಾವೇ– ‘ಪಿಲ್ಲಿ ಕಾಲಿನವಳೆ ಪಿರಿಯ ಪಟ್ಟಣದವಳೆ......’ ಎಂಬುದಾಗಿ ಒಳ್ಳೆ ಬಿರುಸಾದ ದನಿಯಲ್ಲಿ ಹಾಡಿದೆವು. ಗಾಡಿಯವನಿಗೆ ಸಂಗೀತಗಾರರನ್ನು ಕೆಣಕಿದಂತೆ ಆಯಿತು. ಅವನು ತನ್ನ ದಪ್ಪವಾದ ತುಂಬಿದ ಎತ್ತಿದ ದನಿಯಲ್ಲಿ ನಮಗೆ ಪ್ರತಿಯಾಗಿ ಮತ್ತೊಂದು ಹಾಡನ್ನು ಹಾಡಿದನು. ಆ ಹಾಡಿನ ಕೊನೆಯಲ್ಲಿ ಅವನು ‘ಕ್ಯಾಹಹ’ ಎಂಬುದು ಸುಮಾರು ಒಂದು ಫರ್ಲಾಂಗಿನವರೆಗೆ ಇರುಳಿನ ನಿಶ್ಯಬ್ಧತೆಯನ್ನು ಭೇದಿಸಿಕೊಂಡು ಹೋಗಿ ಪ್ರತಿಧ್ವನಿತವಾಗುತ್ತಿದ್ದಿತು. ನಾವೂ ಅವನ ಹಾಡಿಗೆ ಪ್ರತ್ಯುತ್ತರ ಕೊಟ್ಟೆವು. ಮೊದಲು ಅವನ ಹಾಡಿನ ಮಾತುಗಳು ನಮಗೆ ತಿಳಿಯಲೇ ಇಲ್ಲ. ಬರಿಯ ಶಬ್ದ ಮಾತ್ರ;

ರಾಗವಾದ ಸದ್ದು ಮಾತ್ರ ಗೊತ್ತಾಗುತ್ತಿದ್ದಿತು. ಹೀಗೆ ಸುಮಾರು ಅರ್ಧಗಂಟೆ ನಾವು ಹಾಡಿದ ನಂತರ ನಮ್ಮ ಗಂಟಲು ಒಣಗಿ ಹೋಯಿತು. ನಾಲಗೆಯು ಅಂಟಿಕೊಂಡು ಮಾತೇ ಹೊರಡದಾಯಿತು. ಆಯಾಸದಿಂದ ಮೈ ಬೆವತು ಕತ್ತು, ಕಿವಿ, ಗದ್ದ ಎಲ್ಲಾ ನೋಯಲು ಪ್ರಾರಂಭವಾಯಿತು. ಧ್ವನಿಯು, ಕೀರಲು ದನಿಯಾಯಿತು. ಆದರೆ ಗಾಡಿಯವನು ಸ್ವಲ್ಪವೂ ಸೋತಂತೆ ತೋರಲಿಲ್ಲ. ಒಂದೊಂದು ಹಾಡಿಗೂ ಅವನು ಪರೆಯ್ಬಿದ ಹಾವಿನಂತೆ ಹೆಚ್ಚುಹೆಚ್ಚು ಉತ್ಸಾಹಿಯಾಗುತ್ತಿದ್ದನು. ಅವನ ನಾಲಗೆಯ ಮೇಲೆ ಆಡುತ್ತಿದ್ದ ಒಂದೊಂದು ಪದದಿಂದಲೂ ಅವನ ನಾಲಗೆ ಮಸೆದು ಹರಿತವಾಗಿ ಹಗುರವಾಗುತ್ತಿದ್ದಂತೆ ತೋರಿತು. ಹಾಡುಗಳ ವೈವಿಧ್ಯದಿಂದ ನಾವು ಅವನಿಗೆ ಸೋಲುವುದಂತೂ ಇರಲಿ, ಆ ಗಂಟಲಿನಿಂದ ಒಂದೇ ಸಮನಾಗಿ ಬಿಡುವಿಲ್ಲದೆ ಹೊರಡುತ್ತಿದ್ದ ಆ ದನಿಯ ಪ್ರವಾಹಕ್ಕೆ ನಾವು ಹೆದರಿದೆವು. ಹಾಡನ್ನು ನಿಲ್ಲಿಸಿ 'ಯಾವೂರಯ್ಯ ನಿನ್ನದು' ಎಂದೆವು. ಗಾಡಿಯವನು 'ನಂಜನಗೂಡು ವರೆಗೆ ಸೈ ಎನುಬಾ?' ಎಂದು ಗದರಿದನು. ನಾವು 'ಅಯ್ಯ ನಂಜನಗೂಡಲ್ಲ ಮೈಸೂರುವರೆಗಾದರೂ ನೀನು ಸೈ ಎನ್ನುವುದಕ್ಕೆ ಅಡ್ಡಿಯಿಲ್ಲ. ನಿನ್ನಿ ಗಂಟಲಿಗೆ ದೇವರು ಆ ತ್ರಾಣವನ್ನು ಕೊಟ್ಟಿದ್ದಾನೆ. ನಾವು ನಿನ್ನೊಂದಿಗೆ ಬಾಕಟ್ಟಿ ಗೆಲ್ಲುವುದಕ್ಕೆ ಬಂದಿಲ್ಲ. ನಿನ್ನಿಂದ ಹಾಡನ್ನು ಹಾಡಿಸಬೇಕೆಂದು ನಮಗೆ ಬಂದ ಪದಗಳನ್ನು ಹಾಡಿದೆವು' ಎಂದು ಸಮಾಧಾನ ಮಾಡಿದೆವು.

ನಾವು ಗಾಡಿಯವನೊಂದಿಗೆ ಸ್ಪರ್ಧಿಸುತ್ತಿದ್ದಾಗ ಒಂದು ವಿಷಯ ನಮ್ಮ ಅನುಭವಕ್ಕೆ ಬಂದಿತು. ನಾವು ಯಾವ ಹಾಡನ್ನು ಹಾಡಿದರೂ ಗಾಡಿಯವನು ಸ್ವಲ್ಪವೂ ಯೋಚಿಸದೆ ಅದೇ ಹಾಡನ್ನೇ ನಮಗೆ ಉತ್ತರವಾಗಿ ಹಾಡುತ್ತಿದ್ದನು. ಆದರೆ ಮಾತ್ರ ನಾವು ಹಾಡಿದ ತ್ರಿಪದಿಗೆ ತನ್ನದಾದ ಬೇರೆ ಒಂದು ಚರಣವನ್ನು ಸೇರಿಸುತ್ತಿದ್ದನು. ಇದರಿಂದ ಅದು ಒಂದು ಹೊಸ ಪದವೇ ಆಗುತ್ತಿದ್ದಿತು. **ಮೂಲ ತ್ರಿಪದಿ**ಯನ್ನು ಹಾಡಿದವರು ನಾವೇ ಆದರೂ, ಒಂದೊಂದು ಸಲ ಗಾಡಿಯವನು ಸೇರಿಸುತ್ತಿದ್ದ ಚರಣ ಅವನ ಆಶುಕವಿಕತೆಯೇ ಆದರೂ, ನಮ್ಮ ಮೂಲಕ್ಕಿಂತ ಚೆನ್ನಾಗಿ ತ್ರಿಪದಿಗೆ ಒಪ್ಪುತ್ತಿದ್ದಿತು. ಉದಾ:

ನಾವು ಹಟ್ಟೀ ಕಲ್ಲೀಗೆ ಪುಟ್ಟ ಗಂಧವಾನಿಕ್ಕಿ । ಪುಟ ಬಾಳೆ ಹಣ್ಣಸುಲಿದಿಕ್ಕಿ । ಒಳಗಿರೊ । ಸೀಸ್ತೇರು ಬಂದಕ್ಕಿ ತೊಳಸ್ಯಾಳೊ ॥ ಎಂದು ಹಾಡಿದರೆ ಗಾಡಿಯವನು – ಹಾದೀ ಕಲ್ಲಿಗೆ ತೇದ ಗಂಧವನಿಕ್ಕಿ । ಬೂದು ಬಾಳೆಹಣ್ಣ ಸುಲದಿಕ್ಕಿ । ಒಳಗಿರೋ । ಬಾಲೆ ಬಂದಕ್ಕಿ ತೊಳಸ್ಯಾಳೊ ॥

ನಾವು–ದಂಡೀನ ಹಾದೀಲಿ ಗೊಂಡೇವ ಮಾರುವವಳೆ' ಎಂದರೆ ಅವನು– 'ದಂಡೀನ ಹಾದೀಲಿ ದನ ಬರುವ ಓಣೀಲಿ' ಎಂದೂ ಅವನು ಹಾಡುತ್ತಿದ್ದನು.

ಇದರಿಂದ ಒಂದು ಅಂಶ ಸ್ಪಷ್ಟವಾಗುತ್ತವೆ. ಎಲ್ಲಾ ಕಡೆಯೂ ಹುಟ್ಟುವ ಉತ್ತಮ ಕಾವ್ಯಗಳಂತೆ ಹಳ್ಳಿ ಹಾಡುಗಳೂ ಮೊದಲು ಮೊದಲು ಹೃದಯದಲ್ಲಿ ತುಂಬಿದ ಭಾವಗಳನ್ನು ರೈತರು ಆಡಿಕೊಳ್ಳುವುದಕ್ಕಾಗಿಯ್ಯೇ ಹುಟ್ಟಿದವು. ರೈತನು ತನ್ನ ಸುಖ, ತನ್ನ ನೋವು, ತನ್ನ ಆಸೆ, ಸಂಶಯ, ಭಯ, ನಚ್ಚು, ಮಾತೃಪ್ರೇಮ, ಗಂಡನಲ್ಲಿ ಹೆಂಡತಿಗೆ ಇರುವ ಮನೋಭಾವ, ಬಂಜೆತನದ ಕಷ್ಟ, ದೇವರಲ್ಲಿ ಭಕ್ತಿ, ಪ್ರಕೃತಿಯನ್ನು ನೋಡಿ ಉಂಟಾದ ಆನಂದ, ಜೀವನದಲ್ಲಿ ತೋರಿದ ಒಂದು ವಿನೋದ ಹಾಸ್ಯ–ಇವುಗಳನ್ನು ತನ್ನ ಪಾಡಿಗೆ ತಾನು, ತನ್ನ ಮನಸ್ಸಿನ ತೃಪ್ತಿಗೆ ಹಾಡಿಕೊಳ್ಳಲು ಮೊದಲು ಹುಟ್ಟಿದ ಕಾವ್ಯಗಳೇ ಹಳ್ಳಿಯ ಹಾಡುಗಳು. ಆದರೆ ಅವುಗಳನ್ನು ಹಾಡುವಾಗ ಒಂದೊಂದು ಸಲ ಹೀಗೆ ಸ್ಪರ್ಧೆಯುಂಟಾಗಿ ಒಂದೇ ಭಾವವು ಹತ್ತಾರು ದಾರಿಯಲ್ಲಿ ಮಾತುಗಳಲ್ಲಿ ಪ್ರಕಟವಾಗಿ ಒಂದೇ ಕಡೆ ಇರುವ ಹಾಡುಗಳು ಸ್ವಲ್ಪ ವ್ಯತ್ಯಾಸದಿಂದ ಮತ್ತೊಂದು ಕಡೆಯೂ ಪ್ರಚಾರದಲ್ಲಿದ್ದು, ಅನೇಕ ವೇಳೆ ಪುನರುಕ್ತಿಯಾಗಿಯೂ ಮಾತಿನ ಗರಡಿಯಾಗಿಯೂ ತೋರುವುವು. ಆದರೆ ಅದಕ್ಕೆ ಕಾರಣ ನಾವು ಮೇಲೆ ಹೇಳಿದ ರೀತಿಯಾಗಿರುವುದರಿಂದ ಪುನರುಕ್ತಿ ಇತ್ಯಾದಿಗಳಿಂದ ಆ ಕವಿತೆಯ ಯೋಗ್ಯತೆಯನ್ನು ಅಳೆಯಲು ಪ್ರಯತ್ನಿಸಬಾರದು." (1938:16–19)

ಹಳ್ಳಿಯವರ ಬದುಕು, ಅವರ ಜೀವನ ಸ್ವರೂಪ, ಸ್ವಭಾವದ ಕುರಿತಂತೆ ಬೆಳಕು ಚೆಲ್ಲಲಾಗಿದೆ. "ಸಾಹಿತ್ಯ ಜನತೆಯ, ಹಳ್ಳಿಯವರ ಸಂಸ್ಕೃತಿಯ ಮಟ್ಟದ ಸಹಜವಾದ ಊರುಗೋಲು. ಸಾಹಿತ್ಯವನ್ನು ನೋಡಿದರೆ ನಮ್ಮ ದೇಶದ ಅತ್ಯಂತ ಅವಿದ್ಯಾವಂತನ 'ಜ್ಞಾನವಿವೇಕ'ಗಳು ಆಗ ಹೇಗಿದ್ದವೆಂಬುದು ಗೊತ್ತಾಗುತ್ತದೆ. ಸಾಹಿತ್ಯಾಭ್ಯಾಸವು ನಾವು ಬಿಟ್ಟುದುದರಿಂದ ನಮ್ಮ ಬಾಳಿನಲ್ಲಿ ಅಷ್ಟರ ಮಟ್ಟಿನ ಕಾವ್ಯಭಾವ ಕಡಿಮೆ ಆಗಿದೆ. ಸಾಹಿತ್ಯ ಬಾಳಿನ ಒಂದು ಕುಡಿ. ಬಾಳಿನಿಂದಲೇ ಸಾಹಿತ್ಯ. ಹಳ್ಳಿಯವರ ಬಾಳಿನಲ್ಲಿ ಅವರ ಭಾವ ಸಾಮಾನ್ಯವಾಗಿ ಸಮರಸವಾಗುವುದು. ಸಾಹಿತ್ಯ ಬರೆಯಬೇಕೆಂದು, ಬರೆದ ಸಾಹಿತ್ಯವಲ್ಲ ಅದು. ಬಾಳ್ವೆ ಪೂರ್ಣವಾಗಿ ಅದರಿಂದ ಸ್ವಾಭಾವಿಕವಾಗಿ ಹೊಮ್ಮಿದ ಹರ್ಷ ಸಾಹಿತ್ಯ ಅದು. ರಸೋದಧಿಯನ್ನು ಅನುಭವಿಸಬಲ್ಲ ಶಕ್ತಿಗೂ ಪಾಂಡಿತ್ಯಕ್ಕೂ ಸಂಬಂಧವಿಲ್ಲ. ಜೀವನದ ಸ್ವಾರಸ್ಯಗಳು ಅನುಭವವಾಗುವುದು ಜೀವನವನ್ನು ಅದರ ಪೂರ್ಣತೆಯಲ್ಲಿ ಬಾಳುವವರಿಗೆ, ಹಳ್ಳಿಯುವರು ಬಾಳಿನಿಂದ ಎಂದಿಗೂ ವಿಮುಖರಾದವರಲ್ಲ. ಯಾವಾಗಲೂ ಆಶಾವಾದಿಗಳೇ, ಪ್ರಕೃತಿಯ ಬಗೆಬಗೆಯ ವಿಕಾರಗಳೊಂದಿಗೆ ಹೊಂದಿಕೊಂಡು ಬಾಳಬೇಕಾದ ಆಶಾವಾದಿಗಳಾಗದಿದ್ದರೇ ಜೀವಿಸುವುದೇ ಕಷ್ಟ ಗಳಿಗೆ ಗಳಿಗೆಗೂ ಬದಲಾಗುತ್ತಿರುವ ಜಗತ್ತಿನಲ್ಲಿ ರೈತ ಪ್ರಕೃತಿಯಂತೆಯೇ ಅನಾದಿ. ಆ ಸಾಹಿತ್ಯವನ್ನು ನಿರ್ಮಿಸಿದವರು ಯಾರು? ಸಾಹಿತ್ಯ ಅಪೌರುಷೇಯವೆಂದರೂ

ಅಡ್ಡಿಯಿಲ್ಲ. ವಸಂತದಲ್ಲಿ ಪುಷ್ಪಗಳು ಅರಳುವಂತೆ, ಹಿಮದಲ್ಲಿ ಸೊರಗುವಂತೆ ರೈತನೂ ಪ್ರಕೃತಿಯ ಹಿಗ್ಗಿನೊಂದಿಗೆ ಹಿಗ್ಗುತ್ತಾ, ಕುಗ್ಗಿನೊಂದಿಗೆ ಕುಗ್ಗುತ್ತಾ, ವೃಕ್ಷಗಳಂತೆ ಪ್ರಕೃತಿಯ ಭಾರವಾಗಿಯೇ ಬಾಳುತ್ತಾನೆ. ಆದರೆ ಅವನಿಗೆ ಜೀವನದಲ್ಲಿ, ಜೀವನದ ಹೋರಾಟದಲ್ಲಿ ಬೇಸರಿಕೆ ಇಲ್ಲ. ದುಡಿತದ ಬಡತನದ ಅನ್ಯಾಯದ ಜೀವನದಲ್ಲಿ ರೈತನೂ ಗಳಿಗೆ ಗಳಿಗೆಗೂ ದೊರೆಯಬಹುದಾದ ಆನಂದವನ್ನು ಹುಡುಕುತ್ತಲೇ ಇರುತ್ತಾನೆ. ಜಗತ್ತು ನಿಜ. ಅದರ ಬಾಳು ನಿಜ. ಜೀವನದ ಹೋರಾಟವೂ ನಿಜ. ಹೋರಾಟದ ನಡುವೆ ನಾವು ಕದ್ದು ಸವಿಯುವ ಸುಖ ಆನಂದಗಳೂ ನಿಜ ಎಂಬುದು ಸಾಹಿತ್ಯದ ತಿರುಳು. ಹಳ್ಳಿಯ ಹಾಡು ಆಶಾವಾದಿ ಸಾಹಿತ್ಯ" (1938:19–20) ಎಂದು ರೈತನನ್ನು ಕೊಂಡಾಡಿದ್ದಾರೆ.

ರೈತನ ಜಾಣ್ಮೆ, ಆತನ ನೆನಪು ಶಕ್ತಿ ಇವುಗಳು ಒಬ್ಬ ಅಕ್ಷರಭ್ಯಾಸಿ ನಾಗರೀಕನಿಗಿಂತಲೂ ಮೇಲು ಮಟ್ಟದ್ದು. "ನಮ್ಮ ದೇಶದ ರೈತ ಇಂದಿನವನಲ್ಲ. ಅನೇಕ ಶತಮಾನಗಳಿಂದ ಬೆಳೆದು ಬಂದು ನಿತ್ಯನಾದವನು. ಅವನ ರಕ್ತದಲ್ಲಿ ನಮ್ಮ ಸಂಸ್ಕೃತಿಗಳು ಬಂದು ಅಪ್ಪಳಿಸಿದುದನ್ನು ಅವನು ಜೈಸಿಕೊಂಡು ನಿಂತಿದ್ದಾನೆ. ಬಾಳನ್ನು ಬಾಳುವುದರಲ್ಲೂ, ಕಷ್ಟಗಳಿಗೆ ಕೆಚ್ಚೆದೆಯನ್ನು ಒಡ್ಡಿ ಸಹಿಸಿ ಜಯಿಸುವುದರಲ್ಲೂ ಪ್ರಕೃತಿಯ ಸೌಂದರ್ಯವನ್ನು ಸವಿಯುವುದರಲ್ಲೂ, ಕಾವ್ಯವನ್ನು ಸೃಷ್ಟಿಸುವುದರಲ್ಲೂ, ಅವನು ಯಾರಿಗೂ ಕಡಿಮೆಯಿಲ್ಲ. ಆದರೆ ಅದಕ್ಕೆ ಅವನಿಗೆ ಒಂದು ಸಹಾನುಭೂತಿ, ಸ್ನೇಹ, ವಾತಾವರಣ ಬೇಕು. ಈಗ ನಮಗೆ ರೈತನೂ ಮನುಷ್ಯ, ಅವನಿಗೂ ಕಷ್ಟ, ಸುಖ, ಆಸೆ, ಪ್ರೇಮ, ಭಕ್ತಿ, ಕಾವ್ಯ ಉಂಟು ಎಂಬುದೇ ಹೊಳೆಯುವುದಿಲ್ಲ. ಅವನನ್ನು ಜ್ಞಾಪಿಸಿಕೊಂಡ ಕೂಡಲೇ ಬರಿಯ ಕೂರೆ ಚಿಂದಿಯ ದುಡಿಯುವವನ ಜ್ಞಾಪಕ ಮಾತ್ರ ನಮಗೆ ಉಂಟಾಗುತ್ತದೆ. ನಮ್ಮ ಜನರಲ್ಲಿ ನಮ್ಮ ಜನದ ಶಕ್ತಿಯಲ್ಲಿ ನಮ್ಮ ಜನದ ಯೋಗ್ಯತೆಯಲ್ಲಿ ಯಾವ ಕೆಲಸವನ್ನಾದರೂ ಇವರು ಸಾಧಿಸಬಲ್ಲವರೆಂಬ ತತ್ವದಲ್ಲಿ, ನಮ್ಮ ಜನರಿಗೆ ನಮ್ಮ ಸರ್ಕಾರಕ್ಕೆ ನಮ್ಮ ಬಂಡವಾಳಗಾರರಿಗೆ ಪೂರ್ಣವಾಗಿ ನಂಬಿಕೆ ಬರಬೇಕು. ಆಡಳಿತ, ಕೈಗಾರಿಕೆ, ವ್ಯವಸಾಯ ಧೈರ್ಯ ಸಾಹಸ ಯಾವುದರಲ್ಲೂ ನಮ್ಮವರು ಇತರರಿಗೆ ಕಡಿಮೆ ಇಲ್ಲವೆಂಬ ನಂಬಿಕೆ ನಮ್ಮ ದೇಶದ ಮುಖಂಡರಿಗೂ ಅರಮನೆ – ಗುರುಮನೆಗಳಿಗೂ ಬರಬೇಕು. ಆಗ ನಮ್ಮ ರೈತನಲ್ಲಿ ಸುಪ್ತವಾಗಿರುವ ತೇಜಸ್ಸು ಪ್ರಕಾಶಿಸಲು ಪ್ರಾರಂಭವಾಗುವುದು. ಅವನು ಜಗತ್ತಿನಲ್ಲಿ ಮತ್ತಾರಿಗೂ ಕಡಿಮೆಯಿಲ್ಲದಂತೆ ಬಾಳಿ ನಮ್ಮ ಇಂದಿನ ಅಸ್ವಾಭಾವಿಕ ಜೀವನಕ್ಕೆ ಹೊಸ ಶಕ್ತಿಯನ್ನು ಕೊಟ್ಟು ನಮ್ಮ ಬಾಳಿಗೆ ಸಾರ್ಥಕವನ್ನುಂಟು ಮಾಡುವುದು" (1938:22–23) ಎಂಬುದಾಗಿ ರೈತನ ಕುರಿತಂತೆ "ಆತನ ಯೋಗ್ಯತೆಯನ್ನು, ನೈಜ ಬದುಕನ್ನು ಸಂಕಲನದ ಹಾಡುಗಳಲ್ಲಿ ಗುರುತಿಸಬಹುದೆಂದು ಅಭಿಪ್ರಾಯಪಡುತ್ತಾರೆ.

ಹಾಗೂ ಗ್ರಂಥದಲ್ಲಿ ಸಂಗ್ರಹಿಸಿರುವ ಹಾಡುಗಳು ರೈತನಿಗೆ ಅವಕಾಶ ಸಿಕ್ಕಿದರೆ ಅವನ ಸಂಸ್ಕೃತಿಯು ಯಾವ ಮಟ್ಟಕ್ಕೆ ಏರಬಲ್ಲದೆಂಬುದನ್ನು ತೋರಿಸಿ ಅವನಲ್ಲಿ ನಮ್ಮ ನಂಬಿಕೆಯೂ ನಚ್ಚೂ ಹೆಚ್ಚುವಂತೆ ಮಾಡಲು ಸಹಾಯಕವಾದರೆ ನಮ್ಮ ಉದ್ದೇಶವೂ ಸಾರ್ಥಕವಾಗುವುದೆಂದು ಭಾವಿಸುತ್ತೇವೆ" – ಎಂದು ಸಂಗ್ರಾಹಕರು ಹೇಳಿಕೊಂಡಿದ್ದಾರೆ.

'ಹಳ್ಳಿಯ ಹಾಡುಗಳು' ತ್ರಿಪದಿ ಛಂದಸ್ಸಿನಲ್ಲಿವೆ. ಒಟ್ಟು 1150 ತ್ರಿಪದಿಗಳಿವೆ. 'ಹಳ್ಳಿಯ ಹಾಡುಗಳು' (1938) ಮೊದಲ ಮುದ್ರಣದಲ್ಲಿ 750 ತ್ರಿಪದಿಗಳಿದ್ದವು. 1973ರ ನಾಲ್ಕನೆ ಮುದ್ರಣದಲ್ಲಿ 400 ರಷ್ಟು ತ್ರಿಪದಿಗಳ ಸೇರ್ಪಡೆಯಾಗಿದೆ. ಸಂಗ್ರಾಹಕರೇ ಹೇಳಿಕೊಂಡಿರುವಂತೆ, 'ಹಳ್ಳಿಯ ಹಾಡುಗಳು' ಸಂಗ್ರಹದಲ್ಲಿ ಮೂರು ವರ್ಗದ ಹಾಡುಗಳಿವೆ. ಒಂದನೆಯ ವರ್ಗದಲ್ಲಿ, ದೇವರ ಕುರಿತಂತೆ ಹಾಡುವ ಹಾಡುಗಳಿವೆ. ಎರಡನೇ ವರ್ಗದಲ್ಲಿ, ಪ್ರಕೃತಿಯ ವರ್ಣನೆಯನ್ನು ಹೇಳುವ ಹಾಡುಗಳಿವೆ ಹಾಗೂ ಮೂರನೆಯ ವರ್ಗದಲ್ಲಿ, ಸಂಸಾರದ ಸುಖ ದುಃಖಗಳನ್ನು ಹೇಳುವ ಹಾಡುಗಳಿವೆ. ಸಂಸಾರದ ಸುತ್ತ ನೂರಾರು ಘಟನೆಗಳಿರುತ್ತವೆ. ಸಂಗ್ರಹದಲ್ಲಿರುವ ಹಾಡುಗಳ ಘಟನೆಗಳು ಹೆಣ್ಣಿನ ಬದುಕಿನ ಘಟನೆಗಳೇ ಆಗಿದ್ದುವು. ಆಕೆಯನ್ನು ಪ್ರಕೃತಿಯ ಜೊತೆಗೆ ಹೋಲಿಕೆಯಾಗಿ ಹೇಳಿರುವ ಹಾಡುಗಳೇ ಹೆಚ್ಚು.

ದೇವರಿಗೆ ಸಂಬಂಧಿಸಿರುವಂತೆ 13 ಹಾಡುಗಳಿವೆ. ಪ್ರಾರ್ಥನೆ, ತಿರುಪತಿ ವೆಂಕಟರಮಣ, ಬಿಳಿಗಿರಿರಂಗ, ಹನುಮ, ಸರಸ್ವತಿ, ತೇರು, ಏಳುಮಲೆ ಮಾದೇಶ್ವರ, ಬೇಟೆಗಾರ–ರಂಗದೇವರು, ಕನ್ನಂಬಾಡಿ ಅಮ್ಮ, ಸಿದ್ದೇಶ್ವರ, ಗ್ರಾಮದೇವತೆ–ಊರಿನ ಅಮ್ಮ, ನಂಜುಂಡ, ಹಾಗೂ ಕಳಲೆ ರೇವಣ ಸಿದ್ದೇಶ್ವರ ಹೀಗೆ 150 ತ್ರಿಪದಿಗಳಿವೆ.

ವರ್ಣನೆಗೆ ಸಂಬಂಧಿಸಿರುವಂತೆ 9 ಹಾಡುಗಳಿದ್ದು, ಮಸೂರು–ಬೆಂಗಳೂರು, ಮಳೆ, ಮುಡುಕು ತೊರೆ, ವರ್ಣನೆ, ಮೂಡಣವರು, ಮೂಡಣ ಮುತ್ತಿನ ಕೆರೆ, ಬಂಡಿ, ಹಾಗೂ ಗಟ್ಟದ ಎತ್ತು ಎಂಬ 102 ತ್ರಿಪದಿಗಳಿವೆ.

ಸಂಸಾರಕ್ಕೆ ಸಂಬಂಧಿಸಿದಂತೆ 41 ಹಾಡುಗಳಲ್ಲಿ – ನಲ್ಲ, ಗೆಣೆಯ, ಮಾವನ ಮಗಳೆ, ಗಣಿಕಾತಿ, ಬಸುರಿ, ಎಣ್ಣೆ ಮಜ್ಜನ, ಹಸುಳೆ, ನೀತಿ, ಕಂಡವರ ಹೆಣ್ಣು, ಸಂಗಾತಿ, ಬಾಗಿಲು ತಡೆವ ಹಾಡು, ಜೋಗುಳ, ತವರು, ಗಂಡ–ಹೆಂಡತಿ, ಆಗದ ನೆಂಟರು, ಚಿಕ್ಕಹೆಂಡತಿ, ಸೋದರ–ಸೋದರಿ, ಸೋದರ ಮಾವ, ಮಗಳು, ಸೊಸೆ, ಬಂಜೆ, ಅತ್ತಿಗೆ, ಸೂಳೆ, ಹೆಣ್ಣಿನ–ಹೆಣ್ಣು, ಹಡೆದವರ ಪಾಡು, ಹೆಣ್ಣು ಕಳುಹಿಸಿ ಕೊಡುವುದು, ಹರಕೆ, ಭತ್ತವನ್ನು ಕುಟ್ಟುವುದು, ರೂಢಿ, ಬುದ್ಧಿವಾದ, ದನಿತೋರೆ, ಪ್ರಶ್ನೆ, ಪ್ರಸಂಗ, ನೀನು ಬರಬೇಕು ಮದುವೀಗೆ, ಅಲ್ಲೊಂದು ಇಲ್ಲೊಂದು, ಹಾಸ್ಯ, ಆಂಜನೇಯ

1,2,3, ಗರುಡ, ಜಾಣಾರ ದೇವಿ, ಚಾಮುಂಡಿ, ಗಣಪತಿ, ಕೊನೆ ಎಂಬ 880ರಷ್ಟು ತ್ರಿಪದಿಗಳಿವೆ.

ಆಂಜನೇಯನಿಗೆ ಸಂಬಂಧಿಸಿದ ಮೂರು **ಹಾಡು**ಗಳು ಗರುಡ. ಜಾಣಾರ ದೇವಿ, ಚಾಮುಂಡಿ ಹಾಗೂ ಗಣಪತಿ ಇವುಗಳ ಹೊರತು ಉಳಿದೆಲ್ಲವುಗಳೂ ತ್ರಿಪದಿಗಳೇ. ಕುರಿತಂತೆ ಸಂಗ್ರಹಕಾರರು "ಆಂಜನೇಯ ಗರುಡ, ಚಾಮುಂಡಿ ಇವು ತ್ರಿಪದಿಯ ಜಾತಿಗೆ ಸೇರಿದವುಗಳಾದರೂ ತ್ರಿಪದಿಯಿಂದ ವ್ಯತ್ಯಾಸವಾಗಿವೆ. ಇವು ಕೋಲಾಟದ ಪದಗಳು. ಆಂಜನೇಯ ಎಂಬುದರಲ್ಲಿ ಮೂರು ವಿಭಾಗವಿದೆ. ಬಹುಸೊಗಸಾದ ಹಾಡು, ಕೋಲಾಟದ ಧಾಟಿಗೆ ತುಂಬ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಆಂಜನೇಯನ ಪದ ಮೂರನ್ನೂ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿದ್ದಾಗ ಖೈದಿಗಳು ಹಾಡುತ್ತಿದ್ದುದನ್ನು ಕೇಳಿ ಸಂಗ್ರಹಿಸಿದೆ. ಉಳಿದವು ನಮ್ಮ ಹಳ್ಳಿಯವರಿಂದ ಸಂಗ್ರಹಿಸಿದ ಹಾಡುಗಳು" (1938:265) ಎಂದು ಹೇಳಿದ್ದಾರೆ.

ಹಾಡುಗಳ ಸಂಗ್ರಹದ ಸಂದರ್ಭವು ಒಂದು ಕಾಲಘಟ್ಟದ ಸಂಸ್ಕೃತಿಯ ಚಾರಿತ್ರಿಕ ಜಾಗೃತಿಯನ್ನು ಪ್ರತಿನಿಧಿಸುತ್ತದೆ. ರೈತನೊಬ್ಬನ ನೆನಪು ಶಕ್ತಿ, ನಿರೂಪಣಾ ವಿಧಾನ ಅಪಾರವಾದದ್ದು. ತನ್ನ ಹಳ್ಳಿಯ ಅನುಭವಗಳನ್ನು ದೇವರ ಸ್ತುತಿಯಲ್ಲಿ, ಪ್ರಕೃತಿಯ ವರ್ಣನೆಯಲ್ಲಿ ಹಾಗೂ ಸಂಸಾರದ ಒಳಗುಟ್ಟುಗಳಲ್ಲಿ ಹಿಡಿದಿಟ್ಟು, ತನ್ನ ಸ್ವಂತ ನಿರೂಪಣೆಯಲ್ಲಿ ವಿವರಿಸುತ್ತಾನೆ ಎಂಬ ನಂಬಿಕೆ ಇಲ್ಲಿದೆ. ಹಾಡುಗಳನ್ನು ಸಂಗ್ರಹಿಸಿರುವ ವಿಧಾನ ತುಂಬಾ ಸ್ವಾರಸ್ಯದ್ದು. ಮುನ್ನುಡಿಯಲ್ಲಿ ಹೇಳಿಕೊಂಡಿರುವಂತೆ ಸಂಗ್ರಹಕನಿಗೂ ನಿರೂಪಕನಷ್ಟೇ ಅನುಭವ ಜ್ಞಾನಬೇಕು. ಇಲ್ಲದಿದ್ದಲ್ಲಿ ಹಾಡುಗಳ ಸಂಗ್ರಹಗಳು ಸಂಗ್ರಾಹಕನನ್ನು ದಿಕ್ಕು ತಪ್ಪಿಸುತ್ತವೆ ಎಂಬ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಹಿಂದಿನ ಸಂಕಲನಗಳಲ್ಲಿ ಕಾಣಿಸಿಕೊಂಡ ಉದಾರವಾದಿ ಧೋರಣೆಯು ಇಲ್ಲಿಯೂ ಕಾಣಿಸಿಕೊಂಡಿದೆ.

1938ರಲ್ಲಿ **ಬಿ.ಯನ್.ರಂಗಸ್ವಾಮಿ**ಯವರ **'ಹಳ್ಳಿಯ ಹಾಡುಗಳು'** ಎಂಬ ಕೃತಿ ಪ್ರಕಟವಾಯಿತು. ಜನಪದ ಸಾಹಿತ್ಯ ಸಂಗ್ರಹದ ಒಪ್ಪ ಓರಣಕ್ಕೆ ಕೃತಿ ಹೆಸರಾದುದು. ಬಯಲು ಪ್ರದೇಶದ ಪ್ರಾತಿನಿಧಿಕ ಗೀತೆಗಳನೇಕವು ಸೇರಿವೆ. ರಂಗಸ್ವಾಮಿಯವರ ಸಂಗ್ರಹವು ಪ್ರಕಟನೆಗೊಳ್ಳುವುದಕ್ಕೆ ಕಾರಣರಾದವರು ಗೊರೂರು ರಾಮಸ್ವಾಮಿ ಅಯ್ಯಂಗಾರರು. ಸಂಕಲನವು ಕನ್ನಡದ ಕೆಲವೇ ಅಪೂರ್ವ ಸಂಗ್ರಹಗಳಲ್ಲಿ ಒಂದಾಗಿದೆ. ಉತ್ತರ ಕರ್ನಾಟಕದ ಅತ್ಯುತ್ತಮ ಅನೇಕ ತ್ರಿಪದಿಗಳಿವೆ.

1938ರಲ್ಲಿ **ಮಾ.ಗಾ.ಶೆಟ್ಟಿ ಬಂಕಿಕೋಡ್ಲ** ಎಂಬವರು ಬೆಳಂಬಾರ ಗ್ರಾಮ ಪ್ರದೇಶದ ಸುಗ್ಗಿಯ ಪದಗಳನ್ನು ಸಂಗ್ರಹಿಸಿ **'ಒಕ್ಕಲಿಗರ ಹಾಡು'** ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ.

1940ರಲ್ಲಿ **'ಮಾನೌಮಿಯ ಚೌಪದ'** ಹಾಡುಗಳ ಸಂಕಲನವು ಪ್ರಕಟವಾಯಿತು. ಸಂಕಲನವನ್ನು **ಎನ್.ಅನಂತ ರಂಗಾಚಾರ್** ಸಂಪಾದಿಸಿದ್ದಾರೆ. ಸಂಕಲನದ ಮುನ್ನುಡಿಯಲ್ಲಿ 'ಮಾನೌಮಿಯ ಚೌಪದ'ದ ಕುರಿತು ದೀರ್ಘ ವಿವರಣೆಯಿದೆ. 'ಮಾನೌಮಿಯ ಚೌಪದ' ಹಾಡುಗಳ ಕವಿ, ಕಾಲ, ದೇಶದ ಬಗ್ಗೆ ಹೇಳುತ್ತಾ, "ಗ್ರಂಥಕರ್ತನ ಕಾಲ, ದೇಶ, ಕುಲ, ಗೋತ್ರಗಳ ವಿಷಯದಲ್ಲಿ ಗ್ರಂಥದಲ್ಲಿ ನಿರ್ದಿಷ್ಟವಾಗಿ ಏನನ್ನೂ ಹೇಳಿಲ್ಲ. ಆದರೂ ಆ ವಿಷಯವಾಗಿ ಊಹಿಸುವುದಕ್ಕೆ ಸಾಕಾದಷ್ಟು ಅವಕಾಶಗಳು ಗ್ರಂಥದಲ್ಲಿ ಸಿಕ್ಕುವುದು. ಕವಿಯು ಗ್ರಂಥಾದಿಯಲ್ಲಿ ಗಣೇಶ ಹಾಗೂ ಸರಸ್ವತಿಯ ಪ್ರಾರ್ಥನೆಯ ಮೇಲೆ ಮೂಗೂರಿನ ದೇವತೆಗಳಾದ ದೇಶೇಶ್ವರ, ತ್ರಿಪುರಾಂಬಾ, ವೀರಭದ್ರ ಮಹಾಕಾಳಿ, ಬಸವೇಶ್ವರ, ಮೂಗೂರು ಹನುಮಂತ ಮೊದಲಾದವರನ್ನು ಪ್ರಾರ್ಥಿಸಿರುವುದರಿಂದಲೂ ಗ್ರಂಥದಲ್ಲಿ ಕಟ್ಟಾಲು ಮೂಗೂರು ಹನುಮಂತನಿವನು. ಧರೆಯೊಳತ್ಯಧಿಕ ಕೈಲಾಸ ತಾನೆಂದು, ಮೆರೆವ ಮುಗೂರು ಸ್ಥಳದೊಳಗೆ ತಾ ನಿಂದು ಎಂದು ಮೊದಲಾಗಿ ಮೂಗೂರನ್ನು ವಿಶೇಷವಾಗಿ ಕೊಂಡಾಡಿರುವುದರಿಂದಲೂ ಗ್ರಂಥಕರ್ತನೂ ಮೂಗೂರಿನವನೆಂದು ಊಹಿಸಬಹುದು. ಹಾಗೆಯೇ ದೊಡ್ಡ ಕೃಷ್ಣರಾಜ ಒಡೆಯರು ದಳವಾಯಿ ವೀರಪ್ಪಾ ಹಾಗೂ ದಳವಾಯಿ ದೇವರಾಜಯ್ಯ ಮೊದಲಾದವರನ್ನು ವರ್ಣಿಸಿರುವುದರಿಂದ ಗ್ರಂಥವು ಆ ಕಾಲದಲ್ಲಿ ಹುಟ್ಟಿರಬಹುದು." (1940–10)

"ಶ್ರೀ ಮನ್ಮಹಾರಾಜ ದೊಡ್ಡ ಕೃಷ್ಣರಾಜ ಒಡೆಯರ ಕಂಠೀರವ ಮಹಾರಾಜ ಒಡೆಯರ ತರುವಾಯ ಕ್ರಿ.ಶ. 1714ರಲ್ಲಿ ಶ್ರೀರಂಗಪಟ್ಟಣದಲ್ಲಿ ಮೈಸೂರು ರತ್ನ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾಗಿ ಕ್ರಿ.ಶ. 1732ರ ವರೆಗೂ ರಾಜ್ಯಭಾರ ಮಾಡಿದರು. ಇವರ ಕಾಲದಲ್ಲಿ ಹಿಂದಿನಿಂದ ದಳವಾಯಿಯಾಗಿದ್ದ ಕಳಲೆಯ ವೀರರಾಜಯ್ಯನೂ ತರುವಾಯ ಆತನ ಮಗ ದೇವರಾಜಯ್ಯನೂ ದಳವಾಯಿಯಾಗಿದ್ದರು. ಕ್ರಿ.ಶ. 1724ನೆಯ ಕ್ರೋಧಿ ಸಂವತ್ಸರದಲ್ಲಿ ಆರ್ಕಾಟು ನವಾಬನ ಕಡೆಯ ದಿವಾನನಾದ ಶಿದ್ಧೋ ಘೋರ್ಪಡೆಯೂ ಶ್ರೀರಂಗಪಟ್ಟಣಕ್ಕೆ ಮುತ್ತಿಗೆಯನ್ನು ಹಾಕಿದನು. ದೊರೆಗಳವರು ಕೋಟೆಯ ಮೇಲಿನಿಂದ ಗುಂಡುಗಳನ್ನು ಹೊಡೆಸಲು ಆ ಪೆಟ್ಟನ್ನು ತಡೆಯಲಾರದೆ ಘೋರ್ಪಡೆಯು ಸೊತು ಓಡಲು, ಮಹಾರಾಜರು ಶತ್ರು ಸೈನ್ಯದವರ ಕಡೆಯವರಲ್ಲಿ ಅನೇಕರಿಗೆ ಕಿವಿಮೂಗುಗಳನ್ನು ಕೋಯ್ಸಿ, ಆ ದಂಡಿನಲ್ಲಿದ್ದ ಆನೆ, ಕುದುರೆ, ವಸ್ತ್ರಾಭರಣ ಮುಂತಾದ ಪದಾರ್ಥಗಳನ್ನು ತೆಗೆದುಕೊಂಡು ಬಂದರು. ಅನಂತರ ಪರಾಭವ ಸಂವತ್ಸರದಲ್ಲಿ ಮರಾಟೆಯವರ ಕಡೆಯ ಬಾಜೀರಾವ್ ಎಂಬ ಸರದಾರನು

ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದು ಶ್ರೀರಂಗಪಟ್ಟಣದ ಫಿರಂಗಿಯ ಏಟುಗಳನ್ನು ಸಹಿಸಲಾರದೆ ಹಿಂತಿರುಗಲು ಮಹಾರಾಜರು ಅವನ ಸಮಸ್ತ ಪದಾರ್ಥಗಳನ್ನು ವಶಪಡಿಸಿಕೊಂಡರು." (1940:9–10)

"ಹೊಕ್ಕು ಬಾ ಇಕ್ಕೇರಿಯವರ ಸಬಡಿದೆ । ಹೊಕ್ಕು ಬಾ ಶೀವೋಯವರ ಒಡಿಸಿದೆ । ರಕ್ಕಸರ ಪೋಲ್ವ ತುರುಕರನು ನೀ ಗೆಲಿದೆ । ದಿಕ್ಕು ದೆಸೆಯಲಿ ಬಹಳ ಕೀರ್ತಿಯನು ಪಡೆದೆ ॥" "ತೆಲುಗಾಣ್ಯ ಸಾಂಬಳ್ಳಿ ಇಕ್ಕೇರಿಗಳನು । ಮಲೆಯಾಳ ಕೊಡಗು ಕೊಂಕಣ ದೇಶಗಳನು । ಬಲಹು ಬಂಕಾಪುರ ಗುಜರಿ ರಾಷ್ಟ್ರವನು । ಸುಲಭದಿಂ ಕಟ್ಟಿ ನೀ ನಾಳ್ದೆಯೆಲ್ಲವನು ॥" (1940:12–13)

"ಇರಿದೆದ್ದ ಕಾಲಾಳ ಕಡಿದೆ ನೀ ಬೇಗ । ಗದರಿಸಿದೆ ನೀ ಕೊಯ್ದು ಕಡಿದೆ ನೀ ಬೇಗ । ಬೆದರಿ ಓಡಿದವು ತುರುಕರ ಕುದುರೆ ಆಗ । ಬೆದರಿ ಓಡಿದವು ತುರುಕರ ಕುದುರೆ ಆಗ । ಮುದದಿಂದ ಮೆಚ್ಚಿದನು ನರಪತಿ ಬಲು ಬೇಗ ॥" (1940:15)

"ಮೈಸೂರು ರಾಜಮನೆತನವು ಬಹುಕಾಲದಿಂದಲೂ ಸಾಹಿತ್ಯ ಸೇವೆಯ ವಿಷಯದಲ್ಲಿ ಪೂರ್ಣಾಸಕ್ತಿಯನ್ನು ತೋರಿಸಿರುವುದು ಜಗತ್ಪ್ರಸಿದ್ಧವಾದ ವಿಷಯ. ಕೃಷ್ಣರಾಜ ಒಡೆಯರ ಪಿತಾಮಹರಾದ ಚಿಕ್ಕದೇವರಾಜ ಒಡೆಯರು ಸ್ವಯಂಕವಿಗಳಾದ್ದುದಲ್ಲದೆ, ಆಸ್ಥಾನ ವಿದ್ವನ್ಮಣಿಗಳಾದ ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಹೊನ್ನಮ್ಮ ಮೊದಲಾದ ಅನೇಕ ಕವಿಗಳಿಗೆ ನಾನಾ ರೀತಿಯಿಂದ ಪ್ರೋತ್ಸಾಹವನ್ನು ಕೊಟ್ಟು ಕನ್ನಡ ಸಾಹಿತ್ಯದಲ್ಲಿ ಒಂದು ನವಯುಗವು ಮೂಡುವಂತೆ ಮಾಡಿದ್ದರು. ಅವರ ಪುತ್ರರಾದ ದೊಡ್ಡ ಕೃಷ್ಣರಾಜ ಒಡೆಯರಿಗೆ ಆ ಗುಣಗಳಿಲ್ಲದಿರಲಿಲ್ಲ. ಇವರೂ ಉತ್ತಮರೀತಿಯ ಸಾಹಿತ್ಯ ಕಲಾಭಿಮಾನಿಗಳು. ಸಾಹಿತ್ಯಭಿಮಾನಿಗಳಿಗಾರಿಗಾದರೂ ಇವರ ಆಸ್ಥಾನದಲ್ಲಿ ಮನ್ನಣೆಯು ದೊರಕುತ್ತಿತ್ತು. ಅಷ್ಟೇಕೆ, ಮಹಾರಾಜರವರ ಕುಟುಂಬ ವರ್ಗಕ್ಕೆ ಸೇರಿದ ಚೆಲುವಾಜಮ್ಮಣ್ಣಿಯವರು ಉತ್ತಮ ಕವಿಗಳಾಗಿದ್ದು 'ವರನಾಂದಿಯ ಕಲ್ಯಾಣ' ಲಾಲಿಯ ಪದಗಳು ಮೊದಲಾದ ಕವಿತೆಗಳನ್ನು ರಚಿಸಿ ಕೀರ್ತಿ ಪಡೆದಿದ್ದಾರೆ. ಮಹಾರಾಜರ ಔದಾರ್ಯ ಗುಣದಿಂದ ಪ್ರಸಕ್ತ ಗ್ರಂಥಕರ್ತನೂ ಅವರ ಆಶ್ರಯವನ್ನು ಪಡೆದು ರಾಜರ ಕೀರ್ತಿ ಧ್ವಜವನ್ನು ತಾಂಡವಾಡಿಸುವ ಚೌಪದವನ್ನು ರಚಿಸಿರಬೇಕು. ಆದುದರಿಂದ ಗ್ರಂಥದ ಕಾಲವು ಸುಮಾರು ಕ್ರಿ.ಶ. 1730 ಆಗಿರಬಹುದು." (1940:12) ಎಂದು ಸಂಪಾದಕರು ಅಭಿಪ್ರಾಯ ಪಡುತ್ತಾರೆ.

ಸಂಕಲನದಲ್ಲಿರುವ ಹಾಡುಗಳನ್ನು ನಂಜುಂಡ, ಗೋಪಾಲ ಕೃಷ್ಣ ನಂಜುಂಡ, ತಿಬ್ಬಮ್ಮ, ಮೂಗೂರ ದೇಶೀಶಲಿಂಗ, ಮೂಗೂರ ಹನುಮಂತ ಮೊದಲಾದ

ಅಂಕಿತವಿರುವವನು ಬರೆದಿರಬೇಕೆಂದು ಊಹಿಸಬಹುದು. ಹೆಚ್ಚಿನ ಎಲ್ಲಾ ಪದ್ಯಗಳು '.....ಪ್ರೀತಿಯಿಂ ನಂಜುಂಡನೊಲಿದು ರಕ್ಷಿಸಲಿ' ಎಂಬುದಾಗಿ ಕೊನೆಗೊಳ್ಳುತ್ತದೆ. 26 ಹಾಡುಗಳಿವೆ. ವಿಘ್ನೇಶ್ವರ, ಸಾರಸ್ವತಿ ವಿಷ್ಣು, ವೀರಭದ್ರ, ಹನುಮಂತ, ಬಸವೇಶ್ವರ, ದೇಶೇಶ್ವರ, ತ್ರಿಪುರಾಂಬೆ, ಕಾವೇರಿ, ಮಹಾಕಾಳಿ, ದೊಡ್ಡ ಕೃಷ್ಣರಾಜ ಪ್ರಭುಗಳು, ದಳವಾಯಿ ವೀರರಾಜಯ್ಯ, ಕರಣಿಕ, ಮಣಿಯಗಾರ, ಚಿನಿವಾರದವನು, ಅಕ್ಕಸಾಲೆ, ಸೆಟ್ಟಿ, ಗೌಡ, ಕುರುಬಗೌಡ, ದೇವದಾಸಿ, ಗಂಡುಮಗು, ಹೆಣ್ಣುಕೂಸು, ಒಗಟೆಗಳು, ಲೆಕ್ಕದ ಒಗಟೆಗಳು, ಹಾಗೂ ಹರಕೆಯ ಪದಗಳು.

'ಮಾನೌಮಿಯ ಚೌಪದ' ಹಾಡುಗಳಿಗೆ **'ನಂಜುಂಡನ ಪದಗಳು'** ಎಂಬ ಸಂಕೇತವಿರುವುದರಿಂದ ಗ್ರಂಥಕರ್ತನ ಹೆಸರು 'ನಂಜುಡಯ್ಯ'ನೆಂದು ಇರಬಹುದು. ಅಲ್ಲದೆಯೇ ಗ್ರಂಥವನ್ನು ಓಲೆಪ್ರತಿಯ ಆಧಾರದಿಂದ ಸಂಪಾದನೆ ಮಾಡಲಾಗಿದೆ. ಗ್ರಂಥದ ಪಾಠವು ಬಹುಶಿಥಿಲವಾದ ಒಂದೇ ಓಲೆಯ ಪ್ರತಿಯ ಆಧಾರದ ಮೇಲೆ ರೂಪುಗೊಂಡಿದೆಯೆಂದು ಅಭಿಪ್ರಾಯ ಪಡುತ್ತಾರೆ. "ಉತ್ತಮ ರಸಾಯನವು ನಮಗೆ ವಿಶೇಷವಾಗಿ ದೊರಕುವುದು ಜನಪದ ಸಾಹಿತ್ಯದಲ್ಲಿ ಅವು ಭಾಷೆಯ ನೈಜವಾದ ಸ್ವಭಾವಕ್ಕೆ ಹೊಂದಿಕೊಂಡು, ದೇಶೀಯ ಛಂದಸ್ಸುಗಳಾದ ದ್ವಿಪದಿ, ತ್ರಿಪದಿ, ಚೌಪದಿ ಸಾಂಗತ್ಯಗಳಲ್ಲಿ ಹುದುಗಿ ಭಾಷೆಯ ಜೀವನಾಡಿಗಳಂತಿರುವ ಹಳ್ಳಿಯ ಜನಗಳ ಮಧ್ಯೆ ಕಾಲಮಹಿಮೆಯಿಂದ ಸ್ವಲ್ಪ ಹಿಂದಾಗಿದ್ದರೂ ಕಂಡೂ ಕಾಣದಂತೆ ತಾಂಡವವಾಡುತ್ತಿವೆ. ಇವುಗಳ ಸವಿಯನ್ನು ಕಂಡ ರಸಿಕರು ಇವುಗಳಲ್ಲನೇಕವನ್ನು ಈಗಾಗಲೇ ಪ್ರಚಾರ ಪಡಿಸಿರುತ್ತಾರೆ. ಅಂತಹವುಗಳಲ್ಲಿ 'ಮಾನೌಮಿಯ ಚೌಪದ'ವೂ ಒಂದಾಗಿರುತ್ತದೆ" (1940:5–6) ಎಂದು ಹೇಳುತ್ತಾರೆ. "ಭಾರತೀಯರೆಲ್ಲರಿಗೂ ಅದರಲ್ಲೂ ವಿಶೇಷವಾಗಿ ಕನ್ನಡಿಗರಿಗೆ ನವರಾತ್ರಿಯು ಒಂದು ದೊಡ್ಡ ನಾಡ ಹಬ್ಬ. ನವರಾತ್ರಿಯ ಮೊದಲನೆಯ ದಿನ ಪಾಂಡವ ಶ್ರೇಷ್ಠನಾದ ಅರ್ಜುನನು ವಿರಾಟನಗರದಲ್ಲಿ ಅಜ್ಞಾತವಾಸ ಕಳೆದ ಮೇಲೆ ಪುನಃ ಶಸ್ತ್ರಗ್ರಹಣ ಮಾಡಿದವನೆಂಬ ಭಾವನೆಯಿಂದ ಅತಿಪೂಜ್ಯವಾದುದೆಂದು ಕೆಲವರ ಅಭಿಪ್ರಾಯ. ಹಾಗೂ ಕೆಲವರಿಗೆ ದೇವ ದಾನದವರಿಗೆ ಯುದ್ಧವಾಗಿ ದೇವತೆಗಳಿಗೆ ಕಾಲದಲ್ಲಿ ವಿಜಯವು ದೊರಕಿತೆಂಬುದಾಗಿ ಭಾವನೆ. ಇನ್ನು ಕೆಲವರಿಗೆ ರಾಮರಾವಣರ ಯುದ್ಧವು ಪ್ರಾರಂಭವಾದುದು ಕಾಲದಲ್ಲೆಂದು ನಂಬಿಕೆ. ದುರ್ಗಾದೇವಿಯು ರಾಕ್ಷಸಧ್ವಂಸನವನ್ನು ಮಾಡಿದುದಕ್ಕಾಗಿ ದೀಕ್ಷಾಕಾಲವಿದೆಯೆಂದು ಆಗಮಗಳ ಉಪದೇಶ. ಅಂತೂ ಒಂದಿಲ್ಲದಿದ್ದರೊಂದು ಕಾರಣದಿಂದ ಸಕಲರೂ ಹಬ್ಬವನ್ನು ತಮ್ಮ ಶಕ್ತಿಮೀರಿ ಅತಿ ವಿಜೃಂಭಣೆಯಿಂದ ನಡೆಸುವರು. ಕಾಲದಲ್ಲಿ ಭರತಖಂಡದಲ್ಲಿ ಎಲ್ಲೆಲ್ಲಿ ನೋಡಿದರೂ ರಾಮಾಯಣ ಪಾರಾಯಣ, ದುರ್ಗಾಪೂಜೆ, ದುರ್ಗಾಸನ, ಹೋಮ ಹನವಾದಿಗಳು,

ದೀಕ್ಷಾ ವ್ರತಗಳು ನಡೆಯುತ್ತಿರುತ್ತವೆ. ಕ್ಷತ್ರಿಯರಲ್ಲಂತೂ ಇದು ಬಹುಮುಖ್ಯವಾದ ಕಾಲ. ತಮ್ಮ ವಿಜಯಕ್ಕೆ ಮೂಲಕಾರಣವಾದ ಶಕ್ತಿ ದೇವತೆಯನ್ನು ಒಂಬತ್ತೂ ದಿನಗಳು ಭಕ್ತಿ ಪರಸ್ಪರವಾಗಿ ಆರಾಧಿಸಿ, ಕೊನೆಯ ದಿನ ವಿಜಯಸೂಚಕವಾದ ಯಾತ್ರೆಯನ್ನು ಕೈಗೊಳ್ಳುವರು. ಅದರ ಸೊಬಗು ಸೌಂದರ್ಯಗಳನ್ನೂ ಅದರ ಆಡಂಬರಗಳನ್ನೂ ನೋಡುವುದಕ್ಕೆ ಮೈಸೂರಿಗಿಂತ ಉತ್ತಮವಾದ ಬೇರೊಂದು ಸ್ಥಳವು ಸಿಕ್ಕಲಾರದು" (1940:6–7) ಎಂದು ಅಭಿಪ್ರಾಯಪಡುತ್ತಾರೆ.

"ಹಬ್ಬದ ವೈಶಿಷ್ಟ್ಯವನ್ನು ನೋಡಬೇಕು ಹಳ್ಳಿಗಾಡುಗಳಲ್ಲಿ, ಹಳ್ಳಿಯವರಿಗೆ ಇದು ವರ್ಷಕ್ಕೊಂದು ಹಬ್ಬ. ಪ್ರತಿಯೊಬ್ಬನು ಹಬ್ಬವನ್ನು ತನ್ನ ಶಕ್ತಿಯನ್ನು ಮೀರಿ ನಡೆಸುವನು. ಹಬ್ಬವನ್ನು ಹೆಚ್ಚು ವೈಖರಿಯಿಂದ ನಡೆಸುವುದಕ್ಕೆ ಪ್ರಕೃತಿಯೂ ಸಹಾಯ ಮಾಡುತ್ತದೆ. ರೈತರಿಗೆ ಕಾರು–ಹೈನು ಬೆಳಸುಗಳೆರಡರ ತೊಂದರೆಯೂ ಕಾಲದಲ್ಲಿರುವುದಿಲ್ಲ. ಕಾರು ಬೆಳಸಿನ ಫಲವು ಒಕ್ಕಣೆಯಾಗಿ ಧಾನ್ಯಗಳು ಮನೆಯಲ್ಲಿ ಸಮೃದ್ಧಿಯಾಗಿರುತ್ತವೆ. ಹೈನು ಬೆಳಸಿನ ಬಿತ್ತನೆಯ ಕೆಲಸವು ಮುಗಿದಿರುತ್ತದೆ. ಗದ್ದೆ ಹೊಲಗಳಲ್ಲಿ ಪೈರುಗಳು ಪಚ್ಚ ಪಸುರಾಗಿ ನೋಡುವುದಕ್ಕೆ ಬಹು ಹರ್ಷ ಜನಕವಾಗಿರುತ್ತವೆ. ಇದರ ಜೊತೆಗೆ ಶರತ್ಕಾಲದ ಆಗಮನ ಬೇರೆ. ಹಬ್ಬವು ಬರುವುದು ಶುಕ್ಲಪಕ್ಷದಲ್ಲಿ. ಶರತ್ಕಾಲದ ವರ್ದಮಾನ ಚಂದ್ರನ ಸೊಬಗನ್ನು ಪ್ರತ್ಯೇಕವಾಗಿ ವರ್ಣಿಸಬೇಕಾಗಿಲ್ಲ. ಇಂತಹ ಕಾಲದಲ್ಲಿ ಆಶೆ ಆತಂಕಗಳಿಲ್ಲದ ಪ್ರಕೃತಿದೇವಿಯ ಮಡಿಲನಲ್ಲಿಯೇ ಬೆಳೆದ ನಾಡ ಬೇಸಾಯದವರು ಹಬ್ಬವನ್ನು ಎಷ್ಟು ವಿಜೃಂಭಣೆಯಿಂದ ಆಚರಿಸುವರೆಂಬುದನ್ನು ಸುಲಭವಾಗಿ ಊಹಿಸಿಕೊಳ್ಳಬಹುದು. ವಿರಾಮವಾಗಿ ತಮ್ಮ ನಾಡ ಹಾಗೂ ಊರದೇವತೆಗಳನ್ನು ಪೂಸುವುದಕ್ಕೆ ಇದು ಸರಿಯಾದ ಕಾಲ. ತಮ್ಮ ಸವಿಗನಸುಗಳನ್ನು ಕಾಣುತ್ತ ತಮ್ಮ ಸ್ವಂತದ ಶ್ರೇಯೋಭಿವೃದ್ಧಿಯನ್ನು ಕುರಿತು ಬಗೆಬಗೆಯಾಗಿ ಹರಕೆಗಳನ್ನೂ ಹೇಳುತ್ತಾ ಹಾಡುವುದಕ್ಕೆ ಇದು ಅತ್ಯುತ್ತಮ ಕಾಲ. ಆದುದರಿಂದ ಕಾಲದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಹಳ್ಳಿಯವರು ಉತ್ತಮ ರೀತಿಯಲ್ಲಿ ಹಬ್ಬವನ್ನು ಮಾಡಿ ತಮಗೆ ಸೇರಿದವರೆಲ್ಲರ ವಿಷಯವಾಗಿ ಹರಕೆಯನ್ನು ಹೇಳುತ್ತಾರೆ. ಅಂತಹ ಹರಕೆಯ ಪದಗಳಲ್ಲೊಂದು ಮಾನೌಮಿಯ ಚೌಪದ" (1940:7)ಹಾಡುಗಳು.

"ಚೌಪದವನ್ನು ಹಾಡುವುದು ಹಳ್ಳಿಗರಿಗೆ ಬಲು ಹೆಮ್ಮೆಯ ವಿಷಯ. ಹಬ್ಬಕ್ಕೆ ಮೂರು ನಾಲ್ಕು ತಿಂಗಳುಗಳು ಮೊದಲಿಂದ ಇದನ್ನು ಕಲಿಯುವುದಕ್ಕೆ ಪೂರ್ವಸಿದ್ಧತೆಗಳಾಗುತ್ತವೆ. ಹಳ್ಳಿಯ 'ಮಠದ 'ಉಪಾದ್ರು' ಅಥವಾ 'ಅಯ್ಯ'ಗಳು ಚೌಪದವನ್ನು ಹಾಡುವುದಕ್ಕೆ ಯೋಗ್ಯರಾದ ಹುಡುಗರನ್ನು ಆರಿಸಿಕೊಂಡು ಅವರಿಗೆ

ಶಿಕ್ಷಣವನ್ನು ಕೊಡುತ್ತಾರೆ. ಹುಡುಗರು ಹೇಳತಕ್ಕ ಚೌಪದವು ಕಿವಿಗೆ ರಮ್ಯವಾಗಿರುವಂತೆ ಅವರ ಆಕಾರವು ನೋಟಕ್ಕೆ ಹಿತವಾಗಿರುವುದಕ್ಕಾಗಿ ಅವರೆಲ್ಲರಿಗೂ ಒಂದೇ ತೆರನಾದ ಉಡುಪುಗಳನ್ನು ತೋಡಿಸುತ್ತಾರೆ. (ಇವರು ಚೌಪದದ ಗುಂಪಿನವರು ಎಂದು ಗುರುತಿಸುವ ವಾಡಿಕೆಯು ಗಲೂ ಇದೆ) ಹುಡುಗರಿಗೆ ಕಸೂತಿಯ ಕೆಲಸಮಾಡಿದ ಒಂದು ಕಪ್ಪು ಬಣ್ಣದ ಮೊಕಮಲ್ ಟೋಪಿ, ಕರಿಯ ಅಂಗಿ, ಬಿಳಿಯ ಪೈಜಾಮೆ, ನಡುವಿಗೆ ಜರತಾರಿ ಪಟ್ಟಿ, ಕೈಯಲ್ಲಿ ಸಣ್ಣಗಿರುವ ಬಣ್ಣದ ಕಾಗದಿಂದ ಅಲಂಕೃತವಾದ ಒಂದು ದೊಣ್ಣೆ ಅಥವಾ ಕೋಲಾಟದ ಕೋಲುಗಳು–ಇವುಗಳಿರುತ್ತವೆ. ಹಬ್ಬದ ಕಾಲದಲ್ಲಿ ಉಪಾದ್ರು ಕಾಲಕ್ಕೋಸ್ಕರವೇ ಇಟ್ಟಿರುವ ರೇಷ್ಮೆಯ ರುಮಾಲನ್ನು ಅಂಗಿಯ ಮೇಲೆ ಉತ್ತರೀಯವನ್ನೂ ಧರಿಸಿ ಸಾಲುಸಾಲಾಗಿರುವ ಚೌಪದದ ಮಕ್ಕಳನ್ನು ಶಿಸ್ತಿನಿಂದ ನಡೆಸಿಕೊಂಡು, ತಾವು ಹಿಂದೆ ಬಂದು ಚೌಪದಗಳನ್ನು ಹಾಡಿಸಿ, ಹುಡುಗರಿಗೆ ಕೊಬ್ಬರಿ ಬೆಲ್ಲವನ್ನೂ ತಮಗೆ ಉಡುಗೊರೆಯನ್ನೂ ಸಂಪಾದಿಸುತ್ತಾರೆ." (1940:7–8)

"**ಮೌನಮಿ ಚೌಪದ**ವು ಒಂದು ಸಂಪೂರ್ಣ ಗ್ರಂಥದಂತಿದೆ. ಇದರ ಪ್ರಾರಂಭದಲ್ಲಿ ಗಣೇಶ, ಸರಸ್ವತಿ, ವಿಷ್ಣು, ದೇಶೇಶ್ವರ, ಕಾವೇರಿ ಹಾಗೂ ಮಹಾಕಾಳಿ ಇವರೆಲ್ಲರ ಸ್ತೋತ್ರವಿದೆ. ಅನಂತರ ಮೈಸೂರು ಮಹಾರಾಜರಾಗಿದ್ದ ದೊಡ್ಡ ಕೃಷ್ಣರಾಜ ಒಡೆಯರವರ ಅತಿ ವೈಭವ್ಯದಿಂದ ಕೂಡಿದ ವರ್ಣನೆ ಹಾಗೂ ಹರಕೆಗಳೂ ಅರಮನೆಯ ದಳವಾಯಿ ಹಾಗೂ ಸರ್ವಾಧಿಕಾರಿಗಳಾಗಿದ್ದ ತಂದೆ ಮಕ್ಕಳಾದ ಕಳಲೆ ವೀರಪ್ಪ ಹಾಗೂ ದೇವರಾಜಯ್ಯನವರ ಹರಕೆಗಳೂ ಅವಾದ ಮೇಲೆ ಹಳ್ಳಿಯ ಕರಣಿಕ, ಮಣಿಯಗಾರ, ಚಿನಿವಾರದವನು, ಶೆಟ್ಟಿ, ಅಕ್ಕಸಾಲೆ, ಗೌಡ, ಕುರುಬ, ಹುಡುಗ, ಹುಡುಗಿ, ಹಾಗೂ ದೇವದಾಸಿ ಮುಂತಾದವರು ಸ್ವಾಭಾವಿಕ ಚಿತ್ರದೊಡನೆ ಕೂಡಿದ ಹರಕೆಗಳೂ ಬರುವುವು. ಆಮೇಲೆ ಹಳ್ಳಿಯವರ ಬುದ್ಧಿ ಪರೀಕ್ಷೆಗೆ ಸಾಕಾಗದಷ್ಟು ಅವಕಾಶವನ್ನುಂಟು ಮಾಡುವ ಒಗಟೆಯ ಪದಗಳಿವೆ. ಕೊನೆಯಲ್ಲಿ ಎಲ್ಲರಿಗೂ ಅನ್ವಯಿಸತಕ್ಕ ಹರಕೆಗಳಾದ ಮೇಲೆ ಭರತವಾಕ್ಯದಿಂದ ಗ್ರಂಥವು ಪೂರ್ಣವಾಗುವುದು. ಗ್ರಂಥವನ್ನು ನೋಡಿದರೆ ಗ್ರಂಥಕರ್ತನು, ತೆರನಾದ ಒಂದು ಸಂಪೂರ್ಣವಾದ ಗ್ರಂಥವನ್ನು ರಚಿಸಿರಬೇಕೆಂದು ಪ್ರಾರಂಭಿಸಿ, ಸರಿಯಾದ ಒಂದು ರೀತಿಯಲ್ಲಿ ಒಂದಾದ ಮೇಲೆ ಒಂದನ್ನು ಕ್ರಮದಿಂದ ವರ್ಣಿಸಿ ಗ್ರಂಥವನ್ನು ಮುಗಿಸಿರುವಂತೆ ಕಾಣುತ್ತದೆ. ಆದರೆ ಆ ವಿಷಯವನ್ನು ಕವಿಯು ಗ್ರಂಥದಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಅಲ್ಲದೆ ಗ್ರಂಥದ ಕೊನೆಯ ಭಾಗವಾದ ಅಶ್ವಯುಜ ಶುದ್ಧ ಮಹಾನವಮಿ ಬರಲೆಂದು ಲೇಸಾಗಿ ಹರಸಿದೆವು, ಬಾಲಕರು ಬಂದು ಮೊದಲಾದ ಹರಕೆಯ ಪದಗಳು ಸ್ವಲ್ಪಸ್ವಲ್ಪ ವ್ಯತ್ಯಾಸದಿಂದ ಮೈಸೂರು ದೇಶದ ಅನೇಕ ಪ್ರಾಂತ್ಯಗಳಲ್ಲಿ ಬಳಕೆಯಲ್ಲಿವೆ. ಕಾವೇರಿಯ ವಿಷಯವಾದ ಚೌಪದವೂ ಮೈಸೂರರಸರನ್ನು ಕುರಿತ

ಪದಗಳೂ ಅಲ್ಲಲ್ಲಿ ಕಂಡು =ಬರುತ್ತವೆ. ಆದುದರಿಂದ ಬಹಳ ಕಾಲದಿಂದ ಬಳಕೆಯಲ್ಲಿದ್ದ ಇಂತ ಬಿಡಿ ಪದಗಳನ್ನು ಗ್ರಂಥಕರ್ತನು ಆರಿಸಿಕೊಂಡು ರೂಪವಾಗಿ ಮಾರ್ಪಡಿಸಿದನೋ ಅಥವಾ ಸ್ವತಂತ್ರವಾಗಿ ಗ್ರಂಥಕರ್ತನಿಂದ ರಚಿತವಾದ ಪೂರ್ಣ ಗ್ರಂಥದಿಂದ ಬೇರೆಬೇರೆ ಕಡೆಯವರು ತಮಗೆ ಬೇಕಾದ ಭಾಗಗಳನ್ನು ಆರಿಸಿಕೊಂಡು ಬಳಕೆಯಲ್ಲಿಟ್ಟು ಕೊಂಡಿರುವರೋ ನಿರ್ದಿಷ್ಟವಾಗಿ ಹೇಳುವುದು ಕಷ್ಟವಾಗಿದೆ. ಆದರೂ ಗ್ರಂಥವನ್ನು ಶೈಲಿಯ ದೃಷ್ಟಿಯಿಂದಲೂ ವಿಷಯ ವಿವರಣೆಯ ದೃಷ್ಟಿಯಿಂದಲೂ ಅಮೂಲಾಗ್ರವಾಗಿ ನೋಡಿದರೆ ಗ್ರಂಥವು ಏಕ ಕರ್ತೃಕವಾಗಿರುವಂತೆ ದೃಢಪಡುತ್ತದೆ.” (1960:5–9)

‘ಮಾನೌಮಿ ಚೌಪದ’ ಸಂಕಲನದ ಭಾಷೆ ಸರಳವಾಗಿದೆ. “ಪ್ರತಿ ಪಾದದಲ್ಲಿಯೂ ಐದು ಮಾತ್ರೆಗಳುಳ್ಳ ಮೂರು ಗಣಗಳೂ ಮೂರು ಮಾತ್ರೆಯ ಒಂದು ಗಣವೂ ಇದೆ. ಇಂತಹ ನಾಲ್ಕು ಪಾದದಲ್ಲಿಯೂ ಅಂತ್ಯಾಕ್ಷರ ಪ್ರಾಸವು ತಪ್ಪದೆಯೂ ದ್ವಿತೀಯಾಕ್ಷರ ಪ್ರಾಸವು ವಿಶೇಷವಾಗಿಯೂ ಬರುವುವು. ಕವಿಗೆ ಶಬ್ದಗಳಿಗಿಂತ ಪ್ರತಿಪಾದ ವಿಷಯ ವಿವರಣದಲ್ಲಿ ಹೆಚ್ಚು ಗಮನ. ಆ ದೃಷ್ಟಿಯಿಂದ ತನ್ನ ಸಮಸ್ತ ಶಕ್ತಿಯನ್ನು ವ್ಯಯ ಮಾಡಿದ್ದಾನೆ. ಕವಿಯ ವರ್ಣನಾಶಕ್ತಿಯು ಉತ್ತಮ ವರ್ಗಕ್ಕೆ ಸೇರಿದುದು. ಕಾವೇರಿಯ ವರ್ಣನೆಯು ಅವನ ಪ್ರಕೃತಿಯ ವರ್ಣನೆಯ ಸಾಮರ್ಥ್ಯವನ್ನೂ, ಕೃಷ್ಣರಾಜ ಒಡೆಯರ ಆಸ್ಥಾನವರ್ಣನೆಯು ಅವನಿಗೆ ಸನ್ನಿವೇಶ ಚಿತ್ರವನ್ನು ಚಿತ್ರಿಸುವುದರಲ್ಲಿರುವ ನೈಪುಣ್ಯವನ್ನೂ ವಿಶದಪಡಿಸುತ್ತದೆ. ಚೌಪದದಲ್ಲಿ ದಳವಾಯಿ ಮೊದಲುಗೊಂಡು ಗೌಡನವರೆಗೆ ಬರುವ ಪ್ರತಿಯೊಂದು ವ್ಯಕ್ತಿಯಲ್ಲಿಯೂ ಒಂದು ವೈಶಿಷ್ಟ್ಯವಿದೆ. ವೀರರಾಜಯ್ಯನ ಶೌರ್ಯ, ದೇವರಾಜನ ಕಾರ್ಯದಕ್ಷತೆ, ಕರಣಿಕನ ಲೆಕ್ಕಪತ್ರಗಳನ್ನು ಬರೆಯುವ ಕೈಚಳಕ, ಮಣಿಯಗಾರನಿಗೆ ಸುಂಕವನ್ನು ವಸೂಲು ಮಾಡುವುದರಲ್ಲಿರುವ ಬಿಂಕ, ಚಿನವಯ್ಯನ ಅದ್ಭುತವಾದ ನಾಣ್ಯಶಾಸ್ತ್ರದ ಅರಿವು. ಶೆಟ್ಟಿಯ ಧರ್ಮನಿಷ್ಠೆ, ಅಕ್ಕಸಾಲೆಯ ಕೌಶಲ್ಯ, ಗೌಡನಿಗೆ ವ್ಯವಸಾಯದಲ್ಲಿರುವ ಆಸಕ್ತಿ, ಕುರುಬನಿಗೆ ವಿವಿಧ ಜಾತಿಯ ಕುರಿಗಳನ್ನು ಆಯುವುದರಲ್ಲಿರುವ ಸೂಕ್ಷ್ಮ ದೃಷ್ಟಿ, ದೇವದಾಸಿಯು ಪರರನ್ನು ಬೆರಗುಗೊಳಿಸುವ ಬಿಂಕದೊಲವು, ಮಕ್ಕಳುಗಳ ಬಾಲ್ಯ ಸೌಂದರ್ಯ–ಇವುಗಳು ಒಂದೆರಡು ಮಾತಿನಲ್ಲಾದರೂ ಅತಿ ಹೃದಯಂಗಮವಾಗಿ ವರ್ಣಿತವಾಗಿವೆ.”(1940:13)

ಸಂಕಲನದಲ್ಲಿ “ಬರುವ ಬೇರೆ ಬೇರೆ ವ್ಯಕ್ತಿಗಳ ವರ್ಣನೆ ಹಾಗೂ ಹರಕೆಗಳನ್ನು ಹೆಸರಿನ ಬದಲಾವಣೆಯಿಂದ ಯಾವ ವ್ಯಕ್ತಿಗಾದರೂ ಅನ್ವಯಿಸುವಂತೆ ಕವಿಯು ಪ್ರತಿಯೊಂದು ವರ್ಣನೆಯ ಕೊನೆಯಲ್ಲಿಯೂ, ಇಂತಯ್ಯ ಇಂತಾ, ಹಾಗೂ ಅವರಯ್ಯ ಮೊದಲಾದ ಪದಗಳನ್ನು ಉಪಯೋಗಿಸಿದ್ದಾರೆ. ಚೌಪದದ ಗುಂಪಿನವರು ಬೇರೆಬೇರೆ ವ್ಯಕ್ತಿಗಳಿಗೆ ಹರಕೆಗಳನ್ನು ಹೇಳುವಾಗ ಅವರ ಹೆಸರನ್ನು ಅಲ್ಲಿ ಸೇರಿಸಿಕೊಂಡು ಹೇಳಬೇಕು.

ಇದರಲ್ಲಿ ಬರುವ ಒಗಟೆಗಳು ಹಳ್ಳಿಯವರ ಬುದ್ಧಿ ಪರೀಕ್ಷೆಗೆ ಯೋಗ್ಯವಾದುವುಗಳಾಗಿವೆ. ಅವರ ಮನಸ್ಸಿಗೆ ಏಕಕಾಲದಲ್ಲಿ ಆಶ್ಚರ್ಯವನ್ನೂ, ಕ್ಲೇಶವನ್ನೂ ಉಂಟುಮಾಡುತ್ತವೆ." (1940:14)

ಮೈಸೂರು ಸಂಸ್ಥಾನದ ಒಡೆಯರ ಆಳ್ವಿಕೆಯ ಕಾಲದಲ್ಲಿ ಮಹಾನವಮಿ (ನವರಾತ್ರಿ) ಸಂದರ್ಭಕ್ಕೆ ಮಾನೌಮಿಯ ಚೌಪದಗಳನ್ನು ಹಾಡುತ್ತಿದ್ದರೆಂದು ತಿಳಿಯುತ್ತದೆ. ಪ್ರೊ. ಲಕ್ಷ್ಮಣ ತೆಲಗಾವಿಯವರು "ಹರಕೆಯ ಪದವೆಂದು ಕರೆಯಲಾಗುವ ಮಾನೌಮಿಯ ಚೌಪದವು ಕನ್ನಡನಾಡಿನಲ್ಲಿ ಭಿನ್ನ ಪಾಠಗಳಲ್ಲಿ ದೊರೆಯುತ್ತದೆಂದು ವಿದ್ವಾಂಸರು ಗ್ರಹಿಸಿದ್ದಾರೆ. ಪದದ ಆರಂಭದಲ್ಲಿ ಇಷ್ಟದೈವಗಳ ಸ್ತೋತ್ರವಿದ್ದು, ಅನಂತರ ಮೈಸೂರು ಮಹಾರಾಜರಾಗಿದ್ದ ದೊಡ್ಡ ಕೃಷ್ಣರಾಜ ಒಡೆಯರವರ ಅತಿ ವೈಭವದಿಂದ ಕೂಡಿದ ವರ್ಣನೆ ಹಾಗೂ ಹರಕೆಗಳೂ ಅರಮನೆಯ ದಳವಾಯಿಯಾಗಿದ್ದ ತಂದೆ ಮಕ್ಕಳಾದಿ ಕೆಳದಿ ವೀರಪ್ಪಾ ಹಾಗೂ ದೇವರಾಜಯ್ಯರ ಹರಕೆಗಳೂ ಇತರ ಅಧಿಕಾರಿಗಳ ಹರಕೆಗಳೂ ಬರುತ್ತವೆ. ದಳವಾಯಿ ಮೊದಲುಗೊಂಡು ಗೌಡನವರೆಗೆ ಬರುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಚಿತ್ರಿಸಲಾಗಿದೆ" (1987:46) ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ಚರಿತ್ರೆಯ ಘಟನೆಗಳನ್ನು ನೆನಪಿಸಿಕೊಂಡರೆ, ಮೈಸೂರು ಸಂಸ್ಥಾನವು ಒಡೆಯರ ಆಳ್ವಿಕೆಯಲ್ಲಿ ವೈಭವಯುತವಾಗಿ ಮೆರೆದಿತ್ತು. ಆ ಕಾಲಘಟ್ಟದಲ್ಲಿ ಮೈಸೂರು ಸಂಸ್ಥಾನಕ್ಕೊಳಪಟ್ಟ ಜನರ ಜೀವನಮಟ್ಟವೂ ಸುಧಾರಿಸಿದ್ದಿರಬೇಕು. ಹೊಸಗನ್ನಡ ಸಾಹಿತ್ಯದ ಉಗಮ ಕಾಲವಾಗಿದ್ದ ಅದೇ ಅವಧಿಯಲ್ಲಿ ಬ್ರಿಟಿಷ್ ವಸಾಹತು ವ್ಯವಸ್ಥೆ ಭಾರತಾದ್ಯಂತ ಹಬ್ಬಿಕೊಂಡಿತು. ಒಂದು ರೀತಿಯ ಸಂಕ್ರಮಣ ಸ್ಥಿತಿಯಲ್ಲಿಯೇ ಜನರಿಗೆ ತನ್ನ ಒಡೆಯನ ಕುರಿತಂತೆ ಒಲವೂ ಹೆಚ್ಚ ತೊಡಗಿತು. ಒಡೆಯನ ವೀರ ಗುಣವನ್ನು ಹೇಳುವುದಕ್ಕೋಸ್ಕರ ಆತನ ಸುತ್ತಲಿರುವವರೆಲ್ಲರನ್ನೂ ಕವಿ ನೆನಪಿಸಿಕೊಳ್ಳುತ್ತಾನೆ. ರಾಜತ್ವದ ಉದಾರೀಕರಣವೇ ಮೌನಮಿ ಚೌಪದದ ಪ್ರಮುಖ ಗುಣ.

1940ರಲ್ಲಿ ಪ್ರಕಟವಾದ ಹಾಡುಗಳ ಸಂಕಲನ 'ಹಳ್ಳಿಯ ಪದಗಳು'.[3] ಸಂಗ್ರಹಿಸಿದವರು ಬಿ.ಎಸ್.ರಂಗಸ್ವಾಮಿ. "ಹಾಸನ ಹಾಗೂ ಮೈಸೂರು ಜಿಲ್ಲೆಗಳಲ್ಲಿ ದೊರೆತಷ್ಟು ಹಳ್ಳಿಯ ಹಾಡುಗಳು ನನ್ನಿಂದ ಹಾಗೂ ನನ್ನ ಗೆಳೆಯರಾದ ಶ್ರೀಮಾನ್ ಗೊರುರು ರಾಮಸ್ವಾಮಯ್ಯಂಗಾರರಿಂದ ಸಂಗ್ರಹಿತವಾಗಿ ಕನ್ನಡಿಗರ ಮುಂದೆ ಈಗಾಗಲೇ ಬಂದಿವೆ. ಮೈಸೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಚೆಗೆ ದೊರೆತ ಹಾಡುಗಳನ್ನೂ ಕೋಲಾರಕ್ಕೆ ಬಂದ ಮೇಲೆ ಪ್ರಾಂತ ಬಳಕೆಯಲ್ಲಿರುವ ಪದಗಳನ್ನು ನಾನು ಎರಡು ವರ್ಷಗಳಿಂದ ಸಾಧ್ಯವಾದಮಟ್ಟಿಗೆ ಕೂಡಿಸಿದ್ದೇನೆ. ಕೋಲಾರ ಜಿಲ್ಲೆಯ ತೆಲುಗು ಪ್ರಾಂತದ ಅಂಚಿನಲ್ಲಿದ್ದು, ತೆಲುಗು ಭಾಷೆಯೇ ಪ್ರಾಧಾನ್ಯವಾಗಿದ್ದರೂ ಕನ್ನಡ ಪದಗಳೂ ದೊರೆಯುವುವು."

'ಹಳ್ಳಿಯ ಪದಗಳು' ಸಂಗ್ರಹದ ಉದ್ದೇಶ ಹಾಗೂ ಅಗತ್ಯ ಬಗ್ಗೆ – "ನಾನು ಹಳ್ಳಿಯ ಹಾಡುಗಳನ್ನು ಸಂಗ್ರಹ ಮಾಡಲು ತೊಡಗಿದಾಗ ನನ್ನ ಸ್ನೇಹಿತರು ಕೆಲವರು 'ಊರು ದನ ಕಾದು ದೊಡ್ಡ ಬೋರೆಗೌಡ ಅನ್ನಿಸಿಕೊಳ್ಳುವುದಕ್ಕೆ ಹೊರಟಿದ್ದಾನೆ ಎಂಬುದಾಗಿ ಪರಿಹಾಸ್ಯ ಮಾಡತೊಡಗಿದರು. ಆದರೆ ಸಂಗ್ರಹ ಕಾರ್ಯವು ತಲೆ ಬೇಜಾರು ಹಿಡಿಸುವುವಂಥಾದ್ದು. ಯಾವ ಜಾಣತನ, ನಿಪುಣತನ, ನಿಘಂಟಿನ ಪರಿಚಯವಿದ್ದರೂ ಬೇಸ್ತು ಬೀಳುವುದು ತಪ್ಪಿದ್ದಲ್ಲ. ಕವಿಯಾದವನು ಕಪಿಯಾಗುವ ಸಂಭವವಿಲ್ಲದೆ ಇಲ್ಲ. ಹಳ್ಳಿಯ ಪದಗಳನ್ನು ಅರ್ಥಮಾಡಿಕೊಳ್ಳುವುದು ಸುಲಭವಲ್ಲ. ಹಳ್ಳಿಯವರೆಲ್ಲ ಬೆರೆತು, ಕಲೆತು ಅವರ ಜೀವನದ ಒಳಹೊಕ್ಕು ಬೆದಕಿ, ಕೆದಕಿ ಸಂಗ್ರಹ ಮಾಡಬೇಕಾದ ಕೆಲಸ. ಸಂಗ್ರಾಹಕರಿಗೆ ಸ್ಥಳ ಪರಿಚಯವು ಪರಿಪೂರ್ಣವಾಗಿರಬೇಕು. ಅಷ್ಟೇ ಅಲ್ಲದೆ ಹಳ್ಳಿಯ ಪದಗಳಲ್ಲಿ ಅಭಿರುಚಿ ಇರಬೇಕು" (1940:4) ಎಂದು ಮನವರಿಕೆ ಮಾಡಿದ್ದಾರೆ.

"ಹಳ್ಳಿಯ ಪದಗಳನ್ನು ಸಂಗ್ರಹಿಸುವ ನನ್ನ ಉದ್ದೇಶವಿಷ್ಟೇ; ಹಳ್ಳಿಯವರಲ್ಲಿಯೇ ಪುನಃ ಹಾಡುಗಳು ಬಳಕೆಗೆ ಬರಬೇಕು. ಹರಿಯುವ ನಾಡಿನಲ್ಲೆಲ್ಲಾ ಬಾಯಿಂದ ಬಾಯಿಗೆ ಹರಿಯಬೇಕು. ಕನ್ನಡ ಮಾತಿನ ಪ್ರಭಾವ ದಿಕ್ಕು–ದಿಕ್ಕಿಗೂ ಬೆಳಗಬೇಕು. ಇದರ ಶಕ್ತಿ ಪ್ರತಿಯೊಬ್ಬ ಕನ್ನಡಿಗರ ರಕ್ತನಾಳಗಳಲ್ಲಿ ಹರಿದು ಹುರಿದುಂಬಿಸಿ ಅವನ ಸಂಸ್ಕೃತಿ ಹಾಗೂ ಜೀವನದ ಮಟ್ಟ ಏರಿ, ಮೊದಲಿನಂತೆ ನೆಮ್ಮದಿಯಾಗಿ ಬಾಳಲು ಸಹಾಯಕವಾದರೆ ನನ್ನ ಶ್ರಮ ಹಾಗೂ ಉದ್ದೇಶ ಸಾರ್ಥಕವಾಗುವುದೆಂದು ಭಾವಿಸುತ್ತೇನ"(1940:4) ಎಂದು ಹೇಳಿದ್ದಾರೆ.

1940ರ ಸಂದರ್ಭದಲ್ಲಿ **ಬಿ.ಎನ್. ರಂಗಸ್ವಾಮಿ**ಯವರಿಗೆ ಹಳ್ಳಿಯ ಪದಗಳನ್ನು ಸಂಗ್ರಹಿಸುವ ಹಾಗೂ ಆ ಮೂಲಕ ದೇಸೀ **ಸಂಸ್ಕೃತಿಯನ್ನು ಜಾಗೃತ**ಗೊಳಿಸುವ ಅಗತ್ಯ ಬಿತ್ತು. ಇದಕ್ಕೆ ಪೂರಕವಾಗಿ ಮೈಸೂರು ಜಿಲ್ಲೆಯ ಹಳ್ಳಿಯ ಪದಗಳನ್ನು ಸಂಗ್ರಹಿಸ ತೊಡಗಿದರು. ಆದರೂ ಸಂಗ್ರಹದ ಸಂದರ್ಭದಲ್ಲಿ ಒಂದು ಮಿತಿಯನ್ನು ಹಾಕಿಕೊಂಡರು. ಅದನ್ನು ಹೀಗೆ ಹೇಳಿಕೊಂಡಿದ್ದಾರೆ. "ಹಾಡುಗಳನ್ನು ಸಂಗ್ರಹ ಮಾಡುವುದರಲ್ಲಿ ನನ್ನಲ್ಲಿ ಒಂದು ವಿಧವಾದ ಪಕ್ಷಪಾತ ಭಾವನೆಯು ಮೊದಲಿನಿಂದಲೂ ಅಂಕುರಿಸಿ, ತ್ರಿಪದಿ ವಿನಹ ಮತ್ಯಾವ ಛಂದಸ್ಸಿನ ಹಾಡಿನ ಕಡೆಗೂ ನನ್ನ ಮನಸ್ಸು ಓಡಲಿಲ್ಲ. ಆದಕಾರಣ ಪುಸ್ತಕದಲ್ಲಿಯೂ ತ್ರಿಪದಿಗಳನ್ನೇ ತಂದಿದ್ದೇನೆ" (1940:ಅ) ಎನ್ನುತ್ತಾರೆ. ಸಂಗ್ರಹಿಸಿರುವ ಹಳ್ಳಿಂಯ ಹಾಡುಗಳ ನಿರೂಪಕರು ಯಾರು? ಕುರಿತಂತೆ ಸಂಕಲನದಲ್ಲಿ ವಿವರಗಳಿಲ್ಲವಾದರೂ, ಹಳ್ಳಿಯ ಪದಗಳ ಸಂಗ್ರಹದ ಅಗತ್ಯವನ್ನು ಅವರ ಹಿರಿಯ ವಿದ್ವಾಂಸರು ಪ್ರೇರೇಪಿಸಿದರು ಎಂದು ಅಭಿಪ್ರಾಯಿಸುತ್ತಾರೆ. "ಹಳ್ಳಿಯ ಹಾಡುಗಳ

ವಿಷಯದಲ್ಲಿ ಆಸಕ್ತಿ ಹುಟ್ಟಿಸಿದಂತೆ ನಮ್ಮ ನಾಡಿನ ಹಿರಿಯರನೇಕರು ಹಳ್ಳಿಯ ಪದಗಳ ವೈಶಿಷ್ಟ್ಯತೆಯನ್ನು ಕುರಿತು ನಾಡಿನಲ್ಲೆಲ್ಲಾ ತಮ್ಮ ತೂಕವಾದ ಮಾತುಗಳಿಂದ ಸಾರಿ ಹೇಳಿದ್ದಾರೆ" (1940:ಆ) ಎಂಬ ಮಾತನ್ನು ಓದುಗರಿಗೆ ಮನದಟ್ಟು ಮಾಡಿದ್ದಾರೆ.

ರಂಗಸ್ವಾಮಿಯವರು ಹಳ್ಳಿಯ ಜನರ ಜೀವನ ವಿಧಾನದ ವಿವರಗಳನ್ನು, ಶ್ರಮದ ಜೊತೆಗಿನ ಹಾಡುಗಳ ಸಂದರ್ಭವನ್ನು ಹಾಗೂ ಸಂಕಲನದ ಪ್ರಸ್ತುತತೆಯನ್ನು ಕುರಿತು ಹೀಗೆ ಹೇಳಿದ್ದಾರೆ, "ರೈತನ ಸಾಹಿತ್ಯವು ಅವನ ಜೀವನದ ಚಿತ್ರ. ರೈತರು ಹೊಲಗದ್ದೆಗಳಲ್ಲಿ, ಬೆಳಗಿನಿಂದ ಸಂಜೆಯವರೆಗೆ ಹೊಲವನ್ನು ಉಳುವಾಗ, ಪೈರನ್ನು ನಾಟಿ ಹಾಕುವಾಗ, ಕಳೆಯನ್ನು ಕೀಳುವಾಗ, ಬೆಳಸನ್ನು ಕಾಯುವಾಗ, ದಿನಗಟ್ಲೆ ಗಾಡಿಯನ್ನು ಹೊಡೆಯುವಾಗ, ರೈತರ ಹೆಂಗಸರು ತಮ್ಮ ಮನೆಯ ಭತ್ತ, ರಾಗಿ, ಮುಂತಾದುವುಗಳನ್ನು ಸ್ವತಃ ತಾವೇ ಕುಟ್ಟುವಾಗಲೊ, ಬೀಸುವಾಗಲೊ, ನೀರಸವಾದ ತಮ್ಮ ಕೆಲಸಗಳ ಬೇಸರದ ಪರಿಹಾರಕ್ಕಾಗಿ, ದಣಿವಾರುವುದಕ್ಕಾಗಿ, ಹಾಡುಗಳನ್ನು ಹೇಳಿಕೊಳ್ಳುವರು. ಅವರ ಹಾಡುಗಳಲ್ಲಿ ಅವರ ಜೀವನದ ಅನುಭವದ ಚಿತ್ರಗಳು ಮೂರ್ತಿವತ್ತಾಗಿ ಎದ್ದು ಕಾಣುತ್ತವೆ. ಹಿಂದಿನ ಕಾಲದಲ್ಲಿ ಹಳ್ಳಿಗಾಡಿನವರಲ್ಲಿದ್ದ ಅಜ್ಞಾನವನ್ನು ಹೋಗಲಾಡಿಸಿ ಸುಸಂಸ್ಕೃತರನ್ನಾಗಿ ಸತ್ಪುರಷರನ್ನಾಗಿ ಮಾಡಲು ಹಾಡುಗಳು ವಿಶೇಷವಾಗಿ ಸಹಕಾರಿಯಾಗಿದ್ದುವು. ಅವರ ನಡೆನುಡಿಗಳಲ್ಲಿ ಮೂಡಿದ ನ್ಯೂನತೆಗಳನ್ನು ತಿದ್ದಲು ಒಂದು ಬೋಧಕ ಕ್ರಮವಾಗಿತ್ತು. ಜನಸಾಮಾನ್ಯರಿಗೆ ತಕ್ಷಣ ನಾಟುವ ಶೈಲಿಯಲ್ಲಿ ತಮ್ಮ ಕಣ್ಣೆದುರಿಗೆ ಕಂಡು ಬರತಕ್ಕ ವಸ್ತುಗಳನ್ನೇ ಆಧಾರವಾಗಿಟ್ಟುಕೊಂಡು ಆಗಿನವರು ಪದಗಳನ್ನು ಕಟ್ಟುತ್ತಿದ್ದುದೇ ಇದಕ್ಕೆ ಕಾರಣ. ತಮ್ಮ ನಿಜೇಚ್ಛೆಯನ್ನು ನಿರ್ಭೀತಿಯಿಂದ, ನಿರಂಕುಶ ಭಾವನೆಯಿಂದ, ಹೊರಗೆಡಹುತ್ತಿದ್ದರು. ಈಗಿನಂತೆ ಯಾವುದಕ್ಕೂ ಕೈ ಬೀಗ, ಬಾಯ್ಬೀಗವಿರಲಿಲ್ಲ. ಮಾತೊ, ಇಂಪಾದ ಮಧುರವಾದ ವಿಹಿತವಾದ ಮಾತು, ತಮ್ಮದೇ ಆದ ವೈಶಿಷ್ಟ್ಯವಾದ ಸ್ವರೂಪವನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟು ಒಂದು ಅಪಾರವಾದಂತಹ ಸೇವೆಯನ್ನು ಸಲ್ಲಿಸಿರುವರು." (1940:ಅ–ಆ)

ರೈತನ ಜೀವನ ಕ್ರಮದ ಬಗ್ಗೆ ಹೇಳುತ್ತಾ, "ಆಗಿನ ಕಾಲದ ರೈತರ ಜೀವನವು ನೆಟ್ಟಗಿತ್ತು. ಆಗಿನವರ ಹಾಡುಗಳೋ ಜನರ ಮನಸ್ಸನ್ನು ಒಲಿಸುತ್ತಿದ್ದವು. ಬದುಕನ್ನು ಕುದುರಿಸುತ್ತಿದ್ದವು. ಜನರು ತಮಗೆ ಸಿರಿ ಬಂದಾಗ ತಾವೂ ಉಂಡು ಪರರಿಗೂ ಇಡುತ್ತಿದ್ದರು. ಶಕ್ತಿಯಿದ್ದಾಗ ತಮ್ಮ ಸ್ವಾರ್ಥಕ್ಕೆ ದುಡಿಯುತ್ತಿದ್ದುದೂ ಅಲ್ಲದೆ, ಸಾರ್ವತ್ರಿಕ ಹಿತದೃಷ್ಟಿಯಿಂದಲೂ ಗೇದು ತಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳುತ್ತಿದ್ದರು. ಕಾರಣ, ಆತ್ಮತ್ಯಾಗವು ಮಾನವನ ಪರಮಧರ್ಮವೆಂದು ಅರಿತಿದ್ದರು. ಜ್ವರ ಬಂದಾಗ ತಮ್ಮ ಪಾಲಿಗೆ ಬಂದುದೆಂದು ನಿರ್ಯೋಚನೆಯಿಂದ ನರಳುತ್ತಿದ್ದರು. ಜವರಾಯ ಕರೆದಾಗ ತಮ್ಮ

ಜೀವನದ ಸೊಡರು ನಂದುವ ಕಾಲ ಸಮೀಪಿಸಿತೆಂದು ಹೊರಟು ಹೋಗುತ್ತಿದ್ದರು. ಅಂದಿನ ಹಳ್ಳಿಗಾಡಿನ ಸಂಸ್ಕೃತಿಯು ಹಾಗೂ ರೈತನ ಜೀವನವು ಇಂದು ಅಳಿದು ಹೋಗಿ ಅವುಗಳ ಅರಿವೇ ಇಲ್ಲದಂತಾಗುವ ಪರಿಸ್ಥಿತಿ ಬಂದೊದಗಿದೆ. ಎಲ್ಲದರಲ್ಲೂ ತುಂಬಿಕೊಳ್ಳುತ್ತ ಬಂದಿರುವ ಒಣಾಡಂಬರವು ಬಾಳು ಬದುಕಿನಲ್ಲಿಯೂ ಬಂದು ಹೋಗಿದೆ" (1940: ಅ–ಇ) ಎಂದು ಅಭಿಪ್ರಾಯಪಟ್ಟಿದ್ದರು. ಜನಪದ ಹಾಡುಗಳ ಸಂಗ್ರಹದ ಸಾಂಸ್ಕೃತಿಕ ಅಗತ್ಯವು "ಹಾರ್ಮೋನಿಯಂ, ಬುಲ್‌ಬುಲ್ ತರಂಗ್ಯೆ, ಸಿನಿಮಾ, ರೇಡಿಯೋಗಳು ಬಂದು ಕುಟ್ಟುವ, ಬೀಸುವ, ಉಳುವ, ನೇಯುವ ಯಂತ್ರಗಳು ಅವುಗಳೊಡನೆ ಮೇಳಗೂಡಿ, ನೈಸರ್ಗಿಕವಾಗಿ, ಅನುಭವ ಪೂರ್ಣವಾಗಿ, ಶಾಂತವಾಗಿ ಚಿಮ್ಮಿ ಬರುತ್ತಿದ್ದ ಹಳ್ಳಿಯ ಪದಗಳ ಗಂಟಲನ್ನು ಹಿಸುಕುತ್ತಿವೆ. ಹಿಂದಿನ ಕಾಲದಲ್ಲಿ ರೈತನು ಕಟ್ಟಿದ, ಹಾಡಿದ ಹೃದ್ಗತವಾದ ಬಾಯಿಂದ ಬಾಯಿಗೆ ಹರಿಸಿದ ಕನ್ನಡ ನಾಡಿನ ಮಾತು, ಮರ್ಯಾದೆ ಹಾಗೂ ವಿಶಾಲ ಹೃದಯ ಇವುಗಳೆಲ್ಲದರ ಸ್ವರೂಪವಾದಂತಹ ಜನಪದ ಸಾಹಿತ್ಯವು ಇಂದು ಮಾಯವಾಗಿತ್ತಿದೆ. ಈಗಲೂ ಅಲ್ಲಲ್ಲಿ ಅಲ್ಪಸ್ವಲ್ಪ ಉಳಿದಿರುವ ಹಾಡುಗಳನ್ನು ಸಂಗ್ರಹ ಮಾಡುವುದೆಂದರೆ ಅತಿ ಪ್ರಯಾಸದ ಕೆಲಸ" (1940:ಇ) ಎಂಬುದಾಗಿ ಸಂಗ್ರಹಣೆಯ ಕಷ್ಟವನ್ನು ವ್ಯಕ್ತಪಡಿಸಿದ್ದಾರೆ.

ರೈತನ ಬಡತನ ಆತನ ಜಾನಪದೀಯ ಗುಣವನ್ನು ಅನ್ಯ–ಸಂಸ್ಕೃತಿಗೆ ಪರಿವರ್ತಿಸುತ್ತದೆ. **ರಾಷ್ಟ್ರದ ಏಕೀಕರಣದ ಪ್ರಶ್ನೆ**ಗಳು ರಾಷ್ಟ್ರೀಯ ಹೋರಾಟದ ಕಡೆಗೆ ಜನರನ್ನು ಕೊಂಡೊಯ್ಯುತ್ತಿದೆ. "ಇದಕ್ಕೆ ಇನ್ನೊಂದು ಕಾರಣವೆಂದರೆ, ರೈತನಿಗೆ ತನ್ನ ನಿತ್ಯ–ಜೀವನವೇ ಒಂದು ಹೊರೆಯಾಗಿ ಬಿಟ್ಟಿದೆ. ಬಡತನದ ಕಾಟದಿಂದ ನರಳುತ್ತಿದ್ದಾನೆ. ಅವನು ನೊರೆಕಚ್ಚಿಕೊಂಡಿದ್ದರೂ ತಾನು ಕಚ್ಚಿಕೊಂಡಿದ್ದಾನೆಂಬ ಕೂಗು ಮಾತ್ರ ಜೋರಾಗಿದೆ. 'ಹೆತ್ತವಳೆ ಹೆಣ್ಣು ಎಂದರೆ ಆಚೆ ಕೂತಿದ್ದವಳು ಗಂಡು ಅಂದಳಂತೆ'. ನಮ್ಮನ್ನೆ ನಂಬಿದ್ದ ರೈತನ ಸ್ಥಿತಿ. 'ಮಣ್ಣಿನ ಕಾಲ ನಂಬಿ ಹೊಳೆ ಹಾಯ್ದಂಗ' ಆಗಿದೆ. ರೈತನನ್ನು ಬಡತನದ ಸಂಕೋಲೆಯಿಂದ ವಿಮೋಚನೆ ಮಾಡಿ ಅವನನ್ನು ಬಾಳುವಂತನಾಗಿ ಮಾಡದ ಹೊರತು ನಮ್ಮ ದೇಶ, ನಮ್ಮ ನಾಡು, ನಮ್ಮ ರಾಷ್ಟ್ರ, ತಲೆ ಎತ್ತುವ ಹಾಗಿಲ್ಲವೆಂಬ ಅಂಶವು ಎಲ್ಲಾ ಪ್ರಾಂತದ ಸರಕಾರಗಳಿಗೂ ಈಚೆಗೆ ಮನವರಿಕೆಯಾಗಿದೆ. ಅವನ ಜೀವನವನ್ನು ನೆಟ್ಟಗೆ ಮಾಡುವುದಕ್ಕೂ ಅವನ ಕುಂದುಕೊರತೆಗಳನ್ನು ನಿವಾರಿಸುವುದಕ್ಕೂ ಈಗಾಗಲೇ ಅನೇಕ ಮಹತ್ಕಾರ್ಯಗಳು ನಡೆದಿವೆ. ಆದರೆ ಹಳ್ಳಿಗಳ ಪುನರ್‍ರಚನೆಗೆ ಅಥವಾ ಪುನರ್‌ಜೀವನಕ್ಕೆ ರೈತನ ಪ್ರಾಚೀನ ಸಂಸ್ಕೃತಿಯನ್ನು ತಳಹದಿಯಾಗಿಟ್ಟುಕೊಳ್ಳದೆ, ಅವನ ಉದ್ಧಾರಕ್ಕೆ ಎಂಬುದಾಗಿ, ಒಂದು ರೀತಿಯಲ್ಲಲ್ಲದೇ ನಾನಾರೀತಿಯಲ್ಲಿ ನಾನಾರೂಪದಲ್ಲಿ, ಸರಕಾರಗಳೂ, ದೇಶದ ಮುಖಂಡರೂ, ದುಡಿಯುತ್ತಿರುವರೆಂಬ ಕೂಗು ದೇಶದಲ್ಲೆಲ್ಲಾ

ಮೊಳಗುತ್ತಿದೆ. ಬೆಣ್ಣೆಯಂತ ಮನಸ್ಸಿನ ನಮ್ಮ ರೈತನಿಗೆ ಯಾವುದನ್ನು ಬಿಡಬೇಕು, ಯಾವುದನ್ನು ಕಟ್ಟಿಕೊಳ್ಳಬೇಕು ಎಂಬುದು ತೋಚದೆ, 'ಹಣ್ಣಿಲ್ದ ಮರಕ್ಕೆ ಕಣ್ಣಿಲ್ದ ಗಿಣಿ ಹೋದ ಹಾಗೆ' ಆಗಿದ್ದಾನೆ ಎಂದು ಹೇಳುತ್ತಾರೆ. ಪರಿಸ್ಥಿತಿಯು ಹೀಗಿರುವಾಗ ಅವನು ಯಾವ ಹಾಡು ಹಾಡಲು ಹೋದಾನು? ಮನೆಯೂ ಮನೆತನವೂ ಅನ್ಯಸಂಸ್ಕೃತಿ, ಅನ್ಯರಾಷ್ಟ್ರಗಳ ದವಡೆಗೆ ಸಿಕ್ಕಿ ನುಚ್ಚು ನುರುಗಾಗುತ್ತಿರುವಾಗ ಹಳ್ಳಿಯ ಹೃಕಳಿಂದ ಯಾವ ಪದಗಳು ತಾನೆ ಬರಲು ಸಾಧ್ಯ? ತನ್ನ ಮನೆಯ ನಿರ್ವಾಹದಲ್ಲಿಯೇ ರೈತನಿಗೆ ಗುಪ್ಸೆ ಉದಾಸೀನವುಂಟಾಗಿ ಯಾವುದೂ ಬೇಡವೆನಿಸಿದೆ." (1940:ಇ–) ರೈತನ ಅನುಭವ, ಶ್ರಮದ ಸಾಮರ್ಥ್ಯಗಳನ್ನು ಸಂಗ್ರಾಹಕರು ಮೆಚ್ಚಿಕೊಳ್ಳುವುದರ ಜೊತೆಗೆ ಹಳ್ಳಿಯ–ತನವನ್ನು ನಾಶವಾಗದಂತೆ ತಡೆಗಟ್ಟುವ ಮುಂಜಾಗ್ರತ ಎಚ್ಚರಿಕೆಯನ್ನು ಕನ್ನಡದ ಜನತೆಗೆ ಸಾರುವುದಕ್ಕೆ ಪ್ರಯತ್ನಿಸಿದ್ದಾರೆ. "ನಮ್ಮ ರಾಷ್ಟ್ರ ಪುನರ್ ನಿರ್ಮಾಣವಾಗಬೇಕಾದರೆ ಅವನಿಂದ ಮರೆಯಾಗುತ್ತಿರುವ ಅವನ ಪ್ರಾಚೀನ ಸಂಸ್ಕೃತಿಯನ್ನು ಮೊಟ್ಟಮೊದಲು ಕಾಪಾಡಿ, ಬೆಳಕಿಗೆ ತಂದು, ಒರೆಹಚ್ಚಿ ನೋಡಿ, ಅದರ ಮೇಲೆ ಸುಧಾರಣೆಗಳ ಕಟ್ಟಡಗಳನ್ನು ಕಟ್ಟಲಾರಂಭಿಸಬೇಕು"(1940:ಊ) ಎಂಬ ಘೋಷಣೆಯನ್ನು ಕೂಗುತ್ತಾರೆ. ಬದಲಾಗಿತ್ತಿರುವ ಜನರ ಅಭಿರುಚಿ, ಕಲೆ ಹಾಗೂ ಅವರ ಬದುಕನ್ನು ಪುನರ್ ರೂಪಿಸುವ ಎಚ್ಚರಿಕೆಯೊಂದಿಗೆ ಬಿ.ಯನ್.ರಂಗಸ್ವಾಮಿಯವರು ಹಳ್ಳಿಯ ಪದಗಳ ಸಂಗ್ರಹಕ್ಕೆ ತೊಡಗಿದಾರೆನ್ನುವುದು ಮುನ್ನುಡಿಯಲ್ಲಿ ಹೇಳಿರುವ ಮಾತುಗಳಿಂದ ಸ್ಪಷ್ಟವಾಗುತ್ತದೆ.

1940ರಲ್ಲಿ ಪ್ರಕಟವಾದ ಸಂಕಲನದಲ್ಲಿ ಹಿಮವದೋಪಾಲ. ಏಳುಮಲೆ ಮಾದೇಶ್ವರ, ಬಿಳಿಗಿರಿ ರಂಗಸ್ವಾಮಿ, ಕೊಂಗ–ಳ್ಳಿ, ಮಲ್ಲೇಶ್ವರ, ಬೀರೇ ದೇವರು, ಮಾರಮ್ಮ, ಚಾಮಾಯಿ, ಗಿರಿಜಾ ಕಲ್ಯಾಣ, ಗಂಗೆ ಗೌರಿ ಜಗಳ, ಸೀತಾ ವನವಾಸ, ಮದುವೆಗೆ ವೀಳ್ಯ, ಎಣ್ಣೆ ಮಜ್ಜನ, ಧಾರೆ, ಆರತಿ–ಅಕ್ಷತೆ, ಬಾಗಿಲು ತಡೆವುದು, ಬೀಗರ ಹಾಸ್ಯ, ಬೆಂಮನಸು, ಬಾಣಂತಿ, ಜೋಗುಳ, ತಮ್ಮಯ್ಯ ಅಣ್ಣಯ್ಯ, ಪ್ರಯಾಣ, ಅತ್ತೆ ಮನೆ ಸುಖ, ಮುನುಸು ನಿರೀಕ್ಷೆ, ಸವತಿ ಮತ್ಸರ, ಪಶ್ಚಾತ್ತಾಪ, ದುಃಖದ ಬಾಳು, ತವರು ಪದ ಬಂದೇರಳು, ವರ್ಣನೆ, ಬಿತ್ತನೆ, ಹಾಸ್ಯ, ಕೆಲವು ಸಂಗತಿಗಳು, ಬಿಡಿಪದಗಳು, ನೀತಿ, ಪ್ರಸಕ್ತಿ, ಕೋರಿಕೆ–ಹೀಗೆ 38 ಹಳ್ಳಿಯ ಹಾಡುಗಳಿದ್ದು ವೈವಿಧ್ಯಮಯವಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಇವುಗಳನ್ನು ಮೂರು ವಿಭಾಗ ಮಾಡಿ ಒಂದನೆಯದಾಗಿ, ಒಂದರಿಂದ ಹತ್ತರ ವರೆಗಿನ ಹಾಡುಗಳು ದೇವರ ಸ್ತುತಿಯನ್ನು ಒಳಗೊಂಡಿದೆಯಾದರೂ ಅವುಗಳು ವಾಸ್ತವ ಬದುಕಿನ ಘಟನೆಗಳನ್ನು ವಿವರಿಸುವಂತಿವೆ. ದೇವರು ಸೋಲಿಗರ ಹೆಣ್ಣನ್ನು ಮದುವೆಯಾಗುವ ವಿವರವಿದೆ. ಎರಡನೆಯದಾಗಿ, 11 ರಿಂದ 30ರ ವರೆಗಿನ ಹಾಡುಗಳು ಹೆಣ್ಣಿನ ಬದುಕಿನಲ್ಲಿ ಆಗುವೆ ಮುಖ್ಯ ಘಟನೆಗಳನ್ನು ಆಚರಣೆಗಳನ್ನು ಹೇಳುತ್ತವೆ.

ಎಲ್ಲಾ ದುಃಖಗಳಿಗೂ, ಪಶ್ಚಾತ್ತಾಪಗಳಿಗೂ ತವರು ಹೆಣ್ಣಿಗೆ ಆಸರೆಯಾಗಿರುತ್ತದೆ. ಮೂರನೆಯದಾಗಿ, 31ರಿಂದ 38ರವರೆಗಿನ ಹಾಡುಗಳು ಪ್ರಕೃತಿ ವರ್ಣನೆಯನ್ನು, ನೀತಿ ಸಾರಗಳ ಆಶಯವನ್ನು ಸೂಚಿಸುತ್ತವೆ. ತೋರಿಕೆಗೆ ಇಲ್ಲಿಯ ಹಾಡುಗಳನ್ನು ಮೂರು ಭಾಗ ಮಾಡಿಕೊಂಡರೂ, ಅವೆಲ್ಲವುಗಳೂ ಒಟ್ಟಾಗಿ ಒಂದೇ ಹಾಡಿನ ಗುಂಪುಗಲಾಗಿ ಕಂಡುಬರುತ್ತವೆ. ಯಾಕೆಂದರೆ 38 ಹಾಡುಗಳಲ್ಲಿ ಹೆಣ್ಣಿನ ಬದುಕಿನ ಬಿಡಿಬಿಡಿ ವಿವರಗಳಿವೆ. ಹಾಡುಗಳ ಸಂಗ್ರಹವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇವುಗಳು ಯಾರ ಕುರಿತಂತೆ ರಚನೆಯಾಗಿದೆಯೆಂದು ಗೊತ್ತಾಗುತ್ತದೆ. ಹಾಡುಗಳು ಕೆಳವರ್ಗದ ಹೆಣ್ಣೊಬ್ಬಳನ್ನು ದೇವರು ಮದುವೆಯಾಗಿರುವುದನ್ನು ವಿವರಿಸುತ್ತದೆ. ದೇವರು ಗೋಪಾಲನಾಗಿ, ಮಲೆ–ಮಾದೇಶ್ವರನಾಗಿ, ಬಿಳಿಗಿರಿ ರಂಗಸ್ವಾಮಿಯಾಗಿ, ಬೇರೇ ದೇವರಾಗಿ ಬಡವನ ಬದುಕಿನಲ್ಲೂ ಬಂದು ನೆಲೆಸಿರುವ ಚಿತ್ರಣವಿದೆ. ರೈತ ಲೌಕಿಕದಿಂದ ಅಲೌಕಿಕ ಶಕ್ತಿಯೊಂದಿಗೆ ರಾ ಮಾಡಿಕೊಂಡು ದೈವತ್ವಕ್ಕೆ ಏರುವ ವಿವರಗಳುಳ್ಳ ಹಾಡುಗಳಿವೆ. ರೈತನ ಬದುಕಿನಲ್ಲಿ ರೀತಿಯ ಸಂಗತಿಗಳು ನಿಜವಾಗಿರುತ್ತವೆ ಎಂಬುದನ್ನು ಹಾಡುಗಳೇ ಸ್ಪಷ್ಟಪಡಿಸುತ್ತವೆ.

ರಂಗಸ್ವಾಮಿಯವರು ತಾವು ಸಂಗ್ರಹಿಸಿದ ಜನಪದ ಹಾಡುಗಳನ್ನು ಆಧುನಿಕತೆಗೆ ವಿರುದ್ಧ ನೆಲೆಯಲ್ಲಿ ನಿಲ್ಲಿಸಿದ್ದಾರೆ ಮಾತ್ರವಲ್ಲ ಜನಪದ ಹಾಡುಗಳಲ್ಲಿ ರಾಷ್ಟ್ರದ ಮೂಲ ಸಂಸ್ಕೃತಿ ಉಳಿದಿದೆ ಎಂದು ಭಾವಿಸಿದ್ದಾರೆ. ಜನಪದ ಗೀತೆಗಳನ್ನು ರಾಷ್ಟ್ರೀಯ ಚೌಕಟ್ಟಿನಲ್ಲಿರಿಸಿ ಚರ್ಚಿಸಲು ಪ್ರಯತ್ನಿಸಿದ್ದಾರೆ ಎಂಬ ಅಂಶ ತಾನೇ ತಾನಾಗಿ ಸ್ಪಷ್ಟವಾಗುತ್ತದೆ. ಇಂಥ ಕೆಲಸವನ್ನು ಬಹಳ ಸಂಗ್ರಾಹಕರು ಮಾಡಿಲ್ಲ ಎಂಬ ಅಂಶವು ಗಮನಾರ್ಹ.

1943ರಲ್ಲಿ **ಗೋರೂರು ರಾಮಸ್ವಾಮಿ ಅಯ್ಯಂಗಾರ್‌ರ 'ಹಳ್ಳಿಯ ಬಾಳು'** ಗ್ರಂಥವು ಹಲವು ಉಪನ್ಯಾಸಗಳ ಸಂಕಲನ. "ಉಪನ್ಯಾಸಗಳು ನಾನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಸಂಘದ ಆಶ್ರಯದಲ್ಲಿಯೂ, ಇಂಟರ್ ಮೀಡಿಯಟ್ ಕಾಲೇಜಿನ ಯೂನಿಯನ್ನಿನ ಆಶ್ರಯದಲ್ಲಿಯೂ ಕೊಟ್ಟ ವ್ಯಾಖ್ಯಾನಗಳ ಸಾರಾಂಶವಾಗಿದೆ" (1943: ಅರಿಕೆ ಭಾಗ) ಎಂದು ಹೇಳಿದ್ದಾರೆ. ಸಂಕಲನದಲ್ಲಿ ಆರು ಲೇಖನಗಳಿದ್ದು; ಮೊದಲ ಮಾತು, ದೇವರೊಂದಿಗೆ ಗೆಳೆತನ, ಬೆವರಿನ ಆಳು, ಲೋಕದ ಬಂಧು, ಗಂಡ, ಹೆಂಡತಿ, ಪ್ರೇಮ, ಸಂಸಾರ ಹಾಗೂ ಸಾಹಿತ್ಯದ ಸೊಗಸು ವರ್ಗೀಕರಣಗೊಂಡಿದೆ.

'ಹಳ್ಳಿಯ ಬಾಳು' ಸಂಕಲನವು ಮೈಸೂರು ಸುತ್ತಲಿನ ಹಳ್ಳಿಯೊಂದರ ರೈತರ ಜೀವನ ಚಿತ್ರಣವಾಗಿದ್ದು, ಮೊದಲ ಮಾತು ಭಾಗದಲ್ಲಿ ಲೇಖಕರು ರೈತನ ಬದುಕಿನ

ಕುರಿತಂತೆ ಹೀಗೆ ಹೇಳಿದ್ದಾರೆ. "ನಮ್ಮ ದೇಶದ ರೈತ ನಮ್ಮ ದೇಶದ ಬೆನ್ನು ಮೂಳೆ, ಅವನೇ ನಮ್ಮ ಜನತೆಯ ಜೀವಾಳ. ಅವನಲ್ಲಿ ಅಡಗಿರುವ ಸಂಸ್ಕೃತಿಯೇ ನಮ್ಮ ಪ್ರಾಣವಾಯು. ಪರದೇಶದ ನಾಗರಿಕತೆಯ ಪ್ರಭಾವಕ್ಕೆ ಒಳಗಾದ ನಾವು ನಮ್ಮೆದೆನ್ನುವುದನ್ನೆಲ್ಲಾ ಕಳೆದು ಕೊಂಡಿದ್ದೇವೆ. ಆಧುನಿಕ ಪ್ರಪಂಚದಲ್ಲಿ, ನಮಗೆ ಜೀವವನ್ನೂ ಚೈತನ್ಯವನ್ನೂ ಕೊಡುವ ಭಾಗಗಳನ್ನು ಬಿಟ್ಟು, ಶುಷ್ಕವಾದ ಪ್ರವಾಹ ಮಾತ್ರದಲ್ಲಿ ತೇಲಿಕೊಂಡು ಹೋಗುತ್ತಿರುವ ನಮಗೆ ನಮ್ಮಲ್ಲಿಯ ಕಾಳು–ಜಳ್ಳು ಎರಡೂ ಬೇಡವಾಗಿದೆ. ಹರದಯಾಳ್‌ನಾಗ್ ಹೇಳಿದ ಮಾತುಗಳು ನಮಗೆ ಚೆನ್ನಾಗಿ ಅನ್ವಯಿಸುತ್ತದೆ; 'ಜುಟ್ಟು ಯಾತಕ್ಕೆ? ಜನಿವಾರ ಯಾತಕ್ಕೆ? ಇವೆಲ್ಲಾ ಅನಾಗರಿಕತೆಯ ಯಾವುದೇ ಅವಶಿಷ್ಟಗಳು ಎನ್ನುವಿರಿ. ಆದರೆ ನೀವು ಜುಟ್ಟು ತೆಗೆಸಿ ಕ್ರಾಪು ಬಿಡುವುದರಿಂದ ಪರಸಂಸ್ಕೃತಿಯ ದಾಸರಾಗುತ್ತೀರೆಂಬುದನ್ನು ಮರೆಯಬೇಡಿ. ಜನಿವಾರವನ್ನು ನೀವು ತಿರಸ್ಕರಿಸಿವಂತೆ ನಿಮ್ಮನ್ನು ಪ್ರೇರಿಸುವುದು ಆ ಪರಸಂಸ್ಕೃತಿ. ಆದುದರಿಂದ ಇಂಗ್ಲಿಷ್ ಭಾಷೆ ನಿಮ್ಮ ಸಂಸ್ಕೃತಿ ಸಮಾಜಗಳಿಗೆ ಹಿಂದೆ ಯಾವುದೂ ಕೊಡದಿದ್ದಂತಹ ಬಲವಾದ ಏಟು ಕೊಟ್ಟಿದೆ. ಅದರ ಹೊಳಪಿಗೆ ಮೊದಲು ಬಲಿಯಾಗುವವರು ವಿದ್ಯಾವಂತರೆನ್ನಿಸಿಕೊಂಡ ನಾವೇ. ಇಂಗ್ಲಿಷ್ ಪ್ರವೇಶಿಸಿದ ಕಡೆ ನಮ್ಮ ಸ್ವಾಭಿಮಾನವು ನಮ್ಮದರಲ್ಲಿ ನಮ್ಮ ಭಕ್ತಿಯೂ ಪಲಾಯನವಾಗುವುದು. ಅದೇ ಇಂಗ್ಲಿಷಿನವನನ್ನು ನೋಡಿ ನಿಮ್ಮನ್ನು ಹೊಗಳುತ್ತಲೇ ಇರುತ್ತಾನೆ. ನಿಮ್ಮ ಕಲೆ, ನಿಮ್ಮ ಎಲ್ಲೋರ, ಅಜಂತ, ತಾಜ್ ಮಹಲ್–ಇವುಗಳನ್ನು ಪ್ರಶಂಸಿಸುತ್ತಲೇ ಇರುತ್ತಾನೆ. ಆದರೆ ತನ್ನ ಯಾವುದಾದರೂ ಅಭ್ಯಾಸವನ್ನು ಬದಲಾಯಿಸಿದ್ದಾನೆಯೇ? ನಡೆ, ನುಡಿ, ಉಡುಪು ಯಾವುದರಲ್ಲಾದರೂ ಅವನು ನಿಮ್ಮನ್ನು ಅನುಕರಿಸುತ್ತಿದ್ದಾನೆಯೆ? ಇಲ್ಲ ಯಾಕೆ? ಅವನಿಗೆ ಸ್ವಾಬಿಮಾನ ಹೆಚ್ಚು. ಅವನು ಅಭಿಮಾನ ಶೂನ್ಯನಾಗಿಲ್ಲ. ಜಗತ್ತು ನಿಮ್ಮನ್ನು ನೋಡಿ ನಗುವುದೂ ಸಹ ನಿಮಗೆ ತಿಳಿಯುವುದಿಲ್ಲ. ಹರದಯಾಳ್‌ನಾಗ್ ಹೇಳಿರುವ ಮಾತುಗಳು ಹೀಗೆ ಪಾಶ್ಚಾತ್ಯ ಸಂಸ್ಕೃತಿಯ ಗಾಢ ಪ್ರಭಾವ ಕರ್ನಾಟಕಕ್ಕೂ ಅನ್ವಯಿಸುತ್ತವೆ."(1943:1–2) ಪಾಶ್ಚಾತ್ಯ ಸಂಸ್ಕೃತಿಯ ಗಾಢ ಪ್ರಭಾವ ಕರ್ನಾಟಕ ಜನತೆಗೆ ಆಗಿದ್ದರೂ, ಅದರಿಂದ ಚೇತರಿಸಿಕೊಳ್ಳುವುದಕ್ಕೆ ಆಗಲಿಲ್ಲ. "ಪಾಶ್ಚಾತ್ಯ ನಾಗರಿಕತೆಗೆ ವಿದ್ಯಾವಂತರೆನ್ನಿಸಿಕೊಂಡವರು ಬಲಿಯಾಗಿರುವಷ್ಟು ಅವಿದ್ಯಾವಂತರಾದ ಹಳ್ಳಿಯವರು ಒಳಗಾಗಿಲ್ಲವೆಂಬುದು ನಿಜ. ಹೌಸ್ಕೂಲುಗಳಲ್ಲಿ ಈಗ ಇಂಗ್ಲಿಷ್ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಹ ರಾಮಾಯಣ ಭಾರತಗಳ ಕತೆಗಳು ಸರಿಯಾಗಿ ಗೊತ್ತಿಲ್ಲವೆಂಬುದು ಅನೇಕ ಉಪಾಧ್ಯಾಯರು ತಿಳಿದ ವಿಷಯ. ಕಾಲೇಜು ವಿದ್ಯಾರ್ಥಿಗಳಿಗೆ ರಾಷ್ಟ್ರೀಯವಾದ ಉತ್ಸಾಹವಿದ್ದರೂ ವಿಚಾರಗಳು ತಿಳಿದಿರುವುದಿಲ್ಲ. ಕಾಲೇಜು ಉಪಾಧ್ಯಾಯರುಗಳಿಗೆ

ಷೇಕ್ಸ್‌ಪಿಯರ್, ಮಿಲ್ಟನ್ ಗೊತ್ತಿರುವಂತೆ ರಾಮಾಯಣ, ಭಾರತ, ಭಾಸ ತಿಳಿದಿರುವುದಿಲ್ಲ. ಕನ್ನಡ ಅಧ್ಯಾಪಕರು ಸಹ ಸಾರ್ವಜನಿಕ ಭಾಷಣಗಳಲ್ಲಿ ಇಂಗ್ಲಿಷಿನಿಂದಲೇ ಉದಾಹರಣೆಗಳನ್ನು ತೆಗೆದುಕೊಳ್ಳುತ್ತಾರೆ. ನಮ್ಮ ದೇಶದ ಅತ್ಯುತ್ಕೃಷ್ಟವಾದ ಕವಿಗಳನ್ನು ಪರದೇಶದ ಮೂರನೆಯ ನಾಲ್ಕನೆಯ ದರ್ಜೆಯ ಕವಿಗಳೊಂದಿಗೆ ಹೋಲಿಸದಿದ್ದರೆ ಇವರಿಗೆ ತೃಪ್ತಿಯಿಲ್ಲ. ಭಾಷಣ, ನಾಟಕಗಳ ಸನ್ನಿವೇಶಗಳನ್ನು ಜೂಲಿಯಸ್ ಸೀಸರ್, ಕಿಂಗ್‌ಲಿಯರ್‌ಗಳೊಂದಿಗೆ ಹೋಲಿಸುತ್ತಾರೆ. ಆ ಪರೀಕ್ಷೆಗಳಲ್ಲಿ ನಮ್ಮ ದೇಶದ ದುರದೃಷ್ಟ ಕವಿಗಳು ಉತ್ತೀರ್ಣರಾಗಬೇಕು. ಇಲ್ಲದಿದ್ದರೆ ಇವರ ಸ್ಥಾನಕ್ಕೆ ಚ್ಯುತಿ ಬರುತ್ತದೆ. ರನ್ನನನ್ನು ಮಿಲ್ಟನ್‌ಗೆ ಹೋಲಿಸಬೇಕು. ಹರಿಹರನನ್ನು ಲಾಸರ್‌ಗೆ ಹೋಲಿಸಬೇಕು. ಸನ್ನಿವೇಶ ನಮ್ಮ ಆಧುನಿಕ ನಾಗರಿಕತೆಯಲ್ಲಿ ಹಾಸುಹೊಕ್ಕಾಗಿ ನೆಯಿದು ಪಂಡಿತರು ಹಿಂದಿನದೆ ಸರಿ ಎಂದು ಮೊಂಡು ಬಿದ್ದರೆ, ಅವರಷ್ಟೇ ಸಂಕುಚಿತ ಭಾವದಿಂದ ಪಾಶ್ಚಾತ್ಯವಾದದ್ದೇ ಸರಿ. ಇಂಗ್ಲಿಷೆ ಸರಿ ಎಂದು ಹಠ ಹಿಡಿಯುತ್ತಾರೆ. ಇಬ್ಬರು ಮತಾಂಧರ ಸಾರವನ್ನೂ ಹೀರಿಕೊಂಡು ಕನ್ನಡ ನಾಗರಿಕತೆ ಬೆಳೆಯಬೇಕಾಗಿದೆ."(1943: 2–3)

"ಆದರೆ ತಿಕ್ಕಾಟ ತನ್ನ ತೀವ್ರತೆಯಲ್ಲಿ ಹಳ್ಳಿಗಳನ್ನು ಇನ್ನೂ ತನ್ನ ತೆಳವಿಗೆ ಎಳೆದುಕೊಂಡಿಲ್ಲ. ಇದಕ್ಕೆ ಮುಖ್ಯ ಕಾರಣ, ಇಂಗ್ಲಿಷರ ರಾಜ್ಯ ಇನ್ನೂರು ವರುಷಗಳಿಂದ ನಡೆದರೂ ಹಳ್ಳಿಗಳಿಗೆ ಅನಾಗರಿಕತೆಯ ಪ್ರಭಾವ ಹೆಚ್ಚಾಗಿ ಸೋಕಿಲ್ಲದಿರುವುದು. ನಮ್ಮ ಜನ ಯಾವುದನ್ನು ಸ್ವೀಕರಿಸುವುದೂ ನಿಧಾನ. ಹಳೆಯದನ್ನು ಬಿಡುವುದೂ ನಿಧಾನ. ಆದುದರಿಂದ ಯಾವುದು ನಮ್ಮ ಹಳ್ಳಿಗಳಲ್ಲಿ ಇನ್ನೂ ಉಳಿದಿದೆಯೋ ಅದೇ ನಮ್ಮ ಜೀವನದ ಜೀವಾಳ ನಾಗರಿಕತೆಗಳ ಹೋರಾಟದಲ್ಲಿ ತಲೆಯೆತ್ತಿಕೊಂಡು ನಿಂತು ನಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಂಡಿರುವುದೇ ನಮ್ಮ ಹಳ್ಳಿಗಳ ಸಂಸ್ಕೃತಿ. ರವೀಂದ್ರನಾಥ ಠಾಕೂರರು ಹೇಳಿರುವಂತೆ, 'ಭಾರತದ ಧರ್ಮ ಅರಣ್ಯಗಳಲ್ಲಿ ಬೆಳೆದ ಧರ್ಮ. ಭಾರತದ ನಾಗರಿಕತೆ ಹಳ್ಳಿಗಳ ನಾಗರಿಕತೆ' ನಮ್ಮ ದೇಶದ ರೈತ ಇಂದಿನವನಲ್ಲ. ಅನೇಕ ಶತಮಾನಗಳಿಂದ ಬೆಳೆದು ಬಂದು ನಿತ್ಯನಾದವನು. ಅವನ ರಕ್ತದಲ್ಲಿ ನಮ್ಮ ಸಂಸ್ಕೃತಿ ಸೇರಿಕೊಂಡಿದೆ. ಅನೇಕ ಪರಸಂಸ್ಕೃತಿಗಳು ಬಂದು ಅಪ್ಪಳಿಸಿದುದನ್ನು ಜೈಸಿಕೊಂಡು ನಿಂತಿದ್ದಾನೆ. ಬಾಳನ್ನು ಬಾಳುವುದರಲ್ಲಿಯೂ, ಪ್ರಕೃತಿ ಸೌಂದರ್ಯವನ್ನು ಸವಿಯುವುದರಲ್ಲಿಯೂ ಕಾವ್ಯವನ್ನು ಸೃಷ್ಟಿಸುವುದರಲ್ಲಿಯೂ ಅವನು ಯಾರಿಗೂ ಕಡಿಮೆ ಇಲ್ಲ." (1943:3)

ರೈತನ ಜೀವನದಲ್ಲಿ ತಿರುಳಿದೆ, ನಿಲ್ಲತಕ್ಕ ಸಂಸ್ಕೃತಿ ಅವನಲ್ಲಿ ಇದೆ–ಎಂದು ಹೇಳುತ್ತಾ, ಜನಪದ ಜೀವನದ ನಿಜವಾದ ಸ್ವತ್ತು ಹಳ್ಳಿಗರು ಹಾಗೂ ಅವರ ಸಂಸ್ಕೃತಿ ಎಂದು ಅಭಿಪ್ರಾಯಪಡುತ್ತಾರೆ. 'ದೇವರೊಂದಿಗೆ ಗೆಳೆತನ' ಲೇಖನದಲ್ಲಿ "ರೈತನಿಗೆ ತನ್ನ ಜೀವನದಲ್ಲಿ

ಯಾವಾಗಲೂ ಎರಡೇ ಗುರಿಗಳಿರುತ್ತವೆ. ಮೊದಲನೆಯದು, ತನ್ನ ದೇವರಲ್ಲಿ ತಾನು ಸರಿಯಾಗಿರಬೇಕು ಎಂಬುದು. ಎರಡನೆಯದು, ಸಮಾಜದಲ್ಲಿ ತಾನು ಗಣ್ಯವಾಗಿ 'ಊರಿಗೆ ಆಳಾಗಿ ಮಸಾಣಕ್ಕೆ ಹೆಣವಾಗಿ ಬಾಳಬೇಕು' ಎಂಬುದು" (1943–5) ಹೇಳಿದ್ದಾರೆ.

ರೈತನಿಗೆ "ಒಂದು ಪ್ಲೇಗು ಅಥವಾ ಕಾಲರಾ ಬಂದರೆ ಮೊದಲು ಅವನು ತನ್ನ ಊರಿನ ದೇವರಿಗೆ ಹಣ್ಣುಕಾಯಿ ಕೋಳಿ ಮಾಡಿ ನೋಡುತ್ತಾನೆ. ಅದರಿಂದ ಏನೂ ಗುಣ ಕಾಣದಿದ್ದರೆ ಮತ್ತೆ ಊರು ಒಟ್ಟಿನವರೆಲ್ಲಾ ಚಂದಾ ಹಾಕಿ ಚೆನ್ನರಾಯಪಟ್ಟಣದ ಕತ್ತರಿಗಟ್ಟದ ದೇವರಿಗೆ ಇನ್ನೂ ಸ್ವಲ್ಪ ಬಲವಾಗಿಯೇ ಪೂಜೆ ಸಲ್ಲಿಸುತ್ತಾರೆ. ಅಲ್ಲೂ ಏನೂ ನಡೆಯದಿದ್ದರೆ ಮನೆಗೆ ಆಳಿನಂತೆ ಕನ್ನಂಬಾಡಿಗೆ ಹೋಗಿ ಅಲ್ಲಿ ಅಮ್ಮನಿಗೆ ಪೂಜೆ ಮಾಡಿಸುತ್ತಾರೆ. ರೈತನು ಪೂಸುವ ದೇವರ ಸಂಖ್ಯೆಗೂ ಮಿತಿ ಇಲ್ಲ. ಅವನು ಎಷ್ಟು ದೇವರನ್ನು ಬೇಕಾದರೂ ಸ್ಥಾಪಿಸುತ್ತಾನೆ. ಎಷ್ಟು ದೇವರನ್ನು ಬೇಕಾದರೂ ಕಿತ್ತು ಒಗೆಯುತ್ತಾನೆ. ಹಾಳು ಹೊಲಕ್ಕೆ ಒಂದು ದೇವರು, ಕಲ್ಲುಮಂಟಿಗೆ ಒಂದು ದೇವರು, ಕೆರೆ ತೂಬಿಗೆ ಒಂದು ದೇವರು; ಮನೆಯಲ್ಲಿರುವ ಪ್ರತಿಯೊಬ್ಬರಿಗೂ ಬೇರೆ ಬೇರೆ ದೇವರು. ಇದ್ದಕ್ಕಿದ್ದಂತೆ ಯಾವುದೋ ಬೆಟ್ಟದ ಮೇಲಿನ ಹಾಳು ಗುಡಿಯಲ್ಲಿರುವ ದೇವರು ಮನೆ ದೇವರೆಂದು ಹೊರಟು ಬಿಡುತ್ತಾನೆ." (1943:5–6) ದೇವರೊಂದಿಗಿನ ಗಾಢ ಗೆಳೆತನದಲ್ಲಿ ಹಬ್ಬ–ಹರಿದಿನಗಳನ್ನು ಮಾಡುವುದರ ಜೊತೆಗೆ ಬದುಕುತ್ತಾನೆ. ಆತ ತಿರುಪತಿ ತಿಮ್ಮಪ್ಪನನ್ನು ಭಕ್ತಿಯಿಂದ ಪುಸುತ್ತಾನೆ. "ಅಣ್ಣ ತಿಮ್ಮಪ್ಪನ ಹಣೆಯ ಮೇಲಿನ ನಾಮ ಇಟ್ಟನೊಲೆಸಲು ತೆಗೆದಂತೆ. ತಿಮ್ಮಪ್ಪ ನಾಮ ಧರಿಸೋ ವೇಳೆಗೆ ಬೆಳಗಾಯ್ತು." (1943:13) ಬಿಳಿಗಿರಿ ರಂಗಯ್ಯ ಹರಿಸೇವೆ ಮಾಡಿಸುತ್ತಾನೆ. ಏಳುಮಲೆ ಮಾದೇಶ್ವರನ ದೇವಾಲಯಕ್ಕೆ ಹೋಗಿ, "ಮಲ್ಲಿಗೆ ಹೂವಿನ ಹಾಗೆ ಚೆಲ್ಲಿವೆ ನಿನ್ನಿ ಪರಸೆ, ಚೆಲ್ಲಾಟಗಾರ ಮಾದಪ್ಪ. ನಿನ್ನರಸೆ ಕಲ್ಲು ಹತ್ತಿ ಕಣಿವೆ ಇಳಿದವು" (1943:15) ಎಂದು ಹೇಳಿ ಹರಕೆ ಒಪ್ಪಿಸಿ ಬರುತ್ತಾನೆ. ಹಳ್ಳಿಯ ದೇವರುಗಳ ಸಂಬಂಧವೂ ವಿಚಿತ್ರವಾಗಿರುತ್ತದೆ. ಲೇಖಕರು ಚಾಮುಂಡಿ ದೇವಿ ಹಾಗೂ ನಂಜುಂಡಸ್ವಾಮಿಯ ಕತೆಯನ್ನು ನಿರೂಪಿಸುತ್ತಾರೆ 'ದೇವರ ಸಂಸಾರವೂ ರೈತನ ಸಂಸಾರದಂತೆ' ಎಂದು ಹೇಳುತ್ತಾರೆ.

'ಬೆವರಿನ ಆಳು' ಲೇಖನದಲ್ಲಿ 'ದುಡಿಯುವ ರೈತನಿಗೆ ನೆಲವೇ ಸರ್ವಸ್ವ, ಭೂಮಿಯೇ ದೇವರು' ಎನ್ನುತ್ತಾರೆ. ಮಳೆ ಇಲ್ಲವೆಂದು ಅತ್ತರೆ ಮಳೆ ದೇವರು ಬರುತ್ತಾರೆ. ಬೇಸಾಯದ ಕೆಲಸ ಮುಗಿದು ರೈತ ಊರೂರು ತಿರುಗುತ್ತಾನೆ. ರಾಮನಾಥಪುರದ ಜಾತ್ರೆ, ಹಾಸನದ ಜಾತ್ರೆ, ಚುಂಪನಕಟ್ಟೆ ಜಾತ್ರೆ, ಹೇಮಗಿರಿ, ಗೊರೂರು, ಮಡುಕತೊರೆ – ಹೀಗೆ ತಿರುಗುತ್ತಾನೆ. ಸುಬ್ರಹ್ಮಣ್ಯದ ಜಾತ್ರೆಗೆ 50–100 ಜೋಡಿ ಕೋಣಗಳನ್ನು ಶೇಖರಿಸಿ ವ್ಯಾಪಾರಕ್ಕೆ

ಹೋಗುತ್ತಾನೆ. ಹೀಗೆ ರೈತನ ಬದುಕು. "ಆರು ತಿಂಗಳ ಅಂಬಲಿ, ಮೂರು ತಿಂಗಳು ಸೊಪ್ಪುಸೆದೆ, ಇನ್ನು ಮುರು ತಿಂಗಳು ಹಂಗೂ-ಹಿಂಗೂ." (1943:35)

ಸುಗ್ಗಿ ಬಂದರೆ ರೈತನಿಗೆ ಮತ್ತೆ **ಹೊಸತನ**. ಸುಗ್ಗಿಯ ಕಾಲ ಬಂತೆಂದರೆ 'ಲೋಕದ ಬಂಧು'ಗಳೆಲ್ಲಾ ರೈತನನ್ನು ಜ್ಞಾಪಿಸಿಕೊಳ್ಳುತ್ತಾರೆ. "ಶ್ಯಾನುಬಾಗರು, ಪಟೇಲರು, ಜೋಯಿಸರು, ಮೇಟರು, ಪೂಜಾರಿ, ಶೇಕದಾರ, ಹಾವಾಡಿಗ, ದೊಂಬ, ಆಗಸ, ಹಜಾಮ, ಮಂದೆಕುರಿಯುವ, ಹಂದಿಚೀಕ, ಉಳ್ಳ ಹಾಕುವವನು, ಚಿತ್ರಗೊಂಬೆ, ಪುತ್ಲಿಬೊಂಬೆ ಇವರೆಲ್ಲಾ ತಮ್ಮ ತಮ್ಮ ಮಿರಾಸೆಗೆ ಬರುವವರು." (1943:39) ಇವರಲ್ಲದೆ ಮಹಾರಾಷ್ಟ್ರದ ಬುರುಡೆ ಬೆಸ್ತರು, ಉತ್ತರ ಕರ್ನಾಟಕದ ಜೋಗವ್ವಗಳು, ಬೊಂಬಾಯಿ ತಮಾಷೆ ಇವರೂ ಮೈಸೂರಿನ ಹಳ್ಳಿಗಳಿಗೆ ನುಗ್ಗುವುದುಂಟು.

'ಗಂಡ, ಹೆಂಡತಿ, ಪ್ರೇಮ, ಸಂಸಾರ'- ಲೇಖನದಲ್ಲಿ ರೈತನ ಸಂಸಾರಿಕ ಬದುಕನ್ನು ವಿವರಿಸಲಾಗಿದೆ. ರೈತನ ಪೈರು ಚೆನ್ನಾಗಿ ಬೆಳೆದರೆ ಸಂಸಾರವೆಲ್ಲ ತೃಪ್ತಿಯಲ್ಲಿರುತ್ತದೆ. ಗಂಡ-ಹೆಂಡತಿ, ಮಾಮ-ಅಳಿಯ, ಅತ್ತೆ-ಸೊಸೆ, ಅಣ್ಣ-ತಂಗಿ ಸಂಸಾರದೊಳಗಿನ ಎಲ್ಲಾ ಸಂಬಂಧಗಳೂ ಸಂತೋಷದಾಯಕವಾಗಿರುತ್ತದೆ.

'ಸಾಹಿತ್ಯದ ಸೊಗಸನ್ನು' ಲೇಖಕರು ತುಂಬ ಉದಾರವಾಗಿ ವಿವರಿಸುತ್ತಾ, ನೂರಾರು ಗಾದೆಗಳನ್ನು ಪಟ್ಟಿ ಮಾಡಿದ್ದಾರೆ. ಇವೆಲ್ಲವೂ ರೈತನ ಸಂಸ್ಕೃತಿಯ ಮೂಲ ಎನ್ನುತ್ತಾರೆ. "ನಮ್ಮ ರೈತ ಸ್ವಾಭಾವಿಕವಾಗಿ ಸುಸಂಸ್ಕೃತನಾದವನು. ಅವನ ಹೃದಯ ವಿಶಾಲವೂ ಕೋಮಲವೂ ಆದುದು. ಅವನಿಗೆ ಸ್ವಲ್ಪ ಸಹಾನುಭೂತಿ, ಸ್ವಲ್ಪ ಸ್ನೇಹ, ಸ್ವಲ್ಪ ಸಮಾನತೆ, ಇವು ಸಿಕ್ಕಿದರೆ ಸಾಕು. ಅವನು ಇತರ ದೇಶದ ರೈತರಿಗೆ ಸಮಾನವಾಗುವುದಂತೂ ಸರಿಯೇ. ಎಲ್ಲರನ್ನೂ ಮೆಟ್ಟಿ ನಿಲ್ಲುವ ಶಕ್ತಿ ಅವನಿಗೆ ಬರುವುದು. ನಾವು ಎಲ್ಲಿಯವರೆಗೆ ಅವನನ್ನು ನಮ್ಮ ಸರಿಸಮಾನವಾಗಿ ಎಣಿಸಿ ನಮ್ಮ ಜತೆಯಲ್ಲಿ ಕರೆದುಕೊಂಡು ಹೋದೆವೋ ಅಲ್ಲಿಯವರೆಗೆ ಅವನು ಜಗತ್ತಿನಲ್ಲಿ ಶ್ರೇಷ್ಟನಾಗಿಯೇ ಇದ್ದನು. ಅಶೋಕನ ರಾಜ್ಯವನ್ನು ಕಟ್ಟಿದವನು ಅವನೇ. ಶಿವಾಯ ಜತೆಯಲ್ಲಿ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದವನೂ ಅವನೇ. ರಾಮಾಯಣ ಭಾರತ ಅವನಿಗೆ ತಿಳಿದಂತೆ ವಿದ್ಯಾವಂತರೆನಿಸಿಕೊಂಡ ನಮ್ಮಲ್ಲಿ ಅನೇಕರಿಗೆ ತಿಳಿದಿಲ್ಲ. ನ್ಯಾಯ-ಅನ್ಯಾಯಗಳು ಅವನ ಸುಸಂಸ್ಕೃತ ಅಜ್ಞಾನಕ್ಕೆ ಗೋಚರವಾಗುವಷ್ಟು ಸುಲಭವಾಗಿ ನಮಗೆ ಗೋಚರವಾಗುವುದಿಲ್ಲ. ಅವನಲ್ಲಿ ಎಲ್ಲಿಯವರೆಗೆ ನಾವು ನಂಬಿಕೆಯನ್ನಿಟ್ಟು ಅವನ ಶಕ್ತಿಯಲ್ಲಿ ಗೋಚರವಾಗುವುದಿಲ್ಲ. ಅವನಲ್ಲಿ ಎಲ್ಲಿಯವರೆಗೆ ನಾವು ನಂಬಿಕೆಯನ್ನಿಟ್ಟು ಅವನ ಶಕ್ತಿಯಲ್ಲಿ ನಂಬಿಕೆಯನ್ನೂ ನೆಚ್ಚನೂ ತೋರಿಸಿದೆವೋ ಅಲ್ಲಿಯವರೆಗೆ ಅವನು ಜಗತ್ತಿನಲ್ಲಿ ತಾನೂ ತಲೆ ಎತ್ತಿಕೊಂಡು

ನಡೆದು ನಾವೂ, ತಲೆ ಎತ್ತಿಕೊಂಡು ನಡೆಯುವಂತೆ ನಮಗೆ ಕೆಚ್ಚನ್ನು ಕೊಟ್ಟನು. ಅನಂತರ ನಮ್ಮ ದಾರಿಯೂ ಅವನ ದಾರಿಯೂ ಬೇರೆಯಾಯಿತು. ಸ್ವಲ್ಪ ಹೆಚ್ಚು ಕಡಿಮೆ ಒಂದೇ ಸಂಸ್ಕೃತಿಯ ಮಟ್ಟದಲ್ಲಿದ್ದ ನಮ್ಮ ದೇಶದ ಜನ ಎರಡು ಭಾಗವಾಯಿತು. ದತ್ತು ಕೊಟ್ಟ ಮಕ್ಕಳಂತೆ ನಾವೆಲ್ಲ ಪರಭಾಷೆ ಪರಸಂಸ್ಕೃತಿಯ ವ್ಯಾಮೋಹಕ್ಕೆ ತುತ್ತಾದೆವು. ಅಸ್ವಾಭಾವಿಕವಾದ ವ್ಯತ್ಯಾಸದಿಂದ ವಿದ್ಯಾವಂತನೇ ಬೇರೆ ಎಂಬಂತಾಯಿತು. ಆ ಪರ ಸಂಸ್ಕೃತಿಯ ವ್ಯಾಮೋಹದಿಂದ, ನಮಗೆ ಸ್ವಾಭಾವಿಕವಾಗಿ ಪಾಶ್ಚಾತ್ಯವಾದುದರೆಲ್ಲೆಲ್ಲಾ ದಾಸ್ಯ ಮನೋಭಾವವೂ ನಮ್ಮದೆರಲ್ಲೆಲ್ಲಾ ತಿರಸ್ಕಾರವೂ ಉಂಟಾಯಿತು. ಹಳ್ಳಿಯವನಿಗೂ ಪಟ್ಟಣಿಗರಿಗೂ ಈಗ ಇರುವಷ್ಟು ಅಂತರ ಯಾವಾಗಲೂ ಇರಲಿಲ್ಲ. ಅವನ ಜೀವನಕ್ಕೂ ನಮ್ಮ ಜೀವನಕ್ಕೂ ಸಂಬಂಧವೇ ಇಲ್ಲ. ಅವನಿಗೆ ರಾಮಾಯಣ ಭಾರತವಾದರೆ ನಮಗೆ ಡ್ಯಾಂಟೆ ಷೇಕ್ಸ್‌ಪಿಯರ್; ಅವನಿಗೆ ಪ್ರತಾಪಸಿಂಹ ಅಶೋಕ ಶಿವಾಗಳಾದರೆ ನಮಗೆ ಜೂಲಿಯಸ್ ಸೀಸರ್, ನೆಪೋಲಿಯನ್, ಎಲಿಜಬೆತ್. ಆಗ ಅವನು ತನಗೆ ಸಮಾನವಾಗಿ ನಮ್ಮನ್ನು ಮರೆಸಿದನು. ನಾವು ಈಗ ಅವನಿಗೂ ನಮಗೂ ಇರುವ ಅಂತಹ ಹಿಂದೆಂದು ಇಲ್ಲದಷ್ಟು ಮಾಡಿರುವುದಲ್ಲದೆ, ನಮ್ಮ ದೇಶದ ಏಳಿಗೆಗೆ ಮುಖ್ಯವಾಗಿ ಸಾಧಕಗಳಾದ ಕೆಚ್ಚು, ಆತ್ಮಗೌರವ, ನಮ್ಮದರಲ್ಲಿ ನಮಗೆ ಅಭಿಮಾನ, ನಮ್ಮವರ ಶಕ್ತಿಯಲ್ಲಿ ನಮಗೆ ನಂಬಿಕೆ, ನಮ್ಮ ಸೂರರು ನಮ್ಮ ಧೀರರು–ಎಲ್ಲರನ್ನೂ ಕಳೆದುಕೊಂಡು ನಾವು ಬೇರೆ ಆಗಿದ್ದೇವೆ."(1943:68)

ಕೃತಿಯ ಕೇಂದ್ರ ಬಿಂದು ರೈತ. ಮೈಸೂರು ಸುತ್ತಮುತ್ತಲಿನ ಪ್ರದೇಶದ ಆಚರಣೆ, ಜಾತ್ರೆ, ಹಬ್ಬಗಳನ್ನು ಮಾತ್ರ ಗಮನದಲ್ಲಿರಿಸಿಕೊಂಡು ರಚನೆಯಾಗಿದೆ. ಜನಪದ ಗೀತೆಗಳನ್ನೇ ಗಮನದಲ್ಲಿರಿಸಿಕೊಂಡು ಅದರ ಸುತ್ತಲಿನ ಚಾರಿತ್ರಿಕ ವಿವರಗಳನ್ನು ಕೊಡಲಾಗಿದೆ. ರಾಷ್ಟ್ರೀಯತೆಯ ಸಂದರ್ಭದಲ್ಲಿ ಜನಜಾಗೃತಿಗಾಗಿ ದೇಸೀ ಸಂಸ್ಕೃತಿಯನ್ನು ಉದಾತ್ತೀಕರಿಸುವ ಉದ್ದೇಶವಾಗಿದ್ದು, ಗ್ರಾಮದೇವತೆಗಳ ಚರಿತ್ರೆ ಹಾಗೂ ರೈತನ ಬದುಕನ್ನು ತೌಲನಿಕವಾಗಿರಿಸಲು ಪ್ರಯತ್ನಿಸಿದ್ದಾರೆ. ಹೀಗೆ ಸಂಪಾದಕರು ಕನ್ನಡ ನಾಡಿನ ಹಳ್ಳಿಯ ಬದುಕಿನ ಬಗ್ಗೆ ಅಪಾರವಾದ ಪ್ರೀತಿಯನ್ನು ಪ್ರಕಟಪಡಿಸಿದ್ದಾರೆ.

1947ರಲ್ಲಿ ಪ್ರಕಟವಾದ **'ನಾಡ ಪದಗಳು'** ಹಾಡುಗಳ ಸಂಗ್ರಹವನ್ನು **ಎಲ್. ಗುಂಡಪ್ಪ**ನವರು ಸಂಪಾದಕರು ಹಾಗೂ ಪ್ರಕಾಶಕರೂ ಅವರೇ.[4] ಹಾಡುಗಳನ್ನು ಆಯ್ದುವರು ಮುತ್ತು ರಾಮಸ್ವಾಮಿ ಹಾಗೂ ಮತಿಘಟ್ಟ ಕೃಷ್ಣಮೂರ್ತಿ. ಸಂಗ್ರಹವು 1947ರಲ್ಲಿ ಪ್ರಕಟವಾದರೂ 1943ರಲ್ಲಿ ಬಿ.ಎಂ.ಶ್ರೀ ಕಂಠಯ್ಯನವರು ಬರೆದ ಮುನ್ನುಡಿ ಬಳಕೆಯಾಗಿದೆ. "ಇದುವರೆಗೆ ನಾನು ನೋಡಿರುವ ಸಂಗ್ರಹಗಳೆಲ್ಲಾ ಈಗಿನ ಸಂಗ್ರಹವೇ ಸರ್ವೋತ್ತಮವಾದದ್ದು ಹಾಗೂ ಅತ್ಯಂತ ಸ್ವಾರಸ್ಯವಾದದ್ದು. ಇದು ಸಂಗ್ರಹವಾಗಿ

ಬಂದಿರುವುದು ಪ್ರಸಿದ್ಧ ಹೊಯ್ಸಳ ರಾಜಧಾನಿ ದೋರಸಮುದ್ರ (ಹಳೆಬೀಡು) ಪ್ರಾಂತದಿಂದ. ಇದರಲ್ಲಿ ಕೆಲವು ಚಾರಿತ್ರಿಕ ಲಾವಣಿಗಳೂ (ಉದಾ: ಲಕ್ಕಣ್ಣ–ಈರಣ್ಣರೆಂಬ ರಾಜಕುಮಾರರನ್ನು ಶ್ರೀರಂಗಪಟ್ಟಣದ ಪತನವನ್ನೂ ಕುರಿತವು) ಅನೇಕ ಹೆಂಗಸರ ಹಾಡುಗಳೂ, ಎದೆ ಕರಗಿಸುವ ಕರುಣಕಥೆಗಳೂ, ಧಾರ್ಮಿಕ ಭಾವಗೀತೆಗಳೂ ಇವೆ. ಇವೆಲ್ಲ ಸಮಾಜದ ಜೀವನ, ಭಾವನೆ ಹಾಗೂ ಸಂಸ್ಕೃತಿಗಳನ್ನು ಪ್ರತಿಬಿಂಬಿಸುತ್ತವೆ. ಕವನಗಳನ್ನೂ ಇಂಥ ಇತರ ಕವನಗಳನ್ನೂ ವಿಮರ್ಶಾತ್ಮಕವಾಗಿ ಅಭ್ಯಾಸ ಮಾಡಿದರೆ ಮೈಸೂರು ಚರಿತ್ರೆಯ ಮೇಲೆ ವಿಶೇಷ ಬೆಳಕು ಬೀರುವುದು. ಇವುಗಳ ಆಧಾರದ ಮೇಲೆ ಭಾಷಾಶಾಸ್ತ್ರ ಹಾಗೂ ಛಂದಶಾಸ್ತ್ರಕ್ಕೆ ಸಂಬಂಧಿ ಸಂಗತಿಗಳನ್ನೂ ಕುರಿತು ಅಭ್ಯಾಸಮಾಡಿ ತುಂಬ ಪ್ರಯೋಜನ ಪಡೆಯಬಹುದು. ಕವನಗಳು ವಿದ್ಯಾವಂತರಿಗೂ, ಪಂಡಿತರಿಗೂ ಸ್ವಾರಸ್ಯವಾಗಿರುವುದು ಮಾತ್ರವೇ ಅಲ್ಲ; ನಾವು ಸಾಧಿಸಲು ಪ್ರಯತ್ನಿಸುತ್ತಿರುವ ಗ್ರಾಮಜೀವನದ ಪುನರುಜ್ಜೀವನ ಸಾಧನೆಯಲ್ಲೂ ಇವುಗಳ ಪ್ರಾಮುಖ್ಯ ವಿಶೇಷ ಮಹತ್ವ ಬೀರುವುದೆಂದು ನಾನು ಭಾವಿಸುತ್ತೇನೆ. ಕರುಳು ಕರುಳನ್ನು ಮಿಡಿಯುತ್ತದೆ; ಅಂತರಂಗ ಅಂತರಂಗವನ್ನು ತಟ್ಟಿ ಮಾರ್ದನಿಗೊಡುತ್ತದೆ. ನಮ್ಮ ಹಳ್ಳಿಗರ–ಗಂಡು ಹೆಣ್ಣುಗಳೆಲ್ಲರ– ಜೀವನ ಸಾರವನ್ನೇ ಹೊರಹೊಮ್ಮಿಸುವ ಹಾಡುಗಳು ಅವರನ್ನು ತಣಿಸಿ ಹುರಿದುಂಬಿಸುವಂತೆ ಮತ್ತೆ ಯಾವುದೂ ಹುರಿದುಂಬಿಸಲಾರದು" (1947:5–6) ಎಂಬುದಾಗಿ ಬಿ.ಎಂ.ಶ್ರೀಕಂಠಯ್ಯ ನವರ ಅಭಿಪ್ರಾಯ.

ಸಂಗ್ರಹದ ಸಂಪಾದಕರಾದ ಎಲ್. ಗುಂಡಪ್ಪನವರು ಕೃತಿಯ ಬಿನ್ನಹದಲ್ಲಿ "ನಮ್ಮೂರಿನ ಹೆಂಗಸರೆಲ್ಲ ಹಾಡಿನ ವಿಶ್ವಕೋಶದಂತಿದ್ದ ನಮ್ಮ ಅಜ್ಜಿಯ ಹತ್ತಿರ ಹಾಡು ಹೇಳಿಸಿಕೊಳ್ಳುವುದಕ್ಕೆ ಬರುತ್ತಿದ್ದರು. ಚಿಕ್ಕ ಹುಡುಗಿಯರು ಕೋಲಾಟದ ಹಾಡನ್ನು ಮದುವೆಯಾದ ಹಾಗೂ ಆಗಲಿರುವ ಹುಡುಗಿಯರು ಉರುಟಣೆಯ ಹಾಡು, ಬೀಗರ ಹಾಡು, ಹಾಗೂ ಮಂಗಳ ಗೌರಿ ಮುಂತಾದ ವ್ರತ ಕಥೆಗಳನ್ನೂ, ಹಿರಿಯ ಹೆಂಗಸರು ಉದಯರಾಗ, ತುಳಸಿಯ ಪೂಜೆ, ಸುದಾಮನ ಹಾಡು, ಗಜೇಂದ್ರ ಮೋಕ್ಷ, ಗಿರಿಜಾ ಕಲ್ಯಾಣ, ಮೊದಲಾದ ಶಾಸ್ತ್ರದ ಹಾಗೂ ತತ್ವದ ಹಾಡುಗಳನ್ನೂ, ಹೇಳಿಸಿಕೊಳ್ಳುತ್ತಿದ್ದರು. ನಮ್ಮ ಮನೆಯ ಸುತ್ತಮುತ್ತ ಒಕ್ಕಲಿಗರು ಮನೆಗಳು, ನಮ್ಮ ಸಣ್ಣ ಹಳ್ಳಿಯಲ್ಲಿ ಯಾರ ಮನೆಯಲ್ಲಿ ರಾಗಿಕಲ್ಲು ಪದ ಹೇಳಿದರೂ ನಮ್ಮ ಮನೆಗೆ ಚೆನ್ನಾಗಿ ಕೇಳಿಸುತ್ತಿತ್ತು. ಮನೆಯಲ್ಲೇ ಇದ್ದುಕೊಂಡು ಅವನ್ನೆಲ್ಲಾ ಕೇಳಬಹುದಾಗಿತ್ತು. ಕೋಲಾಟ ನಡೆಯುತ್ತಿದ್ದುದು ಮಾತ್ರ ಸ್ವಲ್ಪ ದೂರದಲ್ಲಿ. ಅಲ್ಲದೆ ಅದನ್ನು ಕಣ್ಣಿಂದ ನೋಡಲೂ ಬೇಕಷ್ಟೆ. ಅದಕ್ಕೆ ತಕ್ಕಷ್ಟು ಅವಕಾಶವಿರಲಿಲ್ಲ. ಅಲ್ಲಿ ಹೋಗಬೇಕೆಂಬ ಕುತೂಹಲ ಹೆಚ್ಚಾಗಿದ್ದರೂ ಹೊರಗೆ ಹೊರಡಲು ಧೈರ್ಯವಿಲ್ಲ. ಬಾಗಿಲ ಬಳಿ ನಿಂತು ಕಿವಿಗೊಟ್ಟು ಆಲಿಸುತ್ತುದ್ದೆ.

ನಮ್ಮ ತಾಯಿ ಕಷ್ಟವನ್ನರಿತು ಅವರಿಗೆ ಬಿಡುವಾದಗಲೆಲ್ಲ ಜೊತೆಗೆ ಬರುತ್ತಿದ್ದರು, ಹೀಗೆ ಚಿಕ್ಕಂದಿನಲ್ಲೇ –ಅಕ್ಷರಾಭ್ಯಾಸಕ್ಕೆ ಮೊದಲೇ ನನಗೆ ಪದಗಳ ಪರಿಚಯವಾಯಿತು. ಆಗ ಅವುಗಳ ಅರ್ಥ, ಸ್ವಾರಸ್ಯ, ಒಂದೂ ತಿಳಿಯುತ್ತಿರಲಿಲ್ಲ. ಒಂದೊಂದರ ಅಭಿಪ್ರಾಯ ಮಾರ್ತ ಮಸುಕು ಮಸುಕಾಗಿ ಮನಸ್ಸಿಗೆ ಹೊಳೆಯುತ್ತಿತ್ತು. ಒಟ್ಟಿನಲ್ಲಿ ಇವು ಚೆನ್ನಾಗಿವೆ, ನಮಗೆ ಬೇಕು ಎನ್ನಿಸುತ್ತಿತ್ತು. ಚೆಗೆ ವಿದ್ಯಾಭ್ಯಾಸಕ್ಕಾಗಿ ಹದಿನೈದು ಇಪ್ಪತ್ತು ವರ್ಷ ಹೊರಗಿದ್ದು ಊರಿಗೆ ಹಿಂದಿರುಗಿದಾಗ ಅವುಗಳ ಬೆಲೆ ಮನದಟ್ಟಾಗಿತ್ತು, ಆದರೆ ಅಷ್ಟು ಹೊತ್ತಿಗೆ ಆ ಹಾಡಿನ ಚೆಲುಮೆಗಳೆಲ್ಲ ಬತ್ತಿ ಹೋಗಿದ್ದವು. ನಮ್ಮೂರಲ್ಲಿ ಆಗ ಕೋಲಾಟಕ್ಕೆ ಹೆಸರಾಗಿದ್ದವರು–ಪುಷ್ಪ, ಬೀರ, ಹುಲಿಯ, ಮೊದಲಾದವರು–ಮೊದಲನೆಯ ಮಹಾಯುದ್ಧ ಕಾಲದ ಇನ್‌ಫ್ಲೂಯೆಂಜಾ ಬೇನೆಗೆ ಬಲಿಯಾಗಿದ್ದರು. ಒಳ್ಳೊಳ್ಳೆಯ ಹಾಡು ಕಲಿತಿದ್ದ ಹೆಣ್ಣು ಮಕ್ಕಳು ಮದುವೆಯಾಗಿ ಬೇರೆ ಊರುಗಳಿಗೆ ಹೋಗಿದ್ದರು. ನಾನು ಮಗುವಾಗಿದ್ದಾಗಲೇ ಹಣ್ಣು ಹಣ್ಣು ಮುದುಕಿಯಾಗಿದ್ದ ಅಜ್ಜಿ ಎಂದೋ ಕಣ್ಮುಚ್ಚಿದ್ದರು. ಹಲವು ಹೊಸ ಒಕ್ಕಲು ವಲಸೆ ಬಂದು ಊರು ದೊಡ್ಡದಾಗಿ ಬೆಳೆದಿರುವುದಾದರೂ ಯಾರಲ್ಲಿಯೂ ಉತ್ಸಾಹವಿಲ್ಲ. ರಸಿಕತನವಿಲ್ಲ, ಜೀವದ ಝುರಿಯಿಲ್ಲ. ಬಾಳು ಬರಡಾಗಿ ಒಣಕಲಾಗಿ ಹೋಗಿದೆ. ಹೀಗಿದ್ದರೂ ಹಿಂದಿನ ವೈಭವದ ನೆರಳು ಇನ್ನೂ ಸ್ವಲ್ಪ ಉಳಿದಿರುವುದು ಆಗಾಗ ಗೋಚರವಾಗುತ್ತದೆ. ಹಿಂದಿನ ಗುಂಪಿನವರಲ್ಲಿ ಅಳಿದುಳಿದ ಒಬ್ಬಿಬ್ಬರ ಪ್ರಯತ್ನದಿಂದ ಈಗಿನ ಅವರ ಪೀಳಿಗೆಯಲ್ಲಿ ಕೋಲಾಟದ ಪದಗಳು ಇನ್ನೂ ಸ್ವಲ್ಪಮಟ್ಟಿಗೆ ಬದುಕಿವೆ. ಒಕ್ಕಲಿಗರ ಹೆಣ್ಣು ಮಕ್ಕಳು ಹೆಚ್ಚು ಪಾಲು ಪದಗಳನ್ನು ಮರೆತಿರುವರಾದರೂ ನೆನಪಿರುವಷ್ಟನ್ನು ಅಜ್ಜಿಯ ಪರಂಪರೆ ಮುಗಿದಂತೆಯೇ ಕಾಣುತ್ತದೆ. ಹೊಸಗಾಳಿ ಹಳೆಯ ಹಣ್ಣೆಗಳನ್ನು ಹಾರಿಸಿ ಬಿಟ್ಟಿವೆ. ಈಗ ಹದಿನಾರು ವರ್ಷದ ಹಿಂದೆ ನನ್ನ ಹಿರಿಯ ತಮ್ಮ ರಾಮಸ್ವಾಮಿ ಕಾಲೇಜು ವ್ಯಾಸಂಗವನ್ನು ನಿಲ್ಲಿಸಿ ಹಳ್ಳಿಗೆ ಬಂದು ನಿಂತ ಮೇಲೆ ಪದಗಳಲ್ಲಿ ಸಾಧ್ಯವಾಗದಷ್ಟನ್ನು ಬದುಕಿಸಲು ಪ್ರಯತ್ನ ಮಾಡಿದನು. ಮತ್ತೆ ಎರಡು ಮೂರು ವರ್ಷಗಳಲ್ಲಿ ಕಿರಿಯ ತಮ್ಮ ಕೃಷ್ಣಮೂರ್ತಿಯೂ ಕಾಲೇಜಿನಿಂದ ಬಂದು ಜೊತೆ ಸೇರಿದನು.[5] ನಮ್ಮ ಹಳ್ಳಿಯವರು ಹಿಂದಿನ ಹಲವು ಮೇಲಾದ ಪದ್ಧತಿಗಳನ್ನು ತೊರೆಯುತ್ತಿದ್ದುದನ್ನು ಕಂಡು ಅವರಲ್ಲಿ ಮತ್ತೆ ಶ್ರದ್ಧೆ ಮೂಡಿಸುವುದಕ್ಕೆ ಇಬ್ಬರೂ ಬಹಳ ಸಾಹಸ ಮಾಡಿದರು. ಕೋಲಾಟ, ಯಕ್ಷಗಾನ, ತಿಂಗಳು ಮಾವನ ಪೂಜೆ, ಮೊದಲಾದುವುಗಳ ಮಹತ್ವವನ್ನು ತಿಳಿಯ ಹೇಳಿ ಅವನ್ನು ಬಿಡದೆ ಎಂದಿನಂತೆ ನಡೆಸಿಕೊಂಡು ಬರುವಂತೆ ಅವರನ್ನು ಪ್ರೋತ್ಸಾಹಿಸಿದರು. ಕೆಲವು ದಿನ ರಾತ್ರಿ ಪಾಠಶಾಲೆಗಳನ್ನೂ ನಡೆಸಿ ತಿಳಿವಳಿಕೆ ಕೊಟ್ಟರು. ಇಬ್ಬರೂ ಹೀಗೆ ಆರೇಳು ವರ್ಷ ಶ್ರಮಪಟ್ಟು ಸಂಗ್ರಹಿಸಿದ ಹಾಡುಗಳನ್ನು ಈಗ ಪುಸ್ತಕ ರೂಪವಾಗಿ ಪ್ರಕಟಿಸಿದೆ.

ಹಾಡುಗಳನ್ನು ಗಂಡಸರ ಹಾಡು, ಹೆಂಗಸರ ಹಾಡು ಎಂದು ಎರಡು ಬಗೆಯಾಗಿ ವಿಂಗಡಿಸಬಹುದು. ಬಂಡಿಯ ಪದ, ಕೋಲಾಟದ ಪದ, ಮಾರಿಯ ಪದ, ಚೋಮನ ಪದ ಮೊದಲಾದವು ಗಂಡಸರು ಹೇಳುವ ಪದಗಳು. ರಾಗಿಕಲ್ಲು ಪದ, ಸುವ್ವಿಯ ಪದ, ಹಚ್ಚೆಯ ಪದ, ಒಸಣೆಯ ಪದ, ಸೋಬಾನೆಯ ಪದ, ತಿಂಗಳು ಕೋಲಾಟದ ಪದಗಳು ಬಹುಮುಖ್ಯ. ಹಾಡುಗಳನ್ನು ಕಟ್ಟಿದವರು ಯಾರೋ ಇವು ಯಾವ ಕಾಲದವೋ ಒಂದೂ ಗೊತ್ತಿಲ್ಲ. ಇವುಗಳ ಛಂದಸ್ಸು ಅನೇಕ ಬಗ್ಗೆ. ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಸಾಂಗತ್ಯ, ರಗಳೆ ಮೊದಲಾದ ರೂಢಿಯ ಛಂದಸ್ಸುಗಳಿವೆ. ಇವುಗಳ ಜೊತೆಗೆ ಸಾಮಾನ್ಯವಾಗಿ ಪರಿಚಯವಿಲ್ಲದ ಅನೇಕ ರೀತಿಯ ಕಟ್ಟಡದ ಹಾಡುಗಳೂ ಇವೆ. ಒಟ್ಟಿನಲ್ಲಿ ತ್ರಿಪದಿಗಳೇ ಹೆಚ್ಚು". "ನಮ್ಮೂರ ಹಳೆಯ ಬೀಡಿನ ಹತ್ತಿರದ ಒಂದು ಹಳ್ಳಿ. ನಮ್ಮ ಒಂದು ಹಳ್ಳಿಯ ಹಾಡುಗಳನ್ನು ಮಾತ್ರ ಆಯ್ದು ಸೇರಿಸಿದೆ. (ಬೇರೆ ಕಡೆ ಸಂಗ್ರಹಿಸಿದ್ದು ಒಂದೋ ಎರಡೋ ಇದ್ದೀತು) ಒಂದೇ ಹಳ್ಳಿಯಲ್ಲಿ ಆಯ್ದುವಾದರೂ ಇವೆಲ್ಲ ಹಳೆಬೀಡು, ಬೇಲೂರು, ಹಾಸನ ಮೊದಲಾದ ಸುತ್ತಮುತ್ತಲಿನ ಪ್ರದೇಶಗಳಲ್ಲೆಲ್ಲ ಹರಡಿವೆ. ಹೊರಗೂ ವ್ಯಾಪಿಸಿರಬಹುದು. ಕೆಲವಾದರೂ ಕನ್ನಡ ನಾಡಿನಲ್ಲೆಲ್ಲ ಪ್ರಚಾರದಲ್ಲಿದ್ದಾವು" (1947:7–9) ಎಂಬುದಾಗಿ ನಾಡಪದಗಳ ವಿವರಣಾತ್ಮಕ ಪರಿಚಯ ಮಾಡಿದ್ದಾರೆ.

86 ಹಾಡುಗಳಿರುವ ಸಂಗ್ರಹದಲ್ಲಿ ಎಂಟು ಭಾಗಗಳಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಹಾಗೆ ವರ್ಗೀಕರಿಸಿಕೊಂಡ ಭಾಗಗಳನ್ನು 'ತೆನೆ'ಯೆಂದು ಕರೆದಿದ್ದಾರೆ. ಪ್ರತೀ ಭಾಗ (ತೆನೆ)ಗಳಿಗೂ ವಿಸ್ತಾರವಾದ ಪರಿಚಯ ಕೊಡಲಾಗಿದೆ. ಸಂಗ್ರಹದ ಕೊನೆಯಲ್ಲಿ ಟಿಪ್ಪಣಿಗಳು ಎಂಬ ಭಾಗವಿದೆ. ಟಿಪ್ಪಣಿ ಭಾಗದಲ್ಲಿ 86 ಹಾಡುಗಳಿಗೂ ಸರಳ ಅನುವಾದ, ಕಠಿಣ ಪದಗಳ ಅರ್ಥ ಹಾಗೂ ಹಾಡಿಗೆ ಸಂಬಂಧಿಸಿದ ಘಟನೆಗಳನ್ನು ಕಥೆಗಳನ್ನು ಕೊಡಲಾಗಿದೆ. ಟಿಪ್ಪಣಿಯ ನಂತರದ ಭಾಗ ಅನುಬಂಧ. ಅನುಬಂಧ ಭಾಗದಲ್ಲಿ 'ಇಮಾಂ ಹುಸೇನರ ಬಲಿದಾನ'ದ ಕುರಿತಂತೆ ನಾಲ್ಕು ಪುಟದ ವಿವರವಿದೆ. ವಿವರವು 'ಮೊಹರಂ' ಸಂದರ್ಭದಲ್ಲಿ ಹಾಡುವ ಪದಗಳ ವಿವರವನ್ನು ಒಳಗೊಂಡಿದೆ. ಮಹಮ್ಮದ್‌ನ ನಂತರ ಯಾರು ಖಲೀಫನಾಗಬೇಕೆಂದು ಆಯ್ಕೆಯ ಕುರಿತಂತೆ ಆಗುವ ಒಳ'ಜಗಳ', 'ಸಾವು'ಗಳ ಹಾಗೂ ಅದರಿಂದಾಗುವ ಪರಿಣಾಮವನ್ನು ಕೊಡಲಾಗಿದೆ. ಮೇಲೆ ವರ್ಗೀಕರಿಸಲಾದ ಎಂಟು ಭಾಗಗಳ ಹಾಡುಗಳಿಗೆ ಎಂಟು ಚಿತ್ರಗಳನ್ನು ಕೊಡಲಾಗಿದೆ. ಎಂಟು ಚಿತ್ರಗಳನ್ನು ಕ್ರಮವಾಗಿ ಕೋಲಾಟ, ತಿಂಗಳು ಮಾವನ ಪೂಜೆ, ರಾಗಿಕಲ್ಲು, ಕಲ್ಯಾಣ, ಹಚ್ಚೆ ಹುಯ್ಯುವುದು, ಸರ್ಜಪ್ಪನಾಯಕ, ಗೌರಿಯ ಪೂಜೆ ಹಾಗೂ ಬಾಗಿಲು ತಡೆಯುವುದು ಪದಗಳಿಗೆ ಕುರಿತಂತೆ ಬರೆಯಲಾಗಿದೆ.

ತೆನೆ 1. ಕೋಲಾಟದ ಪದಗಳು

ಭಾಗದಲ್ಲಿ 33 ಹಾಡುಗಳನ್ನು ಕೊಡಲಾಗಿದೆ. ಬೆನವಣ್ಣ ಜಗಜಗದ ಒಡೆಯನೆ, ಬೇಲೂರು ಚನ್ನಯ್ಯನ ತೇರು, ಮಲ್ಲಯ್ಯ, ಬಿಳಿಗಿರಿ ರಂಗಸ್ವಾಮಿ, ಚನ್ನಯ್ಯ, ಸೂಳೆಯ ಮನೆಗೆ ಹೋದದ್ದು, ಗಂಧದ ನೆರಿಗ್ಯೋಳೆ, ಕುಣಿಗಲು ಕೆರೆ, ಗೀಜಗನ ಗೂಡು, ವಿಧ, ಕರಿವಯ್ಯ, ಲಕ್ಕವ್ವ, ಕಾಳಗದ ಪದ, ಸುಲ್ತಾನನ ದೌಲತ್ತು ಹೋದದ್ದು, ಜವರಾಯ, ಕಾರಣ, ಭಾವನಾದಿನಿಯರ ಸರಸ, ಚಿಂತಾಮಣಿ ರಾಜಕುಮಾರ, ಚೆಲುವಯ್ಯ ಚೆಲುವೋ, ಬರಹೇಳಕ್ಕಯ್ಯ, ಎಳ್ಳೂರು ಬಣಗ, ಮಾವನ ಮಗಳೆ, ಕುಂಜರದ ಬೊಂಬೆ ಕೇಳೆ, ಕೆಂಗಪ್ಪ, ಹಸೇನ್ಹುಸೇನ, ಸೋಬಾನದಿಂದ ಸುಖದಿಂದ, ಎತ್ತೆಲ್ ಕಾದೋ ಬುತ್ತೆಲ್ ಉಂಡೊ, ಚಿತ್ತಲಾರದ ಗೊಂಬೆ, ಹುಬ್ಬಳ್ಳಿಯಿಂದ ತರಿಸಿಕೊಡುವೆ, ಪಗಡೆಯ ಜೂಜು, ಕೃಷ್ಣರಾಯ, ಹಾಗೂ ಕೊನೆಯ ಪದ. 33 ಪದಗಳಲ್ಲಿ ರೈತನೊಬ್ಬ ವರ್ಷಾವರ್ತನದಲ್ಲಿ ದುಡಿದು ದನಿದಿರುವಾಗ ಸುಗ್ಗಿಯ ಸಂದರ್ಭದಲ್ಲಿ ಹಾಡಿ ಕುಣಿದು ಮರುಚೇತನಗೊಳ್ಳುವ ವಿವರಗಳಿವೆ.

ಸಂಪಾದಕರು ಹಳ್ಳಿಯ ಚಿತ್ರಣದ ಕುರಿತಂತೆ, "ಹಳ್ಳಿಯ ಒಕ್ಕಲಿಗನಿಗೆ ಮಳೆಗಾಲದಲ್ಲಿ ತುಂಬ ಕೆಲಸ. ಸರಿಯಾದ ಹದ ನೋಡಿ ಉತ್ತು ಗೊಬ್ಬರ ಹಾಕಿ ನೆಲ ಹಸನು ಮಾಡಬೇಕು. ತಕ್ಕ ಬೆರಗಿನಲ್ಲಿ ಬೀಜ ಬಿತ್ತಿ ಸಸಿನೆಟ್ಟು ಒಳ್ಳೆಯ ಬೆಳೆ ತೆಗೆಯಲು ಹಗಲಿರುಳೂ ದುಡಿಯಬೇಕು. ಆಗ ಅವನೇನಾದರೂ ಸೋಮಾರಿಯಾದರೆ ಅಥವಾ ಅಸಡ್ಡೆ ತೋರಿಸಿದರೆ ಮುಂದೆ ವರ್ಷವೆಲ್ಲ ಗೋಳಾಡಬೇಕು. ಆದ್ದರಿಂದ ಬೆಳೆ ಕೈಗೆ ಬರುವವರೆಗೂ ಅವನಿಗೆ ಒಂದು ಗಳಿಗೆಯೂ ಬಿಡುವಿಲ್ಲ. ಎಡೆಬಿಡದೆ ಕೆಲಸದಲ್ಲಿ ತೊಡಗಿರುತ್ತಾನೆ. ಪೈರೆಲ್ಲಾ ಕುಯ್ದು ಮೆದೆ ಒಟ್ಟಿದ ಮೇಲೆ ಬಿಡುವಾಗುತ್ತದೆ. ಅವನು ಸುಖ ಸಂತೋಷಗಳ ಕಡೆಗೆ ಸ್ವಲ್ಪ ಸ್ವಲ್ಪವಾಗಿ ಮನಸ್ಸು ಕೊಡುತ್ತಾನೆ. ಸುಗ್ಗಿಯಲ್ಲಿ ಕಾಳೂಕ್ಕಿ ಕಣದಲ್ಲಿ ರಾಶಿ ತುಂಬಿದಾಗ ಅವನ ಆನಂದ ಉಕ್ಕಿ ಹರಿಯುತ್ತದೆ. ಆ ಕಾಲದಲ್ಲಿ ಎಲ್ಲೆಲ್ಲಿಯೂ ಕೋಲಾಟದ ಸಡಗರ, ಪದಗಳ ಸುಗ್ಗಿ. ಸುಗ್ಗಿಯನ್ನು ಬಿಟ್ಟು ಉಳಿದ ಕಾಲಗಳಲ್ಲಿ ಕೋಲಾಟ ಆಡುವುದಿಲ್ಲವೆಂದಲ್ಲ; ಆಡುತ್ತಾರೆ. ಆದರೆ ಆಗೊಂದು ಸಲ, ಗೊಂದು ಸಲ ಮಾತ್ರ. ಸಾಮಾನ್ಯವಾಗಿ ಬೆಳದಿಂಗಳ ರಾತ್ರಿಯಲ್ಲಿ ಊಟವಾದ ಮೇಲೆ ಪ್ರಾಯದ ಹುಡುಗರು ಗುಡಿಯ ಮುಂದೆ ಸೇರಿ ಕೋಲಾಟ ಆಡುತ್ತಾರೆ. ಕೆಲವು ವೇಳೆ ಉತ್ಸಾಹ ಭರಿತವಾದ ಮಧ್ಯ ವಯಸ್ಸಿನಾದರೂ ಜೊತೆ ಸೇರಿಕೊಳ್ಳುತ್ತಾರೆ. ಹೆಂಗಸರು ಮಕ್ಕಳೂ ಹಿರಿಯ ಮುದುಕರೂ ಬಂದು ಕೇಳಿ ಆನಂದಿಸುತ್ತಾರೆ."

"ಕೋಲು ಹುಯ್ಯುವುದಕ್ಕೆ ಹೆಚ್ಚಿನ ಸಿದ್ಧತೆಯೇನೂ ಬೇಕಿಲ್ಲ. ಯಾವಾಗಿನ ಹಾಗೆಯೆ ದಟ್ಟಿ ಸುತ್ತಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕೈಯಲ್ಲಿ ಕೋಲು ಹಿಡಿದು ನಿಂತರಾಯಿತು. ಮತ್ತೇನೂ ಅಗತ್ಯವಿಲ್ಲ. ಅಂಗಿ ಇದ್ದರೆ ಇತ್ತು. ಇಲ್ಲದಿದ್ದರೆ ಇಲ್ಲ. ತಲೆಗೆ ಬಟ್ಟೆ ಸುತ್ತಿದರೆ ಸುತ್ತಿದರು. ಇಲ್ಲದಿದ್ದರೆ ಇಲ್ಲ. ಕೋಲು ಮೂರು ಬೆರಳು ದಪ್ಪವಾಗಿ ಸುಮಾರು ಒಂದು ಮೊಳ ಉದ್ದವಾಗಿ ಬಹು ಬಲವಾಗಿರುತ್ತದೆ. ಚೆನ್ನಾಗಿ ಬಲಿತ ಚೇಗಿನ ಮರ; ಒಂದಕ್ಕೊಂದು ತಟ್ಟಿದರೆ ಖಣಿಖಣಿ ಗುಟ್ಟುವಂತಿರುತ್ತದೆ. ಕೋಲಿಗೂ ಒಂದೆರಡು ಗೆಜ್ಜೆ ಕಟ್ಟಿರುವುದುಂಟು."

"ಕೋಲಾಟಕ್ಕೆ ಕನಿಷ್ಠ ಪಕ್ಷ ಆರು ಜನಬೇಕು. ಆರು, ಎಂಟು, ಹತ್ತು, ಹನ್ನೆರಡು– ಹೀಗೆ ಸಮಸಂಖ್ಯೆಯಲ್ಲಿ ಆಟಗಾರರು ಸೇರಬೇಕು. ನಿಲ್ಲುವ ರೀತಿ ಅನೇಕ ಬಗೆ. ಕೋಲು ಹುಯ್ಯುವ ವರಸೆಯೂ ಹಲವು ತೆರ. ಆರರಿಂದ ಮೊದಲುಗೊಂಡು ಸಮ ಸಂಖ್ಯೆಯಲ್ಲಿ ಜನ ಸೇರಿ ಒಂದೊಂದು ಕೈಯಲ್ಲೂ ಒಂದೊಂದು ಕೋಲು ಹಿಡಿದು ಬಗೆ ಬಗೆಯ ವ್ಯೂಹಗಳನ್ನು ರಚಿಸುತ್ತ ಕೋಲಿನ ತಾಳಕ್ಕೆ ಸರಿಯಾಗಿ ಗತ್ತಿನ ಮೇಲೆ ಹೆಜ್ಜೆ ಹಾಕುತ್ತ ಪದ ಹೇಳುತ್ತಾರೆ. ಆಟಗಾರರಿಗೆ ಒಬ್ಬ ಮುಂದಾಳು ಇರುತ್ತಾನೆ. ಪ್ರತಿಯೊಂದು ನುಡಿಯನ್ನೂ ಸಾಮಾನ್ಯವಾಗಿ ಮುಂದಾಳೆ ನುಡಿಯುತ್ತ ಪದವನ್ನು ಮುಂದುವರಿಸುತ್ತಾನೆ. ಉಳಿದವರೆಲ್ಲರೂ ಪಲ್ಲವಿಯನ್ನು ಒಟ್ಟಾಗಿ, ಒಕ್ಕೊರಲಿನಿಂದ ಹಾಡುತ್ತಾರೆ. ಪದ ಕಲಿಯುವುವಾಗ ಹಾಗೂ ಆಗೊಮ್ಮೆ ಈಗೊಮ್ಮೆ ಮುಂದಾಳು ಹಾಡಿದ ಮೇಲೆ ಆ ಒಂದೊಂದು ನುಡಿಯನ್ನೂ (ಹೇಳಿಸಿಕೊಂಡು ಹೇಳುವ ಹಾಗೆ) ಎಲ್ಲರೂ ಹಾಡುತ್ತಾರೆ. ಪದ ಕೇಳಲು ಇಂಪಾಗಿರುತ್ತದೆ. ಹಾಗೆಯೇ ಅವರ ಚಲನೆ ನೋಟಕ್ಕೆ ಅಂದವಾಗಿರುತ್ತದೆ."

"ತಿಳಿ ಬೆಳದಿಂಗಳು, ಕೋಲಿನ ಕಾಲಿನ ಗೆಜ್ಜೆಯ ಸದ್ದು, ಪದಗಳ ನಾದ, ಕಥೆ ವರ್ಣನೆಗಳ ಸೊಗಸು ಬಗೆ ಬಗೆಯ ಗತಿಯ ಬೆಡಗು, ಆಡುವವರ ಹಾಗೂ ನೋಡುವವರ ಉತ್ಸಾಹ –ಎಲ್ಲ ಸೇರಿ ಹೃದಯ ಹಿಗ್ಗುತ್ತದೆ: ಕಷ್ಟಕಾರ್ಪಣ್ಯಗಳೆಲ್ಲ ಮರೆತು ಹೋಗುತ್ತದೆ."

ಕೋಲಾಟವಾಡುವಾಗ ಹಾಡುವ ಕೆಲವು ಪದಗಳನ್ನು ಈ ಭಾಗದಲ್ಲಿ ಕೊಟ್ಟಿದೆ. ಇಲ್ಲಿನ ಚಿತ್ರಗಳೆಲ್ಲ ಸಾಮಾನ್ಯವಾಗಿ ಗಂಡು ಜೀವನಕ್ಕೆ ಸಂಬಂಧಪಟ್ಟವು. ಪದಗಳು ಪ್ರಾರ್ಥನೆ, ಕಥೆ, ವರ್ಣನೆ, ಒಲವು ಬೇಟೆ, ಕಾಳಗ, ಮುಂತಾದ ವಿಷಯಗಳನ್ನು ಕುರಿತವು; ವೀರ ನೃತ್ಯಕ್ಕೆ ತಕ್ಕಂಥವು. ಹೆಂಗಸರು ಹೇಳುವ ಪದಗಳನ್ನೂ ಕೋಲಾಟದ ಧಾಟಿಗೆ ಹೊಂದಿಸಿಕೊಂಡಿರುವುದೂ ಒಮ್ಮೊಮ್ಮೆ ಕಾಣಬರುತ್ತದೆ. "ಇವುಗಳ ಛಂದೋಗತಿಯಲ್ಲಿ ಬಹುಮಟ್ಟಿಗೆ ವೈವಿಧ್ಯವಿದೆ. ಆಟಗಾರರ ಬಾಯಲ್ಲಿ ನುಡಿಯುವಂತೆಯೆ

ಬರೆದರೆ ಬಗೆಬಗೆಯ ಪ್ರಮಾಣದ ಹಲವಾರು ಸಾಲುಗಳಾಗುತ್ತವೆ. ಕೋಲು ಹುಯ್ಯುವ ಧಾಟಿಯಿಂದಾದ ವ್ಯತ್ಯಾಸಗಳನ್ನೂ ಮತ್ತೆ ಮತ್ತೆ ಬರುವ ಪುನರುಕ್ತಿಗಳನ್ನೂ, ಗಮನಕ್ಕೆ ತಂದುಕೊಳ್ಳದೆ ಕೇವಲ ಸಾಹಿತ್ಯ ಮಾತ್ರವನ್ನೇ ನೋಡಿದರೆ ಬಹುಪಾಲಿನ ತ್ರಿಪದಿ ಅಥವಾ ತ್ರಿಪದಿಯ ರೂಪಾಂತರಗಳಾಗಿ ಕಾಣುತ್ತವೆ."(1947:3–5)

ತೆನೆ 2. ತಿಂಗಳು ಮಾವನ ಪದಗಳು

ಐದು ಹಾಡುಗಳ ಭಾಗದಲ್ಲಿ, ತಿಂಗಳು ಮಾವನ ಪದಗಳು, ಹೆಣ್ಣು ಕೇಳುವುದು, ಚೆಂಡಾಟ, ಸುತ್ತು ತಿರುಗುವ ಆಟ, ಹಾಗೂ ವಿನೋದದ ಮಾತು. ಸಂಪಾದಕರು ಒಂದು ಹಳ್ಳಿಯಲ್ಲಿ ಆಗುವ ಹಬ್ಬವನ್ನು ಪರಿಚಯಿಸಿದ್ದಾರೆ. "ದೊಡ್ಡ ಉರುಗಳಲ್ಲೂ ಪಟ್ಟಣಗಳಲ್ಲೂ ಹುಡುಗರು ಮನೆಮನೆಗೂ ಸುತ್ತಿ ಬೆರಣಿ ಕಟ್ಟಿಗೆಗಳನ್ನು ಕೂಡಹಾಕಿ ಓಕುಳಿ ಎರಚಾಡಿ (ಕೆಲವು ವೇಳೆ ಬಂಡು ಪದಗಳನ್ನು ಹಾಡುತ್ತ) ಕಟ್ಟಿಗೆಯ ಒಟ್ಟಿಲನ್ನು ಸುಟ್ಟು ಕಾಮನ ಹಬ್ಬ ಮಾಡುವ ವಾಡಿಕೆಯಾಗಿದೆ. ನಮ್ಮ ಹಳ್ಳಿಯ ಒಕ್ಕಲಿಗರು ಹಬ್ಬ ಮಾಡುವ ರೀತಿಯೇ ಬೇರೆ. ಅದರಲ್ಲಿ ಪಟ್ಟಣದ ಆಡಂಬರವಿಲ್ಲದಿದ್ದರು ಒಂದು ಸರಳ ಸೌಂದರ್ಯವಿದೆ. ಹಳ್ಳಿಯ ಜೀವನದಲ್ಲಿ ಬೆರೆತು ನೋಡುವವರಿಗೆ ಸಹಜಕವಾದ ಆನಂದ ದೊರೆಯುತ್ತದೆ."

"ಫಾಲ್ಗುಣ ಶುದ್ಧ ಪಾಡ್ಯದಿಂದ ಪ್ರತಿ ಸಂಜೆಯೂ ಹಳ್ಳಿಯ ಹುಡುಗ ಹುಡುಗಿಯರೆಲ್ಲ ಎರಡು ಪಂಗಡವಾಗಿ ತಿಂಗಳು ಮಾವನ ಪದ–ಗಳನ್ನು ಹಾಡಿಕೊಂಡು ಮನೆಮನೆಗೂ ಹೋಗುತ್ತಾರೆ. ಎಲ್ಲ ಮನೆಯವರು ಮಕ್ಕಳ ಪದಗಳನ್ನು (ಪದ ಹೇಳುವವರು ಹೆಣ್ಣು ಮಕ್ಕಳು ಮಾತ್ರ. ಗಂಡುಮಕ್ಕಳು ಕೆಲವು ವೇಷ ಹಾಕುತ್ತಾರೆ, ಆಟ ಆಡುತ್ತಾರೆ) ಕೇಳಿ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಅಕ್ಕಿ, ಕಾಯಿ, ದುಡ್ಡು ಮೊದಲಾದ್ದನ್ನು ಕೊಡುತ್ತಾರೆ. ಹುಣ್ಣಿಮೆಯ ದಿನ ದೊಡ್ಡ ಹಬ್ಬ. ಗಂಡು ಹೆಣ್ಣು ಮಕ್ಕಳು ತಾವು ಎತ್ತಿ ತಂದದ್ದನ್ನೆಲ್ಲ ಒಟ್ಟು ಸೇರಿಸಿ, ಬಂದ ಹಣದಲ್ಲಿ ಹಬ್ಬಕ್ಕೆ ಬೇಕಾದ ಅಣಿಯನ್ನು ಒದಗಿಸಿಕೊಳ್ಳುತ್ತಾರೆ. ಸಂಜೆ ಹೆಣ್ಣು ಮಕ್ಕಳು ಊರಿನ ಗುಡಿಯ ಮುಂದೆ ಸಾರಿಸಿ, ರಂಗವಲ್ಲಿಯಿಂದ ತಿಂಗಳು ಮಾವನ ಹಸೆ (ಸೂರ್ಯ, ಚಂದ್ರ ಮುಂತಾದ ಕೆಲವು ಚಿತ್ರಗಳನ್ನು) ಬರೆಯುತ್ತಾರೆ. ಪೂಜೆಗೆ ಅಣಿ ಮಾಡಿ ರೊಟ್ಟಿ ತಟ್ಟುತ್ತಾರೆ. ಇವರ ಔತಣಕ್ಕೆ ಮನೆಗೊಂದಾಳಿನಂತೆ ಊರಿನವರೆಲ್ಲ ಬರುತ್ತಾರೆ. ಬೆಳದಿಂಗಳಿನಲ್ಲಿ ಎಲ್ಲರೂ ಒಟ್ಟು ಸೇರಿ ಸಡಗರದಿಂದ ಹಬ್ಬ ಮಾಡುತ್ತಾರೆ."

"ಹುಡುಗಿಯರು ಒಂದೆರಡು ರೊಟ್ಟಿಗಳನ್ನು ಕೆಲವು ಬೆರಣಿಗಳ ಜೊತೆ ಸೇರಿಸಿ ಮುಚ್ಚಿಟ್ಟಿರುತ್ತಾರೆ. ಅವನ್ನು ಗಂಡು ಹುಡುಗರಲ್ಲಿ ಒಬ್ಬ (ಬಸವ) ಎತ್ತಿಕೊಂಡು

ಹೋಗಬೇಕು. ಅವನು ಆ ರೊಟ್ಟಿಯನ್ನು ತೆಗೆದುಕೊಂಡು ಒಬ್ಬ (ಬಸವ) ಎತ್ತಿಕೊಂಡು ಹೋಗಬೇಕು. ಅವನು ಆ ರೊಟ್ಟಿಯನ್ನು ತೆಗೆದುಕೊಂಡು ಹೋಗುವಾಗ ಎರಡು ಸಾಲಾಗಿ ನಿಂತಿರುವ ಹುಡುಗಿಯರು ಬೆರಣಿಯಿಂದ ಹೊಡೆಯುತ್ತಾರೆ. ಬಸವ ಅವರ ಏಟಿಗೆ ಹೆದರದೆ ರೊಟ್ಟಿಯನ್ನು ಎತ್ತಿಕೊಂಡು ಹೊರಬಿದ್ದ ಮೇಲೆ ಅವನ ಸಂಗಡಿಗರು ಅವನನ್ನು ಹಿಡಿಯ ಹೋಗುತ್ತಾರೆ. ಅವನು ಯಾರಿಗೂ ಸಿಕ್ಕದ ಹಾಗೆ ಓಡಬೇಕು. ಓಡಿಹೋಗಿ ಕೆರೆಯ ಹತ್ತಿರ ಒಂದು ಮರದ ಮೇಲೆ ರೊಟ್ಟಿಯನ್ನು ತಿಂದು ಗುರುತಿಗೆ ಒಂದು ರೆಂಬೆಯನ್ನು ಮುರಿದುಕೊಂಡು ತರಬೇಕು. ಬೆಳದಿಂಗಳಲ್ಲಿ ಓಟ, ಆಟ ಬಹು ಸೊಗಸಗಿರುತ್ತದೆ. (ಸ್ವಲ್ಪಮಟ್ಟಿಗೆ ಪೇಪರ್ ಚೆಸ್ ಆಟವನ್ನು ನೆನಪಿಗೆ ತರುತ್ತದೆ) ಬಸವ ರೊಟ್ಟಿ ತಿಂದು ಬಂದ ಮೇಲೆ ಗುಡಿಯ ಮುಂದೆ ತಿಂಗಳು ಮಾವನ ಪೂಜೆ. ತಿಂಗಳು ಮಾವನಿಗೆ ಮದುವೆಯಾಗಬೇಕು. ಹುಡುಗರಲ್ಲಿ ಒಬ್ಬ ಮದಲಿಂಗ–ನನ್ನು ಹುಡುಗಿಯರಲ್ಲಿ ಒಬ್ಬಳು ಮದಲಗಿತ್ತಿಯನ್ನು ಆಯುತ್ತಾರೆ. ಮದುವೆಯ ಶಾಸ್ತ್ರ ನಡೆಯುತ್ತದೆ. ಆಟ, ಪೂಜೆ, ಮದುವೆ ಇವು ನಡೆಯುತ್ತಿರುವಾಗಲೆಲ್ಲ, ಆಮೇಲೂ ಪದಗಳ ಸುಗ್ಗಿ. ತಿಂಗಳು ಮಾವನ ಪದಗಳು ಮುಗಿದರೂ ಹುರುಪು ನಿಲ್ಲುವುದಿಲ್ಲ. ತಾವು ಕಲಿತ ಪದಗಳನ್ನೆಲ್ಲ ಹಾಡಿ ಬಿಡುತ್ತಾರೆ. ಮಕ್ಕಳ ನಲಿವಿನಲ್ಲಿ ಹಿರಿಯರೂ ಹಿಗ್ಗುತ್ತಾರೆ. ಕಡೆಗೆ ಎಲ್ಲರೂ ರೊಟ್ಟಿ ತಿಂದು ಆನಂದದಿಂದ ಮನೆಗೆ ಹೋಗುತ್ತಾರೆ.”

“ಪದಗಳಲ್ಲಿ ಶೃಂಗಾರದ ಪದಗಳೂ ಕೆಲವಿವೆ. ಆದರೆ ಹೆಂಗಸರು ಸೇರಿದ ಸಭೆಗಳಲ್ಲಿ ಹೇಳುವುದಕ್ಕೆ ಹಿಂಜರಿಯುವಂಥದು ಒಂದೂ ಇಲ್ಲ. ಮನಸ್ಸಿಗೆ ಕೊಳೆ ಬಳಿಯುವ, ಗುಪ್ಸೆ ತರುವ, ಒಂದು ಮಾತೂ ಒಂದು ನಡತೆಯೂ ಕಾಣಿವುದಿಲ್ಲ.”

“ನಮ್ಮ ಹಳ್ಳಿಯ ಸುತ್ತಮುತ್ತ ಸುಮಾರು 20–25 ಮೈಲಿಯವರೆಗೂ –ಹಾಸನ, ಚಿಕ್ಕಮಗಳೂರು ಅರಸಿಕೆರೆಗಳ ನಡುವಣ ಪ್ರದೇಶದಲ್ಲಿ ಬಗೆಯ ತಿಂಗಳು ಮಾವನ ಪೂಜೆ ರೂಡಿಯಲ್ಲಿದೆ. ಹೊರಗೆ ಎಲ್ಲೆಲ್ಲಿ ಹರಡಿದೆಯೋ ತಿಳಿಯದು. ಬೆಂಗಳೂರು, ಮೈಸೂರು ಕಡೆಯ ಹಳ್ಳಿಗರಿಗಂತೂ ಇದು ಗೊತ್ತಿಲ್ಲವೆನ್ನಬಹುದು.”

“ ತಿಂಗಳು ಮಾವನ ಪೂಜೆ, ಬೆಳದಿಂಗ್ಳಪ್ಪನ ಪೂಜೆ, ನಮ್ಮ ಹಿಂದಿನ ಸಾಹಿತ್ಯದಲ್ಲಿ ಕಾಣಬರುವ ಕೌಮುದೀ ಮಹೋತ್ಸವದ ಉಳಿಕೆಯಾಗಿರಬಹುದೇ.”

“ನಮ್ಮ ಒಂದು ಹಳ್ಳಿಯಲ್ಲಿ ದೊರೆತಷ್ಟನ್ನು ಒಟ್ಟುಗೂಡಿಸಿ ಅರ್ಥವಾಗುವಷ್ಟನ್ನು ಆಯ್ದು ಕೊಟ್ಟಿದೆ. ಉಳಿದ ಕಡೆ ಹುಡುಕಿದರೆ ಮತ್ತಷ್ಟು ಸಿಗಬಹುದು” (1947:49–51) ಎಂದು ಹೇಳುತ್ತಾರೆ.

ತೆನೆ 3: ರಾಗಿಕಲ್ಲಿನ ಪದಗಳು

ಹದಿಮೂರು ಪದ್ಯಗಳಿವೆ. ರಾಗಿಕಲ್ಲಿನ ಮಹತ್ವ, ಪ್ರಾರ್ಥನೆ, ಅಕ್ಕ-ತಂಗಿ, ಅಣ್ಣ-ತಮ್ಮ, ತವರುಮನೆಯ ಹಂಬಲು, ತವರುಮನೆಯ ಉಡುಗೊರೆ, ಅಗಲಿಕೆಯ ದುಃಖ, ತಾಯಿಯಿಲ್ಲದೆ ತವರು, ಅಣ್ಣನ ಮನೆಗೆ ಹೆಣ್ಣಿಗೆ ಹೋದದ್ದು, ಹೆಣ್ಣು ಹೇಗಿರಬೇಕು, ಅಕ್ಕನ ಮನೆಯಲ್ಲಿ ತಂಗಿ, ಕಾವಲಿಯ ಹಾಡು, ಬಳೆಗಾರ ಹಾಗೂ ಬಿಡಿ ಪದ್ಯಗಳು. ಪದ್ಯಗಳನ್ನು ಸಂಪಾದಕರು ಹೀಗೆ ಪರಿಚಯಿಸುತ್ತಾರೆ.

"ಕೋಲಾಟ ಆಡದ ಹಾಗೂ ಬೇರೆ ಯಾವ ಪದವನ್ನೂ ಅರಿಯದ ಗಂಡಸರಿಗಿರುವ ಹಳ್ಳಿ ಸಿಕ್ಕಬಹುದು. ಆದರೆ ರಾಗಿ ಕಲ್ಲು ಪದ ಹೇಳದ ಹೆಂಗಸರಿರುವ ಹಳ್ಳಿ ಎಷ್ಟು ಹುಡುಕಿದರೂ ಸಿಕ್ಕಲಾರದು. ಒಂದು ಮನೆಯ ಹಳ್ಳಿಯಲ್ಲಿ ಕೂಡ ರಾಗಿ ಕಲ್ಲು ಇದ್ದೇ ಇರುತ್ತದೆ. ರಾಗಿ ಬೀಸುವಲ್ಲೆಲ್ಲ ಸಾಮಾನ್ಯವಾಗಿ ಬೀಸುವ ಪದ ಕೇಳಬರುತ್ತದೆ. ಬೆಳಗಿನ ಜಾವ ಸುಮಾರು ಮೂರು ನಾಲ್ಕು ಗಂಟೆಯ ಹೊತ್ತಿಗೇ ನಮ್ಮ ಹಳ್ಳಿಯ ಹೆಂಗಸರು ತಮ್ಮ ನಿತ್ಯ ಗಟ್ಟಳೆಯ ಕೆಲಸಕ್ಕೆ ತೊಡಗುತ್ತಾರೆ. ಆಗ ಪ್ರಕೃತಿದೇವಿ ಎಚ್ಚೆತ್ತು ಕತ್ತಲೆಯ ಮುಸುಕನ್ನು ಒರಸಿ ಮೆಲ್ಲ ಮೆಲ್ಲನೆ ಕಣ್ಣು ಬಿಡುತ್ತಿರುವ ಕಾಲ. ಆ ಪ್ರಶಾಂತ ಸಮಯದಲ್ಲಿ ಎದ್ದು ಕುಳಿತರೆ ಹಳ್ಳಿಯ ಹಲವು ಕಡೆಗಳಿಂದ ಮಂಜುಳನಾದ ತಂಗಾಳಿಯ ಮೇಲೆ ಅಲೆಅಲೆಯಾಗಿ ಹರಿಯುತ್ತ ವಬಂದು ಕಿವಿಗೆ ತುಂಬುತ್ತದೆ; ಮೂಡಿಬರುತ್ತಿರುವ ಹಗಲಿಗೆ ಸ್ವಾಗತ ನೀಡುತ್ತದೆ. ಹಕ್ಕಿಗಳ ಚಿಲಿಪಿಲಿಗಿಂತ ಎಷ್ಟೋ ಮೊದಲೇ ಕೇಳಿ ಬರುವ ಆ ಉದಯರಾಗವೇ ನಮ್ಮ ಹಳ್ಳಿಯ ಹೆಂಗಸರು ರಾಗಿ ಬೀಸುತ್ತ ಹೇಳುವ ಹಾಡಿನ ದನಿ. ಅವರ ಹಾಡಿಗೆ ಗರಗರನೆ ಬೀಸುವ ಕಲ್ಲಿನ ಸದ್ದೇ ಶ್ರುತಿ; ಘಲ್ ಘಲ್ ಎಂದು ಉಲಿಯುವ ಬಳೆಯ ಸದ್ದೆ ತಾಳ. ಶ್ರುತಿ ತಾಳಗಳ ಮೇಳನದಿಂದ ಆ ಹಾಡಿಗೆ ಒಂದು ಅಪೂರ್ವವಾದ ಕಳೆ ಕೂಡಿ ಬರುತ್ತದೆ. ಒಬ್ಬರ ದನಿಗೆ ಒಬ್ಬರು ಮರುದನಿ ಕೊಡುತ್ತ ದನಿಯನ್ನು ಏರಿಸುತ್ತ ಇಳಿಸುತ್ತ ಹುರುಪಿನಿಂದ ಹಾಡುವ ಅವರ ಪದಗಳಲ್ಲಿ ಸಹಜವಾದ ಒಂದು ಸೊಬಗು ಕಂಡುಬರುತ್ತದೆ. ಸರಳತೆಯನ್ನು ಮೆಚ್ಚಿದವರಿಗೆ ನಿರಾಡಂಬರವಾದ ಹಾಡುಗಳಲ್ಲಿ ಸ್ವಲ್ಪಮಟ್ಟಿಗಾದರೂ ಸಂತೋಷ ಸಿಕ್ಕದೆ ಹೋಗುವುದಿಲ್ಲ." (1947:59)

"ಹಾಡುಗಳಲ್ಲಿ ತವರುಮನೆಯ ಮಮತೆ, ಅಣ್ಣ-ತಮ್ಮ-ಅಕ್ಕ-ತಂಗಿಯರ ಪ್ರೀತಿ, ಗಂಡನ ಒಲವು ಮಕ್ಕಳ ಮುದ್ದು, ಅತ್ತೆ, ಅತ್ತಿಗೆ, ನಾದಿನಿ ಮೊದಲಾದವರ ಹಲವು ತೆರದ ನಡವಳಿಕೆ-ಇವೇ ಮೊದಲಾದ ಹೆಣ್ಣಿನ ಜೀವನಕ್ಕೆ ನೇರವಾಗಿ ಸಂಬಂಧಿಸಿದ ಚಿತ್ರಗಳೇ ಹೆಚ್ಚು. ಬೀಸುವ ಹೆಂಗಸರು ತಮ್ಮ ಬಾಳಿನ ಸಿಹಿ-ಕಹಿ ಅನುಭವಗಳನ್ನೆಲ್ಲ-

ಉಕ್ಕಿ ಬಂದಾಗ–ಹಾಡಿನ ಮೂಲಕ ಹೊರ ಹರಿಸಿ ಮನಸ್ಸು ಹಗುರ ಮಾಡಿಕೊಂಡಿದ್ದಾರೆ. ಬೇರೆ ರೀತಿಯಲ್ಲಿ ಹೊರಡಿಸಲು ಅವಕಾಶವಿಲ್ಲದಾಗ ತಮ್ಮ ಮನೋಭಾವನೆಗಳನ್ನೂ ಸುಖ ದುಃಖಗಳನ್ನೂ ಆಸೆ ಭಯಗಳನ್ನೂ ಪದಕಟ್ಟಿ ಹೇಳಿ ಕೊಂಡಿದ್ದಾರೆ. ಬಾಳಿನಲ್ಲಿ ತಾವು ನಡೆದ ಹಾಗೂ ನಡೆಯಬೇಕಾದ ದಾರಿಯನ್ನು ಗುರುತಿಸಿ ಕೊಂಡಿದ್ದಾರೆ. ತಮ್ಮ ಆತ್ಮ ಕಲ್ಯಾಣಕಾಗಿ ದೇವರನ್ನು ಬೇಡಿದ್ದಾರೆ. ಆತ್ಮ ಸಂತ್ತೋಷಕ್ಕಾಗಿ ಹಾಡಿಕೊಂಡಿದ್ದಾರೆ. ಇಂಥ ಕೆಲವು ಹಾಡುಗಳನ್ನು ಸಂಗ್ರಹದಲ್ಲಿ ಕೊಟ್ಟಿದೆ"(1947:60) ಎಂದು ಹೇಳಿಕೊಂಡಿದ್ದಾರೆ. ಇಲ್ಲಿರುವ ಬೀಸುವ ಕಲ್ಲಿನ ಪದಗಳೆಲ್ಲವೂ ತ್ರಿಪದಿ ಛಂದಸ್ಸಿನಲ್ಲಿವೆ.

ತೆನೆ 4. ಕಥೆ ಹಾಗೂ ಶಾಸ್ತ್ರದ ಹಾಡುಗಳು

ಭಾಗಕ್ಕೆ ಸಂಬಂಧಿಸಿದಂತೆ ಒಂಭತ್ತು ಹಾಡುಗಳಿವೆ. ಅವುಗಳು ಸುವ್ವಿಯ ಹಾಡು. ಉತ್ತರ ದೇವಿಯ ಹಾಡು, ಮಲ್ಲಯ್ಯನ ಮಾರ್ನೋಮಿ, ನಂಜಪ್ಪ, ಗೌರಮ್ಮನ ಮದುವೆ (1); (2); (ಗೌರಮ್ಮನ ಮದುವೆಗೆ ಸಂಬಂಧಿಸಿದಂತೆ ಎರಡು ಹಾಡುಗಳಿವೆ), ಸೋಬಾನೆ ಹಾಗೂ ಒಸಣೆಯ ಪದಗಳು (ಭಾಗದಲ್ಲಿ ಹಸೆ ಹಾಕುವುದು, ಮದವಣಿಗನ ಅಲಂಕಾರ, ಮದುವೆಗೆ ಪಯಣ, ಹೆಣ್ಣಿನವರು ಬೀಗರನ್ನು ಎದುರುಗೊಳ್ಳುವುದು, ಧರೆಯಾಗುವಾಗ ಹೇಳುವ ಪದಗಳು–ಹೀಗೆ ಐದು ಒಳವಿಭಾಗಗಳಿವೆ) ಗೋಧಿಕಲ್ಲು, ಶಾಸ್ತ್ರದ ಹಾಡು, ಹಾಗೂ ಲೆತ್ತ ಆಡಿದ್ದು.

ಹಾಡುಗಳನ್ನು ಹೇಳುವ ಸಂದರ್ಭವನ್ನು ಸಂಪಾದಕರು ಗುರುತಿಸಿರುವುದು ಹೀಗೆ, "ಸಸಿ ನೆಡುವಾಗ, ಕಳೆಕೀಳುವಾಗ, ಹೊಲ ಕೊಯ್ಯುವಾಗ, ಕಾಳೊಕ್ಕುವಾಗ ಹಾಗೂ ಇತರ ಕೆಲವು ಕೆಲಸ ಮಾಡುವಾಗ ಹಲವು ಹೆಂಗಸರು ಒಟ್ಟಿಗೆ ಸೇರುತ್ತಾರೆ. ಎಲ್ಲರೂ ಜೊತೆಜೊತೆಯಾಗಿ ವಿನೋದದಿಂದ ಮಾತಾಡುತ್ತ ಆಯಾಸ ತೋರದಂತೆ ಕೆಲಸ ಮಾಡುತ್ತಾರೆ. ಕ್ರಮಕ್ರಮವಾಗಿ ಮಾತು ಮುಗಿದು ಹಾಡಿಗೆ ಎಡೆಗೊಡುತ್ತದೆ. ಮಕ್ಕಳು ಮರಿಗಳ ಹಾಗೂ ಮನೆಗೆಲಸಗಳ ಆತಂಕವಿಲ್ಲದೆ ಗೆಳತಿಯರ ಜೊತೆ ಸಿಕ್ಕಿ ಸಂಕೋಚವಡಗಿ ಹಾಡಿನ ಹೊನಲು ಉಕ್ಕಿ ಹರಿಯುತ್ತದೆ. ಆದರೆ ಗಂಟೆಗಟ್ಟಳೆ ಹೇಳಿದರೂ ಮುಗಿಯದ ದೊಡ್ಡ ದೊಡ್ಡ ಕಥೆಗಳನ್ನೂ ಶಾಸ್ತ್ರದ ಹಾಡುಗಳನ್ನೂ ಹೇಳುವುದು ಹೆಚ್ಚು. ಇರುವ ಹೆಂಗಸರೆಲ್ಲ ಎರಡು ಪಂಗಡವಾಗಿ ಒಂದು ಪಂಗಡವರು ಮರಳಿ ಹಾಡುತ್ತ–ಕೆಲವು ವೇಳೆ ಎರಡು ಮೂರು ಸಲ ಮರಳಿ ಮರಳಿ ಹಾಡುತ್ತ–ತಮ್ಮ ಇನಿದನಿಯ ಅಲೆಗಳನ್ನು ಗಾಳಿಯಲ್ಲಿ ತೇಲಿಬಿಡುತ್ತಾರೆ. ಮನೆಯಲ್ಲಿ ತನಿಯಾಗಿ ಹಾಡುವಾಗ ಕಾಣದ ಒಂದು ಹೊಸ ಸೊಗಸು ಮೇಳ–ಗಾನದಲ್ಲಿ ಕಂಡುಬರುತ್ತದೆ. ಹಾಡು ಮಳೆಗಾಲದಲ್ಲಿ ತುಂಬು ಹೊಳೆಯಂತೆ ನಿಧಾನವಾಗಿ ಮುಂದುವರಿಯುತ್ತದೆ." (1947:83) ಎಂದು ಹೇಳುತ್ತಾರೆ.

"ಹಾಡುಗಳಲ್ಲಿ ಹೇಳಿದ ನುಡಿಯನ್ನೇ ಮತ್ತೆ ಮತ್ತೆ ಹೇಳುವುದು ಬಹಳ ಹೆಚ್ಚು. ಒಂದೊಂದರಲ್ಲೂ ಯಾವುದೋ ಒಂದು ಶಬ್ದ ಬೇರೆಯಾಗಿರುತ್ತದೆ. ಆದರೂ ಅದು ಪುನರುಕ್ತಿಯೇ. ಹೇಳುವುದನ್ನೆಲ್ಲಾ ಬರೆದರೆ ಕೊಟ್ಟಿರುವುದರ ಎರಡು ಮೂರರಷ್ಟಾದೀತು. ಮುಖ್ಯ ವಿಷಯ ಬಿಟ್ಟು ಹೋಗದಂತೆ, ಹಾಡಿನ ಸ್ವರೂಪ ಚೆನ್ನಾಗಿ ಕಾಣುವಂತೆ ಅಗತ್ಯವಾದಷ್ಟನ್ನು ಮಾತ್ರ ಆಯ್ದುಕೊಂಡಿದೆ. ಮದುವೆಯ ಹಾಡಿನಲ್ಲಂತೂ ಹೀಗೆ ಆಯುವುದು ಬಹು ಕಷ್ಟ. ನಾಲ್ಕೈದು ನುಡಿಗೊಂದರಂತೆ ಎಂಟು ಹತ್ತಕ್ಕೊಂದರಂತೆ, ಆಯ್ದರೂ ಇಷ್ಟು ದೊಡ್ಡದಾಯಿತು. ಉದಾಹರಣೆಗೆ, ಕೊಟ್ಟಂತೆ ಎರಡೆರಡು ನುಡಿಗಳನ್ನಾದರೂ ಕೊಡದಿದ್ದರೆ ಹಾಡಿನ ನಿಜಸ್ವರೂಪವನ್ನು ಮರಸಿದಂತಾಗುತ್ತದೆ ಆದರೆ ಆಭಾಸ ಚಿತ್ರವನ್ನು ಕೊಟ್ಟಂತಾಗಿ ತುಂಬ ಅನ್ಯಾಯವಾಗುತ್ತದೆ."

1. **"ಸುವ್ವಿಯ ಹಾಡು'** ಕುಟ್ಟುವಾಗ ಹೇಳುವ ಹಾಡು ಕಾವ್ಯಗಳಲ್ಲಿ ಇಂಥ ಹಾಡಿಗೆ 'ಒನಕೆ ಹಾಡು' ಎನ್ನುತ್ತಾರೆ. ಅಲ್ಲಿ ತ್ರಿಪದಿಯಲ್ಲಿರುವ ಒನಕೆಹಾಡು ಶೃಂಗಾರ ಸನ್ನಿವೇಶದಲ್ಲಿ ಒಂದೆರಡು ಕಡೆ ಬರುತ್ತದೆ. ಹೀಗೆ ಕಥೆಯನ್ನೊಳಗೊಂಡ ಒನಕೆವಾಡು ಕಾಣಬರುವುದಿಲ್ಲ. ಸುವ್ವಿಯ ಹಾಡು (ನಾನು ಕಂಡಂತೆ) ಬ್ರಾಹ್ಮಣರಲ್ಲಿ ಹೆಚ್ಚು ಪ್ರಚಾರದ್ದಲ್ಲಿರುವುದಾದರೂ ಇಲ್ಲಿನ ವಿಷಯ ಒಕ್ಕಲಿಗರ ಜೀವನಕ್ಕೆ ಸಂಬಂಧಿಸಿದ್ದು. ತಾಯಿ ಬದುಕಿರುವಾಗ ಸೋದರತ್ತೆ ಬಂದು ಧಾರೆಯೆರೆಯುವುದು ಬ್ರಾಹ್ಮಣರಲ್ಲಿ ವಾಡಿಕೆಯಿಲ್ಲ. ಒಕ್ಕಲಿಗರಲ್ಲಿ 'ಬಳಗೆ–ಧಾರೆ'ಯ (ನೆಂಟರೆಲ್ಲ ಬಂದು ಧಾರೆಯೆರೆಯುವ) ಪದ್ಧತಿಯುಂಟು. ಆದ್ದರಿಂದ ಇದನ್ನು ಬ್ರಾಹ್ಮಣರು ರಚಿಸಿರಬಹುದೆಂಬ ಸಂದೇಹ ಬಂದರೂ ಬ್ರಾಹ್ಮಣರ ಹಾಡುಗಳಲ್ಲಿ ಸೇರಿಸಲಿಲ್ಲ."

2. **"ಉತ್ತರೆ ಮಳೆ** ಬರುವ ಮೊದಲು ಬಿಸಿಲಿನ ಬೇಗೆ ಅತಿಯಾಗಿ ನೆಲವೆಲ್ಲ ಬೆಂದು ಬೆಂಡಾಗಿರುತ್ತದೆ. ಅಂಥ ಸಮಯದಲ್ಲಿ ಸೊರಗಟ್ಟಿಕೊಂಡು ಭಾರಿ ಅಡ್ಡಮಳೆ ಹುಯ್ದು ದಗೆಯಡಗಿಸಿ ಕೆರೆಕಟ್ಟೆಗಳನ್ನು ತುಂಬಿಸುತ್ತದೆ. ಬೆಂದ ನೆಲವನ್ನೂ ಧಾರೆಗಟ್ಟಿ ಸುರಿಯುವ ಮಳೆಯನ್ನೂ ಕಂಡು ಸಂಕಟದಲ್ಲಿ ಸೊರಗಿ ಕಣ್ಣೀರ ಕೋಡಿ ಹರಿಸುತ್ತ ಹೊರಟ 'ಉತ್ತರದೇವಿ'ಯನ್ನು ಚಿತ್ರಿಸಿದ್ದಾರೆಂದು ತೋರುತ್ತದೆ. ಹಳ್ಳಿಗರು ಕಥೆ ನಿಜವಾಗಿ ನಡೆದ್ದದೆಂದು ನಂಬುತ್ತಾರೆ. 'ಮಾ ತಾಯಿ ತಾನು ನೊಂದರೂ ಲೋಕ ತಣಿಸಿದಳು" ಎನ್ನುತ್ತಾರೆ.

3. **"ನವರಾತ್ರೆ** ನಾಡ ಹಬ್ಬವಷ್ಟೆ. ಆಗ ಪ್ರತಿ ಹಳ್ಳಿಯಲ್ಲಿಯೂ ದೇವರನ್ನು ಪಟ್ಟಕ್ಕೆ ಕೂರಿಸಿ ದಿನದಿನವೂ ಬಹಳ ಜನ ಸೇರಿ ಪೂಜೆ ಮಂಗಳಾರತಿ ಮಾಡುತ್ತಾರೆ. ಸರಸ್ವತೀ ಪೂಜೆ, ಆಯುಧ ಪೂಜೆ, ಮೊದಲಾದ ಎಲ್ಲ ಕಟ್ಟಳೆಗಳೂ ತಪ್ಪದೆ ನಡೆಯುತ್ತವೆ.

ವಿಜಯ ದಶಮಿಯ ದಿನ ದೊಡ್ಡ ಉತ್ಸವ. ಅವತ್ತು ಸಂಜೆ ದೇವರು ಅಂಬೆಸೆಯುವುದಕ್ಕೆ ಹೋಗಬೇಕು. ಇದು ಹಳ್ಳಿಯ ಜಂಬೂ ಸವಾರಿ, ಪೌಜು, ಮಾರ್ನೋಮಿ ಮಂಟಪದಲ್ಲಿ ದೇವರನ್ನು ಬಿಜಯ ಮಾಡಿಸಿ ದೇವರೆದುರಿಗೆ ಹಳ್ಳಿಯ ಕಲಾ–ಕೌಶಲ್ಯವನ್ನೆಲ್ಲ ಪ್ರದರ್ಶಿಸುತ್ತಾರೆ. ಕೋಲಾಟ, ಕುಸ್ತಿ, ಕತ್ತಿ ವರಸೆ–ಎಲ್ಲಾ ನಡೆಯುತ್ತದೆ. ಊರಿಗೆ ಮರಳುವ ಉತ್ಸವವನ್ನು ಎದುರುಗೊಂಡು ಆರತಿ ಎತ್ತುವಾಗ ನಮ್ಮೂರ ಹೆಂಗಸರು ಕೊಟ್ಟಿರುವ ಮಾರ್ನೋಮಿಯ ಪದ ಹೇಳುತ್ತಾರೆ. ಕೆರೆ ತುಂಬಿ ಕೋಡಿ ಬಿದ್ದಾಗ ತೆಪ್ಪೋತ್ಸವ ಮಾಡುವುದುಂಟು; ಒಮ್ಮೊಮ್ಮೆ 'ಪರ್ವ' ಮಾಡುವುದುಂಟು. ಆಗಲೂ ಹಾಡು ಹೇಳುತ್ತಾರೆ."

4. "**ನಂಜಪ್ಪ'** ಎಂಬ ಹಾಡಿನಲ್ಲಿ ನಂಜುಡೇಶ್ವರ ಚಾಮುಂಡಿಯರ ಪ್ರಣಯ ಕಥೆ ಬರುತ್ತದೆ. ಚಾಮುಂಡಿ ನಂಜಪ್ಪ ಅವಳ ಮನೆಗೆ ಹೋದ್ದರಿಂದ ನಂಜಪ್ಪನ ಹೆಂಡತಿ ದೇವೀರಿ(ದೇವಿಯರು, ದೇವಿ) ಮುನಿದಳೆಂದೂ ಆ ಮುನಿಸಿಗೆ ನಂಜಪ್ಪನೂ ಮುನಿದು ದೇಶಾಂತರ ಹೋದನೆಂದೂ ಹಾಡಿನಲ್ಲಿ ಕಲ್ಪಿಸಿಕೊಂಡಿದ್ದಾರೆ. ಇದು ದೊಡ್ಡ ಹಾಡು. ಕೊಟ್ಟಿರುವುದರಲ್ಲಿ ಎಷ್ಟೋ ಭಾಗ ಬಿಟ್ಟು ಹೋಗಿರಬಹುದು. ಅಪೂರ್ಣವಾಗಿಯೂ ಇರಬಹುದು. ನಂಜನಗೂಡಿನ ಜಾತ್ರೆಯ ಕಾಲದಲ್ಲಿ ಯಾತ್ರಿಕರ ವಠಾರಗಳಲ್ಲಿ ಹಾಡು ಪೂರ್ತಿಯಾಗಿ ದೊರಕಬಹುದು."

5. "**ಗಿರಿಜಾ ಕಲ್ಯಾಣ** ಮಹಾಕವಿ ಕಾಳಿದಾಸನೇ ಮೊದಲಾದ ಹಲವು ಕವಿಗಳ ಮನಸ್ಸನ್ನು ಆಕರ್ಷಿಸಿರುವ ದಿವ್ಯ ಕಥೆ; ವಿಶ್ವಕುಟುಂಬಿಯ ಆದರ್ಶ ದಾಂಪತ್ಯವನ್ನು ವರ್ಣಿಸುವ ಪುಣ್ಯ ಚರಿತ್ರೆ. ಅದೇ ಚರಿತ್ರೆ ಹಳ್ಳಿಗರ ಮಟ್ಟಕ್ಕಿಳಿದು ಅವರ ಜೀವನದ ಅನುಭವಗಳನ್ನೊಳಗೊಂಡು ಬಾಳಿಗೆ ಬೆಳಕ್ಕಾಗಿ ದಾರಿ ತೋರಿಸುತ್ತಿದೆ. ಹಳ್ಳಿಯ ಕವಿಗಳು ಕಟ್ಟಿರುವ ಗಿರಿಜಾ ಕಲ್ಯಾಣವೇ 'ಗೌರಮ್ಮನ ಮದುವೆ' ಪ್ರತಿಯೊಂದೂ ಮದುವೆಯಲ್ಲಿಯೂ ಧಾರೆ ಆದ ಮೇಲೆ ಹಾಡನ್ನು ತಪ್ಪದೆ ಹೇಳುತ್ತಾರೆ. ಹಳ್ಳಿಯ ಹೆಣ್ಣುಮಕ್ಕಳಿಗೆ ವೇದ, ಶಾಸ್ತ್ರ, ಪುರಾಣ–ಎಲ್ಲವೂ ಇದೇ. ಇದಕ್ಕನುಸಾರವಾಗಿ ತಮ್ಮ ಬಾಳನ್ನು ತಿದ್ದಿಕೊಳ್ಳಲು ಯತ್ನಿಸುತ್ತಾರೆ. ಹಾಡನ್ನೂ ಅಡಕಮಾಡಿ ಕೊಟ್ಟಿದೆ. ಮದುವೆ ಕಾಲದಲ್ಲಿ ಹೇಳುವ 'ಗೌರಮ್ಮನ ಮದುವೆ'ಯಲ್ಲದೆ ಅದೇ ಹೆಸರಿನ ಮತ್ತೊಂದು ಪದವನ್ನೂ ಕೊಟ್ಟಿದೆ. ಮೊದಲನೆಯದು ತ್ರಿಪದಿ, ಎರಡನೆಯದು ರಗಳೆ, ಕಥೆಯ ರಚನೆಯೂ ಒಂದೊಂದರಲ್ಲಿ ಮದುವೆ ಮಾಡಿಕೊಳ್ಳುತ್ತಾನೆ. ಇದು ಎಲ್ಲೆಲ್ಲೂ ಬಳಕೆಯಿರುವ ಪದ್ಧತಿ. ಎರಡನೆಯದರಲ್ಲಿ ಗೌರಿ ತಾನಾಗಿ ಶಿವನನ್ನು ಮೆಚ್ಚಿ, ಅವನಿದ್ದಲ್ಲಿ ಹೋಗಿ ಮದುವೆಯಾಗುತ್ತಾಳೆ." (ಎರಡನ್ನೂ ಬ್ರಾಹ್ಮಣರಲ್ಲಿದೆ) (1947:83–86) 9 ಹಾಡುಗಳಲ್ಲಿ ಕೆಲವನ್ನು ಅವುಗಳ ಕಥೆಯ ಸಂದರ್ಭದ ಜೊತೆಯಲ್ಲಿ ವಿವರಿಸುವುದಕ್ಕೆ ಪ್ರಯತ್ನಿಸಿದ್ದಾರೆ.

ತೆನೆ 5. ಸಂಕೀರ್ಣ ಪದಗಳು

ಭಾಗದಲ್ಲಿ ಆರು ಹಾಡುಗಳಿವೆ. ಹಚ್ಚೆಯ ಪದ, ಬಂಡಿಯ ಪದ, ಮಾರಿಯ ಪದ, ಚೋಮನ ಪದ, ಹತ್ತಿಯ ಪದ, ಹಾಗೂ ಬಾಂದಿನವರ ಹಾಡು ಹೀಗೆ ವಿಭಾಗ ಮಾಡಿಕೊಳ್ಳಲಾಗಿದೆ. ಬೇರೆ ಬೇರೆ ಸಂದರ್ಭದಲ್ಲಿ ಹಾಡುವ ಪದಗಳನ್ನು ಕೊಡಲಾಗಿದೆ. ಸಂಪಾದಕರು ಇಲ್ಲಿಯ ಹಾಡುಗಳ ಹಿನ್ನೆಲೆಯನ್ನು ಪರಿಚಯಿಸಿ ಕೊಟ್ಟಿದ್ದಾರೆ.

1. "ಹಚ್ಚೆ ಕುಕ್ಕಿಸಿಕೊಳ್ಳುವುದು ಹಳ್ಳಿಯ ಹೆಂಗಸರಿಗೆ ಬಹುರೂಢಿ. ಗಂಡಸರೂ ಒಬ್ಬೊಬ್ಬರು ಕುಕ್ಕಿಸಿಕೊಳ್ಳುವುದುಂಟು. ಹಣೆ, ಹುಬ್ಬಿನ ನಡುವೆ, ಕೆನ್ನೆ, ಗಲ್ಲ, ಕುತ್ತಿಗೆ, ಎದೆ, ಕೈ, ತೋಳು, ತೊಡೆ–ಹೀಗೆ ಮೈಯಲ್ಲಿ ಎಲ್ಲಿ ಬೇಕಾದರೂ ಹಚ್ಚೆ ಕುಕ್ಕಿಸಿಕೊಳ್ಳುತ್ತಾರೆ. ತಿಲಕ, ಚುಕ್ಕಿ, ಬಟ್ಟು, ಕಡಗ, ಕಂಕಣ ಮುಂತಾದ ಅಲಂಕಾರಗಳು; ತ್ರಿಕೋಣ, ಚೌಕ, ವರ್ತುಲಮೊದಲಾದ ಹಲವು ಆಕಾರದ ರಂಗೋಲಿ ಹಸೆಗಳು; ಲಿಂಗ, ನಂದಿ, ಕೊಳಲು ಕೃಷ್ಣ, ಕಾಳಿಂಗ ಮರ್ದನ, ರಾಮಸೀತೆ, ನಾಗರು, ಮರ, ಬಳ್ಳಿ ಮೊದಲಾದ ಬಗೆಬಗೆಯ ಚಿತ್ರಗಳು – ಯಾವುದು ಬೇಕಾದರು ಅವರವರ ಇಷ್ಟಕ್ಕೆ ತಕ್ಕಂತೆ ಹಚ್ಚೆ ಹುಯ್ಯಿಸಿಕೊಳ್ಳಬಹುದು. ಮುತ್ತೈದೆ ಲಕ್ಷಣವೆಂದು ಸಂಪ್ರದಾಯವೆಂದು, ಹರಕೆಯೆಂದು, ಪ್ರೀತಿಯ ಗುರುತೆಂದು ಇದಕ್ಕೆ ಹಲವು ಕಾರಣಗಳುಂಟು."

"ಹಚ್ಚೆ ಹುಯ್ಯುವವರೆಲ್ಲ ಸಾಮಾನ್ಯವಾಗಿ ಹೆಂಗಸರು; ಕಣಿ ಹೇಳಿ ಭಿಕ್ಷೆವೆತ್ತುತ್ತ ಊರುರು ತಿರುಗುವ ಕೊರವಯವರು. ಕಪ್ಪು, ಕೆಂಪು, ಹಸುರು ಮೊದಲಾದ ಬಣ್ಣವನ್ನು ಸೂಜಿಯಲ್ಲಿ ಅದ್ದಿಕೊಂಡು ಹಚ್ಚೆ ಹುಯ್ಯಿಸಿಕೊಳ್ಳುವವರ ಚರ್ಮಕ್ಕೆ ಚುಚ್ಚಿ ಬೇಕಾದ ಆಕಾರವನ್ನು ನಿರ್ಮಿಸುತ್ತಾರೆ. ಹೀಗೆ ಚುಚ್ಚುವಾಗ ರಕ್ತ ಜಿನುಗಿ ಚಿಮ್ಮುತ್ತದೆ. ಆ ನೋವು ಮರೆಯುವುದಕ್ಕಾಗಿ ಹಚ್ಚೆ ಹುಯ್ಯುವವರು ರಾಗ ರಾಗವಾಗಿ ಪದ ಹೇಳುತ್ತಿರುತ್ತಾರೆ. ಆಗ ದನಿಯೊಂದೇ ಕಿವಿಗೆ ಬೀಳುತ್ತಿರುವುದು; ಒಂದು ಮಾತೂ ಸರಿಯಾಗಿ ತಿಳಿಯುವುದಿಲ್ಲ. ಹಚ್ಚೆಗೆ ಕೂತರೂ ಅತ್ತರೂ ಆ ಆಳು ಇವರ ರಾಗದಲ್ಲಿ ಮುಳುಗಿ ಹೋಗುತ್ತದೆ. ರಾಗವನ್ನು ಬಿಟ್ಟು ನಿಧಾನವಾಗಿ ಹೇಳಿಸಿ ತಿಳಿದುಕೊಳ್ಳುವುದು ಬಹು ಕಷ್ಟ. ಇವರ ಪದಗಳಲ್ಲಿ ರಾಮಾಯಣ, ಭಾರತ ಮೊದಲಾದ ಪುರಾಣ ಪುಣ್ಯಕಥೆಗಳೂ, ಗ್ರಾಮದೇವತೆಗಳಿಗೂ ಹಳ್ಳಿಯ ಐತಿಹ್ಯಗಳಿಗೂ ಸಂಬಂಧಿಸಿದ ಸಂಗತಿಗಳೂ ಹೆಚ್ಚು. ರಾಗಿಕಲ್ಲು ಪದಗಳನ್ನೂ ಹೇಳುವುದುಂಟು. ಕೆಲವು ವೇಳೆ ದಾನಿಗಳನ್ನು ಹೊಗಳುವ ಪ್ರಶಂಸೆಗಳನ್ನೂ ಹಾಡುತ್ತಾರೆ."

2. "ಹಿಂದೆ ಈಗಿನಂತೆ ರೈಲು, ಬಸ್ಸು ಮೊದಲಾದ ಪ್ರಯಾಣ ಸಾಧನಗಳಿರಲಿಲ್ಲ. ಜನರ ಪ್ರಯಾಣ ಸಾಮಾನು ಸಾಗಣೆ, ಎಲ್ಲಕ್ಕೂ ಎತ್ತಿನ ಬಂಡಿಯೇ ಆಧಾರವಾಗಿತ್ತು. ದೂರ ಪ್ರಯಾಣವಾದರೆ ದಿನಗಟ್ಟಳೆ, ವಾರಗಟ್ಟಳೆ, ಒಂದೇ ಸಮನಾಗಿ

ಹೋಗಬೇಕಾಗುತ್ತಿತ್ತು. ಆ ದೀರ್ಘ ಪ್ರಯಾಣದಲ್ಲಿ ಬೇಸರ ಪರಿಹಾರಕ್ಕೂ ಆತ್ಮ ಸಂತೋಷಕ್ಕೂ ಬಂಡಿ ಹೊಡೆಯುವವರು ಹಲವು ಪದಗಳನ್ನು ಹಾಡುವುದು ವಾಡಿಕೆಯಾಗಿತ್ತು. ಗಂಡು ಬಾಳಿಗೆ ಸಂಬಂಧಿಸಿದಂತೆ ವೀರ ಸಾಹಸಗಳ ಹಾಗೂ ಶೃಂಗಾರ ಸನ್ನಿವೇಶಗಳ ವರ್ಣನೆಯೇ ಆ ಪದಗಳ ಮುಖ್ಯ ವಿಷಯ. ಈಗ ಅಂಥ ಪದಗಳನ್ನು ಹೇಳುವುದು ಬಹಳ ವಿರಳ."

3. "**ಮಾರಿಯ ಹಬ್ಬ** ಈಗಲೂ ಎಷ್ಟೋ ಕಡೆ ನಡೆಯುತ್ತದೆ. ಊರ ನಡುವೆ ಚಪ್ಪರ ಕಟ್ಟಿ ಮಾರಿಯನ್ನಿಟ್ಟು ಪೂಸಿ ಕುರಿ ಕೋಣಗಳನ್ನು ಬಲಿ ಕೊಟ್ಟು ಹೆಂಡ ಕುಡಿದು ರಾತ್ರಿಯೆಲ್ಲ ಪದ ಹೇಳಿಕೊಂಡು ಕುಣಿಯುತ್ತ ಆ ಉಗ್ರದೇವತೆಯನ್ನು ಆರಾಧಿಸುತ್ತಾರೆ. ಈಗೀಗ ಮಾರಿ ಹಬ್ಬದ ಉಗ್ರತೆ ಕಡಿಮೆಯಾಗುತ್ತಿದೆ. ಮಾರಿಯೆದುರಿಗೆ ಕುಣಿಯುವಾಗಲೂ ಆ ಬಳಿಕ ಮಾರಿಯನ್ನು ಅಡ್ಡೆಯ ಮೇಲೆ ಕೂರಿಸಿ ಉತ್ಸವ ಮಾಡಿಕೊಂಡು ಹೋಗುವಾಗಲೂ ಅನೇಕ ಪದಗಳನ್ನೂ ಹೇಳುತ್ತಾರೆ. ಕೆಲವನ್ನು ಮಾತ್ರ ಕೊಟ್ಟಿದೆ. ಮಾರಿಗೆ ಸಂಬಂಧಿಸಿದವು ಕೋಲಾಟದ ಪದಗಳಲ್ಲಿಯೂ ಬೆರೆತಿವೆ. (ಉದಾ: ಕರಿಯವ್ವ, ಕಲ್ಕವ್ವ) ಮಾರಿಯ ಪದಗಳು ಬೇಕಾದಷ್ಟಿವೆ. ಅವನ್ನಿನ್ನೂ ಸಂಗ್ರಹಿಸಬೇಕಾಗಿದೆ. ಕುಕ್ಕೆಯಲ್ಲಿಯೂ ಪೆಟ್ಟಿಗೆಯಲ್ಲಿಯ್ಯೂ ಮಾರಿಯನ್ನಿಟ್ಟು ಹೊತ್ತುಕೊಂಡು ಊರೂರು ತಿರುಗುವವರಿರುವರು. ಹೇಳುವ ಪದಗಳನ್ನು ಸಂಗ್ರಹಿಸಿಲ್ಲ. ಸೀಮೆ ಸೀಮೆ ಅಲೆಯುವ ಅವರಿಂದ ಸಂಗ್ರಹಿಸುವುದು ಸುಲಭ ಅಲ್ಲ."

4. "**ಮಾರಿಯ** ಮುಂದೆಯೂ ಪ್ರತ್ಯೇಕವಾಗಿಯೂ 'ಚೋಮ'ನನ್ನು ಕುಣಿಸುವುದುಂಟು. ಚೋಮನೂ ಉಗ್ರದೇವತೆ; ಭೂತನಾಯಕ, ರೋಗಾದಿಗಳೂ ಬಂದರೆ, ಕಷ್ಟ ಸಂಕಷ್ಟಗಳುಂಟಾದಾಗ, ಕೆಲವು ಮುಖ್ಯ ವ್ಯವಹಾರಗಳನ್ನು ನಡೆಸಬೇಕಾದಾಗ ಚೋಮನ ಗುಡಿಗೆ ಹೋಗಿ ಕಣಿ ಕೇಳುವುದು ಹಳ್ಳಿಗರಲ್ಲಿ ವಾಡಿಕೆಯುಂಟು. ಉಗ್ರವಾಗಿರುವ ಮುಖವಾಡವನ್ನು ಹಾಕಿಕೊಂಡು ಕೈಯಲ್ಲಿ ಕತ್ತಿ ಬೆತ್ತಗಳನ್ನು ಹಿಡಿದು ಚೋಮ ಕುಣಿಯುವಾಗ ತಮಟೆ ಅಥವಾ ಕರಡೆ ವಾದ್ಯ ಭಾರಿಸಿಕೊಂಡು ಹಲವು ಪದಗಳನ್ನು ಹೇಳುತ್ತಾರೆ. ಕೆಲವನ್ನು ಮಾತ್ರ ಕೊಟ್ಟಿದೆ."

5. "ಹತ್ತಿಯ ಹಾಡು ಹತ್ತಿಯ ಮಹತ್ವವನ್ನು ವರ್ಣಿಸುತ್ತಾ 'ಖಾದಿ ಸ್ವರಾಜ್ಯಕ್ಕೆ ಹಾದಿ' ಎಂದು ಸಾರುವ ಈಗಿನ ಗಾಂಧಿಯುಗದ ಅಭಿಪ್ರಾತವನ್ನೇ ಸಮರ್ಥಿಸುವ ಒಂದು ಒಳ್ಳೆಯ ಪದ. ಹತ್ತಿಯನ್ನು ಬೆಳೆದು ಬಟ್ಟೆ ಮಾಡುವ ವಿಧಾನವನ್ನೂ ಅದರಿಂದ ನಮಗಾಗುವ ಉಪಕಾರವನ್ನು ವಿವರಿಸುತ್ತದೆ. 'ಹತ್ತಿ ನಾಡ ಸಂಜೀವನ' ಎಂದು ಅದರ ಬೆಲೆಯನ್ನು ಒತ್ತಿ ಹೇಳುತ್ತದೆ. ವ್ಯವಸಾಯಕ್ಕೂ ಕೈಗಾರಿಕೆಗೂ ಸಂಬಂಧಿಸಿದ ಇಂಥ ಪದಗಳು ಬಹಳ ವಿರಳ."

6. "ಮುಂದಿನದು 'ಬಾಂದಿನವರ ಹಾಡು' ಇದು ಈಗಿನ 'ಸರ್ವೇ ಇಲಾಖೆ' ಹುಟ್ಟಿದ ಮೇಲೆ ರಚಿಸಿರುವ ಪದ. ನೆಲವನ್ನೆಲ್ಲ ಅಳೆದು ವಿಂಗಡಿಸಿ ಕಂದಾಯ ಗೊತ್ತು ಮಾಡುವ ಮೋಜಣಿಯವರ ಕಾರ್ಯ ರೀತಿಯನ್ನು ಇದು ವಿಮರ್ಶಿಸುತ್ತದೆ. ಯಾವ ತಂಟೆಯೂ ಇಲ್ಲದೆ ಸುಖವಾಗಿ ವ್ಯವಸಾಯ ಮಾಡಿಕೊಂಡಿದ್ದ ನಮ್ಮ ರೈತರಿಗೆ ಹೊಸ ಕಾಲದ ಶಿಸ್ತು ಬಂದಾಗ ಉಂಟಾದ ತೊಂದರೆಯನ್ನು ಪದದಲ್ಲಿ ಅರಿತುಕೊಳ್ಳಬಹುದು" (1946:131–133) ಹೀಗೆ ಅಭಿಪ್ರಾಯಪಡುತ್ತಾರೆ. ಅಲ್ಲದೆಯೇ ಕಾಫಿ ಬೀಜ, ಹೊಗೆಯ ಸೊಪ್ಪು ಕುರಿತ ಹಾಡುಗಳು ಚಿಕ್ಕಂದಿನಲ್ಲಿ ಕೇಳಿದ ನೆನಪೆಂದು ಸಂಪಾದಕರು ಹೇಳಿಕೊಂಡಿದ್ದಾರೆ. ಇದು ಹೊಸ ಘಟನೆಗಳಿಂದ ಹಳ್ಳಿಗರ ಮನಸ್ಸಿನ ಮೇಲೆ ಆದ ಪರಿಣಾಮಗಳನ್ನು ಇಂಥ ಪದಗಳಲ್ಲಿ ಕಾಣಬಹುದೆಂದು ಅಭಿಪ್ರಾಯ ಪಡುತ್ತಾರೆ. ಹಲಗೆಯ ಕುಣಿತ, ರಂಗದ ಕುಣಿತ, ಸುಗ್ಗಿಯ ಕುಣಿತ, ಹೆರಿಗೆ ಸೇವೆ, ಭಿಕ್ಷೆ ಎತ್ತುವಾಗ ಹೇಳುವ ಪದಗಳು ಆ ಸಂದರ್ಭದಲ್ಲಿ ಲಭ್ಯವಿದ್ದುವಾದರೂ ಅವುಗಳೆನ್ನೆಲ್ಲಾ ಸಂಗ್ರಹಿಸಿ ಪ್ರಕಟಿಸಲು ಸಾಧ್ಯವಾಗಿಲ್ಲವೆಂದು ಹೇಳಿರುತ್ತಾರೆ.

ತೆನೆ 6. ಚರಿತ್ರೆಗೆ ಸಂಬಂಧಿಸಿದ ಪದಗಳು

ಭಾಗದಲ್ಲಿ ಚರಿತ್ರೆಗೆ ಸಂಬಂಧಿಸಿದ ನಾಲ್ಕು ಹಾಡುಗಳಿವೆ. ಅವುಗಳು– **ಸರ್ಜಪ್ಪ ನಾಯಕ** (ಲಾವಣಿ), **ಲಕ್ಷಣ್ಣ–ಈರಣ್ಣ, ಟಿಪ್ಪುಸುಲ್ತಾನನ ಬೀಳಿನ ಹಾಡು** (1), (2). ನಾಲ್ಕು ಹಾಡುಗಳೂ ಸಹ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಸಂದು ಹೋದ ಪಾಳೆಯಗಾರರ ಹಾಗೂ ಮೈಸೂರಿನ ಸುಲ್ತಾನರ ವಿವರವನ್ನು ಕೊಡುತ್ತಿವೆ. ಸಂಪಾದಕರು ಹಾಡಿನ ಸಂಗ್ರಹದ ಕುರಿತಂತೆ ರೀತಿ ಪರಿಚಯ ಮಾಡಿಕೊಂಡಿದ್ದಾರೆ.

1. "ನಾನು ಚಿಕ್ಕವನಿದ್ದಾಗ ನಮ್ಮ ಅಜ್ಜ ತನ್ನ ಬಾಲ್ಯ ಕಾಲದ ಹಲವು ಸಂಗತಿಗಳನ್ನು ವಿವರಿಸಿ ಹೇಳುತ್ತಿದ್ದರು. 'ರಂಗಪ್ಪ ನಾಯಕನ ಅಡಾವೂಡಿ' ಅವುಗಳಲ್ಲೊಂದು. ರಂಗಪ್ಪನಾಯಕನ ತರೀಕೆರೆಯ ಪಾಳೆಯಗಾರನಂತೆ. ನಾಡಿನಲ್ಲೆಲ್ಲ ಗದ್ದಲವೋ ಗದ್ದಲ. ಹಳ್ಳಿ ಹಳ್ಳಿಯಲ್ಲೂ ಜನ ದೊಣ್ಣೆ ಹಿಡಿದು ಹೊರಟರಂತೆ; ಕೆಲವು ಮುಂದಾಳುಗಳ ಕೈಕೆಳಗೆ ಒಟ್ಟು ಗೂಡಿ ಸರ್ಕಾರದ ಅಂಕೆಯನ್ನು ಲಕ್ಷ್ಯ ಮಾಡದ ತಮಗೆ ಆಗದವರನ್ನು ಬಗೆಬಗೆಯಲ್ಲಿ ಪೀಡಿಸತೊಡಗಿದಂತೆ; ಕೂಟ ಕೂಡಿದ ಮೇಲೆ ಬಿದ್ದು ಊರೂರುಗಳನ್ನೇ ದೋಚತೊಡಗಿದರಂತೆ. ಕಡೆಗೆ ಮೈಸೂರಿನಿಂದ ಕುದುರೆ ದಂಡು ಬಂದು ದಂಗೆಯನ್ನೊಡಗಿಸಿದಂತೆ. ರಂಗಪ್ಪ ನಾಯಕನನ್ನು ಅವನ ಸೂಳೆ ಮೋಸದಿಂದ ಹಿಡಿದು ಕೊಟ್ಟಳಂತೆ. ತಾನು ಕಣ್ಣಾರೆ ಕಂಡ ಹಾಗೂ ಕೇಳಿದ ಆಗಿನ ಅನೇಕ ಸಾಹಸ

ಕೃತ್ಯಗಳನ್ನು ಮುದುಕಿ ವಿವರಿಸಿ ಹೇಳುತ್ತಿದ್ದರೆ ಕೇಳಿ ನಮಗೆಲ್ಲ ಮೈ ನವಿರೇಳುತ್ತಿತ್ತು. ಈಚೆಗೆ ನಾನು ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಭಿಕ್ಷದವರು ಹಾಡುತ್ತಿದ್ದ ಸರ್ಜಪ್ಪನಾಯಕ ಲಾವಣಿಯೊಂದರ ಕೆಲವು ನುಡಿಗಳನ್ನು ಕೇಳಿದ್ದೆ. ನಾಲ್ಕೈದು ನುಡಿಗೊಂದರಂತೆ ಎಂಟು ಹತ್ತಕ್ಕೊಂದರಂತೆ, ಆಯ್ದರೂ ಇಷ್ಟು ದೊಡ್ಡದಾಯಿತು. ಉದಾಹರಣೆಗೆ ಕೊಟ್ಟಂತೆ ಎರಡೆರಡು ನುಡಿಗಳಾನ್ನಾದರೂ ಕೊಡದಿದ್ದರೆ ಹಾಡಿನ ನಿಜಸ್ವರೂಪವನ್ನು ಮರೆಸಿದಂತಾಗುತ್ತದೆ ಆದರೆ ಆಭಾಸ ಚಿತ್ರವನ್ನು ಕೊಟ್ಟಂತಾಗಿ ತುಂಬ ಅನ್ಯಾಯವಾಗುತ್ತದೆ."

2. "ಸುವ್ವಿಯ ಹಾಡು' ಕುಟ್ಟುವಾಗ ಹೇಳುವ ಹಾಡು ಕಾವ್ಯಗಳಲ್ಲಿ ಇಂಥ ಹಾಡಿಗೆ 'ಒನಕೆ ವಾಡು' ಎನ್ನುತ್ತಾರೆ. ಅಲ್ಲಿ ತ್ರಿಪದಿಯಲ್ಲಿರುವ ಒನಕೆಹಾಡು ಶೃಂಗಾರ ಸನ್ನಿವೇಶದಲ್ಲಿ ಒಂದೆರಡು ಕಡೆ ಬರುತ್ತದೆ. ಹೀಗೆ ಕಥೆಯನ್ನೊಳಗೊಂಡ ಒನಕೆವಾಡು ಕಾಣಬರುವುದಿಲ್ಲ. ಸುವ್ವಿಯ ಹಾಡು (ನಾನು ಕಂಡಂತೆ) ಬ್ರಾಹ್ಮಣರಲ್ಲಿ ಹೆಚ್ಚು ಪ್ರಚಾರದಲ್ಲಿರುವುದಾದರೂ ಇಲ್ಲಿನ ವಿಷಯ ಒಕ್ಕಲಿಗರ ಜೀವನಕ್ಕೆ ಸಂಬಂಧಿಸಿದ್ದು. ತಾಯಿ ಬದುಕಿರುವಾಗ ಸೋದರತ್ತೆ ಬಂದು ಧಾರೆಯೆರೆಯುವುದು ಬ್ರಾಹ್ಮಣರಲ್ಲಿ ವಾಡಿಕೆಯಿಲ್ಲ. ಒಕ್ಕಲಿಗರಲ್ಲಿ 'ಬಳಗೆ–ಧಾರೆ'ಯ (ನೆಂಟರೆಲ್ಲ ಬಂದು ಧಾರೆಯೆರೆಯುವ) ಪದ್ಧತಿಯುಂಟು. ಆದ್ದರಿಂದ ಇದನ್ನು ಬ್ರಾಹ್ಮಣರು ರಚಿಸಿರಬಹುದೆಂಬ ಸಂದೇಹ ಬಂದರೂ ಬ್ರಾಹ್ಮಣರ ಹಾಡುಗಳಲ್ಲಿ ಸೇರಿಸಲಿಲ್ಲ."

3. "ಉತ್ತರೆ ಮಳೆ ಬರುವ ಮೊದಲು ಬಿಸಿಲಿನ ಬೇಗೆ ಅತಿಯಾಗಿ ನೆಲವೆಲ್ಲ ಬೆಂದು ಬೆಂಡಾಗಿರುತ್ತದೆ. ಅಂಥ ಸಮಯದಲ್ಲಿ ಸೊರಗಟ್ಟಿಕೊಂಡು ಭಾರಿ ಅಡ್ಡಮಳೆ ಹುಯ್ದು ದಗೆಯಡಗಿಸಿ ಕೆರೆಕಟ್ಟೆಗಳನ್ನು ತುಂಬಿಸುತ್ತದೆ. ಬೆಂದ ನೆಲವನ್ನೂ ಧಾರೆಗಟ್ಟಿ ಸುರಿಯುವ ಮಳೆಯನ್ನೂ ಕಂಡು ಸಂಕಟದಲ್ಲಿ ಸೊರಗಿ ಕಣ್ಣೀರ ಕೋಡಿ ಹರಿಸುತ್ತ ಹೊರಟ 'ಉತ್ತರದೇವಿ'ಯನ್ನು ಚಿತ್ರಿಸಿದ್ದಾರೆಂದು ತೋರುತ್ತದೆ. ಹಳ್ಳಿಗರು ಕಥೆ ನಿಜವಾಗಿ ನಡೆದ್ದದೆಂದು ನಂಬುತ್ತಾರೆ. 'ಮಾ ತಾಯಿ ತಾನು ನೊಂದರೂ ಲೋಕ ತಣಿಸಿದಳು" ಎನ್ನುತ್ತಾರೆ.

4. "ನವರಾತ್ರೆ ನಾಡ ಹಬ್ಬವಷ್ಟೆ. ಆಗ ಪ್ರತಿ ಹಳ್ಳಿಯಲ್ಲಿಯೂ ದೇವರನ್ನು ಪಟ್ಟಕ್ಕೆ ಕೂರಿಸಿ ದಿನದಿನವೂ ಬಹಳ ಜನ ಸೇರಿ ಪೂಜೆ ಮಂಗಳಾರತಿ ಮಾಡುತ್ತಾರೆ. ಸರಸ್ವತೀ ಪೂಜೆ, ಆಯುಧ ಪೂಜೆ, ಮೊದಲಾದ ಎಲ್ಲ ಕಟ್ಟಳೆಗಳೂ ತಪ್ಪದೆ ನಡೆಯುತ್ತವೆ. ವಿಜಯ ದಶಮಿಯ ದಿನ ದೊಡ್ಡ ಉತ್ಸವ. ಅವತ್ತು ಸಂಜೆ ದೇವರು ಅಂಬೆಸೆಯುವುದಕ್ಕೆ ಹೋಗಬೇಕು. ಇದು ಹಳ್ಳಿಯ ಜಂಬೂ ಸವಾರಿ, ಪೌಜು, ಮಾರ್ನೋಮಿ ಮಂಟಪದಲ್ಲಿ

ದೇವರನ್ನು ಬಿಜಯ ಮಾಡಿಸಿ ದೇವರೆದುರಿಗೆ ಹಳ್ಳಿಯ ಕಲಾ–ಕೌಶಲ್ಯವನ್ನೆಲ್ಲ ಪ್ರದರ್ಶಿಸುತ್ತಾರೆ. ಕೋಲಾಟ, ಕುಸ್ತಿ, ಕತ್ತಿ ವರಸೆ–ಎಲ್ಲಾ ನಡೆಯುತ್ತದೆ. ಊರಿಗೆ ಮರಳುವ ಉತ್ಸವವನ್ನು ಎದುರುಗೊಂಡು ಆರತಿ ಎತ್ತುವಾಗ ನಮ್ಮೂರ ಹೆಂಗಸರು ಕೊಟ್ಟಿರುವ ಮಾರ್ನೋಮಿಯ ಪದ ಹೇಳುತ್ತಾರೆ. ಕೆರೆ ತುಂಬಿ ಕೋಡಿ ಬಿದ್ದಾಗ ತೆಪ್ಪೋತ್ಸವ ಮಾಡುವುದುಂಟು; ಒಮ್ಮೊಮ್ಮೆ 'ಪರ್ವ' ಮಾಡುವುದುಂಟು. ಆಗಲೂ ಹಾಡು ಹೇಳುತ್ತಾರೆ."

ತೆನೆ 7. ಚರಿತ್ರೆಗೆ ಸಂಬಂಧಿಸಿದ ಪದಗಳು

ಭಾಗದಲ್ಲಿ ಚರಿತ್ರೆಗೆ ಸಂಬಂಧಿಸಿದ ನಾಲ್ಕು ಹಾಡುಗಳಿವೆ. ಅವುಗಳು–ಸರ್ಜಪ್ಪ ನಾಯಕ (ಲಾವಣಿ), ಲಕ್ಷಣ್ಣ–ಈರಣ್ಣ, ಟಿಪ್ಪುಸುಲ್ತಾನನ ಬೀಳಿನ ಹಾಡು (1), (2),. ನಾಲ್ಕು ಹಾಡುಗಳೂ ಸಹ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಸಂದು ಹೋದ ಪಾಳೆಯಗಾರರ ಹಾಗೂ ಮೈಸೂರಿನ ಸುಲ್ತಾನರ ವಿವರವನ್ನು ಕೊಡುತ್ತಿವೆ. ಸಂಪಾದಕರು ಹಾಡಿನ ಸಂಗ್ರಹದ ಕುರಿತಂತೆ ರೀತಿ ಪರಿಚಯ ಮಾಡಿಕೊಂಡಿದ್ದಾರೆ.

1. "ನಾನು ಚಿಕ್ಕವನಿದ್ದಾಗ ನಮ್ಮ ಅಜ್ಜ ತನ್ನ ಬಾಲ್ಯಕಾಲದ ಹಲವು ಸಂಗತಿಗಳನ್ನು ವಿವರಿಸಿ ಹೇಳುತ್ತಿದ್ದರು. 'ರಂಗಪ್ಪ ನಾಯಕನ ಅಡಾವೂಡಿ' ಅವುಗಳಲ್ಲೊಂದು. ರಂಗಪ್ಪನಾಯಕನ ತರೀಕೆರೆಯ ಪಾಳೆಯಗಾರನಂತೆ. ನಾಡಿನಲ್ಲೆಲ್ಲ ಗದ್ದಲವೋ ಗದ್ದಲ. ಹಳ್ಳಿ ಹಳ್ಳಿಯಲ್ಲೂ ಜನ ದೊಣ್ಣೆ ಹಿಡಿದು ಹೊರಟರಂತೆ; ಕೆಲವು ಮುಂದಾಳುಗಳ ಕೈಕೆಳಗೆ ಒಟ್ಟುಗೂಡಿ ಸರ್ಕಾರದ ಅಂಕೆಯನ್ನು ಲಕ್ಷ್ಯ ಮಾಡದ ತಮಗೆ ಆಗದವರನ್ನು ಬಗೆಬಗೆಯಲ್ಲಿ ಪೀಡಿಸತೊಡಗಿದಂತೆ; ಕೂಟ ಕೂಡಿದ ಮೇಲೆ ಬಿದ್ದು ಊರೂರುಗಳನ್ನೇ ದೋಚತೊಡಗಿದರಂತೆ. ಕಡೆಗೆ ಮೈಸೂರಿನಿಂದ ಕುದುರೆ ದಂಡು ಬಂದು ದಂಗೆಯನ್ನೊಡಗಿಸಿದಂತೆ. ರಂಗಪ್ಪ ನಾಯಕನನ್ನು ಅವನ ಸೂಳೆ ಮೋಸದಿಂದ ಹಿಡಿದು ಕೊಟ್ಟಳಂತೆ. ತಾನು ಕಣ್ಣಾರೆ ಕಂಡ ಹಾಗೂ ಕೇಳಿದ ಆಗಿನ ಅನೇಕ ಸಾಹಸ ಕೃತ್ಯಗಳನ್ನು ಮುದುಕಿ ವಿವರಿಸಿ ಹೇಳುತ್ತಿದ್ದರೆ ಕೇಳಿ ನಮಗೆಲ್ಲ ಮೈ ನವಿರೇಳುತ್ತಿತ್ತು.

ಈಚೆಗೆ ನಾನು ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಭಿಕ್ಷದವರು ಹಾಡುತ್ತಿದ್ದ ಸರ್ಜಪ್ಪನಾಯಕ ಲಾವಣಿಯೊಂದರ ಕೆಲವು ನುಡಿಗಳನ್ನು ಕೇಳಿದ್ದೆ. ಕೇಳಿದಷ್ಟರಲ್ಲಿ ಕಥೆ ರಂಗಪ್ಪ ನಾಯಕನ ಕಥೆಯನ್ನು ಹೋಲುತ್ತಿತ್ತು. ಇತ್ತೀಚೆಗೆ ರಂಗಪ್ಪನಾಯಕನ ವಿಷಯವನ್ನು ತಿಳಿಯಬೇಕೆಂಬ ಕುತೂಹಲದಿಂದ 'ಮೈಸೂರು ಗೆಸೆಟೆಯವರ'ನ್ನು ನೋಡಿದಾಗ ಆ ದಂಗೆಯಲ್ಲಿ ಭಾಗವಹಿಸಿದ್ದ ತರೀಕೆರೆಯ ಪಾಳೆಯಗಾರ ರಂಗಪ್ಪ ನಾಯಕನೆಂಬುದಕ್ಕೆ ಬದಲಾಗಿ ಸರ್ಜಾ ಹನುಮಪ್ಪ ನಾಯಕನೆಂದು ತಿಳಿದು ಬಂತು. ರಂಗಪ್ಪ ನಾಯಕನೂ

ಹನುಮಪ್ಪ ನಾಯಕನೂ ಬೇರೆ ಬೇರೆಯೋ ಅಥವಾ ಒಬ್ಬನಿಗೆ ಎರಡು ಹೆಸರುಗಳೂ ಇದ್ದವೋ ಹೇಳಲಾಗುವುದಿಲ್ಲ. ಆದರೂ ದಂಗೆಯೆದ್ದ ತರೀಕೆರೆಯ ಪಾಳೆಯಗಾರನ ಕಥೆ ಸರ್ಜಪ್ಪನಾಯಕನ ಲಾವಣಿಯಲ್ಲಿ ಚಿತ್ರಿಸಿದೆಯೆಂದು ನಂಬಿಕೆಯುಂಟಾಯಿತು. ಆದ್ದರಿಂದ ಅದನ್ನು ಸೇರಿಸಿದೆ. ಅರಸೀಕೆರೆಯ ರೈಲಿನಲ್ಲಿ ಹಾಡುತ್ತಿದ ಒಬ್ಬ ಭಿಕ್ಷುಕನಿಂದ ಇದನ್ನು ಸಂಗ್ರಹಿಸಿದೆ.

ಈಗ ಒಂದೆರಡು ತಿಂಗಳ ಹಿಂದೆ ಮತ್ತೊಮ್ಮೆ ರೈಲಿನಲ್ಲೆ ಲಾವಣಿ ಕಿವಿಗೆ ಬಿತ್ತು. ಅದರಲ್ಲಿ ಕಥೆ ಇನ್ನೂ ಮುಂದುವರಿದಿತ್ತು. ಸರ್ಜಪ್ಪ ನಾಯಕ ಸೆರೆಸಿಕ್ಕಿದರೂ ಶೌರ್ಯವನ್ನು ಮೆರೆಯುತ್ತಾನೆ. ಕಳ್ಳನಂತೆ ಕೊಲೆಯಾಗಲೊಲ್ಲದೆ ಕತ್ತಿ ಹಿರಿದು ಹೋರಾಡಿ ತೊಡೆ ತಲೆಗಳನ್ನು ಕತ್ತರಿಸಿಕೊಂಡು ವೀರರಮಣ ಅಪೂರ್ಣವಾಗಿಯೇ ಅಚ್ಚಾಗ ಬೇಕಾಯಿತು." (1947:147–148)

2. **ಲಕ್ಕಣ್ಣ–ಈರಣ್ಣ** ಹಳೆಯ ಬೀಡಿನ ಕಡೆಗಾಲಕ್ಕೆ ಸಂಬಂಧಿಸಿದ ಒಂದು ಕಥೆ[6]. ಇದನ್ನು ರಾತ್ರಿಯೆಲ್ಲಾ ಹೇಳಿದರೂ ಮುಗಿಯದಂತೆ ಹೇಳುತ್ತಾರೆ. ಹಲವಾರು ವಿಧದಲ್ಲಿ ರಾಗರಾಗವಾಗಿ ಹೇಳಿದ್ದನ್ನೇ ಮತ್ತೆಮತ್ತೆ ಹೇಳುವುದರಿಂದ ಕಥೆ ಅಷ್ಟು ದೊಡ್ಡದಾಗುತ್ತದೆ. ಹಾಗೆ ದೊಡ್ಡದು ಮಾಡುವುದಕ್ಕೆ ನಮ್ಮ ಹಳ್ಳಿಯವರು ಕತೆಯ ಬೆಲೆಯನ್ನು ಅದನ್ನು ಹೇಳಿದ ಅವಧಿಯಿಂದ ಅಳೆದು ನೋಡುವರೆಂಬುದೇ ಮುಖ್ಯ ಕಾರಣ. ಕಥೆಯನ್ನೂ ಬಹು ಸಂಕ್ಷಿಪ್ತ ಮಾಡಿ ಬರೆದಿದೆ. ಕಥೆ ಹೇಳುವವರು ಈಗೀಗ ವಿರಳವಾಗುತ್ತಿದ್ದಾರೆ. ಕೋಲಾಟದ ಪದಗಳಲ್ಲಿ ಶ್ರೀರಂಗಪಟ್ಟಣದ ಪತನವನ್ನು ಕುರಿತದ್ದು ಒಂದಿದೆ. (1947:25)

"ನಾನು ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ 'ಷಹರು ಗಂಜಾಂ ಪೇಟೆಯೊಳಗೆ ಹೊಂಟರು ವುಸ್ತಾದರು' ಎಂದು ಒಂದು ಲಾವಣಿಯ ಪಲ್ಲವಿ ಆಗಾಗ ಕೇಳುತ್ತಿತ್ತು. ಎಲ್ಲಿಯೂ ಆ ಲಾವಣಿಯನ್ನು ಪೂರ್ತಿಯಾಗಿ ಕೇಳಿಲ್ಲ. ಎರಡು ಮೂರು ನುಡಿಗಳನ್ನು ಕೂಡ ಕೇಳಲಿಲ್ಲ. ಅದು ಶ್ರೀರಂಗಪಟ್ಟಣದ ವೈಭವವನ್ನೂ, ಪತನವನ್ನೂ ಕುರಿತದ್ದಾಗಿರಬಹುದು. ನಮ್ಮ ಕೋಲಾಟದವರು ಹೇಳುವ ಪದ ಅಪೂರ್ಣವಾಗಿರಬೇಕು. ಅಥವಾ ಇನ್ನೂ ವಿವರವಾದ ಬೇರೊಂದು ಲಾವಣಿಯಿರಬೇಕು – ಎಂದು ಮೊದಲಿನಿಂದಲೂ ನನಗೊಂದು ಸಂದೇಹವಿತ್ತು. ಅದು ನಿಜವೆಂದು ಈಚೆಗೆ ಸ್ಪಷ್ಟವಾಯಿತು" (1947:148–149) ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಟಿಪ್ಪುಸುಲ್ತಾನನ ಬೀಳಿನ ಕುರಿತಂತೆ ಎರಡು ಹಾಡುಗಳನ್ನು ಭಾಗದಲ್ಲಿ ಕೊಡಲಾಗಿದೆ. ಕನ್ನಡ ಮೂಲದ ಹಾಡುಗಳನ್ನು ಸ್ಕಾಟ್ಲೆಂಡಿನ ಕವಿ **ಜಾನ್‌ಲೇಡನ್**(1803) ಎಂಬಾತ ಸಂಗ್ರಹಿಸಿ, ಕನ್ನಡದಿಂದ ಇಂಗ್ಲಿಷಿಗೆ ಅನುವಾದಿಸಿದ್ದನು. ಇದು 1815ರಲ್ಲಿ **ಶ್ರೀರಂಗಪಟ್ಟಣದ**

ಕೆಡುಗಾಲದ ಲಾವಣಿಗಳೆಂದು ಮತ್ತೆ ಪ್ರಕಟವಾಗಿರಬೇಕು. ಹೀಗೆ ಚರಿತ್ರೆಗೆ ಸಂಬಂಧಿಸಿದ ಇನ್ನೂ ಅನೇಕ ನಾಡಪದಗಳಿವೆ ಪಿರಿಯಾ ಪಟ್ಟಣದ ಕಾಳಗ, ಚಿತ್ರದುರ್ಗದ ಮೆದಕೆರೆಗೆ ನಾಯಕನ ಆಳಿಕೆಯಲ್ಲಿ ನಡೆದ ಒಮ್ದು ಘಟನೆಯನ್ನು ವರ್ಣಿಸುವ 'ಕಾಳಗದ ಪದ' ಮೊದಲಾದವುಗಳನ್ನು ಚರಿತ್ರೆಯ ಪುನರ್ ನಿರ್ಮಾಣದಲ್ಲಿ ಸಹಾಯವಾಗುವವು.

ತೆನೆ. 8. ಬ್ರಾಹ್ಮಣರ ಹಾಡುಗಳು

ಆರು ಹಾಡುಗಳಿವೆ. **ನಂಜುಂಡ ಜೋಗಿ, ಗಿರಿಜಾ ಕಲ್ಯಾಣದಿಂದ–ಗಿರಿರಾಜ ಉಮೆಯರ ಸಂವಾದ, ಗೌರಿಯ ಕಲ್ಯಾಣ, ಗೌರಮ್ಮನನ್ನು ಗಂಡನ ಮನೆಗೆ ಕಳಿಸಿದ್ದು, ಗೌರಿದೇವಿ ತವರಿಗೆ ಹೋಗಿ ಬಂದದ್ದು, ಗೌರಮ್ಮನಿಗೆ ಸೊಗಿಲಕ್ಕಿ ಇಕ್ಕಿದ್ದು. ಭೋಜನದ ರಗಳೆ,** ಹಾಗೂ **ಹಬ್ಬ**.

ಸಂಪಾದಕರ ಪ್ರಕಾರ, "ಹಾಡುಗಳು ಸ್ವಲ್ಪ ಮೇಲ್ಮಟ್ಟದವೆಂಬ ಕಾರಣದಿಂದ ಇವನ್ನು ನಾಡಪದಗಳ ಜೊತೆಗೆ ಸೇರಿಸದೆ ಬಿಟ್ಟು ಬಿಡುವುದು ಸರಿಯಾಗಿ ಕಾಣುವುದಿಲ್ಲ. ಸಾಧಾರಣ ರೀತಿಯವೂ ಇವೆ. ಕನ್ನಡದ ಗಾಯತ್ರಿಯೆನ್ನಬಹುದಾದ ತ್ರಿಪದಿ ಛಂದಸ್ಸಿನ ಹಾಡುಗಳಿಗೂ ಕೊರತೆಯಿಲ್ಲ. ತೊಟ್ಟಿಲು ತೂಗುವ ಹಾಡು ಹಾಗೂ ಹಳೆಯ ಸೋಬಾನೆ ಹಾಡುಗಳಲ್ಲಿ ಬಹುಪಾಲಿನವು ತ್ರಿಪದಿಗಳು. ಭಾಷಾಶೈಲಿಗಳಲ್ಲಿ ಅವಕ್ಕೂ ಒಕ್ಕಲಿಗರ ಹಾಡುಗಳಿಗೂ ಏನೂ ವ್ಯತ್ಯಾಸ ಕಾಣುವುದಿಲ್ಲ. ಸಂಗ್ರಹದಲ್ಲಿ ಕೊಟ್ಟಿರುವ 'ಗೌರಮ್ಮನಿಗೆ ಸೋಗಿಲಕ್ಕಿ ಇಕ್ಕಿದ ಹಾಡ'ನ್ನೂ ಬಸವನ ಅಷ್ಟಮಿಯ ಹಾಡುಗಳನ್ನೂ ನೋಡಿದರೆ ಸಂಗತುಇ ಸ್ಪಷ್ಟವಾಗುತ್ತದೆ. ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಸಾಂಗತ್ಯ, ರಗಳೆ ಮೊದಲಾದ ಅಚ್ಚಕನ್ನಡ ಛಂದಸ್ಸಿನ ಹಾಡುಗಳೇ ಎಲ್ಲವೂ. ಸಂಸ್ಕೃತ ಛಂದಸ್ಸು ಕಾವ್ಯಪ್ರಪಂಚದಲ್ಲಿ ಸರ್ವಾಧಿಕಾರ ನಡೆಸಿದಂತೆ ತಾನೇ ತಾನಾಗಿ ಮೆರೆಯಲು ಅವಕಾಶವಿಲ್ಲ. ಹಾಡುಗಳ ಜೊತೆಗೆ ಬಗೆಬಗೆಯ ಛಂದಸ್ಸುಗಳನ್ನೊಳಗೊಂಡ ಗದ್ಯಪದ್ಯ ರೂಪವಾದ ಯಕ್ಷಗಾನದ ಕಥೆಗಳೂ ಹಲವಿದೆ. ಇವುಗಳಲ್ಲೆಲ್ಲ ಸಂಸ್ಕೃತದ ಮಾತುಗಳೂ ಹೆಚ್ಚಾಗಿ ಬೆರೆತಿರುವುದು ನಿಜವಾದರೂ ಭಾಷೆ ವಿದ್ಯಾವಂತರಲ್ಲದ ಸಾಧಾರಣ ಜನರಿಗೂ ತಿಳಿಯುವಂತೆ ಸರಳವಾಗಿವೆ. ಕ್ಲಿಷ್ಟವಾಗಿಲ್ಲ."

"ಬ್ರಾಹ್ಮಣರಲ್ಲಿ ಗಂಡಸರು ಮಂತ್ರಸ್ತೋತ್ರಗಳನ್ನಲ್ಲದೆ ಮತ್ತೆ ಯಾವ ಪದಗಳನ್ನೂ ಹೇಳುವುದಿಲ್ಲ. ಸಂಗೀತಕಾರರು ಹಾಡುವ ಗೀತಶ್ಲೋಕಗಳನ್ನೂ ಕಾವ್ಯ ಓದಿದವರು ಹೇಳುವ ಗದ್ಯಪದ್ಯಗಳನ್ನೂ ಪದಗಳ ಗುಂಪಿಗೆ ಸೇರಿಸಲಾಗುವುದಿಲ್ಲ. ನಾನು ಚಿಕ್ಕವನಾಗಿದ್ದಾಗ ಹಳೆಯ ಕಾಲದ ಮುದುಕರು ಕೆಲವರು 'ಚಿದಾನಂದರ ಕೊರಡು'

ಎಂಬ ಹೆಸರಿನಿಂದ ಹೇಳುತ್ತಿದ್ದರು. ಆದರೆ ಇದು ಕೂಡ ಪದ್ಧತಿಯಾಗಿ ನಿಲ್ಲಲಿಲ್ಲ. ಎಲ್ಲ ಕಡೆಯೂ 'ಚಿದಾನಂದ ಕೊರಡ'ನ್ನು ರೀತಿ ಹೇಳುವುದು ವಾಡಿಕೆಯಿದ್ದಂತೆಯೂ ತೋರುವುದಿಲ್ಲ. ಆದ್ದರಿಂದ ಬ್ರಾಹ್ಮಣರಲ್ಲಿ ಗಂಡಸರ ಪದ ಇಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು."

"ಹೆಂಗಸರು ಬೆಳಿಗ್ಗೆ ಎದ್ದು ಮುಖ ತೊಳೆದು ಉದಯರಾಗ ಹೇಳುತ್ತಾ ಮನೆಗೆಲಸಕ್ಕೆ ತೊಡಗುತ್ತಾರೆ. ಉದಯರಾಗದ ಹಾಡುಗಳಲ್ಲಿ ಗಣಪತಿ, ಶಿವ, ಪಾರ್ವತಿ, ಬ್ರಹ್ಮ, ವಿಷ್ಣು, ಲಕ್ಷ್ಮೀ, ಸರಸ್ವತಿ, ಸೂರ್ಯನಾರಾಯಣ ಮೊದಲಾದ ದೇವತೆಗಳ ಸ್ತೋತ್ರಗಳ ಗೋವಿನ ಹಾಗೂ ತುಳಸಿಯ ಮಹಾತ್ಮೆಗಳೂ, ಶ್ರೀಕೃಷ್ಣನ ಬಾಲಲೀಲೆಗಳೂ, ದ್ರೌಪದೀ ಮಾನ ಸಂರಕ್ಷಣೆ, ಗಜೇಂದ್ರ ಮೋಕ್ಷ, ಧ್ರುವ ಚರಿತೆ, ಪ್ರಹ್ಲಾದ ಚರಿತ್ರೆ, ಅನುಸೂಯ ಚರಿತ್ರೆ, ಮೊದಲಾದ ಕಥೆಗಳೂ ಬರುತ್ತವೆ. ಉದಯರಾಗಕ್ಕೆ ಅಳವಡಿಸುವುದರ ಜೊತೆಗೆ ಕಥೆಗಳನ್ನೇ ಪ್ರತ್ಯೇಕವಾಗಿ ವಿಸ್ತಾರವಾಗಿ ವರ್ಣಿಸಿರುವ ಮೂರು ನಾಲ್ಕು ರೀತಿಯ ಹಾಡುಗಳೂ ಇವೆ. ರಾಮಾಯಣ, ಭಾರತ–ಭಾಗವತಗಳ ಹಲವು ಸನ್ನಿವೇಶಗಳನ್ನು ಕುರಿತ ಹಾಡುಗಳಿವೆ. ರಾಮಾಯಣವನ್ನೇ ಪೂರ್ತಿಯಾಗಿ ಚಿತ್ರಿಸುವಂತಿವೆ. ಸಾವಿತ್ರಿ ಚರಿತ್ರೆ, ನಳ ಚರಿತ್ರೆ, ಹರಿಶ್ಚಂದ್ರೋಪಾಖ್ಯಾನ, ಸುದಾಮನ ಕಥೆ, ಮೊದಲಾದ ಪುರಾಣ ಕಥೆಗಳನ್ನೂ ಹೇಳುವ ಹಾಡುಗಳಿವೆ. ಇವುಗಳ ಜೊತೆಗೆ ಮಂಗಳ ಗೌರಿಯ ಕಥೆ, ದಿಮಾಸೆಯ ಕಥೆ, ಮೊದಲಾದ ಸಂಸ್ಕಾರಗಳಿಗೆ ಸಂಬಂಧಿಸಿದ ಹಾಡುಗಳು, ಆರತಿ ಅಕ್ಷತೆಯ ಹಾಡುಗಳು, ಸ್ತೋತ್ರಗಳು, ಪ್ರಾರ್ಥನೆಗಳು, ಸೀತಾಕಲ್ಯಾಣ, ಗಿರಿಜಾ ಕಲ್ಯಾಣ, ಮೊದಲಾದ ಕಲ್ಯಾಣಗಳು ಬೇರೆ. ಹಾಡುಗಳನ್ನು ಮನೆಗೆಲಸ ಮಾಡುವಗಲೆಲ್ಲ ಹಾಡಿಕೊಳ್ಳುತ್ತಲೇ ಇರುತ್ತಾರೆ. ಮಡಿಯಲ್ಲಿ ಕೆಲವು, ದುಡಿಯುವ ಮೊದಲೇ ಕೆಲವು, ಊಟ ಮಾಡಿ ವಿರಾಮವಾಗಿ ಕೂತಾಗ ಕೆಲವು, ಅಂತೂ ಸದಾ ಒಂದಲ್ಲ ಒಂದು ಹಾಡು ಅವರ ಬಾಯಲ್ಲಿ ನುಡಿಯುತ್ತಲೇ ಇರುತ್ತದೆ. ಇವನ್ನೆಲ್ಲಾ ಸಂಗ್ರಹಿಸುವುದಕ್ಕೆ ಇಂಥ ಹತ್ತಿಪ್ಪತ್ತು ಪುಸ್ತಕಗಳಾದರೂ ಸಾಲದು. ಈಗ ಅಂಥ ಸಾಹಸಕ್ಕೆ ಕೈ ಹಾಕದೆ, ಹಿಂದೆ ಕೊಟ್ಟಿರುವ ಒಕ್ಕಲಿಗರ ಹಾಡುಗಳಿಗೆ ಸಾಮ್ಯವಿರುವ, ಅವುಗಳೊಡನೆ ಹೋಲಿಸಬಹುದಾದ ಹಾಡುಗಳಲ್ಲಿ ಒಂದೆರಡನ್ನು ಮಾತ್ರ ಕೊಟ್ಟಿದೆ." (1947:179–182)

"ಗಿರಿಜಾಕಲ್ಯಾಣಕ್ಕೆ ಸಂಬಂಧಿಸಿದ ಎರಡು ಸಂಗ್ರಹಗಳನ್ನು ಕೊಟ್ಟಿದೆ. ಮೊದಲನೆಯದಾದ 'ನಂಜುಂಡ ಜೋಗಿ' ಸ್ವಸಂಪೂರ್ಣವಾದ ಒಂದು ಖಂಡ ಕಾವ್ಯದಂತಿದೆ. ಶಿವ ಜೋಗಿಯ ವೇಷದಿಂದ ಹೋಗಿ ಪಾರ್ವತಿಗೆ ಬೂದಿಯೆರಚಿ ಬರುವುದು, ಅವಳು ಆ ಬೂದಿಯ ಮಹಿಮೆಯಿಂದ ಶಿವನಲ್ಲೆ ಮನಸ್ಸು ನೆಟ್ಟು

ಮನೆಬಿಟ್ಟು ಹೊರಡುವುದು, ದೇಶದೇಶ ತಿರುಗಿ ಶಿವನನ್ನು ಹುಡುಕಿಕೊಂಡು ಬಂದು ಅವನನ್ನು ವರಿಸಿ ಅವನೊಡನೆ ನಂಜನಗೂಡಿನಲ್ಲಿ ನಿಲ್ಲುವುದು–ಇಷ್ಟು ಇದರ ಕಥೆ. ಪುಟ್ಟ ಪುಟ್ಟ ಪದ್ಯಗಳು, ಅಪೂರ್ವ ಛಂದಸ್ಸು; ತಿಳಿಯಾದ ಮಾತು–ಹೀಗೆ 28 ಪದ್ಯಗಳಲ್ಲಿ ಪ್ರಣಯ ಕಥೆಯನ್ನು ಕವಿ ಮನೋಹರವಾಗಿ ಚಿತ್ರಿಸಿದ್ದಾನೆ. ಅವನ ದೇಶಾಭಿಮಾನದಿಂದ ಶಿವನ ಕೈಲಾಸ ನಂಜನಗೂಡಿಗೆ ಬಂದಿದೆ. ಎರಡನೆಯ ಸಂಗ್ರಹ ಬಗೆಬಗೆಯ ರಾಗಗಳಲ್ಲಿ ಹೇಳುವ ಬಹುದೊಡ್ಡ ಗಿರಿಜಾ ಕಲ್ಯಾಣದಿಂದ ಆಯ್ದದ್ದು. ಒಕ್ಕಲಿಗರು ಹೇಳುವ 'ಗೌರಮ್ಮನ ಮದುವೆ'ಯೊಡನೆ ಇದನ್ನು ಹೋಲಿಸಿ ನೋಡಬೇಕು. ಎರಡು ಕಡೆಯೂ ಕಥೆ ಹಾಗೂ ಹೇಳುವ ರೀತಿ ಸರಿ ಸುಮಾರು ಒಂದೇ ಆದರೂ ಬೇರೆ ಬೇರೆ ಮಟ್ಟದ ಸಂಸ್ಕೃತಿ ಕಂಡು ಬರುತ್ತದೆ. ಜಾತಕಮ್ಮ, ನಾಮಕರಣ, ಚೌಲ, ಉಪನಯನ, ಮದುವೆ, ಗರ್ಭಾಧಾನ ಮೊದಲಾದ ಕರ್ಮ ಕಲಾಪಗಳನ್ನೆಲ್ಲ ಶಾಸ್ತ್ರವಿಧಾನಕ್ಕನುಸಾರವಾಗಿ ವಿವರಿಸುವ ಹಾಡುಗಳೂ ಹಲವಿವೆ. ಹಳೆಯ ಸಂಪ್ರದಾಯವನ್ನನುಸರಿಸುವವರು ಗಲೂ ಇವನ್ನು ಹೇಳುವುದುಂಟು. ಸೂತ್ರ ವಿಧಿಗಳ ಪ್ರಕಾರ ನಡೆಯಲೇ ಬೇಕಾದ ಕರ್ಮಗಳ ಜೊತೆಗೆ ಬರಿಯ ಸಂಪ್ರದಾಯವನ್ನನುಸರಿಸಿ ನಡೆಸುವ ಕಾರ್ಯಗಳೆಷ್ಟೋ ಇವೆ. ಮದುವೆಗೆ ಅಣಿ ಮಾಡುವಲ್ಲಿ ಬೀಗರನ್ನು ಉಪಚರಿಸುವಲ್ಲಿ –ಇಂಥ ಹಲವಾರು ಸಂದರ್ಭಗಳಲ್ಲಿ ಕೇವಲ ಪರಂಪರೆಯನ್ನನುಸರಿಸಿ ನಡೆಸುವ ಹೆಂಗಸರ ಶಾಸ್ತ್ರಗಳಿಗೆಲ್ಲ ತಕ್ಕ ಹಾಡುಗಳಿವೆ. ಇವೆಲ್ಲ ಸಾಮಾನ್ಯವಾಗಿ ಹಳೆಯ ರೀತಿಯವು. ಇವುಗಳಲ್ಲಿ ಬಹು ಪಾಲಿನವು ತ್ರಿಪದಿಗಳು. ಸೋಬಾನೆ ಹಾಡುಗಳೆಂದು ಇವನ್ನು ಹಾಡುವುದಕ್ಕೆ ಎಲ್ಲರೂ ಹಿಂಜರಿಯುತ್ತಾರೆ. ಎಷ್ಟೋ, ಜನ ಹಾಡುಗಳನ್ನು ಮರೆತೇ ಬಿಟ್ಟಿದ್ದಾರೆ. ಆದ್ದರಿಂದ ಇವನ್ನು ಕೂಡಿಸುವುದು ಬಹು ಕಷ್ಟವಾಗಿದೆ." (1947:182–183) ಮದುವೆಯ ಸಂದರ್ಭದಲ್ಲಿ ಹಾಡುವ ಅರಸಿನ ಕುಟ್ಟುವ ಹಾಡು, ಗೋಧಿಕಲ್ಲು ಶಾಸ್ತ್ರದ ಹಾಡು, ಸಂಡಿಗೆ ಇಡುವ ಹಾಡುಗಳು ಗಮನಾರ್ಹವೆಂಬ ಅಭಿಪ್ರಾಯ.

"ಈಗ ಮದುವೆಗಳಲ್ಲಿ ಬೀಗರ ಹಾಡು ಬಹು ಅಪರೂಪವಾಗಿದೆ. ಉರುಟಣೆಯ ಮಹತ್ವವೂ ತುಂಬ ಕುಗ್ಗಿ ಹೋಗಿದೆ. ಹಿಂದಿನ ಮದುವೆಗಳಲ್ಲಿ ಇವುಗಳ ಸಂಭ್ರಮ ಅಷ್ಟಿಷ್ಟಲ್ಲ. ಮದುವೆಯ ಹೆಣ್ಣು ಗಂಡನ್ನೂ ಗಂಡಿನ ಕಡೆಯವರನ್ನೂ ಹಾಸ್ಯ ಮಾಡಿ, ಆಕ್ಷೇಪಿಸಿ ಹಲವು ಹಾಡುಗಳನ್ನು ಹೇಳುತ್ತಿದ್ದರು. ಅವಕ್ಕೆಲ್ಲ ಉತ್ತರ ಕೊಡುವ ಭಾರ ಗಂಡಿನ ಅಕ್ಕ ತಂಗಿಯರದು. ಮದುವೆಗೆ ಕೆಲವು ತಿಂಗಳು ಮೊದಲಿನಿಂದಲೂ ಎರಡು ಕಡೆಯವರೂ ಹಾಡುಗಳನ್ನು ಹವಣಿಸಿಕೊಳ್ಳುವುದರಲ್ಲಿ ತೊಡಗುತ್ತಿದ್ದರು. ಈ ಸಂದರ್ಭದಲ್ಲಿ ಎಷ್ಟೋ ಹೊಸ ಹೊಸ ಹಾಡುಗಳು ಹುಟ್ಟುತ್ತಿದ್ದವು. ಹಾಸ್ಯ ವಿನೋದಗಳಲ್ಲಿ ಉಳಿದವರೂ

ಭಾಗ ತೆಗೆದುಕೊಳ್ಳುತ್ತಿದ್ದರು. ಬೀಗರು ಒಬ್ಬರನೊಬ್ಬರು ಹಾಸ್ಯ ವಿನೋದಗಳಲ್ಲಿ ಉಳಿದವರೂ ಭಾಗ ತೆಗೆದುಕೊಳ್ಳುತ್ತಿದ್ದರು. ಬೀಗರು ಒಬ್ಬರನ್ನೊಬ್ಬರು ಹಾಡುಗಳ ಮೂಲಕ ಜರೆದು, ಹಾಸ್ಯಮಾಡಿ, ನಕ್ಕು ನಲಿದು, ಬಳಕೆಯನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದರು. ಪ್ರೀತಿ ವಿಶ್ವಾಸಗಳನ್ನು ಬೆಳೆಸಿ ಕೊಳ್ಳುತ್ತಿದ್ದರು. ಆದರೆ ಕಾಲಕ್ರಮದಲ್ಲಿ ತಿಳಿಹಾಸ್ಯ ಕದಡಾಗಿ, ಕೆಲವು ವೇಳೆ ಗಾಂಭೀರ್ಯದ ಮೇರೆ ಮೀರಿ ಬೀಗರ ಹಾಡುಗಳು ಪ್ರೀತಿ ವಿಶ್ವಾಸಗಳಿಗೆ ಕುಂದ ತರುವಂತಾದವು. ಎಷ್ಟೋ ಕಡೆ ಇದರಿಂದ ಮನಸ್ತಾಪ ಹುಟ್ಟಿ ಅಪಾರ ಸಂಕಟಕ್ಕೆ ಕಾರಣವಾಗಿದೆ. ಕಾರಣದಿಂದ ಈಗ ಸಾಮಾನ್ಯವಾಗಿ ಬೀಗರ ಹಾಡುಗಳನ್ನು ಹೇಳುವುದಿಲ್ಲ. ಹೇಳಿದರೂ ಬಹಳ ಎಚ್ಚರಿಕೆಯಿಂದಿರುತ್ತಾರೆ. ಹಾಡುಗಳನ್ನೆಲ್ಲ ಕೂಡಹಾಕಿ ಪ್ರತ್ಯೇಕ ಪುಸ್ತಕ ಮಾಡಬಹುದು. ಇದರಿಂದ ಒಂದು ಕಾಲದ ಸಮಾಜದ ಸ್ಥಿತಿಯನ್ನು ತಿಳಿಯಲು ತಕ್ಕಮಟ್ಟಿಗೆ ಸಹಾಯವಾಗುತ್ತದೆ. ಸಂಗ್ರಹದಲ್ಲಿ ಕೊಟ್ಟಿರುವ 'ಭೋಜನದ ರಗಳೆ' ಬೀಗರ ಹಾಡಿನ ಗುಂಪಿಗೆ ಸೇರಿದ್ದು. ಊಟದಲ್ಲಿ ಇದನ್ನು ಈಗಲೂ ಹೇಳುತ್ತಾರೆ. ಇದರಲ್ಲಿ ಯಾರ ಮನಸ್ಸನ್ನೂ ನೋಯಿಸದ ತಿಳಿಹಾಸ್ಯವಿದೆ."(1947:189) ಎಂದು ಹೇಳುತ್ತಾರೆ.

ತೆನೆ 9: ಬಸವನ ಅಷ್ಟಮಿಯ ಹಾಡುಗಳು

ಕೊನೆಯ ಭಾಗದಲ್ಲಿ 10 ಹಾಡುಗಳಿವೆ. ನೀರು ತುಂಬಿಟ್ಟುಕೊಂಡ ಮೇಲೆ ಹೇಳುವುದು, ಬಾಗಿಲು ತಡೆಯುವ ಪದ, ನೀರಿಡುವಾಗ ಹೇಳುವುದು, ಕೋಲನಾಡೋಣ ಬನ್ನಿ, ಹಾಲುಮಾರುತ ಬಂದಳಾಕೆ, ಮಂದರ ಧರ ತಡೆದನ್ ಯಾತಕೊ, ಶಿವನು ಭಿಕ್ಷಕೆ ಬಂದ ನೀಡು ಬಾರೆ, ಕೋಲು ಸುವರ್ಣನೆ, ದುಡ್ಡು ಕೇಳುವ ಹಾಡು, ಹರಕೆ.

"ಒಕ್ಕಲಿಗರ ಹುಡುಗಿಯರ '**ತಿಂಗಳು ಮಾವನ ಪೂಜೆ**' ಮಾಡುವ ಹಾಗೆಯೇ ಬ್ರಾಹ್ಮಣರ ಹುಡುಗಿಯರು ಬಸವನ ಅಷ್ಟಮಿಯ ಹಬ್ಬ ಮಾಡುತ್ತಾರೆ. ಹಬ್ಬ ಕಾರ್ತಿಕ ಮಾಸದಲ್ಲಿ ಬರುತ್ತದೆ. ಆಗ ದೀವಳಿಗೆಗೆ ಅಳಿಯಂದಿರೂ ಬಂದಿರುತ್ತಾರೆ. ಅವರ ನಲ್ಲೆಯರೂ ತಮ್ಮ ಅಕ್ಕ ತಂಗಿಯರೊಡನೆ ಕೋಲಾಟದಲ್ಲಿ ಸೇರಿ ಹಬ್ಬದ ನಲಿವನ್ನೂ ಹಲವು ಮಡಿ ಹೆಚ್ಚಿಸುತ್ತಾರೆ. ದೀವಳಿಗೆಗೆ ಬಂದ ಅಳಿಯಂದಿರು ಸಾಮಾನ್ಯವಾಗಿ ಬಸವನ ಅಷ್ಟಮಿ ಮುಗಿಯುವವರೆಗೂ ಅತ್ತೆಯ ಮನೆಯಲ್ಲಿರುವುದು ವಾಡಿಕೆಯಾಗಿತ್ತು" (1947:209) ಎಂದು ಭಾಗದ ಪರಿಚಯ.

"ಬಸವನ ಪೂಜೆಯೂ ದೀವಳಿಗೆಯ ದಿನವೇ ಮೊದಲಾಗುತ್ತದೆ. ಹೆಣ್ಣುಮಕ್ಕಳು ಎಣ್ಣೆ ನೀರೆರೆದುಕೊಂಡು ಹೊಸ ಸೀರೆ ಕುಪ್ಪಸ ತೊಟ್ಟು, ಕಲಶಕನ್ನಡಿ ಹಿಡಿದುಕೊಂಡು ಕುಂಬಾರನ ಮನೆಗೆ ಹೋಗುತ್ತಾರೆ. ಕುಂಬಾರ ಅವರಿಗಾಗಿ ಮಣ್ಣಿನಲ್ಲಿ ಬಸವನನ್ನು ಮಾಡಿಟ್ಟಿರುತ್ತಾನೆ. ಅಲ್ಲೇ ಹುಲ್ಲು ಗರಿಕೆ, ಹೂ ಪತ್ರೆಗಳಿಂದ ಬಸವಣ್ಣನಿಗೆ ಪೂಜೆ

ಮಾಡಿಕೊಂಡು ಮನೆಗೆ ಬರುತ್ತಾರೆ. ಬಂದು ಯಾರಾದರೊಬ್ಬರ ಮನೆಯಲ್ಲಿ ಬಸವನನ್ನು ಕೂರಿಸುತ್ತಾರೆ. ದಿನ ದಿನವು ಪೂಜೆ, ಆರತಿ, ಮೊದಲಾದ ಉಪಚಾರಗಳನ್ನು ಮಾಡುತ್ತಾರೆ. ಸಂಜೆ, ಬೆಳಗ್ಗೆ ಎರಡು ಹೊತ್ತೂ ಕೆರೆ, ಹೊಳೆ ಅಥವಾ ಕೊಳಕ್ಕೆ ಹೋಗಿ 'ಬಸವನ ಸಂಧ್ಯಾವಂದನೆ'ಗೆ ನೀರು ತರುತ್ತಾರೆ. ಸಂಜೆ ಅಥವಾ ಬೆಳಗಿನ ಹೊತ್ತು ಅನುಕೂಲವಾದಾಗ ಮನೆಮನೆಗೂ ಹೋಗಿ ಕೋಲಾಟ ಆಡುತ್ತಾರೆ. ಅಡಿ, ಹಾಡಿ, ದೊರೆತಷ್ಟು ಸಂಭಾವನೆ ತರುತ್ತಾರೆ. ಇದನ್ನು ಹಬ್ಬದ ವೆಚ್ಚಕ್ಕೆ ಉಪಯೋಗಿಸುತ್ತಾರೆ. ಅಷ್ಟಮಿಯವರೆಗೂ ಕೋಲಾಟದ ಸಡಗರ. ಕಡೆಯ ನಾಲ್ಕು ದಿನ ಬಸವಗೆ ಮದುವೆ. ಮದುವಣಿಗ ಶಾಸ್ತ್ರ ಮೊದಲುಗೊಂಡು ಮದುವೆಯ ಕಾರ್ಯಗಳೆಲ್ಲ ಕ್ರಮವಾಗಿ ನಡೆಯಲೇ ಬೇಕು. ಮದುವೆ ಮೂಡಿಸುವುದಕ್ಕೆ ಪುರೋಹಿತರೂ ಬರುತ್ತಾರೆ. ಮದುವೆಯಲ್ಲ ಮುಗಿದ ಮೇಲೆ ಅಷ್ಟಮಿಯ ದಿನ ಹಬ್ಬದೂಟ ಉಂಡು ಬಸವನನ್ನು ಹೊಲಕ್ಕೆ ಬಿಟ್ಟು ಬರುತ್ತಾರೆ. ಈಗ 25–30 ವರ್ಷಗಳ ಹಿಂದೆ ಎಲ್ಲ ಊರುಗಳಲ್ಲಿಯೂ ಬಸವನ ಅಷ್ಟಮಿಯಲ್ಲಿ ಹೆಣ್ಣು ಮಕ್ಕಳು ಕೋಲು ಹುಯ್ಯುವುದು ರೂಢಿಯಾಗಿತ್ತು. ಈಗ ಅದು ಪೂರ್ತಿಯಾಗಿ ನಿಂತುಹೋದಂತೆ ಕಾಣುತ್ತದೆ. ಹಬ್ಬದ ಊಟವೇನೋ ಆಗುತ್ತಿರಬಹುದು. ಹಾಡು, ಕೋಲಾಟ, ಮಾತ್ರ ಮಾಯವಾಗಿದೆ. ಇಲ್ಲಿರುವ ಹಾಡುಗಳಲ್ಲಿ ತ್ರಿಪದಿಗಳು ಬೇಕಾದಷ್ಟಿವೆ. ಜೊತೆಗೆ ಬೇರೆ ಮಟ್ಟಿನ ಹಾಡುಗಳೂ ಉಂಟು. ರಾಮಾಯಣ, ಭಾರತ, ಭಾಗವತಗಳಿಗೆ, ಸಂಬಂಧಿಸಿದ ಪದಗಳು ಹಲವಿವೆ. ಬರಿಯ ವಿನೋದದ ಪದಗಳೂ ಕೆಲವಿವೆ. ಹಾಡುಗಳಲ್ಲಿಯೂ ಹಬ್ಬ ಮಾಡುವ ರೀತಿಯಲ್ಲಿಯೂ ಬ್ರಾಹ್ಮಣೇತರರ ಹಬ್ಬ ಹಾಗೂ ಪದಗಳ ಹೋಲಿಕೆ ಸ್ವಲ್ಪ ಕಾಣುತ್ತದೆ." (1947: 210–211)

ಒಟ್ಟಾಗಿ ಹೇಳುವುದಾದರೆ, ಸಂಕಲನದ 86 ನಾಡಪದಗಳೂ ಜನಪದ ಬದುಕಿನ ಚರಿತ್ರೆಯನ್ನು ಒಳಗೊಂಡಿವೆ. ಜನರ ಸಂಸ್ಕೃತಿ, ಹಬ್ಬ ಹರಿದಿನಗಳು ಹಾಡುಗಳಲ್ಲಿವೆ. ಹಾಡುಗಳು ವರ್ಷಾವರ್ತನದ ಹಬ್ಬಗಳ ಸಂದರ್ಭದಲ್ಲಿ ಹೇಳುವವುಗಳು. ಪ್ರತಿಯೊಂದು ಹಾಡುಗಳಿಗೂ ಒಂದು ಘಟನೆ, ಕಥೆ, ಐತಿಹ್ಯಗಳಿದ್ದೇ ಇವೆ. ಮೂಲಕ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಹಾಡುಗಳು ಪ್ರಯೋಜನಕಾರಿ. ನಾಡ–ಪದಗಳನ್ನು ಹೆಂಗಸರೂ ಗಂಡಸರೂ ಹಾಡಿದವುಗಳೆಂದು ವಿಭಾಗ ಮಾಡಿಕೊಳ್ಳಬಹುದು. ಮನೆಯ ಆವರಣದ ಒಳಗಡೆ ಹಾಡುವವುಗಳನ್ನು ಹೆಂಗಸರು ಹಾಡಿದವುಗಳೆಂದೂ (ಉದಾ: ಮದುವೆಯ ಸಂದರ್ಭದ ಹಾಡು) ಮನೆಯಿಂದ ಹೊರಗಡೆ ಆಗುವ ಆಚರಣೆಗಳಲ್ಲಿ ಗಂಡಸರು ಹೆಚ್ಚು ಪಾಲ್ಗೊಳ್ಳುತ್ತಾರೆಂದು (ಉದಾ: ಸುಗ್ಗಿಯ ಸಂದರ್ಭದಲ್ಲಿ ಕೋಲಾಟದ ಹಾಡು) ಹಾಡುತ್ತಾರೆಂಬುದು ಗಮನಾರ್ಹ. ಹೆಚ್ಚಿನ ಹಾಡುಗಳು ತ್ರಿಪದಿ ಛಂದಸ್ಸಿನಲ್ಲೇ

ರಚನೆಯಾಗಿವೆ. ಅಲ್ಲದೆಯೇ ರಗಳೆ, ಸಾಂಗತ್ಯ ಛಂದಸ್ಸುಗಳಲ್ಲೂ ಹಾಡುವ ನಾಡ–ಪದಗಳಿವೆ. ಚರಿತ್ರೆಯೊಳಗೆ ಸಂದು ಹೋದ ಸರ್ಜಪ್ಪನಾಯಕ, ಟಿಪ್ಪು ಸುಲ್ತಾನರ ಕುರಿತಂತೆ ಲಾವಣಿ ಪದಗಳಿವೆ. ಇತಿಹಾಸವನ್ನು ಮರುವ್ಯಾಖ್ಯೆ ಮಾಡುವುದು ಅರ್ಥ ಪೂರ್ಣವಾಗಬಹುದು. ವರ್ಷಾವರ್ತನೆಯಲ್ಲಾಗುವ ವಿಧಿಕ್ರಿಯೆಗಳು, ಆಚರಣೆಗಳು, ಹಬ್ಬಗಳು, ಕೌಟುಂಬಿಕ ಸಮಾರಂಭಗಳು, ಸಂಪ್ರದಾಯಗಳು, ಇತ್ಯಾದಿ ಸಂದರ್ಭದಲ್ಲಿ ಹಾಡುವ, ಕುಣಿಯುವ ವಿವರಗಳುಳ್ಳ ಹಾಡುಗಳ ಸಂಗ್ರಹದ ಮೂಲಕ ಚರಿತ್ರೆಗೆ ಮುಖಾಮುಖಿ ಮಾಡಲಾಗಿದೆ.

1948ರಲ್ಲಿ **ತೀ.ನಂ. ಶ್ರೀಕಂಠಯ್ಯ**ನವರು ಸಂಪಾದಿಸಿದ **'ಹೆಣ್ಣು ಮಕ್ಕಳ ಪದಗಳು'** ಸಂಕಲನವು ವಯಸ್ಕರ ಶಿಕ್ಷಣ ಪುಸ್ತಕಮಾಲೆಯಲ್ಲಿ ಹೊಸದಾಗಿ ಓದುಕಲಿತ ವಯಸ್ಕರಿಗಾಗಿ ರಚನೆಯಾಗಿದೆ. 88 ತ್ರಿಪದಿಗಳಿರುವ ಸಂಗ್ರಹದ ಹಾಡುಗಳನ್ನು ಹಿಂದೆ ಪ್ರಕಟನೆಗೊಂಡ ಸಂಗ್ರಹಗಳಿಂದ ಆಯ್ದುಕೊಳ್ಳಲಾಗಿದೆ. ಅಳುವ ಮಗುವನ್ನು ತೊಟ್ಟಿಲಲ್ಲಿ ತೂಗುವಾಗ ಇಂಪಾದ ಹಾಡುಹಾಡಿ ಅಳು ನಿಲ್ಲಿಸುವುದಕ್ಕೆ ರಾಗಿ, ಅಕ್ಕಿ, ಜೋಳ, ಮೊದಲಾದವನ್ನು ಬೀಸುವಾಗ ಆಯಾಸವನ್ನು ಕಳೆಯುವುದಕ್ಕೆ ಕೋಲಾಟ–ಸುಗ್ಗಿಯ ಕುಣಿತಗಳ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಹಾಡುತ್ತಾರೆ. ಹಾಡುಗಳನ್ನು ಸಂಪಾದಿಸಿ, ಅವುಗಳನ್ನು ವಿಷಯಾನುಸಾರ ವರ್ಗೀಕರಿಸಿಕೊಂಡು ವಯಸ್ಕರಿಗೆ ಓದುವ ಹಾಗೆ ದಪ್ಪ ಅಕ್ಷರಗಳಲ್ಲಿ ಪ್ರಕಟಿಸಲಾಗಿದೆ.

ಹಾಡುಗಳನ್ನು ಸ್ತೋತ್ರ, ತೊಟ್ಟಿಲ ಮಗು, ಅಳುವ ಮಗು, ಮಗುವಿನ ಸೊಗಸು, ಮಮತೆ, ಬಂಜೆ, ತೌರು ಬಿಟ್ಟು ಪಯಣ, ಹೆತ್ತ ಕರುಳು, ತೌರಿನ ಹಂಬಲು, ತಮ್ಮ, ತಮ್ಮನ ಹೋರಿ, ತಾಯಿ ಇಲ್ಲದ ಊರು, ಬಿನ್ನಾಣಗಿತ್ತಿ, ಅತ್ತೆ, ಸೊಸೆ, ಗಂಡ–ಹೆಂಡತಿ, ಹೊಂದಿಕೆಯಿಲ್ಲದ ಮದುವೆ, ಸಂಗಾತಿ, ಹೆಣ್ಣು–ಗಂಡು, ಬಗೆಬಗೆಯ ವಿಷಯ, ಬೀಸುವ ಕಲ್ಲು, ಹಾರೈಕೆ–ಹೀಗೆ 21 ಬಗೆಯಾಗಿ ವರ್ಗೀಕರಿಸಲಾಗಿದೆ. ಹೆಚ್ಚಿನ ಹಾಡುಗಳು ಗರತಿಯ ಬದುಕನ್ನು ಪ್ರತಿಬಿಂಬಿಸುವಂತಹವು.

ತೀ.ನಂ. ಶ್ರೀಕಂಠಯ್ಯನವರು ಪುಸ್ತಕವನ್ನು ರಚಿಸುವಾಗ **'ಗರತಿಯ ಹಾಡು'** (1931) ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸಂಗ್ರಹಿಸಿರುವ **'ಹಳ್ಳಿಯ ಹಾಡುಗಳು'** (1938) ಎಲ್.ಗುಂಡಪ್ಪನವರು ಸಂಪಾದಿಸುರುವ **'ನಾಡಪದಗಳು'** (1947), ಮಾಸ್ತಿ ವೆಂಕಟೇಶ ಐಯಂಗಾರರು ಬರೆದಿರುವ **'ಕರ್ನಾಟಕದ ಜನಪದ ಸಾಹಿತ್ಯ'** (1935) ಕೃತಿಗಳಲ್ಲಿ ಸಂಗ್ರಹಗೊಂಡಿರುವ ಹಾಡುಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ತೀ.ನಂ.ಶ್ರೀಯವರು ಓದುಗರನ್ನು ಕುರಿತು, "ಇಂಥ ಪುಸ್ತಕಗಳನ್ನು ಓದಿದ ಮಾತ್ರಕ್ಕೆ

ನಿಮ್ಮ ಕೆಲಸ ಮುಗಿಯಲಿಲ್ಲ. ನಿಮ್ಮ ಹಳ್ಳಿಯಲ್ಲೇ ಬಗೆಯ ಅನೇಕ ಪದಗಳನ್ನು ಹಾಡತಕ್ಕವರು ಇರಬಹುದು. ನಿಮ್ಮ ಮನೆಯಲ್ಲೇ ಹೆಣ್ಣು ಮಕ್ಕಳು ಈಗಲೂ ಹೇಳುತ್ತಿರಬಹುದು. ಅವನ್ನೆಲ್ಲಾ ಕಿವಿಗೊಟ್ಟು ಕೇಳಿ ಆಮೇಲೆ ಯಾರಿಗೆ ಗೊತ್ತು. ಒಂದು ದಿನ ಇಂಥ ಪದಗಳನ್ನು ನೀವೇ ಕಟ್ಟಿ ಹಾಡುತ್ತೀರೋ ಏನೊ." (1948:24)

'ಹೆಣ್ಣುಮಕ್ಕಳ ಹಾಡುಗಳು' (1948) ವಯಸ್ಕರಿಗಾಗಿ ರಚನೆಯಾದರೂ ಪುಸ್ತಕವು ಹಳ್ಳಿಯ ಅನಕ್ಷರಸ್ಥ ವಯಸ್ಕರಿಗೆ ಲಿಖಿತ ರಚನೆಗಳನ್ನು ಓದುವುದಕ್ಕೆ ಲಭ್ಯವಾಯಿತು. ಹೀಗೆ 'ಜನಪದ ಹಾಡುಗಳು ನಾಶವಾಗುತ್ತಿವೆ' ಎಂದು ವಿದ್ವಾಂಸರನೇಕರು ಎಚ್ಚರಿಕೆಯ ಮಾತುಗಳನ್ನು ಜನಸಮುದಾಯಕ್ಕೆ ಹೇಳುವುದರ ಜೊತೆಗೆ, ತಾವೇ ಹಾಡುವ ಹಾಡುಗಳನ್ನು, ಇನ್ನೊಬ್ಬರು ಹಾಡುವ ಹಾಡುಗಳನ್ನು ಓದಿ ಹಾಡುವ, ಅವಕಾಶ ವಯಸ್ಕರ ಶಿಕ್ಷಣ ಸಮಿತಿಯ ಯೋಜನೆಯಿಂದ ಆಯಿತು. ಆ ಮೂಲಕ ಒಂದು ಹಂತದ ಜಾನಪದ ಜಾಗ್ರೃತಿಗೆ ಪ್ರೇರಣೆಯಾಯಿತು.

1949ರಲ್ಲಿ **ಕೆ.ಆರ್. ಲಿಂಗಪ್ಪ** ಅವರ **'ಮಾನೌಮಿ ಪದಗಳು' ಗೀತ ಸಂಕಲನ**ದಲ್ಲಿ ಗಣೇಶನ ಪದ, ಹಲಗೆ ತೊಳೆಯುವ ಪದ, ಗಂಗಾದೇವಿಯ ಪದ, ಬನ್ನಿ ಮಾಂಕಾಳಿ ಪದ, ಗೌಡರ ಪದ, ಹರಕೆಯ ಪದ, ಬಸವಣ್ಣನವರ ಪದ, ಬೀರಲಿಂಗನ ಪದ, ಬ್ರಾಹ್ಮಣರ ಪದ, ಗೊಲ್ಲರ ಪದ, ಕುಂಬಾರರ ಪದ, ಹಾಗೂ ಒಗಟೆಗಳಿವೆ. ಮಾನೌಮಿ ಪದಗಳು ಮಲೆನಾಡಿನ ಪರಿಸರಕ್ಕೆ ಸೇರಿಸುವುದು ಎಂಬುದು ಸ್ಪಷ್ಟ.

ಸಂಕಲನದ ಮುನ್ನುಡಿಯಲ್ಲಿ ನಾ. ಭದ್ರಯ್ಯ ಹೇಳುವಂತೆ, "ನಮ್ಮ ಜನ, ಹಳ್ಳಿಗಾಡಿನ ಜನ, ಕಾಲದಲ್ಲಿ ಮೇಳಗಳನ್ನು ಏರ್ಪಡಿಸಿ, ಕಲೆಯನ್ನು ಅನುಭವಿಸಿ ಹರಡಿ ಆನಂದಿಸುತ್ತಿದ್ದರು. ಮೇಳಗಳಲ್ಲಿ ಪ್ರಾಮುಖ್ಯವಾದುವುಗಳು ಮಾನವ ಮೇಳಗಳು. ಇವುಗಳಲ್ಲಿ ಪಾತ್ರಧಾರರು ಹಳ್ಳಿಗಳ ಕೂಲಿಮಠಗಳ ಬಾಲಕರು ಹಾಗೂ ಆ ಮಠಗಳ ಅಧ್ಯಾಪಕರು. ಸಜ್ಜಾದ ತುಂಬು ಹೃದಯದ ಮಕ್ಕಳು ಮಾನವಮಿ ಪದಗಳನ್ನು ಹಾಡುತ್ತಾ, ಜನರನ್ನು ಹರಸುತ್ತಾ ದೇಶವನ್ನು ಹರಸುತ್ತಾ, ಮನೆಯಿಂದ ಮನೆ ತುಂಬಿ, ಊರಿಂದ ಊರು ತುಂಬುತ್ತಿದ್ದುದರ ಆನಂದ ಅನುಭವಿಸಿದವರಿಗೆ ಮಾತ್ರ ಅರ್ಥವಾಗಬಲ್ಲದು. ಮಕ್ಕಳು ಜಡೆಕೋಲು ಹಾಕಿ ಸಣ್ಣ ಸಣ್ಣ ನಾಟಕಗಳನ್ನಾಡಿ, ವ್ಯಾಯಾಮ ಪ್ರದರ್ಶಿಸಿ ತಮ್ಮ ಸಂತೋಷವನ್ನು ಎಲ್ಲಾ ಜನರಿಗೆ ಬೀರುತ್ತಿದ್ದರು. ಹಳ್ಳಿಗಳು ಮಾನೌಮಿ ಕಾಲದಲ್ಲಿ ಸಂತೋಷದಿಂದ, ಸಡಗರದಿಂದ ಮೆರೆಯುತ್ತಿದ್ದವು. ದೃಷ್ಟಿಯಲ್ಲಿ ನಮ್ಮ ಆಗಿನ ಕೂಲಿಮಠಗಳು ನಮ್ಮ ಜನರಿಗೆ ಬೇಕಾದಂತಹ ನಮ್ಮ

ಸಂಸ್ಕೃತಿಯನ್ನು ಬೆಳೆಸುವಂತಹ ವಿದ್ಯೆಯನ್ನು ಹರಡುತ್ತಿದ್ದುವು. ಅಂತಹ ಶಾಲೆಗಳಲ್ಲಿ ಓದಿದ ಮಕ್ಕಳೇ ಭಾಗ್ಯವಂತರೇನೋ ಅನ್ನಿಸುತ್ತದೆ. ಆ ಮಠದಲ್ಲಿ ಓದು ಕಲಿತ ನನಗೆ ಅಂತಹ ಶಾಲೆಗಳು ಮರೆಯಾದುದರಿಂದಲೋ ಅಂತಹ ಮಾನೌಮಿ ಹರಕೆಗಳು ನಮಗೆ ಲಭಿಸದಿಲ್ಲದಿರು ವುದರಿಂದಲೋ ಏನೋ ದೇಶದಲ್ಲಿ ದುರ್ಭಿಕ್ಷೆ ಬಂದಿದೆ ಎಂಬ ಮಾತುಗಳನ್ನು ಲಿಂಗಪ್ಪನವರು ಹೇಳುವುದು ನಿಜವೇನೋ ಅನ್ನಿಸುತ್ತದೆ." (1949:3–4)

ಹಳ್ಳಿಯ ಸುಖಜೀವನದ ಬಗ್ಗೆ, ಹಳ್ಳಿಯ ಸಂಸ್ಕೃತಿಯ ಬಗ್ಗೆ ಹಾಗೂ ಅವರ ಕಲೆ ಬದುಕು, ಸಾಹಿತ್ಯಗಳ ಬಗ್ಗೆ ಸಂಗ್ರಹಕರು ವಿವರವಾಗಿ ಬರೆದಿದ್ದಾರೆ. ಹಬ್ಬ ಹರಿದಿನಗಳಲ್ಲಿ ದಸರಾ ಸಂದರ್ಭಗಳಲ್ಲಿ ಹಳ್ಳಿಗರು ಎಷ್ಟೋ ಪದಗಳನ್ನು ಹಾಡುತ್ತಾರೆ. ಕೆಲಸದ ಜೊತೆಗೆ, ಕುಣಿತದ ಜೊತೆಗೆ, ಆಟದ ಜೊತೆಗೆ, ಜೀವನದ ಹುರುಪುಗಳನ್ನು ಮುಂದಿಡುತ್ತಾರೆ. ಹೊಲದ ಕೆಲಸ ಮಾಡುವಾಗ ಒಂದು ರೀತಿ ಹಾಡಿದರೆ ಬೇಸಾಯ ನಿಂತ ನಂತರ ಹಾಡುವ ಪದಗಳೇ ಬೇರೆ ಎಂಬುದನ್ನು ಸಂಗ್ರಹಕರು ಮನದಟ್ಟು ಮಾಡಿದ್ದಾರೆ.

ಹದಿಮೂರು ಭಾಗಗಳಾಗಿ ಮಾಡಿಕೊಂಡು ಹಳ್ಳಿಯ ಪದಗಳು ಜಾತಿಯ, ದೇವರ ಸ್ತುತಿ, ಒಕ್ಕಲುತನದ ಕುರಿತು ಹೇಳುವ ಪದಗಳು ಮುಖ್ಯವಾಗುತ್ತವೆ. ಸಂಕಲನ ಬಗ್ಗೆ ಬಿ.ಯಂ.ಶ್ರೀಯವರು, "ಕವನಗಳು ವಿದ್ಯಾವಂತರಿಗೂ ಪಂಡಿತರಿಗೂ ಸ್ವಾರಸ್ಯವಾಗಿರುವುದು ಮಾತ್ರವೇ ಅಲ್ಲ; ಈಗ ನಾವು ಸಾಧಿಸಲು ಪ್ರಯತ್ನಿಸುತ್ತಿರುವ ಗ್ರಾಮಜೀವನ ಪುನರ್ಜೀವನ ಸಾಧನೆಯಲ್ಲೂ ಇವುಗಳ ಪ್ರಾಮುಖ್ಯತೆ, ವಿಶೇಷ ಮಹತ್ವ ಬೀರುವುದೆಂದು ನಾನು ಭಾವಿಸುತ್ತೇನೆ. ಕರುಳು ಕರುಳನ್ನು ಮಿಡಿಯುತ್ತದೆ. ಅಂತಃರಂಗವನ್ನು ತಟ್ಟಿ ಮಾರ್ದನಿ ಕೊಡುತ್ತದೆ. ನಮ್ಮ ಹಳ್ಳಿಗರ ಗಂಡು ಹೆಣ್ಣುಗಳೆಲ್ಲರ ಜೀವನ ಸಾರವನ್ನೇ ಹೊರ ಹೊಮ್ಮಿಸುತ್ತಿರುವ ಹಾಡುಗಳು ಅವರನ್ನು ತಣಿಸಿ ಹುರಿದುಂಬಿಸುವಂತೆ ಮತ್ತೆ ಯಾವುದೂ ಹುರಿದುಂಬಿಸಲಾರದು." (1949:30–31)

ಕೃತಿಯು ಸ್ವಾತಂತ್ರ್ಯ ನಂತರದಲ್ಲಿ ಪ್ರಕಟವಾಗುವ ಮೊದಲು 1940ರಲ್ಲಿ 'ಮಾನೌಮಿಯ ಚೌಪದ' ಎಂಬ ಸಂಗ್ರಹವನ್ನು ಎನ್. ಅನಂತರಾಂಗಾಚಾರ್ ಸಂಪಾದಿಸಿರುವರು. ಹಾಡುಗಳ ಛಂದಸ್ಸಿನ ದೃಷ್ಟಿಯಲ್ಲಿ 'ಮಾನಮಿಯ ಪದಗಳು' ಹಾಗೂ 'ಮಾನೌಮಿಯ ಚೌಪದ' ರಚನೆ ಒಂದೇ ರೀತಿಯಾಗಿದೆ. ಎರಡೂ ಸಂಗ್ರಹಗಳಲ್ಲೂ ಆದಿಪ್ರಾಸ ಹಾಗೂ ಅಂತ್ಯಪ್ರಾಸಗಳನ್ನು ಗಮನಿಸಬಹುದು. ಮಾನೌಮಿಯ ಚೌಪದ ಸಂಗ್ರಹದ ಕೊನೆಯಲ್ಲಿ ಶಬ್ದಕೋಶವಿದೆ.

ಲಾವಣಿ ಹಾಗೂ ಪಾಡ್ದನ ಸಂಗ್ರಹ

ಕನ್ನಡದಲ್ಲಿ ಲಾವಣಿಗಳನ್ನು ಮೊತ್ತಮೊದಲು ಸಂಗ್ರಹಿಸಿದ ಕೀರ್ತಿ ವಿದೇಶಿ ವಿದ್ವಾಂಸ ಜಾನ್‌ಲೇಡನ್‌ಗೆ ಸಲ್ಲುತ್ತದೆ. 1803ರಲ್ಲಿ ಈತ ಶ್ರೀರಂಗಪಟ್ಟಣದ ಸುತ್ತಮುತ್ತಲಿನಲ್ಲಿ ಪ್ರಚಲಿತದಲ್ಲಿದ್ದ ಟಿಪ್ಪುಸುಲ್ತಾನನ ಪತನ ನಂತರ ಜನರಾಡುತ್ತಿದ್ದ ಲಾವಣಿಗಳೆರಡನ್ನು ಸಂಗ್ರಹಿಸಿದ. ನಂತರ 1885ರಲ್ಲಿ ಜಾನ್ ಫೈತ್‌ಫುಲ್ ಫ್ಲೀಟ್ ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರ ಕುರಿತಂತೆ ಹಾಡುವ 17 ಲಾವಣಿಗಳನ್ನು ಸಂಗ್ರಹಿಸಿದ್ದು,[5] ಲಾವಣಿಗಳು **'ಇಂಡಿಯನ್ ಆಂಟಿಕ್ವೇರಿ'** ಪತ್ರಿಕೆಯಲ್ಲಿ 1885–90ರ ಅವಧಿಯಲ್ಲಿ ಪ್ರಕಟವಾದುವು.

1886ರಲ್ಲಿ ಮಂಗಳೂರಿನ ಬಾಸೆಲ್ ಮಿಷನ್ ಪ್ರೆಸ್ ಎ.ಮೆನ್ನರ್ ಸಂಗ್ರಹಿಸಿದ ತುಳು **'ಪಾಡ್ದನೊಳು'** ಸಂಗ್ರಹ ಪ್ರಕಟಿಸಿತು. 1933ರ ವರೆಗೆ ಅಲ್ಲಿ–ಕೆಲವು ಲಾವಣಿಗಳು ಬಿಡಿಬಿಡಿಯಾಗಿ ಪ್ರಕಟವಾದುವು. ಮಾಸ್ತಿ ವೆಂಕಟೇಶ ಅಯ್ಯಂಗಾರ್ 1925ರಲ್ಲಿ **'ಕನ್ನಡ ಲಾವಣಿಗಳ ಸಾಂಗತ್ಯ'** ಲೇಖನ ಬರೆದರು.

1933ರಲ್ಲಿ ಗೆಳೆಯ ಗುಂಪಿನ ಸಿಂಪಿ ಲಿಂಗಣ್ಣ ಹಾಗೂ ಪಿ. ಧೂಲಾ ಸಾಹೇಬ ಇಬ್ಬರು ಜೊತೆಗೂಡಿ ಜೀವನ ಸಂಗೀತವೆಂಬ **ಶೃಂಗಾರ ಲಾವಣಿಗಳ ಸಂಗ್ರಹ**ವನ್ನು ಪ್ರಕಟಿಸಿದರು. 1933ರಿಂದ 1944ರ ವರೆಗೂ ಅಲ್ಲಲ್ಲಿ ಕೆಲವು ಬಿಡಿಬಿಡಿ ಲಾವಣಿಗಳು ಪ್ರಕಟವಾದುವು.

1803ರಲ್ಲಿ **ಸ್ಕಾಟ್‌ಲ್ಯಾಂಡ್‌ನ ಜಾನ್‌ಲೇಡನ್** ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣಕ್ಕೆ ವೈದ್ಯನಾಗಿ ಬಂದ.[7] ಕವಿ, ವಿದ್ವಾಂಸನೆಂದು ಹೆಸರು ಗಳಿಸಿಕೊಂಡ ಈತ ಶ್ರೀರಂಗಪಟ್ಟಣದಲ್ಲಿ ಟಿಪ್ಪುಸುಲ್ತಾನನ ಪತನದ ನಂತರ ಒದಗಿದ ದುಸ್ಥಿತಿಯನ್ನು ಕುರಿತ ವಿವರಗಳನ್ನೊಳಗೊಂಡ ಎರಡು ಕನ್ನಡ ಲಾವಣಿಗಳನ್ನು ಸಂಗ್ರಹಿಸಿದ.[8] **'ಶ್ರೀರಂಗಪಟ್ಟಣದ ಕೆಡುಗಾಲ'**ವೆಂಬ ಲಾವಣಿಗಳನ್ನು ಆತ ಕನ್ನಡದಿಂದ ಇಂಗ್ಲಿಷಿಗೆ ಭಾಷಾಂತರಿಸಿದ. ಇದೇ ಲಾವಣಿಯು ಕನ್ನಡ ಜನಪದ ಹಾಡುಗಳ ಸಂಗ್ರಹದ ಬಗೆಗೆ ಸಿಗುವ ಮೊತ್ತಮೊದಲ ದಾಖಲೆ. ದಾಖಲೆಗೆ ಇಂದು ಕನ್ನಡ ಜಾನಪದದಲ್ಲಿ ಐತಿಹಾಸಿಕ ಮಹತ್ತ್ವವಿದೆ.

ಎಲ್. ಗುಂಡಪ್ಪನವರು 'ನಾಡಪದಗಳು' (1947) ಗ್ರಂಥವನ್ನು ಸಂಪಾದನೆ ಮಾಡುವಾಗ, ಜಾನ್‌ಲೇಡನ್ ಸಂಗ್ರಹಿಸಿ ಕನ್ನಡದಿಂದ ಇಂಗ್ಲಿಷಿಗೆ ಅನುವಾದಿಸಿದ ಎರಡು ಹಾಡುಗಳನ್ನು ಮತ್ತೆ ಕನ್ನಡಕ್ಕೆ ಅನುವಾದಿಸಿ ಬಳಸಿಕೊಂಡಿದ್ದಾರೆ. ಹಾಡುಗಳಿಗೆ **'ಟಿಪ್ಪು ಸುಲ್ತಾನನ ಬೀಳಿನ ಹಾಡು'** (1947: 166–176) ಎಂಬ ಶೀರ್ಷಿಕೆ ನೀಡಿದ್ದಾರೆ.[6]

ಛಂದಸ್ಸಿನ ದೃಷ್ಟಿಯಲ್ಲಿ ಲೇಡನ್ ಸಂಗ್ರಹಿಸಿದ ಹಾಡುಗಳು ಚೌಪದಿ ಮಟ್ಟುಗಳು. ಕತೆಯಂತೆ ಹೇಳಿಕೊಂಡು ಹೋಗುವ ಹಾಡುಗಳಲ್ಲಿ ಮೊದಲನೆಯ ಪದ ದೀರ್ಘವಾಗಿರುತ್ತದೆ. 39 ಚೌಪದಿಗಳಿದ್ದು, ಸುಲ್ತಾನನ ದರ್ಬಾರದ ಬಗ್ಗೆ, ಆಳ್ವಿಕೆಯ ಬಗ್ಗೆ, ಸಂಪತ್ತು, ಶೂರತನ, ನಗರಗಳ ವೈಭವ, ರಣವೈಭವ, ದೊರೆಯ ಪೀಠ, ಆತನಿಗಿರುವ ಬಿರುದು, ಸುಲ್ತಾನನ ಆಳ್ವಿಕೆಯ ವ್ಯಾಪ್ತಿ ಇತ್ಯಾದಿ ಅಳಿದು ಹೋದ ಚಕ್ರಾದಿಪತ್ಯದ ಸುಖದ ದಿನಗಳನ್ನು ನೆನಪಿಸಿಕೊಳ್ಳುವ ಚಿತ್ರಣವಿದೆ. ಪ್ರಾರಂಭದಲ್ಲಿ ಹಾಡು; "ಎಷ್ಟು ಬೇಗ ಮಾಯವಾಯ್ತೊ ಸುಲ್ತಾನನ ದೌಲತ್ತು । ಎಷ್ಟು ಬೇಗ ಓಡಿಹೊಯ್ತೊ ವೈಭವ ಸಂಪತ್ತು । ಎಷ್ಟು ಬೇಗ ಶ್ರೀರಂಗಪಟ್ಟಣದ ಬಾವುಟ ಬಾನಾಡಿ । ಭಾಗ್ಯ ಶಿಖರದಿಂದಲುರುಳಿ ಬಿತ್ತೊ ಹುಡಿಗೂಡಿ ॥" (1947:168) 39 ಚೌಪದಿಗಳಲ್ಲೂ ಮೊದಲೆರಡು–ನಂತರವೆರಡು ಪಾದಗಳಲ್ಲಿ ಅಂತ್ಯ ಪ್ರಾಸವಿದೆ.

ಎರಡನೆಯ ಹಾಡಿನಲ್ಲಿ 5 ಚೌಪದಿಗಳಿವೆ. ಇದು ಸುಲ್ತಾನ ಸತ್ತ ನಂತರ ಆತನ ಗುಣಗಾನ ಮಾಡುವ ಹಾಗೂ ಸಾಯುವ ಮೊದಲು ಆದ ಪಿತೂರಿಯನ್ನು ನೆನಪಿಸಿಕೊಂಡು ಹಾಡಿರುವುದಾಗಿದೆ. ಸುಲ್ತಾನನ ಸಾವನ್ನು ಹೇಳುವ ಹಾಡು ಹೀಗಿದೆ. "ಶ್ರೀರಂಗಪಟ್ಟಣದ ಭಾರಿಯ ಕೋಟೆಯ ಬಳಿಯಲ್ಲಿ । ಕ್ರೂರ ದುರ್ವಿಧಿ ಹಾರಿಸಿತಯ್ಯೋ ಗುಂಡೊಂದ । ಬೀಳಲೇ ಬೇಕೊಡನೆಯೆ ನಾವು ನಮ್ ಸುಲ್ತಾನನ ಕೂಡೆ । ಅಯ್ಯೋ ಸುಲ್ತಾನ – ನಮ್ಮ ಧೀರ ಸುಲ್ತಾನಾ ॥" (1947:175)

ಪ್ರಾಸ ರಚನೆ ಇಲ್ಲದಿದ್ದರೂ ಎರಡೂ ಹಾಡುಗಳನ್ನು ಒಟ್ಟಾಗಿ ಗಮನಿಸಿದಾಗ, ಟಿಪ್ಪುಸುಲ್ತಾನನ ಪ್ರಜೆಗಳು, ಆತನ ಮೇಲೆ ಇಟ್ಟಿದ್ದ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ. ಜನರಿಗೆ ಸುಲ್ತಾನನ ಮರಣ ದುಃಖವನ್ನು ತಂದಿತ್ತು. ಹಾಗೂ ಟಿಪ್ಪು ನಂತರದ ಆಡಳಿತ ಬ್ರಿಟಿಷ್ ಸರಕಾರ ಆಗಿದ್ದು, ಅವರ ವಿರುದ್ಧ ತಮ್ಮ ನಾಯಕನನ್ನು, ಆತನ ಗುಣಗಾನವನ್ನು ಅಭಿವ್ಯಕ್ತಿಸುವುದಕ್ಕೆ ಸಾಧ್ಯವಾಗಿರಬೇಕೆಂದು ತೋರುತ್ತದೆ.

ಇಂಡಿಯನ್ ಆಂಟಿಕ್ವೇರಿ ಪತ್ರಿಕೆಯಲ್ಲಿ 1885ರಲ್ಲಿ **ಜಾನ್ ಫೆಯ್ತ್‌ಫುಲ್ ಫ್ಲೀಟ್** ಲಾವಣಿಗಳನ್ನು ಪ್ರಕಟಿಸುವ ಮುಂಚಿತದಲ್ಲೇ, ಕನ್ನಡ ಲಾವಣಿಗಳನ್ನು ಕುರಿತು ಪ್ರಾಸ್ತಾವಿಕ ಲೇಖನದಲ್ಲಿ **'ಎ ಸೆಲೆಕ್ಷನ್ ಆಫ್ ಕೆನರೀಸ್ ಬಾಲೆಡ್ಸ್'** ಎಂಬ ಲೇಖನದಲ್ಲಿ ಐತಿಹಾಸಿಕ ಲಾವಣಿಗಳ ಹಿನ್ನೆಲೆಯ ವಿವರಣೆ ಸಿಗುತ್ತದೆ. ಕನ್ನಡ ಭಾಷೆಯನ್ನು ಲಿಪೀಕರಿಸಿದ್ದು ಹಾಗೂ ಕನ್ನಡ ಭಾಷೆಯನ್ನು ಇಂಗ್ಲಿಷಿಗೆ ಅನುವಾದಿಸಿದ್ದು ಪ್ರಮುಖ ಸಂಗತಿ. ಕನ್ನಡ ಭಾಷೆಯ ಲಿಪಿಗಳನ್ನು ಉಚ್ಚರಿಸುವುದಕ್ಕೆ ಲೋಪವಾಗದಂತೆ ಇಂಗ್ಲಿಷಿನ 'ಐಪಿಎ' (ಇಂಟರ್‌ನ್ಯಾಷನಲ್ ಫೊನೆಟಿಕ್ ಆಲ್ಫಬೆಟ್) ಸಂಜ್ಞಾಕ್ಷರಗಳಲ್ಲಿ ದಾಖಲಿಸಿರುವುದು ಫ್ಲೀಟ್ ಸಂಗ್ರಹದ ಪ್ರಮುಖ ಸಾಧನೆ.[10]

ಜಾನ್‌ಫ್ಲೀಟ್ ಲೇಖನವನ್ನು **ಕ್ಯಾತನಹಳ್ಳಿ ರಾಮಣ್ಣ** 1972ರಲ್ಲಿ ಕನ್ನಡಕ್ಕೆ ಅನುವಾದಿಸಿದರು. ಅದು ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಂಗದಿಂದ ಪ್ರಕಟವಾಗಿದೆ. ಲಭ್ಯವಾಗಿರುವ ಮೈಕ್ರೋಫಿಲ್ಮ್ ಪ್ರತಿಯ ಆಧಾರದ ಮೇಲೆ ಫ್ಲೀಟ್ ಅವರ ಇನ್ನೂ ಹನ್ನೆರಡು ಲಾವಣಿಗಳನ್ನು **ರಾಮಣ್ಣನವರು** 1991ರಲ್ಲಿ **'ಫ್ಲೀಟ್ ಸಂಗ್ರಹಿಸಿದ ಲಾವಣಿಗಳು'** ಪ್ರಕಟಿಸಿದರು. ಅವರ ಗ್ರಂಥದಲ್ಲಿ ಫ್ಲೀಟ್ ಸಂಗ್ರಹಿಸಿದ ನಾಲ್ಕು 'ದಂಡಕ'ಗಳು, ನಾಲ್ಕು 'ಜೋಗುಳ'ದ ಪದಗಳು ಸೇರ್ಪಡೆಯಾಗಿವೆ.

ಕ್ಯಾತನಹಳ್ಳಿ ರಾಮಣ್ಣರ 'ಫ್ಲೀಟ್ ಸಂಗ್ರಹಿಸಿದ ಲಾವಣಿಗಳು'(1991) ಸಂಗ್ರಹದಲ್ಲಿ ಜಾನ್ ಫೆಯ್ತ್‌ಫುಲ್ ಫ್ಲೀಟ್‌ನ ಒಂದು ಫೋಟೋ ಹಾಗೂ ಆತನ ಕೈ ಬರಹದ ಒಂದು ಟಿಪ್ಪಣಿ ಇದೆ. ಸಿ.ಪಿ. **ಕೃಷ್ಣಕುಮಾರ್** ಗ್ರಂಥಕ್ಕೆ ಮುನ್ನುಡಿ ಬರೆಯುತ್ತಾ, "ಜನಪದ ಸಂಗ್ರಹಕಾರ್ಯ ಕರ್ನಾಟಕದಲ್ಲಿ ಕಳೆದ ಶತಮಾನದಲ್ಲೇ ಆರಂಭವಾದರೂ ಲಾವಣಿ, ಗೀತೆ, ಗಾದೆಗಳಂಥ ಸಾಹಿತ್ಯ ರೂಪಗಳಿಗೆ ಅದು ಸೀಮಿತವಾಗಿತ್ತು.[11] ಇದು ಮೊದಲ ಹಂತ. ಎರಡನೆಯ ಹಂತದಲ್ಲಿ ಜಾನಪದದ ಎಲ್ಲ ಪ್ರಕಾರಗಳ–ಸಾಹಿತ್ಯಕ ಹಾಗೂ ಸಾಹಿತ್ಯೇತರ ಬಗೆಗಳ – ಸಂಗ್ರಹ, ಸಂಪಾದನೆಗಳಿಗೆ ಕೈ ಹಚ್ಚಲಾಯಿತು. ವೈಜ್ಞಾನಿಕ ವಿಶ್ಲೇಷಣೆ, ಸಂಶೋಧನೆಗಳು ಮೂರನೆಯ ಹಂತ. ನಾವೀಗ ಸೀಮೋಲ್ಲಂಘನದ ಮಹತ್ತ್ವಪೂರಿತ ಘಟ್ಟದಲ್ಲಿದ್ದೇವೆ"(1991:5) ಎಂದಿದ್ದಾರೆ.

ಫ್ಲೀಟ್ ಹದಿನೇಳಕ್ಕೂ ಹೆಚ್ಚು ಲಾವಣಿಗಳನ್ನು ಸಂಗ್ರಹಿಸಿ ಅವುಗಳಲ್ಲಿ ಐದು ಲಾವಣಿಗಳನ್ನು ಮಾತ್ರ ಪ್ರಕಟಿಸಿರುವುದು. ಫ್ಲೀಟ್ ಐದೇ ಲಾವಣಿಗಳನ್ನು ಯಾಕೆ ಪ್ರಕಟಿಸಿದರು ಎಂಬುದು ಸಹ ಚರ್ಚಿಸಬೇಕಾದ ವಿಚಾರ. "ಸಂಗ್ರಹಿಸಿದ ಸಾಹಿತ್ಯವನ್ನೂ ಅದರ ಹಿನ್ನೆಲೆ–ಮುನ್ನಲೆಗಳನ್ನೂ ಅಮೂಲಾಗ್ರವಾಗಿ ಅರ್ಥ ಮಾಡಿಕೊಂಡು ತಕ್ಕ ರೀತಿಯಲ್ಲಿ ಅವು ಸಿದ್ಧಗೊಂಡ ಮೇಲೆಯೇ ಲಾವಣಿಗಳನ್ನು ಪ್ರಕಟಿಸಲು ಮನಸ್ಸು ಮಾಡಿದ್ದಾರೆ. ಉಳಿದ ಲಾವಣಿಗಳು ಅವರ ಆಲೋಚನಾ ಪರಧಿಯಲ್ಲಿ ಇನ್ನೂ ಪಕ್ವಗೊಳ್ಳದ್ದರಿಂದ ಪ್ರಕಟವಾಗದೆ ಉಳಿದುಕೊಂಡವು. ಅನಂತರವಾದರೂ ಪ್ರಕಟಿಸುವ ಮನಸ್ಸು ಮಾಡಬಹುದಿತ್ತಲ್ಲವೆ ಎಂದು ಯೋಚಿಸುವಾಗ ಅಂದಿನ ಅವರ ಹುದ್ದೆಯಾಗಲಿ, ಪರಿಸರವಾಗಲಿ, ಕರ್ತವ್ಯವಾಗಲಿ ಅವರನ್ನು ಲಾವಣಿಗಳ ಅಭ್ಯಾಸದಿಂದ ವಿಮುಖಗೊಳಿಸಿರ ಬಹುದಾದ ಸಾಧ್ಯತೆಗಳು ಕಂಡುಬರುತ್ತವೆ" (1991:9–10) ಎಂಬುದಾಗಿ ಕ್ಯಾತನಹಳ್ಳಿ ರಾಮಣ್ಣನವರು ಹೇಳಿರುತ್ತಾರೆ.[12]

"ಸಂಗ್ರಹಿಸಿದ ಹಾಡುಗಳನ್ನು ಫ್ಲೀಟ್ ರಾಗತಾಳ ಸಹಿತ ವಿಂಗಡಿಸಿಕೊಂಡಿದ್ದಂತೆ ತೋರುತ್ತದೆ. ಅವರೇ ವಿಂಗಡಿಸಿಕೊಳ್ಳುತ್ತಿದ್ದರೋ ಸಂಗ್ರಹಿಸಿಕೊಡುತ್ತಿದ್ದರೋ ಅಥವಾ

ಬರೆದುಕೊಳ್ಳುತ್ತಿದ್ದರೋ ಶಾಲಾ ಮಾಸ್ತರರೋ ಕಾರಕೂನರೋ ಎಂಬುದು ಖಚಿತವಾಗುವುದಿಲ್ಲ. ಏಂಗಡನೆ ಆಗುತ್ತಿದ್ದುದಕ್ಕೆ ಹಸ್ತಪ್ರತಿ ಸಂಗ್ರಹದಲ್ಲಿ ಒಂದು ಉದಾಹರಣೆಯಿದೆ. ಅದು ಹೀಗಿದೆ;

ಪದದ ನಂಬರ	**(ಪದದ ಹೆಸರು) ಜಾತಿ**	**ಪದದರಾಗ ಹಾಗೂ ತಾಳ**
1.	ಲಾವಣಿ	ರಾಗ ಎರಕಲಕಾಂಬೋದಿ ಆದಿತಾಳ
2.	ಲಾವಣಿ	ರಾಗ ರೇಗುಪ್ತಿ ಆದಿತಾಳ
3.	ಲಾವಣಿ	ರಾಗ ರೇಗುಪ್ತಿ ಆದಿತಾಳ
4.	ಲಾವಣಿ	ರಾಗ ಭೈರವಿ
5.	ಲಾವಣಿ	ರಾಗ ಸಾರಂಗ
6.	ಲಾವಣಿ	ಶ್ರೀ ರಾಗ

ಲಾವಣಿಯನ್ನು ಹೇಗೆ ಹಾಡುತ್ತಿದ್ದರೆಂಬುದಕ್ಕೆ ಉದಾಹರಣೆಯಾಗಿ ಫ್ಲೀಟ್ ಒಂದು ಸಂಗೀತ ನಕ್ಷೆಯನ್ನೂ (ಮ್ಯೂಸಿಕಲ್ ನೊಟೇಶನ್) ಇಂಡಿಯನ್ ಆಂಟಿಕ್ವೇರಿ(1887) 16ನೇ ಸಂಪುಟದಲ್ಲಿ ಒದಗಿಸಿದ್ದಾರೆ.**12** (1991: 11) ಎಂಬುದಾಗಿ ಕ್ಯಾತನಹಳ್ಳಿ ರಾಮಣ್ಣನವರು ಅರಿಕೆ ಮಾಡಿಕೊಂಡಿದ್ದಾರೆ.

'ಫ್ಲೀಟ್ ಸಂಗ್ರಹಿಸಿದ ಲಾವಣಿಗಳು' (1991) – ಗ್ರಂಥದ ಸಂಪಾದನೆಯ ಸಂದರ್ಭದಲ್ಲಿ ಕ್ಯಾತನಹಳ್ಳಿ ರಾಮಣ್ಣನವರು ಸಂಪಾದನೆಯ ಮಿತಿಗಳನ್ನು ತೊಡಕುಗಳನ್ನು ವಿವರಿಸಿದ್ದಾರೆ ಹಾಗೂ ಫ್ಲೀಟ್ ಸಂಗ್ರಹಿಸಿದ ಲಾವಣಿಗಳ ಲಭ್ಯತೆಯ ಕುರಿತಂತೆಯೂ ವಿವರ ಕೊಟ್ಟಿದ್ದಾರೆ. ಆ ಪ್ರಕಾರ–

1. "ಫ್ಲೀಟರ ಅಪ್ರಕಟಿತ ಸಂಗ್ರಹದಲ್ಲಿ ಇರುವಂಥವು ಕೇವಲ ಲಾವಣಿಗಳಲ್ಲ. ಜೋಗುಳದ ಪದಗಳೂ ದಂಡಕಗಳು ಕಲ್ಗಿತುರಾ ಹಾಡುಗಳೂ ಇವೆ. ಕೆಲವನ್ನು ಇಂಗ್ಲಿಷಿಗೆ ಭಾಷಾಂತರಿಸಲಾಗಿದೆ. ಭಾಷಾಂತರಗಳು ಪ್ರಕಟಣೆಗೆ ಪೂರ್ವಭಾವಿಯಾಗಿ ಇಟ್ಟ ಹೆಜ್ಜೆಗಳಾಗಿವೆ. ಅವರ ಟಿಪ್ಪಣಿಗಳನ್ನು ಗಮನಿಸಿದಾಗ ಫ್ಲೀಟ್ ಒಳ್ಳೆಯ ರೂಪದಲ್ಲಿ ಒಳ್ಳೆಯ ಸ್ಥಿತಿಯಲ್ಲಿ ಇರುವಂಥ ಲಾವಣಿಗಳನ್ನು ಮಾತ್ರ ಪ್ರಕಟಣೆಗೆ ಆಯ್ಕೆ ಮಾಡಿಕೊಳ್ಳುತ್ತಿದ್ದರು ಎಂದೆನಿಸುತ್ತದೆ."

2. "ಸಂಗ್ರಹದಲ್ಲಿ ಅನೇಕ ಹಾಡುಗಳು ಪುನರಾವರ್ತನೆಯಾಗಿವೆ. ಭಾಷಾಂತರಕ್ಕೂ ಮಾತು ಅನ್ವಯಿಸುತ್ತದೆ. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಪಾಠಾಂತರ ಎಂದು ಪರಿಗಣಿಸಲು ಸಾಧ್ಯವಾಗದ ಜೋಗುಳದ ಪದವೊಂದರ ನಾಲ್ಕು ಪ್ರತಿಗಳಲ್ಲಿ ಒಂದನ್ನು ಮಾತ್ರ ಇಟ್ಟುಕೊಂಡು ಉಳಿದ ಮೂರು ಪ್ರತಿಗಳನ್ನು ಕೈ ಬಿಡಲಾಗಿದೆ. ಉಳಿದು ಕೊಂಡಿರುವ ಪಾಠಂತರಗಳನ್ನು ಗ್ರಂಥ ಸಂಪಾದನ ಕ್ರಮಕ್ಕೆ ಒಳಪಡಿಸಿದೆ. ಅಂಥವನ್ನೆಲ್ಲ ಅನುಬಂಧಗಳನ್ನಾಗಿ ವಿಂಗಡಿಸಲಾಗಿದೆ. ಫ್ಲೀಟರ ಸಂಗ್ರಹವಷ್ಟನ್ನೂ ಪ್ರಾಮಾಣಿಕವಾಗಿ ಹೀಗೆ ನಮೂದಿಸುವುದರಿಂದ ಅಭ್ಯಾಸಗಳಿಗೆ ಫ್ಲೀಟರ ಅನುಕೂಲವಾಗಬಹುದೆಂದು ಭಾವಿಸಲಾಗಿದೆ."

3. "ಮೊದಲಸಲ ಅಚ್ಚಾಗುತ್ತಿರುವ ಹಾಡುಗಳ ಬಗ್ಗೆ ಏನೆಂದೂ ಅಭಿಪ್ರಾಯವನ್ನೂ ವ್ಯಕ್ತಪಡಿಸುತ್ತಿಲ್ಲ. ಇದು ಉದ್ದೇಶಪೂರ್ವಕ."

4. "ಫ್ಲೀಟರ ಹಸ್ತಪ್ರತಿಯಲ್ಲಿ ಅಲ್ಲಲ್ಲಿ ಕಂಡು ಬರುವ ಟಿಪ್ಪಣಿಗಳನ್ನು ಅನುಬಂಧಗಳ ವಿಭಾಗದಲ್ಲಿ ಪಟ್ಟಿ ಮಾಡಿದ್ದೇನೆ. ಹಸ್ತಪ್ರತಿಗೆ ಮೈಕ್ರೋಫಿಲ್ಮ್ ರೂಪ ಕೊಡುವಾಗ ಆಗಿರುವ ಅಡಚಣೆಗಳಿಗೆ ಉದಾಹರಣೆಯಾಗಿ ಬ್ರಿಟಿಷ್ ಮ್ಯೂಸಿಯಂನವರು ಫಿಲ್ಮ್ ನಡುವೆ ಕೊಟ್ಟಿರುವ ಒಂದು ಟಿಪ್ಪಣಿಯನ್ನು ಉಲ್ಲೇಖಿಸಬಹುದು – Note: This Volume has a very ight binding and while every eort has made to reproduce the centres, orce would result in damage.

ಆದ್ದರಿಂದ ಮೂಲ ಹಸ್ತಪ್ರತಿ ದರ್ಶನಕ್ಕಿಂತ ಮೈಕ್ರೋಫಿಲ್ಮ್ ದರ್ಶನವು ಇಷ್ಟರಮಟ್ಟಿಗೆ ಆದ್ದರಿಂದ, ಮೂಲ ಹಸ್ತಪ್ರತಿ ದರ್ಶನಕ್ಕಿಂತ ಮೈಕ್ರೋಫಿಲ್ಮ್ ದರ್ಶನವು ಇಷ್ಟರ ಮಟ್ಟಿಗೆ ಮಿತಿಗೊಳಗಾಗಿದೆ" (1991: 11–12) ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಗ್ರಂಥಕ್ಕೆ ಒಂದು ಉತ್ತಮವಾದ ಪರಿವಿಡಿಯಿದೆ. ಫ್ಲೀಟ್ ಸಂಗ್ರಹಿಸಿದ ಲಾವಣಿಗಳ, ಜೋಗುಳ ಪದಗಳ, ದಂಡಕಗಳ ಇತ್ಯಾದಿ ಮೂಲ ಪಠ್ಯಗಳ ಸೂಚಿಯನ್ನೂ ಕೊಡಲಾಗಿದೆ. ಸಂಪಾದಿಸಿ ಕೊಡಲಾಗಿರುವ ಪಠ್ಯಗಳನ್ನು ಪ್ರಧಾನವಾಗಿ ಎರಡು ಭಾಗವಾಗಿ ವರ್ಗೀಕರಿಸಿ ಒಳವಿಭಾಗಗಳನ್ನೂ ಮಾಡಲಾಗಿದೆ.

ಮೊದಲ ಭಾಗ: ಇಂಡಿಯನ್ ಆಂಟಿಕ್ವೇರಿ ಸಂಪುಟ (1ನೇ ಪುಸ್ತಕ), ಭಾಗದಲ್ಲಿ ಏಳು ಒಳವಿಭಾಗಗಳಿವೆ. 1. ಪ್ರಸ್ತಾವನೆ: ಪೂರ್ವ, 2. ಕನ್ನಡ ಲಾವಣಿಗಳ ಸಂಗ್ರಹ, 3. **ಸಂಗೊಳ್ಳಿರಾಯಣ್ಣನ ದಂಗೆ,** 4. **ಆದಾಯ ತೆರಿಗೆ,** 5. **ಹಲಗಲಿಯ ಬೇಡರು,** 6. **ಸಂಗ್ಯನ ಅಪರಾದ ಹಾಗೂ ಸಾವು** ಹಾಗೂ 7. **ಕಿತ್ತೂರ ಚೆನ್ನವ್ವನ ಸೊಸೆ.**

ಕ್ಯಾತನಹಳ್ಳಿ ರಾಮಣ್ಣ 1972ರಲ್ಲಿ ಕನ್ನಡದ **'ಐದು ಐತಿಹಾಸಿಕ ಲಾವಣಿಗಳು'** ಗ್ರಂಥದಲ್ಲಿರುವ ಐದು ಲಾವಣಿಗಳೂ ಫ್ಲೀಟ್ ಸಂಗ್ರಹಿಸಿ ಅದನ್ನು ಇಂಡಿಯನ್ ಆಂಟಿಕ್ವೇರಿ ಪತ್ರಿಕೆಯಲ್ಲಿ ಪ್ರಕಟಿಸಿದ್ದು ಚಾರಿತ್ರಿಕ ದಾಖಲೆ.

1972ರಲ್ಲಿ ಪ್ರಕಟಿಸಿದ **ಐದು ಐತಿಹಾಸಿಕ ಲಾವಣಿಗಳ** ಕಥಾ ಸುಸಂದರ್ಭವನ್ನು **ಕ್ಯಾತನಹಳ್ಳಿ ರಾಮಣ್ಣ**ನವರು ಪ್ರಸ್ತಾವನೆಯ ಪೂರ್ವಭಾಗದಲ್ಲಿ ಲಾವಣಿ ಬಗ್ಗೆ ಹೀಗೆ ವ್ಯಾಖ್ಯಾನಿಸಿದ್ದಾರೆ, "ಲಾವಣಿ ಜನಪದಕ್ಕೆ ಸೇರಿದ್ದರೂ ಪುರಾತನ ಅಲ್ಲ. ಆದಿವಾಸಿಗಳಿಗೆ ಸಂಬಂಧಪಡುವುದಿಲ್ಲ. ಪ್ರಾಚೀನ ಕಾಲದಿಂದ ಬಂದದ್ದಲ್ಲ; ಸುಸಂಸ್ಕೃತ ಕವಿಗಳಿಂದಲೂ ರಚಿತವಾದದ್ದಲ್ಲ. ಜಾನಪದದಲ್ಲಿ ಸಾಂಪ್ರದಾಯಿಕ ಕಥೆಗಳ ದೊಡ್ಡ ಭಂಡಾರವೇ ಇರುತ್ತದೆ. ಸ್ಥಳೀಯ ಐತಿಹ್ಯ, ಚರಿತ್ರೆ ಹಾಗೂ ಇತರ ಜನಪದ ಸಾಮಗ್ರಿಯನ್ನು ಬಳಸಿಕೊಂಡು ಲಾವಣಿ ಸೃಷ್ಟಿಯಾಗುತ್ತದೆ. ಕಾಲದ ಬಗೆಬಗೆಯ ಯಾತ್ರೆಗಳಲ್ಲಿ ಇದು ಜನತೆಯ ಬಾಯಲ್ಲಿ ಬಗೆ ಬಗೆಯ ರೂಪಗಳನ್ನು ಪಡೆಯುತ್ತ ಸಾಗುತ್ತದೆ. ವಸ್ತು, ಘಟನೆ ಶೈಲಿಗಳಲ್ಲಿ ಅಷ್ಟೇನೂ ಅನುಚಿತ ಎನ್ನಲಾಗದಂತ ಬದಲಾವಣೆಗಳನ್ನು ಸಾಧಿಸಿಕೊಂಡು ಸಾಗುತ್ತದೆ. ಲಾವಣಿ ಮಧ್ಯಯುಗದ ಕಾಣಿಕೆ; ಖಂಡಿತ ಆದಿಮಾನವ ಸಮಾಜದಿಂದ ಬಂದದ್ದಲ್ಲ; ಅತ್ಯಂತ ಕಲಾತ್ಮಕವಾದ ಕಷ್ಟಸಾಧ್ಯವಾದ ರೂಪ. ಸಂಗೀತ ಅದರಲ್ಲಿ ಬೇರ್ಪಡಿಸಲಾಗದ ಒಂದು ಭಾಗವಾಗಿ ಬೆರೆತು ಬಂದಿದೆ. ವೃತ್ತಿಗಾಯಕರು, ಅಲೆಮಾರೀ ವಿದ್ಯಾವಂತರು, ಲಾವಣಿ ಸಾಹಿತ್ಯವನ್ನು ವ್ಯವಸ್ಥೆಗೊಳಿಸಿ ಸಂಸ್ಕರಿಸಿದರು. ಒಂದು ಲಾವಣಿ ರಚನೆಯಾದ ಮೇಲೆ ಜನಪದವನ್ನು ಪ್ರವೇಶಿಸುತ್ತದೆ. ವರ್ಷಗಳ ಹಾಡುವಿಕೆಯಲ್ಲಿ ಜನಪದ ಅದನ್ನು ಬದಲಿಸಿ ತಿದ್ದಿ ಪರಿಷ್ಕರಿಸಿ ತನ್ನ ಸ್ಥಿರವಾದ ಮುದ್ರೆಯನ್ನು ಒತ್ತುತ್ತದೆ. ಮಧ್ಯಯುಗದಲ್ಲಿ ಬಗೆಯ ಸಾಹಿತ್ಯ ಯೂರೋಪಿನಲ್ಲಿ ಸೃಷ್ಟಿಯಾಯಿತು ಎಂದು ಭಾವಿಸಲಾಗಿದೆ" (1991:2–3) ಎಂಬುದಾಗಿ ಲಾವಣಿಯ ಇತಿಹಾಸದ ಘಟ್ಟದ ಬಗ್ಗೆ ಹೊಳಹು ಬೀರಿದ್ದಾರೆ. ಅಲ್ಲದೆ ಇಂಗ್ಲಿಷಿನ ಅನೇಕ ವಿದ್ವಾಂಸರು ಲಾವಣಿ (ಬ್ಯಾಲಡ್ಸ್)ಗಳ ಬಗ್ಗೆ ಚರ್ಚಿಸಿರುವುದು ಗಮನಾರ್ಹ. 'ಕನ್ನಡ ಲಾವಣಿಗಳ ಸಂಗ್ರಹ'[13] ಕುರಿತಂತೆ ಹದಿನಾಲ್ಕನೇ ಸಂಪುಟದಲ್ಲಿ ಪ್ರಕಟವಾಗಿದೆ.

1. 1972ರಲ್ಲಿ ಕನ್ನಡದಲ್ಲಿ ಪ್ರಕಟವಾದ ಫ್ಲೀಟ್ ಸಂಗ್ರಹಿಸಿದ ಐದು ಲಾವಣಿಗಳ ಯಥಾವತ್ತು ರೂಪ ಇದೆ. ಆ ಪ್ರಕಾರ, **"ಸಂಗೊಳ್ಳಿ ರಾಯಣ್ಣನ ದಂಗೆ** ಕುರಿತಂತೆ ಘಟನಾ ಸಂದರ್ಭದ ಲಾವಣ ಇದೆ.[14] ಲಾವಣಿ ಹಾಡಿನಲ್ಲಿ ಕೊಡಲಾಗಿರುವ ಘಟನೆಗಳು ಬೆಳಗಾಂ ಜಿಲ್ಲೆಯ ಚಾರಿತ್ರಿಕ ವೃತ್ತಾಂತಗಳಲ್ಲಿಯೇ ಶ್ರೇಷ್ಠವಾದುದು." (1991:32–35)

"ಕಿತ್ತೂರಿನ ದೇಸಾಯಿಗಳು ಬಡಜನತೆಯ ಬಗೆಗೆ ತೋರಿಸುತ್ತಿದ್ದ ಆಧರ, ಪ್ರೀತಿ ಅವರನ್ನು ನಂಬಿಕಸ್ಥರನ್ನಾಗಿ ಮಾಡಿತು. ಇದು 1829ರ ಸಂದರ್ಭದಲ್ಲಿ ಆದ ಘಟನೆ. ಸಂಗೊಳ್ಳಿ ರಾಯಣ್ಣ ಜನರಿಗೆ ಬೇಕಾಗಿದ್ದಂತೆ ಇಂಗ್ಲಿಷ್ ಅಧಿಕಾರಿಗಳಿಗೂ ಬೇಕಾಗಿದವನಾಗಿದ್ದ. ಆತನ ಮುಂದಾಳುತ್ವದಲ್ಲಿ ಇಂಗ್ಲಿಷ್ ಆಡಳಿತ ಕಛೇರಿ, ವಿರೋಧಿ ಗುಂಪುಗಳ ಸರ್ವನಾಶಕ್ಕೆ ನಾಂದಿಯಾಯಿತು. ಇದರಿಂದ ಧಾರವಾಡದ ಸಾಹೇಬನಿಗೆ ಭಯ ಹುಟ್ಟಿತು. ಸಾಹೇಬನು ರಾಯಣ್ಣನ ಹುಡುಕಾಟಕ್ಕಾಗಿ ಸೋತ. ನಂತರ ರಾಯಣ್ಣನನ್ನು ಹಿಡಿದುಕೊಟ್ಟವರಿಗೆ ಬಹುಮಾನ ಕೊಡುತ್ತೇನೆಂದು ಸಾರಿದ. ಮೂವರು ದ್ರೋಹಿಗಳು ಆತನನ್ನು ವಿಶ್ವಾಸಗೇಡಿತನದಿಂದ ಧಾರವಾಡದ ಸಾಹೇಬನಿಗೆ ಒಪ್ಪಿಸಿದರು. ಇಂಗ್ಲಿಷ್ ಸರಕಾರ ರಾಯಣ್ಣನ ವೀರತನಕ್ಕೆ ಮೆಚ್ಚಿಕೊಂಡದ್ದು ಮಾತ್ರವಲ್ಲ, ಸಾಯಿಸುವುದಕ್ಕೂ ಕನಿಕರ ಪಟ್ಟಿತು. ಆದರೆ ಧಾರವಾಡದ ಸಾಹೇಬ ಇಂಗ್ಲಿಷ್ ಮೇಲಾಧಿಕಾರಿಗಳ ಹುಕುಂ ಬರುವುದರೊಳಗೆ ರಾಯಣ್ಣನನ್ನು ಗಲ್ಲುಕಂಬಕ್ಕೇರಿಸಿದ. ರಾಯಣ್ಣನ ಇಚ್ಚೆಯಂತೆ ಸಕಲ ಮರ್ಯಾದೆಯಿಂದ ಆತನ ಶವಕ್ಕೆ ಅಂತಿಮ ಸಂಸ್ಕಾರ ಮಾಡಲಾಯಿತು. ಆತನ ಇಷ್ಟದಂತೆ ಚಿಗುರುವ ಮರಕ್ಕೆ ನೇಣಿಗೆ ಏರಿಸಲಾಯಿತು. ಇಂದಿಗೂ ಆತನನ್ನು ಮಣ್ಣು ಮಾಡಿದ ಸ್ಥಳದಲ್ಲಿ ಪೂಸುತ್ತಾರೆ."**[15]** (1991:4–9) ಸಂಗೊಳ್ಳಿರಾಯಣ್ಣನ ವೀರತನವನ್ನು ಲಾವಣೀಕಾರರು ಬಹು ಚೆನ್ನಾಗಿ ಹಾಡುತ್ತಾರೆ. ಫ್ಲೀಟ್ ಸಂಗ್ರಹಿಸಿದ ಪಠ್ಯದಲ್ಲಿ 12 ನುಡಿಗಳಿವೆ. 'ಮಂಡಲ ಹೆಬ್ಬಳ್ಳಿ ಪುಂಡರು ಬಸವರು ಮಾಡಿದ ಲಾವಣಿ'(1991:47) ಎಂಬ ಉಲ್ಲೇಖಗಳು ಮುಖ್ಯವಾಗುತ್ತವೆ.

2. ಆದಾಯ ತೆರಿಗೆಗೆ ಸಂಬಂಧಿಸಿದ ಲಾವಣಿ ಹಾಡಿನಲ್ಲಿ, ಸಾಹೇಬ ಆದಾಯ ವಸೂಲಿ ಮಾಡುವ ದೌರ್ಜನ್ಯವನ್ನು ವಿವರಿಸಲಾಗಿದೆ.**[16]** "1860ರ ಜುಲೈ 31ರಿಂದ ಜಾರಿಗೆ ಬಂದ 32ನೆಯ ಕಾಯಿದೆಯ ಪ್ರಕಾರ ಆಸ್ತಿ, ಉದ್ಯೋಗ, ವ್ಯಾಪಾರ ಹಾಗೂ ಕಚೇರಿಗಳ ಆದಾಯಗಳ ಮೇಲೆ ಹಾಕಿದ ಸುಂಕವನ್ನು ಕುರಿತದ್ದು ಲಾವಣಿ. 1868ರ 8ನೆಯ ಕಾಯಿದೆ ಬರುವ ತನಕ ಹಿಂದಿನ ಕಾಯಿದೆ ರದ್ದಾಗದಿದ್ದರೂ ಹಾಡಿನಲ್ಲಿ ಬರುವ ಹೇಳಿಕೆಯಿಂದ ನಮಗೆ ತಿಳಿದು ಬರುವಂತೆ, ಸುಂಕ ಕೇವಲ ಎರಡು ವರ್ಷಗಳವರೆಗೆ ಮಾತ್ರ ಸಂಗ್ರಹಿತವಾಯಿತು. ನಂಬಿಕೆಯಾಗುವ ಯಾವ ಅಂಶವೂ ಹಾಡಿನಲ್ಲಿಲ್ಲ. ಯಾವಾಗಲೂ ಗಮನಿಸಲ್ಪಡುತ್ತಿದ್ದ ಆದಾಯ ಹಾಗೂ ಸನದು ತೆರಿಗೆಗಳ ಬಗ್ಗೆ ಇದ್ದ ಅಪಖ್ಯಾತಿ ಹಾಗೂ ಸಂಶಯಗಳನ್ನು ಕುರಿತು ಹಾಡು ಉದ್ದಕ್ಕೂ ಸರಳವಾಗಿ ವಿವರಿಸುತ್ತ ಹೋಗುತ್ತದೆ. ಅದರಲ್ಲೂ ಭೂಕಂದಾಯವನ್ನು ತೆರುತ್ತಿದ್ದ ಬೇಸಾಯಗಾರರು ಮುಖ್ಯರು. ತರಹದ ನೇರ ತೆರಿಗೆ ಅವರಿಗೆ ಹೊರೆಯಾಗಲಿ ಎಂದಾಗಲೀ, ಅಪರೂಪದ ಸಂದರ್ಭಗಳಲ್ಲಿ ರಕ್ಷಣೆಯಾಗಲಿ ಎಂದಾಗಲೀ, ಅಲ್ಲ. ಆದರೆ ಹೆಚ್ಚು ಕಡಿಮೆ ಅಂಥ

ತೆರಿಗೆಗಳು ಅವರ ಮೇಲೆಯೇ ಹೆಚ್ಚಾಗಿ ಬೀಳುತ್ತಿದ್ದುದರಿಂದ ಅದರಿಂದುಂಟಾಗುತ್ತಿದ್ದ ಫಲಿತಾಂಶಗಳನ್ನು ತಡೆಯಲು ಇಂಗ್ಲಿಷ್ ಜಿಲ್ಲಾಧಿಕಾರಿಗಳ ಎಲ್ಲ ಪ್ರಯತ್ನಗಳನ್ನು ವಿರೋಧಿಸಲಾಗುತ್ತಿತ್ತು.

ಹಾಡಿನ ಪ್ರಮುಖ ಅಂಶಗಳು ತಿಳಿಸುವಂತೆ, ಸಾಮಾನ್ಯ ಉದ್ದೇಶಗಳಿಗೆ ಶೇಕಡಾ ಮೂರರಂತೆಯೂ, ರಸ್ತೆಗಳು ಕಾಲುವೆಗಳು ಹಾಗೂ ಇತರ ರಿಪೇರಿ ಕೆಲಸಗಳಿಗಾಗಿ ಶೇಕಡಾ ಒಂದಂರಂತೆಯೂ ಸುಂಕವನ್ನು ವಿಧಿಸಲಾಗುತ್ತಿತ್ತು. ರಸ್ತೆ ಮಾಡಿಸುವುದು ಹಾಗೂ ಇತರ ರಿಪೇರಿ ಕೆಲಸಗಳನ್ನು ನಡೆಸುವುದು ಮುಂತಾದ ಯೋಜನೆಗಳೆಲ್ಲ ರೈತರ ಹಣವನ್ನು ಸುಳಿಯುವುದಕ್ಕಾಗಿ ಕಂದಾಯದ ಅಧಿಕಾರಿ ಒಡ್ಡುತ್ತಿದ್ದ ನೆವಗಳಾಗುತ್ತಿದ್ದವು. ಅಲ್ಲಿ ಕೆಲವು ನಿಯಮಗಳಿದ್ದುವು. ವಾರ್ಷಿಕ ಆದಾಯ ಇನ್ನೂರು ರೂಪಾಯಿಗಳಿಗಿಂತ ಕಡಿಮೆ ಇದ್ದರೂ ತೆರಿಗೆ ವಿಧಿಸಲ್ಪಡಬೇಕು; ಒಟ್ಟು ಮೊತ್ತ ಕಡೆಯ ಪಕ್ಷ ಆರುನೂರು ರೂಪಾಯಿಗಳನ್ನು ಮುಟ್ಟದಿದ್ದರೂ, ಬರೀ ಬೇಸಾಯದ ಕಸುಬುಗಳಿಂದ ಆದಾಯವಿಲ್ಲದಿದ್ದರೂ, ತೆರಿಗೆ ವಿಧಿಸಲ್ಪಡುಬೇಕು; ಐದುನೂರು ರೂಪಾಯಿಗಳಿಗಿಂತ ಕಡಿಮೆ ಆದಾಯಗಳಿಂದ ಶೇಕಡಾ ಎರಡರಷ್ಟು ಸಂಗ್ರಹಿಸಲ್ಪಡಬೇಕು; ಹಾಗೂ ಸಾರ್ವಜನಿಕ ಕೆಲಸಗಳಿಗೆ ಶೇಕಡಾ ಒಂದರಷ್ಟೂ ಇಲ್ಲ. 'ಜನಪ್ರಿಯ ಶೂರ ಹಿತ್ತಾಲಿ ವೀರಭದ್ರ' ದೃಶ್ಯದಲ್ಲಿ ಕಾಣಿಸಿಕೊಂಡಾಗ, ಅಪೀಲು ವಿಚಾರಣೆಯ ಅಧಿಕಾರಗಳನ್ನುಳ್ಳ ಅಧಿಕಾರಿಯಿಂದುಂಟಾದ ವಿಚಾರಣೆಗಳಿಗೆ ಉತ್ತರಿಸುತ್ತ, ತನ್ನ ಹಳ್ಳಿಯ ಜನಗಳ ಆದಾಯಗಳಿಗನುಸಾರವಾಗಿ ಪ್ರಾಮಾಣಿಕವಾಗಿ ಐದುನೂರು ರೂಪಾಯಿಗಳ ಮಿತಿ ಹಾಕಿದುದು, ಕಂದಾಯದ ಅಧಿಕಾರಿ ಹಾಗೂ ಹಳ್ಳಿಗರಿಗೆ ಸಂತೋಷವಾಗುವಂತೆ ಇತ್ತು." (1991:48–49)

ಹಾಡಿನ ಉದ್ದಕ್ಕೂ ಪಲ್ಲವಿಯ ಧಾಟಿ ಇರುತ್ತದೆ. ಪ್ರತೀ ಪಾದಗಳ ಕೊನೆಗೆ ಅಂತ್ಯ ಪ್ರಾಸವಿದೆ. ಒಟ್ಟು ಆರು ನುಡಿಗಳಲ್ಲಿ ಹಾಡು ಮುಗಿಯುತ್ತದೆ. ಹಾಡು ಎಲ್ಲಿ ಹುಟ್ಟಿತು, ಯಾರು ಹಾಡನ್ನು ಹೇಳಿದರು ವಿವರವನ್ನು ಕೊನೆಯಲ್ಲಿ ಹಾಡಿನ ಜೊತೆಗೆ ಕೊಡಲಾಗಿದೆ. "ಪದಾ ಹುಟ್ಟಿತ ಹುಬ್ಬಳ್ಯಾಗ, ಅಂಕುಸ್–ತುರಾಯ ಡಬ್ಬಿನ ಮ್ಯಾಗ, ವಸ್ತಾದ ಹನುಮಂತ್ರಾರ್ವ ಮಗ, ಗುರು ಸಿದ್ದೇಶ ದಯಾನ ಮ್ಯಾಗ, ಕವಿ ಗುರುಸಿದ್ಧ ದಾನ–ಚಾತುರಾ, ಮಾಡಿ ಹೇಳಿದಾನ ಅಕ್ಷರಾ, ಕುಂತ ಕೇಳಾರೇಣ್ಣಾ ಮಜಕೂರಾ ಆದ ಪೇತಿ" (1991:56) ಎಂಬುದಾಗಿ ಉಲ್ಲೇಖವಿದೆ.

3. **'ಹಲಗಲಿಯ ಬೇಡರು'**[17] ಲಾವಣಿಯಲ್ಲಿ ಬೇಡರು ನಿರಾಯುಧರಾಗಬೇಕೆಂದು ಬ್ರಿಟಿಷರು ಹುಕುಂ ಮಾಡಿರುವುದನ್ನು ಚಿತ್ರಿಸಲಾಗಿದೆ. "ಬ್ರಿಟಿಷ್ ಸರಕಾರ ಜನರಲ್ಲಿರುವ

ಎಲ್ಲಾ ಆಯುಧಗಳನ್ನು ವಶಪಡಿಸಿಕೊಂಡಿತು. ಪರಿಸ್ಥಿತಿ ಹೀಗಿರುವಾಗ ಮುಂಧೋಳ ರಾಜ್ಯದ ಹಲಗಲಿ ವೀರರಾದ ಪೂಜಾರಿ ಹಣಮ, ಬಾಲ, ಜಡಗ, ರಾಮ ಮೊದಲಾದವರು ಹುಕುಂಗೆ ವಿರೋಧವಾಗಿ ಮುಂದುವರೆದರು. ಹಾಗೂ 'ನಾವು ನಾಲ್ಕು ಮಂದಿ ಕೈಯಿನ ಹತಾರನ್ನು ಕೊಡಬಾರದು. ಕೊಟ್ಟರೆ ನಮ್ಮ ೀವ ಹೋದಂತೆ' ಎಂದು ಪ್ರತಿಜ್ಞೆ ಕೈಗೊಳ್ಳುತ್ತಾರೆ. ಕುಂಪಣಿ ಸರಕಾರಕ್ಕೆ ಆಯುಧಗಳನ್ನು ಒಪ್ಪಿಸಬೇಡಿ. ಜಗಳ ಮಾಡಿರಿ, ನಿಮಗೆ ಸಹಾಯಕರಾಗಿ ನಾವು ಇರುತ್ತೇವೆ ಎಂದು ಸುತ್ತಿನ ಹಳ್ಳಿ ಮಂದಿಗೆ ಹಾಗೂ ದೊರೆಗಳಿಗೆ ತಿಳಿಸಿದರು. ಬೇಡರಿಗೆ ಆಯುಧವೇ ಜೀವನಾಧಾರವಾಗಿರುವುದರಿಂದ ಪ್ರತಿಜ್ಞೆ ಮಾಡುವುದು ಅವರ ನೈತಿಕತೆಗೆ ಅನಿವಾರ್ಯವಾಯಿತು. ಆದರೆ ಬ್ರಿಟಿಷರು ಯಾಕೆ ಆಯುಧಗಳನ್ನು ಜನರಿಂದ ಕಸಿದುಕೊಳ್ಳುವುದಕ್ಕೆ ಪ್ರಯತ್ನಿಸಿದರು ಎಂಬುದಕ್ಕೆ ಚಾರಿತ್ರಿಕ ದಾಖಲೆಗಳು ಇವೆ. ವಸಾಹತು ಬ್ರಿಟಿಷರಿಗೆ ತಮ್ಮ ಸಾಮ್ರಾಜ್ಯ ವಿಸ್ತರಣೆಯ ತೊಡಕುಗಳು, ಗುಟ್ಟುಗಳು ಚೆನ್ನಾಗಿ ಗೊತ್ತಿದ್ದವು. ಹಾಗೂ ಅವರ ಎಲ್ಲಾ ಕಾರ್ಯ ಚಟುವಟಿಕೆಗಳು ಆಡಳಿತಾತ್ಮಕ ಸೂತ್ರಗಳಿಂದಲೇ ನಡೆಯುತ್ತಿದ್ದವು. 1857ರ 28ನೆಯ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದ ಮೇಲೆ ಆಮದು, ತಯಾರಿಕೆ, ಶಸ್ತ್ರಗಳನ್ನೂ ಮದ್ದುಗುಂಡುಗಳನ್ನೂ ಮಾರಾಟ ಮಾಡುವಿಕೆ, ಹಾಗೂ ಇಟ್ಟುಕೊಳ್ಳುವ ಅಥವಾ ಬಳಸಿಕೊಳ್ಳುವ ಹಕ್ಕನ್ನು ವ್ಯವಸ್ಥೆಗೊಳಿಸುವುದಕ್ಕೆ ಸಂಬಂಧಿಸಿದ ಕಾಯಿದೆ ಈಸ್ಟ್ ಇಂಡಿಯ." (ಐ.ಎ., 1987:ಸಂ:16, ಪು:356)

"ಕುಂಪಣಿ ಸರ್ಕಾರ–ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿದ್ದ ಪ್ರತಿಯೊಂದು ತರಹದ ಎಲ್ಲ ಆಯುಧಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಲು ಆಜ್ಞೆ ಹೊರಡಿಸಿತು" (1991:57) ಎಂದು ಫ್ಲೀಟ್ ಬರೆದಿರುತ್ತಾರೆ. 1857ರ ಅವಧಿಯಲ್ಲಿ ಭಾರತದಲ್ಲಿ ಆದ ಮಹಾದಂಗೆ ಅಥವಾ ಸಿಪಾಯಿದಂಗೆಯನ್ನು ಸಂದರ್ಭದಲ್ಲಿ ಉಲ್ಲೇಖಿಸಬೇಕಾಗುತ್ತದೆ. ಬ್ರಿಟಿಷರು ಒಡ್ಡಿದ ಬಣಕ್ಕೆ ಅವರೇ ಬೆಂಕಿಕೊಟ್ಟುಕೊಂಡಂತೆ ಆ ದಂಗೆಯಲ್ಲಿ ಆದ ನಷ್ಟ ಅವರನ್ನು ಕಂಗೆಡಿಸಿತು, ಇದರ ಪರಿಣಾಮ ಜನರನ್ನು ನಿರಾಯುಧರನ್ನಾಗಿ ಮಾಡುವುದು ಅವರ ಅಧಿಕಾರ ನೀತಿಯಲ್ಲಿ ಒಂದಾಯಿತು. ಹಂತ ಹಂತವಾಗಿ ಜನರ ಸ್ವಾತಂತ್ರ್ಯವನ್ನು ಸದೆಬಡಿವ ಬ್ರಿಟಿಷ್ ತಂತ್ರಕ್ಕೆ ಹಲಗಲಿಯ ಬೇಡ ವೀರರು ಎದುರು ಬೀಳುವುದು ಲಾವಣಿಯಲ್ಲಿ ಎದ್ದು ಕಾಣುತ್ತದೆ.

"ಇದೊಂದು ಅತ್ಯಂತ ಪರಿಣಾಮಕಾರೀ ಲಾವಣಿಯೆನ್ನುವುದಕ್ಕೆ ಪ್ರಮುಖ ಕಾರಣ ಇದರ ಅದ್ಭುತ ವರ್ಣನೆಗಳು. ನಾಲ್ವರು ಶೂರರು ಸೆಟೆದು ನಿಂತು ಪ್ರತಿಜ್ಞೆ ಕೈಗೊಳ್ಳುವುದಾಗಲಿ, ಆಯುಧವನ್ನು ಕಳೆದುಕೊಳ್ಳುವಾಗಿನ ಜನರ ದುಃಖವಾಗಲಿ,

ದಂಡು ಹಲಗಲಿಯನ್ನು ಮುತ್ತಿದ ಎರಡು ಸಂದರ್ಭಗಳಾಗಲಿ, ಯುದ್ಧದ ವರ್ಣನೆಗಳಾಗಲಿ, ಆಯುಧ ತೆಗೆದುಕೊಳ್ಳಲು ಬಹಳ ಜೋರು ಮಾಡಿದ ಶೂರನೊಬ್ಬನ ಚಿತ್ರವಾಗಲಿ, ಸಿಪಾಯಿಗಳು ದೋಚಿದ ವಸ್ತುಗಳ ಪಟ್ಟಿಯಾಗಲಿ–ಒಂದೊಂದೂ ಪರಿಣಾಮಕಾರೀ ವರ್ಣನೆಗಳಿಂದ ಕೂಡಿ ರಂಜಿಸುತ್ತದೆ"[18] (1991:15) ಎಂಬುದಾಗಿ ಕ್ಯಾತಹಳ್ಳಿ ರಾಮಣ್ಣ ಅಭಿಪ್ರಾಯಪಟ್ಟಿದ್ದಾರೆ.

4. ಸಂಗ್ಯನ ಅಪರಾಧ ಹಾಗೂ ಸಾವು[19] ಲಾವಣಿಯನ್ನು ವ್ಯಾಪಾರಿಯೊಬ್ಬನ ಕೊಲೆಯ ಹಿನ್ನೆಲೆಯಲ್ಲಿ ರಚಿಸಲಾಗಿದೆ. ಇದು ಬೆಳಗಾಂ ಜಿಲ್ಲೆಯಲ್ಲಿ ನಡೆದಂತಹ ಒಂದು ಘಟನೆ. ಬೆಳಗಾಂನಲ್ಲಿ ಇದು ಬಹು ಜನಪ್ರಿಯವಾದ, ಅಚ್ಚುಮೆಚ್ಚಿನ ಲಾವಣಿಯಾಗಿದೆ.[20] ಲಾವಣಿಯಲ್ಲಿ ಬ್ರಿಟಿಷರ ಪ್ರವೇಶವಿಲ್ಲ. ಬಡವರನ್ನು ಸುಲಿದು ತಿನ್ನುವ ಬಂಡವಾಳಶಾಹಿ ಜನ ಆವತ್ತೂ ಇದ್ದರು ಎಂಬ ಸಂಗತಿಯನ್ನು ಸಾರುತ್ತದೆ. ಅನೇಕ ಹೃದಯಸ್ಪರ್ಶಿ ವಾಕ್ಯಗಳಿವೆ ಎಂಬ ಫ್ಲೀಟರ ಮಾತಿಗೆ ಸಂದರ್ಭಗಳೂ ಇವೆ. ಇಡೀ ಹಾಡು ಪರಿಣಾಮಕಾರೀ ವರ್ಣನೆಗಳಿಂದ ಕೂಡಿದೆ ಎಂದು ಫ್ಲೀಟ್ ಹೇಳುತ್ತಾರೆ (1991:18) ಎಂಬುದಾಗಿ ಕ್ಯಾತನಹಳ್ಳಿಯವರ ಅಭಿಪ್ರಾಯ.

"1863ರ ಅಕ್ಟೋಬರ್ 12ರಂದು ಬೈಲಹೊಂಗಳದಲ್ಲಿ ಒಬ್ಬ ವ್ಯಾಪಾರಿಯ ಕೊಲೆಯ ಬಗ್ಗೆ ಲಾವಣಿಯಲ್ಲಿ ವಿವರಣೆಯಿದೆ. ಕೊಲೆಯಾದವನು ಒಬ್ಬ ಲೇವಾದೇವಿ ವ್ಯಾಪಾರಿ ಬಸಲಿಂಗಪ್ಪ ಎಂಬಾತ. ಆತ ಸಂಗ್ಯಾ ಎಂಬಾತನಿಗೆ ಸಾಲಕೊಟ್ಟಿರುತ್ತಾನೆ. ಆ ಸಾಲವನ್ನು ಮರುಪಾವತಿ ಮಾಡಲು ಸಾಧ್ಯವಾಗದೆ ಸಂಗ್ಯಾ ತನ್ನ ಭೂಮಿಯನ್ನು ಒತ್ತೆಯಿಡ ಬೇಕಾಗುತ್ತದೆ. ಆದರೆ ವ್ಯಾಪಾರಿ ಕೊಟ್ಟಿರುವ ಸಾಲಕ್ಕೆ ಆ ಭೂಮಿ ಸಾಕಾಗುವುದಿಲ್ಲ. ವ್ಯಾಪಾರಿಯು ಸಂಗ್ಯನ ಮೇಲೆ ಧಾರವಾಡ ನ್ಯಾಯಾಂಗಕ್ಕೆ ಕೇಸು ದಾಖಲಿಸುತ್ತಾನೆ. ಸಂಗ್ಯನಿಗೆ ಸೋಲಾಗುತ್ತದೆ. ಹೀಗಾಗಿ ಸಂಗ್ಯ ತನ್ನ ಸಹೋದರ ಪರ್ಸ್ಯನೊಂದಿಗೆ ವ್ಯಾಪಾರಿಯ ಕೊಲೆ ಸಂಚು ಹೂಡುತ್ತಾನೆ. ವ್ಯಾಪಾರಿಯನ್ನು ಕೊಲೆ ಮಾಡುತ್ತಾನೆ. ವ್ಯಾಪಾರಿ ಬಸಲಿಂಗಣ್ಣನ ಕೊಲೆಯ ಆಧಾರ ನ್ಯಾಯಾಲಯವು ಸಂಗ್ಯನಿಗೆ ಮರಣದಂಡನೆ ವಿಧಿಸುತ್ತದೆ."

"ಫ್ಲೀಟ್ ಪ್ರತಿಯೊಂದು ಲಾವಣಿಯ ಮೊದಲಲ್ಲಿ ಕೊಡುವ ಲೇಖನಗಳಿಂದ ಆಗುವ ಪ್ರಯೋಜನಗಳಲ್ಲಿ ಇದೂ ಒಂದು. ಸಂಗ್ಯ ಪರ್ಸ್ಯ ಇಬ್ಬರೂ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ ಎಂದು ಫ್ಲೀಟ್ ಹೇಳುತ್ತಾರೆ. ಆದರೆ ಓಡಿ ಹೋದುದನ್ನು ಹಿಡಿಯಿರಿ, ಹಿಡಿಯಿರಿ ಎಂದು ಜನ ಕೂಗಿಕೊಂಡದ್ದನ್ನು ಲಾವಣಿಯೇ ಹೇಳುತ್ತದೆ. ಬಹುಶಃ ಗಾಬರಿ ಹೆಚ್ಚಿ ಓಡುತ್ತಿರಬೇಕು. ತುಂಬ ಗಾಬರಿಯಾಗಿದ್ದರು ಎಂಬುದಕ್ಕೆ

ಏನೂ ಅರಿಯುದ ಹೂವಿನರಾವು ಎಂಬುವನನ್ನು ಸಿಕ್ಕಿಸಿದ್ದು ಒಂದು ನಿದರ್ಶನವಾಗಬಹುದು. ಸುಲಭವಾಗಿಯಂತೂ ಸಿಕ್ಕಿ ಬಿದ್ದದ್ದು ನಿಜ. ಆದ್ದರಿಂದ ತಪ್ಪಿಸಿಕೊಳ್ಳುವ ಹಂಚಿಕೆಯೇನೂ ಅವರಲ್ಲಿರಲಿಲ್ಲ ಎಂಬ ಫ್ಲೀಟ್ ಅಭಿಪ್ರಾಯವನ್ನು ಮಾತ್ರ ಒಪ್ಪಬಹುದು. ಗಲ್ಲಿಗೆ ಹಾಕುವ ದಿನ ಸಂಗ್ಯನಿಗೆ ಹುಚ್ಚು ಹಿಡಿದಂತಾಗಿ ತನ್ನಷ್ಟಕ್ಕೆ ತಾನು ಬಳಬಳನೆ ಮಾತನಾಡಿಕೊಳ್ಳುವ ದೃಶ್ಯವಂತೂ ಕರುಣಾಜನಕವಾಗುತ್ತದೆ" (1991–18) ಎಂಬ ಮಾತನ್ನು ಕ್ಯಾತನಹಳ್ಳಿ ರಾಮಣ್ಣರು ವ್ಯಕ್ತಪಡಿಸಿದ್ದಾರೆ.

5. 'ಕಿತ್ತೂರ ಚೆನ್ನವ್ವನ ಸೊಸೆ'[21] ಲಾವಣಿಯನ್ನು ಬೆಳಗಾಂ ಜಿಲ್ಲೆಯ ಸಂಪಗಾಂ ತಾಲೂಕಿನ ಕಿತ್ತೂರು ಭಾಗದ ಒಂದು ಹಳ್ಳಿಯಲ್ಲಿ ಹೇಳುತ್ತಿದ್ದರೆಂದು ಫ್ಲೀಟ್ ಬರೆಯುತ್ತಾರೆ. ಕಿತ್ತೂರು ಭಾಗವು ದೇಸಾಯಿ ಮನೆತನದವರ ರಾಜಧಾನಿಯಾಗಿತ್ತು. ಶಿವಲಿಂಗಪ್ಪ ರುದ್ರಸರ್ಜನನೆಂಬ ದೇಸಾಯಿಯೇ ಮನೆತನದ ಕೊನೆಯವನು. ಆತನ ಹೆಂಡತಿ ರವ್ವ. ಆಕೆಗೆ ಮಕ್ಕಳಿರಲಿಲ್ಲ. ಶಿವಲಿಂಗಪ್ಪನ ಜೊತೆ ಮಲತಾಯಿ ಚನ್ನವ್ವನೂ ಇರುತ್ತಾಳೆ. 1824ರ ಸೆಪ್ಟೆಂಬರ್ 12ರಂದು ಆತ ಕಾಯಿಲೆಯಿಂದ ಸಾಯುತ್ತಾನೆ ಎಂಬುದನ್ನು ಇತಿಹಾಸ ಸ್ಪಷ್ಟಪಡಿಸುತ್ತದೆ. ಮಕ್ಕಳಿಲ್ಲದೆ ಸತ್ತ ಶಿವಲಿಂಗಪ್ಪನ ಮನೆತನದ ಅಧಿಕಾರಿಗಳು ಸುಳ್ಳು ಕರಾರುಗಳನ್ನು ಸಿದ್ಧಪಡಿಸುತ್ತಾರೆ. ಕರಾರಿನ ಪ್ರಕಾರ ದೇಸಾಯಿಯ ಪದವಿಯ ಚಿಹ್ನೆಯುಳ್ಳ ಹಾಗೂ ಆತನದೇ ಕೈ ಬರಹದಂತೆ ತೋರುವ ಪತ್ರವನ್ನು ಬ್ರಿಟಿಷ್ ಸರಕಾರಕ್ಕೆ ಒಪ್ಪಿಸಲಾಯಿತು. ಪತ್ರವು ದೇಸಾಯಿ ಮನೆತನಕ್ಕೆ ದತ್ತು ಪುತ್ರನ ಸ್ವೀಕಾರಕ್ಕೆ ಕೋರಿಕೆಯಾಗಿತ್ತು. ಆದರೆ ಬ್ರಿಟಿಷ್ ಸರಕಾರ ಪತ್ರವನ್ನು ಅಂಗೀಕಾರ ಮಾಡಲಿಲ್ಲ. ಹಾಗಾಗಿ ಕೋನೂರು ಮಲ್ಲಪ್ಪ ಹಾಗೂ ಇತರ ಅಧಿಕಾರಿಗಳವರು ಸೇರಿ ಸರ್ಕಾರದ ವಿರುದ್ಧ ದಂಗೆ ಹೂಡುತ್ತಾರೆ. ಅದಾಗಲೇ ಆಡಳಿತ ವ್ಯವಸ್ಥೆ, ಆರ್ಥಿಕ ಮೂಲಗಳು ಬ್ರಿಟಿಷರ ಹತೋಟಿಗೆ ಒಳಪಟ್ಟಿದ್ದುದರಿಂದ ದೇಸಾಯಿ ಕಡೆಯವರಿಗೆ ಸೋಲಾಯಿತು. ಸೋತ ದೇಸಾಯಿ ಕಡೆಯ ದಂಗೆಕೋರ ಮುಖಂಡರನ್ನು ಬಂಧಿಸಲಾಯಿತು. ಹೀಗೆ ಕಿತ್ತೂರ ಚೆನ್ನವ್ವನ ಸೊಸೆ ಲಾವಣಿಯು ಸ್ವಾತಂತ್ರ್ಯಪೂರ್ವ ಘಟ್ಟದ ಚಾರಿತ್ರಿಕ ಹಿನ್ನೆಲೆಯನ್ನು ಗ್ರಹಿಸುವುದಕ್ಕೆ ಆಕರ ಸಾಮಗ್ರಿಯಾಗಿದೆ. ಮುಖ್ಯವಾಗಿ ಲಾವಣಿಯು ಬ್ರಿಟಿಷ್ ಸರಕಾರದ ವಿರುದ್ಧ ದೇಸೀ ಜನರು ಕೈಗೊಳ್ಳುವ ತೀರ್ಮಾನಗಳನ್ನು ನಿರೂಪಿಸುತ್ತದೆ.

ಫ್ಲೀಟ್ ಸಂಗ್ರಹಿಸಿದ ಐದು ಲಾವಣಿಗಳ ಕೊನೆಗೆ ಹಾಡಿದವರ ಹೆಸರಿದೆ ಹಾಗೂ ವಿವರಗಳು ಸಂಗ್ರಹಿಸಿದ ಅಪ್ರಕಟಿತ ಲಾವಣಿಗಳಲ್ಲೂ ಉಲ್ಲೇಖವಾಗಿವೆ. ಇದು ಫ್ಲೀಟ್ ಅವರ ಸಂಗ್ರಹಕ್ಕೆ ವೈಜ್ಞಾನಿಕ ನೆಲೆಯನ್ನು ತಂದೊದಗಿಸಿದೆ.

ಎರಡನೆಯ ಭಾಗ: ಪುಸ್ತಕ ಎರಡು: ಅಪ್ರಕಟಿತ ಹಸ್ತಪ್ರತಿಯಿಂದ – ಇದರಲ್ಲಿ ಏಳು ವಿಭಾಗಗಳಿವೆ. ಭಾಗ ಒಂದು: ಲಾವಣಿ ಪದಗಳು, ಭಾಗ ಎರಡು: ಜೋಗುಳದ ಪದಗಳು, ಭಾಗ ಮೂರು: ದಂಡಕಗಳು, ಭಾಗ ನಾಲ್ಕು:ಇಂಗ್ಲಿಷ್ ಬರಹಗಳು, ಭಾಗ ಐದು:ಅನುಭಂದಗಳು, ಭಾಗ ಆರು:ಒಂದು ಮರಾಠಿ ಲಾವಣಿ ಹಾಗೂ ಭಾಗ ಏಳು:ಇತರೆ. ಏಳು ವಿಭಾಗಗಳಲ್ಲಿ ಒಳವಿಭಾಗಗಳನ್ನು ಮಾಡಲಾಗಿದೆ. ಭಾಗ ಒಂದರಲ್ಲಿ 12 ಅಪ್ರಕಟಿತ ಲಾವಣಿ ಪದಗಳಿವೆ. **1. ಲಾವಣಿ ಪದ, 2. ಬಾದಾಮೀ ಕಲೆ ಕೆಡವಿದ ಪದ, 3. ಮಂಡ್ರೋಲ ಸಾಹೇಬರ ಪದ, 4. ಕೊಲ್ಲಾಪೂರ ಮಹಾರಾಜನ ಪದ, 5. ಇಂಗ್ರೆ ಸಂಸ್ಥಾನದ ಮೇಲಿನ ಪದ, 6. ಸೋಮಾನಗಡದ ಪದ, 7. ಗಲಗಲಿ ದೇಸಾಯಿಯ ಪದ, 8. ಕಿತ್ತೂರ ಚೆನ್ನವ್ವನ ಪದ, 9. ಹಲಗಲಿಯ ಪದ, 10. ನರಗುಂದ ಮೇಲಿನ ಹಾಡು, 11. ನರಗುಂದ ಮೇಲಿನ ಪದ ಹಾಗೂ 12. ನರಗುಂದ ಪದ.**

ಫ್ಲೀಟ್ ಸಂಗ್ರಹಿಸಿದ ಲಾವಣಿಗಳು ಅಪ್ರಕಟಿತವಾಗಿರುವುದರಿಂದ, ಅವುಗಳ ಬಗೆಗೆ ಆತ ಬರೆದ ಯಾವುದೇ ಟಿಪ್ಪಣಿ ಇಲ್ಲ. ಆತ ಪ್ರಕಟಿಸಿರುವ 5 ಲಾವಣಿಗಳಿಗೆ ವಿವರವಾದ ಟಿಪ್ಪಣಿ ಹಾಗೂ ಆ ಲಾವಣಿಗಳ ಸರಳ ಅನುವಾದವನ್ನು ಬರೆಯಲಾಗಿದೆ. ಇತಿಹಾಸದ ಸಂದರ್ಭದಲ್ಲಿ ಆ ಲಾವಣಿಗಳ ರಚನೆಯ ಹಿಂದಿನ ವಿವರಗಳನ್ನೂ ನೀಡಲಾಗಿದೆ. ಪ್ರಸ್ತುತ ಸಂಪಾದನ ಕೃತಿಯಲ್ಲೂ ಕ್ಯಾತನಹಳ್ಳಿ ರಾಮಣ್ಣರು ಫ್ಲೀಟ್ ಸಂಗ್ರಹಿಸಿದ ಲಾವಣಿಗಳ ಯಥಾವತ್ತು ಅನುವಾದವನ್ನು ಮಾಡಿಕೊಟ್ಟಿದ್ದಾರೆ. ಫ್ಲೀಟ್ ವಿವರಿಸಿದ ಲಾವಣಿಗಳ ಹಲವು ಅಂಶಗಳನ್ನು ರಾಮಣ್ಣ ವಿವರಿಸಿದ್ದಾರೆ. ಫ್ಲೀಟ್ ನಂತರ ಸಂಗ್ರಹಿಸಿದ ಲಾವಣಿಗಳ ಬಗ್ಗೆಯಾಗಲಿ, ಪದಗಳ ಬಗ್ಗೆಯಾಗಲಿ ಯಾವುದೇ ಟಿಪ್ಪಣಿ ಬರೆದಿಲ್ಲ. ಫ್ಲೀಟ್ ಸಂಗ್ರಹಿಸಿದ ಲಾವಣಿಗಳಲ್ಲಿ ಪಲ್ಲಾ, ಪಲ್ಲಾ ಚಾಲ, ಚಾಲು ಚ್ಯಾಲ, ತೋಡ, ಏರು, ಯೇರ ಯೆರ ಯೆರ, ಪರ, ಇಳವ, ಮೊದಲ ಭಾಗ ಮಾಡಿಕೊಂಡಿದ್ದಾರೆ. ಇವು ಲಾವಣಿಗಳ ಹಾಡುಗಾರಿಕೆಗಾಗಿ ಮಾಡಿಕೊಂಡ ಕ್ರಮವಾಗಿರಬಹುದು. ಫ್ಲೀಟ್ ಸಂಗ್ರಹಿಸಿದ ಲಾವಣಿಗಳ ಕಾಲ, ದೇಶ, ಸ್ಥಳ ಹಾಗೂ ವ್ಯಕ್ತಿಗಳನ್ನು ಕೊನೆಯಲ್ಲಿ ನಿರೂಪಿಸಿದ್ದಾರೆ. ಪ್ರತೀ ಲಾವಣಿಗಳನ್ನು ಸಂಗ್ರಹಿಸಿ ಅಲ್ಲಿ ತಮ್ಮ ಸಹಿಯನ್ನು ಮಾಡುತ್ತಿದ್ದರು. ಅಧ್ಯಯನದ ದೃಷ್ಟಿಯಿಂದ ಇಲ್ಲಿರುವ ಸಂದರ್ಭದ ವಿವರಗಳು ಬಹಳ ಪ್ರಮುಖವಾಗಿರುತ್ತವೆ ಹಾಗೂ ಕೆಲವು ಪದಗಳ ಬಗ್ಗೆ ವಿವರಗಳನ್ನು ಕೊಡಲಾಗಿದೆ.

ಭಾಗ ಎರಡರಲ್ಲಿ ಜೋಗುಳದ ಪದಗಳನ್ನು ಕೊಡಲಾಗಿದೆ. **1. ಜೋಜೋ ಶಂಭುಲಿಂಗಾ, 2. ತೊಟ್ಟಿಲ ತೂಗುವ ಜೋಗುಳ ಪದಗಳು, 3. ಅಕ್ಕ ನಾಗಮ್ಮನ ಜೋಗುಳ ಪದವು ಹಾಗೂ 4. ಜೋಗುಳ ಪದ**ವೆಂದು ನಾಲ್ಕು ವಿಭಾಗ ಮಾಡಿಕೊಳ್ಳಲಾಗಿದೆ. ಒಂದನೆಯ ಹಾಗೂ ಮೂರನೆಯ ಪದಗಳ ರಚನೆ ಚೌಪದಿಯಲ್ಲಿ ಹಾಗೂ ಎರಡನೆಯ

ಹಾಗೂ ನಾಲ್ಕನೆಯ ಪದಗಳ ರಚನೆ ತ್ರಿಪದಿಯಲ್ಲೂ ಆಗಿದೆ. ಪ್ರಕೃತಿ ವರ್ಣನೆ ಹಾಗೂ ಮಕ್ಕಳ ಸೌಂದರ್ಯ ವರ್ಣನೆಯನ್ನು ಪದಗಳಲ್ಲಿ ಮಾಡಲಾಗಿದೆ.

ಭಾಗ ಮೂರರಲ್ಲಿ ದಂಡಕಗಳನ್ನು ಕೊಡಲಾಗಿದೆ. **1. ಕುಂಪಣಿ ಸರಕಾರದ ಪೂರ್ವಾಣಿ ದಂಡಕಾ, 2. ಕುಂಪಣಿ ಸರಕಾರದ ದಂಡಕ, 3. ಇಂಗ್ರ ರಾಜ್ಯದ ಮೇಲೆ ದಂಡಕ ಹಾಗೂ 4. ನರಗುಂದ ವೆಂಕಟೇಶನ ದಂಡಕ**ವೆಂದು ಕೊಡಲಾಗಿದೆ. ನಾಲ್ಕು ದಂಡಕಗಳ ಕೊನೆಗೆ 'ಕುರ್ತಕೋಟಿಯ ಕರ್ತು ಕಲ್ಮೇಶ್ವರನ, ಆರ್ಥಿಕುವರನು ಕೃಷ್ಣಗೌಡನು ದಂಡಕನ' ಎಂಬುದಾಗಿ ಉಲ್ಲೇಖಿಸಲಾಗಿದೆ.[22] ಜೊತೆಗೆ ಸಂಗ್ರಹದ ಸಂದರ್ಭವನ್ನೂ ಇದೆ. 'ಪರಯ್ಯೊ ಬಿಂನ ವೀರಭದ್ರಯ್ಯಾ ಗಣಾಚಾರಿ ಬಾದಾಮಿ 6 ಫೆಬ್ರುವರಿ ಸನ್ 1874 ಇಸವಿ' – ಎಂಬುದಾಗಿ ಅಡಿಟಿಪ್ಪಣಿಯಲ್ಲಿ ನಮೂದಿಸಲಾಗಿದೆ.

ಭಾಗ ನಾಲ್ಕರಲ್ಲಿ ಫ್ಲೀಟ್ ಬರೆದ ಇಂಗ್ಲಿಷ್ ಬರಹಗಳನ್ನು ಕೊಡಲಾಗಿದೆ. 1. A Lallaby or Swining Cradles, 2. About some Persons, 3. Supplementary to The Dandaka o the Honourable E. I. Company, 4. A songs o Bajiras, 5. Badami Lavani, 6. Akkanagavva, 7. Lavani o Naragunda, 8. Naragunda Lavani – ಒಟ್ಟು ಎಂಟು ಲೇಖನಗಳಲ್ಲೂ ಲಾವಣಿಗಳ ಕುರಿತಂತೆ ವಿವರಣೆಗಳಿವೆ. ಹಾಗೂ ಕೆಲವು ಕಾರುಣಿಕ ವ್ಯಕ್ತಿಗಳ ವಿವರಗಳೂ ಇವೆ.

ಭಾಗ ಐದರಲ್ಲಿ 13 ಟಿಪ್ಪಣಿಗಳ ಅನುಬಂಧವಿದೆ. ಕೆಲವು ಅಪೂರ್ಣ ಹಾಡುಗಳನ್ನು, ಪದಗಳನ್ನು, ಲಾವಣಿಗಳನ್ನು, ಹಸ್ತಪತ್ರಿಕೆಯಲ್ಲಿ ಬರೆದುಕೊಂಡ ಟಿಪ್ಪಣಿಗಳನ್ನು ಒಟ್ಟು ಮಾಡಲಾಗಿದೆ. 1. ಕೋಲುಪ, 2. ಕೋಲುಪದ, 3. ತಾ ಕೆಡುವ ತನ್ನಿಂದ, 4. ಗರ್ವ ನಿನಗ್ಯಾಕೊ, 5. ಲಾವಣೀ ಪದ, 6. ಬಾೀರಾಯನ ಹಾಡು, 7. ಕಿತ್ತೂರ ಮೇಲಿನ ಪದ, 8. ಕಿತ್ತೂರ ಚಂನವ್ವನ ಸೊಸಿ ಪದ, 9. ಬಾದಾಮಿ ಕಿಲ್ಲೆ ಕೆಡವಿದ ಪದ, 10. ನರಗುಂದದ ಪದ, 11. ನರಗುಂದ ಸಂಸ್ಥಾನದ ಪದ, 12. ಕೆಲವು ಪಲ್ಲಗಳು, 13. ಒಂದು ಅಪೂರ್ಣ ಲಾವಣಿ ಹಾಗೂ ಫ್ಲೀಟರ ಹಸ್ತಪ್ರತಿಯಲ್ಲಿರುವ ಕೆಲವು ಟಿಪ್ಪಣಿಗಳಿವೆ.

ಭಾಗ ಆರರಲ್ಲಿ, ಒಂದು ಮರಾಠಿ ಲಾವಣಿಯಿದೆ. 'ಗಿಲಿಜಾ ದುರ್ಗದ ಪೋವಾಡ' ಎಂಬ ಲಾವಣಿಯ 16 ಸಾಲುಗಳನ್ನೂ ಹಾಗೂ ಇದರ ಕನ್ನಡ ಅನುವಾದವನ್ನೂ ಕೊಡಲಾಗಿದೆ. ಲಾವಣಿಯು ಗಿಲಿಜಾ ದುರ್ಗದ ಮೇಲೆ ದಂಡೆತ್ತಿ ನಡೆದ 'ನಾನಾ ಭಾವೂನ ಲಾವಣೀ ಕಥೆ' ಎಂಬುದಾಗಿ ಅಡಿ ಟಿಪ್ಪಣಿಯಲ್ಲಿ ನೀಡಲಾಗಿದೆ.

ಭಾಗ ಏಳು ಇತರ ಭಾಗದಲ್ಲಿ ಒಂದು ಲಾವಣಿಯಿದೆ. ಲಾವಣಿಯನ್ನು ಪ್ರಾಚೀನ ಕಾಗದದ ಪ್ರತಿಯೊಂದರಿಂದ ಸಂಪಾದಿಸಲಾಗಿದೆ ಎಂಬುದಾಗಿ ಸಂಪಾದಕರು ಹೇಳಿದ್ದಾರೆ.

ಸಂಪಾದನಾ ಕೃತಿಯಲ್ಲಿ ಬಳಸಿಕೊಳ್ಳಲಾದ ಫ್ಲೀಟ್ ಸಂಗ್ರಹಿಸಿದ ಲಾವಣಿಗಳ, ಲೇಖನಗಳ ಮೊದಲ ಸಾಲು ಹಾಗೂ ಪುಟಗಳ ಸೂಚಿಯನ್ನು ನೀಡಲಾಗಿದೆ. ಅವುಗಳ ಕನ್ನಡ ಹಾಗೂ ಇಂಗ್ಲಿಷ್ ಶೀರ್ಷಿಕೆಗಳೆಂದು ಬೇರೆಯೇ ಇವೆ. ಲಾವಣಿಗಳಲ್ಲಿ ಬಳಕೆಯಾದ ಪದಗಳ ಅರ್ಥ ಸೂಚಿಯು 'ಜನಪದ ಶಬ್ದರೂಪಗಳು' ಎಂಬುದಾಗಿದೆ. ಒಟ್ಟಿನಲ್ಲಿ ಕೃತಿಯ ಬಗ್ಗೆ ಹೇಳುವುದಾದರೆ,

1. ಚರಿತ್ರೆಗೆ ಪೂರಕವಾದ ದಾಖಲೆಗಳನ್ನು ಒದಗಿಸುವಲ್ಲಿ ಫ್ಲೀಟ್ ಸಂಗ್ರಹಿಸಿದ ಲಾವಣಿಗಳು ಕನ್ನಡ ಜಾನಪದಕ್ಕೆ ಉತ್ತಮ ಪಂಕ್ತಿಯನ್ನು ಹಾಕಿಕೊಟ್ಟಿದೆ.

2. ಇಲ್ಲಿನ ಲಾವಣಿಗಳು ಹಲವಾರು ಘಟನೆಗಳನ್ನು ಒಳಗೊಂಡ ದುರಂತ ಕತೆಗಳು ಅಥವಾ ಐತಿಹಾಸಿಕ ದಾಖಲೆಗಳಾಗಿವೆ. ಸ್ವಾತಂತ್ರ್ಯಕ್ಕಾಗಿ ದೇಶೀಯರು ಬ್ರಿಟಿಷರೊಂದಿಗೆ ಹೊಂದಿದ್ದ ಮನೋಭಾವ ಎಂತಹದು ಎಂಬುದು ಲಾವಣಿಗಳಿಂದ ಸ್ಪಷ್ಟವಾಗುತ್ತದೆ. ವಸಾಹತುಶಾಹಿಯ ಪ್ರಬಲ ಒತ್ತಡದಲ್ಲಿ ಬ್ರಿಟಿಷ್ ಅಧಿಕಾರಿಗಳ ದುರ್ಬಲ ಆಡಳಿತಕ್ಕೆ ವಿರುದ್ಧ ಬಂಡಾಯವೆದ್ದ ಘಟನೆಗಳೇ ಹೆಚ್ಚು. ಬ್ರಿಟಿಷರ ಆಡಳಿತದ ಲೋಪದೋಷಗವನ್ನು ಕಂಡು ತಮ್ಮಲ್ಲೇ ಅನೇಕ ನಾಯಕರುಗಳಿಗೆ ಜನ ಪ್ರೋತ್ಸಾಹ ನೀಡಿ, ಆ ಮೂಲಕ ರಾಜ್ಯ ಕಟ್ಟುವುದು ಸಾಧ್ಯವೆಂದು ಹೋರಾಡಿದವರು. ಆದರೆ ಬ್ರಿಟಿಷರ ಹತೋಟಿಯಲ್ಲಿ ಜನ ನಿಯಂತ್ರಿತರಾದದ್ದು ಬಹಳ ಸುಲಭದಲ್ಲಿ. ಮದ್ದು ಗುಂಡುಗಳನ್ನು, ಯುದ್ಧೋಪಕರಣ ಗಳನ್ನು ವಶಪಡಿಕೊಳ್ಳುವುದರ ಮೂಲಕ ದೇಶೀಯರು ಶಸ್ತ್ರ–ಅಸ್ತ್ರಗಳಿಲ್ಲದೆ ವಂಚಿತರಾದರು. ನಂತರ ಒಂದು ಬಂದೂಕಿನಿಂದ ಹಲವರನ್ನು ಎದುರಿಸುವುದು ಬ್ರಿಟಿಷರಿಗೆ ಸುಲಭೋಪಾಯವಾಯಿತು. ಇನ್ನೊಂದೆಡೆ ಬಡತನದಲ್ಲಿದ್ದ ಮಂದಿಗೆ ಬ್ರಿಟಿಷರು ಹಣದ ಆಸೆ ತೋರಿಸಿದರು. ಆ ಮೂಲಕ ತಮ್ಮ ನಾಯಕರುಗಳನ್ನು ತಾವೇ ಪತ್ತೆ ಹಚ್ಚುವಲ್ಲಿ ದೇಸಿಗರನ್ನು 'ಛು' ಬಿಟ್ಟರು.

3. ಫ್ಲೀಟ್ ಸಂಗ್ರಹಿಸಿದ ಲಾವಣಿಗಳು ಬ್ರಿಟಿಷರ ವಿರುದ್ಧ ಬಂಡೆದ್ದ ದೇಶೀಯರ ಐತಿಹಾಸಿಕ ವಿವರಗಳನ್ನೊಳಗೊಂಡಿದೆ. ಇದರಿಂದಾಗಿ ಫ್ಲೀಟ್ ಎರಡು ಕೆಲಸಗಳನ್ನು ಏಕಕಾಲದಲ್ಲಿ ನಿರ್ವಹಿಸಿದ ಎನ್ನಬಹುದು. ಮೊದಲನೆಯದಾಗಿ, ಲಾವಣಿಗಳನ್ನು ಸಂಗ್ರಹಿಸುವುದಕ್ಕೆ ತೊಡಗಿದ್ದು, ತನ್ನ ಅಧ್ಯಯನಕ್ಕೆ ಇವತ್ತು ಚಾರಿತ್ರಿಕ ಮಹತ್ವವಿದೆ. ವಸಾಹತುಶಾಹಿ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಗಲಭೆಗಳ ಐತಿಹಾಸಿಕ ನಿದರ್ಶನಗಳು ನಮಗಿಂದು ಉಲ್ಲೇಖನೀಯ. ಚರಿತ್ರೆಯಲ್ಲಿ ಬಹುಮುಖ್ಯ ವ್ಯಕ್ತಿಯಾಗಿ ಫ್ಲೀಟ್ ಉಳಿದುಕೊಂಡಿದ್ದಾನೆ. ಎರಡನೆಯದಾಗಿ, ಫ್ಲೀಟ್ ತನ್ನ ವೃತ್ತಿಯ ಜವಾಬ್ದಾರಿಯನ್ನು ನಿರ್ವಹಿಸಿರುವುದು. ಜನರು ಹಾಡುವ ಹಾಡುಗಳ, ಲಾವಣಿಗಳ ಸಾಹಿತ್ಯಕ ಅಂಶಗಳನ್ನು

ಗ್ರಹಿಸಿಕೊಂಡು, ಅಷ್ಟೇ ಜಾಗ್ರತೆಯಾಗಿ ಸಂಗ್ರಹಿಸಿರುವುದು. ಇದರಿಂದಾಗಿ ಆತನಿಗೆ ಬ್ರಿಟಿಷ್ ಕಂಪನಿ ಸರಕಾರಕ್ಕೆ ಪೂರಕವಾದ ವಿವರಗಳನ್ನು ಜನರಿಂದ ಸಂಗ್ರಹಿಸುವುದಕ್ಕೆ ಸುಲಭವಾಯಿತು. ಜನಮನ್ನಣೆಯೊಂದಿಗೆ ಹಾಡುಗಳ ಸಂಗ್ರಹ ಮಾಡಿ ಜನಪ್ರಿಯನಾದ. ಜೊತೆಗೆ ಅವುಗಳನ್ನು ಯಥವತ್ತಾಗಿ ವಿದೇಶಕ್ಕೆ ಕೊಂಡೊಯ್ದು ಹಾಗೂ ಭಾರತದ ಒಳಜಗಳಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು **ಇಂಡಿಯನ್ ಆಂಟಿಕ್ವೇರಿ**ಯಲ್ಲಿ ಐದು ಲಾವಣಿಗಳನ್ನು ಪ್ರಕಟಪಡಿಸಿರುವುದು. ಆದರೆ ಕನ್ನಡ ಲಾವಣಿಗಳ ವೈಜ್ಞಾನಿಕ ಸಂಗ್ರಹ ಅಧ್ಯಯನಕ್ಕೆ ನಾಂದಿ ಹಾಡಿದ ಕೀರ್ತಿ ಫ್ಲೀಟ್‌ಗೆ ಸಲ್ಲುತ್ತದೆ.

1896ರಲ್ಲಿ ಮೈಸೂರು ಬುಕ್ ಸೆಲ್ಲರ್ **ರಂಗಯ್ಯಶೆಟ್ಟಿ**ಯವರು ಸಂಗ್ರಹಿಸಿರುವ **'ಅರ್ಜುನಜೋಗೀ ಹಾಡು'** ಗ್ರಂಥ ಪ್ರಕಟವಾಯಿತು. ದಕ್ಷಿಣ ಕರ್ನಾಟಕದಲ್ಲಿ ಪ್ರಚಲಿತವಿರುವ ಪ್ರಸಿದ್ಧವಾದ ಅರ್ಜುನ ಜೋಗಿ ಹಾಡುಗಳನ್ನು ಸಂಗ್ರಹಿಸಿ ಐದು ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

1891ರಲ್ಲಿ ಮದರಾಸಿನಲ್ಲಿ **'ಲಾವಣೀ ಪದ ಸಂಗ್ರಹವು – ಮೊದಲನೆ ಭಾಗ'** ಪ್ರಕಟವಾಯಿತು. 52 ಪುಟಗಳ ಸಂಗ್ರಹದಲ್ಲಿ ಕೆಲವು ಮಹತ್ತ್ವದ ಲಾವಣಿಗಳಿವೆ.

ರೆವೆರೆಂಡ್ ಅಗಸ್ತ್ ಮೆನ್ನರ್ ಪಾಶ್ಚಾತ್ಯ ವಿದ್ವಾಂಸರು ನಿಘಂಟುಗಳ ರಚನೆಯ ಕೆಲಸಕ್ಕೆ ತೊಡಗಿದಾಗ ತುಳುವಿನ ಗಾದೆಗಳನ್ನು ಹಾಗೂ ಪಾಡ್ದನಗಳನ್ನು ಸಂಗ್ರಹಿಸಿದರು. ತುಳುವಿನ 21 ಪಾಡ್ದನ ಮೆನ್ನರ್ ಅಭಿಪ್ರಾಯವನ್ನು ಕೆಳಗಿನಂತೆ ವ್ಯಕ್ತಪಡಿಸಿದ್ದಾರೆ. "The ollowing collection (There are many stories, o this kind, but we have selected only these ew which we thought to be suitable or our purpose. No. 9, 10 and all are Varieties o one and the same legend) o stories, belonging to the demon- worshipers o the Tulu country, are those which are recited at their annual estivals and which have in this manner become promulgated and perpetuated among the people by the so- called Pambadars or Chie actors on such occasions. To save space the last story has been given only a verbal English translation." (1886) 21 ಪಾಡ್ದನಗಳಲ್ಲಿ 20 ಪಾಡ್ದನಗಳು ಕನ್ನಡ ಲಿಪಿಯಾಲ್ಲೂ ಒಂದು ಪಾಡ್ದನ ಇಂಗ್ಲಿಷ್ ಲಿಪಿಯಲ್ಲೂ ಇದೆ. **1. ಬೊಬ್ಬರ್ಯೆ, 2. ಪಂಜುರ್ಲಿ (i) 3. ಪಂಜುರ್ಲಿ (ii) 4. ಜುಮಾದಿ(i) 5. ಸಾರಾಳ ಜುಮಾದಿ(ii) 6. ಜಾರಂತಾಯೆ, 7. ಕಾಂತುನೆಕ್ರಿ, ಭೂತ 8. ಮಗ್ರಂದಾಯೆ, 9. ಕಲ್ಕುಡೆ, 10. ಕಲ್ಲುರ್ಟಿ, 11. ಪೊಸಭೂತ (ಕಾರ್ಕಳ ಪ್ರದೇಶದ ಉಪಭಾಷೆಯಲ್ಲಿದೆ), 12. ಪೊಸಮಹಾರಾಯೆ, 13. ಅತ್ತಾವರ ದೆಯ್ಯೊಂಗುಳು,**

14. ಮುಡದೇರಕಾಳ ಬೈರವೆ, 15. ತೊಡಕಿನಾರ್ 16. ದೇಯಿಬೈದೆದಿ, 17. ಕೋಟಿ ಚಂಣಯೆ(i) 18. ಕೋಟಿಚಂಣಯೆ(ii) 19. ದೂಮಾವತಿ ಭೂತ, 20. ಪಂಜುರ್ಲಿ(iii) 21. Pilicamundi (ಪಿಲಿಚಾಮುಂಡಿ), – ಇಲ್ಲಿರುವ ಪಾಡ್ದನಗಳು ಭೂತಾರಾಧನೆಯ ಸಂದರ್ಭದಲ್ಲಿ ಹಾಡುವ ಕಥನ ಗೀತೆಗಳು. ಭೂತದ ಹುಟ್ಟು, ಭೂತ ಹುಟ್ಟಿ ಬಂದ ದಾರಿ, ಪ್ರಸರಣದ ಸ್ಥಳಗಳು ಹಾಗೂ ಆರಾಧನೆಗಳನ್ನೊಳಗೊಂಡ ವಿವರಗಳನ್ನು ಭೂತ ಪ್ರದರ್ಶನ ಸಂದರ್ಭದಲ್ಲಿ ಹಾಡಿನ ಮೂಲಕ ನಿರೂಪಿಸುತ್ತಾರೆ. ಮೆನ್ನರ್ ಸಂಗ್ರಹಿಸಿರುವ 21 ಪಾಡ್ದನಗಳು ಇಂದಿಗೂ ಭೂತಾರಾಧನೆಯ ಪ್ರದರ್ಶನದ ಸಂದರ್ಭದಲ್ಲಿ ಹಾಡುವ ಪಾಡ್ದನಗಳಿಗೂ ಸುಮಾರು 110 ವರ್ಷಗಳ ಅಂತರವಿದ್ದು, ಮೆನ್ನರ್ ಸಂಗ್ರಹಿಸಿದ ಪಠ್ಯಗಳಿಗೂ ಇಂದು ಪ್ರದರ್ಶನಗೊಳ್ಳುವ ಪಠ್ಯಗಳಿಗೂ ಭಿನ್ನ ಪಠ್ಯರೂಪ ಇರುವುದನ್ನು ಅಧ್ಯಯನಿಸುವುದಕ್ಕೆ ಆಕರ ಗ್ರಂಥವಾಗಬಹುದು.

ಎ.ಸಿ. ಬರ್ನೆಲ್‌ನ 'ದಿ ಡೆವಿಲ್ ವರ್‌ಷಿಪ್ ಆಫ್ ತುಳುವಾಸ್' ಗ್ರಂಥದ **'ಆನ್ ಭೂತಾಸ್'** ಎಂಬ ಎರಡನೇ ಅಧ್ಯಾಯವನ್ನು **ಆರ್**.ಸಿ.**ಟೆಂಪಲ**ನ ಕೇಳಿಕೆಯ ಮೇರೆಗೆ ಎ.ಮೆನ್ನರ್ ಭೂತಾರಾಧನೆಯ ಕುರಿತ ವಿವರಣೆಯನ್ನು ನೀಡಿದ್ದಾರೆ.[22] ಭೂತಗಳ ಕುರಿತಾಗಿ (ಆನ್ ಭೂತಾಸ್) ಎಂಬ ಅಧ್ಯಾಯದ ಉದ್ದಕ್ಕೂ ಮೆನ್ನರ್ ಭೂತ ಎಂಬ ಪದವನ್ನೇ ಬಳಸುತ್ತಾ, ಭೂತಗಳ ಉಗಮದ ಕುರಿತು ಬರೆಯುವಾಗ **'ದಿ ಒರಿಜಿನ್ ಆಫ್ ಡೆಮನ್ಸ್'** ಎಂಬ ತಲೆಬರಹವನ್ನು ಮೆನ್ನರ್ ನೀಡಿರುತ್ತಾರೆ.

ಮೆನ್ನರ್ **ತುಳು, ಇಂಗ್ಲಿಷ್ ನಿಘಂಟ**ನ್ನು 1880 ರಲ್ಲಿ ರಚಿಸಿದ್ದು, ತುಳು ವಿಷಯದ ಬಗ್ಗೆ ಹಾಗೂ ತುಳು ವ್ಯಾಕರಣದ ಬಗ್ಗೆಯೂ ಸಾಕಷ್ಟು ವಿಚಾರ ವಿನಿಮಯ ನಡೆದಿದೆ. 1863ರಲ್ಲಿ ಬರೆದ **'ಭೂತವಿದ್ಯೆ'** ಕೃತಿಯು ತುಳುನಾಡಿನಲ್ಲಿರುವ ಭೂತ ಪಿಶಾಚಿಗಳ ಬಗೆಗಿನ ಪುಟ್ಟ ಕೃತಿ. ಕೃತಿಯಲ್ಲಿ ನೂರಹದಿನೇಳು ಪುಟಗಳಿದ್ದು, ಮಂಗಳೂರಿನ ಬಾಸೆಲ್ ಮಿಷನ್‌ನರು ಪ್ರಕಟಿಸಿದ್ದಾರೆ. ಮೆನ್ನರ್ **ಕೊಡವ, ತುಳು ಹಾಗೂ ತೊದ ಭಾಷಾ ವ್ಯಾಕರಣ**ಗಳನ್ನು ರಚಿಸಿದ್ದಾರೆ.[23]

ಮೆನ್ನರ್ ಸಂಗ್ರಹಿಸಿರುವ **'ಪಾಡ್ದನೊಳು'** ಸಂಕಲನಕ್ಕೆ ಮುನ್ನುಡಿಯಿಲ್ಲ. ಪಾಡ್ದನೊಳು ಸಂಗ್ರಹದ ಉದ್ದೇಶವನ್ನು ಅರ್ಥ ಮಾಡುವುದು ಕಷ್ಟ. ಮೆನ್ನರ್ ಪಾಡ್ದನಗಳನ್ನು ಸಂಗ್ರಹಿಸುವಾಗ ತುಳು, ಇಂಗ್ಲಿಷ್ ನಿಘಂಟು ರಚನೆಯ ಕಾರ್ಯದಲ್ಲಿ ತೊಡಗಿದ್ದು, ಇದೇ ಸಂದರ್ಭದಲ್ಲಿ ತುಳು ಗಾದೆಗಳ, ತುಳು ಪಾಡ್ದನಗಳ ಸಂಗ್ರಹಕಾರ್ಯಕ್ಕೆ ತೊಡಗಿದ್ದರು. ಹಾಗಾಗಿ ಸಂಗ್ರಹಿಸಿದ ಗಾದೆಗಳ ಪಾಡ್ದನಗಳ ಪಠ್ಯಗಳಿಂದ ಮೆನ್ನರ್‌ಗೆ ತುಳು ನಿಘಂಟು ರಚನೆ ಮಾಡಲು ಸಾಧ್ಯವಾಯಿತು.

ಮೆನ್ನರ್ ಪಾಡ್ದನೊಳು, ಗಾದೆ ಸಂಗ್ರಹವು ಇಂದಿನ ಅಧ್ಯಯನ ಕ್ರಮಕ್ಕೆ ಪೂರಕ ಪಠ್ಯ ಹಾಗೂ ಭಿನ್ನ ಪಠ್ಯಗಳನ್ನು ಒದಗಿಸಿದೆ. ವೈಜ್ಞಾನಿಕ ಅಧ್ಯಯನವು ಪಠ್ಯವೊಂದರ ಸಾಂದರ್ಭಿಕ ವಿವರಣೆಗಳನ್ನು ಬಯಸುತ್ತದೆ. ಪಠ್ಯವೊಂದರ ಸಾಂದರ್ಭಿಕ ವಿವರಗಳು ಮೆನ್ನರ್ ಸಂಗ್ರಹಿಸಿದ ಪಾಡ್ದನಗಳಿಗೂ ಇವತ್ತು ಕ್ಷೇತ್ರದಲ್ಲಿ ಪ್ರದರ್ಶನಗೊಳ್ಳಲಿರುವ ಪಾಡ್ದನಗಳಿಗೂ ಹೊಂದಿಸಿ ನೋಡುವುದಕ್ಕೆ ಸುಲಭವಾಗಿದ್ದು, ಮೆನ್ನರ್ ಸಂಗ್ರಹಿಸಿದ ವೈಜ್ಞಾನಿಕ ಅಲ್ಲದಿದ್ದರೂ ನೂರಹತ್ತು ವರ್ಷಗಳ ಹಿಂದಿನ ಪಠ್ಯವೊಂದರ ವಿಸ್ತೃತರೂಪ ಕನ್ನಡ ಜಾನಪದ ಅಧ್ಯಯನಕ್ಕೆ ಐತಿಹಾಸಿಕ ಮಹತ್ತ್ವವನ್ನು ಒದಗಿಸಿದೆ.

1902ರಲ್ಲಿ **ಚಿಕ್ಕವರದಶೆಟ್ಟಿ, ವೆಂಕಟಾಚಲಂ ಶೆಟ್ಟಿ ಎಂ.ಆರ್**. ಸಂಗ್ರಹಿಸಿರುವ **'ತುರಾಲಾವಣಿ' 'ಸವಾಲ್ ಜವಾಬುಗಳು'** ಪ್ರಕಟವಾಯಿತು. **'ಪಿರಿಯಪಟ್ಟಣದ ಲಾವಣಿ' 'ಮಹಾರಾಜರ ಮರಣದ ಲಾವಣಿ'** ಲಾವಣಿಗಳುಳ್ಳ ಮೈಸೂರು ರಮುದ್ದಿ ರಚಿಸಿದ **'ತುರಾಲಾವಣಿ'** ಹಾಗೂ **'ಪೆರಿಯಾ ಪಟ್ಟಣದ ಜಗಳ'** ಮತ್ತಿತರ ಲಾವಣಿಗಳುಳ್ಳ **ಶೇಷಗಿರಿ ಹರಿದಾಸ** ಹಾಗೂ **ಪುಟ್ಟಣ್ಣ** ರಚಿಸಿದ **'ತುರಾಲಾವಣಿ'** ಎಂಬ ಎರಡೂ ಉಲ್ಲೇಖಗಳು ದೊರಕುತ್ತವೆ.[24] ಸಂಗ್ರಹದಲ್ಲಿ 72 ಪುಟಗಳಿದ್ದು ಜವಾಬುಗಳು ಹಾಗೂ ಶೃಂಗಾರ ಲಾವಣಿ ಪದಗಳಿವೆ. ಬತಾವ್ ಲಾವಣಿ, ಪಿರಿಯಾಪಟ್ಟಣದ ಲಾವಣಿ, ದೀವಳಿಗೆ ಹಬ್ಬದ ಲಾವಣಿ, 'ಗುಲ್‌ರೋಗೆ ದೆವ್ವಾ ಬಿಡಿಸಿದ' ಲಾವಣಿ ಪ್ರಮುಖ ನಾಲ್ಕು ಲಾವಣಿಗಳಿವೆ.

1905ರಲ್ಲಿ **ಲಿಂಗಣ್ಣನವರ ರಾಮಲಿಂಗಣ್ಣ** ಸಂಗ್ರಹಿಸಿರುವ **'ಚಿತ್ರದುರ್ಗದ ಲಾಡಾಯಿ'** ಲಾವಣಿ ಪ್ರಕಟವಾಯಿತು. ಮೈಸೂರು ಪುಟ್ಟಣ್ಣನವರು ಕುಮಾರ ಯಂ. ವೀರಮುದ್ದಣ್ಣ ಬರೆದಿರುವ ಲಾವಣಿಗಳು.[25] ಚಿತ್ರದುರ್ಗದ ಇತಿಹಾಸದ ಕಟ್ಟಕಡೆಯ ಅಧ್ಯಾಯದಲ್ಲಿ ಬರುವ ರಾಜಾವೀರ ಮದಕರಿ ನಾಯಕ ಹಾಗೂ ಹೈದರ್ ಆಲಿ ನಡುವಣ ನಿರ್ಣಾಯಕ ಯುದ್ಧದ ಘಟನೆಯನ್ನಾಧರಿಸಿ ರಚಿತವಾದ 10 ಪುಟಗಳ, ದುರ್ಗದ ಇತಿಹಾಸ ಕುರಿತ ಮೊತ್ತಮೊದಲನೆಯ ಲಾವಣಿ ಸಂಗ್ರಹ.[26]

1912ರಲ್ಲಿ **ಗೋಪಾಳಿ ದುರದುಂಡಿ** ಹಾಗೂ **ಶಿವಲಿಂಗಶೆಟ್ಟಿ** ಸಂಗ್ರಹಿಸಿರುವ **'ಲಾವಣಿ ಪದಗಳು'** ಸಂಕಲನ ಪ್ರಕಟವಾಯಿತು. ಬಳ್ಳಾರಿ ಪ್ರಾಂತ್ಯಕ್ಕೆ ಸಂಬಂಧಿಸಿದ ಸಂಗ್ರಹದಲ್ಲಿ ಪೌರಾಣಿಕ ವಸ್ತು ವಿವರಗನ್ನೊಳಗೊಂಡ ಲಾವಣಿ ಪದಗಳಿವೆ.

1915ರಲ್ಲಿ ಬಳ್ಳಾರಿಯಲ್ಲಿ **'ಲಾವಣಿ ಪದಗಳು'** ಸಂಗ್ರಹದಲ್ಲಿ 72 ಪುಟಗಳಿದ್ದು, ಸಂಗ್ರಹದಲ್ಲಿ ವಿವಿಧ ವಿಷಯಗಳ ಲಾವಣಿ ಪದಗಳಿವೆ.

1918ರಲ್ಲಿ **ದ್ವಾರಪಾಲ ಚೆನ್ನಪ್ಪಾ ಜಡಿ** ಸಂಗ್ರಹಿಸಿರುವ **'ಯುರೋಪ ಖಂಡದ ಮಹಾಯುದ್ಧದ ಲಾವಣಿ ಪದಮಾಲಿಕೆ'** ಸಂಕಲನದಲ್ಲಿ ಉತ್ತರ ಕರ್ನಾಟಕ ಭಾಗದ

ಬೆಳಗಾಂ ಪ್ರಾಂತ್ಯದಿಂದ ಸಂಗ್ರಹಿಸಿದ ಲಾವಣಿಗಳಿವೆ. 64 ಪುಟಗಳ ಸಂಗ್ರಹದಲ್ಲಿ ಮೊದಲ ಮಹಾಯುದ್ಧದ ಕುರಿತ ಲಾವಣಿ ಪದಗಳಿವೆ.

1929ರಲ್ಲಿ ಮೈಸೂರು ರಮುದ್ದಿ ಸಂಗ್ರಹಿಸಿರುವ **'ತುರಾಲಾವಣಿ'** ಗ್ರಂಥವು ಮೈಸೂರು ಸುತ್ತ–ಮುತ್ತಲಲ್ಲಿ ಜನರಾಡುತ್ತಿದ್ದ ನಾಲ್ಕು ಲಾವಣಿಗಳನ್ನು ಒಳಗೊಂಡಿದೆ. ಪಿರಿಯಾ ಪಟ್ಟಣದ ಲಾವಣಿ, ಬಟಾವ್ ಲಾವಣಿ, ದೀವಳಿಗೆ ಹಬ್ಬದ ಲಾವಣಿ, ಮಹಾರಾಜರ ಮರಣ ಲಾವಣಿ ಮೊದಲಾದ ನಾಲ್ಕು ಲಾವಣಿಗಳುಳ್ಳ 31 ಪುಟಗಳ ಕೃತಿ.

1933ರಲ್ಲಿ ಗೆಳೆಯರ ಗುಂಪಿನ ಸಿಂಪಿ **ಲಿಂಗಣ್ಣ** ಹಾಗೂ **ಪಿ.ಧೂಲಾ ಸಾಹೇಬ** ಇವರಿಬ್ಬರ ಜೊತೆಗೂಡಿ ಸಂಗ್ರಹಿಸಿದ **'ಜೀವನ ಸಂಗೀತ'** ಲಾವಣಿಗಳ ಸಂಕಲನವು ಜಯಕರ್ನಾಟಕ ಗ್ರಂಥಮಾಲೆಯ 13ನೆಯ ಕೃತಿಯಾಗಿ ಪ್ರಕಟವಾಗಿದೆ. ಪ್ರಕಟನೆಯ ಸಂದರ್ಭದಲ್ಲಿ ಪ್ರಕಾಶಕರು, "ಒಂದು ಮಾತನ್ನೆತ್ತುವುದು ಅಪ್ರಸ್ತುತವಾಗದು. ಅದು ಲಾವಣಿ ಸಂಗ್ರಹದ ಕೆಲವೊಂದು ಭಾಗಗಳಿಗೆ ಸಂಬಂಧಿಸಿದುದು. ಅಶ್ಲೀಲವೆಂದು ಭಾವಿಸಬಹುದಾದ ಕೆಲವು ಮಂದಿ ವಾಚಕರು ಆಕ್ಷೇಪಿಸಬಹುದಾಗಿದೆ. ನಮಗೂ ಆ ಸಂದೇಹವು ಬಾರದಿರಲಿಲ್ಲ. ಸಂಪೂರ್ಣ ವಿಚಾರ ಮಾಡಿದ ಮೇಲೆಯೇ ಅವುಗಳನ್ನು ಪ್ರಕಟಿಸುವುದನ್ನು ಗೊತ್ತು ಮಾಡಿದೆವು. ನಾವು ಪ್ರಕಟಿಸಿದೆ ಇದ್ದರೆ ಹಲವರು ಅಸಮಧಾನವುಳ್ಳವರಾಗುತ್ತಿದ್ದರೆಂಬುದನ್ನು ಬಲ್ಲೆವು....... ಇದೊಂದು ಕಾರಣವಿಲ್ಲದೆ, ಸಂಸ್ಕೃತವೆನಿಸಿಕೊಳ್ಳುವ ಸಮಾಜದ ಸಾಹಿತ್ಯ ಸಂಪ್ರದಾಯಗಳನ್ನೇನೂ ಅರಿಯದೆ, ಪ್ರಕೃತಿಮಾತೆಯಿಂದ ನೇರವಾಗಿ ಸ್ಫೂರ್ತಿ ಪಡೆದು ಒಡನುಡಿಯುವ ಲಾವಣಿಕಾರರ ಕೆಲವೊಂದು ಕೃತಿಭಾಗವನ್ನು ನಮ್ಮ ದೃಷ್ಟಿಯಿಂದ ತ್ಯಾಜ್ಯವೆಂದೆನಿಸಿ, ತೆಗೆದಿಡುವುದು ಸರಿಯಲ್ಲವೆಂದೂ ಎನಿಸಿತು. ಅವರ ಕಾವ್ಯ ವೈಖರಿಯಲ್ಲಿ ಅದೊಂದು ಬಗೆಯ (ಫ್ರಾಂಕ್‌ನೆಸ್) ಸ್ಪಷ್ಟೋಕ್ತಿಯಿದೆ. ಪ್ರಕೃತಿದೇವಿಗೆ ನಾಗರಿಕತೆಯ ಉಡಿಗೆತೊಡಗೆಗಳಿಲ್ಲ. ಅವಳು ನಿರಾಭರಣ ನಗ್ನ ಸೌಂದರ್ಯ ಶಾಲಿನಿಯು. ಅವಳ ಸೌಂದರ್ಯವು ತಾನೆ ತಾನಾಗಿ ಬತ್ತಲೆಯಾಗಿ ನಿಂತಿದೆ. ಆ ಲಾವಣ್ಯದ ಉಪಾಸಕರು ಲಾವಣಿಕಾರರು. ಲಾವಣ್ಯವನ್ನು ಕಂಡುಂಡು ಅನುಭವಿಸಿದಂತೆ ಆಡುವರು–ಹಾಡುವರು. ನವನಾಗರಿಕರಾದ ನಾವು 'ಶಿಷ್ಟಾಚಾರ'ವನ್ನು ಒಂದು ಶಾಸ್ತ್ರವನ್ನಾಗಿ ಮಾಡಿಕೊಂಡು, ಅದನ್ನು ಪರಿಪೂರ್ಣಾವಸ್ಥೆಗೆ ಮುಟ್ಟಿಸಿದ್ದೇವೆ. ..... ನಮ್ಮ ಸಭ್ಯತೆಯ ತೆರೆಯ ಹಿಂದೆ ಎಂತಹ ಅಶ್ಲೀಲತೆಯು ಹುದುಗಿಕೊಂಡಿದೆಯೆಂಬುದಕ್ಕೆ ನಮ್ಮ ನಮ್ಮ ಮನಸ್ಸೇ ಸಾಕ್ಷಿ. ಶೃಂಗಾರವು ಜೀವನದ ಒಂದು ಅಂಗ ಮಾತ್ರ ಲಾವಣಿಕಾರರಿಗೆ ಆದ್ದರಿಂದ ಅದು ಅವರಿಗೆ ಸ್ವಾಭಾವಿಕವಾಗಿದೆ. ಎಂತಲೆ ಅತ್ಯುಚ್ಚ ನೈತಿಕ ಆಧ್ಯಾತ್ಮಿಕ ವಿಷಯಗಳನ್ನೂ ಅಷ್ಟೇ ಸ್ವಾಭಾವಿಕವಾಗಿ ಕಾಣುತ್ತಿದ್ದು, ಲಾವಣಿಗಳಲ್ಲಿ ಅವುಗಳನ್ನು ಹಾಡುತ್ತಾರೆ. ಅಲ್ಲದೆ

ಆಧುನಿಕರಾದ ನಾವು ಸ್ವಾಭಾವಿಕವಾಗಿ ಕಾಣುತ್ತಿದ್ದು, ಲಾವಣಿಗಳಲ್ಲಿ ಅವುಗಳನ್ನು ಹಾಡುತ್ತಾರೆ. ಅಲ್ಲದೆ ಆಧುನಿಕರಾದ ನಾವು ಶೃಂಗಾರಿಕ ಶಬ್ದಗಳನ್ನು ಉಪಯೋಗಿಸುವುದಕ್ಕೂ, ಹಳ್ಳಿಗರು ಉಪಯೋಗಿಸುವುದಕ್ಕೂ ಅರ್ಥದಲ್ಲಿ ಬಹಳ ವ್ಯತ್ಯಾಸ ಇರುತ್ತದೆ." (1933: 1–3) ಕೃತಿಯ ಕುರಿತಂತೆ ಪ್ರಕಾಶಕರು ವಾಚಕರಿಂದ ಬರಬಹುದಾದ ಆಕ್ಷೇಪಗಳನ್ನು ಗಮನದಲ್ಲಿರಿಸಿಕೊಂಡು, ಅಶ್ಲೀಲವೆನ್ನಬಹುದಾದ್ದು ನಮ್ಮ ನಮ್ಮ ಮನಸ್ಸಿನೊಳಗಿದೆ. ಜನಪದ ಲಾವಣಿಕಾರರಲ್ಲಿ ಅಶ್ಲೀಲ ಇಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಂಗ್ರಹಕಾರರು "ನಮ್ಮ ಸಂಗ್ರಹದಲ್ಲಿ ನಾವು ಪ್ರಸಿದ್ಧರಾದ ಏಳು ಮಂದಿ ಲಾವಣಿಕಾರರ ಮಿಗಿಲಾಗಿ ಹನ್ನೆರಡು ಲಾವಣಿಗಳನ್ನು ನಾಡಿಗರ ಇದಿರಿಗೆ ಇಟ್ಟಿದ್ದೇನೆ. ಅಲ್ಲದೆ ಎರಡು ಚಿಕ್ಕ ಉಪಲಾವಣಿಗಳುಂಟು. ಅವುಗಳನ್ನು ನಾಡಿಗರ ಇದಿರಿಗೆ ಇಟ್ಟಿದ್ದೇನೆ. ಅಲ್ಲದೆ ಎರಡು ಚಿಕ್ಕ ಉಪಲಾವಣಿಗಳುಂಟು. ಅವುಗಳನ್ನು ಇಡೀ ಸಂಗ್ರಹದ ಮೊದಲಿಗೊಂದು, ಕೊನೆಗೊಂದು ಸೇರಿಸಿದ್ದೇವೆ. ಯಾಕೆಂದರೆ, ಹಾಡುಗಾರು ಪ್ರತಿಯೊಂದು ಲಾವಣಿಯನ್ನು ಹಾಡುವಾಗ ಮೊದಲಿಗೊಂದು ಉಪೋದ್ಘಾತ ಸ್ವರೂಪದ ಚಿಕ್ಕ ಹಾಡನ್ನೂ ಕೊನೆಗೊಂದು ಉಪಸಂಹಾರ ಸ್ವರೂಪದ ಹಾಡನ್ನೂ ಹಾಡುವ ವಾಡಿಕೆಯುಂಟು. ಮೊದಲಿಗೆ ಸೂಚನಾ ಪಲ್ಲವಿಯಂತೆ ಹೇಳುವುದಕ್ಕೆ '**ಸಖಿ**' ಎಂದೂ ಕೊನೆಯದಕ್ಕೆ '**ಖ್ಯಾಲಿ**' ಎಂದೂ ಹೆಸರು ಕೊಟ್ಟಿದ್ದಾರೆ. ನಾವು ಸಂಗ್ರಹಿಸಿರುವ ಪ್ರತಿಯೊಂದು ಲಾವಣಿಗೂ ಕೊನೆ ಮೊದಲಿನ ಎರಡೆರಡು ಖ್ಯಾಲಿ–ಸಖಿಗಳನ್ನು ಕೊಡದೆ ಎಲ್ಲ ಹಾಡುಗಳಿಗೆ ಕೂಡಿ ಮೊಟ್ಟಮೊದಲಿಗೆ ಒಂದು ಒಳ್ಳೆ ಸಖೀ ಹಾಡನ್ನೂ ಕೊಟ್ಟು ಕೊನೆಗೆ ಒಂದು ಖ್ಯಾಲಿಯನ್ನೂ ಪ್ರತ್ಯೇಕವಾಗಿ ಜೋಡಿಸಿದ್ದೇವೆ" (1933:5) ಎಂದು ಅಭಿಪ್ರಾಯ ನೀಡಿದ್ದಾರೆ.

ಲಾವಣಿಗಳ ಪ್ರಾಚೀನತೆ ಹಾಗೂ ಲಾವಣಿಕಾರರ ಹೆಸರುಗಳನ್ನು ನೆನಪಿಸಿ ಕೊಂಡಿದ್ದಾರೆ. "ಸಂಗ್ರಹದಲ್ಲಿ ಬಂದ ಲಾವಣಿಗಳೆಲ್ಲಾ ಸುಮಾರು ಇಪ್ಪತ್ತು ವರ್ಷಗಳಿಗಿಂತ ಮೊದಲಿನವು. ಇವುಗಳಿಗೆ ಜನರು ಹಳೇ ಲಾವಣಿಗಳೆಂದು ಹೇಳುವರು. ಇವುಗಳನ್ನು ರಚಿಸಿದವರಲ್ಲಿ ಇಂದಿಗೆ ಬಹುಶಃ ಸ್ವರ್ಗವಾಸಿಗಳಾದವರೇ ಹೆಚ್ಚು. ಶ್ರೀ ನಾನಾಸಾಯ್ಬ ಹಾಗೂ ಶ್ರೀ ನ್ಯಾಮಣ್ಣ ಇವರ ವಿಷಯಕ್ಕೆ ನಮಗೆ ಹೆಚ್ಚಿಗೇನೂ ಗೊತ್ತಾಗಿಲ್ಲ. ಶ್ರೀ.ಖಾಜಾಭಾಯಿ ಹಾಗೂ ಶ್ರೀ ಸಿದ್ದೂ ಶಿವಲಿಂಗ ಹಾಗೂ ಶ್ರೀ.ಸಂಗೂರಾಯಪ್ಪ ಇವರಿಷ್ಟು ಜನರು ಮಾತ್ರ ದಿವಂಗತರಾಗಿ ಹಲವು ವರ್ಷಗಳಾದವು." (1933:6)

ಪ್ರಾಚೀನತೆಯನ್ನು ಹೇಳುತ್ತಾ ಪಾರಂಪರಿಕವಾಗಿ ಲಾವಣಿಗಳನ್ನು ಹಾಡುವ ಎರಡು ವರ್ಗಗಳನ್ನು ಪರಿಚಯಿಸುತ್ತಾರೆ. "ಲಾವಣಿಕಾರರಲ್ಲಿ 'ಹರದಾಸ' ಹಾಗೂ 'ನಾಗೇಸಿ' ಎಂದು ಎರಡು ವರ್ಗಗಳುಂಟು. 'ತುರಾಯಿ' ಹಾಗೂ ಕಲ್ಗಿ' ಎಂತಲೂ ಇವಕ್ಕೇ

ಎನ್ನುವುದುಂಟು. ಇವೆರಡೂ ವರ್ಗದ ಲಾವಣಿಕಾರರು ಒಬ್ಬರಿಗೊಬ್ಬರು ಇದಿರು ಬದಿರಾಗಿ ಹಾಡುತ್ತಿರುತ್ತಾರೆ. ಹರದಾಸರು ಗಂಡಿನ ಪಕ್ಷ. ನಾಗೇಸಿಯವರು ಹೆಣ್ಣಿನ ಪಕ್ಷ. ಅವರವರು ತಮ್ಮ ಪಕ್ಷವನ್ನು ಎತ್ತಿಹಿಡಿದು ಹಾಡುವುದುಂಟು. ಒಮ್ಮೊಮ್ಮೆ ತಮ್ಮ ಪಕ್ಷವನ್ನು ಬೆಳೆಸುವ ಭರದಲ್ಲಿ ಪ್ರತಿಪಕ್ಷದ ವಿಡಂಬನೆಯು ಮಿತಿಮೀರಿ ಹೋಗುತ್ತಿರುವುದೂ ಉಂಟು. ಲಾವಣಿಗಳ ಲಾವಣ್ಯಕ್ಕೆ ಎಲ್ಲಿಯಾದರೂ ಒಮ್ಮೊಮ್ಮೆ ಭಂಗ ಬರುತ್ತಿದ್ದರೆ ಅದು ಸಂಪ್ರದಾಯಿಕತೆಯ ಒಲೆಯಲ್ಲಿಯೇ ಸರಿ" (1933: ಪರಿಚಯ) ಎನ್ನುತ್ತಿದ್ದರು.

ಲಾವಣಿಗಳನ್ನು ಹಳೆಯ ಲಾವಣಿಗಳು ಹಾಗೂ ಹೊಸಲಾವಣಿಗಳೆಂದು ಎರಡು ವಿಭಾಗ ಮಾಡಿಕೊಂಡಿದ್ದಾರೆ. ಸಂಕಲನದಲ್ಲಿ ಪ್ರಕಟವಾಗಿರುವ ಲಾವಣಿಗಳು ಹಳೆಯವು. ಯಾಕೆ ಹಳೆಯ ಲಾವಣಿಗಳನ್ನು ಸಂಗ್ರಹಿಸುವುದು ಮುಖ್ಯವಾಯಿತು ಎನ್ನುವುದನ್ನು ಕಾರಣಗಳ ಮೂಲಕ ಪರಿಚಯಿಸುತ್ತಾರೆ. "ಇದೀಗ ನಾವು ಹಳೇ ಲಾವಣಿಗಳನ್ನಷ್ಟೇ ಸ್ವೀಕರಿಸಿ ಹೊಸ ಲಾವಣಿಗಳಿಗೆ ಕೈ ಹಚ್ಚದಿರುವುದಕ್ಕೆ ಒಂದು ಕಾರಣವುಂಟು. ಅದೇನೆಂದರೆ ಮಹಾಯುದ್ಧದಿಂದೀಚೆಗಿನ ಕಾಲದ ಜನಜೀವನದಲ್ಲಿ ಹೊರಜಂಬ ಹೆಚ್ಚಾಗಿ ಒಳಜೊಳ್ಳುತನವು ಬೆಳೆದು ಬಂದದ್ದರಿಂದ ಜನರಲ್ಲಿದ್ದ ಸವಿಗಾರಿಕೆಯೆಲ್ಲ ಲೋಪವಾಗಿ ರಸವಂತಿಕೆಯು ಮುಳುಗಿ ಹೋಗಿದೆ. ಜೀವನದಲ್ಲಿಯೇ ರಸವಿಲ್ಲದಾಗ ಅವರ ಹಾಡಿನಲ್ಲೆಲ್ಲಿಯ ರಸವು ಬರಬೇಕು? ಚೆಗಿನ ಹಾಡುಗಳೆಂದರೆ ನೀರಸವಾದ ಲೆಕ್ಚರನ್ನು ಧ್ವನಿಗೂಡಿಸಿ ತಾಳದಲ್ಲಿ ಹೇಳಿದಂತೆ. ಕೆಲವರು ನೀತಿಯ ನಿಬಂಧನೆಗಳನ್ನು ಪ್ರಾಸಕ್ಕೆ ಸರಿಹೊಂದಿಸಿ ನೀತಿಸಾರ ಲಾವಣಿಯೆಂದು ಹೇಳುವರು. ಇನ್ನು ಕೆಲವರು ಕೈವಲ್ಯ ಜ್ಞಾನಸಿಂಧುಗಳ ಪುಟಗಳನ್ನೇ ತಾಳಪೆಟ್ಟಿಗೆಗೆ ತಂದು ತತ್ವಸಾರ ಲಾವಣಿಯೆಂದು ಹೇಳುವರು. ಈಗಿನ ಕಥಾಸಾರ ಲಾವಣಿಗಳನ್ನಂತೂ ಕೇಳಲಾಗಲ್ಲ. ಕಥೆ ಗೊತ್ತಿಲ್ಲದವರಿಗೆ ಹೊಸ ಕಥೆಯೆಂದೆನಿಸಿ ಏನಾದರೂ ತುಸು ಹರುಷವಾದರೆ ಆಗಬೇಕು. ಒಟ್ಟಿನಲ್ಲಿ ಚೆಗೆ ಇಪ್ಪತ್ತು ವರ್ಷಗಳಲ್ಲಿ ಹೊರಟ ಹೊಸ ಲಾವಣಿಕಾರರ ಹಾಡುಗಳಲ್ಲಿ ಕಾವ್ಯದ ವಿಲಾಸವಿಲ್ಲ. ಬರೀ ಸಂಗೀತಮಯ ಲೆಕ್ಚರ್." "ಅಲ್ಲದೆ ಹಳೇ ಲಾವಣಿಗಳನ್ನು ಈಗಿನ ಹಳ್ಳಿಗರು ಕೇಳಲೂ ಒಪ್ಪುವುದಿಲ್ಲವೆಂದು ಹಾಡುಗಾರರೇ ಸ್ವತಃ ಹೇಳುತ್ತಾರೆ. ಇದೂ ಸರಿಯೇ. ಜನರಲ್ಲೇ ರಸವನ್ನು ಆಸ್ವಾದಿಸುವ ಶಕ್ತಿಯು ಲೋಪಿಸಿರುವಾಗ ಅವರೊಳಗಿಂದಲೇ ಹೊರ ಬೀಳುವ ಹಾಡುಗಾರರಲ್ಲಾದರೂ ರಸೋನ್ಮೇಷವು ಎಲ್ಲಿಂದ ಬರಬೇಕು?" (1933:7)

ಲಾವಣಿಗಳ ಸಂಗ್ರಹದ ಅಗತ್ಯದಂತೆ ಲೇಖಕರ ಉದ್ದೇಶ, "ಆಂಗ್ಲ ವಿದ್ಯಾವ್ಯಾಸಂಗಿಗಳಿಗೂ ಸಂಸ್ಕೃತ ಸಾಹಿತ್ಯ ಪರಿಚಿತರಿಗೂ ಹಳಗನ್ನಡದ ಹುರುಳುನ್ನರಿತವರಿಗೂ ಹೇಗಾದರೂ ಉಚ್ಚ ಕಾವ್ಯಗಳ ದರ್ಶನವು ಆಗೇ ಆಗುತ್ತದೆ. ಆದರೆ ಬರೀ ಹೊಸಗನ್ನಡದವರಿಗೆ

ಕಾವ್ಯವೆಂದರೆ ಧ್ವನಿತೆಗೆದು ಹೇಳುವುದೊಂದೇನೋ ಎಂಬುದಕ್ಕಿಂತ ಹೆಚ್ಚಿಗೇನೂ ಗೊತ್ತಾಗುವಂತಿಲ್ಲ. ಅದರಲ್ಲಿ ನಾಲ್ಕೈದು ವರ್ಷಗಳಲ್ಲಿ ಮಾತ್ರ ಇಂಥವರಿಗೆ ತುಸುತುಸು ಅನ್ನವು ಸಿಗಹತ್ತಿದೆ. ಈಗ ನಾವು ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಇದೇ ಕಾರ್ಯಕ್ಕೆ ಕೈಲಾದಷ್ಟು ಕೈ ಹಚ್ಚುತ್ತಿದ್ದೇವೆ. ಶೃಂಗಾರ ಲಾವಣಿಗಳಲ್ಲಿ ಬರುವ ಗ್ರಾಮ್ಯ ರೀತಿಯ ಕೆಲವು ಸಂಗತಿಗಳು ಸುಶಿಕ್ಷತರಿಗೆ ಅಸೌಜನ್ಯವೆಂದು ತೋರಬಹುದು. ಆದರೆ ನಾವಿಲ್ಲಿ ಹೇಳುವುದೇನೆಂದರೆ ಅಲ್ಲಲ್ಲಿ ಕಾಣುವ ಕವಿಕಲ್ಪನೆಯ ಅಗಾಧ ವೈಖರಿಯನ್ನು ತೋರಿಸಿಕೊಡುವುದಿಷ್ಟಕ್ಕೆ ನಮ್ಮ ಉದ್ದೇಶ." (1933:7) ಹೀಗೆ **'ಜೀವನ ಸಂಗೀತ'** ಸಂಕಲನದ ಚಾರಿತ್ರಿಕ ಚೌಕಟ್ಟನ್ನು ಹಾಗೂ ಸಂಗ್ರಹದ ವರ್ತಮಾನದ ಅವಶ್ಯಕತೆಯನ್ನು ಪ್ರಕಾಶಕರು ಹಾಗೂ ಸಂಗ್ರಾಹಕರು ವಾಚಕರಿಗೆ ಹೇಳಿಕೊಂಡಿದ್ದಾರೆ.

ಸಂಕಲನದಲ್ಲಿ 14 ಲಾವಣಿಗಳಿವೆ. ಪ್ರಾರ್ಥನೆ, **ಅಸಲಜಾತ ಹೆಣ್ಣು, ಸಂಪಿಗೆ ತೆನಿಯಂಥ ಹುಡುಗ,** ವತ್ಸಲಾಹರಣ, ಗೋಕುಲಾಷ್ಟಮಿ, ಚಂದ್ರಣಿ, ಬಸರಿದ್ದೀನೆ ಸರಿನ್ನೇನಿಡೂನ**?, ನಾಗರಪಂಚಮಿ**, ಕೃಷ್ಣಲೀಲೆ, ಅಷ್ಟೂರ ಮಾತಿದು, **ಗಿಡ್ಡ ಪೋರಿ**, ಭೀಷ್ಮಪರ್ವ, **ಕರೀ ಹುಡುಗಿ,** ನಿನ್ನ ಹೊರತು ದೇವರೇ ಇಲ್ಲ ಹಾಗೂ ಸಂಕಲನದ ಕೊನೆಯಲ್ಲಿ ಕಠಿಣ ಶಬ್ದಾರ್ಥಗಳನ್ನು ನೀಡಲಾಗಿದೆ.

ಜೀವನ ಸಂಗೀತ ಸಂಕಲನದಲ್ಲಿಯ ಲಾವಣಿಗಳ ಪ್ರಾರಂಭ ಹಾಗೂ ಕೊನೆಯ ಹಾಡುಗಳು ಪ್ರತ್ಯೇಕವಾಗಿ ಕಂಡುಬರುತ್ತವೆ. "ಇನ್ನೇನು? ಲಾವಣಿಕವಿಗಳು ಶೃಂಗಾರ ಪದಗಳನ್ನೇ ಅತಿಶಯವಾಗಿ ಬಳಸುತ್ತಿದ್ದರೂ ಅವರ ಜೀವನವು ಕೇವಲ ದೇಹಾತ್ಮ ಬುದ್ಧಿಯ ಕೊಳೆಯಲ್ಲೇ ಹೊರಳಾಡಿ ಹಾಳಾಗಲಾರದೆಂಬ ಅಂಶವನ್ನು ಪ್ರಾರ್ಥನೆ ಹಾಗೂ ನಿನ್ನ ಹೊರತು ದೇವರೇ ಇಲ್ಲ ಎಂಬ ಕಿರಿಹಾಡುಗಳಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳುವೆವು" ಎಂದು ಅಭಿಪ್ರಾಯಪಡುತ್ತಾರೆ.

'ಪ್ರಾರ್ಥನೆ' ಎಂಬ ಲಾವಣಿಯಲ್ಲಿ 'ಗುರುವೆ ನಿಮ್ಮ ಪಾದಕ ಬೆರೆಸಿ ಪೂಜೆ ಮಾಡುವೆ ಸಾಹಿತ ತರಿಸಿ ಗುರುತಿಸ್ತುತಿಯನ್ನೂ' ಹಾಗೂ 'ನಿನ್ನ ಹೊರತು ದೇವರೇ ಇಲ್ಲ' ಎಂಬ ಲಾವಣಿಯಲ್ಲಿ 'ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ' 'ಶಿವನಸ್ತುತಿಯನ್ನು ಹೊರತು ಪಡಿಸಿದರೆ ಉಳಿದ ಹನ್ನೆರಡು ಲಾವಣಿಗಳೂ ಹೆಣ್ಣು–ಗಂಡಿನ ಸರಸೇವನದ ರಸನಿಮಿಷಗಳನ್ನೇ ಹೇಳುವಂತಹವುಗಳು ಹಾಗೂ ಹನ್ನೆರಡು ಲಾವಣಿಗಳಲ್ಲೂ ಒಂದನೆಯ ಚೌಕ, ಎರಡನೆಯ ಚೌಕ......... ಎಂಬುದಾಗಿ ಒಳ ವಿಭಾಗಗಳಿವೆ. 'ಅಸಲಜಾತ ಹೆಣ್ಣು' ಲಾವಣಿಯಲ್ಲಿ ನಾಲ್ಕು ಚೌಕಗಳಿವೆ. ಲಾವಣಿಯು ಗಂಡು ಹೆಣ್ಣು ಇಬ್ಬರ ಶೃಂಗಾರ ಸಂಭಾಷಣೆಯಾಗಿದೆ. 1ನೆಯ ಚೌಕದಲ್ಲಿ ಲಾವಣಿಕಾರ ಗಂಡು ಹೆಣ್ಣಿನ ಸೌಂದರ್ಯವನ್ನು ಬೇರೆ ಬೇರೆ ಹೋಲಿಕೆಗಳ ಮೂಲಕ ಹೊಗಳುವುದಿದೆ.

"ಆದಿ ವಿಷ್ಣುನರ್ಧಾಂಗಿ ಅಲ್ಲ ಇಕಿಯ ಸರಿ । ಇಕೀ ನಡಾ ನೋಡಿ ಸಿಂಹ ನಾಚಿ ತಿರವಿತ । .... ಮಾರಿ ॥" (1933:3) ಆಕೆಯನ್ನು ಕಂಡಾಗ ಅವನಿಗಾದ ಸಂತೋಷವನ್ನು ಹೀಗೆ ಹೇಳುತ್ತಾನೆ,

"ಭಲ್ಪಲಾ ಪಕ್ಷಿ ಹೋದು ಬೆರೆತ
ಹಾರಿ ನನ ಸುರತ
ಬಾರ ನೀ ಅಂತ ನಮ್ಮ ಮನಿಗಿ
ನಾ ಬಿಟ್ಟಿನಿ ಅನ್ನ ನೀರ ನಿನ್ನ ಕಾಲಾಗ ಸೊರಗಿ
ಹೊಳಿನೀರ ಥೆರುಯ ಹೊಡದಾಂಗ ಓದುತ ನಿಲಗಿ
ತ್ರಿಲೋಕ ತಿರುಗಿ ಬಂದ ಹಾಡಿ
ಇಲ್ಲ ನಿನ್ನ ಜೋಡಿ
ರಂಬಿ ನಿನ್ನ ನೋಡಿ ನಾಚ್ಚಾಳ ಕಡೀಗಿ" (1933:3)

ಗಂಡನಿದ್ದೂ ಹೆಣ್ಣು ಗಂಡು ಜಾತಿಯ ಬಗೆಗೆ ಬೆರಗುತ್ತಾಳೆ. ಆಕೆ ತಾನು ಮಹಾಗರತಿಯೆಂಬಂತೆ ವರ್ತಿಸುತ್ತಾಳೆ.

"ಗಂಡ ಜಾತಿ ಬೈಲ ಭಂಗಾರ
ನಿಮಗ ಏನು ಘೋರ
ಕೇಳುವವರ್‍ಯಾರ ತಾಳಿರಿ ಬೆಳಕ
ಬೇಕಾದು ಮಾಡಿದರ ನಿಮಗ ಏನು ಧೋಕ
ಹಣ್ಣ ಜನ್ಮ ಶಿವ ಹುಟ್ಟಿಸಿದಾನ ಯಾಕ
ಪತಿವ್ರತಾ ಹೋದೀತು ಕರಗಿ
ಗಂಡನ ಸುರಗಿ
ಬರಲಾರದಂಗ ತಿರಗಿ ಹೋದ ಬಳಿಕ

ನಾ ಅದೇನು ಒಗತನಗೇಡಿ
ಜನದಾಗ ಖೋಡಿ ಹಾದರ ಮಾಡಿ
ಹರಲಿ ತಲಿಮ್ಯಾಲ
ಅಹಲ್ಯಾ ್ಯಂದು ಕೇಳಿಲ್ಲೇನು ಕತಿ
ಏನು ಆಯ್ತು ಗತಿ ಗೌತಮಾ ಕಿತಾಪತಿ

ಶಾಪ ಕೊಟ್ಟರಾಗಿ ಬಿದ್ದಳ ಕಲ್ಲಾ
ಸೀತಾಗ ರಾವಣ ಒಯ್ದು ಇರ್ಷ
ರಾಮ ಆಕಿ ಪುರುಷ(ಗೆದ್ದು ತಂದ ಅರಸ)
ಹೊಡದು ಅವನ ಶಿರಸ
ಸೀತಾಗ ಹೊಡಿ ಅಂತ ಹುಕುಮ ಕೊಟ್ಟ ಖುಲಾ" (1933:4–5)

ಹೀಗೆ ಪುರಾಣದ ಘಟನೆಗಳನ್ನು ಪ್ರಿಯತಮನಿಗೆ ನೆನಪಿಸುತ್ತಾಳೆ. ಆ ಮೂಲಕ ತನ್ನ ತನವನ್ನು ಭದ್ರಪಡಿಸಿಕೊಳ್ಳುತ್ತಾಳೆ.

ಆದರೂ ಆತ 'ಗರತಿ' ಬಾಳನ್ನು ಆಕೆಗೆ ನೆನಪಿಸುತ್ತಾನೆ.

"ಐದು ಮಂದಿ ಪುರುಷರನು ಬಿಟ್ಟ
ದ್ರೌಪದಿ ಮಾಡಿ ಕಪಟ
ಕರ್ಣನಲ್ಲಿ ಇಟ್ಟ ಮನಸ ಮಾಡಿ
ಕಲಿ ಬರುವಾಗ ಏರಿತ ಕಲ್ಲಾ
ಗುಡ್ಡದ ಮ್ಯಾಲ ಕುಂಡಿಲೇ ಹುಲ್ಲ
ಮೇಯುತಿತ್ತ ಕತ್ತಿ
ಉಪರಾಟೆ ಕಲಿಯ ಕಾಲ
ಉಳಿಯಲಿಲ್ಲ ಶೀಲ ಗರತಿಗಿಲ್ಲ ಮೋಲ
ಹಾದರಗಿತ್ತಿ ಆಗಿ ಕುಂತಿದಾಳ ಗರತಿ" (1933:6)

ಕೊನೆಗೂ ಪ್ರೀತಿಸಿದ ಗಂಡು–ಹೆಣ್ಣು ಇಬ್ಬರೂ ಜೊತೆಗೂಡುತ್ತಾರೆ. ಇದರ ಪರಿಣಾಮ ಆಕೆಯನ್ನು ಗಂಡ ಮನೆಯಿಂದ ಹೊರಹಾಕುತ್ತಾನೆ. ಊರೆಲ್ಲಾ ಸುದ್ದಿಯಾಗುತ್ತದೆ. ತೌರಿಗೂ ಸುದ್ದಿ ಗೊತ್ತಾಗುತ್ತದೆ.

"ಆಕೆ ಗಂಡಗ ಹತ್ತಿತ ಸುದ್ದಿ
ಕಳೆದ ರಂಡಿ ಬುದ್ದಿ ಹಾಕಿದಾನ ಗುದ್ದಿ
ಹೋಗ ಹಳಿನಾಯಿ
ಸೆರಗ ಹರಿದ ಹೇಳ್ಯಾನ ಎಲ್ಲರಿಗೆ
ತವರೀ ಮನೀಗಿ ಬೀಬಿ ಇಂಗಳಾಗಿ
ಅಲ್ಲಿ ಇಕಿ ತಾಯಿ
ಗಂಡ ನಿಂದೆ ಇತ್ತ ನನಗ ಮಾನ

ಹೊಯ್ತು ಮುತ್ತೈತನ ಆಗಿ ಕುತ್ತ ಮಾನ
ಆದ ಕಿಸಬಾಯಿ" (1933:7–8)

ಖಾಜಾಭಾಯಿಯವರ ಇನ್ನೊಂದು ಲಾವಣಿ 'ಸಂಪಿಗಿ ತೆನಿಯಂಥ ಹುಡುಗ'. ಇಲ್ಲೂ ನಾಲ್ಕು ಚೌಕಗಳಿವೆ. ಮಹಾಭಾರತದ ವಸ್ತುವನ್ನು ಆಯ್ದುಕೊಂಡು ಇಡೀ ಲಾವಣಿ ಹೆಣೆಯಲ್ಪಟ್ಟಿದೆ.

"ಸಂಪಿಗಿ ತೆನಿಯಂಥ ಹುಡುಗ
ಸಂತ್ಯಾಗಾ–ಯ್ದು ಹೋಗ್ತಾನ
ಹಂತೀ ಲೋಗಿ ಕೇಳತೀನ ಹೆಸರ್
ನನ್ನ ಕಾಂತನ ರೂಪ ಹೊಂಟಂಗ ಹುಣ್ವಿ ಚಂದರ್
ಇವನ ಚಿಂತಿಯೊಳಗ ೯ವಕ್ಕಿಲ್ಲ ಸ್ಥಿರಾರ
ಕನಸೀನಾಗ ಕಂಡಂಗಾಯ್ತು
ಮನಸೀ ನಂದು ಹೋಗವೊಲ್ದ
ಹಲಸಂಗಿ ಊರಾಗಿಲ್ಲ ಇವನ ಇಂತವರ" (1933:9)

ಇಡೀ ಲಾವಣಿಯ ಅರ್ಧಭಾಗ ಗಂಡು ಹೆಣ್ಣಿನ ಸಂಭಾಷಣೆ. ಆತ ಆಕೆಯನ್ನು ಹೊಗಳುವ, ಆಕೆ ತನ್ನ 'ಗರತಿ' ತನವನ್ನು ಮನವರಿಕೆ ಮಾಡುವ ಮುಖಾಮುಖಿ ಸಂಭಾಷಣೆಯಾಗುತ್ತದೆ. ಕೊನೆಗೂ

"ಅತ್ತಿ ಮಾವ ಗಂಡ ಗುಣಿಸಿ
ಎಲ್ಲಾರೀಗಿ ಮಲಗಿಸಿ
ಅರಸಾಸ ರಾತ್ರಿಗಿ ಹೊಂಟಾಳ ಅವಸರ" (1933:14)ದಲ್ಲಿ ತನ್ನ ಇನಿಯನನ್ನು ಸೇರುತ್ತಾಳೆ.

'ವತ್ಸಲಾ ಹರಣ' (ಕವಿ–ರಾ ಕುಬಣ್ಣ), 'ಗೋಕುಲಾಷ್ಟಮಿ' (ಗುರು ಹರದಾಸರ ಕವಿ ಸಂಗಣ್ಣ) 'ಕೃಷ್ಣಲೀಲೆ' (ಶಿವಲಿಂಗ) ಹಾಗೂ 'ಭೀಷ್ಮಪರ್ವ' (ಸಿದ್ದೂಶಿವಲಿಂಗ) ನಾಲ್ಕೂ ಲಾವಣಿಗಳ ವಸ್ತುಗಳನ್ನು ಪುರಾಣದ ಕಲ್ಪನೆಯಿಂದ ಆಯ್ದುಕೊಳ್ಳಲಾಗಿದೆ.

'ಚಂದ್ರಣಿ' (ಖಜಾಭಾಯಿ), 'ಬಸದಿದ್ದೀನೆ ಸರಿನ್ನೇನಿಡೂನ?' (ನಾನಾಸಾಬ), 'ನಾಗರ ಪಂಚಮಿ' (ನ್ಯಾಮಣ್ಣ), 'ಗಿಡ್ಡಪೋರಿ' (ಸಿದ್ದುಶಿವಲಿಂಗ) ಹಾಗೂ 'ಅಷ್ಟೂರ ಮಾತಿದು' (ಗೋಪಾಳದುರದುಂಡಿ) ಐದೂ ಲಾವಣಿಗಳ ವಸ್ತು ಸುತ್ತಲಿನ ಸಮಾಜದ ಆಗುಹೋಗುಗಳನ್ನೊಳಗೊಂಡಿದೆ. ಮುಖ್ಯವಾಗಿ ನೀತಿಯನ್ನು ಸಾರುವುದು ಇವರ ಉದ್ದೇಶವಾಗಿತ್ತು.

'ಕರೀ ಹುಡುಗಿ' (ಖಾಜಾಭಾಯಿ) ಲಾವಣಿಯಲ್ಲಿ ಕಪ್ಪು ಹುಡುಗಿಯ ಸೌಂದರ್ಯವನ್ನು ಕೆಂಪು ಹುಡುಗ ಹೊಗಳುವ ಚಿತ್ರಣವಿದೆ.

ಇಂಗ್ಲಿಷ್ ವಸಾಹತುಶಾಹಿಯಿಂದ ಭಾರತದ ಸಂಸ್ಕೃತಿಯಲ್ಲಾದ ಬದಲಾವಣೆಯನ್ನು ಅರ್ಥಮಾಡಿಕೊಂಡು ಲಾವಣಿಕಾರರು ರಾಷ್ಟ್ರೀಯ ಹೋರಾಟದ ಸಂದರ್ಭಕ್ಕೆ ಜನಜಾಗೃತಿಯ ಕಾರ್ಯಕ್ಕೆ ತೊಡಗಿದರು. ಇದೇ ಸಂದರ್ಭದಲ್ಲಿ ಗೋಪಾಳ ದುರದುಂಡಿ 'ಅಷ್ಟೂರ ಮಾತಿದು' ಎಂಬ ಲಾವಣಿಯನ್ನು ರಚಿಸುತ್ತಾನೆ.

"ಅಷ್ಟೂರ ಮಾತಿದು ನಿಷ್ಟೂರ ಹೇಳತೀನಿ
ಬಿಟ್ಟಿಲ್ಲ ತುಂಬಿತು ಜನವೆಲ್ಲ
ಹೊಟ್ಟಿಯಂಥ ವೈರಿಯಾವುದಿಲ್ಲ
ರೊಟ್ಟಿಯಂಥ ಮೈ ತರು ಇಲ್ಲಾ"(1933:63)

ಹಾಗಾಗಿ,

"ಗೈತೆಪ್ಪ ಇಂಗ್ರೆ ಅಮಲಾ
ಗಂಡ ಸೂತ್ತೊದು ಹೆಂಗಸರ ಕಾಲಾ"(1933:64)

ಪಾಶ್ಚಾತ್ಯರ ಆಗಮನದಿಂದ ಸಾಮಾಜಿಕ ವ್ಯವಸ್ಥೆಯ ಮೇಲೆ ಆಗಿರುವ ಆಘಾತ ಲಾವಣಿಯಲ್ಲಿ ಬಹಳ ಸ್ಪಷ್ಟವಾಗುತ್ತದೆ. 'ಜೀವನ ಸಂಗೀತ' ಲಾವಣಿ ಸಂಕಲನವನ್ನು ಗಮನಿಸಿದಾಗ,

1. ಸಂಕಲನದ ಕೇಂದ್ರ ಬಿಂದು ಹೆಣ್ಣು ಆಗಿದ್ದಾಳೆ. ಆಕೆ ಎಂಥಾ ಹೆಣ್ಣೆಂದರೆ, ಗಂಡನಿದ್ದೂ ಬೇರೊಬ್ಬ ಪುರುಷನ ಸ್ನೇಹವನ್ನು ಬಯಸುವಳು. ಗಂಡನನ್ನು ವಿಷ ಹಾಕಿ ಕೊಲ್ಲುವವಳು. (ಉದಾ: ಚಂದ್ರುಣಿ ಲಾವಣಿ)

2. ಹೆಚ್ಚು ಲಾವಣಿಗಳಿಗೆ ಮಹಾಭಾರತ ಕತೆಯ ಪ್ರೇರಣೆಯಿದೆ. ಹಾಗಾಗಿ ಮಹಾಭಾರತದ ಪಾತ್ರಗಳನ್ನು ವರ್ತಮಾನದ ಘಟನೆಗಳಿಗೆ ಹೋಲಿಸಿ, ಆ ಮೂಲಕ ನೀತಿಯನ್ನು ಸಾರುವುದು ಮುಖ್ಯವಾಯಿತು. ಮಹಾಭಾರತದ ವಸ್ತುವನ್ನೇ ಯಾಕೆ ಆಯ್ದುಕೊಂಡರೆಂದರೆ ಅದು ಜನರಿಗೆ ಬಹು ಸುಲಭದಲ್ಲಿ ತಲುಪಬಲ್ಲ 'ಪುರಾಣ' ಕತೆಯಾದುದರಿಂದ ಹೇಳಬಹುದಾದ ನೀತಿಯನ್ನು ಸುಲಭವಾಗಿ ತಲುಪಿಸುವುದಕ್ಕೆ ಸಾಧ್ಯವಾಯಿತು. ಆದುದರಿಂದ ನೀತಿಯನ್ನು ಸಾರುವುದರ ಜೊತೆಗೆ ರಾಷ್ಟ್ರೀಯ ಹೋರಾಟಕ್ಕೆ ಜಾಗೃತಿಯನ್ನು ಮೂಡಿಸುವುದಕ್ಕೆ ಅವಕಾಶವಾಯಿತು.

3. ಇಡೀ ಸಂಕಲನದ ಎಲ್ಲಾ ಲಾವಣಿಗಳಲ್ಲೂ ಗರತಿಯನ್ನು ಗೇಲಿ ಮಾಡುವ, ಆಕೆ ಸಾಮಾಜಿಕ ವ್ಯವಸ್ಥೆಗೆ ವಿರುದ್ಧವಾಗಿ ವರ್ತಿಸುವ ಘಟನೆಗಳಿವೆ. ಹೀಗೆ ಗೇಲಿ ಮಾಡುವುದರ ಜೊತೆಗೆ ಗರತಿಯ ಬಾಳನ್ನು ಮತ್ತಷ್ಟು ಉದಾತ್ತೀಕರಿಸಿದಂತೆ ಆಗುತ್ತದೆ. ಅಂದರೆ ಗರತಿ ತ್ಯಸುವ ಕುಟುಂಬ, ಆಕೆಯ ತೀರ್ಮಾನಗಳು ನೈಜ ವ್ಯವಸ್ಥೆಗಿಂತ ಹೀನವಾದದ್ದು ಎಂದು ಸಾರುವುದೂ ಇಲ್ಲಿ ಮುಖ್ಯವಾಗಿದೆ. ಹಿಂದಿನ ಧೋರಣೆಯಂತೆ ಗರತಿಯನ್ನು ಮತ್ತಷ್ಟು ಭದ್ರಪಡಿಸಿದಂತೆ ಆಗುತ್ತದೆ.[27]

1933ರಲ್ಲಿ **ತೇಲಪಂಡ ಶಾಂಭವಾ ನಂದಸ್ವಾಮಿ**ಯವರು **'ಸೋಳೈಪಾಟ್'** ಎಂಬ ಲಾವಣಿ ಸಂಗ್ರಹವನ್ನು ಪ್ರಕಟಿಸಿದರು. ಪೂರ್ವಾಶ್ರಮದಲ್ಲಿ ಕೊಡಗಿನ ತೇಲಪಾಂಡ ಕುಟುಂಬದವರಾದ ಶಾಂಭವಾನಂದ ಸ್ವಾಮಿಯವರು ಕೊಡಗಿನಲ್ಲಿ ಹರಡಿದ್ದ ಮಲೇರಿಯ ಜ್ವರ, ಅದರ ಕಾರಣ, ಅದರ ತಡೆ ಹಾಗೂ ನಿವಾರಣೆಗೆ ಸಂಬಂಧಿಸಿದ ಸೋಳೈಪಾಟ್ ಲಾವಣಿಗಳನ್ನು ಬರೆದರು. ಇದು ಕೊಡವ ಭಾಷೆಯಲ್ಲಿದೆ.

1936–38ರಲ್ಲಿ ಸಿ. ರಂಗಯ್ಯ ಎಂಬವರು 'ವೀರಮಣಿ ಓಬವ್ವ' ಎಂಬ ಲಾವಣಿ ಹಾಗೂ ಸಾಂಗತ್ಯ ಸರಣಿಯನ್ನು ರಚನೆಗೊಳಿಸಿದರು.[28] ಇದು ಶರಣ ಸಾಹಿತ್ಯ. ವೀರ ಓಬವ್ವನ ಸಾಹಸವನ್ನು ಕೇಳಿ 'ವೀರರಕ್ತುತ ವುಕ್ಕೇರೆ ವೀರಾವೇಶದಿ ಬರೆದನು ರಮ್ಗಯ್ಯ ಮಿರಿ ರೋಮಾಂಚನವು ಎರೆ' ಎಂಬುದಾಗಿ ಕವಿಯು ಲಾವಣಿ ಕೊನೆಯಲ್ಲಿ ಹೇಳಿಕೊಂಡಿದ್ದಾನೆ. ಜನರು ನಂಬಿರುವ ಕತೆಯ ಪ್ರಕಾರ 'ಓಬವ್ವೆಯು ತನ್ನ ಸಾಹಸ ಕಾರ್ಯವನ್ನೆಸಗುವಾಗಲೇ ಶತ್ರುಗಳಿಂದ ಕೊಲ್ಲಲ್ಪಟ್ಟವರು. ಆದರೆ ಆಕೆಯು ಆಗ ಕೊಲ್ಲಲ್ಪಡದೆ ದುರ್ಗಕ್ಕೆ ಒದಗಿ ಬಂದಿದ್ದ ಗಂಡಾಂತರದಿಂದ ದುರ್ಗವನ್ನು ಪಾರು ಮಾಡುವುದರೊಡನೆ ತಾನೂ ಬದುಕುಳಿದಳೆಂದೂ' ಇತರರು ಬರೆದು ಪ್ರಸಿದ್ಧಿಸುವ ಮೊದಲೇ ರಂಗಯ್ಯ ಇದೇ ಸಂದರ್ಭವನ್ನು, ಮದಕರಿನಾಯ್ಕನು ಬಂಟರ ನಿರ್ಮಲ ಹೃದಯವನ್ನರಿತು' ಮುದದಿಂದ ಪದುಳದಿಂ ಉದರ ಪೋಷಣೆಗೆಂದು ಕೈತುಂಬ ಹಣಕಾಸು ಹರುಷದಿಂ ಪೋಷಾಕು ಧನಧಾನ್ಯ ಭೋಜನ ಕೊಟ್ಟು ಕಳುಹಿದನಾದರದಿಂದ' ಎಂದು ಗುರುತಿಸಿರುವುದು ಗಮನಾರ್ಹ. ರಂಗಯ್ಯ ಅವರ ಲಾವಣಿ–ಸಾಂಗತ್ಯ ಸರಣಿಗೆ ಜೋಯಿಸರೇ ಮೊದಲ ಮಾತನ್ನು ಬರೆದಿರುತ್ತಾರೆ. ಓಬಿಯು ಸ್ಥಳದಲ್ಲೇ ಮೃತಳಾದಳೆಂಬ ಜನಜನಿತ ಕತೆಯನ್ನು ಹೀಗೆ ಉಲ್ಲೇಖಿಸುತ್ತಾರೆ. ಗಾಯಗಳಿಂದ ನರಳುತ್ತಾ ರಾಜನ (ಮದಕರಿ ನಾಯಕನ) ಪಾದಗಳ ಬಳಿ ಉರುಳಿದಳು.[29] ಸಿ.ರಂಗಯ್ಯನವರು ಬರೆದಿರುವ ಲಾವಣಿ ಹಾಗೂ ಸಾಂಗತ್ಯ ರಚನೆಯು ಐತಿಹಾಸಿಕ ಮಹತ್ತ್ವವನ್ನು ಪಡೆದಿವೆ.

1937ರಲ್ಲಿ **ಎ.ಆರ್. ಶಿವನಾಗಪ್ಪನವರು** ಸಂಗ್ರಹಿಸಿರುವ **'ಸಚಿತ್ರ ಮನೋಹರ ಲಾವಣಿ ಪದಗಳು'** ಸಂಕಲನ ಪ್ರಕಟವಾಯಿತು. 65 ಪುಟಗಳುಳ್ಳ ಸಂಗ್ರಹದಲ್ಲಿ ಉತ್ತರ ಕರ್ನಾಟಕ ಭಾಗದ ಜನರಾಡುತ್ತಿದ್ದ **'ಕಡ್ಲಿ ಮಟ್ಟಿ ಸ್ಟೇಷನ್ ಮಾಸ್ತರ'** ಮೊದಲಾದ ಬಹಳ ಜನಪ್ರಿಯ ಲಾವಣಿಗಳಿವೆ.

1940ರಲ್ಲಿ ಜಯಂತಿ ಪತ್ರಿಕೆ (ಸಂ:3,ಪು:140) ಯಲ್ಲಿ **ಹುಲ್ಲೂರು ಶ್ರೀನಿವಾಸ ಜೋಯಿಸರು** ಸಂಗ್ರಹಿಸಿದ **'ಮಾಯಿಕೊಂಡದ ಮುತ್ತಿಗೆ'** ಅಥವಾ **'ರಣಧೀರ ಹಿರೇ ಮದಕರಿ ನಾಯಕ'** ಎಂಬ ಲಾವಣಿ ಪದವು ಪ್ರಕಟವಾಯಿತು.

1941ರಲ್ಲಿ **ಪಟ್ಟದೇವರು ಹಿರೇಮಠ ಹುಲಕುಂದ, ಸತ್ಯಪ್ಪಾ ನಿಂಗಪ್ಪಾ, ಹುಲಕುಂದ** ಸಂಗ್ರಹಿಸಿದ **'ಸದ್ಬೋಧ ಚರಿತ ರಾಷ್ಟ್ರೀಯ ಆನಂದ ಲಾವಣಿ ಪದಗಳು'** ಸಂಕಲನ ಪ್ರಕಟವಾಯಿತು. 33 ಪುಟಗಳ ಲಾವಣಿಗಳು ಉತ್ತರ ಕರ್ನಾಟಕ ಭಾಗದವುಗಳು. ರಾಷ್ಟ್ರಭಕ್ತಿ, ನೀತಿ ಸಾರ ಆಶಯಗಳುಳ್ಳ ಪ್ರಸಿದ್ಧ ಲಾವಣಿ ಪದಗಳಿವು.

1944ರಲ್ಲಿ **ಸುಬೋಧ ಪತ್ರಿಕೆ** (ಸೆಪ್ಟೆಂಬರ್)ಯಲ್ಲಿ ದಿವಂಗತ **ಹುಲ್ಲೂರು ಶ್ರೀನಿವಾಸ ಜೋಯಿಸರು** ಸಂಗ್ರಹಿಸಿರುವ **'ಪಾಳೆಯಗಾರರ ಕೋಲು ಪದಗಳು'** ಲಾವಣಿ ಪದ ಪ್ರಕಟವಾಯಿತು. ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದ ಸಂಗ್ರಹದಲ್ಲಿ ಕೆಲವು ಗೀತೆಗಳು ಹಾಗೂ ಅವುಗಳ ಹಿನ್ನೆಲೆಯ ವ್ಯಾಖ್ಯಾನಗಳಿವೆ.

1946ರಲ್ಲಿ **ಎಂ.ಕೆ.ಮಾರನ** ಬಸರಿಯವರು ಸಂಗ್ರಹಿಸಿರುವ **'ತತ್ವಲಾವಣಿಯ ಪದಗಳು'** ಕೃತಿ ಪ್ರಕಟವಾಯಿತು. 32 ಪುಟಗಳ ಗ್ರಂಥದ ಹಾಡುಗಳನ್ನು ಉತ್ತರ ಕರ್ನಾಟಕದ ಭಾಗದಿಂದ ಸಂಗ್ರಹಿಸಲಾಗಿದ್ದು, ಇದರಲ್ಲಿ ಒಟ್ಟು 22 ಲಾವಣಿ ಪದಗಳಿವೆ.

ಗದ್ಯ ಸಾಹಿತ್ಯ : ಕತೆಗಳು

ಮೊದಲ ಘಟ್ಟದ ಜಾನಪದ ಅಧ್ಯಯನಕ್ಕೆ ಸಂಬಂಧಿಸಿ ಕನ್ನಡ ಜನಪದ ಕತೆಗಳ ಬಗೆಗೆ ಇಲ್ಲವೆಂಬಷ್ಟು ಕಡಿಮೆ ಸಂಗ್ರಹಗಳು ಪ್ರಕಟವಾಗಿವೆ. 1840ರಲ್ಲಿ **ಇಸೋಪನ ನೀತಿಕಥೆಗಳು** ಕನ್ನಡಕ್ಕೆ ಅನುವಾದವಾದವು. 1889ರಲ್ಲಿ **ಮೇರಿ ಫ್ರೇರೆ** ಸಂಗ್ರಹಿಸಿದ ಮಹಾರಾಷ್ಟ್ರ, ಬೆಳಗಾಂ, ಭಾಗದ ಕತೆಗಳು ಇಂಗ್ಲಿಷಿನಲ್ಲಿ ಅನುವಾದ ಗ್ರಂಥವಾಗಿ ಪ್ರಕಟವಾಗಿದೆ. 1900ರ ಅವಧಿಯಲ್ಲಿ **ಎಂ.ಎನ್. ಶ್ರೀಕಂಠೇಶಗೌಡರು** ಮಂಡ್ಯ ಜಿಲ್ಲೆಯಲ್ಲಿ ಪ್ರಚಲಿತದಲ್ಲಿದ್ದ 8 ಕತೆಗಳನ್ನು ಪ್ರಕಟಿಸಿದರು. 1941ರಲ್ಲಿ **ಜಿ.ಪಿ. ರಾಜ್ರತ್ನಂ 'ಜಾತಕ ಕತೆಗಳ'**ನ್ನು ಅನುವಾದಿಸಿದರು. 1947ರಲ್ಲಿ ಎಂ. ರಾಮರಾವ್, ಚಿದಂಬರಂ ಕೂಡಲಿ

ಹಾಗೂ ಎಚ್.ಎಂ. ಶಂಕರನಾರಾಯಣರಾವ್ ಗ್ರಿಮ್ಸ್ ಕತೆಗಳನ್ನು ಕನ್ನಡದಲ್ಲಿ ಅನುವಾದ ಗ್ರಂಥವಾಗಿ ಪ್ರಕಟಿಸಿದರು.

1840ರಲ್ಲಿ **'ಇಸೋಪನ ನೀತಿ ಕಥೆಗಳು'** (ಕರ್ನಾಟಕ ಟ್ರಾನ್ಸ್‌ಲೇಷನ್ ಇಸೋಪ್ಸ್ ಫ್ಯಾಬಲ್ಸ್) ಎಂಬ ಅನುವಾದ ಸಂಕಲನ ಪ್ರಕಟವಾಗಿದೆ. **ವಿಲ್ವಟ್ ಎಲಿಯೆಟ್**‌ನ ಅಧಿಕಾರ ಅವಧಿಯಲ್ಲಿ, ಮದ್ರಾಸ್ ಸ್ಕೂಲ್ ಬುಕ್ ಸೊಸಾಯಿಟಿ ಪ್ರಕಟಿಸಿತು. 244 ಪುಟಗಳ ಕೃತಿಯು ಕಲ್ಲಚ್ಚು ರೂಪದಲ್ಲಿದೆ. 188 ನೀತಿಕಥೆಗಳಿವೆ. ನರಿ, ಎತ್ತು, ಕಪ್ಪೆ, ಹಾವು, ಕುದುರೆ, ಕಡವೆ, ಸಿಂಹ, ಹಕ್ಕಿ, ಹಂಸ, ಕಸ್ತೂರಿ ಮೃಗ – ಮನುಷ್ಯ ಹಾಗೂ ಪ್ರಾಣಿ ಪ್ರಾಣಿ ಸಂಬಂಧಿ ನೀತಿಕಥೆಗಳೆ ಹೆಚ್ಚು. ಪ್ರತೀ ಕಥೆಯ ಕೊನೆಯಲ್ಲಿ ಕಥೆಯ ತಾತ್ಪರ್ಯವಿದೆ. ಉದಾಹರಣೆಗೆ ಕಥೆ 15. ಮನುಷ್ಯನೂ – ಹಂಸವು

"ಒಬ್ಬ ಮನುಷ್ಯನ ಹತ್ತಿರ ಒಂದು ಹಂಸವಿರುವುದು. ಅದು ನಿತ್ಯವೂ ಒಂದು ಚಿನ್ನದ ಮೊಟ್ಟೆಯಂನಿಡಿತ್ತಿರುವದು. ಅದಂನು ತೆಗೆದುಕೊಂಡು ಆ ಮನುಷ್ಯಗೆ ಆಶೆ ತೀರದೆ ಅತ್ಯಾಶೆಯಿಂದ ಆ ಬಂಗಾರದ ಮೊಟ್ಟೆಗಳೆಲ್ಲಿಂದ ಬರುತ್ತವೊ ಆ ಸ್ಥಳವು ನನಗೆ ಪ್ರಾಪ್ತವಾದರೆ ಆ ಸಂಖ್ಯೇಯವಾದ ಧನವು ನನಗೊಂದೇ ಸರ್ತಿ ದೊರೆಯುವವೆಂದು ಮನದಲ್ಲಿ ಯೋಚಿಸಿ ಆ ಹಂಸದ ಹೊಟ್ಟೆಯಂನು ಸೀಳಿ ನೋಡಲಾಗೇನೂ ಶಿಕ್ಕಲಿಲ್ಲದರಿಂದೂ ಮನುಷ್ಯನು ಬಹು ಪಶ್ಚಾತ್ತಾಪವನ್ನು ಹೊಂದಿದನು.

ತಾತ್ಪರ್ಯವುಶ್ವರನು ಯಾವ ಪುರುಷನಿಗೆ ತ್ಯಾಗ ಭೋಗರ್ಹವಾದ ಸಂಪತ್ತನ್ನು ಕೊಡುತ್ತಾನೋ ಅವನು ಧನ ಸಂಗ್ರಹವ ಮಾಡಬೇಕು ಹೀಂಗೆ ಮಾಡದೆ ಯಾವನಾದರು ಅತ್ಯಾಶೆಯಿಂದೊಂದೇ ಬಾರಿ ಶ್ರೀಮಂತನಾಗಬೇಕೆಂದುಯೇನಾದರೂ ಒಂದು ದೊಡ್ಡ ಪ್ರಯತ್ನ ಮಾಡಿದರೆ ಅವನ ಪ್ರಯತ್ನವೂ ವಿಫಲವಾಗಿ ಅವನಲ್ಲಿದ್ದ ಪದಾರ್ಥವೂ ಹೋಗುತ್ತದೆ" (1840:14–15)

ಕಥೆಗೊಂದು ತಾತ್ಪರ್ಯವನ್ನು ಹೇಳುವ ಮೂಲಕ ಆ ಸಂದರ್ಭದಲ್ಲಿ ಕೆಟ್ಟದನ್ನು ಮಾಡಬಾರದು. ಅತ್ಯಾಸೆ ಇರಬಾರದು, ಮೋಸ ಮಾಡಬಾರದು ಮುಂತಾದ ಅನೇಕ ರೀತಿಯ ನೀತಿಯನ್ನು ಸಾರುವ ಕಥಾಸಂಗ್ರಹವು ಇದಾಗಿದೆ. ಇಲ್ಲಿರುವ ಎಲ್ಲಾ ಕಥೆಗಳೂ ಚುಟುಕಾಗಿವೆ. ಎಲ್ಲವೂ ನೀತಿಕಥೆಗಳೂ ಹಾಗೂ ಪ್ರಾಣಿ ಕಥೆಗಳ ವರ್ಗಕ್ಕೆ ಸೇರಿದವುಗಳು. ನವೋದಯ ಪೂರ್ವದ ಕಾಲಘಟ್ಟದಲ್ಲಿ ಅನುವಾದಗೊಂಡಿರುವುದರಿಂದ ಇಲ್ಲಿಯ ಭಾಷೆಯ ಬಳಕೆ ಸರಳವಾಗಿಯೂ ಒತ್ತಕ್ಷರಗಳಿಲ್ಲದೆಯೂ ಉದ್ದಕ್ಕೂ ಹೇಳುತ್ತಾ ಹೋಗುವ ನಿರೂಪಣಾ ಶೈಲಿಯಲ್ಲಿದೆ.

1881ರಲ್ಲಿ **'ಓಲ್ಡ್ ಡೆಕ್ಕನ್ ಡೇಸ್'** ಎಂಬ ಹೆಸರಿನಲ್ಲಿ ಮಹಾರಾಷ್ಟ್ರ ಹಾಗೂ ಕರ್ನಾಟಕದ ಗಡಿಭಾಗದ ಜನಪದ ಕತೆಗಳ ಅನುವಾದ ಸಂಕಲನ ಪ್ರಕಟವಾಯಿತು. ದಕ್ಷಿಣ ಭಾರತದಲ್ಲಿ ಪ್ರಚಲಿತವಿರುವ **'ಹಿಂದೂ ರಮ್ಯ ಕತೆ'** (ಐತಿಹ್ಯ) ಗಳ ಆಶಯವಿದೆ. **ಮೇರಿ ಫ್ರೇರೆ** ಎಂಬವರು ಸಂಪಾದಿಸಿರುವ ಸಂಕಲನದಲ್ಲಿ 1866ರಲ್ಲಿ ಅನ್ನಾ ಲಿಬರ್ಟಾ ಡಿ'ಸೋಜಾ ಅವರೊಬ್ಬರೇ ಹೇಳಿರುವ 24 ಕತೆಗಳನ್ನು ಸಂಗ್ರಹಿಸಿ ಕೊಡಲಾಗಿದೆ. 1. Punchkin, 2. A unny Story, 3. Brave Seventee Bai, 4. Truth's Triumph, 5. Rama and Laxman: or, the Learned owl, 6.Little surya Bai, 7. The wandering o Vicram Maharajah, 8. Less inequality than men deem, 9. Panch-Phul ranee, 10. How the sun, the moon, and the wind went out to diner, 11. Singh rajah and the cunning Little Jackles, 12. The Jackal, the Barber, and the Brahman who had seven daughters, 13. Tit or at, 14. The Brahmin, the tiger, and the six judges, 15. The selish sparrow and the houseless crows, 16. The valiant Chattee-Maker, 17. The Raksha's Palace, 18. The Blind man, the Dea man and the Donkey, 19. Muchie-Lal, 20. Chndun Rajah, 21. Sodewa Bai, 22. Chandra's vengeance, 23. How the three clever men out witted the Demons, 24. The Alligator and the Jackal.

ಕಥೆಗಳ ಪ್ರಾರಂಭ ಹಾಗೂ ಕೊನೆಯಲ್ಲಿ ಕತೆಯ ವಿವರಗಳಿಗೆ ಅನುಗುಣವಾಗಿ ರೇಖಾಚಿತ್ರಗಳಿವೆ. ಮನೆಯ ಚಿತ್ರ, ಮಕ್ಕಳ ಚಿತ್ರ, ಹಾವಿನ ಚಿತ್ರ, ಹೂವಿನ ಚಿತ್ರ, ರಾಜ ಕುದುರೆ ಓಡಿಸುವ ಚಿತ್ರ, ಇಲಿಯ ಚಿತ್ರ, ಜಿಂಕೆ ಚಿತ್ರ, ಗಿಳಿಯ ಚಿತ್ರ, ಸಿಂಹದ ಚಿತ್ರ, ಸೂರ್ಯಚಂದ್ರರ ಚಿತ್ರ, ಹಣ್ಣಿನ ಚಿತ್ರ, ಮಡಕೆಯ ಚಿತ್ರ, ಒಂಟೆಯ ಚಿತ್ರ, ಹುಲಿಯ ಚಿತ್ರ, ಮೀನಿನ ಚಿತ್ರ, ರಾಕ್ಷಸರ ಚಿತ್ರ, ಮೊಸಳೆಯ ಚಿತ್ರ, – ಹೀಗೆ ಒಟ್ಟು 45 ಚಿತ್ರಗಳಿವೆ. ಇವುಗಳಲ್ಲಿ ಹೆಚ್ಚಿನವುಗಳು ಪ್ರಾಣಿ–ಪಕ್ಷಿಗಳನ್ನು ಒಳಗೊಂಡಂತೆ ರಚನೆಯಾಗಿವೆ. ಜನಪದ ಕತೆಗಳ ವರ್ಗಸೂಚಿಯನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ, ಹೆಚ್ಚಿನ ಕತೆಗಳ ಪ್ರಧಾನ ಆಶಯ ಪ್ರಾಣಿ ಕತೆಗಳ ವರ್ಗಸೂಚಿಗೆ ಹೊಂದುತ್ತವೆ. ನೀತಿಯನ್ನೇ ಹೇಳುವ ಕತೆಗಳನ್ನು ಪಟ್ಟಿ ಮಾಡಬಹುದು.

ಪ್ರಸ್ತಾವನೆಯಲ್ಲಿ ದಕ್ಷಿಣ ಭಾರತದ ಹಿಂದೂ ಜನರು ಯಾವ ಯಾವ ಸಂದರ್ಭದಲ್ಲಿ ಕತೆ ಹೇಳುತ್ತಾರೆ. ಆ ಕತೆಗಳು ಪರಂಪರೆಯಲ್ಲಿ, ಇತಿಹಾಸದಲ್ಲಿ ನಂಬಿಕೆಗಳಾಗಿ ಸಾಂಸ್ಕೃತಿಕ ಘಟನೆಗಳಾಗಿ ಹೇಗೆ ಪ್ರಚಲಿತದಲ್ಲಿವೆ ಎಂಬುದನ್ನು ಅಧ್ಯಯನಿಸಬಹುದು. ಸಂಕಲನದ ಕತೆಗಳ ಬಗೆಗೆ ಸಂಗ್ರಾಹಕರ ಅಭಿಪ್ರಾಯ ಹೀಗಿದೆ; "The collection o these

legends was commenced with the object alluded to in the dedication. It was continued, as they appeared in themselves curious illustration o Indian popular tradition, and in the hope that something might thus be done to rescur them the danger o oral transmission.

Though varied in their imagery, the changes between the dierent legends are rung upon ew themes, as i purposely conined to what was most amiliar to the people. The similarity between the incidents in some o these and in avourite European stories is curious ; and the leading characteristics peculiar to all oxthodox airly tales are here preserved intact. Step-mothers are always cruel, ogres always stupid; Youngest daughters more clever than their elder sisters; and the Jackal usually overcomes every diiculty, and proves a bright moral example o the success o wit against brute orce- the triumph o mind over matter".(1889: xviii)

ಕತೆಗಳ ನಿರೂಪಕಿ ಅನ್ನಾ **ಲಿಬರ್ಟಾ ಡಿ'ಸೋಜಾ** ಆಕೆಯ ಬಗ್ಗೆ ಸಂಗ್ರಾಹಕರ ಅಭಿಪ್ರಾಯ ಹೀಗಿದೆ; "In the Narator's Narrative Anna Liberatade Souza's own story is related, as much as possible, in her own story is related, as much asa possible, in her own words o expressive but broken English. She did not, however, tell it in one broken English. She did not, however, tell it in one continuous narrative; it is the sum o many conversations I had with her, during the eighteen months that she was with us" (1889: xix)

With the exception o two or three, which will be recognized as substantially identical with stories o pilpai or other well-known HIndoo abulists, I never beore heard any o these tales among the Mahrattas, in that part o the Deccan where the narrator and her amily have lived or the last two generations, and it is probable that most o the stories were brought rom among the Lingaets o Southern India, the tribe, or rather sect., to which Anna de Dsouza tells us her amily belonged beore their conversation to Christianity" (1889: xii)

ಹಿಂದೂ–ರಮ್ಯಕತೆಗಳನ್ನು ಒಳಗೊಂಡ ಕತೆಗಳು ಕರ್ನಾಟಕದ ಉತ್ತರ ಭಾಗದಲ್ಲಿ ಪ್ರಚಲಿತದಲ್ಲಿರುವವುಗಳು. ಕತೆಗಳು ದಕ್ಷಿಣ ಭಾರತದಲ್ಲಿ ಪ್ರಚಲಿತದಲ್ಲಿದ್ದು, ಎಲ್ಲಾ ಕತೆಗಳೂ ನಂಬಿಕೆಯೊಂದರ ಆಧಾರದ ಮೇಲೆ ರಚನೆಗೊಂಡಿವೆ. ಕತೆಗಳನ್ನು ಮಹಿಳಾ ನಿರೂಪಕಿಯೊಬ್ಬಳಿಂದ ಸಂಗ್ರಹಿಸಲಾಗಿದೆ.

ಹೊಸಗನ್ನಡ ಸಾಹಿತ್ಯೋದಯಕ್ಕೆ ಕಾರಣರಾದವರಲ್ಲಿ ಎಂ.ಯನ್. ಶ್ರೀಕಂಠೇಶಗೌಡರೂ ಒಬ್ಬರು. (1852–1926) ಮಂಡ್ಯ ಜಿಲ್ಲೆಯ ಮದ್ದೂರೂ ತಾಲೂಕಿನ ದೇಶ ಹಳ್ಳಿಯವರು. 19ನೆಯ ಶತಮಾನದ ಕೊನೆಯ ದಶಕದಲ್ಲಿ ತಮ್ಮ ಕೃತಿಗಳನ್ನು ಪ್ರಕಟಿಸಿ ಸಾಹಿತ್ಯಲೋಕಕ್ಕೆ ಕೊಡುಗೆ ಸಲ್ಲಿಸಿದ್ದಾರೆ. ನಾಟಕ, ಕಾದಂಬರಿ, ಕಾವ್ಯ, ಜೀವನಚರಿತ್ರೆ, ಜಾನಪದ ಕತೆಗಳು ಬಿಡಿಬರಹಗಳನ್ನು ಬರೆದಿದ್ದಾರೆ. ಶ್ರೀಕಂಠೇಶಗೌಡರು ಎಂಟು ಜನಪದ ಕತೆಗಳನ್ನು ಸಂಗ್ರಹಿಸಿದ್ದಾರೆ. 1. ದ್ವಾದಶ ಕುಮಾರರು, 2. ವಿವೇಕಕ್ಕೆ ತಕ್ಕಂತಹ ಪ್ರತಿಫಲ, 3. ಪುಷ್ಪ ಮಂಜರಿಯ ಕಥೆ, 4. ಅಧಿಕಾರ ವಿದೇಯತೆ, 5. ಕೋತಿಯೋ ಕನ್ನಡಿಯೋ, 6. ಭೂಲೋಕದ ಯಮ, 7. ಬುದ್ಧಿವಂತರ ಕತೆ ಹಾಗೂ, 8. ಭಕ್ತಿ ಪಾಠ. ಎಂಟೂ ಕತೆಗಳು ನೀತಿಕತೆಗಳಾಗಿ ತೋರುತ್ತವೆ. ಮೊದಲ ಮೂರು ಕತೆಗಳು ರಮ್ಯ ಕತೆಗಳಾಗಿವೆ. 'ದ್ವಾದಶಕುಮಾರರು' ಕತೆಯಲ್ಲಿ ಪರರಿಗೆ ಉಪಕಾರ ಮಾಡಬೇಕೆಂಬ ಆಶಯವಿದೆ. ಇನ್ನುಳಿದ ಕತೆಗಳು ಪ್ರಾಣಿ ಕತೆಗಳ ವರ್ಗಕ್ಕೆ ಸೇರುವುವು. **'ಜೇನುಹುಳು' 'ಸಂಸಾರದ ಕತೆ',** 'ಕೋತಿ ಕನ್ನಡಿಯೊಂದನ್ನು ತೋರಿಸಿ ಕಾಡಿನ ಎಲ್ಲಾ ಪ್ರಾಣಿಗಳನ್ನು ಮೋಸ ಮಾಡುವುದು', ಹಾಗೂ 'ಪತಂಗ ಹಾಗೂ ಟಿಟಿಬ್ಬ' ತಮ್ಮ ಜೀವನ ವೃತ್ತಾಂತರಗಳ ಬಗ್ಗೆ ಮಾತನಾಡುವುದು. ಮೂರು ಕತೆಗಳು ಪರಸ್ಪರ ಮನುಷ್ಯ ಬದುಕಿನ ಏರುಪೇರುಗಳ ಕುರಿತಂತೆ ನೀತಿಯನ್ನು ಸಾರುತ್ತವೆ. **'ಭೂಲೋಕದಲ್ಲಿ ಯಮ'** ಕತೆಯು ಹೈದರಾಲಿ ಹಾಗೂ ಟಿಪ್ಪು ಸುಲ್ತಾನನ ಕಾಲದಲ್ಲಿ ಸಾಮಾನ್ಯ ಜನರಿಗೆ ಕೊಡುತ್ತಿದ್ದ ಶಿಕ್ಷೆಯನ್ನು ನಿರೂಪಿಸುತ್ತದೆ. ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಸಂಗ್ರಹವಾದ ಕತೆಗಳು ಆ ಕಾಲದ ಸಾಮಾಕ ವಿವರವನ್ನು ಕೊಡುತ್ತವೆ ಹಾಗೂ ಮೊದಲ ಘಟ್ಟದ ಅಧ್ಯಯನಕ್ಕೆ ಚಾರಿತ್ರಿಕ ದಾಖಲೆಯಾಗಿವೆ.

1936ರಲ್ಲಿ **ಮು.ವೆಂಕಟಕೃಷ್ಣಪ್ಪನವರ 'ಕೋಲಾರ ನಾಡೂ ಕತೆಗಳು'** ಕೃತಿ ಪ್ರಕಟವಾಯಿತು. 70 ಪುಟಗಳ ಕೃತಿಯಲ್ಲಿ ಕೋಲಾರ ಹಾಗೂ ಬೆಂಗಳೂರು ಭಾಗದ ಜನಪದ ವಿವರಗಳು, ಜನಜೀವನದ ಉಲ್ಲೇಖವಿದೆ. ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಕವಾಗಿ ಕೋಲಾರ ಜಿಲ್ಲೆಯ ಜನಪದ ಜೀವನ, ಸ್ಥಳ ಕಥೆಗಳು, ಸಂಗತಿಗಳು, ಐತಿಹ್ಯಗಳು, ಚಿತ್ರಗಳು, ನಕ್ಷೆಗಳು ಇವೆ.

1941ರಲ್ಲಿ **ಜಿ.ಪಿ.ರಾಜರತ್ನಂ** ಸಂಪಾದಿಸಿ ಅನುವಾದಿಸಿದ **'ಜಾತಕ ಕತೆಗಳು'** ಸಂಗ್ರಹ ಪ್ರಕಟವಾಯಿತು. ಪಾಲಿ ಭಾಷೆಯಿಂದ ಕನ್ನಡಕ್ಕೆ 50 ಜಾತಕತೆಗಳನ್ನು ಅನುವಾದಿಸಲಾಗಿದೆ. ಬುದ್ದನ ಕತೆಗಳು. "ಇಂದು ಪುನಃ ವೈಶಾಖ ಶುಕ್ಲ ಪೂರ್ಣಿಮೆ; ಭಗವಂತನಾದ ಗೌತಮ ಬುದ್ದನು ಜನಿಸಿದ ದಿವಸ, ಆತನು ಬೋಧಿಯನ್ನು ಸಂಪಾದಿಸಿದ ದಿವಸ, ಆತನು ಮಹಾಪರಿನಿರ್ವಾಣವನ್ನು ಪಡೆದ ದಿವಸ. ಇಂತಹ ಮಹಾ ದಿವಸದಲ್ಲಿ ಜಾತಕ ಕತೆಗಳು ಪುಸ್ತಕವನ್ನು ಕನ್ನಡದಲ್ಲಿ ಸಿದ್ಧಗೊಳಿಸಿದ ಸಯ್ಪು ನನ್ನದು. 'ಜಾತಕ'ಗಳು ಎಂದರೆ ಬುದ್ಧನ ಪೂರ್ವಜನ್ಮಗಳ ಕತೆಗಳು. ಮುಂದೆ ಬುದ್ಧನಾಗುವವನಿಗೆ ಹಿಂದಿನ ಜನ್ಮಗಳಲ್ಲಿ ಬೋಧಿಸತ್ವ, ಮಹಾಸತ್ವ ಎಂದೂ ಹೆಸರು ಎಂದು ತಿಳಿದುಕೊಂಡರೆ, ಇಲ್ಲಿಗೆ ಸಾಕು. ಜಾತಕ ಕತೆಗಳು ಪುಸ್ತಕವನ್ನು ಬುದ್ಧನ ಕತೆಗಳು–ಎರಡನೆಯ ಭಾಗ ಎಂದು ಗಣಿಸಬಹುದು. ಅಲ್ಲಿ 66 ಕತೆಗಳನ್ನು ಕೊಟ್ಟಿತ್ತು; ಅಂತಹವೇ ಇನ್ನೂ 50 ಕತೆಗಳನ್ನು ಕೊಟ್ಟಿದೆ. ಆದರೆ, ಹಿಂದೆ ತೋರಿಸಿದ್ದಂತೆ ಜಾತಕದ ಗದ್ಯ–ಪದ್ಯಗಳನ್ನು ಪ್ರತ್ಯೇಕವಾಗಿ ತೋರಿಸದೆ ಪುನರುಕ್ತವಾಗದಂತೆ ಎರಡನ್ನೂ ಸೇರಿಸಿಕೊಂಡು ಅನುವಾದ ಮಾಡಿದ್ದೇವೆ" (1941:ಬಿನ್ನಹ)

ಜಾತಕ ಕತೆಗಳನ್ನು ಮೂರು ಭಾಗವಾಗಿ ವಿಂಗಡಿಸಲಾಗಿದ್ದು, ವಿಶ್ವಂತರನ ಪೂರ್ವ ಹಾಗೂ ಉತ್ತರ ಕಥೆಗಳನ್ನು ಕೊಡಲಾಗಿದೆ. ಜಾತಕ ಕತೆಗಳು ಮೊದಲ ಘಟ್ಟದ ಕನ್ನಡ ಜಾನಪದ ಅಧ್ಯಯನಕ್ಕೆ ಚಾರಿತ್ರಿಕ ಉಲ್ಲೇಖಗಳ ದೃಷ್ಟಿಯಿಂದ ಮಹತ್ವದ್ದೆನಿಸುತ್ತದೆ.

1945ರಲ್ಲಿ **ಎಂ.ರಾಮರಾವ್** ಸಂಗ್ರಹಿಸಿದ **'ಎರಡು ಕತೆಗಳು'** ಕೃತಿಯಲ್ಲಿ 27 ಪುಟಗಳಲ್ಲಿದ್ದು, 'ಬಡವನೂ ಶ್ರೀಮಂತನೂ' ಹಾಗೂ 'ಬಹಳ ಹಿಂದೆ' ಎಂಬ ಎರಡು ಕತೆಗಳಿವೆ. ಮೈಸೂರು ಸುತ್ತಮುತ್ತಲಲ್ಲಿ ಪ್ರಚಲಿತದಲ್ಲಿದ್ದ ಕತೆಗಳನ್ನು ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಗಾಗಿ ಸಂಗ್ರಹಿಸಲಾಗಿದೆ.

ಗದ್ಯಸಾಹಿತ್ಯ : ಗಾದೆಗಳು

ಮೊದಲ ಘಟ್ಟದಲ್ಲಿ ಹಾಡುಗಳ ಜೊತೆಜೊತೆಗೆ ಅಧ್ಯಯನಗೊಂಡ ಕನ್ನಡ, ತುಳು, ಕೊಡವ ಭಾಷೆಯ ಗಾದೆಗಳ ಸಂಗ್ರಹಗಳೆಲ್ಲವೂ ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್‌ನಿಂದಲೇ ಮುದ್ರಣಗೊಂಡವು.

1847ರಲ್ಲಿ **'ಕನ್ನಡ ಗಾದೆಗಳು'**, 1874ರಲ್ಲಿ **'ಸಹಸ್ರಾರ್ಧ ತುಳು ಗಾದೆಗಳು'**, 1886ರಲ್ಲಿ **'ಕೊಡವ ಪಡಿಮೆ'**, 1894ರಲ್ಲಿ **'ಸಾಮತಿ ಸಂಗ್ರಹ'**, 1896ರಲ್ಲಿ **'ತೌಳವ ಗಾಥಾಮಂಜರಿ'**, 1912ರಲ್ಲಿ **'ಕ್ಯಾನರೀಸ್ ಪ್ರೊವರ್ಬ್ಸ್'**, 1919ರಲ್ಲಿ **'ಕರ್ನಾಟಕ ಲೋಕೋಕ್ತಿ**

ನಿಧಾನ' ಹಾಗೂ 1944ರಲ್ಲಿ ಎಚ್.ಎಸ್.ಅಚ್ಚಪ್ಪನವರು ಸಂಗ್ರಹಿಸಿದ **'ಕನ್ನಡ ಗಾದೆಗಳು'** – ಗಾದೆಗಳ ಬಗೆಗೆ ಒಟ್ಟು 14 ಸಂಗ್ರಹಗಳು ಪ್ರಕಟಗೊಂಡಿವೆ. 6 ಸಂಗ್ರಹಗಳು ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್‌ನಲ್ಲಿ ಪ್ರಕಟಗೊಂಡವೆಂಬ ಉಲ್ಲೇಖವಿದ್ದರೂ ಅಧ್ಯಯನಕ್ಕೆ ಲಭ್ಯವಾಗಿಲ್ಲ.

1847ರಲ್ಲಿ **'ಕನ್ನಡ ಗಾದೆಗಳು'** ಎಂಬ ಸಂಕಲನವನ್ನು 'ಮಂಗಳೂರಿನಲ್ಲಿ ಛಾಪಿಸಿದ್ದು' ಎಂದು ಬರೆಯಲಾಗಿದೆ. ಹಾಗೂ ಕೊನೆಯ ಪುಟದಲ್ಲಿ 'ಮಂಗಳೂರು ಮಿಷನ್ ಪ್ರೆಸ್–1848' ಎಂದು ಮುದ್ರಿತವಾದ ಕಲ್ಲಚ್ಚು ಪ್ರತಿ.[30] ಸಂಗ್ರಹದಲ್ಲಿ 3,500 ಗಾದೆಗಳಿದ್ದು, ಕನ್ನಡದ ಮೋಡಿ ಅಕ್ಷರದಲ್ಲಿ ಮುದ್ರಿಸಲಾಗಿದೆ. ಗಾದೆಗಳನ್ನು ಕನ್ನಡದ ಅಕಾರದಿಯಾಗಿ ನಮೂದಿಸಲಾಗಿದೆ. 276 ಪುಟದ ಪ್ರತಿಯು 1/8 ಕ್ರೌನ್ ಆಕೃತಿಯಲ್ಲಿದೆ. 'ಅ ಆ ಬಾರದಿದ್ದರೆ ಅಮರವಾದರೂ ಹೇಳು' ಎಂಬ ಗಾದೆಯೊಂದಿಗೆ ಆರಂಭವಾಗಿ 'ಕ್ಷೌರಕ್ಕೆ ಕೂತಲ್ಲಿ ಶೀನು ಬಂದ ಹಾಗೆ' ಎಂಬಲ್ಲಿಗೆ ಕೊನೆಗೊಳ್ಳುತ್ತದೆ.

1852ರಲ್ಲಿ 'ಕನ್ನಡ ಗಾದೆಗಳು' ಸಂಕಲನವನ್ನು ಮಂಗಳೂರಿನಲ್ಲಿ ಛಾಪಿಸಿದ್ದು' ಎಂಬುದಾಗಿ ಮುದ್ರಿಸಲಾಗಿದೆ.[31] ಇದು ಕಲ್ಲಚ್ಚು ಪ್ರತಿಯಾಗಿದ್ದು, 3547 ಗಾದೆಗಳಿವೆ. 'ಅ ಆ ಬಾರದಿದ್ದರೆ ಅಮರವಾದರೂ ಹೇಳು' ಎಂಬ ಗಾದೆಯೊಂದಿಗೆ ಆರಂಭಗೊಂಡು 'ಕ್ಷೌರಕ್ಕೆ ಕೂತಲ್ಲಿ ಶೀನು ಬಂದ ಹಾಗೆ' ಎಂಬಲ್ಲಿಗೆ ಕೊನೆಗೊಳ್ಳುತ್ತದೆ. ಕನ್ನಡದ ಮೋಡಿ ಅಕ್ಷರದಲ್ಲಿ ಮುದ್ರಿಸಲಾಗಿರುವ ಗಾದೆಗಳನ್ನು ಅಕಾರಾದಿಯಾಗಿ ಒಟ್ಟು 41 ಅಕ್ಷರಗಳಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. 109 ಪುಟಗಳಿರುವ ಪ್ರತಿಯು ರಾಯಲ್ ಸೈಜ್‌ನಲ್ಲಿದೆ. 'ಕನ್ನಡ ಗಾದೆಗಳು' ಸಂಕಲನವು 3 ಬಾರಿ ಒಂದೇ ಹೆಸರಿನಲ್ಲಿರುವ ಮುದ್ರಣಕೊಂಡಿದೆ. ಎರಡೂ ಪ್ರತಿಗಳಲ್ಲೂ ಗಾದೆಗಳ ಆರಂಭ ಹಾಗೂ ಅಂತ್ಯ ಒಂದೇ ರೀತಿಯಾದ್ದು, ಎರಡೂ ಕಲ್ಲಚ್ಚು ಪ್ರತಿಗಳಲ್ಲಿ 1847ರಲ್ಲಿ ಪ್ರಕಟವಾದ ಸಂಕಲನದಲ್ಲಿ 3,500 ಗಾದೆಗಳೂ ನಂತರದ 1852ರ ಸಂಕಲನದಲ್ಲಿ 3,547 ಗಾದೆಗಳೂ ಇವೆ. ನಂತರ ಪ್ರಕಟವಾದ ಸಂಕಲನಕ್ಕೆ 47 ಗಾದೆಗಳೂ ಸೇರಿವೆ. 1847ರಲ್ಲಿ ಹಾಗೂ 1852ರಲ್ಲಿ ಪ್ರಕಟವಾದ ಎರಡೂ ಸಂಕಲನಗಳ ಸಂಗ್ರಾಹಕರು ಯಾರೆಂಬ ಉಲ್ಲೇಖವಿಲ್ಲ.[32] ಐ.ಮಾ.ಮುತ್ತಣ್ಣ ಪ್ರಕಾರ, "1859ರಲ್ಲಿ ಮೊಗ್ಲಿಂಗನು ಸಂಗ್ರಹಿಸಿದ 'ಕನ್ನಡ ಗಾದೆಗಳು' ಎಂಬ 151 ಪುಟಗಳ ಪುಸ್ತಕದಲ್ಲಿ 3547 ಗಾದೆಗಳಿವೆ. ನಿದರ್ಶನಾರ್ಥವಾಗಿ ಅದರಿಂದ ಕೆಲವು ಗಾದೆಗಳನ್ನು ಕೊಟ್ಟಿರುತ್ತಾರೆ." (1992:167). **ಶ್ರೀನಿವಾಸ ಹಾವನೂರರು, "ಮೊಗ್ಲಿಂಗನು** 1847ರಷ್ಟು ಹಿಂದೆಯೇ ಮೂರು ಸಾವಿರ ಗಾದೆಗಳನ್ನು ಸಂಗ್ರಹಿಸಿರುವನೆಂದು**"** (1974:111) ಅಭಿಪ್ರಾಯ ಪಟ್ಟಿರುತ್ತಾರೆ. ಪುರುಷೋತ್ತಮ ಬಿಳಿಮಲೆ, ಅಂಬಲಿಕೆ ಹಿರಿಯಣ್ಣ, ಬಿ.ಎ. ವಿವೇಕ ರೈ, ಹಾ.ಮಾ. ನಾಯಕ, ಜೀ.ಶಂ. ಪರಮಶಿವಯ್ಯ ಮೊದಲಾದ

ಹಿರಿಯ ವಿದ್ವಾಂಸರು ಕನ್ನಡ ಗಾದೆಗಳ ಸಂಗ್ರಹವನ್ನು ಮೊಗ್ಲಿಂಗನೇ ಕೈಗೊಂಡಿರುವನೆಂದು ಅಭಿಪ್ರಾಯಪಟ್ಟಿದ್ದಾರೆ.[33]

1847ರಲ್ಲಿ ಹಾಗೂ 1852ರಲ್ಲಿ ಪ್ರಕಟವಾದ ಎರಡೂ ಸಂಗ್ರಹಗಳಲ್ಲಿ ಪೀಠಿಕೆ ಭಾಗವಿದೆ. ಅವುಗಳೆರಡೂ ಒಂದೇ ರೀತಿಯಾಗಿವೆ. "ಬುದ್ಧಿಯು ಕರೆಯುತ್ತಾಳಲ್ಲವೋ ತಿಳುವಳಿಕೆಯ ಶಬ್ದವೆನ್ನೆತ್ತುತ್ತಾಳಲ್ಲವೋ ಉನ್ನತಾಗ್ರಗಳಲ್ಲಿಯೂ ಮಾರ್ಗದ ಬಳಿಯಲ್ಲಿಯೂ ಮನೆಯ ಮುಂದೆಯೂ ಅಡ್ಡಹಾದಿಗಳಲ್ಲಿಯೂ ನಿಲ್ಲುತ್ತಾಳೆ. ದ್ವಾರಗಳ ಕಡೆಯಲ್ಲಿಯೂ ಪಟ್ಟಣದ ಬಾಯಿಯಲ್ಲಿಯೂ ಬಾಗಿಲುಗಳ ಪ್ರವೇಶದಲ್ಲಿಯೂ ಕೂಗುತ್ತಾಳೆ – ಪುರುಷರೇ ನಿಮಗೆ ಕರೆಯುತ್ತೇನೆ. ನನ್ನ ಶಬ್ದವು ಮನುಷ್ಯರ ಮಕ್ಕಳಿಗೆ ಸೇರಲಿ. ಮೂಢರೇ ಯುಕ್ತಿಯನ್ನು ಕಲಿತುಕೊಳ್ಳಿರಿ. ಹುಚ್ಚರೇ ಹೃದಯದಲ್ಲಿ ಗ್ರಹಿಕೆಯನ್ನು ಹೊಂದಿರಿ. ಕೇಳಿರಿ ಯಾಕೆಂದರೆ ಪ್ರಕಟವಾದವುಗಳನ್ನು ನುಡಿಯುವೆನು. ನೀಟಾದವುಗಳಿಗೋಸ್ಕರ ನನ್ನ ಕುಡಿಗಳನ್ನು ಬಿಚ್ಚುವೆನು. ದೇವರ ಬಳಿಯಲ್ಲಿ ದಾಕ್ಷಂಣ್ಯವಿಲ್ಲವು. ನೇಮವಿಲ್ಲದೆ ಪಾಪ ಮಾಡಿದಪ್ಪರು ನೇಮವಿಲ್ಲದೆ ನಾಶವಾಗುವರು. ನೇಮದೊಳಗೆ ಪಾಪ ಮಾಡಿದಪ್ಪರು ನೇಮದಿಂದಲೇ ಪುಣ್ಯ ಹೊಂದುವರು. ಯಾಕೆಂದರೆ ನೇಮವನ್ನು ಕೇಳಿದವರು ದೇವರು ಮುಂದೆ ನೀತಿವಂತರಲ್ಲ. ನೇಮವನ್ನು ಮಾಡುವವರೇ ನೀತಿ ಸದುನರು. ಪುಣ್ಯಗಂದರೇನೇನು ವಿಲ್ಲದ ಜನಗಳು ಸ್ವಭಾವದಿಂದ ನೇಮದವುಗಳನು ಮಾಡಿದರೆ ನೇಮವಿಲ್ಲದವರಾಗಿದ್ದು ತಮಗೆ ತಾವೇ ನೇಮವಾಗಿದ್ದಾರೆ. ಅವರ ಮನೋಭಾವನೆ ಕೂಡ ಸಾಕ್ಷಿಕೊಟ್ಟು ಅವರ ಯೋಚನೆಗಳು ಒಂದಕ್ಕೊಂದು ತಪ್ಪು ಹೇರಿಸುತ್ತಾಯಿಲ್ಲವೆ. ಪ್ರತ್ಯುತ್ತರ ಕೊಡುತಾಯಿರುವುದರಿಂದ ದೇವರು ಮನುಷ್ಯರ ರಹಸ್ಯವಾದವುಗಳನ್ನು ಕುರಿತು ನ್ಯಾಯ ತೀರಿಸುವ ದಿವಸದಲ್ಲಿ ತಮ್ಮ ಹೃದಯಗಳಲ್ಲಿ ಬರೆದಿರುವ ನೇಮ ತೋರಿಸುತ್ತಾರೆ." (1847:3–4)

ಕನ್ನಡ ಗಾದೆಗಳ ಕುರಿತಂತೆ ಸಿಗುವ ಪ್ರಥಮ ಸಂಕಲನವಿದು. 1816ರಲ್ಲಿ **ಅಬೆದುಬೊಯ್ 'ಹಿಂದೂ ಮ್ಯಾನರ್ಸ್, ಆ್ಯಂಡ್ ಸೆರೋಮೊನೀಸ್'** ಕೃತಿಯಲ್ಲಿ ಕನ್ನಡದ ಗಾದೆಗಳ ಕುರಿತಂತೆ ಪ್ರಸ್ತಾಪಿಸಿರುತ್ತಾನೆ. ಆದರೆ ಕನ್ನಡದಲ್ಲಿ ಪ್ರತ್ಯೇಕವಾಗಿ 1847ರ ತನಕ ಗಾದೆಗಳ ಸಂಕಲನಗಳು ಪ್ರಕಟಗೊಳ್ಳಲಿಲ್ಲ. ಚಾರಿತ್ರಿಕ ಪ್ರಾಮುಖ್ಯತೆಯಿರುವ 'ಕನ್ನಡ ಗಾದೆಗಳು' ಸಂಕಲನದಲ್ಲಿ ಗಾದೆಗಳನ್ನು ಅಕಾರಾದಿಯಾಗಿ ವರ್ಗೀಕರಿಸಿಕೊಂಡು ಕನ್ನಡ ಅಕ್ಷರಗಳು ಹಾಗೂ ಕನ್ನಡ ಸಂಖ್ಯೆಗಳಲ್ಲಿ ನಮೂದಿಸಲಾಗಿದೆ. ಇದು ಕನ್ನಡದ ಬಗ್ಗೆ ವಿದೇಶಿ ವಿದ್ವಾಂಸರಿಗಿದ್ದ ಆಸಕ್ತಿಯನ್ನು ವ್ಯಕ್ತಪಡಿಸುತ್ತದೆ. ಕನ್ನಡಿಗರ ಅಡುನುಡಿಯಲ್ಲಿ ಬಳಕೆಯಾಗುತ್ತಿದ್ದ ಗಾದೆಗಳನ್ನು ಸಂಗ್ರಹಿಸಿ ಪ್ರಕಟಿಸಿರುವುದು ನಂತರದ ಕನ್ನಡ ಜಾನಪದ ಅಧ್ಯಯನಕಾರರಿಗೆ, ಸಂಗ್ರಾಹಕರಿಗೆ ಮೇಲ್ಪಂಕ್ತಿಯೂ ಆಗಿದೆ ಎನ್ನಬಹುದು.

1847ರಲ್ಲಿ **'ಸಹಸ್ರಾರ್ಧ ತುಳು ಗಾದೆಗಳು'** (ಫೈವ್ ಹಂಡ್ರೆಡ್ ತುಳು ಪ್ರೊವರ್ಬ್ಸ್) ಸಂಕಲನವು 'ಮಂಗಳೂರು ಬಾಸೆಲ್ ಮಿಶನ್ ಬುಕ್ ಹಾಗೂ ಟ್ರ್ಯಾಕ್ ಡಿಪಾಸಿಟರಿ'ಯಲ್ಲಿ ಪ್ರಕಟವಾಯಿತು. ತುಳುವರಿಗೆ ಓದುವುದಕ್ಕೆ ಲಭ್ಯವಿಲ್ಲವೆಂದು ಗಮನಿಸಿದ ಶ್ರೀಕೃಷ್ಣಭಟ್ ಅರ್ತಿಕಜೆ 1983ರಲ್ಲಿ ಮರು ಮುದ್ರಣಗೊಳಿಸಿದರು. ಇದರ ಒಂದೇ ಪ್ರತಿಯನ್ನು ಮದರಾಸು ಪತ್ರಾಗಾರರಿಂದ ಸಂಪಾದಿಸಿಕೊಂಡು ಪ್ರಕಟಿಸಿದರು. "ಬಾಸೆಲ್ ಮಿಶನ್‌ನವರು ಪ್ರಕಟಿಸಿದ ಸಹಸ್ರಾರ್ಧ ತುಳುಗಾದೆಗಳ ಕರ್ತೃ ರೆವೆ.ಎ.ಮೇನ್ನರ್ ಎಂಬುದಾಗಿ ಮದರಾಸು ಪತ್ರಾಗಾರದ ಕಾಟಲಾಗ್ (1894,ಪುಟ:380)ನಲ್ಲಿ ನಮೂದಿತವಾಗಿದೆ. ಗ್ರಂಥದಲ್ಲಿ ಎಲ್ಲೂ ರೆವೆ.ಎ.ಮೇನ್ನರ್‌ನ ಹೆಸರಿಲ್ಲ. ಆದುದರಿಂದ ಇದರ ಕರ್ತೃ ಯಾರೆಂದು ನಿರ್ದಿಷ್ಟವಾಗಿ ಹೇಳುವುದಸಾಧ್ಯ."**34** (183:15 ಪ್ರಸ್ತಾವನೆ)

'ಸಹಸ್ರಾರ್ಧ(500) ತುಳುಗಾದೆಗಳು' (1874) ಸಂಗ್ರಹದಲ್ಲಿ 614 ಗಾದೆಗಳನ್ನು ಆಕಾರದಿಯಾಗಿ ವರ್ಗೀಕರಿಸಿಲಾಗಿದೆ. 'ಅಂಗಡಿ ದೂರಗೆ' (ಅಂಗಡಿ ದೂರವಂತೆ) ಗಾದೆಯಿಂದ ಆರಂಭವಾಗಿ 'ಹಾಸ್ಯದಾಯಗ್ ಜೀಟೆದಾಯ ಮಿತ್ತ್ ಕಣ್ಣ್' (ಹಾಸ್ಯಗಾರನಿಗೆ ದೀವಟೆಗೆಯವನ ಮೇಲೆ ಕಣ್ಣ್) ಎಂಬಲ್ಲಿಗೆ ಕೊನೆಯಾಗುತ್ತದೆ. ಎರಡೂ ಗಾದೆಗಳು ತುಳುವರಲ್ಲಿ ಹೋಲಿಕೆಯಾಗಿ ಬಳಕೆಯಾಗುತ್ತದೆ. ಮೂಲ ಸಂಗ್ರಹದಲ್ಲಿ ಗಾದೆಗಳಿಗೆ ಕ್ರಮಸಂಖ್ಯೆ ಇಲ್ಲ. ಶ್ರೀಕೃಷ್ಣಭಟ್ ಸಂಪಾದಿಸುವಾಗ ಕ್ರಮಸಂಖ್ಯೆಯನ್ನು ಕೊಟ್ಟಿದ್ದಾರೆ. ಜೊತೆಗೆ 1872ರಲ್ಲಿ ಬಾಸೆಲ್ ಮಿಶನ್ ಪ್ರೆಸ್‌ನವರು ಪ್ರಕಟಿಸಿರುವ **ರೆ.ಜೆ. ಬ್ರಿಗೆಲ್**‌ರ **'ತುಳು ವ್ಯಾಕರಣ'** (ಗ್ರಾಮರ್ ಆಫ್ ದಿ ತುಳು ಲಾಂಗ್ವೇಜ್)ದಲ್ಲಿರುವ 50 ತುಳುಗಾದೆಗಳನ್ನು ಹಾಗೂ 1886ರಲ್ಲಿ **ರೆ.ಎ. ಮೇನ್ನರ್ ತುಳು-ಇಂಗ್ಲಿಷ್ ಶಬ್ದಕೋಶ**ದಲ್ಲಿ ಬಳಸಿಕೊಂಡಿರುವ 51 ತುಳು ಗಾದೆಗಳನ್ನು ಅರ್ತಿಕಜೆಯವರು ಅನುಬಂಧ 1-2ರಲ್ಲಿ ಸಂಪಾದಿಸಿ ಕೊಟ್ಟಿದ್ದಾರೆ. ಬ್ರಿಗೆಲ್ (1872) ಸಂಗ್ರಹಿಸಿರುವ 50 ಗಾದೆಗಳಲ್ಲಿ 24 ಗಾದೆಗಳು ಹಾಗೂ ಮೇನ್ನರ್ (1886) ಸಂಗ್ರಹಿಸಿರುವ 51 ಗಾದೆಗಳಲ್ಲಿ 45 ಗಾದೆಗಳು ಸಹಸ್ರಾರ್ಧ ತುಳು ಗಾದೆಗಳು (1874) ಸಂಗ್ರಹದಲ್ಲಿ ಸಮಾನ ರೂಪದಲ್ಲಿ ಬಳಕೆಯಾಗಿವೆ. ಇನ್ನುಳಿದ ಗಾದೆಗಳಲ್ಲೂ ಅಲ್ಪಸ್ವಲ್ಪ ಅರ್ಥಸಾಮ್ಯತೆಯಿದೆ. ಉಳಿದ ಹಲವು ಗಾದೆಗಳು ಮೂರೂ ಸಂಗ್ರಹದಲ್ಲೂ ಬೇರೆ ಬೇರೆಯಾಗಿವೆ.

'ಸಹಸ್ರಾರ್ಧ ತುಳು ಗಾದೆಗಳು'(1874) ಸಂಗ್ರಹದಲ್ಲಿರುವ ಹಲವು ಗಾದೆಗಳು ಪುನರಾವರ್ತನೆಗೊಳ್ಳುತ್ತವೆ. ಕೆಲವು ಗಾದೆಗಳು ಅಪೂರ್ಣವಾಗಿವೆ. ಕೆಲವು ಒಗಟು ರೂಪದಲ್ಲಿವೆ. ಇನ್ನು ಕೆಲವು ಕನ್ನಡ ಗಾದೆಗಳಿಗೆ ಸಮಾನಾರ್ಥದಲ್ಲಿ ಅನುವಾದಗೊಂಡಿವೆ. ಕೆಲವು ಗಾದೆಗಳು ಹವ್ಯಕ, ಅರೆಭಾಷೆಗೆ ಸಮೀಪವಾಗಿವೆ.**35** **'ಸಹಸ್ರಾರ್ಧ ತುಳು ಗಾದೆಗಳು'** ಸಂಗ್ರಹವು 1874ರಲ್ಲಿ ಪ್ರಕಟವಾದ 109 ವರ್ಷಗಳ ನಂತರ ಮುದ್ರಣದ

ಅವಶ್ಯಕತೆಯನ್ನು ಕಂಡುಕೊಂಡಿತು. ಕಾಲಘಟ್ಟದ ಹಿನ್ನೆಲೆಯಲ್ಲಿ ಹಾಗೂ ಅಧ್ಯಯನದ ಅವಶ್ಯಕತೆಗಾಗಿ 1983ರಲ್ಲಿ ಪುನರ್ ಮುದ್ರಣಗೊಂಡಿರುವುದು ಸಂಗ್ರಹದ ಚಾರಿತ್ರಿಕ ಮಹತ್ವವನ್ನು ವ್ಯಕ್ತಪಡಿಸುತ್ತದೆ.

1874ರಲ್ಲಿ 'ಸಹಸ್ರಾರ್ಧ ತುಳು ಗಾದೆಗಳು' ಪ್ರಕಟವಾದ ಅನಂತರ 1896ರಲ್ಲಿ **'ತೌಳವ ಗಾಥಾ ಮಂಜರಿ'** ಎಂಬ 1,000 ತುಳುಗಾದೆಗಳು ಪ್ರಕಟವಾಯಿತು. 1874ರಲ್ಲಿ ಪ್ರಕಟವಾದ 500 ಗಾದೆಗಳನ್ನು ಗಮನದಲ್ಲಿರಿಸಿಕೊಂಡು, ಅವುಗಳಲ್ಲಿ ಅಪೂರ್ಣವಾದದ್ದು, ಪುನಾರವರ್ತನೆಗೊಂಡವುಗಳನ್ನು ತೆಗೆದು ಹಾಕಿ ಪ್ರಕಟಿಸಲಾಯಿತು. ಇವೆರಡು ಸಂಕಲನವನ್ನು ಯಾರು ಸಂಗ್ರಹಿಸಿದರು ಎಂಬ ಬಗ್ಗೆ ಇನ್ನೂ ಬಗೆಹರಿದಿಲ್ಲ. ಕಾಲಘಟ್ಟದ ಹಿನ್ನಲೆಯಲ್ಲಿ ಗಮನಿಸುವಾಗ ಎ. ಮೇನ್ನರ್ 1886ರಲ್ಲಿ 'ಪಾಡ್ದನೊಳು' ಸಂಗ್ರಹವನ್ನು ಪ್ರಕಟಿಸಿರುವುದು ಮತ್ತು ಪಾಡ್ದನೊಳು ಸಂಗ್ರಹಿಸುವಾಗ ತುಳುಗಾದೆಗಳನ್ನು ಸಂಗ್ರಹಿಸಿದ್ದೆಂಬ ಉಲ್ಲೇಖಗಳು ಸಿಗುತ್ತವೆ.[36]

1874ರಲ್ಲಿ ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್‌ನಿಂದ ಪ್ರಕಟವಾದ **'ಸಹಸ್ರ ಗಾಥಾಮೃತ ಕಲಶವು'** (ಒನ್ ಥೌಂಸಡ್ ಕೆನರೀಸ್ ಪ್ರೊವರ್ಬ್ಸ್) 56 ಪುಟಗಳ ಕೃತಿ. ಅಧ್ಯಯನಕ್ಕೆ ಲಭ್ಯವಿಲ್ಲ.

1886ರಲ್ಲಿ **'ಕೊಡವ ಪಡಿಮ'** (ಎ ಸೆಲೆಕ್ಷನ್ ಆಫ್ ಕೂರ್ಗ್ ಪ್ರೊವರ್ಬ್ಸ್) ಕೊಡವ ಗಾದೆಗಳ ಸಂಕಲನವು ಮಂಗಳೂರಿನ ಬಾಸೆಲ್ ಮಿಷನ್ ಪ್ರೆಸ್ಸಿನಿಂದ ಪ್ರಕಟವಾಯಿತು.[37] 767 ಗಾದೆಗಳ 'ಕೊಡವ ಪಡಿಮ' ಸಂಕಲನವು ಕನ್ನಡ ಲಿಪಿಯಲ್ಲಿ ಕೊಡಗು ಭಾಷೆಯಲ್ಲಿವೆ. 'ಅಂಗೈಲ್ ಪುಣ್ಣ್‌ಕ್ ಕನ್ನಡಿ ಬೋಂಡ'(ಅಂಗೈಯಲ್ಲಿರುವ ಹುಣ್ಣಿಗೆ ಕನ್ನಡಿ ಬೇಕೇ) ಗಾದೆಯಿಂದ ಆರಂಭಗೊಂಡು 'ಸ್ಥಿತಿ ಇಲ್ಲೆಂಗಿಯೂ ಮಾನ ಬುಡುವಕಾಗ' (ಸ್ಥಿತಿ ಇಲ್ಲದಿದ್ದರೂ ಮಾನ ಬಿಡುವುದಕ್ಕಾಗುವುದಿಲ್ಲ) ಗಾದೆಗೆ ಕೊನೆಗೊಳ್ಳುತ್ತದೆ. ಅಕಾರಾದಿಯಾಗಿ ಜೋಡಿಸಲಾದ ಗಾದೆಗಳನ್ನು ಯಾರು ಸಂಗ್ರಹಿಸಿದ್ದಾರೆಂಬ ವಿವರಗಳಿಲ್ಲ. ಸಂಗ್ರಹಕ್ಕೆ ಮುನ್ನುಡಿಯೂ ಇಲ್ಲ. ಸಂಗ್ರಹದ ಕೊನೆಯ ಪುಟದಲ್ಲಿ, "ಕ್ಷೇತ್ರ ತ್ರೇತ, ದ್ವಾಪರಯುಗತ್‌ಲ್ ಆಳೋಳ ಬೊಳೆ, ಕೈಯೊಳ ಕದ್‌ರ್, ಪನೆರಂಡ್ ಮೊಳ ಆಳ್. ಕಲಿಯುಗ ದಿನ ಕನಿಷ್ಟ ಕಾಲ, ವಿನಾಶಕಾಲ, ವಿಪರೀತ ಬುದ್ಧಿ, ಅವ್ವನ ಪೊಯು, ಅಪ್ಪ್‌ನ ಬೊಯು, ಅರೆಸಾಕ್ಷಿ ಮೊಯ್ಯು, ಅರೆವಾಲೆ ಕುತ್ತು ಅಂಬ್‌ಲಚುಡೂ, ಅದ್ರ್‌ಲಚುಡು, ಅದ್ರ್‌ಕಲ್ಲ್ ಪೊರಿಕು, ಬಟ್ಟೆಲ್ ಪೋಪವಂಡ ಅವ್ವನ ಬೈಯು, ಕುಮ್ಮಂರ ಬಾಯಿಚ್ಚೆ, ಪೊಮ್ಮಕಡ ಏಳಿಚೆ, ಅಡಿಯಂಗು, ಕುಡಿಯಂಗು ಅಹಂಕಾರ, ಗರು, ಮಳೆಯೂ ಬೊಳೆಯೂ ಕೊರಂದ ಬಕ್ಕು, ಭೂಮಿ ಬರಂಡ್ ಬಕ್ಕು, ಮನುಷ್ಯ ಕುರ್‌ಂಡ್ ಬಕ್ಕು, ಕಲಿ ಮೀರಿಬಕ್ಕು, ಕಾಣತ್ತದ್ ಕಾಂಗು, ಕೇಳತ್ತದ್

ಕೇಕು, ಉಣ್ಣತ್ತದ್ ಉಂಗು, ಕುಡಿಯತ್ತದ್ ಕುಡಿಕು, ಕಾಲನಲ್ಲ ಕಲಿಯುಗ, ನುಪ್ಪದ್ ಬಯತಲ್ ಅಂದಳಕ್ ಕೇರ್, ಪದಿನಾರ್ ಬಯತ್‌ಲ್ ಕಂಟಕ, ಮಕ್ಕಡ ಕ್ರಿಯೆ ಅಪ್ಪನೂ ಅವ್ವನೂ ಕೈಕು, ನರಿಯೂ ಪುಲಿಯೂ ಪೆರ್ಕು, ತೋಡಂಗೂ ಎಲಿಯೂ ಪೆರಿಚೊಳಿಯೂ ನೆರೆಞ ತೊಡಂಗು, ಎಲಿಪೋಯಿ, ಪೂಞ್‌ನ ಪುಡಿಕು, ನಾಯಿ ಪೋಯಿ, ನರಿನ ಪುಡಿಕು, ಪೊಮ್ಮಕ್ಕಳೆಲ್ಲ ಪರಂದಳಕು, ಅಣಾಳೆಲ್ಲ ಕೇಟಳಕು, ಚುಂಡೆ ಮರಕ್, ಏಣಿ ಕಟ್ಟು, ಮಲೆಯೆಲ್ಲ ಬೊಳಿಯಾಕು, ದೇವರೆಲ್ಲ ಕೈಲಾಸ ಸೇರು"(1886:32) ಕೊಡವ ಭಾಷೆಯಲ್ಲೇ ವಿವರಿಸಲಾಗಿದೆ. ಕೊಡಗಿನ ಜನರ ಮಾತುಗಳಲ್ಲಿರುವ ಕೆಲವು ಪದಗಳನ್ನು, ಗಾದೆಗಳನ್ನು ಜೋಡಿಸಿ ಒಂದು ಕತೆಯಂತೆ ಕೊಡಲಾಗಿದೆ. 1886ರ ಸಂದರ್ಭದಲ್ಲಿ ಮಂಗಳೂರಿನಲ್ಲಿ ಮೇನ್ನರ್ ಸಂಗ್ರಹಿಸಿದ **'ಪಾಡ್ದನೊಳು'** ಹಾಗೂ **'ತೌಳುವ ಗಾಥಾಮಂಜರಿ', 'ಸಹಸ್ರಾರ್ಧ ತುಳುಗಾದೆಗಳು'** ಸಂಕಲನಗಳು ಪ್ರಕಟವಾದವು.

1894ರಲ್ಲಿ ಬೆಳಗಾವಿಯ **ಹಣವಂತ ಗೋವಿಂದ ಜೋಶಿಯವರ 'ಸಾಮತಿ ಸಂಗ್ರಹ'** ಹೆಣ್ಣು ಮಕ್ಕಳ ಕುರಿತಂತೆ ಸಂಗ್ರಹವಾದ ಗಾದೆಗಳ ಸಂಕಲನ ಪ್ರಕಟವಾಯಿತು.[38] ಕಿಟ್ಟೆಲ್ ಸಂಗ್ರಹಣೆಯಿಂದ ಪ್ರೇರಣೆಗೊಂಡು 19ನೆಯ ಶತಮಾನದಲ್ಲಿಯೇ ಕನ್ನಡ ಜಾನಪದತ್ತ ದೃಷ್ಟಿ ಹರಿಸಿರುವ ಮಹತ್ವಪೂರ್ಣ ವ್ಯಕ್ತಿ. ಪಾಶ್ಚಾತ್ಯ ವಿದ್ವಾಂಸರ ಪ್ರೇರಣೆ ಹೊಂದಿ ಮಹತ್ತರವಾದ ಸಾಧನೆಗೈದ ಜೋಶಿಯವರೇ ಕನ್ನಡದಲ್ಲಿ ಆದ್ಯ ಸಂಗ್ರಹಕಾರರ ನೆನೆಸಿಕೊಳ್ಳುತ್ತಾರೆ.

1896ರಲ್ಲಿ ಗೇಬ್ರಿಯಲ್ ಬರ್ಗೇರ ಸಂಗ್ರಹಿಸಿದ **'ತೌಳವ ಗಾಥಾ ಮಂಜರಿ'** (ಅಂದ್‌ಂಡ ಸಾರ ತುಳು ಗಾದೆಗಳು–ವನ್ ತೌಸಂಡ್ ತುಳು ಪ್ರೊವರ್ಬ್ಸ್) ಎಂಬ 1000 ತುಳು ಗಾದೆಗಳ ಗ್ರಂಥವು ಬಾಸೆಲ್ ಮಿಷನ್ ಪ್ರೆಸ್, ಮಂಗಳೂರಿನಲ್ಲಿ ಪ್ರಕಟವಾಯಿತು. "1874ನೇ ಇಸವಿಯಲ್ಲಿ **'ಸಹಸ್ರಾರ್ಧ ತುಳು ಗಾದೆಗಳು'** ಎಂಬ ಪುಸ್ತಕ ಛಾಪೆ ಆಗಿದೆ. ಈಗ ಆ ಪುಸ್ತಕದಿಂದ ಮುಖ್ಯವಾದ ಗಾದೆಗಳನ್ನು ಮಾತ್ರ ಆಯ್ಕೆ ಮಾಡಿ, ಹಾಗೂ ತುಳುವರಲ್ಲಿ ಇನ್ನೂ ರೂಢಿಯಲ್ಲಿರುವ ಉತ್ತಮ ಅರ್ಥದ ಗಾದೆಗಳನ್ನು ಹೆಕ್ಕಿ, ಒಟ್ಟಾಗಿ ಸಾವಿರ ಗಾದೆಗಳ ಪುಸ್ತಕವನ್ನು ಪ್ರಕಟಿಸುತ್ತಿದ್ದೇವೆ. ಇದರಲ್ಲಿ ಸಾಮಾನ್ಯ ಮಾತುಗಳನ್ನು ಅಗತ್ಯವಿಲ್ಲದ್ದನ್ನು ಸೇರಿಸಲಿಲ್ಲ." (1896) ಆರಂಭದಲ್ಲಿ ಹೇಳಿಕೊಂಡಿರುವಂತೆ 1874ರಲ್ಲಿ ಪ್ರಕಟವಾದ ಸಹಸ್ರಾರ್ಧ ತುಳುಗಾದೆಗಳ ಆಯ್ದ ಭಾಗವಾಗಿದೆ. ಗಾದೆಗಳನ್ನು ಕನ್ನಡ ಅಕ್ಷರದ ಆಕಾರಾದಿಯಾಗಿ ಜೋಡಿಸಲಾಗಿದೆ. 'ಅಂಕದುಂಬು ಸಾಧನ ಪಿರವು ಆಂಡ್'(ಅಂಕ ಮುಂದೆ, ಸಾಧನ ಹಿಂದೆ ಆಯಿತು) ಎಂಬ ಗಾದೆಯೊಂದಿಗೆ ಆರಂಭವಾಗಿ 'ಹೋರಿ ಇಲ್ಲ್ ತೋರಿ ಇಲ್ಲ್ ಒರಿಯಾಂದ್' (ಸೋರುವ ಮನೆ ಉಳಿಯದು) ಎಂಬಲ್ಲಿಗೆ ಕೊನೆಗೊಳ್ಳುತ್ತದೆ. ಇಲ್ಲಿರುವ ಗಾದೆಗಳಲ್ಲಿ ಕೆಲವಕ್ಕೆ ಇಂಗ್ಲಿಷಿನಲ್ಲಿ ವಿವರ ಕೊಡಲಾಗಿದೆ. ಆದರೆ ಆ ವಿವರಗಳು ಅಸ್ಪಷ್ಟವಾಗಿವೆ.

ಕೆಲವು ಗಾದೆಗಳನ್ನು ಸಂಗ್ರಹಿಸಿದ ಸ್ಥಳನಾಮಗಳನ್ನು ಉಲ್ಲೇಖಿಸಲಾಗಿದೆ. ಸಂಗ್ರಹದ ಕೊನೆಯಲ್ಲಿ ಕೆಲವು ತುಳು ಪದಗಳನ್ನು ಅಕಾರಾದಿಯಾಗಿ ಕೊಡಲಾಗಿದೆ. ಪದಗಳು ಸಂಗ್ರಹದ ಗಾದೆಗಳಲ್ಲಿ ಬಳಕೆಯಾಗಿರುವವುಗಳು. ಒಂದೇ ಪದವು ಹಲವು ಬಾರಿ ಹಲವು ಗಾದೆಗಳಲ್ಲಿ ಬಳಕೆಯಾದರೆ ಆಗ ಪ್ರತಿಯೊಂದು ಗಾದೆಗಳ ಬೇರೆ ಬೇರೆ ಸಂದರ್ಭದಲ್ಲಿ ಬಳಕೆಯಾಗುವುದನ್ನು ಪಟ್ಟಿಮಾಡಿರುವುದು ವೈಜ್ಞಾನಿಕ ಅಧ್ಯಯನ ಕ್ರಮವೂ ಹೌದು. ಹೀಗೆ ಪಟ್ಟಿ ಮಾಡುವುದರಿಂದ ಮುಂದಿನ ಅಧ್ಯಯನಕಾರನಿಗೆ ಸಹಕಾರಿಯಾಗಬಹುದು. 'ತೌಳವ ಗಾಥಾ ಮಂಜರಿ' ಗಾದೆಗಳ ಸಂಕಲನವು ಮೊದಲ ಘಟ್ಟದ ಕನ್ನಡ ಜಾನಪದ ಅಧ್ಯಯನದ ನೆಲೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಬಾಸೆಲ್ ಮಿಶನರಿಗಳ ಮುದ್ರಣದ ಕಾಲಾವಧಿಯಲ್ಲಿ ತುಳು ಸಂಸ್ಕೃತಿಯ ಕುರಿತಂತೆ ಹಲವು ಸಂಗ್ರಹಗಳು ಪ್ರಕಟವಾಗಿವೆ.

1911ರಲ್ಲಿ **ಪಿ.ಸಂಗಪ್ಪನವರು** ಸಂಗ್ರಹಿಸಿದ **'ನೂತನ ಸಹಸ್ರಗಾಥಾ ಕುಸುಮ ಮಂಜರಿ'** 70 ಪುಟಗಳಿರುವ ಸಂಕಲನದಲ್ಲಿ, ಕನ್ನಡದಲ್ಲಿ ಕಾವ್ಯರೂಪದಲ್ಲಿ ಬಳಕೆಯಲ್ಲಿದ್ದ ಒಂದು ಸಾವಿರ ಗಾದೆಗಳನ್ನು ಅಕಾರಾದಿಯಾಗಿ ದಾಖಲಿಸಲಾಗಿದೆ.

1912ರಲ್ಲಿ **ಯು.ಬಿ.ನರಸಿಂಗರಾವ್** ಸಂಪಾದಿಸಿದ **'ಕ್ಯಾನರೀಸ್ ಪ್ರೋವರ್ಬ್ಸ್'** ಸಂಕಲನವು ಮಂಗಳೂರಿನ ಬಾಸೆಲ್ ಮಿಷನ್ ಬುಕ್ ಆ್ಯಂಡ್ ಟ್ರಾಕ್ ಡಿಪಾಸಿಟರಿ ಟ್ರಸ್ಟ್‌ನಿಂದ ಪ್ರಕಟವಾಗಿದೆ. 1906ರಲ್ಲಿ **ಯಸ್.ಪಿ.ಸಿ.ಕೆ ಪ್ರೆಸ್ಸ್, ವೆಪರಿ, ಮದ್ರಾಸ್**‌ನಲ್ಲಿ ಪ್ರಕಟವಾದ 827 ಗಾದೆಗಳಿವೆ. ಸಂವಾದಿಯಾಗಿ ಕನ್ನಡದ ಗಾದೆಗಳು ಪ್ರಕಟಗೊಂಡಿದೆ. **'ಎ ಹ್ಯಾಂಡ್ ಬುಕ್ ಆಫ್ ಕ್ಯಾನರೀಸ್, ಪ್ರೊವರ್ಬ್ಸ್ ವಿತ್ ಇಂಗ್ಲಿಷ್ ಇಕ್ವಿಲೆಂಟ್ಸ್'** ಎಂಬುದಾಗಿ ಸಂಕಲನದ ಪೂರ್ಣ ಹೆಸರು.

'ಅಂಗೈ ಹುಣ್ಣಿಗೆ ಕನ್ನಡಿ ಏಕೆ' (A man need not look into your mouth to see how old you are. C. As llain as the nose on a man's ace) ಗಾದೆಯಿಂದ ಪ್ರಾರಂಭವಾಗಿ 'ಹೌದಪ್ಪನ ಮನೆಯಲ್ಲಿ ಹೌದಪ್ಪಾ, ಅಲ್ಲಪ್ಪನ ಮನೆಯಲ್ಲಿ ಅಲ್ಲಪ್ಪಾ' (To be things to all men) ಗಾದೆಗೆ ಕೊನೆಗೊಳ್ಳುತ್ತದೆ. 650ರಷ್ಟು ಕನ್ನಡ ಗಾದೆಗಳನ್ನು ಇಂಗ್ಲಿಷಿನ ಸಮಾನಾರ್ಥವುಳ್ಳ 827 ಗಾದೆಗಳಿಗೆ ಸಂವಾದಿಯಾಗಿ ಬಳಸಲಾಗಿದೆ. ಕನ್ನಡದ ಗಾದೆಗೆ ಇಂಗ್ಲಿಷಿನಲ್ಲಿ ಸಮಾನ ಅರ್ಥವಿರದಿರುವ ಸಂದರ್ಭದಲ್ಲಿ ಕನ್ನಡ ಗಾದೆಗಳನ್ನು ಇಂಗ್ಲಿಷಿಗೆ ಅನುವಾದಿಸಲಾಗಿದೆ. ಉದಾ: 'ಅಂಬಲೀ ಕುಡಿಯುವವನಿಗೆ ಮೀಸೆ ತಿಕ್ಕುವವನೊಬ್ಬ'. He who has no bread to spare should not keep a dog' ಹಾಗೂ C. `There's nothing agrees worse than a proud mind and beggar's purse ಅನುವಾದವಿದೆ.

ಕನ್ನಡ ಗಾದೆಗೆ ಬೇರೊಂದು ಸಮಾನಾರ್ಥವುಳ್ಳ ಗಾದೆ ಬಳಸಲಾಗಿದೆ. ಉದಾ: 1. 'ಅಲ್ಪರ ಸಂಗ ಅಭಿಮಾನ ಭಂಗ. 'ಅ. 2. 'ಹೊಲೆಯನ ಸಂಗ ಉಪ್ಪಿನ ಕಾಯಿಗೆ ಕೇಡು'. Evil communications corrupt good manners, C: who keeps company with a worl will learn to howl' ಉದಾ: 2. 'ಆಡುವದು ಮಡಿ, ಉಂಬೋದು ಮೈಲಿಗೆ, ನುಡಿ ಪುರಾತನ, ನಡೆ ಕಿರಾತ' 'ಓದುವುದು ಕಾಶಿ ಖಂಡ, ತಿನ್ನುವುದು ವಂಶಿ ಕೆಂಡ, ಓದುವದೇ ಶಾಸ್ತ್ರ, ಇಕ್ಕುವುದೇ ಗಾಳ' – 'They talk like angels but like men. 'Many talk like philosophers and live like ools'

ಕನ್ನಡದ ಮೂರು, ನಾಲ್ಕು ಸಮಾನಾರ್ಥವುಳ್ಳ ಗಾದೆಗಳಿಗೆ ಇಂಗ್ಲಿಷಿನಲ್ಲಿ ಚುಟುಕಾಗಿ ಗಾದೆ ಬಳಕೆಯಲ್ಲಿರುವುದನ್ನು ಗಮನಿಸಬಹುದು. ಉದಾ: 1. 'ಇಕ್ಕೇರಿ ತನಕ ಬಳಗ', 'ಮಾನ ಮುಚ್ಚಲಿಕ್ಕೆ ಅಂದೆ ಇಲ್ಲ'. 'ಹೆಸರಿಗೆ ಹೊನ್ನ ಹೆಗ್ಗಡೆ'. 'ಎಸರಿಗೆ ಅಕ್ಕಿ ಇಲ್ಲ, ಹೆಸರು ಕ್ಷೀರಸಾಗರ ಭಟ್ಟ', 'ಮ್ಜಗೆ ನೀರಿಗೆ ತಾತ್ವಾರ'. 'ame is a magniying Glass'. ಉದಾ:2. 'ನಡುಗವನ ಮೇಲೆ ಸತ್ತ ಹಾವು ಬಿದ್ದ ಹಾಗೆ', 'ಅಂದವನ ಮೇಲೆ ಕಪ್ಪೆ ಬಿದ್ದ ಹಾಗೆ', 'ಹಂದಿ ಹಾದವನಿಗೆ ಕಗ್ಗಲ್ಲು ಕಂಡರೆ ಭಯ'. `whom a serpent has bitten a lizard alarms'. ಉದಾ: 3. 'ಹಂಸೇ ಹಾಗೆ ನಡಿಯಲಿಕ್ಕೆ ಹೋಗಿ ಗುಬ್ಬಿ ಕುಪ್ಪಳಿಸಿ ಬಿತ್ತು' 'ಕೇರೆ ಹಾವು ಓಡುತ್ತದೆಂತ ಕಕ್ಕಳು ಓಡಿತಂತೆ' 'ನವಿಲು ಕುಣಿಯುತ್ತದೆಂತ ಕೆಂಬೋತ ಕುಣಿಯಿತು' 'ಕೆಂಬೋತ ಕುಣಿಯುತ್ತದೆಂತ ಕಸಬಾರಿ' 'ಕುಣಿದು ಕುಣಿದು ಒಲೆಯಲ್ಲಿ ಬಿತ್ತು' – 'A mouse must not think to cast' 'A shadow like an elephant'

ಕನ್ನಡದ ಒಂದು ಗಾದೆಗೆ ಇಂಗ್ಲಿಷಿನ ಹಲವು ಸಮಾನಾರ್ಥ ಗಾದೆಗಳನ್ನು ಕೊಡಲಾಗಿದೆ. ಉದಾ: 1. 'ಉಂಬಾಗ ಉಡುವಾಗ ಊರೆಲ್ಲಾ ನೆಂಟರು.' – 'Now I have got an ewe and a lamb, everyone cries welcome, peter'

`Now I have a sheep and a cow, everyone bids me good morrow', `The rich never want or kindred', 'Everyone is kin to the rich man', 'A ull purse never lacks riends.' ಉದಾ: 2. 'ಕೈಗೆ ಬಂದ ತುತ್ತು ಬಾಯಿಗೆ ಇಲ್ಲ.' – 'Between the hand the morsel may slip', 'There's many a slip twixt the cup and the lip', 'Many things all between the cup and the lip.' ಉದಾ: 3. 'ಸಾಧಿಸಿದರೆ ಸಬಳಾ ನುಂಗಬಹುದು.' – `Patience overcome mountains perserverance kills the game', C: 'Constant dropping wears

the stone, 'Drop by drop the Lake is drained.' `Step ater step the ladder is ascended.'

ಸಂಕಲನವನ್ನು ಎರಡು ಭಾಗ ಮಾಡಿಕೊಳ್ಳಬಹುದು. ಮೊದಲ ಭಾಗದಲ್ಲಿ ಕನ್ನಡದ ಗಾದೆಗಳು ಹಾಗೂ ಅವುಗಳಿಗೆ ಸಮಾನಾರ್ಥವುಳ್ಳ ಗಾದೆಗಳನ್ನೂ ಕೊಡಲಾಗಿದೆ. ಜೊತೆಗೆ ಕನ್ನಡ ಗಾದೆಗಳಿಗೆ ಅದೇ ಅರ್ಥವಿರುವ ಇಂಗ್ಲಿಷಿನ ಗಾದೆಗಳನ್ನು ಸಂವಾದಿಯಾಗಿ ಬಳಸಲಾಗಿದೆ. ಕನ್ನಡದ 650ರಷ್ಟು ಗಾದೆಗಳನ್ನು ಬಳಸಿಕೊಳ್ಳಲಾಗಿದೆ. ಎರಡನೆಯ ಭಾಗದಲ್ಲಿ ಕನ್ನಡಕ್ಕೆ ಸಂವಾದಿಯಾಗಿ ಬಳಸಲಾದ 827 ಇಂಗ್ಲಿಷ್ ಗಾದೆಗಳ ಸೂಚಿಯಿದೆ. ಇಂಗ್ಲಿಷ್ ವರ್ಣಮಾಲೆಯ 'ಎಕ್ಸ್' ಹಾಗೂ 'ಝಡ್' ಅಕ್ಷರಗಳನ್ನು ಹೊರತು ಪಡಿಸಿ ಉಳಿದ 24 ಅಕ್ಷರಗಳಿಗೂ ಗಾದೆಗಳನ್ನು ಜೋಡಿಸಲಾಗಿದೆ. ಗಾದೆಗಳು ಕನ್ನಡದ ಜೊತೆಗೆ ಪ್ರಯೋಗವಾದ ಪುಟ ಸಂಖ್ಯೆಗಳನ್ನು ಆಯಾ ಗಾದೆಯ ಎದುರಿನಲ್ಲೇ ಇದೆ. ಇಂಗ್ಲಿಷ್ ಗಾದೆಯೊಂದು ಕನ್ನಡಕ್ಕೆ ಹೇಗೆ ಸಂವಾದಿಯಾಗಿ ಅಥವಾ ಸಮಾನಾರ್ಥವಾಗಿ ಬಳಕೆಯಾಗಿರುವುದನ್ನು ಅರ್ಥೈಸಿಕೊಳ್ಳುವುದಕ್ಕೆ ಸುಲಭ.

ಸಂಕಲನಕ್ಕೆ ಯಾವುದೇ ಮುನ್ನುಡಿ, ಹಿನ್ನುಡಿ ಅಥವಾ ಪ್ರಸ್ತಾವನೆಗಳಿಲ್ಲ. ಸಂಕಲನದ ಉದ್ದೇಶ, ಪ್ರಯೋಜನ, ಮಿತಿಗಳನ್ನು ಸ್ಪಷ್ಟಪಡಿಸಿಕೊಳ್ಳುವುದು ಕಷ್ಟ. ಸಂಕಲನದಲ್ಲಿ ಪ್ರಕಟವಾದ ಕನ್ನಡ ಹಾಗೂ ಇಂಗ್ಲಿಷ್ ಗಾದೆಗಳನ್ನು ಗಮನಿಸಿದರೆ ಇಂಗ್ಲಿಷ್‌ಗಾಗಿ ಕನ್ನಡ ಗಾದೆಗಳನ್ನು ಸಂಗ್ರಹಿಸಿದಂತೆ ತೋರುತ್ತದೆ. ಅಂದರೆ 1906ರಲ್ಲಿ ಮದಾರಸಿನ ಮುದ್ರಣಾಲಯವೊಂದರಲ್ಲಿ ಪ್ರಕಟವಾದ ಇಂಗ್ಲಿಷ್ ಗಾದೆಗಳನ್ನು ಬಳಸಿಕೊಂಡು 1912ರಲ್ಲಿ ಕ್ಯಾನರೀಸ್ ಪ್ರೋವರ್ಬ್ಸ್ ಎಂಬುದಾಗಿ ಮಂಗಳೂರು ಬಾಸೆಲ್ ಮಿಷನ್ ಪ್ರಕಟಿಸಿದೆ. ಇಂಗ್ಲಿಷ್ ಗಾದೆಗಳ ಸಂಖ್ಯೆ ಕನ್ನಡ ಗಾದೆಗಿಂತ ಹೆಚ್ಚಿದೆ. ಇಂಗ್ಲಿಷ್ ಗಾದೆಗಳಿಗೆ ಸಂವಾದಿಯಾಗಿ ಕನ್ನಡ ಗಾದೆಗಳು ಬಳಕೆಗೊಂಡಿರಬೇಕೆಂಬ ಊಹೆ ವ್ಯಕ್ತಪಡಿಸಬಹುದು.

ಕನ್ನಡದಲ್ಲಿ ಹಾಗೂ ಸಂಸ್ಕೃತದಲ್ಲಿ ಬಳಕೆಯಲ್ಲಿರುವ ಪ್ರಸಿದ್ಧ ಗಾದೆಗಳನ್ನು ಗಮನಿಸಬಹುದು. 'ಅತಿ ಆಶೆ ಗತಿ ಕೇಡು'–'ಉದ್ಯೋಗಂ ಪುರುಷ ಲಕ್ಷಣಂ', 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ', 'ಕೂತು ಉಣ್ಣುವವನಿಗೆ ಕುಡಿಕೆ ಹಣ ಸಾಲದು' – 'ಉದರ ನಿಮಿತ್ತಂ ಬಹುಕೃತ ವೇಷಂ' (The belly teachs all arts) 'ದೂರಕ್ಕೆ ಬೆಟ್ಟ ನುಣ್ಣಗೆ' – ಉದಾಹರಿಸಿದ ಗಾದೆಗಳು ನೀತಿ ವಾಕ್ಯವೂ ಆಗಿವೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧವಿರುವ ತುಳುಗಾದೆಗಳ ಕನ್ನಡ ರೂಪವನ್ನೂ ಕೊಡಲಾಗಿದೆ. ಉದಾ: ಕ: 'ಅಜ್ಜಿ ಸಾಕಿದ ಮಗ ಬೊಜ್ಜಕ್ಕೂ ಬಾರದು' – ತು: 'ಅಜ್ಜಿ ಸಾಂಕಿನ ಮಗೆ ಬೊಜ್ಜೊಗುಲಾ ಆವಯೆ' – 'The grand mother's correction

Makes no impression', ಅ.: 'Mother's darlings are but milksop Heroes. ಉದಾ: 'ಅಪ್ಪ ತಿಂದರೆ ಸಾಲದೋ, ಕಾವಲಿ ಛಿದ್ರ ಏಕೆ' – ತು: 'ಅಪ್ಪೊ ತಿಂದ್'ಂಡ ಯಾರಂದ, ಕಾವೊಲಿ ನಕ್ಕುನ ದಾಯೆ?' ಉದಾ: ಓಡಕ್ಕೆ ಆಗುವ ಮರ ಕೀಲಿಗೆ ಕಡಿಯಬಾರದೌ.' – 'ಓಡ' ಎಂದರೆ 'ದೋಣಿ' ಅಥವಾ 'ಬೋಟ್.'

ಸಂಗ್ರಹದ ಕಾರ್ಯ ಅಷ್ಟೇನೂ ವೈಜ್ಞಾನಿಕವಿಲ್ಲದಿದ್ದರೂ, ಕೃತಿಯ ಸಂಪಾದನ ಕಾರ್ಯ ಮಾತ್ರ ಸಾಕಷ್ಟು ಶಿಸ್ತುಬದ್ಧವಾಗಿದೆ. ಕನ್ನಡ ಹಾಗೂ ಇಂಗ್ಲಿಷ್ ಭಾಷೆಯ ಸಂವಾದಿ ಗಾದೆಗಳನ್ನು ಜೋಡಿಸಿರುವುದು ಕುತೂಹಲಕರವಾಗಿದೆ.

1919ರಲ್ಲಿ ಮಂಗಳೂರು ಬಾಸೆಲ್ ಮಿಷನ್ ಬುಕ್ ಆ್ಯಂಡ್ ಟ್ರಾಕ್ ಡಿಪಾಸಿಟರಿಯವರು **'ಕರ್ಣಾಟಕ ಲೋಕೋಕ್ತಿ ನಿಧಾನ'** ಅಂದರೆ 1500 ರೂಢಿಯ ಗಾದೆಗಳ ಸಂಕಲನ ಹೊರತಂದರು. 1886ರಲ್ಲಿ ಸಂಕಲನವು ಮೊದಲನೆಯ ಮುದ್ರಣವನ್ನು ಕಂಡಿದೆ. ಹಲವು ಹೊಸ ಸೇರ್ಪಡೆಯೊಂದಿಗೆ ಎರಡನೆಯ ಮುದ್ರಣವಾಗಿ ಸಂಕಲನವು ಹೊರಬಂದಿದೆ.

'ಕರ್ನಾಟಕ ಲೋಕೋಕ್ತಿ ನಿಧಾನ' ಸಂಕಲನದಲ್ಲಿ 1500 ಗಾದೆಗಳಿವೆ. 'ಅಕ್ಕ ತಂಗಿ ಮಾತಿಗೆ ಬೆಕ್ಕು ತನ್ನ ಓಲೆ ಕಳಕೊಂಡಿತು' ಗಾದೆಯಿಂದ ಪ್ರಾರಂಭವಾಗಿ 'ಹೌದಪ್ಪನ ಮನೆಯಲ್ಲಿ ಹೌದಪ್ಪಾ, ಅಲ್ಲಪ್ಪನ ಮನೆಯಲ್ಲಿ ಅಲ್ಲಪ್ಪಾ' ಎಂಬ ಗಾದೆಯಲ್ಲಿ ಕೊನೆಗೊಳ್ಳುತ್ತದೆ. ಕನ್ನಡ ವರ್ಣಮಾಲೆಯ 'ಅ' ಅಕ್ಷರ ದಿಂದ ಪ್ರಾರಂಭವಾಗಿ 'ಹ' ಅಕ್ಷರದಲ್ಲಿ ಮುಕ್ತಾಯವಾಗುತ್ತದೆ.

ಹೆಚ್ಚಿನ ಎಲ್ಲಾ ಗಾದೆಗಳು ನೀತಿ ರೂಪಕವಾಗಿ ಬಳಕೆಯಾದವುಗಳು. ಗಾದೆಗಳಲ್ಲಿ ಹೆಚ್ಚಿನವುಗಳು ಬೇರೆ ಉಲ್ಲೇಖಗಳಿಂದ ಪಡೆದುಕೊಂಡವುಗಳು. ಕೀರ್ತನೆ, ಸಾಮತಿ ಸಂಗ್ರಹ, ಯಾಕೋಬ, ಸಮುವೇಲ್, ಯೆಹೋನ, ಮಾರ್ಕ, ಮತ್ತಾಯ, ಯ್ಯೋಹಾನ– ಮೊದಲಾದ ಗ್ರಂಥಗಳಿಂದ ಆಯ್ದು ನೀತಿ ವಾಕ್ಯಗಳನ್ನೂ ಸಂಕಲನದಲ್ಲಿ ಸಂಪಾದನೆಗೊಂಡಿದೆ. ಗಾದೆಗಳಲ್ಲಿ ಪ್ರಯೋಗವಾದ ಪ್ರಾದೇಶಿಕ ಪದಗಳಿಗೆ, ಕಠಿಣ ಪದಗಳಿಗೆ ಆಯಾ ಗಾದೆಯ ಅಡಿಯಲ್ಲೇ ಅರ್ಥಗಳನ್ನು ಕೊಡಲಾಗಿದೆ. ಹಲವು ಗಾದೆಗಳ ಪ್ರಯೋಗದ ಸಂದರ್ಭವನ್ನು ಹೇಳಲಾಗಿದೆ. ಹಿಂದೆ ಪ್ರಕಟವಾದ ಗಾದೆಗಳ ಸಂಕಲನದಲ್ಲಿ ಪ್ರಕಟವಾದ ಗಾದೆಗಳೂ ಪ್ರಕಟಗೊಂಡಿವೆ.

ಸಂಕಲನಕ್ಕೆ ಮುನ್ನುಡಿ ಇಲ್ಲ. ಸಂಕಲನದ ಸಂಗ್ರಾಹಕರು ಯಾರೆಂದು ಉಲ್ಲೇಖವಿಲ್ಲ. ಮಂಗಳೂರಿನ ಬಾಸೆಲ್ ಮಿಷನ್ ಪ್ರೆಸ್ಸಿನಲ್ಲಿ ಸಂಕಲನವು ಪ್ರಕಟವಾಗಿದೆ. ಸಂಕಲನವು 1886ರಲ್ಲಿ ಬಸಯ್ಯಾ ವಿರುಪಾಕ್ಷಯ್ಯಾ ಮಠದ ಸಂಗ್ರಹಿಸಿರುವ 'ಸಾವಿರ ಮಾರಿನ ಸರದಾರ' ಗಾದೆಗಳ ಸಂಗ್ರಹ ಪ್ರಕಟವಾಯಿತು. ಶೀರ್ಷಿಕೆಯೇ ಸೂಚಿಸುವಂತೆ

ಸಂಗ್ರಹದಲ್ಲಿ ಒಂದು ಸಾವಿರ ಗಾದೆಗಳಿವೆ. 44 ಪುಟಗಳುಳ್ಳ ಕೃತಿಯ ಗಾದೆಗಳನ್ನು ಉತ್ತರ ಕರ್ನಾಟಕ ಭಾಗದಿಂದ ಸಂಗ್ರಹಿಸಲಾಗಿದೆ.

1944ರಲ್ಲಿ **ಎಚ್.ಎಸ್.ಅಚ್ಚಪ್ಪನವರು** ಸಂಗ್ರಹಿಸಿರುವ **'ಕನ್ನಡ ಗಾದೆಗಳು'** ಸಂಕಲನಕ್ಕೆ ನಾ.ಕಸ್ತೂರಿಯವರು ಮುನ್ನುಡಿ ಬರೆದಿದ್ದಾರೆ. ಎಚ್.ಎಸ್.ಅಚ್ಚಪ್ಪನವರು ಸಂಕಲನಕ್ಕೆ ಅರಿಕೆ ಬರೆಯುತ್ತಾ "ಸಮಯೋಚಿತವಾಗಿ ಗಾದೆಗಳನ್ನು ಬಳಸಿ ತಮ್ಮ ಅಭಿಪ್ರಾಯವನ್ನು ಸ್ಥಿರಪಡಿಸುವುದರಲ್ಲಿ ನಮ್ಮ ಜನ ಬಹುನಿಷ್ಣಾತರು. ಯಾವ ಗಾದೆ ಹೇಳಬೇಕು ಎಂದು ತೋಚದೆ ಇದ್ದ ಕಾಲದಲ್ಲಿ 'ಅದೇನೋ ಗಾದೆ ಹೇಳಿದ ಹಾಗಾಯಿತು' ಅನ್ನುತ್ತಾರೆ. ಇದು ನಮ್ಮ ಜನರ ಸ್ವಭಾವ. ಅಂಥ ಜನರ ನಟ್ಟನಡುವೆ ಬೆಳೆದ ನನಗೆ ಗಾದೆಗಳ ಸಂಗ್ರಹ ಮಾಡಬೇಕೆಂಬ ಬಯಕೆ ಬಂದದ್ದು ಸಹಜ. ಗಾದೆಗಳನ್ನು ಕೂಡಿಹಾಕುವ ಕೆಲಸದಲ್ಲಿ ತೊಡಗಿದೆ. ನನ್ನ ನಿರಂತರ ಪ್ರಯತ್ನದ ಫಲವಾಗಿ ಸಾವಿರಾರು ಗಾದೆಗಳನ್ನು ಸಂಗ್ರಹಿಸಿದುದಾಯಿತು. ಸಂಗ್ರಹವಾದ ಗಾದೆಗಳು ಪುಸ್ತಕ ರೂಪದಲ್ಲಿ ಹೊರಬೀಳವುದೆಂದು ನಾನು ಅರಿತಿರಲಿಲ್ಲ. ಮಂಡ್ಯದ ಕರ್ನಾಟಕ ಸಂಘದವರು ತಾ. 5.6.43ರಲ್ಲಿ ಏರ್ಪಡಿಸಿದ್ದ ವಸಂತ ಸಾಹಿತ್ಯೋತ್ಸವದ ಸಮಾರಂಭದಲ್ಲಿ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರವರು ನಮ್ಮ ಜನಗಳಿಗೆ ಗಾದೆಗಳ ಪರಿಚಯ ಮಾಡಿ ಕೊಡಿ ಎಂದು ಅಪ್ಪಣೇ ಮಾಡಿ, ಬೆನ್ನು ತಟ್ಟಿ ಮಂದಿಯ ಮುಂದೆ ನಿಲ್ಲಿಸಿದರು. ನಾವು ಮಾಡಿದ ಭಾಷಣದ ಸಾರಾಂಶವನ್ನು ಕನ್ನಡನುಡಿಯಲ್ಲಿ ಅಚ್ಚು ಹಾಕಿಸಿದರು. ಕೊಟ್ಟ ಪ್ರೋತ್ಸಾಹ ಸಣ್ಣ ಪುಸ್ತಕವನ್ನು ಬೆಳಕಿಗೆ ತರುವ ನನ್ನ ಸಾಹಸಕ್ಕೆ ಎಡೆಗೊಟ್ಟಿತು. ಧೈರ್ಯವಾಗಿ ಮುನ್ನುಗ್ಗಿದೆ"(1944:3) ಎಂದು ಹೇಳಿಕೊಂಡಿದ್ದಾರೆ.

ಅಚ್ಚಪ್ಪನವರ ಸಂಗ್ರಹದ 3,000ದಷ್ಟು ಗಾದೆಗಳನ್ನು ಸಂಕಲನದಲ್ಲಿ ಪ್ರಕಟಿಸಲಾಗಿದೆ. 'ಅಕ್ಕ ಇದ್ದರೆ ಭಾವ, ರೊಕ್ಕವಿದ್ದರೆ ಸೂಳೆ, ಒಕ್ಕಳ ಹೊನ್ನಿದ್ದರೆ ಊರೆಲ್ಲಾ ನೆಂಟರು, 'ಗಾದೆಯಿಂದ ಪ್ರಾರಂಭವಾಗಿ, 'ಹಂಪೆಗೆ ಹೋಗುವುದಕ್ಕಿಂತ ತನ್ನ ಕೊಂಪೆಯಾಗಿ ಇರುವುದೇ ಲೇಸು' ಗಾದೆಯಲ್ಲಿ ಕೊನೆಗೊಳ್ಳುತ್ತದೆ. ಅವುಗಳನ್ನು ಅಕಾರಾದಿಯಾಗಿ ಜೋಡಿಸಲಾಗಿದ್ದು, ಕನ್ನಡ ಅಕ್ಷರ ಮಾಲೆಯ 42 ಅಕ್ಷರಗಳಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. ನಾ.ಕಸ್ತೂರಿಯವರು ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ. "ಜನಜೀವನದ ವಿಧವಿಧವಾದ ಅನುಭವಗಳಿಂದ ಚಿಮ್ಮಿದೆ ಕಿಡಿಗಳು ಸವಿದ ಸುಖಗಳನ್ನೂ ಕಂಡಬೆಳಕುಗಳನ್ನೂ ಉಂಡ ನೋವನ್ನೂ ಬೆಳಕಿಗೆ ತರುತ್ತವೆ. ಇವುಗಳಲ್ಲಿ ಅನೇಕ ಗಾದೆಗಳು ಅಜ್ಞಾತ ಕವಿಗಳ ಕಲಾಕೃತಿಗಳು; ಮಾನವಲೋಕದ ಹೃದಯದಿಂದ ಮಿಡಿದವು. ಇನ್ನೂ ಅನೇಕ, ಕವಿಗಳ ಕಲಾಕೃತಿಗಳು; ಮಾನವಲೋಕದ ಹೃದಯದಿಂದ ಮಿಡಿದವು. ಇನ್ನೂ ಅನೇಕ, ಗುಪ್ತಗಾಮಿನಿಯಾಗಿ ಭಾರತದ ಎಲ್ಲಾ ಜನಾಂಗಗಳನ್ನೂ ನಡೆಸುತ್ತಿರುವ ಸನಾತನ

ಸಂಸ್ಕೃತಿಗೆ ಸಂಬಂಧಿಸಿದವು. ದೇಹ ಪೋಷಣೆ, ವಂಶಪರಿಪಾಲನೆ, ದಯೆ, ದಾನ, ಅಹಿಂಸೆ, ದೇಶಪ್ರೇಮ, ಗುರುಹಿರಿಯರ ಶುಶ್ರೂಷೆ, ಪಾತಿವ್ರತ್ಯ, ಮಾತೃಭಕ್ತಿ, ಮುಂತಾದ ಜಗದ್ವ್ಯಾಪಿಗಳಾದ ಸಮಸ್ಯೆಗಳಿಗೆ ಅನ್ವಯಿಸುವ ಗಾದೆಗಳು ಸಂಗ್ರಹದಲ್ಲಿ ನೂರಾರಿವೆ. ನಯದ ಡೊಂಕಿಲ್ಲದೆ, ನಾಜೋಕಿನ ಕೊಂಕಿಲ್ಲದೆ, ಅವು ನೇರವಾಗಿ, ಜನಮನದಿಂದ ಮೂಡಿ ಜನಮನವನ್ನು ತಿದ್ದಲೆಳಸುತ್ತವೆ. ನಮ್ಮ ಸಮಾಜ ರಚನೆಯಲ್ಲಿ ಹಾಸು ಹೊಕ್ಕಾಗಿ ಸೇರಿಕೊಂಡಿರುವ ಮೇಲುಕೀಳುಗಳೂ, ಬೇವು ಬೆಲ್ಲಗಳೂ, ಕಟ್ಟು ನಿಟ್ಟುಗಳೂ, ನಮ್ಮ ಸಂಸಾರ ಜೀವನದಲ್ಲಿ ತುಂಬಿರುವ ರೀತಿ ನೀತಿಗಳೂ, ಪ್ರೀತಿ ಗೌರವಗಳೂ, ಅನೇಕ ಗಾದೆಗಳ ವಿಷಯವಾಗಿದೆ. ಇವುಗಳನ್ನು ಮನನ ಮಾಡಿದರೆ ನಮ್ಮ ಜನರ ಧರ್ಮ ದೃಷ್ಟಿ ಎತ್ತಕಡೆ ಬಾಗಿದೆ. ಅವರ ನ್ಯಾಯಾನ್ಯಾಯ ವಿಮರ್ಶೆ ಯಾವ ಆಧಾರಗಳ ಮೇಲೆ ನೆಲೆಸಿದೆ. ಅವರನ್ನು ತಿವಿದೆಚ್ಚರಿಸುತ್ತಿರುವ ಗೊತ್ತು ಗುರಿಗಳು ಯಾವುವು ಎಂಬುದೆಲ್ಲ ಮನದಟ್ಟಾಗುತ್ತದೆ. ಆದರೆ, ಯಾವ ಜನಾಂಗದ್ದೇ ಆಗಲಿ, ಅವರ ಗಾದೆಗಳಲ್ಲಿ ಏಕಮುಖತೆಯನ್ನು ಬಯಸುವುದು ಸಂಕುಚಿತ ಮನೋಭಾವನೆ ಎನ್ನಿಸುತ್ತದೆ. ಒಂದೇ ಸಮಸ್ಯೆಯನ್ನು, ಒಂದೇ ಧರ್ಮ ಸಂಕಟವನ್ನು, ಬೇರೆ ಬೇರೆ ದೃಷ್ಟಿಕೋನಗಳಿಂದ ಅವು ಪ್ರತಿಪಾದಿಸುತ್ತವೆ. ಗಾದೆಗಳು ಧರ್ಮಸಿಂಧುಗಳ ಸಾರ; ಅಂತೆಯೇ, ಸದಾಚಾರ ಕುಲಾಚಾರ ದೇಶಾಚಾರಗಳ ಖಣಿ; ಅವುಗಳನ್ನು ತಿರುವಿ ಹಾಕುವಾಗ, ಅನುಕೂಲ ಸಿಂಧುವಿನ ಹಲವು ಹಾಳೆಗಳು ನಮಗೆ ಗೋಚರವಾದರೂ ಆಗಬಹುದು; ಆದರೆ, ಎಲ್ಲತೆರನ ಗಾದೆಗಳಿಗೂ ರಸವನ್ನು ತುಂಬುತ್ತಿರುವುದು ಜನಹೃದಯ; ಚೇತನವನ್ನು ಕೊಡುತ್ತಿರುವುದು ಜನಮನ. ಮಿಡಿಯುತ್ತಿರುವುದು ಜೀವಂತ ನಾಡಿ" (ನಮ್ಮ ಗಾದೆಗಳು 1944:5–6) ಎಂದು ಅಭಿಪ್ರಾಯ ಪಡುತ್ತಾರೆ.

ನಾ.ಕಸ್ತೂರಿಯವರ ಅಭಿಪ್ರಾಯದಲ್ಲೇ ಹೇಳುವುದಾದರೆ, ಜನರ ಅನುಭವದ ಕಿಡಿಗಳು, ಅಜ್ಞಾತ ಕವಿಗಳ ಕಲಾಕೃತಿಗಳು, ಸಾಂಸ್ಕೃತಿಕ ಅಂಶಗಳೆಲ್ಲವುಗಳು ಇವೆ. ಸಂಕಲನದಲ್ಲಿರುವ ಹೆಚ್ಚಿನ ಗಾದೆಗಳನ್ನು ಗ್ರಂಥಸ್ಥ ಮೂಲಗಳಿಂದ ಸಂಗ್ರಹಿಸಲಾಗಿದೆ. ಪ್ರಾಚೀನ ಕಾವ್ಯಗಳಲ್ಲಿ, ಗದ್ಯಬರಹಗಳಲ್ಲಿ, ಹಾಗೂ ಇನ್ನಿತರ ಪ್ರಕಟಿತ ಕೃತಿ ಬಳಕೆಯಾದ ಹೋಲಿಕೆಯ ಮಾತುಗಳನ್ನು, ವೈರುಧ್ಯಗಳನ್ನು ರೂಪಕಗಳನ್ನು, ಸಾದೃಶ್ಯಗಳನ್ನು, ದೃಷ್ಟಾಂತಗಳನ್ನು ಕಲೆಹಾಕಲಾಗಿದೆ. **ಉದಾ: ಅ.** 'ಅಗ್ಗಳನ ಮುಂದೆ ವೆಗ್ಗಳನೆ?' **ಆ.** 'ಅತ್ತ ಕಣ್ಣು ಮೃತ್ಯು ತಂತು', ಇ. 'ಅಡುಗೇಲಿ ಜಾಣಿ ಅಂತ ಹಡಗಿನಿಂದ ಕರೆಸಿದರೆ, ಚಕ್ಕೋತಿನ ಸೊಪ್ಪಿಗೆ ಎಷ್ಟು ಮೊಗೆ ನೀರು ಹಾಕಲಿ ಅಂದಳು', **ಈ.** 'ಅಪ್ಪನ ಸಮಕ್ಕೆ ಪಂಚೆ ಉಟ್ಟುಕೊಳ್ಳೊ ಮಗನ್ನ ಮಾತಾಡಿಸಬೇಡ; ತಾಯಿಯ ಸಮಕ್ಕೆ ಸೀರೆ ಉಟ್ಟುಕೊಳ್ಳೊ ಮಗಳನ್ನ ಮಾತಾಡಿಸಬೇಡ; **ಉ.** 'ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ'.

ಹಲವು ಗಾದೆಗಳು ಒಗಟು ರೂಪದಲ್ಲಿವೆ. **ಉದಾ: ಅ**. 'ಅಣಿಜಾಣೆ, ಅಣಿಜಾಣೆ, ಆಕಳಿಗೆ ಎಷ್ಟೇ ಮೊಲೆ? ಅಂದರೆ ಮೂರು ಮತ್ತೊಂದು, ಅಂದಳು'(1944:4), **ಆ**. 'ಅಲೆ ಬಲೆ ಚನ್ನೀ ಎಲೆ ಎಲ್ಲಿ ಮಡಗಿದ್ದಿ? ಅಂತ ಕೇಳಿದ್ದಕ್ಕೆ', 'ಒಣಗಿ ಹೋಯ್ತದ ಅಂತ ಒಲೆಮೇಲೆ ಮಡಗವ್ವಿ ಅಂದಳು.'(1944:10)

ಒಡಪು ರೀತಿಯ ಗಾದೆಗಳೂ ಇವೆ. ಗಾದೆ ವಿವರಣಾತ್ಮಕವಾಗಿ ಕಥಾರೂಪದಲ್ಲಿದೆ. **ಉದಾ: ಅ**. 'ಅರೆಮಾನ ಅಕ್ಕಿ ತಂದು ಬೀಸಿ ತಿರುವು, ಕೆಂಡಕ್ಕೆ ಹಾಕಿದರೆ ಮಗಳು, ತಿಮ್ಮಮ್ಮ ಉಂಡು, ಮೊಮ್ಮಗಳು ತಿಮ್ಮಾಜಮ್ಮ ಉಂಡು, ಒಂದೂರ್ಮಗಳು ಬಂದು ಬಂದು ಉಂಡು, ಕಿಕ್ಕೇರಿ ಮಗಳು ಇಕ್ಕೊಂಡು ಉಂಡು, ಬಾಚಳ್ಳಿ ಮಗಳು ಬಾಚಿಕೊಂಡು ಉಂಡು, ಮಿಕ್ಕದ್ದು ಎಳೆಮ್ಮೆ ಗೊಂತಿಗೆ ಸುರಿದರೆ ಅವು ಮುಟ್ಟದೆ ಹೋದವು.' (1944:10) **ಆ**. 'ಕಾಸಿನ ಚಿಟ್ಟೇಲಿ ಎಣ್ಣೆ ತಂದು, ಕೂಸಿಗೆ ಎರೆದು ಪಾಂಡೂಗೆ ಎರೆದು, ಆ ಮನೆ ದೀಪ ಮನೆ ದೀಪ, ನಡುಮನೆ ದೀಪ ನಂದಾದೀಪ, ಹತ್ತಿ ಬತ್ತಿ, ಕೂಸಿನ ನೆತ್ತಿ, ವಾರದ ಬ್ರಾಹ್ಮಣ, ಒಗ್ಗರಣೆ ಸೌಟು, ಅಷ್ಟೂ ಮಾಡಿ ನೆಲುವಲ್ಲಿ ಇಟ್ಟರೆ ಹೆಮ್ಮೆಗಾರ ಮುರವ ತಲೆ ತಾಕಿಸಿ ಬೀಳಿಸಿ, ಚಿಟ್ಟೆ ಒಡೆದು, ಎಣ್ಣೆ ಏಳೆಮ್ಮೆ ಗೊಂತಿಗೆ ಹರೀತು.(1944:45)

ಗಾದೆಗಳ ಅರ್ಥಗಳನ್ನು ಸ್ಪಷ್ಟಪಡಿಸುವುದಕ್ಕಾಗಿ ಸಂದರ್ಭವನ್ನು ಹೇಳಲಾಗಿದೆ. **ಉದಾ: ಅ**. 'ಕುಂಡಿ ಹುಣ್ಣು ಹೊರಗೆ ಹಾಕಬೇಡ' (ಸಂಸಾರದ ವಿಷಯ ಹೊರ ಬೀಳಬಾರದು) **ಆ**. 'ಬರ್ತ ಹಸುಕರಿ, ನಿಂತ ಎಮ್ಮೆ ಕರಿ', (ಮನೆಗೆ ಬಂದ ಕೂಡಲೆ ಹಾಲು ಕರೆದರೆ ಹಸು ಹೆಚ್ಚು ಹಾಲು ಕೊಡುತ್ತೆ. ಆದರೆ ಎಮ್ಮೆ ಸ್ವಲ್ಪ ತಡವಾಗಿ ಕರೆಂದರೆ ಹೆಚ್ಚು ಕೊಡುತ್ತೆ) **ಇ**. 'ಬಂದ ಹುಣ್ಣಿಮೆಗೆ ಬಡಹಣ್ಣು' (ಬಂದ ಹುಣ್ಣಿಮೆ ಪುಷ್ಯಮಾಸದಲ್ಲಿ ಬರುತ್ತೆ ಕಾಲದಲ್ಲಿ ಹುಣಿಸೇ ಹಣ್ಣಿನ ಸುಗ್ಗಿ) 'ಶಿರಾಳ ಸೆಟ್ಟಿ ಪಾರುಪತ್ಯ' (ಅಲ್ಪ ಕಾಲದ ಅಧಿಕಾರ)

ಒಗಟುಗಳು–ಒಡಪುಗಳು

ಮೊದಲ ಘಟ್ಟದಲ್ಲಿ ಒಗಟು ಹಾಗೂ ಒಡಪುಗಳ ಬಗೆಗೆ ಪ್ರಕಟವಾದ ಕೃತಿಗಲು ಮೂರು. 1946ರಲ್ಲಿ **ಶಂ.ಬಾ.ಜೋಷಿ** ಸಂಗ್ರಹಿಸಿರುವ **'ಮಕ್ಕಳ ಒಡಪುಗಳು'** ಗ್ರಂಥವು ಅಧ್ಯಯನಕ್ಕೆ ಲಭ್ಯವಿದೆ.

1934ರಲ್ಲಿ ಶ್ಯಾಮಲಾ, ಶ್ಯಾಮರಾವ್, ಎಚ್. ಜೋಶಿಯವರು ಸಂಗ್ರಹಿಸಿರುವ **'ಕನ್ನಡ ಒಗಟುಗಳು'** ಗ್ರಂಥ ಪ್ರಕಟವಾಯಿತು. 24 ಪುಟಗಳ ಪುಟ್ಟ ಕೃತಿ. ಆರಂಭದ

ನಾಲ್ಕು ಪುಟಗಳಲ್ಲಿ ಮುನ್ನುಡಿಯಿದ್ದು, ಉತ್ತರ ಕರ್ನಾಟಕ ಭಾಗದ ಮಹಾರಾಷ್ಟ್ರ ಪ್ರದೇಶದಲ್ಲಿ ಮದುವೆ ಸಂದರ್ಭದಲ್ಲಿ ಹಾಡುವ ಒಗಟುಗಳಿವೆ. ಒಗಟುಗಳು ಅದ್ಯರೂಪದಲ್ಲಿದ್ದು ಒಡಪುಗಳ ಲಕ್ಷಣವನ್ನು ಹೋಲುತ್ತವೆ.

1940ರಲ್ಲಿ **ಶಂ.ಬಾ.ಜೋಶಿಯವರು** ಸಂಗ್ರಹಿಸಿರುವ **'ಮಕ್ಕಳ ಒಡಪುಗಳು'** ಪುಸ್ತಕದಲ್ಲಿ 215 ಒಡಪುಗಳನ್ನು ಸಂಗ್ರಹಿಸಿಕೊಡಲಾಗಿದೆ. ಒಡಪುಗಳಿಗೆ ಒಂದು ವಿವರಾಣಾತ್ಮಕ ಮುನ್ನೂಡಿಯಿದ್ದು 215 ಒಡಪುಗಳೂ ಪ್ರಶ್ನೆಯ ರೂಪಲ್ಲಿದ್ದು ಅವುಗಳಿಗೆ ಕೊನೆಯ ಪುಟಗಳಲ್ಲಿ ಉತ್ತರವಿದೆ.

'ಮಕ್ಕಳ ಒಡಪುಗಳು' ಪುಸ್ತಕದ ಮುನ್ನುಡಿಯಲ್ಲಿ ಮಕ್ಕಳ ವಿಚಾರ ಶಕ್ತಿಯ ಬಗ್ಗೆ ಚರ್ಚೆಯಿದೆ. ಸಂವಹನ ಮಾಡಿಕೊಳ್ಳುವಾಗ, ಅರ್ಥೈಸಿಕೊಳ್ಳುವಾಗ ಒಡಪು ಹೇಳುವ ಮಾಧ್ಯಮದ ಅಗತ್ಯದ ಚರ್ಚೆಯಿದ್ದು ಗಾದೆಗಳು ವೈಚಾರಿಕ ಅರ್ಥಕ್ಕೆ ಒಳಗೊಳ್ಳುತ್ತದೆ ಎನ್ನಲಾಗಿದೆ. "ಒಡಪುಗಳಿಗಿಂತ ಗಾದೆಗಳು ತಿಳಿಯುವುದಕ್ಕೆ ವಿದ್ಯಾರ್ಥಿಗಳು ಸ್ವಲ್ಪ ಹೆಚ್ಚು ಪ್ರೌಢರಾಗಿರಬೇಕು"(1940:ಎರಡು) ಅಭಿಪ್ರಾಯಪಡಲಾಗಿದೆ. ಒಡಪುಗಳು ಗಾದೆಗಳಿಗಿಂತ ಯಾಕೆ ಮಕ್ಕಳ ಮನಸ್ಸಿಗೆ ಮುಖ್ಯವಾಗುತ್ತವೆಯೆಂದರೆ, "ಗಾದೆಗಳಿಗಿಂತಲೂ ಒಡಪುಗಳು ಮಕ್ಕಳ ಮನಸ್ಸನ್ನು ಮೊದಲು ಸೆಳೆಯುತ್ತವೆ. ಸುಮಾರು 8 ರಿಂದ 12 ವಯಸ್ಸಿನ ಮಕ್ಕಳು ಕಲೆತು ಕೆಲವಾಗ-ಕೆಳೆವಾಗ ಒಬ್ಬರೊಬ್ಬರಿಗೆ ಒಡಪುಗಳು ತೊಡಕನ್ನು ಹಾಕಿ, ಸರಸ ಸಲ್ಲಾಪಗಳನ್ನು ನಡೆಸುವುದುಂಟು. ಗಾದೆಗಳು ವಯಸ್ಸಿನ ಬಾಲರಿಗೆ ಅಷ್ಟು ಹಿಡಿಸುವುದಿಲ್ಲ. ಗಾದೆಗಳು, ವಚನಗಳು, ಹುರುಳಿನ ನುಡಿಗಳು (ಅಫೋರಿಸಮ್ಸ್) ಇವುಗಳಲ್ಲಿ ಅಡಕವಾಗಿರುವ ಆಳವಾದ ಅರ್ಥವು ತಿಳಿಯಬೇಕಾಗಿದ್ದರೆ ಹಾಗೂ ಅದರ ಯುಕ್ತಾಯುಕ್ತತೆಯ ಖಂಡನ-ಮಂಡನಗಳ ನಿಮಿತ್ತದಿಂದ ವಿದ್ಯಾರ್ಥಿಗಳ ವಿಚಾರಶಕ್ತಿಗೆ ಚಾಲನೆ ಕೊಡಬೇಕಾಗಿದ್ದರೆ ಸ್ವಲ್ಪವಾದರೂ ತಿಳುವಳಿಕೆ ಬೆಳೆದವರಾಗಿರಬೇಕು." (1940:ಎರಡು) ಮಕ್ಕಳಲ್ಲಿ ಒಡಪುಗಳ ಹುಚ್ಚು ಎಷ್ಟಿರಬಹುದು ಎಂಬುದಕ್ಕೆ ತಂದೆ-ತಾಯಿ, ಅಜ್ಜ-ಅಜ್ಜಿಯರು ಮಕ್ಕಳನ್ನು ಸಮರ್ಥಿಸಿಕೊಳ್ಳುವ ಘಟನೆಗಳನ್ನು ಹೇಳಲಾಗಿದೆ.

"ಬಯಲಿಗಿದ್ದುದನ್ನು ಬಚ್ಚಿಟ್ಟು ಕಣ್ಣುಮುಚ್ಚಾಲೆಯಾಟವನ್ನು ಆಡುವ ಮನೋಭಾವವು ಮಕ್ಕಳ ಒಡಪುಗಳಲ್ಲಿ ಕಾಣಬರುತ್ತವೆ. ಇದು ಹುಡುಗರ ಆಟ. ಹುಡುಗಾಟ-ವಿನೋದ, ವಿನೋದಕ್ಕಾಗಿ-ಸುಖ ಸಂಕಥಾ ವಿನೋದಕ್ಕಾಗಿ ಇವು ಹುಟ್ಟಿದವು." (1940: ಮೂರು) ಒಡಪಿನ ಪ್ರಯೋಜನ, ಒಡಪಿಗೂ ಗಾದೆಗೂ ಇರುವ ಸಂಬಂಧಗಳ ಚರ್ಚೆಯಿದೆ. ಚರ್ಚೆಯಲ್ಲಿ ಮಗು ಹಾಗೂ ಒಡಪುಗಳ ಸಂಬಂಧವನ್ನು ಸ್ಪಷ್ಟ ವಿವರಣೆಯಿದೆ.

ಒಡಪಿನ ಲಕ್ಷಣಗಳಾದ, ಕಲ್ಪನಾಶಕ್ತಿ, ಭಾವನಾಶಕ್ತಿ, ಕಲ್ಪನಾ ಚುಮತ್ಕೃತಿ (ರೂಪಕ, ವಿರೋಧಾಭಾಸ, ಶ್ಲೇಷ, ಅನುಪ್ರಸಾದಿ)ಗಳ ಮೂಲಕ ಮನಸ್ಸಿಗೆ ಸುಖ; ಬುದ್ಧಿಗೆ ಅನ್ನ; ಹಾಗೂ ಕಿವಿಗೆ ಇಂಪು ಉಂಟಾಗುತ್ತದೆ. ಪದಗಳೊಳಗೆ ಹುದಗಿಕೊಂಡಿರುವ ಅರ್ಥ; ಅಂದ ಚೆಂದದ ಬೆಡಗಿನ ನುಡಿಗಳ ಹೊಂದಿಕೆಗಳನ್ನು ಹೊರಸೂಸುವುದನ್ನು ಕಾಣಬಹುದು.

"ಒಡಪುಗಳಿಂದ ದೊರೆವ ಆನಂದವನ್ನು ಜನರು ಅತಿ ಪ್ರಾಚೀನ ಕಾಲದಿಂದಲೂ ಅನುಭವಿಸುತ್ತ ಬಂದಿದ್ದಾರೆ. ವೇದ–ಉಪನಿಷತ್ತುಗಳೊಳಗಿನ ಒಡಪುಗಳು ಇದಕ್ಕೆ ದೃಷ್ಟಾಂತ. ಇತಿಹಾಸಕಾಲದ ಇಂತಹ ಉದಾಹರಣೆಗಳಿಗೆ ಭೋಜ–ಕಾಳಿದಾಸ, ಅಕ್ಬರ–ಬೀರಬಲ್ಲ, ಕೃಷ್ಣದೇವರಾಯ–ತೆನ್ನಾಲಿ ರಾಮಕೃಷ್ಣಾದಿಗಳ ಹೆಸರಿನಲ್ಲಿ ಊರೂರಿಗೆ ಕೇಳಿ ಬರುವ ಹಲವು ಒಡಪುಗಳಿವೆ, ಕಥೆಗಳಿವೆ. ಅಭಿನವ ಪಂಪ ಹಾಗೂ ಕಂತಿ ಎಂಬ ಇವರಿಬ್ಬರಲ್ಲಿ ಸಮಸ್ಯಾ ಪೂರ್ತಿ ಸೆಣಸಾಟವು ನಡೆಯುತ್ತಿದ್ದಿತೆಂದು ದಂತಕಥೆಯಿದೆ. ಒಡಪುಗಳಲ್ಲಿದ್ದ ಜನಮನವನ್ನು ಸೂರೆಗೊಂಬ ಅದ್ಭುತ ಸಾಮರ್ಥ್ಯವು ಎಳ್ಳಷ್ಟು ಕಡಿಮೆಯಾಗಿಲ್ಲ. ಆದರೆ ಯುಗಕ್ಕೆ ತಕ್ಕಂತೆ ಅದರ ಕೆಲವೊಂದು ಪ್ರಕಾರಗಳು ಹೊಸರೂಪವನ್ನು ತಾಳುತ್ತಿವೆ." (1940: ಹದಿಮೂರು) ಒಡಪುಗಳು ಪುರಾಣಕಾಲದಿಂದ, ಇತಿಹಾಸಕಾರರಿಂದ ಜನಮನಕ್ಕೆ ಪರಿಚಿತವಾಗಿವೆ.

'ಮಕ್ಕಳ ಒಡಪುಗಳು' ಗ್ರಂಥದಲ್ಲಿ ಒಡಪುಗಳ ಹಲವು ಪ್ರಕಾರಗಳ ಪರಿಚಯವಿದೆ. 1. ಕೂಟ ಪ್ರಶ್ನೆಗಳು, 2. ಸಮಸ್ಯಾಪೂರ್ತಿಯ ವಾಕ್ಯಾಂಶಗಳು, 3. ಅಂಕಿ ಸಂಖ್ಯೆಯ ತೊಡಕುಗಳು, 4. ಶಬ್ದ ಸಂಯೋಜನೆಯ ಚಕ್ರಬಂಧಗಳು.

'ಮಕ್ಕಳ ಒಡಪುಗಳು' ಕೃತಿಯ ಉದ್ದೇಶ ಹಾಗೂ ವ್ಯಾಪ್ತಿ, "ಎಷ್ಟೋ ಕಾಲದಿಂದ ಮಕ್ಕಳ ಹಿಗ್ಗಿಗೆ ಕಾರಣವಾದ ಒಡಪುಗಳಲ್ಲಿ ಕೆಲವನ್ನು ಕಲೆಹಾಕಿದ್ದಾಗಿದೆ. ನಮ್ಮ ನಾಡಿನ ಊರೂರಿಗೂ ದೊರೆವ ಸಾವಿರಾರು ಒಡಪುಗಳನ್ನೆಲ್ಲ ಸಂಗ್ರಹಿಸಿ ಅಚ್ಚು ಹಾಕಿಸುವುದು, ಆರ್ಥಿಕ ದೃಷ್ಟಿಯಿಂದ ನನ್ನ ಆಳವು ಮೀರಿದುದು. ನನ್ನ ವಿದ್ಯಾರ್ಥಿ, ವಿದ್ಯಾರ್ಥಿನಿಯರ ನೆರವಿನಿಂದ ಕೂಡಿಸಿದ ಪುಲಿಗೆರೆಯ ನಾಡಿನ ಹಲವು ಒಡಪುಗಳು ಜೊತೆಗೆ, ಪಂಪನ ಬನವಾಸಿ ದೇಶ, ರನ್ನನ ಮುದುವೊಳಲ ಸೀಮೆಯ ಗೆಳೆಯರಿಂದ ದೊರೆತವುಗಳನ್ನೂ ಕೆಲವು ಸೇರಿಸಿದ್ದೇನೆ. ಕೋಪಣ ಕಲುಬುರ್ಗಿಯ ನಾಡಿನ ಒಡಪುಗಳೂ ಇದರಲ್ಲುಂಟು. ಮೈಸೂರು ಹಾಗೂ ಮಂಗಳೂರು ಕಡೆಯ ಒಡಪುಗಳೂ ಇದರಲ್ಲಿ ಇಲ್ಲದಿಲ್ಲ. ಬೇರೆ ಬೇರೆ ಕಡೆಯ ಒಡಪುಗಳನ್ನು ಒಂದೆಡೆ ಕೂಡಿಸಿ ನೋಡುವಾಗ ಅವುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಒಂದೇ ತೆರನಾಗಿದ್ದುದು ಅನುಭವಕ್ಕೆ ಬಂದಿತು. ಕರ್ನಾಟಕದ ಬೇರೆ ಬೇರೆ

ಭಾಗಗಳ ಹಳ್ಳಿಯ ಹಾಡು, ಗರತಿಯ ಹಾಡುಗಳ ಸಂಗ್ರಹಗಳು ಪ್ರಸಿದ್ಧವಾದಗಲೂ ಇದೇ ಸಂಗತಿಯು ನಿದರ್ಶನಕ್ಕೆ ಬಂದಿತು. ಇಂದು ಕನ್ನಾಡು ತುಂಡು ತುಂಡಾಗಿರುವುದಾದರು ಅನಂತಕಾಲದಿಂದಲೂ ಇದರ ಅಣುರೇಣುಗಳಲ್ಲಿ ಒಂದೇ ಬಗೆಯ ಜೀವನ ಶಕ್ತಿ ಹರಿದಾಡುತ್ತಲಿದೆಯೆಂಬ ಮಾತಿನ ಮನವರಿಕೆಯಾಗದೇ ಇರಬಹುದು."(1940:13–14)

ಸಂಗ್ರಹದಲ್ಲಿ ವರ್ಣನಾತ್ಮಕವಾಗಿರುವ ಸಣ್ಣ ಒಡಪುಗಳು(ಹಾದಿಯ ಪೋರ ಹಾಡುತ–ಹೊರಟಾನೆ–ದನದ ಕೊರಳಗಂಟೆ); ಸ್ವಲ್ಪ ದೀರ್ಘವಿರುವವುಗಳು (ಅಂಗಳಲ್ಲಿ ಒಂದು ತಿಂಗಳ ಗಿಡಹುಟ್ಟಿ, ತಿಂಗಳಿಗೆ ಒಂದು ಕಾಯಿ ಬಿಡುವುದು–ಚಂದ್ರಮ) ಪ್ರತಿ ಪದವೂ ಸಾರ್ಥಕವಾಗಿರುವವುಗಳು (ಮರದಲ್ಲಿ ಮರಹುಟ್ಟಿ, ಮರಚಕ್ರ ಕಾಯಾಗಿ, ತಿನ್ನಬಾರದ ಹಣ್ಣು ಬಲುಸಿಹಿ–ಕೂಸು); ಅತಿಶಯ ಅಥವಾ ಅಧಿಕ್ಯಾರ್ಥದ ದ್ವಿರುಕ್ತಿಯ ಮಾತುಗಳಿದ್ದವುಗಳು (ಅರಕಟ್ಟು, ಮರಕಟ್ಟು ಮರಕ್ಕೆ ಮೂವತ್ತು ಕಟ್ಟು ಪಗಡಿಕಟ್ಟು......... ಹೇಳದವರಿಗೆ ಹೆಡೆಮುಡಿಗಟ್ಟು), ರೂಪಕಾದಿ ಅಲಂಕಾರಗಳು ಬೆರೆತುಕೊಂಡ ಸೊಬಗಿನ ಒಡಪುಗಳು (ತಿನ್ನಬಾರದ ಹಣ್ಣು ಬಲು ಸವಿ) – ಹೀಗೆ ಹಲವು ಮಾದರಿಯ ವೈವಿಧ್ಯತೆಯುಳ್ಳ ಹಳೆಯ ಒಡಪುಗಳನ್ನು ಸಂಗ್ರಹದಲ್ಲಿವೆ.

ಒಡಪುಗಳನ್ನು ಒಗಟುಗಳೆಂದು ಹೇಳುತ್ತಾರೆ. "ಒಡಪುಗಳಿಗೆ ಒಗಟೆಗಳೆಂಬ ಪರಿಪಾಠವೂ ಉಂಟು. ಭಾಷೆಯಲ್ಲಿ ಸ್ವಲ್ಪವೂ ಅರ್ಥ ಭೇದವಿಲ್ಲದೆ, ಒಂದೇ ಬಗೆಯಾದ ಅರ್ಥದಲ್ಲಿ ಬಳಸುವ ಶಬ್ದಗಳು ಒಂದಕ್ಕಿಂತ ಹೆಚ್ಚಾಗಿದ್ದರೂ ಅವೆಲ್ಲ ವ್ಯರ್ಥ. ಏಕೆಂದರೆ ಒಂದಿದ್ದರೂ ಅಷ್ಟೆ; ಹಲವಿದ್ದರೂ ಅಷ್ಟೆ, ಆದರೆ ಸುದೈವದಿಂದ ಒಡಪು ಹಾಗೂ ಒಗಟು ಇವೆರಡರಲ್ಲಿ ಸೂಕ್ಷ್ಮ ಅರ್ಥ ವ್ಯತ್ಯಾಸವುಂಟು. 'ಒಡಪು' ಎಂದರೆ ಒಡೆದು ಬಿಡಿಸಿ, ಬಿಚ್ಚಿ ಅರ್ಥವನ್ನು ಅರಿತುಕೊಳ್ಳಬೇಕಾಗುವಂತಹದು; 'ಒಗಟ' ಎಂಬುದು ಕನ್ನಡ ಶಬ್ದವೆಂದು ಹೇಳಲಿಕ್ಕಾಗುವುದಿಲ್ಲ. ಇದು ಪ್ರಾಕೃತದಿಂದ ಬಂದ ಪದವಾಗಿರಬೇಕು. ಮರಾಠಿಯಲ್ಲಿ 'ಉಖಾಣಾ' ಹಾಗೂ ಗುಜರಾತಿಯಲ್ಲಿ 'ಉಖಾಣು' ಎಂಬ ಇದೇ ಅರ್ಥದ ಶಬ್ದಗಳಿವೆ. ವರ್ಣಿಸು, ಹೇಳು, ಮಾತನಾಡು ಎಂಬುದು ಶಬ್ದಕ್ಕಿರುವ ಅರ್ಥ. ಕನ್ನಡದಲ್ಲಿ ರೂಢಿಯಲ್ಲಿರುವ ಒಕ್ಕಣೆ, ಒಕ್ಕಣಿಸುವ ಎಂಬ ಶಬ್ದಗಳು ಒಗಟೆ – ಉಖಾಣಾ ಎಂಬುದರ ಬಳಗದವೆಂದು ತೋರುತ್ತದೆ. ಗಂಡ–ಹೆಂಡಿರು ಒಬ್ಬರನೊಬ್ಬರು ಹೇಳುವ ಮಾತು ಒಗಟ. ಒಗಟವು ಒಡಪಿನಿಂದ ಭಿನ್ನ. ಒಡಪು ತೊಡಕಿನ ಜಾತಿಗೆ ಸೇರಿದುದು; ಗೂಢ, ಗುಹ್ಯಾರ್ಥವನ್ನುಳ್ಳದು ಒಡಪು. ಹಳ್ಳಿಗರ ಬಳಕೆಯ ಮಾತಿನಲ್ಲಿ 'ಒಡಪು' ಶಬ್ದವೂ ಇಂದಿಗೂ ಜೀವಂತವಾಗಿದೆ. ಇದು ಒಂದು ಸಿದ್ಧಪಡಿಸಿಕೊಂಡ

ಹೊಸ ಶಬ್ದವಲ್ಲ. ಒಗಟ ಹಾಗೂ ಒಡಪುಗಳಲ್ಲಿ ಬಗೆಯಾದ ಅರ್ಥ ಭೇದವನ್ನಿಟ್ಟು ಅವನ್ನು ಬಳಸಿದಲ್ಲಿ ಮಾತಿನ ಔಚಿತ್ಯವೂ ಹೆಚ್ಚಾಗುವುದು."(1940:15–16)

ಕಾಲದ ದೃಷ್ಟಿಯಿಂದ ಒಡಪುಗಳನ್ನು ಗಮನಿಸಿದರೆ, "ಒಟ್ಟಿರಿಸಿದ ಒಡಪುಗಳೆಲ್ಲ ಪುರಾತನ ಕಾಲದಿಂದ ಬಂದುವೆಂದು ಹೇಳುವುದು ಕಷ್ಟ. ಆದರೂ ಇದರಲ್ಲಿ ಹಲವು 200–300 ವರುಷಗಳಿಗಿಂತಲೂ ಹಳೆಯವಾಗಿವೆ. ಸರ್ವಜ್ಞನನಿಂದ (16ನೆಯ ಶತಮಾನ) ಮೊದಲು ಒಡಪುಗಳನ್ನು ಸಂಗ್ರಹಿಸಿದವರು ಯಾರು ಇದ್ದಂತೆ ಕಾಣುವುದಿಲ್ಲ. ಆಯಾಕಾಲದಲ್ಲಿ ಬಳಕೆಯಲ್ಲಿ ಬಂದ ಒಡಪುಗಳನ್ನು ಬರೆದಿಡುವ ಸಂಪ್ರದಾಯವಿಲ್ಲದುದರಿಂದ ಸೊಗಸಾದ ಎಷ್ಟೋ ಒಡಪುಗಳಿಗೆ ನಾವು ವರವಾಗಿದ್ದೇವೆ" (1940:16) ಎಂದು ಹೇಳಿಕೊಳ್ಳಲಾಗಿದೆ.

'ಮಕ್ಕಳ ಒಡಪುಗಳು'(1940) ಕೃತಿಯಲ್ಲಿ 40 ಪುಟಗಳ ಕೃತಿ. ಅರ್ಧ ಭಾಗಕ್ಕೆ ಮುನ್ನುಡಿಯೂ ಇನ್ನರ್ಧಕ್ಕೆ 215 ಒಡಪುಗಳೂ ಇವೆ. ಎಲ್ಲಾ ಒಡಪುಗಳನ್ನು ಸಂಗ್ರಹಿಸಿದ ಸಂಪಾದಿಸಿದ, ಆಯ್ದ ಬಗೆಗಿನ ವಿವರಗಳಿವೆ. ಕನ್ನಡ ಒಡಪುಗಳಿಗೆ ಮೊದಲ ಸೇರ್ಪಡೆ. ಒಡಪು ಹಾಗೂ ಒಗಟುಗಳ ಬಗೆಗೆ ಮುನ್ನುಡಿಯಲ್ಲಿ ಪ್ರತ್ಯೇಕವಾದ ಚರ್ಚೆಯಿದ್ದು, 'ಒಗಟು' ಪದವೇ ಹೆಚ್ಚು ಪ್ರಚಲಿತದಲ್ಲಿದೆ. ಸಂಗ್ರಹವನ್ನು ಮುಖ್ಯವಾಗಿ ವಿದ್ಯಾರ್ಥಿ–ವಿದ್ಯಾರ್ಥಿನಿಯವರನ್ನು ಗಮನದಲ್ಲಿರಿಸಿಕೊಂಡು ತಯಾರಿಸಲಾಗಿದೆ. ಶಂ.ಬಾ. ಜೋಶಿಯವರು ಮಕ್ಕಳ ಮನಸ್ಸು, ವಯಸ್ಸು ಹಾಗೂ ಒಡಪುಗಳಲ್ಲಿ ಮಕ್ಕಳಿಗಿರುವ ಆಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಕೃತಿಯ ಮುನ್ನುಡಿಯಲ್ಲಿ ವಿವರಣೆಯಿದೆ.

1945ರಲ್ಲಿ ಸೀತಾಬಾಯಿ ನಾರಾಯಣರಾವ್ ದೇಶಪಾಂಡೆಯವರ 'ಹೊಸ ಮಾದರಿಯ ಪ್ರಚಾರದಲ್ಲಿದ್ದ ದಂಪತಿಗಳು ಹೇಳುವ ಒಡಪು'ಗಳ ಸಂಗ್ರಹ ಪ್ರಕಟವಾಯಿತು.

ಭೌತಿಕ ಜಾನಪದ

ಮೊದಲ ಘಟ್ಟದಲ್ಲಿ ಸಂಗ್ರಹಗಳು, ಅಧ್ಯಯನಗಳು ಪ್ರಕಟವಾದದ್ದೇ ಕಡಿಮೆ. ಜನಪದ ಔಷಧ, ಅಡುಗೆ, ವಾಸ್ತುಶಿಲ್ಪ ಮುಂತಾದ ಅಧ್ಯಯನ ಶಿಸ್ತನ್ನು ಒಳಗೊಳ್ಳುವ ಜನಪದ ಔಷಧಗಳ ಬಗ್ಗೆ ಮೂರು ಕೃತಿಗಳ ಉಲ್ಲೇಖಗಳಿವೆ. 1930ರಲ್ಲಿ **ಬಾ.ಶಿವರಾವ್** ಸಂಗ್ರಹಿಸಿರುವ **'ರೋಗಚಿಕಿತ್ತೆಯು'** ಹಾಗೂ 1943ರಲ್ಲಿ **ವೆಂಕಟರಾವ್ ಕೋರಡ್ಕಲ** ಪ್ರಕಟಿಸಿರುವ 'ಮನೆಮದ್ದು' ಇವರೆಡು ಕೃತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

1917ರಲ್ಲಿ ಎಂ.ಮುತ್ತೂರ ಬ್ರದರ್ಸ್ ಬರೆದಿರುವ 'ಹಳ್ಳಿಯ ವೈದ್ಯ' ಬೆಳಗಾವಿ ಪರಿಸರದಲ್ಲಿ ಪ್ರಚಲಿತದಲ್ಲಿದ್ದ ಕೆಲವು ಜನಪ್ರಿಯ ಔಷಧೋಪಚಾರಗಳ ವಿವರಣೆಯ ಕೃತಿ.

1930ರಲ್ಲಿ ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ ಹಾಗೂ ಬುಕ್ ಡಿಪೋದಲ್ಲಿ **'ರೋಗಚಿಕಿತ್ಸೆಯು'** (ಟ್ರೀಟ್‌ಮೆಂಟ್ ಆಫ್ ಡಿಸೀಸಸ್) ಕೃತಿ ಪ್ರಕಟವಾಗಿದೆ. "ಇದರಲ್ಲಿ ಅನುಭವಕ್ಕೆ ಬಂದ ಕೆಲವು ಔಷಧಗಳ ಪ್ರಯೋಗ ಹಾಗೂ ಆರೋಗ್ಯ ರಕ್ಷಣೆ, ಪಥ್ಯ, ರೋಗಪರೀಕ್ಷೆ ಮುಂತಾದ ವಿಷಯಗಳನ್ನು ಕುರಿತು ಕೆಲವು ಪ್ರಾರಂಭ ಸೂಚನೆಗಳು ಸಹ ಅವೆ."

ಗ್ರಂಥದ ಆರಂಭದಲ್ಲಿ ಭಾ.ಶಿವರಾವ್ (ಖಾಸಗಿ ವೈದ್ಯಾಭ್ಯಾಸಿ) ಬರೆದ ಪ್ರಸ್ತಾವನೆಯಿದೆ. "1876–1888ನೇ ಇಸವಿಗಳ ನಮ್ಮ ಕನ್ನಡ ಪಂಚಾಂಗಗಳಲ್ಲಿ ಹದಿಮೂರು ವರ್ಷಗಳವರೆಗೆ ಪ್ರಕಟಿಸೋಣಾದ ಶರೀರ ಚಿಕಿತ್ಸೆ ಎಂಬ ವೈದ್ಯ ಸಂಗ್ರಹವು ವಾಚಕರಿಗೆ ಬಹಳ ಪ್ರಯೋಜನಕರವಾಗಿ ತೋರಿದ್ದರಿಂದ ಆ ಕಾಲದ ಪಂಚಾಂಗಗಳು ಹೆಚ್ಚಾಗಿ ಮಾರಾಟವಾಗುವುದಲ್ಲದೆ ಉಳಿದ ಪ್ರತಿಗಳಿಂದ, ಸಂಗ್ರಹವನ್ನು ಮಾತ್ರ ಪ್ರತ್ಯೇಕಿಸಿ ಕಟ್ಟಿಸೋಣಾದ ಪ್ರತಿಗಳು ಸಹ ವಿಕ್ರಯವಾಗಿ ಖರ್ಚಾದವು. ಇನ್ನೂ ಪ್ರತಿಗಳಿಗೆ ಗಿರಾಕಿಗಳು ಬಹಳ ಬರುವುದರಿಂದ, ಪಂಚಾಂಗಕ್ಕಾಗಿ ಬರೆದ ಆ ಸಂಗ್ರಹವನ್ನೆಲ್ಲ ಪುನಃ ಪರಿಶೋಧಿಸಿ, ತಿದ್ದಿ, ಬೇರೆ ಅನೇಕ ಹೊಸ ಸಂಗತಿಗಳನ್ನು ಸೇರಿಸಿ, ಅಡಕವಾದ ಪುಸ್ತಕ ರೂಪವಾಗಿ ಪ್ರಕಟಿಸಿದೇವೆ. ಸಂಗ್ರಹವೆಲ್ಲವೂ ಬರೆದವನ ಸ್ವಂತ ಅಭಿಪ್ರಾಯವಾಗಲಿ ಅಲ್ಲ. ಇದು ಪ್ರಶಸ್ತ ವೈದ್ಯ ಪಂಡಿತರ ಇಂಗ್ಲಿಷ್ ಗ್ರಂಥಗಳಿಂದ ಹೆಕ್ಕಿ ತೆಗೆದು ಭಾಷಾಂತರಿಸಿ ಅನುಕ್ರಮಿಸಿ ಕೊಟ್ಟದಷ್ಟೆ.

ಪುಸ್ತಕದಲ್ಲಿ ಹೇಳಿರುವ ಚಿಕಿತ್ಸೆಗಳಲ್ಲಿ ಆವರಣಗಳಲ್ಲಿರುವ ಅಂಕೆಗಳಿಂದ ಸೂಚಿಸೋಣಾದ ಬೇರೆ ಬೇರೆ ಔಷಧಗಳನ್ನು ಅಲ್ಲಲ್ಲಿ ಅಂಕೆಗಳ ಕ್ರಮವಾಗಿ ಕೊಟ್ಟಿರುತ್ತೇವೆ. ಹಾಗೂ ಬೇಕಾದ ರೋಗವಾಗಲಿ ಔಷಧವಾಗಲಿ ತಟ್ಟನೆ ಹುಡುಕಿ ತೆಗೆಯುವ ಹಾಗೆ ಅವೆರಡರ ಅಕಾರಾದಿ ಪಟ್ಟಿಗಳನ್ನು ಸಹಕೊಟ್ಟಿರುತ್ತೇವೆ.

ಆರೋಗ್ಯ ರಕ್ಷಣೆ ಸಂಬಂಧದ ಸೂಚನೆಗಳು ಪಂಡಿತ ಆಲ್ಬ್ರೌರ್ನ್ ದೊರೆಯ ವೈದ್ಯ ಪುಸ್ತಕದಿಂದಲೂ, ರೋಗಪರೀಕ್ಷೆಯ ಹಾಗೂ ಪ್ರತಿ ರೋಗಕ್ಕೆ ಕೊಟ್ಟ ರೋಗಲಕ್ಷಣದ ವಿವರವು ಪಂಡಿತ ಲೋರಿ ದೊರೆಯ ವೈದ್ಯ ಪುಸ್ತಕದಿಂದಲೂ, ಆರೋಗ್ಯ ಪಿಳ್ಳೆಯರ 'ಆರೋಗ್ಯ ಸೂತ್ರಂ' ಎಂಬ ಪುಸ್ತಕದಿಂದಲೂ ಪಥ್ಯ ಊರೌಷಧಗಳ ಪ್ರಯೋಗ ಮುಂತಾದ ವಿವರವು ಪಂಡಿತ ವೇರಿಂಗ್ ದೊರೆಯ 'ಅಂಗಡೀ ಔಷಧಗಳು' ಎಂಬ ಪುಸ್ತಕದಿಂದಲೂ ಎತ್ತಿತೆಗೆದು ಭಾಷಾಂತರಿಸಿರುತ್ತೇವೆ" (1930:ಪ್ರಸ್ತಾವನೆ)

ಗ್ರಂಥಕ್ಕೆ ಅನುಕ್ರಮಣಿಕೆಯನ್ನು ಕೊಡಲಾಗಿದೆ. ಪೀಠಿಕೆ, ಶರೀರಾರೋಗ್ಯಕ್ಕೆ ಅಗತ್ಯವೇನು? ಔಷಧಗಳನ್ನು ತಯಾರಿಸುವ ವಿಧ, ಔಷಧಗಳನ್ನು ಸೇವಿಸುವ ಕ್ರಮ,

ಔಷಧಗಳ ಪರಿಮಾಣ, ಪಥ್ಯದ ವಿವರ, ರೋಗ ಪರೀಕ್ಷೆ, ಜಿಗಳೆಗಳ ಉಪಯೋಗ, ರೋಗ ಚಿಕಿತ್ಸೆಯಲ್ಲಿ ಪ್ರಯೋಗವಾಗುವ ಪಟ್ಟಿ ಹೀಗೆ ಒಟ್ಟು 11 ಭಾಗಗಳಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಗ್ರಂಥದ ಒಳಗಡೆ ಬಳಸಲಾದ ಸಂಕೇತ ಅಕ್ಷರಗಳ ಸೂಚಿಯನ್ನು ಹಾಗೂ ಒಟ್ಟು ಔಷಧಗಳ ಅಂಕೆಗಳ ವಿವರಗಳನ್ನು ನೀಡಲಾಗಿದೆ.

ಸಂಗ್ರಹಕರ ಅಭಿಪ್ರಾಯದಂತೆ, "ಪುಸ್ತಕದಲ್ಲಿ ಕೊಟ್ಟಿರುವ ಔಷಧಗಳಿಗೆ 21ನೇ ಪುಟದಲ್ಲಿ ಹಿಡಿದು 222ನೇ ಪುಟದಲ್ಲಿ 305ರ ವರೆಗೆ ಅಂಕೆಗಳು ಕೊಟ್ಟಿರುತ್ತೇವೆ. ಆವರಣದಲ್ಲಿರುವ ಅಂಕೆಗಳು ಇವುಗಳನ್ನೇ ಸೂಚಿಸುತ್ತವೆ. ಆದರೆ ಅಲ್ಲಲ್ಲಿ ಸೇರಿಸಿದ ಕೆಲವು ಹೊಸ ಔಷಧಗಳಿಗೆ ಕ್ರಮದ ಪ್ರಕಾರ ಹೊಸ ಅಂಕೆಗಳನ್ನು ಕೊಡುವುದಕ್ಕೆ ಬದಲಾಗಿ ಮುಂನ ಅಂಕೆಗಳಿಗೆ ಎ.ಬಿ.ಸಿ. ಎಂಬ ಆಕ್ಷರಗಳನ್ನು ಹಚ್ಚಿ ಅವುಗಳನ್ನು ವಿಂಗಡಿದಿಸಿದ ಕಾರಣ ಅವುಗಳ ಸಹಿತ ಒಟ್ಟು ಔಷಧಿಗಳ ಸಂಖ್ಯೆಯು 368 ಎಂದೆಣಿಸತಕ್ಕದ್ದು."(1930:ಪ್ರಸ್ತಾವನೆ)

ಗ್ರಂಥದ ಪೀಠಿಕೆ ಭಾಗದಲ್ಲಿ ರೋಗ ಚಿಕಿತ್ಸೆಯ ಬಗ್ಗೆ ಹೇಳುತ್ತಾ, "ರೋಗಗಳು ಹೆಚ್ಚಾಗಿ ಶರೀರಾರೋಗ್ಯವನ್ನು ಲಕ್ಷಿಸದೆ ನಡೆಯುವುದರಿಂದ ಉಂಟಾಗುತ್ತವೆ. ಒಂದು ರೋಗಕ್ಕೆ ಹೇತುವು ಅನೇಕ ಸಾರಿ ಬಹು ಚಿಕ್ಕದ್ದೇ ಆಗಿರುವುದು. ಆದ್ದರಿಂದ ಚಿಕ್ಕದಿರುವಾಗಲೇ ಅದರ ಅಂಕುರವನ್ನು ಕಿತ್ತು ತೆಗೆದರೆ, ಅಥವಾ ಅಂಥಾ ಅಂಕುರ ಹುಟ್ಟುವ ಮುಂಚೆಯೇ ಅದು ಬಾರದ ಹಾಗೆ ಮುಂಜಾಗ್ರತೆ ತೆಗೆದುಕೊಂಡರೆ, ಎಷ್ಟೋ ಔಷಧಗಳನ್ನು ಮಾಡದುಳಿಸಬಹುದು. ಏವಂಚ, ಏನೂ ಸುಳುಹು ಇಲ್ಲದೆ ಕಾಲವಶವಾಗಿಬರುವ ರೋಗಗಳಿಗೆ ಮನುಷ್ಯ ಯತ್ನವಿಲ್ಲ. ಆದರೂ ದೇವರು, ತನ್ನ ಚಿತ್ರವಿದ್ದ ಮಟ್ಟಿಗೆ, ನಮ್ಮ ಶರೀರದ ಆರೋಗ್ಯವನ್ನು ಕಾಪಾಡಿಕೊಳ್ಳುವ ಹಾಗೆಯೂ, ರೋಗಾದಿಗಳಿಂದ ಅದಕ್ಕುಂಟಾಗುವ ಅಪಾಯವನ್ನು ತಕ್ಕಷ್ಟು ನಿವಾರಿಸುವ ಹಾಗೆಯೂ ಉಪಾಯ ತೋರಿಸಿಕೊಂಡುತ್ತಿದ್ದಾನೆ.

ಶರೀರಾರೋಗ್ಯವೆಂಬುದು ಸಹಜವಾದ್ದೂ, ಸ್ವಾಭಾವಿಕವಾದ್ದೂ ಆಗಿರಲಾಗಿ ಆರೋಹವು ಅಸಹಜವೂ ಅಸ್ವಾಭಾವಿಕವೂ ಆಗಿರುವದು. ಆದುದರಿಂದ ನಮ್ಮ ಅನ್ನಪಾನಾದಿಗಳಲ್ಲಿ ಸಹಜಕವಾಗಿರುವುದು ಆರೋಗ್ಯಕರವೇ, ಇದಕ್ಕೆ ಪ್ರತಿಕೂಲವಾಗಿ ನಡೆಯುವುದು ಅನಾರೋಗ್ಯಕರವೇ. ಆದ ಪ್ರಯುಕ್ತ ಸ್ವಾಭಾವಿಕ ಶರೀರ ಪ್ರಕೃತಿಯು, ತನ್ನ ಶಕ್ತಿ ಇರುವ ಮಟ್ಟಿಗೆ, ರೋಗಗಳಿಗೆ ಆಸ್ಪದ ಕೊಡುವುದಿಲ್ಲ; ಆದ ಪ್ರಯುಕ್ತ ಸ್ವಾಭಾವಿಕ ಶರೀರ ಪ್ರಕೃತಿಯು, ತನ್ನ ಶಕ್ತಿ ಇರುವ ಮಟ್ಟಿಗೆ ರೋಗಗಳಿಗೆ ಆಸ್ಪದ ಕೊಡುವುದಿಲ್ಲ; ಅದರ ಶಕ್ತಿ ಕುಂದಿದ್ದಲ್ಲಿ ಮಾತ್ರ ರೋಗವು ಪ್ರವೇಶವಾಗಿ

ಬೆಳೆಯುವುದು"(1930:1) ಶರೀರಾರೋಗ್ಯದ ಕುರಿತಂತೆ ಪೂರ್ವಭಾವಿ ಎಚ್ಚರಿಕೆಯನ್ನು ಕೊಡಲಾಗಿದೆ.

ಶರೀರಾರೋಗ್ಯಕ್ಕೆ ಅಗತ್ಯವೇನು? ಎಂಬ ಭಾಗದಲ್ಲಿ ಶರೀರಾರೋಗ್ಯಕ್ಕೆ ಬೇಕಾಗುವ ಪ್ರಾಕೃತಿಕ ಅವಶ್ಯಕತೆಗಳನ್ನು ಹಾಗೂ ಆಹಾರ, ಸ್ಥಾನಪಾನಾದಿಗಳ ಪಥ್ಯಗಳ ಮೂಲಕ ನಿವಾರಣಾ ವಿವರಗಳಿವೆ. ಬೆಳಕೂ ಕತ್ತಲೆಯೂ ಶೀತೋಷ್ಣಗಳೂ ಹವೆ-ವಾಯುಗುಣ, ಕಾಯಕಷ್ಟ ವಿಹಾರ, ಉಡಿಗೆ-ತೊಡಿಗೆ, ಸ್ನಾನ, ನಿದ್ರೆ, ಆಹಾರ ಪಥ್ಯ, ಮುಂತಾಗಿ ಶರೀರದ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಮುಂಜಾಗ್ರತಾ ವಿವರವಿದೆ. ಒಂದು ನಿರ್ದಿಷ್ಟ ಪ್ರಾಯದಲ್ಲಿ ಯಾವ ಹೊತ್ತು ಆಹಾರವನ್ನು ಸೇವಿಸಬೇಕು, ಆಹಾರ ಅತಿಯಾಗಿ ಸೇವಿಸಿದರೆ ಯಾಕೆ ಆರೋಗ್ಯಕ್ಕೆ ಅಪಾಯ, ಯಾವ ಸಂದರ್ಭದಲ್ಲಿ ಆಹಾರ ತೆಗೆದುಕೊಳ್ಳಬೇಕು-ಹೀಗೆ ಎಂಟು ರೀತಿಯಲ್ಲಿ ಮುಂಜಾಗ್ರತೆಯನ್ನು ಸೂಚಿಸುವ ಮಾಹಿತಿಯಿದೆ. ಔಷಧಗಳನ್ನು ತಯಾರಿಸುವ ವಿಧ ಭಾಗದಲ್ಲಿ ಔಷಧಗಳನ್ನು ತಯಾರಿಸುವ ಮೊದಲು ಬೇಕಾಗುವ ಕಚ್ಚಾ ವಸ್ತುಗಳ ಜೋಡಣೆಯನ್ನು, ನಂತರ ಆಯ್ಕೆ ಮಾಡಿ ಜೋಡಿಸಲಾದ ಔಷಧಿ ಮೂಲಗಳನ್ನು ತಯಾರು ಮಾಡುವ ಪಟ್ಟಿಯಿದೆ. ಕಲ್ಕ (ಇನ್‌ಫ್ಯೂಶನ್), ಕಷಾಯ (ಡಿಕಾಕ್ಷನ್), ಧೃತಿ (ಟಿನೆಚ್ಯೂ್ಯರೆ), ಪೋಲ್ಟಿಸು (ಒತ್ತಡ), ಪೌಲ್ಟಿಕ್‌ಸೇಕ-ನೀರುಗಾವು (ಫೊಮೆನ್‌ಟೇಶನ್) ಮೊದಲಾದ ಎಂಟು ವಿಧಗಳಲ್ಲಿ ಔಷಧ ತಯಾರಿಯ ವಿಧಾನವನ್ನು ನೀಡಲಾಗಿದೆ.

ಔಷಧಗಳನ್ನು ಹೇಗೆ ಸೇವಿಸತಕ್ಕದ್ದು ಎಂಬ ಬಗೆಗೆ ವಿವರವಿದೆ. "ಸ್ತ್ರೀಯರು ಸೇವಿಸುವ ಔಷಧಗಳು ಸಾಧಾರಣವಾಗಿ ತರದವುಗಳಾಗಿರತಕ್ಕದ್ದು. ಅದಲ್ಲದೆ ಸ್ತ್ರೀಯರು ಸೇವಿಸುವ ಪ್ರಮಾಣವು ಪುರುಷರು ಸೇವಿಸುವ ಪ್ರಮಾಣಕ್ಕಿಂತ ಕಡಿಮೆ ಇರಬೇಕು; ಎಷ್ಟೆಂದರೆ ಸುಮಾರು ಮೂರನೇ ಒಂದು ಅಂಶ ಎಂತ ಹೇಳಲುಚಿತವಾದೀತು. ಹಾಗೂ ಕಫವುಳ್ಳ ದೇಹಪ್ರಕೃತಿಯವರು ಜಡರಕ್ತಬಾವದವರಿಗಿಂತ ಉತ್ತೇಜಕ ಮಧ್ಯವನ್ನಾಗಲಿ ವಿರೇಚನ ಔಷಧಗಳನ್ನಾಗಲಿ ದಕ್ಕಿಸಿಕೊಳ್ಳಲು ಹೆಚ್ಚು ಶಕ್ತರಾದ್ದರಿಂದ ಅಂಥವುಗಳನ್ನು ಅವರಿಗೆ ಕೊಡುವಷ್ಟು ಇವರಿಗೆ (ಅಂದರೆ ಜಡರಕ್ತದವರಿಗೆ) ಕೊಡಲಿಕ್ಕಾಗದು. ಅಮಲು ಹತ್ತಿಸುವ ಔಷಧಗಳು ಅಮಲಿನ ವ್ಯಸನವಿಲ್ಲದವರಿಗೆ ತಾಗುವಷ್ಟು ಚುರುಕಾಗಿ ಆ ವ್ಯಸನ ಇದ್ದವರಿಗೆ ತಾಗಲಿಕ್ಕಿಲ್ಲವಾದ್ದರಿಂದ ಇವರು ಅಂಥ ಔಷಧಗಳನ್ನು ಅವರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ತೆಗೆಯಬೇಕು. ಎಲ್ಲಾ ಔಷಧಗಳು ಎಲ್ಲರ ದೇಹ ಪ್ರಕೃತಿಗೆ ಏಕ ಪ್ರಕಾರವಾಗಿ ಸೇರದ ಕಾರಣ ಯಾವದೊಂದು ಔಷಧ ಯಾವದೊಂದು ರೋಗಕ್ಕೆ ತಕ್ಕದಾಗಿದ್ದರೂ, ಅದು ಸರಿಯಾಗಿ ಹಿಡಿಯದ ಪಕ್ಷದಲ್ಲಿ ಒತ್ತಾಯದಿಂದ ಕೊಡಬಾರದು.

ತೆಳುವಾದ ಔಷಧವು ಗಟ್ಟಿಯಾದ್ದಕ್ಕಿಂತಲೂ, ಚೂರ್ಣಗಳು ಮಾತ್ರೆಗಳಿಗಿಂತಲೂ ಬೇಗ ಸೇರಿ ಫಲಸಿದ್ಧಿಕೊಡುವುವು. ಔಷಧಗಳನ್ನು ಕೊಡುವಾಗ ಅದರ ಪರಿಮಾಣ ಮಾತ್ರವಲ್ಲ, ಅದರ ಅಂತರವನ್ನು ಕುರಿತು ಸಹ ಕ್ಲುಪ್ತ ಮಾಡಬೇಕು. ಮೊದಲನೇ ಸಾರಿಕೊಟ್ಟು ಅದರ ವ್ಯಾಪನ ತೀರಿಹೋಗುವ ಮುಂಚೆ ಎರಡನೇ ಸಾರಿಯದು ಮುಟ್ಟುವ ಹಾಗೆ ತನ್ಮಧ್ಯದ ಕಾಲಪ್ರಮಾಣ ನಿಶ್ಚಯಿಸಬೇಕು" (1930:10) ಎಂದು ಸೂಚಿಸುತ್ತಾರೆ.

ಔಷಧಗಳ ಪರಿಮಾಣ ಭಾಗದಲ್ಲಿ ರೋಗಿಗೆ ಔಷಧಗಳನ್ನು ಕೊಡುವಾಗ ಆತನ ವಯಸ್ಸು ಹಾಗೂ ಬೇಕಾದ ಔಷಧ ಅಂಶಗಳು ಹಾಗೂ ಇಂತಿಷ್ಟೋ ತೂಕ, ಅಳತೆಯಲ್ಲಿ ಕೊಡಬೇಕು ಎಂಬ ಪ್ರಮಾಣವನ್ನು ಸೂಚಿಸುವ ಪಟ್ಟಿಯನ್ನು ಕೊಡಲಾಗಿದೆ. ಎರಡೂ ಪಟ್ಟಿಯಲ್ಲಿಯೂ ಔಷಧಗಳನ್ನು ಕೊಡುವ ಪ್ರಮಾಣವು ವಯಸ್ಸಿಗೆ ಅನ್ವಯಿಸಿದಂತಿದೆ.

ಪಥ್ಯದ ವಿವರ ಎಂಬ ಭಾಗದಲ್ಲಿ ರೋಗಿಷ್ಟರಿಗೆ ತಕ್ಕದಾದ ಆಹಾರವನ್ನು ಕುರಿತು ಸ್ಪಷ್ಟವಾದ ಸುಚನೆಗಳನ್ನು ಕೊಡಲಾಗಿದೆ. ಮುಖ್ಯವಾಗಿ ಪ್ರತೀ ರೋಗಕ್ಕೂ ತಕ್ಕುದಾದ ಉಪಚಾರಕ್ರಮದ ಅಗತ್ಯವನ್ನು ಕೊಡಲಾಗಿದೆ. ನಿರ್ದಿಷ್ಟ ಪ್ರಮಾಣದಲ್ಲಿ ಪ್ರಾಯಕ್ಕನುಸಾರವಾಗಿ ತೆಗೆದುಕೊಳ್ಳುವ ಆಹಾರಕ್ಕೆ ಅದು ನಿರ್ದಿಷ್ಟ ಕಾಯಿಲೆಗೆ, ಆಹಾರವನ್ನು ಅವಲಂಬಿಸಿ ತಯಾರಾಗುತ್ತದೆ. ಆಹಾರದ ಸೇವನೆಯಲ್ಲಿ ಮಾಡುವ ಹತೋಟಿಯು ಉತ್ತಮ ಆರೋಗ್ಯಕ್ಕೆ ಹಾಗೂ ರೋಗ ಬೇಗ ನಿವಾರಣೆಯಾಗುವುದಕ್ಕೆ ಸಹಕಾರಿಯಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. 9 ರೀತಿಯ ಪಥ್ಯಕ್ರಮಗಳಿವೆ. ಎ. (ಮಟನ್ ಬಾತ್) ಕುರಿ ಮಾಂಸದ ಸಾರು. ಬಿ. (ಚಿಕನ್ ಬಾತ್) ಕೋಳೀ ಮಾಂಸದ ಸಾರು, ಸಿ. (ರೈಸ್ ಮಿಲ್ಕ್) ಹಾಲುಗಂಹಿ, ಡಿ. (ಎರೋರೂಟ್) ಕೂವೆಹಿಟ್ಟಿನ ಪಾಕ, ಇ. (ರೊಲೊಂಗ್ ಗಂ)ಗೋದೀ ಸಜ್ಜಿಗೆ, ಎಫ್. (ಸಾಗೊ) ಸಾಗು–ಸಬ್ಬಕ್ಕಿ, ಜಿ.(ಸ್ಟ್ರೆನ್ತೆನಿಂಗ್ ಜೆಲ್ಲಿ) ತ್ರಾಣಕಾರದ ಲೇಹ್ಯ– 9 ಪಥ್ಯಗಳಿಗೂ ಬಳಸುವ ಪದಾರ್ಥಗಳ ವಿವರಗಳಿವೆ.

'ರೋಗಪರೀಕ್ಷೆ' ಎಂಬ ಭಾಗದಲ್ಲಿ ರೋಗಿಯೊಬ್ಬನನ್ನು ವೈದ್ಯ ಪ್ರಥಮ ಹಂತದಲ್ಲಿ ರೋಗತಪಾಸನೆ ಮಾಡುವ ಕ್ರಮವಿದೆ. ಔಷದಿ ಕೊಡುವ ಮೊದಲು ರೀತಿಯಲ್ಲು ತಪಾಸನೆ ಮಾಡುವುದು, ಆನಂತರದಲ್ಲಿ ಕಾಯಿಲೆಯನ್ನು ಸ್ಪಷ್ಟಪಡಿಸಿಕೊಳ್ಳುವುದು, ಆ ಮೂಲಕ ಔಷಧಿ ಕೊಡುವುದು ಸಾಮಾನ್ಯ ವೈದ್ಯನ ಸೇವಾನಿಯಮ. ಇಲ್ಲೂ ಅದನ್ನೇ ಪಟ್ಟಿಮಾಡಲಾಗಿದೆ. 1. ನಾಡಿ ಪರೀಕ್ಷೆ, 2. ಶ್ವಾಸೋಚ್ಛ್ವಾಸನವು, 3. ನಾಲಿಗೆಯ ಸಮತೋಲನವನ್ನು ಗುರುತಿಸುವುದು (ನಾಲಿಗೆ ಸಹ ರೋಗಸ್ಥಿತಿ ಸೂಚಕವಾಗಿದೆ) 4. ನೋವು (ಮೈ ಕೈ ಒತ್ತುವಿಕೆಯಿಂದ ನೋವು ಕಂಡು ಬಂದಾಗ) 5. ಶರೀರದ

ಸಮತೋಲನ ಸ್ಥಿತಿ (ಮೈ ಬಿಸಿ ಇದೆಯೇ, ಶೀತ ಉಷ್ಣವಿದೆಯೇ ಮೊದಲಾದವನ್ನು ಪರೀಕ್ಷಿಸುವುದು) ಹಾಗೂ 6. ಮಲಮೂತ್ರ ವಿಸರ್ಜನೆಯ ಪರೀಕ್ಷೆ (ಅಜೀರ್ಣದಿಂದಾಗಿ ಆಗುವ ಅಸಮತೋಲನವು ಬಾಯಿರುಚಿಯನ್ನು ಕೆಡಿಸುವ, ಅಶಕ್ತಿಯನ್ನು ಹೊಂದುವ ಲಕ್ಷಣ ಕಂಡು ಬರುತ್ತದೆ) – ಬೇರೆಬೇರೆ ಕಾಯಿಲೆಗಳಿಗೆ ಪರೀಕ್ಷೆ ನಡೆಸಿ ವೈದ್ಯನು ಔಷಧಿ ಕೊಡುತ್ತಾನೆ.

'ಜಿಗಳೆಗಳ ಉಪಯೋಗ' ಭಾಗದಲ್ಲಿ ಶರೀರ ಚಿಕಿತ್ಸೆಯಲ್ಲಿ ಜಿಗಳೆಗಳ ಉಪಯೋಗವನ್ನು ವಿವರಿಸಲಾಗಿದೆ.[39] ಜಿಗಳೆಗಳ ಕುರಿತಂತೆ ಸಾಮಾನ್ಯ ಸೂಚನೆಯಿದೆ. "ಕಚ್ಚಿಸಲಿಕ್ಕಾಗುವ ಜಿಗಳೆಗಳು ಕರ್ರಗಾಗಿ, ಬೆನ್ನಿನಲ್ಲಿ ಅರಸಿನ ಕಲೆಗಳು, ಉಭಯ ಕಡೆಗಳಲ್ಲಿ ಅರಸಿನ ರೇಖೆಗಳುಳ್ಳದ್ದಾಗಿರಬೇಕು. ಅವುಗಳಲ್ಲಿ ಅನೇಕ ಪರಿಮಾಣಗಳಿರುವುವು. ರಕ್ತ ಹೀರುವ ಶಕ್ತಿಯು ಅದರ ಪರಿಮಾಣಕ್ಕೆ ಸರಿಯಾಗಿ ಹೆಚ್ಚು ಕಡಿಮೆ ಇರುವದು. ಜಿಗಳೆಗಳಲ್ಲಿ ಚಿಕ್ಕದು ಅದರ ತೂಕದ 2.5 ಪಾಲಷ್ಟು, ಅದಕ್ಕಿಂತ ಸ್ವಲ್ಪ ದೊಡ್ಡದು 4 ಪಾಲಷ್ಟು, ಇನ್ನೂ ದೊಡ್ಡದು 5.5 ಪಾಲಷ್ಟು, ತೀರಾ ದೊಡ್ಡದು 6 ಪಾಲಷ್ಟಾದರೂ ಹೆಚ್ಚು ರಕ್ತ ಹೀರುವುದೆಂದು ಕಂಡುಬಂದಿದೆ."(1930:19–ಪೀಠಿಕೆ) ಉದಾ: 1. "ಕಠಿಣವಾದ ಆ ಮಾತಿನ ಸಾರದಲ್ಲಿ ಪ್ರಾರಂಭಕ್ಕೆ (6ರಿಂದ 9ರ ವರೆಗೆ) ಜಿಗಳೆಗಳನ್ನು ಗುದದ್ವಾರದ ಅಂಚಿನಲ್ಲಿ ಕಚ್ಚಿಸಬಹುದು. ಇದರಿಂದ ಮಲವಿಸರ್ಜನೆಯಲ್ಲಿ ಆಗುವ ನೋವು ತಿಣುಕುವಿಕೆಯೂ ಗುಣವಾಗುವವು."(1930:68(89ನೇ ಅರಿಕೆ) ಉದಾ: 2. "ಮೈಯಲ್ಲಿ ಎಲ್ಲಾದರೂ ಉರಿಬೇನೆ ಇರುವಲ್ಲಿ ಆಗಲಿ, ಬೀಗು ಬಾವು ಸುರುವಾಗುವಲ್ಲಿ ಆಗಲಿ, ಪೆಟ್ಟು ತಾಗಿದಲ್ಲಿ ಆಗಲಿ, ಉಳುಕಿ ಇಲ್ಲವೆ ಜಜ್ಜಿ ಹೋದಲ್ಲಿ ಆಗಲಿ, ನೋವು ಉರುತವೂ ಇದ್ದರೆ, ಅಲ್ಲಿ 6 ಇಲ್ಲವೆ 8 ಜಿಗಳೆಗಳನ್ನು ಕಚ್ಚಿಸಿ ಆಮೇಲೆ ಬಿಸಿನೀರಿನ ಸೇಕ ಕೊಟ್ಟರೆ, ನೋವು ಶಮನವಾಗುವುದಲ್ಲದೆ ಉರಿ ಸಹ ನಿಲ್ಲುವದು. ಅಂದರೆ ಆ ಜಾಗದಲ್ಲಿ ರಕ್ತಕಟ್ಟದ ಹಾಗೆ ಮಾಡುವದು." (1930: ಔಷಧಿಗಳ ಅಂಕೆ ಕ್ರಮ 77–112)

"ಜಿಗಳೆಗಳನ್ನು ಒಂದೇ ಸಾರಿ ಕಚ್ಚಿಸುವುದಾದರೆ, ಅವುಗಳನ್ನು ಒಂದು ವಾಯ್ನಗ್ಲಾಸಿನಲ್ಲಿ ಹಾಕಿ, ಅವು ಕಚ್ಚುವವರೆಗೆ ಆ ಗ್ಲಾಸನ್ನು ಮೈಗೆ ಹಚ್ಚಿ ಹಿಡಿಯುವುದು. ಕಚ್ಚಿಸತಕ್ಕ ಜಾಗವನ್ನು ಮೊದಲಗಿ ಸಾಬೂನು ಹಾಕಿ ನೀರಿನಿಂದ ತೊಳೆದು ಶುಚಿಮಾಡಿ, ರೋಮವೇನಾದರೂ ಇದ್ದರೆ ಉದುರಿಸಿ ಸಾಫ಼ ಮಾಡಬೇಕು. ಮುಂಚೆ ಯಾವಗಲಾದರೂ ಮುಲಾಮು ಹಚ್ಚಿದ್ದಿದ್ದರೆ, ತೊಳೆಯುವುದು ವಿಶೇಷ ಅಗತ್ಯ. ಗಳೆಯು ಹಸಿದು ಇದ್ದರೆ ಬೇಗ ಕಚ್ಚುವುದು. ಇಲ್ಲವಾದರೆ ಕಚ್ಚಿಸುವುದು ಪ್ರಯಾಸವಾದ್ದರಿಂದ ಮುಂದೆ ಹೇಳಿರುವ ಯಾವುದಾದರೂ ಉಪಾಯ ಮಾಡಬಹುದು. 1. ಜಿಗಳೆಗಳನ್ನು ನೀರಿನಿಂದ ತೆಗೆದು, ಒಣಗಿದ ಬೆಚ್ಚಗಾದ ವಸ್ತ್ರದ ಮೇಲೆ 10 ನಿಮಿಷಗಳವರೆಗೆ ಹಾಕಿ ಬಿಡುವುದು.

2. ಕಚ್ಚಿಸುವ ಜಾಗಕ್ಕೆ ಚಿಕ್ಕದೊಂದು ಗೀರನ್ನಾಗಲಿ, ಗಾಯವನ್ನಾಗಲಿ ಮಾಡಿ, ಅದರ ಮೇಲೆ ಸ್ವಲ್ಪ ರಕ್ತ ಚೆಲ್ಲುವರು. ಬೇರೆ ಉಪಾಯವೇನೂ ನಡೆಯದಿದ್ದರೆ, ಇದು ಬಹುಶಃ ಕೈಗೂಡುವುದು. ಇದಲ್ಲದೆ ಮಕ್ಕಳಾಗಲಿ ದೊಡ್ಡವರಾಗಲಿ ಗಳೆ ಕಚ್ಚಿಸಿಕೊಂಡ ಸಮಯದಲ್ಲಿ ಮಲಗಿ ನಿದ್ದೆ ಮಾಡಬಾರದು. ಒಂದು ವರ್ಷದ ಮೇಲೆ 6 ವರ್ಷದ ಒಳಗಿನ ಮಕ್ಕಳಿಗೆ ವರ್ಷಕ್ಕೆ ಒಂದು ಜಿಗಳೆ ದರದಲ್ಲಿ ಕಚ್ಚಿಸಬಹುದು. ಆ ಪ್ರಾಯದ ಮೇಲೆ ಪ್ರಬುದ್ಧತೆ ಬರುವವರೆಗೆ ಸಾಧಾರಣವಾಗಿ 6ಕ್ಕಿಂತ ಹೆಚ್ಚು ಕಚ್ಚಿಸುವುದು ಅವಶ್ಯವಾಗಲಿಕ್ಕಿಲ್ಲ" (1930:19 ಪೀಠಿಕೆ) ಎಂಬ ಸೂಚನೆಯಿದೆ.

'ರೋಗ ಚಿಕಿತ್ಸೆಯಲ್ಲಿ ಪ್ರಯೋಗವಾಗುವ ಕೆಲವು ಊರೌಷಧಗಳು' ಎಂಬ ಭಾಗವು ಗ್ರಂಥದಲ್ಲಿ ಬಹುಮುಖ್ಯವಾಗಿದೆ. ಸುಮಾರು 200 ಪುಟಗಳಲ್ಲಿ ದೀರ್ಘ ವಿವರಗಳುಳ್ಳ 305 ಊರೌಷಧಗಳ ಪಟ್ಟಿಮಾಡಲಾಗಿದೆ. ಅಲ್ಲದೆಯೇ ಇವುಗಳಲ್ಲಿ ಒಳವಿಭಾಗಗಳಿದ್ದು ಅವುಗಳನ್ನು ಎ.ಬಿ.ಸಿ. ಎಂಬ ಇಂಗ್ಲಿಷ್ ಅಕ್ಷರಗಳಲ್ಲಿ ಕೊಡಲಾಗಿದೆ. ವಿವರಿಸಲಾಗಿರುವ ಹೆಚ್ಚಿನ ಔಷಧಗಳ ಹೆಸರುಗಳಿಗೆ ಕನ್ನಡ ಪದಕ್ಕೆ ಸಂವಾದಿಯಾಗಿ ಇಂಗ್ಲಿಷ್, ಹಿಂದಿ, ತಮಿಳು, ತೆಲುಗು, ಮಲಯಾಳಂ, ತುಳು ಮೊದಲಾದ ಭಾಷೆಗಳಲ್ಲಿ ಪ್ರಯೋಗವಾಗುವ ಅರ್ಥಗಳನ್ನು ಕೊಡಲಾಗಿದೆ. ಹಾಗೂ ಅವುಗಳನ್ನು ಪ್ರತೀ ಪುಟದ ಅಡಿಭಾಗದಲ್ಲಿ ನಮೂದಿಸಲಾಗಿದೆ.

ಗ್ರಂಥದ ಕೊನೆಯಲ್ಲಿ ರೋಗಗಳ ಹೆಸರುಗಳ ಆಕಾರವಾದಿ ಪಟ್ಟಿ ಹಾಗೂ ಚಿಕಿತ್ಸೆಯಲ್ಲಿ ಪ್ರಯೋಗವಾಗುವ ಔಷಧ ಅನುಪಾನಾದಿಗಳ ಆಕಾರಾದಿ ಪಟ್ಟಿಗಳನ್ನು ಕೊಡಲಾಗಿದೆ. ಮೊದಲಲ್ಲಿ 252 ರೋಗಗಳ ಪಟ್ಟಿಯನ್ನೂ ಎರಡನೆಯದರಲ್ಲಿ 296 ರೀತಿಯಲ್ಲಿ ಔಷಧೋಪಚಾರ ಕ್ರಮವನ್ನು ಪಟ್ಟಿ ಮಾಡಲಾಗಿದೆ. 252 ರೋಗಗಳಿಗೆ 296 ರೀತಿಯ ಔಷಧೋಪಚಾರಗಳನ್ನು 368 ವಿಧದಲ್ಲಿ ಪ್ರಯೋಗಿಸುವ ವಿಧಾನವನ್ನು ವಿವರಿಸಲಾಗಿದೆ.

ಪೀಠಿಕೆಯಲ್ಲಿ ಕೊಡಲಾಗಿರುವ ಸೂಚನಾ ಕ್ರಮಗಳನ್ನು (ಶರೀರಾರೋಗ್ಯಕ್ಕೆ ಅಗತ್ಯವೇನು? ಔಷಧಗಳನ್ನು ತಯಾರಿಸುವ ವಿಧ, ಔಷಧಗಳನ್ನು ಸೇವಿಸುವ ಕ್ರಮ, ಔಷಧಗಳ ಪರಿಮಾಣ, ಪಥ್ಯದ ವಿವರ, ರೋಗ ಪರೀಕ್ಷೆ, ಹಾಗೂ ಜಿಗಳೆಗಳ ಉಪಯೋಗ) ರೋಗಚಿಕಿತ್ಸೆಯಲ್ಲಿ ಪ್ರಯೋಗವಾಗುವ ಊರೌಷಧಗಳಿಗೆ ಅನುಗುಣವಾಗಿ ಮಾಡಲಾಗಿದೆ. ಔಷಧಗಳ ಬಳಕೆ, ಉಪಯೋಗ ಹಾಗೂ ಪ್ರಯೋಜನಗಳನ್ನು ಅರ್ಥೈಸುವುದಕ್ಕೆ ವಿವರಗಳು ಸಹಕಾರಿ.

ಗ್ರಂಥದಲ್ಲಿ ವಿವರಿಸಲಾಗಿರುವ ಊರೌಷಧಗಳ ಪ್ರಯೋಗಗಳನ್ನು ಹಾಗೂ ಪ್ರಯೋಜನಗಳನ್ನು ತಾಯಿ ಹಾಗೂ ಮಗುವನ್ನು ಗಮನದಲ್ಲಿರಿಸಿಕೊಂಡು ಸಂಗ್ರಹಿಸಿಕೊಟ್ಟಿರುವಂತೆ ತೋರುತ್ತದೆ. 'ಅತಿಸಾರ' (ನೀರು ಹೊರಕಡೆ ಹೊಟ್ಟೆಝಾಡನೆ) 'ಡಯರೋಕ' (ಲೂಸ್‌ನೆಸ್ ಆಫ್ ದಿ ಬೊವೆಲ್ಸ್) ವಾಗುವುದಕ್ಕೆ 'ಉದರ ಶೂಲೆ' (ನಳವಾಯು, ಕೊಲಿಕ್)ಗೆ, 'ಕುಚಾಗ್ರದಲ್ಲಿ (ಸ್ತನದ ತುದಿಯಲ್ಲಿ) ಆಗುವ ಹುಣ್ಣು ಅಥವಾ ಗಾಯ' (ಸೋರ್ ಆರ್ ಕ್ರಾಕಡ್ ನಿಪ್ಪಲ್ಸ್) ಗಳಿಗೆ, 'ಕುಟಿಲವಾತ' (ಗ್ರಹಣಿ, ಮಕ್ಕಳ ವ್ಯಾಧಿ, ಅಳ್ಳೆ ರೋಗ) ರಿಕೆಟ್ಸ್‌ಗಳಿಗೆ, ಗರ್ಭಕೋಶಕ್ಕೆ ಸಂಬಂಧಿಸಿದಂತೆ ಆಗುವ ಕಾಯಿಲೆಗೆ – ಸುಮಾರು 100ಕ್ಕಿಂತಲೂ ಹೆಚ್ಚು ಔಷಧೋಪಚಾರಗಳನ್ನು ಸ್ತ್ರೀಯರಿಗೆ ಸಂಬಂಧಿಸಿದಂತೆ ವಿವರಿಸಿರುವ ನಿದರ್ಶನಗಳು ಇವೆ. ಉದಾ: 1. ಕುಟಿಲವಾತ (ಗ್ರಹಣಿ., ಮಕ್ಕಳವ್ಯಾಧಿ, ಅಳ್ಳರೋಗ) ರಿಕೆಟ್ಸ್‌ಕ್ಕೆ ಸಂಬಂಧಿಸಿದಂತೆ ವಿವರ ಹೀಗಿದೆ. "ಈ ರೋಗವು ಎರಡು ವರ್ಷ ಪ್ರಾಯದೊಳಗಿನ ಮಕ್ಕಳಿಗೆ ಉಂಟಾಗುವುದು. ಶರೀರಕ್ಕೆ ಪುಷ್ಟಿಯೂ ಚೇತನವೂ ಕಡಿಮೆಯಾಗಿದ್ದ ದೆಸೆಯಿಂದ ಎಲುಬುಗಳು ಬೆಳೆಯದೆ ಸೊಟ್ಟಗಾಗುವವು. ವಾಡಿಕೆಯಲ್ಲಿ ಹಲ್ಲು ಬರುವಾಗಾಗಲಿ, ಮೊಲೆ ಬಿಡುವಾಗಾಗಲಿ ರೋಗವು ವಿಕಾಸಿಸುವದು. ಇದಕ್ಕೆ ಮುಂದಾಗಿ ವಾಯುವಿನ ಉಪದ್ರವ, ಆಮ್ಲಪಿತ್ತ, ಉದರಶೂಲೆ, ದುರ್ವಾಸನೆಯುಳ್ಳ ಶ್ವಾಸ, ಕಿರುಹೊಟ್ಟೆಯಲ್ಲಿ ಬೀಗು ಸಹ ಇರುವುದು; ಬಹುಶಃ ಅತಿರೇಕ ಬಾಯಿಸವಿ; ಮೈಕುಂದು, ಶರೀರಕ್ಷೀಣತೆ; ಮುಖವು ಸೊರಗಿ ಮುದುರಿಕೊಳ್ಳುವುದು; ಮಂದ ಬೆಳವು; ನಿಲ್ಲುವುದಕ್ಕಾಗಲಿ ನಡಿಯುವುದಕ್ಕಾಗಲಿ ನಿಶ್ಚೇತನತೆ; ಗಂಟು ಬಾವು; ಪಕ್ಕೆಲುಬು ಮುಂದೋರುವುದು; ಬೆನ್ನೆಲುಬು ಬಾಗುವದು; ಹಲ್ಲುಗಳು ಹೊರಟಗ್ಯೂ ಮೊಳೆಯುವಷ್ಟರೊಳಗೆ ಹುಳುಬಿದ್ದು ಸವೆದು ಹೋಗುವವು, ಇಲ್ಲವೆ ಹಲ್ಲಿನಲ್ಲಿ ಗಾರೆಗಟ್ಟಿಕೊಂಡು ದುರ್ವಾಸನೆ ಹೊರಡುವದು; ಮುಖ್ಯವಾಗಿ ಕಾಲುಗಳು ಮೆತ್ತಗಾಗಿ ಬಾಗಿಹೋಗಿವವು; ಆಗಾಗ್ಗೆ ಹೊಟ್ಟೆ ಝಾಡಿಸುವದು; ಮಲವು ಬಿಳಿ ತರದ್ದಾಗಿರುವದು. ಆದರೆ ಮಗುವು ಬೆಳೆಯುತ್ತಾ ಪುಷ್ಟಿಯಾಗುತ್ತಾ ಇರಲಾಗಿ ಮೇಲೆ ಹೇಳಿದ ಚಿಹ್ನೆಗಳೆಲ್ಲಾ ಕ್ರಮೇಣ ಕಡಿಮೆಯಾಗುತ್ತಾ ರೋಗವು ತನ್ನಷ್ಟಕ್ಕೆ ಕಾಣದೆ ಹೋಗುವದುಂಟು.

ಚಿಕಿತ್ಸೆ: ಇದಕ್ಕೆ ಮೀನಿನ ಎಣ್ಣೆ (123) ಬಹಳ ಗುಣಕರವಾಗಿ ಕೊಡಬಹುದು. ಮಗುವು ಬಹಳ ಮೈಗರೆದು ಚೇತನವಿಲ್ಲದ್ದಾಗಿದ್ದರೆ, ಎಣ್ಣೆಯ ಸಂಗಡ ಅನ್ನ ಭೇದಿ ಸಹ(163) ಕೊಡುವದು ಒಳ್ಳೇದು. ಸುಣ್ಣದ ತಿಳಿನೀರು ಹಾಗೂ ಹಾಲು (16) ಅಂಥ ಮಕ್ಕಳಿಗೆ ಆಗಾಗ್ಗೆ ಒಳ್ಳೆ ಪಾನವಾಗಿರುವದು. 163: ಪಕ್ಷವಾತದಲ್ಲಿಯು ಮಕ್ಕಳ ಗ್ರಹಣಿಯಲ್ಲಿಯೂ ಮೈಗರೆಯೋಣಕ್ಕೆ ಅನ್ನಭೇದಿಯನ್ನು ಕೊಡುವರು. ಹ್ಯಾಗಂದರೆ

ಓಮದ ನೀರು(12) ಹಾಗೂ ಚಿರಾಯತಿನ ಕಲ್ಕ(4) ಒಂದೊಂದು 6 ಔನ್ಸ್ ತೆಗೆದು ಕೂಡಿಸಿ ಅದರಲ್ಲಿ 2–3 ಗ್ರೇನ್ ಅನ್ನಭೇದಿ ಹಾಕಿ ಕಲಕಿಸುವರು. ಇದು ಮಕ್ಕಳಿಗೆ, ಪ್ರಾಯನೋಡಿ, ಚಾ ಸೌಟಿನಿಂದ ಮೇನ ಸೌಟುವರೆಗೆ ದಿನಕ್ಕೆ ಎರಡು ಮುರಾವರ್ತಿ ಕೊಡುವದು. ಅನ್ನಭೇದಿಯನ್ನು ಮೇಲಿನ ಪರಿಮಾಣದಲ್ಲಿ ಒಂದೆಯಾಗಿ ಆಗಲಿ ರಕ್ತಬೋಳದ ಸಂಗಡ ಕೂಡಿಸಿ ಆಗಲಿ ಕೃಶರೋಗದಲ್ಲಿ ಗುಣಕರವಾಗಿ ಕೊಡುತ್ತಾರೆ." (1930:108–105) ಉದಾ: 2 ಗರ್ಭವಾಯು (ಗರ್ಭಾಶಯ ದಾಹ, ಸೂತಕವಾಯು, ಸೂತಕ ಸನ್ನಿ) (ಹಿಸ್ಟಿರಿಕಲ್ ಅಫೆಕ್ಷನ್): "ಇದೊಂದು ವಿಶೇಷವಾಗಿ ಸ್ತ್ರೀಯರಿಗೆ ಗರ್ಭಾಶಯಕ ಅಕ್ರಮಸೂಚಕವಾಗಿ ಇಲ್ಲವೆ ಇತರ ಅಶಕ್ತೀ ದೆಸೆಯಿಂದ ಉಂಟಾಗುವ ನರಗಳ ಸಂಬಂಧವಾದ ಶರೀರ ಕಾರ್ಯಗಳ ಅಕ್ರಮ. ಇದು ಕಾಲಾವಧಿಯಾಗಿ ಅನಿಯಮಿತ ಹೊತ್ತಿಗೆ ಬರುವಂಥಾ ಮನಸ್ಸಿನ ವಿಕಾರ. ಇತರ ಕಾಲದಲ್ಲಿ ಸ್ತ್ರೀಯು ಸಹಜ ಸ್ಥಿತಿಯಲ್ಲಿದ್ದು, ಅದು ಉಂಟಾದ ಹೊತ್ತಿನಲ್ಲಿ ಪೂರಾ ಸ್ಮೃತಿ ತಪ್ಪದೆ ಇದ್ದಾಗ್ಯೂ, ಸನ್ನಿಯಾದಂತೆ ಕೂಗುವದಾಗಲಿ, ನೆಗಾಡುವದಾಗಲಿ, ನಿಟ್ಟುಸುರಿಡುವದಾಗಲಿ, ಬುದ್ಧಿ ಭ್ರಾಂತಿಯಾಗಲಿ ಬಹುತರ ತೋರುವದು.

ಚಿಕಿತ್ಸೆ: ಇದರ ಏರಿಕೆ ತಡಿಸುವ ಬಗ್ಗೆ ಹಿಂಗು (121 ಎ), ರಕ್ತಬೋಳ ಹಾಗೂ ಹಿಂಗು ಕೂಡಿದ ಮಾತ್ರೆ (192), ಜಪಾಮಾಂಸೀ ಕಲ್ಕ (122 ಎ), ಓಮದ ನೀರು(12) ಶಮನಕರವಾಗಿ ಪ್ರಯೋಗವಾಗುವವು. ಅದಲ್ಲದೆ ಟರ್ಪೆಂಟೈನ್ ಎಣ್ಣೆಯಿಂದ ಪಿಚಕಾರಿ ಹೊಡೆಯುವದು(129), ತಣ್ಣೀರಿನ ಧಾರೆ(55) ಸಹ ಕೊಡುವದು ಶಮನಕರವೇ.

192. **ರಕ್ತಬೋಳ[40]** (ಲೋಳಿಸರದಿಂದ ತೆಗೆದ ಕರಿಜೆಗಟು) ಹಾಗೂ ಹಿಂಗು ಹಾಕಿ ಮಾತ್ರೆ ಮಾಡುವದು. ಹ್ಯಾಗಂದರೆ–20 ಗ್ರ್ಯಾಮ್ ತೂಕ ರಕ್ತಬೋಳ ಹಾಗೂ ಅಷ್ಟೇ ಹಿಂಗು ಇವೆರಡನ್ನು ಚೆನ್ನಾಗಿ ಜೇನುತುಪ್ಪದ ಸಂಗಡ ಅರೆದು, 12 ಮಾತ್ರೆಗಳಾಗಿ ಕಟ್ಟುವದು. ಮಾತ್ರೆಗಳನ್ನು ಸರ್ತಿಗೆ ಒಂದೊಂದರ ಮೇರೆಗೆ ದಿವಸಕ್ಕೆ ಎರಡು ಸರ್ತಿ ಕೊಡವದು. ಸೂತಕ ಸನ್ನಿ ಇರುವ ಸ್ತ್ರೀಯರಿಗೂ, ಅಂತರ್ವಮಿ ಎಂಬ ವಾಯು ಸಂಬಂಧವಾದ ಶೂಲೆಯುಳ್ಳರಿಗೂ, ಮುಖ್ಯವಾಗಿ ಮಲಬದ್ಧತೆಯುಳ್ಳವರಿಗೂ ಮಾತೆಗಳು ಬಹಳ ಪ್ರಯೋಜನಕರವಾಗಿ ಪ್ರವರ್ತಿಸುವವು. ಸೂತಕ ಬದ್ಧತೆಯ ದೆಸೆಯಿಂದಾಗಲಿ, ಮೂಲವ್ಯಾಧಿಯ ರಕ್ತಸ್ರಾವದಿಂದಾಗಲಿ ಉಂಟಾಗುವ ತಲೆಸಿಡಿತಕ್ಕೂ ಮಾತ್ರೆಗಳು ಬಹಳ ಗುಣಕರವಾಗಿವೆ. ಆದರೆ ರಕ್ತಬೋಳ ಮಾತ್ರ ಮೂಲವ್ಯಾಧಿಯುಳ್ಳವರಿಗೆ ಅಷ್ಟು ಒಳ್ಳೇದಲ್ಲ; ಅದರ ದೆಸೆಯಿಂದ ಆ ರೋಗ ಒಂದು ವೇಳೆ ವಿಶೇಷವಾಗುವದು." (1930:125–126)

ಅಲ್ಲದೆಯೇ ಈ ಗ್ರಂಥದಲ್ಲಿ ಶೀತ, ಜ್ವರ, ನೆಗಡಿ, ತಲೆನೋವು, ನಿತ್ರಾಣ ಮೊದಲಾದ ಸಾಮಾನ್ಯ ಕಾಯಿಲೆಗಳಿಗೂ ಔಷಧೋಪಚಾರ ವಿವರವನ್ನು ನೀಡಲಾಗಿದೆ.

ಗ್ರಂಥದ ಭಾಷಾಪ್ರಯೋಗ ಬಹುಮಟ್ಟಿಗೆ ಎಲ್ಲಾ ಔಷಧೋಪಚಾರಗಳ ವಿವರಣೆಯ ಜೊತೆಯಲ್ಲಿ ಆದೇಶವನ್ನು ಕೊಡುವಂತೆ ತೋರುತ್ತದೆ. ಉದಾ: ಔಷಧಗಳನ್ನು ಕೊಡಬೇಕು. ಹಿಂದಿನ ವಿವರಣೆಗಳನ್ನು ನೋಡು, ಟಿಪ್ಪಣಿಯಲ್ಲಿ ನೋಡು– ರೀತಿಯಲ್ಲಿದೆ. ಆದೇಶ ಕೊಡುವುದು ಸಹ ರೋಗಿಯಾದವನಿಗೆ ಆರೋಗ್ಯಕ್ಕೆ ಸರಿಯಾದ ಮುನ್ಸೂಚನೆ ಹಾಗೂ ಒತ್ತಡ ಕೊಟ್ಟಂತೆಯೇ ಆಗುತ್ತದೆ. ಹಾಗೂ ವಿವರಣೆಗಳು ವೈದ್ಯನು ಹೇಳುವ ಮಾತಿನ ಅನುಭವ ವಿವರಗಳಂತೆ ತೋರುತ್ತದೆ. ಊರೌಷಧಗಳನ್ನು ಬಳಸಿ ಹಳ್ಳಿಮದ್ದು ಕಲಿಯುವವರಿಗೆ ಗ್ರಂಥ ಸಹಕಾರಿಯಾಗಬಲ್ಲದು. "ಗ್ರಂಥದಲ್ಲಿ ಹೇಳಿರುವ ಹೆಚ್ಚಾದ ಔಷಧಗಳು ವೈದ್ಯ ಪಂಡಿತರಾದ ವೇರಿಂಗ ದೊರೆ ರಚಿಸಿದ 'ಅಂಗಡೀ ಔಷಧಗಳು' ಎಂಬ ಪುಸ್ತಕದಿಂದ ಸಂಗ್ರಹಿಸಿದ್ದಾಗಿರುತ್ತವೆ."**[41]** (1930:20)

1946ರಲ್ಲಿ **ಡಾ. ವೆಂಕಟ್ರಾವ್ ಕೋರಡ್ಕಲ್** ಬರೆದ **'ಮನೆಮದ್ದು'** ಕೃತಿಗೆ ಮುನ್ನುಡಿ ಬರೆಯುತ್ತಾ ಶ್ರೀನಿವಾಸಮೂರ್ತಿಯವರು "ಮನೆಮದ್ದುಗಳನ್ನು ಮಾಡಿಕೊಳ್ಳಲಿಕ್ಕೂ ರೋಗಿಗಳ ಅನುಪಾನ ಆರೈಕೆಗಳನ್ನು ನೋಡಿಕೊಳ್ಳಲಿಕ್ಕೂ ಬೇಕಾದ ಪ್ರಯೋಗ ಜ್ಞಾನಾನುಭವಗಳು ನಮ್ಮ ಅಜ್ಜಿಯಂದಿರಲ್ಲಿ ತುಂಬ ಇದ್ದು, ತಾಯಂದಿರಲ್ಲಿ ಕಡಿಮೆಯಾಗಿ, ಆಗ ನಮ್ಮ ಅಕ್ಕತಂಗಿ ಮಗಳಂದಿರಲ್ಲಿ ಅತ್ಯಲ್ಪ ಅಥವಾ ಏನೂ ಇಲ್ಲವೆಂಬಂತಾಗಿದೆ. ಅವನತಿಯನ್ನು ತಡೆಗಟ್ಟಿ ನಮ್ಮ ಅಜ್ಜಿಯಂದಿರ ಕಾಲದ ಜ್ಞಾನಾನುಭವಗಳನ್ನು ಪುನರುದ್ಧರಿಸಿ ಇಂದಿರಿಸಿ ತಕ್ಕಂತೆ ಸುಧಾರಿಸಿಕೊಳ್ಳುವುದು ಅತಿ ಅವಶ್ಯವೂ ಅತ್ಯವಸರದಿಂದ ಕೈಗೊಳ್ಳಬೇಕಾದ ಕಾರ್ಯವೂ ಆಗಿದೆ. ಉದ್ದೇಶ ಸಾಧನೆಗೆ ಇಂತಹ ಪುಸ್ತಕ ಪ್ರಕಟಣೆಯು ಸರಿಯಾದ ಹಾದಿ, ತಕ್ಕುದಾದ ಹೆಜ್ಜೆ ಹೇಗೆಂದರೆ ಪುಸ್ತಕವು ಹಳೆಯ ಮದ್ದುಗಳನ್ನು ವೈದ್ಯಕೀಯ ಶಾಸ್ತ್ರ ಜ್ಞಾನಾನುಭವ ದೃಷ್ಟಿಗಳಿಂದ ಅತ್ಯಾಧುನಿಕವಾಗಿ ಸುಧಾರಿಸಿಕೊಂಡು ಇಂದಿಗೆ ಪ್ರಯೋಜನಕಾರಿಯಾಗುವಂತೆ ಚೆನ್ನಾಗಿ ಬರೆಯಲ್ಪಟ್ಟಿದೆ" (1946:ಮುನ್ನುಡಿ) ಎಂದಿದ್ದಾರೆ.

ವೆಂಕಟ್ರಾವ್ ದೇಶೀಯ ಮಾದರಿಯ ಔಷಧಿ ಕ್ರಮವನ್ನು ಪರಿಚಯಿಸುವುದಕ್ಕೆ ತೊಡಗಿದ್ದಾರೆ. ಸಂಕಲನದ ಪ್ರಸ್ತಾವನೆ ಭಾಗದಲ್ಲಿ ದೇಶೀ ಔಷಧ ಕ್ರಮದ ಉಪಯೋಗದ ಕುರಿತು ರೀತಿ ಹೇಳುತ್ತಾರೆ. "ವೈದ್ಯಕೀಯ ಶಾಸ್ತ್ರದಂತಹ ವಿಜ್ಞಾನಕ್ಕೆ ಮೂಡಲು–ಪಡುವಲು ಎಂಬ ಗಡಿಗಳ ತೊಡಕಿರಬಾರದು. ಎಲ್ಲಿಯದರಲ್ಲಿ ಯಾವುದು ಇಂದಿನ ಪರಿಸ್ಥಿತಿಗೆ ಗ್ರಾಹ್ಯವೆನಿಸುವುದೋ ಅದನ್ನು ಹೊಂದಿಸಿಕೊಂಡು ವೈದ್ಯ ಶಾಸ್ತ್ರವನ್ನು

ಬೆಳೆಯಿಸಿಕೊಳ್ಳುವುದರಲ್ಲಿ ಔಚಿತ್ಯವಿದೆ, ವಿವೇಕವಿದೆ, ವಿಶೇಷ ಪ್ರಯೋಜನವಿದೆ. ನಾನು ಶಿಕ್ಷಣ ಹೊಂದಿದ ಸಂಸ್ಥೆಯ ಧ್ಯೇಯವೂ ಇದೆ. ಅಂತೆಯೇ ಉಭಯ ಚಿಕಿತ್ಸಾ ಕ್ರಮಗಳಲ್ಲಿ ಸಂದರ್ಭಾನುಸಾರ ಯಾವುದು ವಿಶೇಷ ಗುಣಕಾರಿಯಾದೀತೆಂದು ತೋರುವುದೋ ಅದನ್ನು ನಾನು ನನ್ನ ಡಿಸ್ಪೆನ್ಸರಿಯಲ್ಲಿ ಪ್ರಯೋಗಿಸುತ್ತೇನಾದರೂ ವನೌಷಧಿಗಳಂತೆ ವಿದೇಶೀಯ ಔಷಧ ವಸ್ತುಗಳನ್ನು ಮನೆಮದ್ದಾಗಿ ಸಂಯೋಗ (ಮಿಕ್ಷ್ಚರ್) ಮಾಡಿಕೊಳ್ಳಲು ಸುಲಭವಲ್ಲದ ಕಾರಣ ಪುಸ್ತಕದಲ್ಲಿ ದೇಶೀಯ ಮದ್ದುಗಳನ್ನೇ ಹೆಚ್ಚಾಗಿ ಹೇಳಿರುವೆನಲ್ಲದೆ ವಿದೇಶೀಯ ಪದ್ಧತಿಯ ಉಪೇಕ್ಷೆಯಿಂದಲ್ಲ" ಎಂದು ಹೇಳುತ್ತಾರೆ.

"ಆಯುರ್ವೇದ ಶಾಸ್ತ್ರ ಸಮ್ಮತವಾದ ಹಾಗೂ ನನ್ನ ಪ್ರಯೋಗಾನುಭವಗಳಲ್ಲಿ ಒಳ್ಳೆಯ ಪರಿಣಾಮಕಾರಿಯೆಂದು ತಿಳಿದು ಬಂದ ಚುಟುಕು ಮದ್ದುಗಳು, ಏನೋ ಎಂತಹದೋ ಏನಾಗುವುದೋ ಎಂದು ಅಳುಕದೆ ನಿರ್ಭೀತಿಯಿಂದ ಪ್ರಯೋಗಿಸ ಬಹುದಾದ ನಿರ್ಬಂಧಕವಾದ ಒಳ್ಳೆಯ ಮದ್ದುಗಳಿವು ಎಂಬುದನ್ನು ಇಲ್ಲಿಯೂ ಒತ್ತಿಹೇಳಲು ಬಯಸುತ್ತಾನೆ. ವಿಶೇಷತಃ ಗೃಹರಾಜ್ಯದೊಡತಿಯರಾದ ಮಹಿಳೆಯರು ಮನೆಮದ್ದಿನ ಕೈಪಿಡಿಯನ್ನು ಮನೆಯಲ್ಲಿಟ್ಟುಕೊಂಡು ಉಪಯೋಗಿಸುತ್ತಿದ್ದರೆ ಪ್ರಯೋಜನ ಹೆಚ್ಚು, ವೆಚ್ಚ ಕಡಿಮೆ, ಮನೆಯಲ್ಲೊಬ್ಬ ವೈದ್ಯನಿದ್ದಷ್ಟು ಧೈರ್ಯ ಎಂಬುದು ಮನವರಿಕೆಯಾದೀತೆಂದು ನನ್ನ ಬಲವತ್ತರವಾದ ನಂಬುಗೆ." (1946:ಪ್ರಸ್ತಾವನೆ)

ಲೇಖಕರು ಕೃತಿಯ ಮಿತಿಯ ಬಗ್ಗೆಯೂ ಹೇಳಿಕೊಂಡಿದ್ದಾರೆ. "ಪುಸ್ತಕದಲ್ಲಿ ಆಯಾ ಮದ್ದುಗಳಿಗೆ ಹೇಳಿದ ಔಷಧ ದ್ರವ್ಯಗಳ ರಸವೀರ್ಯ ವಿಪಾಕ ಪ್ರಭಾವಗಳನ್ನು ವಿವರಿಸುವ ಪರಿಶಿಷ್ಟವೊಂದನ್ನು ಸೇರಿಸಿದ್ದರೆ ಕೆಲವು ವಿಚಾರಶೀಲರಿಗೆ ಮದ್ದುಗಳಲ್ಲಿ ಮತ್ತಷ್ಟು ವಿಶ್ವಾಸವುಂಟಾಗುತ್ತಿತ್ತೇನೋ ನಿಜ. ಹಾಗೆ ಮಾಡಿದ್ದರೆ ಪುಸ್ತಕವು ಇನ್ನರ್ಧದಷ್ಟಾದರೂ ದೊಡ್ಡದಾಗಿ ಬೆಲೆಯನ್ನು ಏರಿಸಬೇಕಾಗುತ್ತಿತ್ತು. ಆದರೆ ಮದ್ದನ್ನು ವಿಶ್ವಾಸದಿಂದ ತೆಗೆದುಕೊಳ್ಳುವವರು ಹಲವರು. ವಿಚಾರದ ಅಳಿಕಿನಿಂದ ಸೇವಿಸುವವರು ಕೆಲವರು. ಮೇಲಾಗಿ, ವಿಶ್ವಾಸವು ವಿಶೇಷ ಗುಣಕಾರಿ. ಆದುದರಿಂದ ಕೆಲವರ ಅವಶ್ಯಕತೆಗಾಗಿ ಪುಸ್ತಕವನ್ನು ದೊಡ್ಡದುಮಾಡಿ ಬೆಲೆಯೇರಿಸಿ ಹಲವರಿಗೆ ಎಟುಕದಂತೆ ಮಾಡುವುದು ಅನುಚಿತವೆಂದು, ಆ ಭಾಗವು ಸಿದ್ಧವಾಗಿದ್ದರೂ ಅದನ್ನು ಸೇರಿಸಿಲ್ಲ." (1946: ಪ್ರಸ್ತಾವನೆ)

ಸಂಕಲನದ ವಿಷಯಾನುಕ್ರಮಣಿಕೆಯನ್ನು ಮೂರು ಭಾಗಗಳಾಗಿ ವರ್ಗೀಕರಿಸಲಾಗಿದೆ. ಭಾಗ:1. ಮಕ್ಕಳ ಕಾಯಿಲೆ ಹಾಗೂ ಆರೈಕೆ; ಭಾಗ–2. ಹೆಂಗಸರ ಕಾಹಿಲೆ ಹಾಗೂ ಗರ್ಭಿಣಿ ಪ್ರಸವ, ಬಾಣಂತಿತನದ ಆರೈಕೆ ಹಾಗೂ ಸೌಂದರ್ಯ ಸಾಧನಗಳು; ಭಾಗ–3. ಎಲ್ಲಾ ಸಾಮಾನ್ಯ ಕಾಯಿಲೆಗಳು, ಅವುಗಳ ಲಕ್ಷಣಗಳು ಹಾಗೂ ಚಿಕಿತ್ಸೆಗಳು

ಭಾಗ ಒಂದರಲ್ಲಿ ಮಕ್ಕಳ ಕಾಯಿಲೆ ಹಾಗೂ ಆರೈಕೆಗೆ ಸಂಬಂಧಿಸಿದಂತೆ 73 ಬಗೆಯ ಔಷಧೋಪಚಾರಗಳ ವಿವರಗಳಿವೆ. "ಮಕ್ಕಳ ಮೈ, ಬಾಯಿ, ಗಂಟಲು, ಅನ್ನಕೋಶ, ಕರುಳುಗಳು ಎಳೆಯವಾಗಿ ಕೋಮಲವಾಗಿರುವುದರಿಂದ ಅವು ತೀಕ್ಷ್ಣ ಮದ್ದುಗಳನ್ನು ಸಹಿಸವು. ಆದುದರಿಂದ ಅಂತಹ ಮದ್ದುಗಳನ್ನು ಕೊಡುವುದು ಒಳ್ಳೆಯದಲ್ಲ. ಒಂದು ವೇಳೆ ಅಂತಹ ಮದ್ದು ತಟಕ್ಕನೆ ಒಂದು ಕಾಹಿಲೆಯನ್ನು ಗುಣಪಡಿಸಿದರೂ ಅದರ ತೀಕ್ಷ್ಣತೆಯಿಂದಾಗಿ ಇನ್ನೊಂದು ಕಾಹಿಲೆ ತಲೆದೋರಬಹುದು. ಅಥವಾ ಆ ಮದ್ದು ಗುರಿತಪ್ಪಿ ಉಳಿದುಕೊಂಡು ಬೇರೆ ಕಿರುಕುಳವನ್ನು ತಂದೊಡ್ಡಬಹುದು. ಆದಕಾರಣ ಮಕ್ಕಳಿಗೆ ಕೊಡುವ ಮದ್ದುಗಳು ಗುರಿತಪ್ಪಿದರೂ ಅಪಾಯವಿಲ್ಲದೆ ನಿರುಪದ್ರವಿಗಳಾಗಿ ಸೌಮ್ಯವಾಗಿರಬೇಕು. ಕಾಹಿಲೆಯನ್ನು ಗುಣಪಡಿಸುವುದರೊಂದಿಗೆ ದೇಹವನ್ನು ಕ್ಷೀಣಿಸದೆ ಸುಧಾರಿಸಬೇಕು. ಅಂತಹ ಮದ್ದುಗಳನ್ನೇ ಆಯ್ದುಭಾಗದಲ್ಲಿ ಹೇಳಲಾಗಿದೆ." (1946–1)

ಭಾಗ ಎರಡರಲ್ಲಿ ಹೆಂಗಸರ ಕಾಹಿಲೆ ಹಾಗೂ ಗರ್ಭಿಣಿ ಬಾಣಂತಿತನದ ಆರೈಕೆಯ ಕುರಿತು 70 ಬಗೆಯ ಔಷಧೋಪಚಾರವನ್ನು ವಿವರಿಸುತ್ತಾರೆ. "ಭಾಗದಲ್ಲಿ ಒಂದು ಕಾಹಿಲೆಗೆ ಹಲವು ಮದ್ದುಗಳನ್ನು ಹೇಳಿದೆ. ಒಂದು ಮದ್ದಿಗೆ ಬೇಕಾದ ವಸ್ತುಗಳು ದೊರೆಯದಿದ್ದರೆ ಯಾ ಮಾಡಲು ಸೌಕರ್ಯವಿಲ್ಲದಿದ್ದರೆ ಅನುಕೂಲವಾದುದನ್ನು ಆಯ್ದುಕೊಳ್ಳಲಿಕ್ಕಾಗುತ್ತದೆ. ಒಂದೊಂದು ತರದ ಶರೀರ ಪ್ರಕೃತಿ ಹಾಗೂ ಕಾಹಿಲೆಯ ಪರಿಸ್ಥಿತಿಗೆ ಒಂದೊಂದು ಮದ್ದು ಬೇಗನೆ ಹಿಡಿದು ಶೀಘ್ರಗುಣಕಾರಿಯಾಗುತ್ತದೆ. ಒಂದೊಂದು ಮದ್ದು ವಿಳಂಬವಾಗಿ ಹಿಡಿಯುತ್ತದೆ. ಆದುದರಿಂದ ಆಯ್ದುಕೊಂಡ ಮದ್ದಿನಿಂದ ವಿಶೇಷ ಗುಣ ಕಾಣದಿದ್ದರೆ ಮತ್ತೊಂದನ್ನು ಪ್ರಯೋಗಿಸಿ ನೋಡಬಹುದು. ಆಯಾ ರೋಗಕ್ಕೆ ಹೇಳಿದ ಯಾವುದೇ ಮದ್ದನ್ನು ತೆಗೆದುಕೊಂಡ ಕಾರಣದಿಂದ ರೋಗವು ನಿಶ್ಚಯವಾಗಿಯೂ ಹೆಚ್ಚಾಗುವುದಿಲ್ಲ. ದೇಹಕ್ಕೆ ಯಾವ ತರದ ಹಾನಿಯನ್ನೂ ಮಾಡುವುದಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ರೋಗವನ್ನೂ, ಉಪಶಮನಗೊಳಿಸಿ ಅಲ್ಲಲ್ಲಿ ತೀಕ್ಷ್ಣ ಮದ್ದುಗಳಂತೆ ರೋಗವನ್ನು ತಟಕ್ಕನೆ ಗುಣಪಡಿಸಿ ಅನಂತರ ದೇಹಕ್ಕೆ ಭಾದಕವನ್ನು ತರಬಹುದಾದಂತಹ ಮದ್ದುಗಳ್ಯಾವುದನ್ನೂ ಪುಸ್ತಕದಲ್ಲಿ ಹೇಳಿಲ್ಲ." (1946:3)

ಭಾಗ ಮೂರರಲ್ಲಿ ದೊಡ್ಡವರು, ಸಣ್ಣವರು, ಹೆಂಗಸರು, ಗಂಡಸರು – ಎಲ್ಲರಿಗೂ ಕಾಯಿಲೆಯ ಸಾಮಾನ್ಯ ಗುಣ–ಲಕ್ಷಣಗಳನ್ನು, ಅವುಗಳಿಗೆ ತಕ್ಕಂತೆ ಮದ್ದು ಹಾಗೂ ಪಥ್ಯಾಪಥ್ಯಗಳ ಉಪಯುಕ್ತ ಸಲಹೆಗಳನ್ನು ನೀಡಲಾಗಿದೆ. ಸುಮಾರು 51 ಬಗೆಯ ಔಷದೋಪಚಾರಗಳ ವಿವರಗಳಿವೆ. "ಮದ್ದಿನ ಪ್ರಮಾಣ ಸಾಮಾನ್ಯ ಬಲವುಳ್ಳ ದೊಡ್ಡವರಿಗೆ ಹೇಳಿರುವುದರಿಂದ ವಯಸ್ಸು ಶಕ್ತಿಗಳಿಗನುಸಾರವಾಗಿ ಸ್ವಲ್ಪ ಹೆಚ್ಚುಕಡಿಮೆ ಮಾಡಬೇಕಾದೀತು.

ರೋಗದ ಕಠಿಣ ಸ್ಥಿತಿಯಲ್ಲಿ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಹೆಚ್ಚು ಸಲ ಕೊಡಬೇಕಾದೀತು. ಅಂತೂ ರೋಗಿಯ ಪ್ರಾಯ, ಶಕ್ತಿ, ರೋಗದ ಪರಿಸ್ಥಿತಿಗಳನ್ನು ನೋಡಿಕೊಂಡು ಮದ್ದಿನ ಪ್ರಮಾಣ (ಡೋಸ್) ನಿಶ್ಚಯಿಸಬೇಕಾಗಿರುವುದರಿಂದ ಆರಂಭದಲ್ಲಿ ಕಡಿಮೆ ಪ್ರಮಾಣದಲ್ಲೇ ಕೊಟ್ಟು ಪರಿಣಾಮ ನೋಡಿ ಅವಶ್ಯ ಕಂಡರೆ ಹೆಚ್ಚು ಯಾ ಕಡಿಮೆಗಳನ್ನು ಪ್ರಮಾಣದಲ್ಲಿಯೂ ಸರ್ತಿಯಲ್ಲಿಯೂ ಮಾಡಿಕೊಳ್ಳಬೇಕು." (1946:85)

'ಮನೆಮದ್ದು' ಕೃತಿಯು ಹಳ್ಳಿಯ ಜನರ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ತುತ್ತು ರೋಗದ ಉಪಶಮನಕ್ಕೆ ಕೈಪಿಡಿಯಾಗಿದೆ. ಮನೆಮದ್ದಿನ ಪ್ರಯೋಜನದ ಜೊತೆಗೆ ಮನೆಮದ್ದನ್ನು ಉಪಯೋಗಿಸುವ ಪ್ರಾಯೋಗಿಕ ವಿವರಗಳನ್ನೂ ನೀಡುತ್ತಾರೆ. ಮೂರು ಭಾಗಗಳಲ್ಲೂ ಔಷಧೋಪಚಾರದ ಪ್ರಾಯೋಗಿಕ ಪರಿಣಾಮವನ್ನು ವಿವರಿಸುತ್ತಾರೆ. ಅರ್ಥಾತ್ ಮನೆಮದ್ದು ಉಪಯೋಗಿಸುವುದರಿಂದ ಯಾವುದೇ 'ಉಪದೋಷ' (ಸೈಡ್ ಇಫೆಕ್ಟ್) ಗಳಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

'ಮನೆಮದ್ದು' (1946) ಕೃತಿಯು ಹಳ್ಳಿಯ ಅಜ್ಜಿಯಂದಿರು ಹೇಳುವ ನಾಟಿ ಔಷಧೋಪಚಾರದ ವಿವರ. 193 ಬಗೆಯ ಔಷಧೋಪಚಾರಗಳ ವಿವರಗಳಿದ್ದರೂ, ಅವುಗಳಲ್ಲಿ ಹೆಚ್ಚಿನ ವಿವರಗಳು ಮಕ್ಕಳ ಆರೈಕೆಯ ಕುರಿತಂತೆ, ಬಾಣಂತಿಯ ಆರೋಗ್ಯದ ಕುರಿತಂತೆ ಹಾಗೂ ರೋಗ ಬಾರದಂತೆ ಮುನ್ನೆಚರಿಕೆ ಕ್ರಮಗಳ ವಿವರವಿದೆ. ಕೃತಿಯ ಮಿತಿಯ ಬಗ್ಗೆ ಮಾತನಾಡುವುದಾದರೆ,

ವಿಷಯದ ಮಂಡನೆಯ ವಿಧಾನ: ಕೃತಿಯಲ್ಲಿ ರೋಗವೊಂದರ ನಿವಾರಣೆ ಹಾಗೂ ರೋಗ ಬಾರದಂತೆ ಮುನ್ನೆಚ್ಚರಿಕೆ ಕೊಡುವ ಕ್ರಮವನ್ನು ವಿವರಣಾತ್ಮಕವಾಗಿ ಕೊಡುವುದರ ಜೊತೆಗೆ ಕೆಲವು ಔಷಧಗಳ ಉಪಯೋಗ ಹಾಗೂ ಉಪಶಮಾಗಳನ್ನು ಹೇಳುತ್ತಾ ಔಷಧದ ಒಳಿತು ಕೆಡುಕುಗಳನ್ನೂ ಸೂಚಿಸುತ್ತಾರೆ. ಉದಾಹರಣೆಗೆ,

ಅ. "ಮಕ್ಕಳ ಹೊಟ್ಟೆಯ ಹುಳದ ಉಪದ್ರವಕ್ಕೆ–ಹುಳದ ಉಪದ್ರವವಾದಾಗ ಹೊಟ್ಟೆಯು ಹೊಕ್ಕಳ ಹತ್ತಿರ ಮೊನಚಾದಂತೆ ಉಬ್ಬುವುದು, ಬಾಯಿಯಲ್ಲಿ ಆಗಾಗ್ಗೆ ನೀರುನೊರೆ ಬರುವುದು, ವಾಂತಿಯಾಗಲೂಬಹುದು, ಮಗುವು ಮೂಗು ತುರಿಸಿಕೊಳ್ಳುವುದು, ಗುದದ್ವಾರದಲ್ಲಿ ತುರಿಕೆ, ಹಸಿವಿಲ್ಲದಿರುವುದು–ರಗಳೆ ಮಾಡುವುದು. ಮೋರೆ ಬಿಳುಪೇರುವುದು ಇತ್ಯಾದಿ ಲಕ್ಷಣಗಳಲ್ಲಿ ಕೆಲವು ಯಾ ಎಲ್ಲ ತೋರಬಹುದು. ಒಂದು ಹುಳುವಿನ ಓಮವನ್ನು ಪ್ರಾಯಾನುಸಾರ ಒಂದು ಚಿಟಿಕಿಯಿಂದ ನಾಲ್ಕು ಚಿಟಿಕಿಯವರೆಗೆ ಅಷ್ಟೇ ವಾಯುಪಿಡಂಗದ ಚೂರ್ಣ ಕೂಡಿಸಿ ಎರಡರಷ್ಟು ಬೆಲ್ಲದಲ್ಲಿ ಕಲಿಸಿ ಬೆಳಿಗ್ಗೆ ಬರೇ ಹೊಟ್ಟೆಗೆ ಕೊಡುವುದು. ಎಲ್ಲ ತರಹದ ಜಂತು ವಿಕಾರಕ್ಕೂ ಒಳ್ಳೆಯ ಮದ್ದು

ಅಥವಾ ಕಹಿಬೇವಿನ ಎರಡರಿಂದ ನಾಲ್ಕೂ ಎಸಳುಗಳ ಎಲೆಗಳ ರಸ ತೆಗೆದು ಹೆಸರು ಕಾಳಿನಷ್ಟು ಹಿಂಗನ್ನು ಅದರಲ್ಲಿ ಮಸೆದು ಕಲಡಿಸಿ ಕೊಡುವುದು, ಅಥವಾ ಮಡಿಕಾಯಿಯ ಸಿಪ್ಪೆಯ ಚೂರ್ಣ ಒಂದು ಯಾ ಎರಡು ಚಿಟಿಕೆಗೆ ಬೆಲ್ಲ ಹಾಕಿ ಗುಳಿಗೆ ಮಾಡಿ ಬೆಳಿಗ್ಗೆ ಬರೇ ಹೊಟ್ಟೆಗೆ ಕೊಡುವುದು, ಮೂರು ನಾಲ್ಕು ಸಲ ಕಾಮಕಸ್ತೂರಿ ಎಲೆಯರಸ ಒಂದು ಚಮಚೆಗೆ ಅಷ್ಟೇ ಜೇನು ಸೇರಿಸಿಕೊಡುವುದು. ವಿ.ಸೂ: ಹೊಟ್ಟೆಯ ಹುಳ ಉದುರಬೇಕೆಂದು ಆಗಾಗ ಸೆಂಟೊನೀನ್ ಹಾಗೂ ಹರಳೆಣ್ಣೆ ಕೊಡುವುದು ಒಳ್ಳೆಯದಲ್ಲ. ಕೊಡುವುದಿದ್ದರೆ ಡಾಕ್ಟರರಿಂದ ಮಗುವನ್ನು ಪರೀಕ್ಷಿಸಿ ಅವರ ಸಲಹೆಯಂತೆ ಪರಿವರ್ತಿಸುವುದು ಒಳ್ಳೆಯದು. ಮೇಲಿನವು ಬಾಧಕವಿಲ್ಲದ ಗುಣಕಾರಿ ಮದ್ದುಗಳು." (1946:19–20)

ಆ. ಕುರು(ಬಾವು) ಬತ್ತಲಿಕ್ಕೆ ಯಾ ಬೇಗ ಹಣ್ಣಾಗಿ ಒಡೆಯಲಿಕ್ಕೆ: "ದತ್ತೂರದ ಎಲೆಯ ರಸದಲ್ಲಿ ಗುಗ್ಗುಳ ಕಾಲು ತೊಲೆಯನ್ನು ಅಥವಾ ಖಾತರಿಯಾಗಿ ತಯಾರಿಸಿದ ಮರ್ಮಾಣಿ ಮಾತ್ರೆಯೊಂದನ್ನು ಅಥವಾ ಎರಡಾಣಿ ತೂಕ ಅಫೀಮನ್ನು ಅರೆದು ಬಿಸಿ ಮಾಡಿ ದಪ್ಪವಾಗಿ ಲೇಪ ಹಾಕುವುದು. ಜಗಟೆ ಸೊಪ್ಪು, ಅಶ್ವಗಂಧಿ, ಗುಗ್ಗುಳ, ದತ್ತೂರದ ಎಲೆ, ಕಹಿಬೇವಿನ ಸೊಪ್ಪು, ಅರಿಶಿನ, ಜೇಷ್ಠಮಧು ಇವುಗಳಲ್ಲಿ ಯಾವುದಾದನ್ನಾದರು ನೀರಲ್ಲಿ ನುಣ್ಣಗೆ ಅರೆದು ಬಿಸಿಬಿಸಿಯಾಗಿ ದಪ್ಪವಾಗಿ ಲೇಪ ಹಾಕಿದರೂ ಆಗಬಹುದು. ನೀರುಳ್ಳಿಯನ್ನು ಸುಟ್ಟು ತುಪ್ಪ ಅರಶಿನ ಸೇರಿಸಿ ಅರೆದು ಬಿಸಿಮಾಡಿ ಅಥವಾ ಬೆಳ್ಳುಳ್ಳಿಯ ಬೇಳೆಗಳನ್ನು ಅಜ್ಜ ಪೊಟ್ಲೀಸು ಕಟ್ಟುವುದು. ವಿ.ಸೂ: ಕುರುವು ಬತ್ತದೆ ರಸಿಕೆಯಾಗುವ ಸಿಡಿತದ ಲಕ್ಷಣ ಹೆಚ್ಚು ಕಂಡರೆ ಕುದಿಯುವ ನೀರಲ್ಲಿ (ಇದಕ್ಕೆ ಒಂದು ಚಮಚೆ ಬೋರಿಕ್ ಎಸಿಡ್ ಪುಡಿ ಹಾಕಿಕೊಂಡರೆ ಒಳ್ಳೆಯದು) ಬಟ್ಟೆಯನ್ನು ಅದ್ದಿ ತುದಿಹಿಡಿದು ತಿರುವಿ ಹಿಂಡಿ ಅದರಿಂದ ಸಹಿಸಲಾಗುವಷ್ಟು ಬಿಸಿ ಬಿಸಿಯಾಗಿ ದಿನಕ್ಕೆ ನಾಲ್ಕಾರು ಸಲ ಹತ್ತು ಹದಿನೈದು ಮಿನಿಟು ಶಾಖಕೊಟ್ಟು ಮೇಲಿನ ಯಾವುದಾದರೂ ಲೇಪ ಹಾಕಿದರೆ ಸಿಡಿತಕ್ಕೂ ಉಪಶಮನ ಬೇಗ ಹಣ್ಣಾಗಿ ಒಡೆಯಲಿಕ್ಕೂ ಬಹಳ ಸಹಾಯಕ." (1946:40)

ಪ್ರಾದೇಶಿಕ ಪದಗಳ ಬಳಕೆ: ದಕ್ಷಿಣಕನ್ನಡ ಜಿಲ್ಲೆಯ ಉಡುಪಿ ಪರಿಸರದ ಪ್ರಾದೇಶಿಕ ಭಾಷಾ ಗುಣವಿದೆ. ಮುಖ್ಯವಾಗಿ ವಿವರಣೆಗಳಲ್ಲಿ ಬಳಕೆಯಾಗುವ ಪದಗಳು ಕನ್ನಡದವಲ್ಲ. ಬದಲಾಗಿ ತುಳು ಭಾಷೆಯಲ್ಲಿ ಪ್ರಯೋಗವಾಗುವ ಪದಗಳನ್ನೇ ವಿವರಣೆಗೆ ಬಳಸಿಕೊಂಡಿದ್ದಾರೆ. ಉದಾ: ಜ್ಯೇಷ್ಠ ಮಧು, ನೋಳಿರಸ, ಡಿಕ್ಕಿಮಾಲೆ, ರಕ್ತಬೋಳ, ಅಕ್ಕಳಕರೆ, ದಳಬಳ(ಕಚೋರ), ಕರ್ಕಾಟಕ ಶೃಂಗಿ ಹಾಗೂ ಅತಿವಿಷ, ಆರೋರೋಟು, ಹಿಪ್ಪಲಿಚೂರ್ಣ, ವಾಯುವಿಡಂಗದ ಚೂರ್ಣ, ಟಂಕಣಕಾರದ ಅರಳು, ಖುರಸಾನಿ ಓಮ, ಅಶ್ವಗಂಧಿ, ಕಿರಾತಕಡ್ಡಿ, ಅಮೃತಬಳ್ಳಿ, ಸತ್ವ, ಪಿತ್ತಪಾಪಟ, ನಾಗರ ಮೋಥ,

ಕಿರಾಯಿತ, ಬೂರುಗದ ಮೇಣ, ಮೋಚರಸ, ಉಮ್ಮತ್ತದ ಎಲೆ, ಗುಗ್ಗುಳ, ಕಾಚು, ನೆಲ್ಲಿಚಟ್ಟೆ, ಅರ್ರಾಲ್ ದ್ರಾವಕ–ಹೀಗೆ ಇಡೀ ಕೃತಿಯ ಉದ್ದಕ್ಕೂ ಹಲವಾರು ಪ್ರಾದೇಶಿಕ ಪದಗಳು ಬಳಕೆಯಾಗಿವೆ.

ಮುನ್ನುಡಿಯಲ್ಲಿ ಹೇಳಿರುವಂತೆ 'ಇದು ಈಗ ಮುದುಕಿಯರಲ್ಲಿ ಮಾತ್ರ ಉಳಿದಿದೆ' ಎನ್ನುತ್ತಾರೆ. ಆದರೆ ಇವರು ಮಾಹಿತಿ ಸಂಗ್ರಹ ಮಾಡಿರುವ ಮುದುಕಿಯರ ಸಾಂದರ್ಭಿಕ ವಿವರವನ್ನು ಕೊಟ್ಟಿಲ್ಲ. ಕಾಲ, ದೇಶ, ಸ್ಥಳಗಳನ್ನೊಳಗೊಂಡ ಸಂದರ್ಭದ ವಿವರಗಳಿರುತ್ತಿದ್ದರೆ ಅಧ್ಯಯನ ಇನ್ನಷ್ಟು ವೈಜ್ಞಾನಿಕವಾಗಿರುತ್ತಿತ್ತು.

ಕೊಡುವ ವಿವರಗಳಿಗೆ ನಿರ್ಣಯಗಳ ಅನಿಶ್ಚತತೆಯಿದೆ. ಲೇಖಕರು ವಿದೇಶಿ ಔಷಧಿ ಪದ್ಧತಿಯನ್ನು ಉಪೇಕ್ಷಿಸುವುದಿಲ್ಲವೆಂದು ಪ್ರಸ್ತಾವನೆಯಲ್ಲಿ ಹೇಳಿಕೊಂಡಿದ್ದಾರೆ. ದೇಶಿಮೂಲದ ಔಷಧಿ ಕ್ರಮವು 'ಪ್ರಯೋಗ' ಹಂತದಲ್ಲಿ ಎಷ್ಟು ಪರಿಣಾಮಕಾರಿ ಯಾಗಬಲ್ಲದು? ಎಂಬ ಅನುಮಾನವೂ ಇದೆ.

ಆರೋಗ್ಯದ ಜಾಗೃತಿಯನ್ನು ಮೂಡಿಸುವುದೇ ಮುಖ್ಯವಾದಂತೆ ತೋರುತ್ತದೆ. ಎಷ್ಟೋ ವಿವರಗಳು ಮುನ್ನೆಚ್ಚರಿಕೆಯಾಗಿ ಬಳಕೆಯಾದಂತೆ ತೋರುತ್ತದೆ. ಉದಾ: ಮಗುವಿಗೆ ಹಾಲು ಕೊಡುವ ಹೊತ್ತು– ಗೊತ್ತಿನ ಬಗೆಗೆ, ಮಗುವಿನ ಹೊಕ್ಕಳು ಹುಣ್ಣಾಗದಂತೆ, ಮಕ್ಕಳ ಬಟ್ಟೆಗೆ ಬೆಂಕಿ ತಗಲಿದರೆ – ಆರೋಗ್ಯದ ಆರೈಕೆಗೆ ಮುನ್ಸೂಚನೆ ಕೊಡುತ್ತಾರೆ. ಎಚ್ಚರಿಕೆ ಕೊಡುವುದರಿಂದ ಗೃಹಿಣಿಯೋರ್ವಳು ಅಥವಾ ಗರತಿಯೋರ್ವಳು ಮನೆಯಲ್ಲೇ ಇದ್ದುಕೊಂಡು ದೇಶಿ ಔಷಧಿ ಕ್ರಮವನ್ನು ಅಳವಡಿಸಿಕೊಳ್ಳುವುದಕ್ಕೆ ಮಾರ್ಗಸೂಚಿ ಕೃತಿ. ಗೃಹಿಣಿಯೋರ್ವಳು ಮನೆಮದ್ದನ್ನು ಮಾಡುವುದರ ಜೊತೆಗೆ, ದೇಶೀ ಸಂಸ್ಕೃತಿಯನ್ನು ಜಾಗೃತಿ ಮಾಡುವುದನ್ನು ಹೇಳುವುದೇ ಧೋರಣೆಯಾಗಿದೆ. ಪಾಶ್ಚಾತ್ಯ ಔಷಧೋಪಚಾರದ ಸೋಂಕು ತಗಲದಂತೆ ಮಾಡಿಕೊಂಡ ಭಾರತೀಯ ಯೋಚನಾಕ್ರಮವಿದು.

ಸಾಮಾಜಿಕ ಆಚರಣೆಗಳು

ಮೊದಲ ಘಟ್ಟದಲ್ಲಿ ಸಾಮಾಜಿಕ ಆಚರಣೆಗಳ ಬಗ್ಗೆ ಐದು ಗ್ರಂಥಗಳು ಪ್ರಕಟವಾಗಿವೆ. 1800ರಲ್ಲಿ ಲೆ.ಕ. ಮೆಕೆಂಝಿ ಸಂಗ್ರಹಿಸಿದ **'ಕರ್ನಾಟಕದ ಕೈಫಿಯತ್ತುಗಳು'**, 1816ರಲ್ಲಿ ಧರ್ಮಪ್ರಚಾರದಲ್ಲಿ ತೊಡಗಿದ **ಪಾದ್ರಿ ಅಬ್ಬೆ ದುಬೋಯಿಸ್‌ನ 'ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಆ್ಯಂಡ್ ಸೆರೋಮೊನೀಸ್'**, 1915ರಲ್ಲಿ ನಂದೋಳ್ಗೆ ಶೀನಪ್ಪ ಹೆಗ್ಗಡೆ ಬರೆದ 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಹಾಗೂ ಭೂತಾಳಪಾಂಡ್ಯರಾಯನ ಅಳಿಯ ಕಟ್ಟು',

1924ರಲ್ಲಿ ನಡಕೇರಿಯಂಡ ಚಿಣ್ಣಪ್ಪನವರು ಪ್ರಕಟಿಸಿದ ಕೊಡಗು ಆಚರಣೆಗಳ ಕುರಿತ 'ಪಟ್ಟೋಲೆ ಪಳಮೆ', 1929ರಲ್ಲಿ **ನಂದೊಳ್ಗೆ ಶೀನಪ್ಪ ಹೆಗ್ಗಡೆ** ರಚಿಸಿದ **'ತುಳುವಾಲ ಬಲಿಯೇಂದ್ರ'**.

1783ರಲ್ಲಿ ಲೆಫ್ಟಿನೆಂಟ್ ಕರ್ನಲ್ ಮೆಕೆಂಝಿ ಎಂಬಾತ ಸ್ಕಾಟ್‌ಲ್ಯಾಂಡಿನಿಂದ ಭಾರತಕ್ಕೆ ಬಂದನು.[43] 'ಲಘುಗಣಕ' (ಲಾಗರ್ಥಿಯಮ್ಸ್) ವನ್ನು ಕಂಡುಹಿಡಿದ ಜಾನ್ ನೇಪಿಯರನ ಬಗೆಗೆ ಭಾರತದಲ್ಲಿ ಗಣಿತಶಾಸ್ತ್ರಕ್ಕೆ ಸಂಬಂಧಿಸಿ ಉಪಲಬ್ಧವಿರುವ ಮಾಹಿತಿಗಳನ್ನು ಸಂಗ್ರಹಿಸಲು ಫ್ರಾನ್ಸಿಸ್ ಎಂಬಾತ ಮೆಕೆಂಝಿಯನ್ನು ಭಾರತಕ್ಕೆ ಕಳುಹಿಸಿದನು.[44] ಮೆಕೆಂಝಿ ಭಾರತಕ್ಕೆ ಬಂದು ತಲುಪುವಷ್ಟರಲ್ಲಿ ಇಂಗ್ಲೆಂಡಿನಲ್ಲಿ ಫ್ರಾನ್ಸಿಸ್ ತೀರಿಕೊಂಡನು. ಮೆಕೆಂಝಿ ಮದ್ರಾಸಿನಲ್ಲಿ ಬೇರು ಬಿಟ್ಟಿದ್ದ ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕ್ಯಾಡೆಟ್ ಆಫ್ ಇಂಜಿನಿಯರ್ ಆಗಿ ಸೇವೆ ಮಾಡಲು ಬಯಸಿದನು. ಕೆಲಸವನ್ನು ಅತಿ ನಿಷ್ಠೆಯಿಂದ ಮಾಡುತ್ತಿದ್ದ ಮೆಕೆಂಝಿಗೆ ಆಗಾಗ ಭಡ್ತಿ ದೊರೆಯಿತು.[45] 1790 ರಿಂದ 1892ರ ವರೆಗೆ ನಡೆದ ಮೈಸೂರು ಯುದ್ಧದಲ್ಲಿ ಮೆಕೆಂಝಿ ಭಾಗವಹಿಸಿದನು. 1783ರಿಂದ 1796ರ ವರೆಗೆ 13 ವರ್ಷಗಳ ಕಾಲಾವಧಿಯಲ್ಲಿ ದಕ್ಷಿಣ ಭಾರತದಲ್ಲೆಡೆ ಸುತ್ತಾಡಿ ಸಾವಿರಾರು ಹಸ್ತಪ್ರತಿಗಳನ್ನು, ಶಾಸನಗಳನ್ನು, ನಾಣ್ಯಗಳನ್ನು, ಮೂರ್ತಿಗಳನ್ನು ಸಂಗ್ರಹಿಸಿದನು. 1799ರಿಂದ 1810 ಅವಧಿಯಲ್ಲಿ ಮೈಸೂರು ಪ್ರಾಂತದಲ್ಲಿ ಟಿಪ್ಪುಸುಲ್ತಾನನ ವಿರುದ್ಧ ಪ್ರಚಾರಕ್ಕೆ ಸುತ್ತಾಡಿದನು. ಇದೇ ಸಂದರ್ಭದಲ್ಲಿ ಮೈಸೂರು ಪ್ರಾಂತದ ಭೂ–ಪರಿವೀಕ್ಷಣೆ, ದಕ್ಷಿಣಭಾರತದ ಭೂಪಟ ರಚನೆಗೆ ತೊಡಗಿದನು. ಜೊತೆಗೆ ಗ್ರಂಥಗಳ ಹಸ್ತಪ್ರತಿಗಳನ್ನು ಹಾಗೂ ಕೈಫಿಯತ್ತುಗಳನ್ನು ಸಂಗ್ರಹಿಸಿದನು.

ಮೆಕೆಂಝಿ ಸಂಗ್ರಹಿಸಿದ 2070 ಕೈಫಿಯತ್ತುಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ 134 ಕೈಫಿಯತ್ತುಗಳು ಲಭ್ಯವಿದೆ. ಮೆಕೆಂಝಿ ಸಂಗ್ರಹಿಸಿದ ಕರ್ನಾಟಕದ ಕೈಫಿಯತ್ತುಗಳಿಗೆ ಸಂಬಂಧಿಸಿದಂತೆ ಹಲವು ಅಧ್ಯಯನ ಕೃತಿಗಳು, ಲೇಖನಗಳು ಪ್ರಕಟವಾಗಿವೆ. 1825ರಲ್ಲಿ ಬಿ. ರಾಮರಾವ್ ಮೆಕೆಂಝಿ ಸಂಗ್ರಹಿಸಿರುವ 4 ಕೈಫಿಯತ್ತುಗಳನ್ನು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟಿಸಿದರು. 1983ರಲ್ಲಿ ದಕ್ಷಿಣಕನ್ನಡ ಜಿಲ್ಲೆಗೆ ಸಂಬಂಧಿಸಿದ**39** ಕೈಫಿಯತ್ತುಗಳನ್ನೊಳಗೊಂಡ **'ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು'** ಸಂಗ್ರಹವನ್ನು **ಕೆ. ಕುಶಾಲಪ್ಪಗೌಡ** ಹಾಗೂ **ಕೆ. ಚಿನ್ನಪ್ಪ ಗೌಡ** ಸಂಪಾದಿಸಿಕೊಟ್ಟರು. ಒಟ್ಟು ಎಂಟು ಅಧ್ಯಾಯಗಳುಳ್ಳ ಸಂಗ್ರಹದಲ್ಲಿ ತುಳುನಾಡಿನ ಇತಿಹಾಸಕ್ಕೆ ಸಂಬಂಧಿಸಿದ ಕೈಫಿಯತ್ತುಗಳೇ ಹೆಚ್ಚು. ಸಂಗ್ರಹದ ಕೊನೆಯಲ್ಲಿ ಎರಡು ಕೈಫಿಯತ್ತುಗಳ ಮೂಲಪ್ರತಿಗಳನ್ನು ಅನುಬಂಧದ ಭಾಗವಾಗಿ ಕೊಡಲಾಗಿದೆ.

1985ರಲ್ಲಿ **ಪುರುಷೋತ್ತಮ ಬಿಳಿಮಲೆಯವರ 'ಮೆಕೆಂಝಿ ಕೈಫಿಯತ್ತುಗಳು'** ಪ್ರಕಟವಾಯಿತು. ಎರಡು ಅಧ್ಯಾಯಗಳಿರುವ ಕೃತಿಯ ಅಧ್ಯಾಯ ಒಂದರಲ್ಲಿ ಮೂರು ಒಳವಿಭಾಗಗಳಿದ್ದು, ಮೆಕೆಂಝಿ ಜೀವನ ಹಾಗೂ ಕಾರ್ಯ, ಕೈಫಿಯತ್ತುಗಳು ಹಾಗೂ ಕೈಫಿಯತ್ತುಗಳನ್ನು ಬರೆಸಿದ ಕಾಲ ಉದ್ದೇಶ, ಕೈಫಿಯತ್ತುಗಳ ವಸ್ತು ಹಾಗೂ ಅಧ್ಯಯನದ ಮಹತ್ವವನ್ನು ಕುರಿತಾಗಿದೆ. ಅಧ್ಯಾಯ ಎರಡರಲ್ಲಿ ಎರಡು ಒಳವಿಭಾಗಗಳಿದ್ದು, ಅಧ್ಯಯನಕ್ಕೆ ಆಯ್ದುಕೊಂಡ ಕೈಫಿಯತ್ತುಗಳ ವಿವೇಚನೆ ಹಾಗೂ ಅಧ್ಯಯನಕ್ಕೆ ಆಯ್ದುಕೊಂಡ ಕೈಫಿಯತ್ತುಗಳಿಂದ ತಿಳಿದು ಬರುವ ರಾಜಕೀಯೇತರ ವಿಷಯಗಳ ಕುರಿತು ಚರ್ಚಿಸಲಾಗಿದೆ. ಕೃತಿಯ ಕೊನೆಯ ಭಾಗದಲ್ಲಿ ವಿದೇಶಿ ಪದಗಳು, ವ್ಯಕ್ತಿನಾಮಗಳು, ಸ್ಥಳನಾಮಗಳು ಹಾಗೂ ಬಿರುದುಗಳು ಇತ್ಯಾದಿ ವಿವರಗಳಿವೆ.

1994ರಲ್ಲಿ **ಎಂ.ಎಂ. ಕುಲಬುರ್ಗಿಯವರು** ಸಂಪಾದಿಸಿರುವ **'ಕರ್ನಾಟಕದ ಕೈಫಿಯತ್ತುಗಳು'** ಕರ್ನಾಟಕದ ಬಗೆಗೆ ಲಭ್ಯವಿರುವ 134 ಕೈಫಿಯತ್ತುಗಳ ಸಮಗ್ರ ಸಂಗ್ರಹ. ಕರ್ನಾಟಕದ ಕೈಫಿಯತ್ತುಗಳ ಲಭ್ಯ, ಉಲ್ಲೇಖಗಳ ಕುರಿತಂತೆ ಕೃತಿಯಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿದೆ. ಕೃತಿಯಲ್ಲಿರುವ 134 ಕೈಫಿಯತ್ತುಗಳನ್ನು ನಾಲ್ಕು ವಿಭಾಗಗಳಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಮೈಸೂರು ಪ್ರದೇಶಕ್ಕೆ ಸಂಬಂಧಿಸಿದ 53 ಕೈಫಿಯತ್ತುಗಳು, ದಕ್ಷಿಣಕನ್ನಡ-ಉತ್ತರಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ 47 ಕೈಫಿಯತ್ತುಗಳು, ಬಳ್ಳಾರಿ ಪ್ರದೇಶಕ್ಕೆ ಸಂಬಂಧಿಸಿದಂತೆ 14 ಕೈಫಿಯತ್ತುಗಳು ಹಾಗೂ ಇತರ 30 ಕೈಫಿಯತ್ತುಗಳೆಂದು ಆಯಾ ಪ್ರದೇಶಕ್ಕನುಗುಣವಾಗಿ ವಿಂಗಡಿಸಿಕೊಳ್ಳಲಾಗಿದೆ. ಕೃತಿಯ ಕೊನೆಯಲ್ಲಿ ಅಕಾರಾದಿಯಾಗಿ ನಾಮಸೂಚಿಯನ್ನು ಕೊಡಲಾಗಿದೆ.

ಕೈಫಿಯತ್ತುಗಳ ಬಗೆಗೆ ಪ್ರಕಟವಾದ ಎಲ್ಲ ಕೃತಿಗಳನ್ನು ಗಮನಿಸುವಾಗ, ಅಲ್ಲಿ ಕೈಫಿಯತ್ತುಗಳೆಂದರೇನು? ಕೈಫಿಯತ್ತುಗಳ ಕಾಲನಿರ್ಣಯ ಹಾಗೂ ಅವುಗಳ ಮಹತ್ವದ ಕುರಿತಂತೆ ನಿರ್ವಚನೆ ಮಾಡಲಾಗಿದೆ.[46] ವಿದ್ವಾಂಸರ ಪ್ರಕಾರ, ಕೈಫಿಯತ್ತುಗಳೆಂದರೆ ಹೇಳಿಕೆ, ವಿವರಣೆ, ಬರೆದಿಟ್ಟುರುವಂತಹದ್ದು, ದೂರು, ಬಿನ್ನಪ, ದೂರು ಕೊಟ್ಟದ್ದು, ಸಂಗತಿ ವಿವರಣೆ ಮೊದಲಾದ ಅನೇಕ ಅರ್ಥಗಳಿವೆ. ಅನೇಕ ಅರ್ಥಗಳನ್ನೊಳಗೊಂಡ ಕೈಫಿಯತ್ತುಗಳಿಂದ 18 ಹಾಗೂ 19ನೆಯ ಶತಮಾನದ ಕಾಲಘಟ್ಟದಲ್ಲಿ ಭಾರತದಲ್ಲಿ ವಿದೇಶಿ ಆಡಳಿತದ ಬಗೆಗೆ ಜನರಿಗಿದ್ದ ದೂರುಗಳು, ವಿವರಗಳು ಹೇಳಿಕೆಗಳನ್ನು ಸಂಗ್ರಹಿಸುವುದು ಬ್ರಿಟಿಷ್ ಆಡಳಿತದ ತಂತ್ರದ ದೃಷ್ಟಿಯಿಂದ ಮುಖ್ಯವಾಗಿತ್ತು. ಮೆಕೆಂಝಿಯು ಸಂಗ್ರಹಿಸಿದ ವಿವರಗಳಲ್ಲಿ ಮನೋಧರ್ಮ, ಜನಜೀವನ, ಭಾಷೆ,

ಸಾಹಿತ್ಯ, ಜಾತಿರಚನೆ, ಲಲಿತ ಕಲೆಗಳು, ಧಾರ್ಮಿಕ ಜೀವನಕ್ರಮ, ಕಾನೂನು ಕಟ್ಟಳೆಗಳು, ರಾಜಕೀಯ ಸ್ಥಿತಿಗತಿ, ಐತಿಹ್ಯಗಳು, ಪುರಾಣಗಳು, ಪರಂಪರೆಗೆ ಸಂಬಂಧಿಸಿದ ವಿವರಗಳು ಹಾಗೂ ಒಂದು ಪ್ರದೇಶದ ಚಾರಿತ್ರಿಕ ಹಾಗೂ ಭೌಗೋಳಿಕ ವಿವರಗಳನ್ನು ಒಳಗೊಂಡಂತೆ ಅನೇಕ ಉದ್ದೇಶಗಳಿದ್ದುವು. ಒಂದು ನಿರ್ದಿಷ್ಟ ಉದ್ದೇಶದಿಂದ ರಚನೆಗೊಂಡು ಸಂಗ್ರಹವಾದ ಮೆಕೆಂಝಿ ಕೈಫಿಯತ್ತುಗಳಿಗೆ ಇವತ್ತು ಅಧ್ಯಯನದ ಮಹತ್ತ್ವ ಒದಗಿದೆ.

ಐತಿಹಾಸಿಕ ವಿವರಗಳಿಗಾಗಿ ಜನಜೀವನದ ಚಿತ್ರಣಗಳಿಗಾಗಿ, ಭಾಷೆಯ ಸ್ವರೂಪದ ಅಧ್ಯಯನಕ್ಕಾಗಿ ಇತಿಹಾಸದ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ, ಜಾನಪದ ಅಧ್ಯಯನಕ್ಕಾಗಿ ರಾಜಕೀಯ ಇತಿಹಾಸದ ಅಧ್ಯಯನಕ್ಕಾಗಿ ಇತಿಹಾಸದ ಅಧ್ಯಯನಕ್ಕಾಗಿ ಹಲವು ವಿಧಗಳಲ್ಲಿ ಕೈಫಿಯತ್ತುಗಳು ಅಗತ್ಯವಾಗಿವೆ.

ಮೆಕೆಂಝಿ ಸಂಗ್ರಹಿಸಿರುವ ಕೈಫಿಯತ್ತುಗಳಲ್ಲಿ ವಸ್ತು ವಿಷಯಗಳ ಬಗೆಗೆ ಮಾಹಿತಿ ಲಭ್ಯವಿದೆ. ಸ್ಥಳನಾಮಗಳು, ಜಾತಿ ವಿವರಗಳು, ಮಠಗಳ ಹೆಸರುಗಳು, ದೇವಸ್ಥಾನಗಳು, ಅರಸು ಮನೆತನಗಳು, ಅಗ್ರಹಾರಗಳು, ಮಾಗಣೆಗಳು, ಗ್ರಾಮಗಳು, ಧರ್ಮಕ್ಷೇತ್ರಗಳ ಮಹಾತ್ಮೆಯನ್ನು ಬಣ್ಣಿಸುವುವಂತಹವುಗಳು, ಜಾತಿರಿವಾಜುಗಳನ್ನು ಒಳಗೊಂಡಂತಹ ವಿವರಗಳು, ಗುಡ್ಡೆ–ಪರ್ವತ–ಬೆಟ್ಟಗಳ ವಿವರವಿರುವಂತಹವುಗಳು, ನಾನಾರೀತಿಯ ವಸ್ತು ವಿವರಗಳು ಕೈಫಿಯತ್ತುಗಳಲ್ಲಿವೆ.

ಮೆಕೆಂಝಿ ಸಂಗ್ರಹಿಸಿರುವ ಕೈಫಿಯತ್ತುಗಳು ರಚನೆಗೊಂಡ ಕಾಲ–ದೇಶ–ಸ್ಥಳ ಮೊದಲಾದ ಸಂದರ್ಭಗಳ ವಿವರಣೆಯಿದೆ. ಹೆಚ್ಚಿನ ಕೈಫಿಯತ್ತುಗಳ ಆರಂಭದಲ್ಲಿ ಯುಗ, ಸಂವತ್ಸರ, ಇಸವಿ ಹಾಗೂ ತಿಂಗಳು, ದಿನಗಳನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ. ಇವತ್ತು ನಾವು ಯಾವುದನ್ನು ಜಾನಪದ ಅಧ್ಯಯನದಲ್ಲಿ ವೈಜ್ಞಾನಿಕವಾಗಿರಬೇಕೆಂದು ನಿರೀಕ್ಷಿಸುತ್ತೇವೆಯೋ ಆ ಅಂಶಗಳು ಮೆಕೆಂಝಿ ಸಂಗ್ರಹಿಸಿರುವ ಕೈಫಿಯತ್ತುಗಳಲ್ಲಿ ಕಂಡು ಬರುತ್ತವೆ.

ಚಂದ್ರಶೇಖರ ಕುಂಬಾರರ ಪ್ರಕಾರ, "18–19ನೆಯ ಶತಮಾನಗಳ ಮಧ್ಯದಲ್ಲಿ ಕರ್ನಲ್ ಮೆಕೆಂಝಿಯ ಪ್ರಯತ್ನದಿಂದ ಬರೆಯಿಸಲ್ಪಟ್ಟ ಕೈಫಿಯತ್ತುಗಳು ಒಂದರ್ಥದಲ್ಲಿ ಸ್ಥಳ ಪುರಾಣಗಳೆನಿಸಿವೆ. ಪ್ರಾಚೀನ ಕರ್ನಾಟಕದ ಭೌಗೋಳಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಮೊದಲಾದ ಕ್ಷೇತ್ರಗಳ ವಿವರಗಳನ್ನೊದಗಿಸುವ ಇವು ಶಾಸನಗಳು ಅಲಕ್ಷಿಸಿದ್ದ ಅನೇಕ ವಿಷಯಗಳನ್ನು, ಘಟನೆಗಳನ್ನು ನಮ್ಮ ಕಣ್ಣ ಮುಂದೆ ಹಿಡಿಯುತ್ತವೆ. ಅದರಲ್ಲಿಯೂ ವಿಜಯನಗರೋತ್ತರ ಕಾಲೀನ ಸಾಂಸ್ಕೃತಿಕ ಕರ್ನಾಟಕವನ್ನು ಅರ್ಥಮಾಡಿಕೊಳ್ಳಲು ಇವು ನೀಡುವ ಸಹಾಯ ಗಣ್ಯವಾದುದು. ಹೊಸಬಗೆಯ

ಆಕರಸಾಮಗ್ರಿ ಹೊಸ ಇತಿಹಾಸ ಬರೆಯಲು, ಬರೆದ ಇತಿಹಾಸವನ್ನು ವಿಸ್ತರಿಸಲು, ತಿದ್ದಲು, ಖಂಡಿತ ನೆರವಾಗಿತ್ತದೆ. ಕೈಫಿಯತ್ತುಗಳು; ಒಂದು ಅಧ್ಯಯನ ಹೆಸರಿನಲ್ಲಿ ಹತ್ತಾರು ಸ್ವತಂತ್ರ ಕೃತಿಗಳು ಹುಟ್ಟುವಷ್ಟು ವಿಫುಲ ಸಾಮಾಗ್ರಿ ಇಲ್ಲಿದೆ."(1994:5)

1816ರಲ್ಲಿ **ಅಬ್ಬೆ ದುಬೊಯಿಸ್**ನು **ಹಿಂದೂ ಮ್ಯಾನರ್ಸ್ ಕಸ್ಟಮ್ಸ್ ಆ್ಯಂಡ್ ಸೆರೆಮೊನೀಸ್** ಕೃತಿಯನ್ನು ಬರೆದನು. ಪ್ರೆಂಚ್ ದೇಶದಿಂದ ಭಾರತಕ್ಕೆ ಧರ್ಮ ಪ್ರಚಾರಕ್ಕಾಗಿ ಬಂದ ಕ್ರೈಸ್ತ ಪಾದ್ರಿ. ಅಬ್ಬೆದುಬೊಯನು 1800 ರಿಂದ 1820ರ ಅಂತರದಲ್ಲಿ ಶ್ರೀರಂಗಪಟ್ಟಣ ಹಾಗೂ ಹಾಸನ ಪ್ರಾಂತದಲ್ಲಿ ಧರ್ಮಪ್ರಚಾರ ಕಾರ್ಯ ನಡೆಸುತ್ತಿದ್ದನು. ಧರ್ಮಪ್ರಚಾರದ ಜೊತೆಗೆ ಅಲ್ಲಿನ ಜನರ ಅನೇಕ ಸಂಪ್ರದಾಯಗಳು, ಆಚರಣೆಗಳು, ಧಾರ್ಮಿಕ ನಂಬಿಕೆ ನಡಾವಳಿಗಳೇ ಮುಂತಾಗಿ ಅವರ ಸಂಸ್ಕೃತಿಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡನು.

ಶ್ರೀರಂಗಪಟ್ಟಣದಲ್ಲಿ ಪಾಂಡವಪುರದ ಬೆಟ್ಟಗಳನ್ನು ತನ್ನ ನೆಲೆಯನ್ನಾಗಿ ಮಾಡಿಕೊಂಡು ಕ್ರೈಸ್ತಧರ್ಮದ ಪ್ರಸಾರಕ್ಕೆ ತೊಡಗಿದನು. ಹೀಗೆ ನೇರವಾಗಿ ಅಲ್ಲಿನ ಜನಜೀವನವನ್ನು ಅರ್ಥಮಾಡಿಕೊಂಡು ಹಿಂದೂ ಧರ್ಮ ಸಂಸ್ಕೃತಿಗೆ ಸಂಬಂಧಪಟ್ಟ ಕತೆಗಳು, ನಂಬಿಕೆಗಳು, ಸಂಪ್ರದಾಯಗಳು, ರೂಢಿನಿಯಮಗಳನ್ನು, ಪದ್ಧತಿಗಳನ್ನು ಟಿಪ್ಪಣಿ ಮಾಡಿಕೊಂಡನು. ಆತ ಸಂಗ್ರಹಿಸಿದ ಟಿಪ್ಪಣಿಗಳಲ್ಲಿ ಕರ್ನಾಟಕದ ಬ್ರಾಹ್ಮಣ ಸಂಸ್ಕೃತಿಯ ಬಗ್ಗೆಯೇ ಹೆಚ್ಚಿನ ವಿವರಗಳು ದಾಖಲಾಗಿವೆ. ದಾಖಲೆಗಳು 1897ರಲ್ಲಿ ಪುಸ್ತಕ ರೂಪಕದಲ್ಲಿ ಪ್ರಕಟವಾಯಿತು. ನಂತರ ಹಲವು ಬಾರಿ ಮರುಮುದ್ರಣಗೊಂಡಿತು.

ಕೃತಿಯ ಪರಿವಿಡಿಯನ್ನು ಮೂರು ಭಾಗಗಳಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಭಾಗ ಒಂದರಲ್ಲಿ ಭಾರತೀಯ ಸಮಾಜದ ಸಾಮಾನ್ಯ ನೋಟ ಹಾಗೂ ಜಾತಿವ್ಯವಸ್ಥೆಯ ಸಾಮಾನ್ಯ ತೊಡಕುಗಳ ವಿವರಗಳಿವೆ. ಇದರಲ್ಲಿ ಹದಿನಾಲ್ಕು ಒಳ ವಿಭಾಗ ಮಾಡಿಕೊಳ್ಳಲಾಗಿದೆ. ಜಾತಿ ವ್ಯವಸ್ಥೆ, ಜಾತಿಗಳ ವಿಭಾಗೀಕರಣ, ಜಾತಿಯ ವೈಶಿಷ್ಟ್ಯ, ಜಾತಿಗಳ ವಿಭಾಗೀಕರಣದ ಅನುಕೂಲತೆಗಳು, ಜಾತಿಗಳ ಪಾವಿತ್ರ್ಯತೆ, ಕೆಲವರ್ಗದೊಳಗಿನ ಜಾತಿ ತಾರತಮ್ಯ, ಹಿಂದೂಗಳ ಬಡತನ, ಬ್ರಾಹ್ಮಣ ಪೌರಾಣಿಕ ಹಿನ್ನೆಲೆ, ಬ್ರಾಹ್ಮಣರಲ್ಲಿ ವೈವಿಧ್ಯತೆ, ಹಿಂದೂಗಳಲ್ಲಿ ವೈವಿಧ್ಯತೆ, ಹಿಂದೂ ಆರಾಧನೆ (ಗುರು ಆರಾಧನೆ), ಮಂತ್ರೋಚ್ಚಾರಣೆ, ಬ್ರಾಹ್ಮಣ ಹಾಗೂ ಬ್ರಾಹ್ಮಣೇತರ ಜಾತಿಗಳಲ್ಲಿ ಆಚರಣೆಗಳ ನೀತಿ ನಿಯಮ ಕುರಿತ ವಿವರಣೆಗಳಿವೆ.

ಭಾಗ ಎರಡರಲ್ಲಿ ಬ್ರಾಹ್ಮಣೀಕರಣದಲ್ಲಿರುವ 4 ಸ್ತರಗಳನ್ನು ಗುರುತಿಸಲಾಗಿದೆ. ಮೊದಲಲ್ಲಿ ಬ್ರಹ್ಮಚರ್ಯ, ಬ್ರಹ್ಮಚರ್ಯದ ಗುಣಧರ್ಮ, ಆತ್ಮಪಾವಿತ್ರ್ಯತೆಯ ಕುರಿತ ಒಳನೋಟಗಳು, ಬ್ರಾಹ್ಮಣರು ಹಾಗೂ ಇತರ ಹಿಂದೂಗಳಲ್ಲಿ ಮದುವೆ ಆಚರಣೆಗಳು

ಕುರಿತ ಚರ್ಚೆಯಿದೆ. ಎರಡನೆಯದಾಗಿ ಗ್ರಹಸ್ಥ ಬದುಕಿನ ನಿಯಮಗಳ ವಿವರವಿದೆ. ಬ್ರಾಹ್ಮಣ ಗ್ರಹಸ್ಥನು ದಿನನಿತ್ಯದಲ್ಲಿ ಮಾಡಿಕೊಳ್ಳುವ ದೇಹಮಜ್ಜನ (ಎಣ್ಣೆಸ್ನಾನ), ಊಟ–ಉಪಚಾರಗಳು, ನೀತಿಪಾಠಗಳು, ಅರ್ಚನೆಗಳು ಹಲವು ರೀತಿಯ ಕ್ರಿಯಾ ಚಟುವಟಿಕೆಗಳನ್ನು ಟಿಪ್ಪಣಿ ಮಾಡಲಾಗಿದೆ. ಬ್ರಾಹ್ಮಣ ಹೆಂಗಸರು ವಿದ್ಯಾಭ್ಯಾಸ ಪಡೆಯುವುದಕ್ಕೆ ಆಚರಣೆ ಸಮಾರಂಭಗಳಲ್ಲಿ ಭಾಗವಹಿಸುವುದಕ್ಕೂ ನಿಷೇಧವಿತ್ತು. ವಿಧವಾವಿವಾಹ ಬ್ರಾಹ್ಮಣರಲ್ಲಿ ನಿಷೇಧ, ವಿಧವೆಯನ್ನು ಸುಡುವ ಪದ್ಧತಿಯೂ ಪ್ರಚಲಿತದಲ್ಲಿತ್ತು. ಭೂಮಿಯನ್ನು ಹಂಚಿಕೊಳ್ಳುವ ನಿಯಮಗಳೂ ಚಾಲ್ತಿಯಲ್ಲಿತ್ತು. ಬ್ರಾಹ್ಮಣರು ತರ್ಕಶಾಸ್ತ್ರ, ತಂತ್ರಜ್ಞಾನಗಳನ್ನು ಕಲಿಯುತ್ತಿದ್ದರು. ಹಿಂದುಗಳು ಹೇಳುವ ಹಾಡುಗಳು, ಕಥೆಗಳು, ನೀತಿಶ್ಲೋಕಗಳು, ಮರಣೋತ್ತರ ಸಂಸ್ಕಾರ ಕ್ರಿಯೆಗಳನ್ನು ಹಾಗೂ ಬೇರೆ ಬೇರೆ ಸಂದರ್ಭಗಳಲ್ಲಿ ಸಾವಿಗೆ ಸಲ್ಲಿಸುವ ಗೌರವಾರ್ಥ ಕ್ರಮಗಳನ್ನು ವಿವರಿಸಲಾಗಿದೆ.

ಮೂರನೆಯದಾಗಿ ವಾನಪ್ರಸ್ಥ ಬದುಕಿನ ಚಿತ್ರಣ–ಗ್ರಹಸ್ಥರು ಊರುಬಿಟ್ಟು ಕಾಡಿಗೆ ಹೋಗುವ ಸಂದರ್ಭದ ವಿವರವಿದೆ. ಗ್ರೀಸ್ ಹಾಗೂ ಇತರ ತತ್ತ್ವಜ್ಞಾನಿಗಳು ಮುದುಕರಾದಾಗ ಕಂಡುಕೊಳ್ಳುವ ತೀರ್ಮಾನಗಳ ತೌಲನಿಕ ಚರ್ಚೆಯನ್ನು ಹಿಂದೂಗಳ ಬದುಕಿನ ಕ್ರಮಕ್ಕೆ ಹೋಲಿಸಲಾಗಿದೆ. ವಾನಪ್ರಸ್ಥದಲ್ಲಿ ಯಜ್ಞ–ಯಾಗಗಳ ಕುರಿತಂತೆ, ಧರ್ಮದ ಪಾವಿತ್ರ್ಯತೆಯ ಕುರಿತಂತೆ, ಗ್ರಹಸ್ಥ ಕಂಡುಕೊಳ್ಳುವ ತೀರ್ಮಾನಗಳ ವಿವರವಿದೆ. ಯಜ್ಞ ಇದ್ದು–ಇಲ್ಲದೆ ಬದುಕುವ ಕುರಿತೂ ಟಿಪ್ಪಣಿ ಇದೆ. ಬ್ರಾಹ್ಮಣನು ಆತ್ಮ ಪವಿತ್ರ್ಯತೆಯನ್ನು ಕಂಡುಕೊಳ್ಳುವ ಬಗ್ಗೆ ವಿವರವಿದೆ.

ಸನ್ಯಾಸ ಜೀವನದಲ್ಲಿ ಬ್ರಾಹ್ಮಣನೋರ್ವ ಕಂಡುಕೊಳ್ಳುವ ಮುಕ್ತಿಯ ನಿಯಮಗಳ ವಿವರವಿದೆ. ಸನ್ಯಾಸಿಯು ಕರ್ತವ್ಯ ಮಗ್ನನಾಗಿ, ಧ್ಯಾನಮಗ್ನನಾಗಿ ಹೊಂದುವ ಮುಕ್ತಿ ಮಾರ್ಗವನ್ನು ವಿವರಿಸಲಾಗಿದೆ. ಹಿಂದೂ ಸನ್ಯಾಸಿ ಹಾಗೂ ಕ್ರಿಶ್ಚಿಯನ್ ಪಾದ್ರಿಗಳ ಸರಳಜೀವನ ತೌಲನಿಕ ಚರ್ಚೆಯಿದೆ. ಹಾಗೂ ಬ್ರಾಹ್ಮಣ ಸನ್ಯಾಸಿಯ ಅಂತ್ಯಸಂಸ್ಕಾರದ ವಿವರಗಳಿವೆ.

ಭಾಗ ಮೂರರಲ್ಲಿ ಧರ್ಮದ ನಿಯಮ ಟಿಪ್ಪಣಿ ಇದೆ. ತ್ರಿಮೂರ್ತಿ ಹಾಗೂ ನರಕದ ಬಗ್ಗೆ ಚರ್ಚಿಸಲಾಗಿದೆ. ಹೊಸವರ್ಷದ ಆಚರಣೆ, ಹಿಂದೂ ದೇವಸ್ಥಾನಗಳ ರಚನೆ, ದೇವಸ್ಥಾನಗಳಲ್ಲಿ ಆಗುವ ಆಚರಣೆ, ಹಿಂದೂ ದೇವರುಗಳಲ್ಲಿರುವ ವೈವಿಧ್ಯತೆ, ಪ್ರಾಣಿ ಆರಾಧನೆ ಹಾಗೂ ವಸ್ತುಗಳ ಆರಾಧನೆಯ ಬಗೆಗೆ ವಿವರವಾದ ಚರ್ಚೆಯಿದೆ.

ಹಿಂದೂಧರ್ಮದ ಸಾಮ್ರಾಜ್ಯ ಆಡಳಿತದ ಕುರಿತಂತೆ ನಿಯಮಗಳು, ಕಾನೂನುಗಳಿದ್ದವು. ಅಪರಾಧಿಯೊಬ್ಬನಿಗೆ ಕೊಡುವ ಶಿಕ್ಷೆ ಹಾಗೂ ಶಿಕ್ಷೆಯ ವಿವಿಧ

ಹಂತಗಳು ಹಾಗೂ ಆ ಮೂಲಕ ಕಂಡುಕೊಳ್ಳುವ ತೀರ್ಮಾನಗಳನ್ನು ಕೊಡಲಾಗಿದೆ. ನ್ಯಾಯ ತೀರ್ಮಾನಗಳು ಯುರೋಪಿಯನ್ ಮಾದರಿಯ ಕಾನೂನುಗಳಿಗೆ ಅಪವಾಧವಾಗಿತ್ತು. ಹಿಂದೂಗಳು ಪ್ರಾಚೀನ ಹಾಗೂ ಯುದ್ಧ ಕ್ರಮಗಳನ್ನು ಬಳಕೆಯಲ್ಲಿಟ್ಟುಕೊಂಡಿದ್ದರು ಎಂಬ ಸುಳಿವು ಸಿಗುತ್ತದೆ.

ಅಪೆಂಡಿಕ್ಸ್ ಭಾಗದಲ್ಲಿ ಜೈನ ಹಾಗೂ ಬ್ರಾಹ್ಮಣ ನಡುವಿನ ಧರ್ಮದ ವ್ಯತ್ಯಾಸ, ಏಕಾದಶಿ, ಶಿವರಾತ್ರಿ, ಹಾಗೂ ಪ್ರಖ್ಯಾತ ಜಗನ್ನಾಥ ದೇವಾಲಯದ ಮೂಲದ ಬಗ್ಗೆ ಟಿಪ್ಪಣಿಯಿದೆ.

ಗ್ರಂಥದ ಎರಡನೇ ಭಾಗದಲ್ಲಿ ಹಿಂದೂ ನೀತಿಕತೆಗಳು ಹಾಗೂ ಹಿಂದೂ ಕತೆಗಳು ಎಂಬ ಎರಡು ಒಳ ವಿಭಾಗಗಳಿವೆ. ಟಿಪ್ಪಣಿ ಮಾಡಲಾದ ನೀತಿಕತೆಗಳು ಪ್ರಾಣಿಸಂಬಂಧಿ ಕತೆಗಳು ಪಂಚತಂತ್ರದಲ್ಲಿ ಆಗಲೇ ಪ್ರಕಟಗೊಂಡಿತ್ತು. ಒಂದು ಹುಲಿ ಮತ್ತು ಎತ್ತಿನ ಕತೆ, ನರಿಯಕತೆ, ಕಾಗೆ ಮತ್ತು ನರಿ ಕತೆ, ರಾಜ–ಆನೆ ಮತ್ತು ಬ್ರಾಹ್ಮಣ ಕತೆ, ಆನೆ ಮತ್ತು ಇಲಿಯ ಕತೆ, ಕಾಗೆ ಮತ್ತು ಕಪ್ಪೆ ಕತೆ. ಕಾಗೆ–ಹಾವು–ಬ್ರಾಹ್ಮಣ ಮತ್ತು ಕಪ್ಪೆ–ಬ್ರಾಹ್ಮಣ – ಮೊಸಳೆ–ಮರ ದನ ಹಾಗೂ ನರಿ ಕತೆ – ಹೀಗೆ ಹತ್ತು ನೀತಿ ಕತೆಗಳಿವೆ. ಹಿಂದೂ ಕತೆಗಳು ಎಂಬ ಭಾಗದಲ್ಲಿ ನಾಲ್ವರು ಕಳ್ಳರು, ನಾಲ್ವರು ಹುಚ್ಚು ಬ್ರಾಹ್ಮಣರು, ಬ್ರಾಹ್ಮಣ ಮತ್ತು ಬಟ್ಟೆ, ಬ್ರಾಹ್ಮಣ ಮತ್ತು ಕ್ಷೌರಿಕ, ಮದುವೆ ಜೋಡಿಯ ಪಂಥ ಇಂತಹ ಮನುಷ್ಯ ಸಂಬಂಧಿ ಕತೆಗಳಿವೆ.

ಹಿಂದೂಗಳ ಬಗ್ಗೆ ಟಿಪ್ಪಣಿ ಮಾಡಿದ ಕತೆಗಳು, ನೀತಿಕತೆಗಳು ಒಂದು ಘಟನೆಯ ಹಿನ್ನೆಲೆಯಲ್ಲಿ ಆದಂತೆ ತೋರುತ್ತದೆ. ಹಿಂದೂ ಧರ್ಮವನ್ನು ಅದರಲ್ಲೂ ಬ್ರಾಹ್ಮಣರನ್ನು ಲೇವಡಿ ಮಾಡುವುದು ದುಬೋಯಿಸ್‌ನ ಉದ್ದೇಶವಾಗಿರಬೇಕೆಂದು ತೋರುತ್ತದೆ. ಬ್ರಾಹ್ಮಣ ಜಾತಿ ಸಂಬಂಧಿ ಆಚರಣೆ, ಆರಾಧನೆ, ಕ್ರಿಯಾಕರ್ಮ ಆಚಾರ ವಿಚಾರಗಳನ್ನು ಮಾತ್ರ ದಾಖಲಿಸಲಾಗಿದೆ. ತುಳಸಿಪೂಜೆ, ಪೂರ್ವಜರ ಆರಾಧನೆ, ಪುನರ್ಜನ್ಮದ ನಂಬಿಕೆ, ಹಬ್ಬ–ಹರಿದಿನ ಆಚರಣೆ ನಿಯಮ ಪ್ರಕಾರದಲ್ಲಿ ನಡೆಯುವುದಕ್ಕೆ ಬೇರೆ ನಿದರ್ಶನಗಳನ್ನು ಕಂಡುಕೊಳ್ಳುವುದು ಅಸಾಧ್ಯ.

1915ರಲ್ಲಿ ನಂದೊಳ್ಗೆ **ಅಮುಣಿಂಜೆ ಗುತ್ತು ಶೀನಪ್ಪ ಹೆಗ್ಡೆ** ಬರೆದ **'ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆ ಹಾಗೂ ಭೂತಾಳ ಪಾಂಡ್ಯರಾಯನ ಅಳಿಯಕಟ್ಟು'** ಕೃತಿ ಪ್ರಕಟವಾಗಿದ್ದು, 1981ರಲ್ಲಿ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಿಂದ ದ್ವಿತೀಯ ಮುದ್ರಣಗೊಂಡಿತು. ಕೆ.ವಿ. ರಮೇಶ ಪ್ರಕಾರ "ದಿ. ಶೀನಪ್ಪ ಹೆಗ್ಡೆಯವರು ತಮ್ಮ ಗ್ರಂಥ ರಚನೆಗೆಂದು ಶಾಸನಗಳಂತಹ ಐತಿಹಾಸಿಕ ಸಾಮಾಗ್ರಿಗಳನ್ನೂ, ಗ್ರಾಮ ಪದ್ಧತಿ, ಪಾಡ್ದನ,

ಸ್ಥಳ–ಪುರಾಣ ಮುಂತಾದ ಅನ್ಯೈತಿಹಾಸಿಕ ಪುರಾವೆಗಳನ್ನೂ ಅಂದಿನ ಹಿರಿಯ ವ್ಯಕ್ತಿಗಳ ಜ್ಞಾನ ಭಂಡಾರವನ್ನೂ ಬಳಸಿರುವರು." (1981:4) ಇತಿಹಾಸ ರಚನೆಗೆ ಜನಪದ ವಿವರಗಳು ಹೇಗೆ ಮಹತ್ವಪೂರ್ಣವೆಂಬುದನ್ನು ಕೆ.ವಿ. ರಮೇಶ್ ಮುನ್ನುಡಿಯಲ್ಲಿ ಹೇಳಿದ್ದಾರೆ. "ನಮ್ಮ ದೇಶದ ಒಂದು ಪ್ರಾಂತದ ಅಥವಾ ಅರಸುಮನೆತನದ ಇತಿಹಾಸವನ್ನೋ, ಒಬ್ಬ ರಾಜನ ಜೀವನ ಚರಿತ್ರೆಯನ್ನೋ ಬರೆದಿಟ್ಟು ಹೋಗಿರುವರಾದರೂ, ಅಂತಹ ಕೃತಿಗಳಲ್ಲಿ ಉತ್ಪ್ರೇಕ್ಷೆ, ಅಲಂಕಾರ, ಅತ್ಯುಕ್ತಿ, ಅತಿವ್ಯಾಪ್ತಿಯೇ ಮೊದಲಾದ ಅನ್ಯೈತಿಹಾಸಿಕ ಕಾವ್ಯಗುಣಗಳದ್ದೇ ಮೇಲುಗೈ ಆಗಿದ್ದು, ಜೊತೆಗೆ ನಡೆದಿರಬಹುದಾದ ಘಟನೆಗಳನ್ನು ಉದ್ಧರಿಸುವಲ್ಲಿ ಕಾಲಜ್ಞಾನದ ಕೊರತೆಯೂ ಸಾಕಷ್ಟು ಇದೆ. ಅತಿ ಹಿಂದೆಯೇ ರಚನೆಗೊಂಡ ಪುರಾಣಗಳಲ್ಲೂ ಅನಂತರದ ಶತಮಾನಗಳ ಅವಧಿಯಲ್ಲಿ ಅಲ್ಲಲ್ಲಿ ಹುಟ್ಟಿಕೊಂಡ ಸ್ಥಳ ಪುರಾಣಗಳಲ್ಲೂ, ಜಾನಪದ ಕೃತಿಗಳಲ್ಲೂ ಇದೇ ರೀತಿಯ ಕಾಲಾನುಕ್ರಮರಹಿತ ಇತಿಹಾಸಗಳು ಸೇರಿಕೊಂಡಿವೆ. ಭಾರತವನ್ನು ಕುರಿತ ಐತಿಹಾಸಿಕ ಸಂಶೋಧನೆಗಳಲ್ಲಿ ತೊಡಗಿದ ಪಾಶ್ಚಾತ್ಯ ವಿದ್ವಾಂಸರೂ ಅವರ ಭಾರತೀಯ ಅನುಯಾಯಿಗಳು, ಇಂತಹ ಪುರಾಣ, ಸ್ಥಳ ಪುರಾಣ ಹಾಗೂ ಐತಿಹ್ಯಗಳನ್ನು ಕೇವಲ ಕಟ್ಟುಕತೆಗಳೆಂದು ಕಡೆಗಣಿಸಿದ್ದರು. ಕಾರಣ ಅಂದಿನ ಇತಿಹಾಸ ರಚನೆಯಲ್ಲಿ ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ ಘಟನೆಗಳ ಕಾಲಾನುಕ್ರಮ ವಿವರಣೆಗೇ ಪ್ರಾಧಾನ್ಯ ನೀಡಲಾಗಿತ್ತು. ಆದರೆ ಇಂದಿನ ಇತಿಹಾಸ ರಚನೆಯಲ್ಲಿ ರಾಜಕೀಯ ಇತಿಹಾಸದ ಜೊತೆಗೆ ಅಷ್ಟೇ ಪ್ರಮಾಣದಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಇತಿಹಾಸಗಳಿಗೂ ಪ್ರಾಧಾನ್ಯ ನೀಡಲಾಗಿರುವ ಕಾರಣ ಪೂರ್ತಿ ಐತಿಹಾಸಿಕವಲ್ಲದ ಪರಂಪರಾಗತ ಸಾಮಾಗ್ರಿಗಳನ್ನು ಜಾಗರೂಕತೆ ವಹಿಸಿ ಅಳವಡಿಕೊಳ್ಳುವುದು ವಾಡಿಕೆಗೆ ಬಂದಿದೆ. ಇದರಿಂದಾಗಿ ಇಂದಿನ ಇತಿಹಾಸಕಾರನ ದೃಷ್ಟಿಯಲ್ಲಿ ಪುರಾಣಗಳೂ ಸ್ಥಳ ಪುರಾಣಗಳೂ, ಗ್ರಾಮ ಪದ್ಧತಿಯಂತಹ ಪರಂಪರಾಗತ ಉಲ್ಲೇಖಗಳೂ ಪಾಡ್ದನದಂತಹ ಜಾನಪದ ಕೃತಿಗಳೂ ಹೊಸ ರೂಪ ತಾಳಿವೆ." (1981:3–4)

ಗ್ರಂಥದ ಪ್ರಸ್ತುತತೆ ಬಗ್ಗೆ ಮಾತನಾಡುತ್ತಾ, "ತುಳುನಾಡು ಸಮುದ್ರ ತೀರದ ಒಂದು ಪ್ರಾಂತವಾದರೂ ಅಲ್ಲಿ ದೊರೆತಿರುವ ನೂರಾರು ಶಾಸನಗಳಿಮ್ದ ಸಾಗರವು ತುಳುವರ ದೈನಂದಿನ ಜೀವನದಲ್ಲಿ ಯಾವ ರೀತಿಯ ಹಾಗೂ ಯಾವ ಪ್ರಮಾಣದ ಪ್ರಭಾವ ಬೀರಿತ್ತೇಂಬ ಬಗೆಗೆ ಹೆಚ್ಚೇನೂ ತಿಳಿದು ಬರುವುದಿಲ್ಲ. ಆದರೆ ಹೆಗ್ಡೆಯವರ ಗ್ರಂಥವನ್ನು ಓದಿದವರಿಗೂ ತುಳುವನಿಗೂ ಪಶ್ಚಿಮ ಸಮುದ್ರಕ್ಕೂ ಅತ್ಯಂತ ನಿಕಟ ಸಂಪರ್ಕವಿದ್ದು ಬಂದಿರುವುದು ಅರಿವಾಗದಿರದು. ಇದೇ ರೀತಿ ಸ್ಥಳನಾಮಗಳ ಬಗೆಗೂ ಗ್ರಂಥದ ಅಧ್ಯಯನದ ಮೂಲಕ ಅತ್ಯಂತ ಉಪಯುಕ್ತವಾದ ಮಾಹಿತಿಗಳು ದೊರೆಯುತ್ತವೆ. ಭೂತಾಳಪಾಂಡ್ಯರಾಯನು ಜಾರಿಗೆ ತಂದನೆಂಬ ಐತಿಹ್ಯದ ಕಟ್ಟುಕಟ್ಟಳೆಗಳೂ ತುಳುನಾಡಿನ

ಜನಜೀವನದ ಒಂದು ಮುಖ್ಯ ಅಂಶದ ಮೇಲೆ ಹೊಸಬೆಳಕು ಬೀರುವಂತಹುದು. ಒಟ್ಟಿನಲ್ಲಿ ಹೇಳುವುದಾದರೆ ಹೆಗ್ಡೆಯವರ ಗ್ರಂಥವನ್ನು ಓದುವುದರ ಮೂಲಕ ದೃಢವಾಗುವ ಒಂದಂಶವೆಂದರೆ ಬಳಸಿದ ಸ್ಥಳಿಕ ಐತಿಹ್ಯಗಳನ್ನೂ ಪುರಾವೆಗಳನ್ನೂ ನಾವಿಂದು ಬಳಕೆಯಲ್ಲಿರುವ ಇತಿಹಾಸ ರಚನಾ ಕ್ರಮಕ್ಕನುಗುಣವಾಗಿ ವೈಜ್ಞಾನಿಕವಾಗಿ ಅಧ್ಯಯನ ಮಾಡಿದಲ್ಲಿ ತುಳುನಾಡಿನ ಇತಿಹಾಸವನ್ನು ಕುರಿತ ಇನ್ನೂ ಹೆಚ್ಚಿನ ನಂಬಲರ್ಹವಾದ ವಿವರಗಳು ಖಂಡಿತ ಬೆಳಕಿಗೆ ಬಂದವು." (1981:5)

ವಿಷಯದ ಅನುಕ್ರಮಣಿಕೆ ಮಾಡುವಾಗ ಎರಡು ಭಾಗ ಮಾಡಲಾಗಿದೆ. 1. ಪೂರ್ವಭಾಗ, 2. ಉತ್ತರ ಭಾಗ. ಎರಡು ಭಾಗಗಳಲ್ಲಿ ಅನೇಕ ಒಳವಿಭಾಗಗಳಿವೆ. ಪೂರ್ವಭಾಗದಲ್ಲಿ 14 ಅಧ್ಯಾಯಗಳಿದ್ದು, 26 ಶೀರ್ಷಿಕೆಗಳಲ್ಲಿ ವಿಷಯ ವಿವರಣೆಯಿದೆ. ಪುರ್ವಭಾಗದಲ್ಲಿ ಬರುವ ವಿವರಗಳು ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆಯನ್ನು ಒಳಗೊಂಡಿದೆ. ಉತ್ತರಭಾಗದಲ್ಲಿ 12 ಅಧ್ಯಾಯಗಳಿದ್ದು 42 ಶೀರ್ಷಿಕೆಗಳಲ್ಲಿ ವಿವರಿಸಲಾಗಿದೆ. ಒಂದರಿಂದ ಎಂಟರವರೆಗಿನ ಅಧ್ಯಾಯಗಳು ಭೂತಾಳಪಾಂಡ್ಯನ ಕತೆಯನ್ನು ಕುರಿತಾಗಿದೆ. ಉಳಿದ ಅಧ್ಯಾಯಗಳು ಇತಿಹಾಸದ ವಿವರಗಳನ್ನು ಒಳಗೊಂಡಿದೆ. ಭೂತಗಳ ಚರಿತ್ರೆ ಇವರ, ಸ್ಥಳಪುರಾಣಗಳು, ದಕ್ಷಿಣಕನ್ನಡ ಜಿಲ್ಲೆಗೆ ಸಂಬಂಧಿಸಿದ ಶಿಲಾಶಾಸನಗಳು, ದಕ್ಷಿಣಕನ್ನಡ ಜಿಲ್ಲೆಯ ಪ್ರಸಿದ್ಧ ದೇವಸ್ಥಾನಗಳು ಹಾಗೂ 14–15ನೆಯ ಶತಮಾನದ ರಾಜವಂಶಗಳ ಕಾಲ–ದೇಶವನ್ನು ವಿವರಿಸಲಾಗಿದೆ.

ಎಲ್ಲಾ ಅಧ್ಯಾಯಗಳ ಕೊನೆಯಲ್ಲಿ ಮಂಗಳ ಹಾಡಿದೆ. "ಎಂಬಲ್ಲಿಗೆ ಶ್ರೀನಿವಾಸ ಸಂಗ್ರಹಿಸಿದ ಘೋರಾಷ್ಟ್ರ ಚರಿತ್ರೆಯ–ಅಧ್ಯಾಯ ಸಂಪೂರ್ಣಂ... ಮಂಗಳಂ ಮಹಾ ಶ್ರೀಶ್ರೀಶ್ರೀ" ವಿವರವಿದೆ. ಎಲ್ಲಾ ಅಧ್ಯಾಯಗಳ ಪ್ರಾರಂಭದ ಮೊದಲ ಮಾತು ಶ್ರೀರಾಜರಾಜೇಶ್ವರ್ಯೈ ನಮಃ, ಶ್ರೀದುರ್ಗಾಪರಮೇಶ್ವರ್ಯೆ ನಮಃ, ಶ್ರೀ ಭದ್ರಮಹಾಕಾಳೈನಮಃ, ಶ್ರೀಹೀಂಕಾರಿಯೇ ನಮಃ, ಶ್ರೀಓಂಕಾರರೂಪಿಣ್ಯೈನಮಃ, ಶ್ರೀ ಮಾಹಾಮಯ್ಯೆ ನಮಃ, ಶ್ರೀಶ್ರೀಂಕಿಲಾಕಾರ್ಯೆ ನಮಃ, ಶ್ರೀವೆಂಕಿಲಾ ಮಾನಿನಿಯ್ಯೆನಮಃ, ಶ್ರೀಗೀರ್ವಾಣ ಪೂತ್ಯೆ ನಮಃ, ಶ್ರೀಮನೋಂಬುಜ ಹಂಸ್ಯೆ ನಮಃ, ಶ್ರೀವಿಶ್ವಾತ್ಮಕ್ಕೆ ನಮಃ, ಶ್ರೀ ಸರ್ವ ಮಂಗಳೈನಮಃ, ಶ್ರೀಪಿಂಡಾಂಡ ಮಾಯ್ಯೆ ನಮಃ, ಶ್ರೀಫಣಿಕುಂಡಲೈ ನಮಃ, ಶ್ರೀ ತ್ರಿಪುರ ವಿಜಯ್ಯೆ ನಮಃ, ಶ್ರೀ ಅನ್ನಪೂರ್ಣೇಶ್ವರ್ಯೆ ನಮಃ, ಶ್ರೀಹೌಮಾವತ್ಯೆ ನಮಃ, ಶ್ರೀಪರ ಬ್ರಹ್ಮೈ ನಮಃ, ಶ್ರೀ ಭವಾನಿಯ್ಯೆ ನಮಃ, ಶ್ರೀ ಚಂಡೀಶ್ವರ್ಯೆ ನಮಃ, ಶ್ರೀಜಗನ್ಮಾತೆಯ್ಯೆ ನಮಃ, ಶ್ರೀವಿದ್ಯಾಂಗಿಯ್ಯೆ ನಮಃ, ಶ್ರೀ ಮಹೇಶ್ವರ್ಯೆ ನಮಃ. ಅಧ್ಯಾಯಗಳ ಪ್ರಾರಂಭ ಹಾಗೂ ಕೊನೆಯಲ್ಲಿ ಬರುವ ಉಲ್ಲೇಖಗಳು ಲೇಖಕರ ಸಾಂಸ್ಕೃತಿಕ ಚೌಕಟ್ಟನ್ನು ಹೇಳುತ್ತದೆ. ಹಾಗೂ ಶಾಸ್ತ್ರಗ್ರಂಥದಲ್ಲಿ ಇದೇ ರೀತಿಯ ನಿರೂಪಣೆಯನ್ನು

ಕಾಣಬಹುದು. 1981ರಲ್ಲಿ ಕೃತಿಯು ದ್ವಿತೀಯ ಮುದ್ರಣವಾದಾಗ –'ಬ್ರಿಟಿಷ್ ಅರಸರ ಜೀವನ' ಎಂಬ ಭಾಗವನ್ನು ಬಿಡಲಾಗಿದೆ.

ಪೊಳಲಿ ಬಾಲಕೃಷ್ಣ ಶೆಟ್ಟಿ ಪ್ರಕಾರ, "ಇದನ್ನು ಬರೆಯುಲು ಜಿಲ್ಲೆಯ ಮೂಲೆಮೂಲೆಗಳನ್ನು ಸುತ್ತಿದರು. ನೂರಾರು ಗುತ್ತು, ಬಾವ, ಬೀಡು, ಚಾವಡಿಗಳಿಗೆ ಹೋದರು. ಹಿರಿಯುರೊಂದಿಗೆ ಚರ್ಚಿಸಿದರು. ಕೊಪ್ಪ, ಬೊಟ್ಟು, ಓಣಿ, ಒಂಕುರ್ಗಗಳಲ್ಲಿದ್ದವರಲ್ಲೂ ಮಾತನಾಡಿ ಅನುಭವ ಸಂಗ್ರಹಿಸಿದರು." (1981:9)

ಶೀನಪ್ಪ ಹೆಗ್ಡೆ ಪ್ರಕಾರ, "ಪ್ರತಿಯೊಂದು ಶುಭಕಾರ್ಯಗಳಲ್ಲಿಯೂ ಭೂತಾಳಪಾಂಡ್ಯ ಕಟ್ಟಿನ ವಿವಾದಗಳು ನಡೆಯುತ್ತಿದ್ದುವು. ಆಗ್ಯೆ ಕಟ್ಟು ಯಾವದು, ಅದರ ವಿವರವೇನು ಎಂದು ಬಲ್ಲವರೊಡನೆ ಕೇಳಲು, ಅದಕ್ಕೆ ಕೆಲವರು ಇದು ಅಳಿಯಸಂತಾನದ ಕಟ್ಟು, ಇದರ ವಿವರಗಳು ಬಾರ್ಕೂರಲ್ಲೆ ಉಂಟಂತೆ ಎಂದು ಹೇಳಿದರಲ್ಲದೆ ಪೂರ್ಣಾಭಿಪ್ರಾಯಗಳನ್ನು ಯಾರೊಬ್ಬರೂ ತಿಳಿಸಿಲ್ಲ. ಆದ್ದರಿಂದ ಅದನ್ನು ಪೂರ್ಣ ತಿಳಕೊಳ್ಳಬೇಕೆಂಬ ಅನುಮತಿ ಪಡೆದು ಸೀದಾ ಬಾರ್ಕೂರಿಗೆ ಹೋದೆನು. ಅಲ್ಲಿಯ ಮಾನ್ಯಗ್ರಹಸ್ಥರು ತಕ್ಕಮಟ್ಟಿಗೆ ಸಹಾಯ ಮಾಡಿದರು. ಬಾರ್ಕೂರು ಪಂಚಲಿಂಗೇಶ್ವರ ದೇವಸ್ಥಾನದ ಮೊಕ್ತೇಸರರಾಗಿಯೂ ಹವೀಕ ಮತ ಸ್ಥಾಪನಾ ಕಮಿಟೆ ಮೆಂಬರಾಗಿಯೂ ಇರುವ ಮ.ರಾ.ರಾ. ಕೋಟೆಗೇರಿ ಸುಬ್ರಾಯ ಜ್ಯೊಸರವರು ಹಿಂದಿನ ಸ್ಥಳ ಪುರಾಣಗಳ ಅನುಭವಗಳನ್ನೂ ಭೂತಾಳಪಾಂಡ್ಯನ ಚರಿತ್ರೆಯೆಂಬ 13 ಅಧ್ಯಾಯಗಳಿರುವ ಸಂಸ್ಕೃತ ಗ್ರಂಥದ ವಿಷಯವನ್ನು ನನಗೆ ವಿವರವಾಗಿ ತಿಳಿಸಿದರು. ಅನಂತರ ಅಲ್ಲಿಂದ ಹೊರಟು ಬ್ರಹ್ಮಾವರ, ಸುರಾಲು, ಹೆಬ್ರಿ, ಪೆರ್ಡೂರು, ಹಿರಿಯಡ್ಕ, ಕಾರ್ಕಳ ಮೂಡಬಿದ್ರಿ, ವೇಣೂರು ಮೊದಲಾದ ಸ್ಥಳಗಳಿಗೆ ಹೋಗಿ ಸಾಕಷ್ಟು ಸಿಕ್ಕಿದಷ್ಟು ಅನುಭವಗಳನ್ನೂ ಶಾಸನಗಳ ನಕಲುಗಳನ್ನೂ ಸಂಗ್ರಹಿಸಿದೆನು. ಆಮೇಲೆ ಪುತ್ತೂರು ಅತ್ತಕಡೆ ಹೋಗಿ ಅಲ್ಲೇ ಕೆಮ್ಮಿಂಜೆ ಪಟೇಲರಾದ ಮ.ರಾ.ರಾ.ಕೆ. ಶೇಷಪ್ಪಯ್ಯನವರು ತಮ್ಮಲ್ಲಿದ್ದ 'ಗ್ರಾಮಪದ್ಧತಿ' ಎಂಬ ಪುಸ್ತಕದ ಅನುಭವಗಳನ್ನು ಕೊಟ್ಟರು. ಅಲ್ಲಿಂದ ವಿಟ್ಲ, ಕಾಸರಗೋಡು, ಮಂಜೇಶ್ವರ ಮೊದಲಾದ ಸ್ಥಳಗಳಿಗೆ ಹೋಗಿ ಅಲ್ಲಿಯ ಮಹಾನುಭಾವದಿಂದ ಸಿಕ್ಕಿದಷ್ಟು ಅನುಭವಗಳನ್ನೂ ಶಾಸನಗಳನ್ನೂ ಪಡೆಕೊಂಡನು. ಮಿತ್ತೊಟ್ಟು ವೆಂಕಣ್ಣ ಶೆಟ್ರಲ್ಲೆ ರಾಜವಂಶಾವಳಿ ಎಂಬ ಹಳೇ ಪುಸ್ತಕವೂ ಪಳ್ಳಿ ಸುಬ್ರಮಣ್ಣಾಚಾರ್ಯರ ಬಾಬ್ತು ಒಂದು ಪ್ರತಿಯೂ ನನಗೆ ಸಿಕ್ಕಿತು. ಪುಸ್ತಕಗಳ ಸಹಾಯದಿಂದ ನನಗೆ ಬರೆಯಲು ಅನುಕೂಲವಾಯಿತು. ನಾನು ಪುಸ್ತಕವನ್ನು ಭಾಷಾಭಿಮಾನಕ್ಕಾಗಲೀ ಗ್ರಂಥಲಂಕಾರಕ್ಕಾಗಲೀ ಬರೆದುದಲ್ಲ. ನನಗೆ ಸಿಕ್ಕಿದ ಹಲವು ಸಂಗ್ರಹಗಳ ಅನುಭವವನ್ನು ಜನಸಾಮಾನ್ಯರಿಗೆ ತಿಳಿಸುವುದಕ್ಕೆ ಮಾತ್ರ ಬರೆದಿದ್ದೇನೆ." (1981:13–14)

ಭೂತಾಳ ಪಾಂಡ್ಯನ ಕತೆಯು 12 ಅಧ್ಯಾಯಗಳಿರುವ ಸಂಸ್ಕೃತ ಗ್ರಂಥವಾಗಿತ್ತು. ಮ.ರಾ.ರಾ. ಕೋಟೆಗೇರಿ ಸುಬ್ರಾಯ ಜೊಸರವರು ಹಿಂದಿನ ಸ್ಥಳಪುರಾಣಗಳ ಅನುಭವವನ್ನು ಹೇಳುವಾಗ ಸಂಸ್ಕೃತ ಗ್ರಂಥವನ್ನು ಆಧರಿಸಿ ಭೂತಾಳ ಪಾಂಡ್ಯನ ಕತೆಯನ್ನು ಹೇಳಿದರೆಂದು ಸಂಗ್ರಾಹಕರು ಹೇಳಿಕೊಂಡಿದ್ದಾರೆ. ಗ್ರಂಥ ಶಿಷ್ಟಸಾಹಿತ್ಯವನ್ನು ಓದಿಕೊಂಡು ಹೇಳಿದ ಕಥಾ ನಿರೂಪಣೆಯೋ ಮೂಲಕಥೆ ಸಂಸ್ಕೃತದಲ್ಲಿದ್ದರೂ ದಕ್ಷಿಣಕನ್ನಡದ ಜನರು ಆಗಾಗ ನೆನೆಪಿಸುವ, ಹೇಳುವ ಕತೆಯಾಗಿದೆ. ಬೇರೆಬೇರೆ ಉಪ–ವರ್ಗಗಳನ್ನೊಳಗೊಂಡ ಒಂದು ಇಡೀ ಕಥೆಯಾಗಿದೆ. ಐತಿಹ್ಯಗಳ ಬಗೆಗೆ ದಕ್ಷಿಣಕನ್ನಡದ ಭೂತಗಳ ಬಗೆಗೆ, ಸ್ಥಳನಾಮಗಳ ಬಗ್ಗೆ ಹಲವು ಒಳನೋಟಗಳನ್ನು ಕೊಡುವ, ಇತಿಹಾಸ ಅಧ್ಯಯನಕಾರರಿಗೆ, ಜಾನಪದ ವಿವರಗಳನ್ನು ಆಧರಿಸಿ ದಕ್ಷಿಣಕನ್ನಡದ ಇತಿಹಾಸವನ್ನು ಬರೆಯುವವರಿಗೆ ಉಪಯುಕ್ತ ಕೃತಿ.

1924ರಲ್ಲಿ **ನಡಕೇರಿಯಂಡ ಚಿಣ್ಣಪ್ಪನವರ 'ಪಟ್ಟೋಲೆ ಪಳಮೆ'** ಗ್ರಂಥ ಪ್ರಕಟವಾಗಿ 50 ವರ್ಷಗಳ ನಂತರದಲ್ಲಿ ಓದುಗರಿಗೆ, ಅಧ್ಯಯನಕಾರರಿಗೆ 1975ರಲ್ಲಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯು ಪುನರ್ ಮುದ್ರಿಸಿ ಲಭ್ಯವಾಯಿತು.[47] "ಕೊಡಗಿನ ಜಾನಪದಕ್ಕೆ ಸಂಬಂಧಿಸಿದಂತೆ 1924ರ ವೇಳೆಗೇ ಪ್ರಕಟವಾಗಿದ್ದ 'ಪಟ್ಟೋಲೆ ಪಳಮೆ' ಸಂಶೋಧಕರ ಆಸಕ್ತಿಯನ್ನು ಇತ್ತೀಚೆಗೆ ಸೆಳೆದಿದೆ. ಕಳೆದ ಶತಮಾನದಲ್ಲಿ, ಶತಮಾನದ ಆದಿಭಾಗದಲ್ಲಿ ಕರ್ನಾಟಕದಲ್ಲಿ ಜಾನಪದ ಸಂಗ್ರಹಕಾರ್ಯ ಅಷ್ಟಿಷ್ಟು ನಡೆದಿದ್ದರೂ ಹೆಚ್ಚು ಸಾಹಿತ್ಯ ಇಂಗ್ಲಿಷಿನ ಮೂಲಕವೇ ನಮಗೆ ಪರಿಚಯವಾಗಬೇಕಿತ್ತು. ಗೋವರ ಹಾಗೂ ಫ್ಲೀಟ್ ಬೆಳಕಿಗೆ ತಂದ ಜನಪದಗೀತೆ, ಲಾವಣಿಗಳು ಬಗೆಯವು. ಲಾವಣಿಗಳ ಕನ್ನಡ ರೂಪಗಳನ್ನು ಇಂಗ್ಲಿಷ್ ಲಿಪಿಯಲ್ಲಿ ಫ್ಲೀಟ್ ನೀಡಿದ್ದರೂ ಸ್ವತಂತ್ರ ಸಂಕಲನವೊಂದರಲ್ಲಿ ಅವು ಲಭ್ಯವಾಗಲಿಲ್ಲ. ಮುಂದೆ 1894ರ ವೇಳೆಗೆ ಕಿಟ್ಟೆಲ್ ಕೋಶದ ಗಾದೆಗಳು ನಮ್ಮ ಗಮನವನ್ನು ಸೆಳೆದುಕೊಳ್ಳುತ್ತವೆ. ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಬಾಸೆಲ್ ಮಿಶನ್ ಪ್ರೆಸ್ಸಿನವರು ಹೊರತಂದ ಎರಡು ಗಾದೆಗಳ ಸಂಕಲನವೂ ಅಷ್ಟೇನೂ ಪ್ರಮುಖವಾದುದಲ್ಲ. ಹೀಗೆ ಅಲ್ಲೊಮ್ಮೆ ಇಲ್ಲೊಮ್ಮೆ ಕಾಣಿಸಿಕೊಳ್ಳುತ್ತಿದ್ದ ಸಣ್ಣ ಪ್ರಯತ್ನಗಳನ್ನು ಬಿಟ್ಟರೆ ವಿವರವಾದ ಅಧ್ಯಯನ 1934ರ ವರೆಗೆ ಎಲ್ಲಿಯೂ ಕಾಣುವುದಿಲ್ಲ. ಕೊಡಗಿನ ಶ್ರೀ ನಡಕೇರಿಯಂಡ ಚಿಣ್ಣಪ್ಪನವರು ಕೊಡವ ಸಂಸ್ಕೃತಿಯನ್ನು ಪರಿಚಯಿಸುವ 'ಪಟ್ಟೋಲೆ ಪಳಮೆ'ಯಂಥ ಅತ್ಯಂತ ಗಮನಾರ್ಹ ಕೃತಿಯನ್ನು ಪ್ರಕಟಿಸಿ ಕರ್ನಾಟಕ ಜಾನಪದ ಅಧ್ಯಯನಕ್ಕೆ ಒಳ್ಳೆಯ ನಾಂದಿಯನ್ನು ಹಾಡಿದರು." (1975:8–9)

"ಪಟ್ಟೋಲೆ ಪಳಮೆ" ಎಂದರೆ ಹಳೆಯದಾದ ಮಾತುಗಳ, ಹಾಡುಗಳ ಕೃತಿ. ನಡಕೇರಿಯಂಡ ಚಿಣ್ಣಪ್ಪನವರು ತಮ್ಮ ಬಾಲ್ಯದಲ್ಲಿ ಕೇಳಿದ ಹಾಡು, ಒಗಟು, ನಂಬಿಕೆ,

ಗಾದೆ ಮುಂತಾದವುಗಳನ್ನು ಯಾಕೆ ಸಂಗ್ರಹಿಸುವುದಕ್ಕೆ ತೊಡಗಿದರು ಎಂಬುದೇ ಮುಖ್ಯವಾದ ಪ್ರಶ್ನೆಯಾಗಿದೆ. ಚಿಣ್ಣಪ್ಪರು ಜನರ ನಡೆ, ನುಡಿ, ಆಚಾರ ವಿಚಾರಗಳನ್ನು ಸಂಗ್ರಹಿಸಿ ಪ್ರಕಟಿಸಿದ 'ಕ್ಷೇತ್ರಕಾರ್ಯಕರ್ತ' ತಾನೆಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಆದರೆ ಅವರಿಗೆ ಕೊಡವರ ಪರಂಪರಾನುಗತ ವಿಷಯಗಳನ್ನು, ಮೌಖಿಕ ಸಂಪ್ರದಾಯಗಳನ್ನು, ಕೊಡವರ ಸಂಸ್ಕೃತಿಗೆ ಸಂಬಂಧಿಸಿದ ಇನ್ನು ಅನೇಕ ವಿಷಯಗಳನ್ನು ಸಂಗ್ರಹ ಸಂಪ್ರದಾಯಗಳನ್ನು, ಕೊಡವರ ಸಂಸ್ಕೃತಿಗೆ ಮಾಡುವ ಪೂರ್ವ ನಿಯೋತ ಯೋಚನೆ ಇರಲಿಲ್ಲವೇನೋ ಎಂದು ತೋರುತ್ತದೆ. ಮೊದಲ ಮುದ್ರಣದ ಪ್ರಸ್ತಾವನೆಯಲ್ಲಿ ಚಿಣ್ಣಪ್ಪರು 'ನನ್ನ ವಿನೋದಕ್ಕಾಗಿ ಕೊಡಗು ಪದಗಳನ್ನು ಒದಗಿಸುತ್ತ ಇದ್ದು ಕೆಲವು ಮಟ್ಟಿಗೆ ಹಾಡುಗಳು ದೊರೆತ ನಂತರ ಕೊಡವರ ಪದ್ಧತಿಗಳನ್ನು ಬರೆಯ ತೊಡಗಿದೆ" ಎಂದು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.

ಎನ್.ಸಿ. ಸುಬ್ಬಯ್ಯನವರು ನಡಕೇರಿಯಂಡ ಚಿಣ್ಣಪ್ಪನವರ ಬಗ್ಗೆ ಬರೆದ ಸಂಕ್ಷಿಪ್ತ ಪರಿಚಯವಿದೆ, ಉತ್ತಮವಾದ ಪರಿವಿಡಿಯಿದೆ. ಆ ಪ್ರಕಾರ ಕೃತಿಯನ್ನು ಆರು ಅಧ್ಯಾಯಗಳಾಗಿ ವಿಭಾಗ ಮಾಡಿಕೊಳ್ಳಲಾಗಿದೆ. 1. ಕೊಡಗು ನಿವಾರಣೆ; 2. ಕೊಡವ ಪದ್ಧತಿ; 3. ಹಬ್ಬಗಳು; 4. ದೇವತೆಯಡ ಪಾಟ್; 5. ಕೋಳಿಪೋನಯಂಡ ಪಾಟ್; 6. ನಾನಾತರದ ವಿಷಯಗಳು. ಅಧ್ಯಾಯ ಆರರಲ್ಲಿ ಮೃಗಗಳ ಹಾಗೂ ಪಕ್ಷಿಗಳ ಕೂಗುಗಗಳಿಗೆ ಇರುವ ಪ್ರತ್ಯೇಕ ಹೆಸರುಗಳು ಶಬ್ದಗಳ ಅರ್ಥಗಳು ಹಾಗೂ ವಿವರಗಳು ಹೀಗೆ ಸಂಕ್ಷಿಪ್ತವಾದ ಪರಿವಿಡಿಯನ್ನೊಳಗೊಂಡ ಕೃತಿಯು 515 ಪುಟಗಳಷ್ಟು ದೊಡ್ಡ ಗಾತ್ರವನ್ನು ಒಳಗೊಂಡಿದೆ.

'ಪಟ್ಟೋಲೆ ಪಳಮೆ'(1975) ಆವರೆಗೆ ಕನ್ನಡದಲ್ಲಿ ಬಂದ ಇತರ ಜನಪದ ಹಾಡುಗಳ ಸಂಗ್ರಹ ಹಾಗೂ ಅವುಗಳ ಜನಪ್ರಿಯತೆಯ ಬಗೆಗೆ ಕೊಡಗು ಜಿಲ್ಲೆಯ ಬೌಗೋಲಿಕ ಮಹತ್ವ ಹಾಗೂ ಪ್ರಾಕೃತಿಕ ಸಂಪನ್ಮೂಲಗಳನ್ನು, ಕೊಡವರ ಸಂಸ್ಕೃತಿ, ಹಾಗೂ ಸಮಾಜದ ರೀತಿ ನೀತಿಗಳ ಬಗ್ಗೆ ಬಂದ ಗ್ರಂಥಗಳ ಸಮೀಕ್ಷೆಯನ್ನೂ ಹಾಗೂ ಕೃತಿಯ ಪರಿಚಯಾತ್ಮಕ ವಿವರಗಳನ್ನು ಒಳಗೊಂಡಿದೆ. ಜೊತೆಗೆ ನಡಕೇರಿಯಂಡ ಚಿಣ್ಣಪ್ಪರ ಭಾವಚಿತ್ರವೊಂದನ್ನು ನೀಡಲಾಗಿದೆ.

'ಪಟ್ಟೋಲೆ ಪಳಮೆ' ಮೊದಲ ಅಧ್ಯಾಯದಲ್ಲಿ ಕೊಡಗಿನ ಭೌಗೋಳಿಕ ಪರಿಸರ ಹಾಗೂ ಕೊಡವರ ಐತಿಹಾಸಿಕ ವಿವರಗಳ ಪರಿಚಯವಿದೆ. ಭೌಗೋಳಿಕವಾಗಿ ಕೊಡಗು ಜಿಲ್ಲೆಯು ಪಶ್ಚಿಮ ಘಟ್ಟಗಳ ಮೇಲ್ಭಾಗವಾಗಿದ್ದು ಪೂರ್ವ ದಿಕ್ಕಿಗೆ ಹರಡಿಕೊಂಡಿದೆ. ಕೊಡಗು ಪದ ನಿಷ್ಪತ್ತಿ, ಕೊಡಗಿನ ಮೇಲ್ಮೈ ವಿಸ್ತೀರ್ಣ, ಕೊಡಗಿನ ಸುತ್ತಲಿನ ಪ್ರದೇಶಗಳು,

ಕೊಡಗಿನ ಪಟ್ಟಣಗಳು, ಸಮುದ್ರಮಟ್ಟದಿಂದ ಕೊಡಗಿನ ಎತ್ತರ, ಕೊಡಗಿನ ನದಿಗಳು ಹಾಗೂ ಉಪನದಿಗಳು, ಕೊಡಗಿನಲ್ಲಿ ಅತೀ ಹೆಚ್ಚು ಮಳೆ ಬೀಳುವ ಸ್ಥಳ, ಕೊಡಗಿನ ವಾಯುಗುಣ, ಕೊಡಗಿನ ಒಟ್ಟು ಭೌಗೋಳಿಕ ಚಿತ್ರಣವನ್ನು ನೀಡಲಾಗಿದೆ. ಕೊಡವರ ಐತಿಹಾಸಿಕ ದಾಖಲೆಯನ್ನು ಪುರಾಣದ ಹಾಡೊಂದರಲ್ಲಿ ಸ್ಕಂದ ಪುರಾಣವನ್ನು ಹೇಳುತ್ತಾರೆ. ಸ್ಕಾಂದ ಪುರಾಣದಲ್ಲಿ ಕಾವೇರಿ ಪುರಾಣವಿದೆ. ಕೊಡವರ ಜಾತಿ ಅಮ್ಮಕೊಡವರು, ಜಮ್ಮುಕೊಡವರ ಇತಿಹಾಸವಿದೆ. ಗಂಗರಾಜರು, ಚೋಳರು, ಹೊಯಿಸಲರು (ಪೊಯಿಸಲರು) ಹಾಗೂ ವಿಜಯನಗರ ರಾಜರು ಕೊಡಗು ದೇಶವನ್ನು ಆಳುತ್ತಿದ್ದ ಬಗೆಗೆ ಚರಿತ್ರೆಯಲ್ಲಿ ವಿವರಗಳು ಸಿಗುತ್ತವೆ. ಕೊಡಗಿನ ವೀರರಾಜನು ಇಕ್ಕೇರಿಯ ರಾಜವಂಶ(16ನೆಯ ಶತಮಾನ)ಕ್ಕೆ ಸೇರಿದವನು. ಆತನ ವಂಶಾವಳಿಯು ಚಿಕ್ಕ ವೀರರಾಜನವರೆಗೂ ಒಂದು ಆಳ್ವಿಕೆಯ ಪಟ್ಟಿ ಮುಂದುವರಿಯುತ್ತದೆ. ಕೊಡಗಿನ ರಾಜನು ಆಡಳಿತದ ಅನುಕೂಲಕ್ಕಾಗಿ ನಾಡುಗಳಿಗೆ 35 ತಕ್ಕರನ್ನು ನೇಮಿಸಿದನು. ಆಡಳಿತ ನಿಯಮಗಳಿಗೆ ಸಂಬಂಧಿಸಿದಂತೆ 'ದೇಶ ಕೆಟ್ಟ್‌ಪಾಟ್' ಎಂಬ ಹಾಡಿದೆ. ಆಗ ದೊಡ್ಡ ವೀರಪ್ಪ ಎಂಬಾತ ಆಳ್ವಿಕೆಯಲ್ಲಿದ್ದನು. ಬೇರೆಬೇರೆ ಕಾಲಘಟ್ಟದಲ್ಲಿ ಆಳ್ವಿಕೆ ಮಾಡಿದ ರಾಜರುಗಳ ರಾಜ್ಯಭಾರದ ವಿವರವಿದೆ. ಜೊತೆಗೆ ಟಿಪ್ಪುಸುಲ್ತಾನನ ದಂಗೆಯ ವಿವರ, ಇಂಗ್ಲಿಷರು ಕಾಟಕಾಯಿಯನ್ನು ಹಿಡಿಯುವುದಕ್ಕಾಗಿ ಸರಕಾರಕ್ಕೆ ಬರೆದ ಕಾಗದ ಪತ್ರಗಳ ವಿವರಗಳಿವೆ.

ಎರಡನೆಯ ಅಧ್ಯಾಯವು **'ಕೊಡಗರ ಪದ್ಧತಿ'** – ಕೊಡಗರ ಸಾಂಪ್ರದಾಯಿಕ ಪದ್ಧತಿಗಳು, ಆಚರಣೆಗಳು ಹಾಗೂ ಕಟ್ಟು ಕಟ್ಟಳೆಗಳನ್ನು ವಿವರವಿದೆ. ವ್ಯಕ್ತಿಯೊಬ್ಬನ ಬದುಕಿನಲ್ಲಿ ಹುಟ್ಟು–ಮದುವೆ–ಸಾವು ಆಗುವ ಮೂರು ಪ್ರಧಾನ ಘಟ್ಟಗಳನ್ನು ಗಮನದಲ್ಲಿರಿಸಿಕೊಂಡು, ಪದ್ಧತಿಗಳು, ಆಚರಣೆಗಳು, ಕಟ್ಟುಕಟ್ಟಳೆಗಳು ಯಾವ ರೀತಿ ಆಗುತ್ತವೆ ಎಂಬ ಚರ್ಚೆಯಿದೆ. ಹುಟ್ಟಿದ ನಂತರ ಸೂತಕ, ಹೆಸರಿಡುವುದು, ತೊಟ್ಟಿಗೆ ಹಾಕುವುದು, ನೀರು ತೆಗೆಯುವುದು, ಮಗುವಿನ ಕೈಯಲ್ಲಿ ಹಣ ಕೊಡುವುದು–ಪ್ರತೀ ಹುಟ್ಟಿನ ಸಂದರ್ಭದಲ್ಲಿ ನಿಯಮಾನುಸಾರ ಆವರ್ತನೆಗೊಳ್ಳುವ ಸಾಂಪ್ರದಾಯಿಕ ಕ್ರಮಗಳ ವಿವರವಿದೆ. ಜೊತೆಗೆ ಮಗುವಿನ ಬಾಲ ಲೀಲೆಗೆ ಸಂಬಂಧಿಸಿದ ಹಾಡಗಳ ಸಂಗ್ರಹವಿದೆ.

ಕೊಡವರಲ್ಲಿ ಸಣ್ಣ ಪ್ರಾಯದವರಿಗೆ ಮದುವೆ ಕ್ರಮ ಇಲ್ಲ. ಒಂದು ವೇಳೆ ಮಾಡಿದರೆ ಅದನ್ನು **'ಕೊದಿಮಂಗ್‌ಲ'** ಎನ್ನುವರು. ಪ್ರಾಯಕ್ಕೆ ಬಂದ ಗಂಡಿಗೆ ಏಳು ವಿಧದಲ್ಲಿ ಮದುವೆಯ ಮುಹೂರ್ತವನ್ನು ನೋಡುವುದಿದೆ. ಕವಿಮಂಗ್‌ಲ, ಕುಡಾವಳಿ ಮಂಗ್‌ಲ, ಕುತ್ತಿಕ್ ನಿಪ್ಪದ್(ಚಿಕ್ಕ ಪರಿಜೆ), ಪಚ್ಚಡಕ್ ನಡಪದ್(ಮಕ್ಕ ಪರಿಜೆ), ನರಿಮಂಗ್‌ಲ ಕೆಮಿಕುತ್ತಿ ಮಂಗ್‌ಲ, ಬಾಳೆಕ್ ಮಂಗ್‌ಲ, ಹೆಣ್ಣಿಗೂ ಐದು ವಿಧದಲ್ಲಿ ಮದುವೆ

ಕನ್ನಿಮಂಗ್‌ಲ, ಕುತ್ತಿಕ್‌ನಿಪ್ಪದ್, ಪೆಚ್ಚಡಕ್ ನಡಪದ್, ನರಿಮಂಗ್‌ಲ, ಹಾಗೂ ಪೈತಾಂಡೆ ಕೆಳಪದ್ ಮದುವೆಯ ಕ್ರಮದಲ್ಲಿ ಮುಹೂರ್ತ ನೋಡುತ್ತಾರೆ.

ಮದುವೆಗೆ ಸಂಬಂಧಿಸಿದಂತೆ ಗಂಡು ಅಥವಾ ಹೆಣ್ಣಿನ ಆಯ್ಕೆಯ ಸಂದರ್ಭದಲ್ಲಿ ಜಾತಕ ನೋಡುವುದು, ಹೂವು ತೆಗೆಯುವುದು, ರಾಶಿ ಮಡಗುವುದು, ಪೊಣ್ಣ್ ಪಡೆಯುವದ್, ಕುರಿ ಮಾಡುವುದು ಮೊದಲಾಗಿ ಮದುವೆಯ ಮೊದಲು ಕೆಲವು ನಿಯಮಗಳನ್ನು ಇಟ್ಟುಕೊಳ್ಳುತ್ತಾರೆ. ಸತ್ತ ಅಥವಾ ಹುಟ್ಟಿದ ಸೂತಕದ ಸಮ್ದರ್ಭದಲ್ಲಿ ನಿಯಮಗಳನ್ನು ಮೀರಿ ಮದುವೆ ಸಮಾರಂಭ ಆಗುವುದಿಲ್ಲ. ಸೂತಕದ ಸಂದರ್ಭದಲ್ಲಿ ನಂಬಿಕೆ ಪ್ರಧಾನ ಕೆಲಸಮಾಡುತ್ತದೆ. ಕೆಲವು ನಿಯಮಗಳ ಪ್ರಕಾರ ಸೂತಕದ ಮನೆಯನ್ನು ಬಿಟ್ಟು ಬೇರೆ ಮನೆಯಲ್ಲಿ ಮದುವೆ ಕ್ರಮ ಇಟ್ಟುಕೊಳ್ಳುತ್ತಾರೆ. ಮದುವೆಗೆ ಒಂದು ದಿನ ಮೊದಲು ಕರಿಕ್ ಮುರಿಪ, ಪಂದಪಣಿ ದಿವಸವೆಂತಲೂ, ಊರ ಕೂಡುವದೆಂತಲೂ ಹೇಳುತ್ತಾರೆ. ಈ ಸಂದರ್ಭದಲ್ಲಿ ನಾಲ್ಕು ಜನ ಊರವರು ಮದುವೆ ಹಾಡನ್ನು ಹಾಡುತ್ತಾರೆ. ಹಾಡಿನಲ್ಲಿ ಮದುವೆಗೆ ಸಂಬಂಧಿಸಿದ ಕೆಲವು ಸಾಂಪ್ರದಾಯಿಕ ಕಟ್ಟುಗಳನ್ನು, ರೂಢಿ ನಿಯಮಗಳನ್ನು ಹೇಳುತ್ತಾರೆ. ನಂತರ ಊರು ಪತ್ತಿ, ಪೆಟ್ಟಿಗೆ ತುಂಬಿಸುವುದು, ಮೇಲ್ಕಟ್ಟು ಕಟ್ಟುವುದು, ಕ್ಷೌರ ಮಾಡಿಸಿಕೊಳ್ಳುವುದು, ಸ್ನಾನ ಮಾಡಿಸುವುದು, ಉಡುಪು ತೊಡಿಸುವುದು– ಮೊದಲಾದ ವಿಧಿ ನಿಯಮಗಳನ್ನು ಮಾಡಬೇಕು. ಎಲ್ಲಾ ಆಚರಣೆಗಳು ಮುಗಿದು ಮದುಮಗ ಅಥವಾ ಮದುಮಗಳು ಮುಹೂರ್ತಕ್ಕೆ ಹೊರಡುತ್ತಾರೆ. ಆಗ ಕೊಂಬು ವಾದ್ಯ ಊದುತ್ತಾರೆ. **'ಬಟ್ಟೆ ಪಾಟ್'** ಹಾಡು ಹೇಳುತ್ತಾ ನಾಲ್ಕು ಜನ ದುಡಿ ಹೊಡೆಯುತ್ತಾ ಮುಂದೆ ಮುಂದೆ ಮೆರವಣಿಗೆ ಹೋಗುತ್ತಾರೆ. ನಂತರ ಮುಹೂರ್ತ ಹಣ ಕೊಡುವ ಕ್ರಮವಿರುತ್ತದೆ. ಆಗ ಬಟ್ಟೆ ಪಾಟನ್ನು ನಿಲ್ಲಿಸಿ ಮದುವೆ ಹಾಡನ್ನು ಹಾಡುತ್ತಾರೆ. ನಂತರ 'ಕೂರ್‌ಂಗೊದಿ ಮಿರಿಪ ಪದ್ಧತಿ' ನಡೆಯುತ್ತದೆ. ಆಮೇಲೆ ಬಾಳೆಬಿರುದು, ಅರುಪುವತರ, ಅಭ್ಯಾಗತರ ಸತ್ಕಾರ, ಊಟ ಉಪಚಾರಗಳು ಆಗುತ್ತವೆ. ಮದುವಣಿಗನ ಮದುಮಗಳ ಊಟದ ಕ್ರಮವಿರುತ್ತದೆ. ಪೋಳಿಯ, ನೆಂಟರನ್ನು ಬಿಡುವುದು, ಮದುವೆಯು ಹೊರಡುವುದು, ಪೆಟ್ರೈಗೆ ತುಂಬಿಸುವುದು. ಕೊಡಿಯಾಳ್–ಕೊರು ಅರಪುವವು ಮೊದಲಾದ ಕ್ರಮಗಳು ಆಗುವವು.

ಸಾಂಪ್ರದಾಯಿಕ ಮದುವೆಯು ಆಚರಣಾತ್ಮಕವಾಗಿ ನಡೆಯುತ್ತದೆ. ಮದುವೆಯಲ್ಲಿ ಇನ್ನೊಂದು ಪದ್ಧತಿಯಿದೆ. ಅದು ಕೂಡಾವಳಿ ಮದುವೆ ಪದ್ಧತಿ. ಪದ್ಧತಿಯು ಮೂರು ವಿಧವಾಗಿ ನೆರವೇರುತ್ತದೆ. ಪದ್ಧತಿಯು ಪುನರ್‌ವಿವಾಹಕ್ಕೆ ಸಂಬಂಧಿಸಿದೆ. ಗಂಡ ಸತ್ತರೆ ಗಂಡನ ಅಣ್ಣ ತಮ್ಮನನ್ನು ಮದುವೆಯಾಗುವುದು, ಅಥವಾ ಆಕೆಯನ್ನು ಇತರರು

ಮದುವೆಯಾಗುವುದು ಅಥವಾ ಗಂಡನನ್ನು ಬಿಟ್ಟ ಹೆಣ್ಣನ್ನು ಇತರರು ಮದುವೆಯಾಗುವುದು ರೂಢಿಯಿದೆ. ಇಲ್ಲೂ ಮುಹೂರ್ತ ನೋಡುವುದು, ಹಾಡುವುದು ಮೊದಲಾದ ಕ್ರಮಗಳು ನಡೆಯುತ್ತವೆ. ಅದೇ ರೀತಿ ಕಳ್ಳ ಬಸುರಿಯಾಗಿ ಹೆತ್ತ ಮೇಲೆ ಮದುವೆಯಾಗುವುದು ರೂಢಿಯಲ್ಲಿದೆ. ಇಲ್ಲೂ ಮುಹೂರ್ತ ಇದೆ. ಆಕೆಗೆ ಮುತ್ತೈದೆತನ ಬರುತ್ತದೆ. ಹುಟ್ಟಿದ ಮಗುವು ಗಂಡನಿಗೆ ಸೇರಬೇಕೆಂಬ ನಿಯಮವಿದೆ.

ಹುಟ್ಟು, ಮದುವೆಯ ಹಿನ್ನೆಲೆಯಲ್ಲಿ ಆಗುವ ಆಚರಣೆಗಳಂತೆ, ಕೊಡಗರಲ್ಲಿ ಸತ್ತಾಗಲೂ ಆಚರಣೆ ಇರುತ್ತದೆ. ಕೊಡಗರು ಸಾವು ಬರುವ ಮೊದಲು ಹರಕೆ ಹೇಳಿಕೊಳ್ಳುತ್ತಾರೆ. ಸಾವು ಆದಾಗ ಗೌರವ ಸೂಚಕವಾಗಿ ಆಕಾಶದೆತ್ತರಕ್ಕೆ ಎರಡು ಗುಂಡು ಹಾರಿಸುತ್ತಾರೆ. ಸಾವು ಆದ ದಿನ ನಾಲ್ಕು ಜನ ಗಂಡಸರು ನಾಲ್ವರು ಹೆಂಗಸರು ಹಾಡುತ್ತಿರಬೇಕು. ಹಾಡು ದೀರ್ಘವಾಗಿರುತ್ತದೆ. ಸಾವನ್ನು ಮನೆಯಲ್ಲಿ ಇಡುವುದಕ್ಕೆ ನಿರ್ದಿಷ್ಟ ಸ್ಥಳವಿರುತ್ತದೆ. ಹೆಣವನ್ನು ಮೀಯಿಸುವುದು, ಉಡುಪು ತೊಡಿಸುವುದು, ಸಾವು ತೆಗೆಯುವುದು, ನೀರು ಕೊಡುವುದು ಹೀಗೆ ಹಲವು ಸಾಂಪ್ರದಾಯಿಕ ಆಚರಣೆಗಳನ್ನು ನೆರವೇರಿಸುತ್ತಾರೆ. ಸಾವು ಆದ ಕೊನೆಯಲ್ಲಿ **'ಸೂತಕ'**ದ ಕ್ರಮ ಮಾಡುತ್ತಾರೆ.

ಹುಟ್ಟು–ಸಾವಿನ ನಡುವೆ ಕೊಡವರು ಆಚರಿಸುವ ಅನೇಕ ಆಚರಣೆಗಳನ್ನು ಗ್ರಂಥದಲ್ಲಿ ಕಲೆ ಹಾಕಲಾಗಿದೆ. ಮೂರನೆಯ ಅಧ್ಯಾಯವು ಕೊಡವರು ಆಚರಿಸುವ ಹಬ್ಬಗಳಿಗೆ ಸಂಬಂಧಿಸಿದೆ. ಕೊಡವರ ಬಹುಮುಖ್ಯ ಹಬ್ಬಗಳಾದ ಕೈಲ್ ಪೊಳ್ದು, ಕಾವೇರಿ ಸಂಕ್ರಮಣ ಹಾಗೂ ಪುತ್ತರಿ(ಹುತ್ತರಿ) ಪೊಳ್ದುವನ್ನು ವಿವರಿಸಲಾಗಿದೆ. ಜೊತೆಗೆ ಕೊಡವರು ಶಿವರಾತ್ರೆ, ಯುಗಾದಿ, ವಿಷು ಸಂಕ್ರಮಣ ಹಾಗೂ ಸುಬ್ರಮಣ್ಯ ಷಷ್ಟಿಯನ್ನು ಆಚರಿಸುತ್ತಾರೆ. ಇವೆಲ್ಲಾ ಇವತ್ತು ಸಾರ್ವಜನಿಕ ಹಬ್ಬಗಳಾಗಿವೆ.

ಕೊಡವರು ಆಚರಿಸುವ **'ಕೈಲ್‌ಪೊಳ್ದು'** ಹಬ್ಬವು ಸಿಂಹ ಮಾಸ 18ನೆಯ ದಿನದಂದು ಆಗುತ್ತದೆ. ಹಬ್ಬವು ಆಯುಧ ಪೂಜೆಗೆ ಸಂಬಂಧಿಸಿದೆ. ರೈತನು ಉಪಯೋಗಿಸಿಕೊಂಡ ಕೃಷಿ ಸಲಕರಣೆಗಳನ್ನು ಹಾಗೂ ಕೋವಿ, ಮನೆಗಳನ್ನು ವರ್ಷಕ್ಕೊಮ್ಮೆ ಶುದ್ಧಗೊಳಿಸುತ್ತಾರೆ. ಹಬ್ಬವು ಕೊಡವರ ಪ್ರಧಾನ ಹಬ್ಬವಾಗಿದ್ದು, ಹಬ್ಬ ಮುಗಿದಾಗ ಕೊಡವರು ಬೇಟೆಯಾಡುವ ಸಂಪ್ರದಾಯವನ್ನು ರೂಢಿಸಿಕೊಂಡಿದ್ದಾರೆ.

ಕೊಡವರ ಇನ್ನೊಂದು ಹಬ್ಬ **'ಕಾವೇರಿ ಸಂಕ್ರಮಣ'** ತುಲಾಸಂಕ್ರಮಣದಲ್ಲಿ ಆಗುತ್ತದೆ. ಸೂರ್ಯನು ತುಲಾರಾಶಿಗೆ ಸೇರುವಾಗ ಕಾವೇರಿಯು ಹುಟ್ಟುವ ತಲಕಾವೇರಿಯ ಕುಂಡಿಕೆಯಲ್ಲಿ ತೀರ್ಥ ಬರುತ್ತದೆ. ಕೊಡವರು ಕಾವೇರಿ ತೀರ್ಥಸ್ನಾನ ಮಾಡಿಕೊಂಡು ಮನೆಗೆ ವಾಪಾಸ್ಸಾಗುತ್ತಾರೆ. ಬೊತ್ತು ಚುಚ್ಚುವುದು, ಕಣಿ ಪೂಸುವುದು, ಗಂಗೆ ಪೂಜೆ

ಮಾಡುವುದು–ಎಂಬ ಕ್ರಮಗಳನ್ನು ಮಾಡುವರು. ಈ ಕ್ರಮವು ಭೂಮಿಗೆ ಸಂಬಂಧಿಸಿದ ಆಚರಣೆಯಾಗಿದೆ.

'ಹುತ್ತರಿ' ಕೊಡವರ ಬಹುಮುಖ್ಯ ಹಬ್ಬ. ಹುತ್ತರಿ 'ಹೊಸ ಅಕ್ಕಿ' ಆಚರಣೆ. ಈ ಸಂದರ್ಭದಲ್ಲಿ ಗುಂಡು ಹಾರಿಸುವುದು ಕೊಡವರಲ್ಲಿ ಗೌರವ ಸೂಚಕ. ಜೊತೆಗೆ ನಾಲ್ಕು ಜನ ದುಡಿ ಹೊಡೆಯುತ್ತಾ, ಹಾಡು ಹಾಡುತ್ತಾ, ಯಜಮಾನನ ಮನೆಗೆ ಹೋಗುವರು. ಹೀಗೆ ಹಾಡುವ ಹಾಡುಗಳನ್ನು, ನುಡಿಗಟ್ಟುಗಳನ್ನು ವಿಧಿನಿಯಮಗಳನ್ನು ಗ್ರಂಥದಲ್ಲಿ ಕೊಡಲಾಗಿದೆ.

ಪುತ್ತರಿಯ ನಂತರ 'ಪೊಳುದು' ಎಂಬ ಆಚರಣೆಯಿದೆ. ಪೊಳುದುವಿನಲ್ಲಿ ಎರಡು ವಿಧ. *'ಪಾಡಿ ಪೊಳುದು'* ಹಾಗೂ 'ನಾಡು ಪೊಳುದು'. ನೆರೆ ಕಟ್ಟುವುದು, ಬಳ್ಳ ಪಾನಿ ನೆರಪ, ಫಲಹಾರ ಮಾಡುವುದು, ಕದಿರು ತೆಗೆಯುವುದು, ಗುಂಡು ಹೊಡೆಯುವುದು, ಏಳಕ್ಕಿ ಪುಟ್ಟ್, ಕೋಲು ಹೊಡೆಯುವುದು–ಮೊದಲಾದ ಸಾಂಪ್ರದಾಯಿಕ ಕ್ರಮಗಳಾಗುತ್ತವೆ. ಜೊತೆಗೆ ಹುತ್ತರಿ ಹಾಡು ಇರುತ್ತದೆ. ಕೊಡಚಿ ಅಥವಾ ಸೂಳೆ ಇರುವುದುಂಟು. ಆಕೆಯ ಕುರಿತಂತೆ ಕೊಡಿಚಿ ಪದ, ಕುಣಿತ (ಕೊಡಿಚಿಯು ಪ್ರತ್ಯಕ್ಷವಾಗುವಳು) ಕೊಡಿಚಿಯ ಶರೀರ, ನಡತೆ, ಉಡುಪು, ಚರಿತ್ರೆಯನ್ನು ಹಾಡುತ್ತಾರೆ. ಕುಂದನ ಕೊಡಚಿಯ ಅಥವಾ ಸೂಳೆಯ ವೇಷವನ್ನು ಗಂಡಸರು ಧರಿಸಬೇಕು.

ಹುತ್ತರಿ ಹಬ್ಬದಲ್ಲಿ **'ಜೋಯಿ ಪಾಟ್'** ಇರುತ್ತದೆ. ಪ್ರತಿ ಗ್ರಾಮದಲ್ಲಿಯೂ **'ಬೆಳಕು ಹಬ್ಬ'** ನಡೆಯುತ್ತದೆ. ಕೊಡವರಲ್ಲಿ ಶಿವರಾತ್ರಿ ಹಬ್ಬ, ಯುಗಾದಿ ಹಬ್ಬ, ವಿಷ್ಣು ಸಂಕ್ರಮಣ ಹಬ್ಬ ಹಾಗೂ ಸುಬ್ರಹ್ಮಣ್ಯ 'ಬೆಳಕು ಹಬ್ಬ' ನಡೆಯುತ್ತದೆ. ಹಬ್ಬಗಳ ವರ್ಣನೆಯನ್ನಲ್ಲದೆ, ಹುತ್ತರಿ ಕೋಲು, ಹುತ್ತರಿ ಬೆಳಕು, ಹುತ್ತರಿ ಹಾಡು, ಬೇಟೆ, ಹುತ್ತರಿ ಹಾಡುಗಳ ಸಮಗ್ರ ಸಾಹಿತ್ಯವನ್ನು ಒಳಗೊಂಡಿದೆ.

ಗ್ರಂಥದ ನಾಲ್ಕನೆಯ ಅಧ್ಯಾಯನವು **'ದೇವತೆಯ ಪಾಟ್'**ಗಳನ್ನು ಒಳಗೊಂಡಿದೆ. 9 ದೇವತೆಗಳಿಗೆ ಸಂಬಂಧಿಸಿದ ಪಾಟ್‌ಗಳನ್ನು ಕೊಡಲಾಗಿದೆ. 1. ಎವ್ವಮಕ್ಕ ದೇಬುವಡ ಪಾಟ್[48], 2. ಐವಮಕ್ಕ ದೇಬುವಡ ಪಾಟ್[48], 3. ಮೂವಮಕ್ಕ ದೇಬುವಡ ಪಾಟ್[49], 4. ಇಬ್ಬಮಕ್ಕ ದೇಬುವಡ ಪಾಟ್[50], 5. ಸಾರ್ತಾವುಡ ಪಾಟ್[51], 6. ಕ್ಷೇತ್ರಪ್ಪಂಡ ಪಾಟ್[52], 7. ಚೋಲಿ ಪೊವ್ವೇದಿಯಮ್ಮೆರ ಪಾಟ್, 8. ಬಲ್ಲತ್ತ್ ನಾಡ್ ಪೊವ್ವೇದಿಯಮ್ಮೆರ ಪಾಟ್, 9. ಓ ಮಾಲೆ ಪೊದಿಯೋದಿಡ ಪಾಟ್

ಐದನೆಯ ಅಧ್ಯಾಯದಲ್ಲಿ 'ಕೇಳಿ ಪೋನಯಂಡ ಪಾಟ್'ಗಳಿವೆ. ಆರು ಹಾಡುಗಳಿವೆ. 1. ಎವ್ವಮಕ್ಕ ದೇವಿಯಡ ಪಾಟ್[53], 2. ಕಲಿಯಾಟಂಡ ಪೊನ್ನಪ್ಪಂಡ ಪಾಟ್[54],

3. ನಡಕೇರಿಯಂಡ ದೇವೈಯ್ಯನ ಚರಿತ್ರೆ[55], 4. ಕೈಯ್ಯಂದಿರ ಅಪ್ಪೈಯ್ಯಂಡ ಪಾಟ್[56], 5. ಅಲ್ಲೈಯ್ಯ ಕೋವಿರ ಅಪ್ಪೈಯ್ಯಂಡ ಪಾಟ್[57], 6. ಪೊಳ್ಳೆ ದೇವಿರ ಅಪ್ಪೈಯ್ಯನ ಹಾಡು[58].

ಅಧ್ಯಾಯ ಆರರಲ್ಲಿ 'ನಾನಾ ತರದ ವಿಷಯಗಳು' ಒಳಗೊಂಡಿದೆ. ಗಾದೆಗಳು ಹಾಗೂ ಚೆಲೋದಾದ ಮಾತುಗಳು, ಕೊಡಗರ ವಿಷಯ ಇತರ ಜಾತಿಯವರ ಗಾದೆ, ಪಳಂಜೊಲ್ಸ್, ಒಡಪಪಡಿಮ, ಜಾತಿಪದ್ಧತಿ, ಇತರ ಪದ್ಧತಿಗಳು, ಚಾಂಡಾಳರು ಮೂಡಬಾರದೆಂಬ ಕಟ್ಟಳೆಗಳು, ಭಕ್ತಿಯೋ ಮೂಢ ಭಕ್ತಿಯೋ ಎಂಬುದಾಗಿ ವಿಭಾಗ ಮಾಡಿಕೊಳ್ಳಲಾಗಿದೆ. 'ಗಾದೆಗಳು' ಹಾಗೂ 'ಚಲೋದಾದ ಮಾತುಗಳು' ಭಾಗದಲ್ಲಿ ಆಕಾರಾದಿಯಾಗಿ 754 ಕೊಡವ ಗಾದೆಗಳಿವೆ. ಕೊಡವರ ಜಾತಿಯ ಕುರಿತಂತೆ ಮೂರು ಗಾದೆಗಳಿವೆ. **'ಪಳಂಜೊಲ್ಲ್'** ಎಂಬುದಾಗಿ ಹಲವಾರು ವಿಧಿ ನಿಷೇಧ ಪಡೆನುಡಿಗಳಿವೆ. ಅರುವತ್ತೊಂಬತ್ತು ಒಗಟುಗಳು ಹಾಗೂ ಅವುಗಳಿಗೆ ಉತ್ತರಗಳನ್ನು ಆಕಾರಾದಿಯಾಗಿ ಜೋಡಿಸಲಾಗಿದೆ. ಕೊಡವನೊಬ್ಬ ಇತರ ಜಾತಿಗಳವರೊಂದಿಗೆ ಸಾರ್ವಜನಿಕ ಆಚರಣೆಗಳಲ್ಲಿ, ಕುಟುಂಬದ ಆಚರಣಾ ಪದ್ಧತಿಗಳಲ್ಲಿ ಸೇರಿಕೊಳ್ಳುವ ವಿವರವಿದೆ.

ಕೊಡವರು ದಿನ, ವಾರ, ತಿಥಿ, ತಿಂಗಳು ವಾರ್ಷಿಕ ಆವರ್ತನದಲ್ಲಿ ಆಗುವ ಹಲವು ಪದ್ಧತಿಗಳನ್ನು ನಂಬುತ್ತಾರೆ. ನಂಬಿಕೆಗಳು ಅವರ ಜೀವನಾವರ್ತನದಲ್ಲೂ ಪ್ರಮುಖವಾಗಿರುತ್ತವೆ.

ಪ್ರಾಣಿ ಸಂಬಂಧಿ, ಮನುಷ್ಯ ಸಂಬಂಧಿ, ಸಸ್ಯ ಸಂಬಂಧಿ, ಆಕಾಶ ಸಂಬಂಧಿ ಪ್ರಕೃತಿ ನಿಯಮಗಳಿಗೂ ಕಾಲಾನುಕ್ರಮದಲ್ಲಿ ಆಗುವ ಘಟನೆಗಳಿಗೂ ಕೊಡವರು ಸಂಬಂಧ ಕಲ್ಪಿಸುತ್ತಾರೆ. ಕೆಲವು ಕಾಲ ಘಟನೆಗಳು ಅಪಶಕುನವೆಂದು ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಾರೆ. *ಉದಾ:* ಗೂಬೆ ಕೂಗಬಾರದು, ರಾತ್ರಿ ಹೊತ್ತಲ್ಲಿ ಉಗುರು ತೆಗೆಯಬಾರದು ಮೊದಲಾದ ಉದಾಹರಣೆಗಳು ನಂಬಿಕೆಯಾಗಿ ಮಾತ್ರವಲ್ಲ ನಿಷೇಧಗಳಾಗಿಯೂ ಪ್ರಯೋಗವಾಗಿವೆ.

ಮೃಗಗಳ ಹಾಗೂ ಪಕ್ಷಿಗಳ ಕೂಗುಗಳಿಗೆ ಇರುವ ಪ್ರತ್ಯೇಕ ಹೆಸರುಗಳನ್ನು ಬೇರೆಬೇರೆ ಮೃಗ ಪಕ್ಷಿಗಳು ಕೂಗುವ 18 ವಿಧಗಳನ್ನು ಕೊನೆಯಲ್ಲಿ ಪಟ್ಟಿ ಮಾಡಲಾಗಿದೆ. ಕೊಡವಭಾಷೆಯಲ್ಲಿ ಪ್ರಯೋಗವಾಗುವ 170ರಷ್ಟು ಕೊಡವ ಪದಗಳನ್ನು ಅಕಾರಾದಿಯಾಗಿ ಜೋಡಿಸಿಕೊಂಡು ಅವುಗಳಿಗೆ ಸಂವಾದಿ ಅರ್ಥಗಳನ್ನು ಕೊಡಲಾಗಿದೆ. ಜೊತೆಗೆ ಟಿಪ್ಪಣಿಗಳನ್ನು, ವಿವರಣಾತ್ಮಕ ಚರ್ಚೆಗಳನ್ನು, ಸಾಂಸ್ಕೃತಿಕ ಮಹತ್ವಗಳನ್ನು ನೀಡಲಾಗಿದೆ.

ಕೊಡವರ ಆಚರಣಾತ್ಮಕ ರೂಢಿ ನಿಯಮಗಳನ್ನು ಪದ್ಧತಿಗಳನ್ನು ಒಳಗೊಂಡ ಕೃತಿ. ಕೊಡವರ ಹುಟ್ಟು–ಸಾವಿನ ನಡುವೆ ಆಗುವ ಸಾಂಪ್ರದಾಯಿಕ ಆಚರಣೆಗಳ ವಿವರವಿದೆ. ಕೊಡವರ ಆಚರಣೆ ಬಗ್ಗೆ ಕನ್ನಡದಲ್ಲಿ ಈ ವರೆಗೆ ಯಾವುದೇ ಕೃತಿ ಪ್ರಕಟವಾಗಿರಲಿಲ್ಲ. ಆರ್.ಎಫ್. ಕಿಟ್ಟೆಲ್‌ರು **'ಕೂರ್ಗ್ ಸೂಪರ್‌ಸ್ಟೀಷನ್'** ಬಗ್ಗೆ 1890ರ ಹೊತ್ತಿಗೆ ಒಂದು ಸಂಕ್ಷಿಪ್ತ ಲೇಖನವನ್ನು ಬರೆದಿದ್ದರು. ಕಿಟ್ಟೆಲ್ ಆ ಲೇಖನದಲ್ಲಿ ಕೊಡವರ ಬಳಕೆಯಲ್ಲಿರುವ ಭೂತಗಳ ನಂಬಿಕೆ, ರೂಢಿ ಸಂಪ್ರದಾಯಗಳನ್ನು ಕೊಡಗಿನ 30 ಭೂತಗಳನ್ನು ಉಲ್ಲೇಖಿಸಿದ್ದಾರೆ. **'ಪಟ್ಟೋಲೆ ಪಳಮೆ'** ಕೊಡವ ಸಮಾಜದ ಸಂಸ್ಕೃತಿಯ ವಿವರಗಳನ್ನು 'ವಿನೋದಕ್ಕಾಗಿ ಸಂಗ್ರಹಿಸಿದೆ' ಎಂದು ಹೇಳಿಕೊಂಡಿದ್ದಾರೆ. ಕೊಡಗು ದಕ್ಷಿಣಕನ್ನಡದ ಪಕ್ಕದ ಜಿಲ್ಲೆಯಾಗಿರುವುದರಿಂದ ಎರಡೂ ಜಿಲ್ಲೆಗಳ ಆಚರಣೆಗಳಲ್ಲಿ ಬಹುಮಟ್ಟಿಗೆ ಸಮಾನಾಂಶವಿದೆ. ಕೊಡವ ಆಚರಣೆಗಳ ಹಾಡುಗಳನ್ನು ಕೊಡವ ಭಾಷೆಯಲ್ಲೇ ಕೊಡಲಾಗಿದೆ. ಟಿ.ಪಿ. ವಿಜಯ ಹೇಳುವಂತೆ, "ವಸಾಹತು ಕಾಲದ ಕೊಡಗಿನ ಸಾಂಸ್ಕೃತಿಕ ಆಯಾಮಗಳನ್ನು ದಾಖಲಿಸಿ ಸಂಶೋಧಕರಿಗೆ ಆಕರಗಳನ್ನು ಶತಮಾನದ ಮೂರನೇ ದಶಕದಲ್ಲೇ ಒದಗಿಸಿದ ನಡಕೇರಿಯಂಡ ಚಿನ್ನಪ್ಪ ಇಂದು ಕೊಡಗಿನ ಚಾರಿತ್ರಿಕ ಹಾಗೂ ಜಾನಪದೀಯ ಅಧ್ಯಯನಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಬಿಂದುವಾಗಿದ್ದಾರೆ. ರಾಜಕೀಯ, ಸಮಾಜ, ಜಾತಿಪದ್ಧತಿ, ಸಂಪ್ರದಾಯ, ರೀತಿರಿವಾಜುಗಳನ್ನು ದಾಖಲಿಸುವ 'ಪಟ್ಟೋಲೆ ಪಳಮೆ' (1924) ಶೀರ್ಷಿಕೆಯೇ ಸೂಚಿಸುವಂತೆ ಬಾಯಿಂದ ಬಾಯಿಗೆ ಹರಿದು ಬಂದ ಮಾತನ್ನೊಳಗೊಂಡ ಕೃತಿ" (1995:79)ಯಾಗಿದೆ.

ಕೊಡಗಿನ ರಾಜಕೀಯ ಇತಿಹಾಸ, ಕೊಡಗಿನ ಬಗೆಗಿರುವ ಪೌರಾಣಿಕ ಹಿನ್ನೆಲೆ, ಹಾಗೂ ಕೊಡವರ ಹುಟ್ಟು–ಸಾವು ನಡುವೆ ಬರುವ ಆಚರಣೆಗಳನ್ನು ಗ್ರಂಥದಲ್ಲಿ ಹಿಡಿದಿಡುವುದಕ್ಕೆ ಸಾಧ್ಯವಾಗಿದೆ. ಸಾಮಾಜಿಕ ಆಚರಣೆಗಳಿಗೆ ಸಂಬಂಧಿಸಿದಂತೆ ಪ್ರಕಟವಾದ ಮೊದಲ ಗ್ರಂಥವೆಂಬ ಹೆಗ್ಗಳಿಕೆಯಿದೆ.

1929ರಲ್ಲಿ ನಂದೊಳ್ಗೆ ಶೀನಪ್ಪ ಹೆಗ್ಡೆ ಸಂಗ್ರಹಿಸಿದ ತುಳು ಭಾಷೆಯಲ್ಲಿರುವ 'ತುಳುವಾಲ ಬಲಿಯೇಂದ್ರ' ಪ್ರಕಟವಾಯಿತು. ಮಂಗಳೂರಿನ ನಿತ್ಯಾನಂದ ಗ್ರಂಥಾಲಯದ ಯು.ವೆಂಕಟರಾವ್ ಪ್ರಕಾಶನದ ಕೃತಿ 15 ಬಾರಿ ಮರುಮುದ್ರಣಗೊಂಡಿದೆ.

'ತುಳುವಾಲ ಬಲಿಯೇಂದ್ರ' ತುಳುವರು ದೀಪಾವಳಿ ಹಬ್ಬದಂದು ಬಲಿ ಚಕ್ರವರ್ತಿಯನ್ನು ಪೂಜಿಸುವ ಕತೆ. ಬಲಿ ಚಕ್ರವರ್ತಿಯು ಭೂಲೋಕದಲ್ಲಿ ಕೃಷಿಕರ ಆರಾಧ್ಯದೈವ. ಆತನನ್ನು ವಿಷ್ಣುವು ವಾಮನನ ಅವತಾರದಲ್ಲಿ ಬಂದು ಅಮರವಾಗಿಸಿದ ಕತೆಯೇ ಬಲೀಂದ್ರ ಕತೆ. ಬಲೀಂದ್ರ ಚಕ್ರವರ್ತಿ ದಾನದಲ್ಲಿ ಶ್ರೇಷ್ಠನೆಂದು ಭೂಲೋಕದಲ್ಲಿ

ಹೆಸರು ಪಡೆದಿದ್ದ. ವಾಮನನೆಂಬ ಬ್ರಾಹ್ಮಣನು ಬಲಿಚಕ್ರವರ್ತಿಯೊಂದಿಗೆ ದಾನ ಕೇಳುವಾಗ ಬೇಕಾದದ್ದನ್ನು ಕೊಡುವೆನೆಂದು ಮಾತುಕೊಡುತ್ತಾನೆ. ಮಾತುಕೊಟ್ಟಿರುವಂತೆ ವಾಮನನಿಗೆ ಬಲೀಂದ್ರ ಮೂರು ಹೆಜ್ಜೆ ಇಡುವುದಕ್ಕೆ ಹೇಳುತ್ತಾನೆ. ವಾಮನ ಒಂದು ಹೆಜ್ಜೆಯಲ್ಲಿ ಆಕಾಶವನ್ನು, ಇನ್ನೊಂದು ಹೆಜ್ಜೆಯಲ್ಲಿ ಭೂಮಿಯನ್ನೂ ಹಾಗೂ ಮೂರನೆಯ ಹೆಜ್ಜೆಯನ್ನು ಎಲ್ಲಿ ಇಡಬೇಕೆಂದು ಬಲಿಚಕ್ರವರ್ತಿಗೆ ಕೇಳುವಾಗ ತನ್ನ ತಲೆಯನ್ನೇ ತೋರಿಸುತ್ತಾನೆ. ದಾನಕೊಟ್ಟು ಮರಣಹೊಂದಿದ ಆತನನ್ನು ತುಳುವರು ಪೂಜೆ ಮಾಡುತ್ತಾರೆ. ತುಳುವರಿಗೆ ವಿಶಿಷ್ಟ ಹಬ್ಬವಾದುದರಿಂದ ಬಲೀಂದ್ರನಿಗೆ ಮರ ಹಾಕುತ್ತಾರೆ. ತುಳಸೀಕಟ್ಟೆಯ ಪಕ್ಕದಲ್ಲಿ ಬಲೀಂದ್ರ ಮರ(ಹಾಳೆ ಮರ)ವನ್ನು ಹಾಕಿ ಶೃಂಗರಿಸಿ ಎಡೆ ಬಡಿಸಿ ಆವಾರ ಸ್ವೀಕರಿಸಲು ಕರೆಯುತ್ತಾರೆ. ಸಾಮಾನ್ಯವಾಗಿ ಅಕ್ಟೋಬರ್–ನವೆಂಬರ್ ತಿಂಗಳ ನಡುವಿನ ಅಂತರದಲ್ಲಿ ದೀಪಾವಳಿ ಹಬ್ಬ ಆಚರಣೆಗೊಳ್ಳುತ್ತದೆ. ವರ್ಷಕ್ಕೊಮ್ಮೆ ಬರುವ ಬಲೀಂದ್ರ ಪೂಜೆ ಅನಿಷ್ಟಗಳನ್ನು ಕೊಂಡು ಹೋಗುತ್ತಾನೆ ಎಂಬ ನಂಬಿಕೆಯಿದೆ.

ತುಳುವರ ಆಚರಣೆಗಳಲ್ಲೆ ಸಾಂಸ್ಕೃತಿಕ ಮಹತ್ವವನ್ನೊಳಗೊಂಡ ದೀಪಾವಳಿ ಹಬ್ಬದ ಹಾಡುಗಳನ್ನು ಶೀನಪ್ಪ ಹೆಗ್ಗಡೆಯವರು ಮೂರು ಸಂಧಿಗಳಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಮೂರು ಸಂಧಿಗಳಲ್ಲಿ 51 ಹಾಡುಗಳಿವೆ. ಹಾಡುಗಳು ಕಥನ ಗೀತೆಗಳಂತಿವೆ. ಪ್ರತೀ ಹಾಡಿನ ಆರಂಭದಲ್ಲಿ 'ಹೋ!!! ಎಂಬುದಾಗಿ ಹೇಳುತ್ತಾರೆ. ಹಾಡಿನ ಕೊನೆಗೆ 'ಕ್ಕೂ ಬಲ್ಲಾ ಬಲಿಯೇಂದ್ರಾ!' (ಕ್ಕೂ ಬಾರೋ ಬಲಿಯೇಂದ್ರ!) ಎಂಬುದಾಗಿ ಮೂರು ಮೂರು ಬಾರಿ ಕರೆಯುತ್ತಾರೆ. ಬಲೀಂದ್ರ ಹಬ್ಬ ಹೀಗೆ ಕೊನೆಗೊಳ್ಳುತ್ತದೆ. ಬಲೀಂದ್ರನಿಗೆ ಹಾಕಿರುವ ಮರವನ್ನು ಕಿತ್ತು ನದಿ ಪಕ್ಕ ಇಡುತ್ತಾರೆ. ಪ್ರತೀ ವರ್ಷಕ್ಕೊಮ್ಮೆ ಬಲೀಂದ್ರ ಹಬ್ಬ ಮಾಡುವಾಗ ಬಲೀಂದ್ರನನ್ನು ಕರೆಯುವುದು ರೂಢಿ.

ಮೊದಲ ಘಟ್ಟದಲ್ಲಿ ಪ್ರದರ್ಶನ ಕಲೆಗಳ ಬಗೆಗೆ ಯಾವುದೇ ಸಂಗ್ರಹಗಳು ಪ್ರಕಟವಾಗಿಲ್ಲ.

ಜಾನಪದ ಲೇಖನಗಳು

ಕನ್ನಡ ಜಾನಪದ ಅಧ್ಯಯನಕ್ಕೆ ಸಂಬಂಧಿಸಿದಂತೆ ಮೊದಲ ಘಟ್ಟದಲ್ಲಿ ಪ್ರದರ್ಶನ ಕಲೆ, ಕಥೆ, ಐತಿಹ್ಯ, ನಂಬಿಕೆಗಳ ಬಗ್ಗೆ 50ಕ್ಕಿಂತಲೂ ಹೆಚ್ಚು ಲೇಖನಗಳು ಪ್ರಕಟವಾಗಿವೆ. ಮೆಕೆಂಝಿಯ **'ದಿ ವಿಲೇಜ್ ಫೀಸ್ಟ್'** (1873), ಜೆ.ಎಫ್. ಕಿಟ್ಟೆಲ್‌ರ **'ಮ್ಯಾರೇಜ್ ಇನ್ ಕೂರ್ಗ್', 'ಡೆಮನ್ ಇನ್ ಕೂರ್ಗ್'** (1873), ಎ.ಸಿ. ಬರ್ನೆಲ್‌ನ **'ಡೆವಿಲ್ ವರ್ಷಿಪ್ ಆಫ್ ತುಳುವಾಸ್'** (1893), ಬಾಸೆಲ್ ಮಿಷನರಿಯ **'ಭೂತಸೇವೆ'** (1891), ಯು.ಎನ್.ನರಸಿಂಹಯ್ಯಂಗಾರ್‌ರ **'ಮಲೆನಾಡಿನ ಭೂತಗಳು'** ಹಾಗೂ **'ದಿ ಭೂತಾಸ್**

ಆಫ್ ನಾಗರ ಮಲನಾಡ್ ಇನ್ ಮೈಸೂರ್' (1870), **'ದಿ ಲೆಜೆಂಡ್ಸ್ ಆಫ್ ದಿ ತುಂಗಭದ್ರಾ ರಿವರ್'** (1872), ಎಚ್.ಕೆ. ಮಲ್ಲಪ್ಪನವರ **'ಕನ್ನಡ ನಾಣ್ನುಡಿಗಳಲ್ಲಿ ಅರ್ಧ ಗಂಟೆಯ ಕಾಲಕ್ಷೇಪ', 'ಕನ್ನಡ ಗಾದೆಗಳ ಜೀರ್ಣೋದ್ಧಾರ'** (1919). ಸಿ.ಹನುಮಂತೇಗೌಡರ **'ಲಾವಣಿ'** (1919), 'ಶ್ರೀಕಂಠೇಶಗೌಡರ **'ಲಾವಣಿಗಳು'**(1919), ಪಿ. ಧೂಲಾಸಾಹೇಬರ **'ಲಾವಣಿಗಳ ಲಾವಣ್ಯ'** (1923), ಬೆಟಗೇರಿ ಕೃಷ್ಣಶರ್ಮರ **'ಕಿರೆಗೆಹಾರ'** (1923), **'ಹಳ್ಳಿಗರ ಹಾಡುಗಳು'** (1930), **ಜನಪದ ಗೋಷ್ಠಿಯ ಅಧ್ಯಕ್ಷ ಭಾಷಣ** (1947), ಹಲಸಂಗಿ ಚೆನ್ನಮಲ್ಲಪ್ಪನವರ **'ಹಳ್ಳಿಯ ಹಾಡುಗಳು'** (1924), ಮಾಸ್ತಿ ವೆಂಕಟೇಶ ಅಯ್ಯಂಗಾರರ **'ಕನ್ನಡ ಲಾವಣಿಗಳ ಸಾಂಗತ್ಯ'** (1925), **'ದಿ ಫೋಕ್ ಸಾಂಗ್ಸ್ ಇನ್ ದಿ ಕರ್ನಾಟಕ'** (1931), **'ಕರ್ನಾಟಕದ ಜನತೆಯ ಸಂಸ್ಕೃತಿ'** (1931), **'ಕರ್ನಾಟಕದ ಜನಪದ ಸಾಹಿತ್ಯ'** (1936), ಬಿ.ಎ. ಸಾಲೆತೂರರ **'ದಿ ಫೋಕ್ ಸಾಂಗ್ಸ್ ಆಫ್ ತುಳುನಾಡ್'** (1936), ಪ್ರಹ್ಲಾದ ನರೇಗಲ್ಲರ **'ಜನಪದ ಗೀತ ಗಾಯತ್ರಿ'** ಹಾಗೂ **'ತ್ರಿಪದಿ'** (1928), 'ನಾಣ್ನುಡಿ'(1936), ತೀ.ನಂ. ಶ್ರೀಕಂಠಯ್ಯನವರ 'ಜನಪದ ಸಾಹಿತ್ಯ' (1929), 'ಮಕ್ಕಳಿಗೆ ಹೇಳುವ ಕಥೆಗಳು' (1931), ದ.ರಾ.ಬೇಂದ್ರೆಯವರ 'ಜನಪದ ಸಾಹಿತ್ಯ' (1947) ಇನ್ನೂ ಹಲವಾರು ಲೇಖನಗಳು, ಮೊದಲ ಘಟ್ಟದಲ್ಲಿ ಬಂದಿವೆ. ಇಂಡಿಯನ್ ಆಂಟಿಕ್ವೆರಿ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಜೀವನ ಪತ್ರಿಕೆ, ಜಯಕರ್ನಾಟಕ, ಜಯಂತಿ, ಬಾಸೆಲ್ ಮಿಶನ್ ಪ್ರೆಸ್ಸ್, ಸುಬೋದ ಪತ್ರಿಕೆ, ತ್ರಿವೇಣಿ ಪತ್ರಿಕೆ ಮದ್ರಾಸ್ ಇವುಗಳಲ್ಲಿ ಪ್ರಕಟವಾಗಿವೆ.

1891ರಲ್ಲಿ ಮಂಗಳೂರು ಬಾಸೆಲ್ ಮಿಶನ್ ಪ್ರೆಸ್ಸ್‌ನಲ್ಲಿ **'ಭೂತಸೇವೆ'** ಪ್ರಕಟವಾಗಿದ್ದು, ಮಂಗಳೂರಿನ ಬಾಸೆಲ್ ಪ್ರಾಚೀನ ಪತ್ರಾಗಾರದಲ್ಲಿ ಇದರ ಒಂದು ಪ್ರತಿ ಲಭ್ಯವಿದೆ.[59]

"ಭೂತಸೇವೆ ಎಂಬ ಹೆಸರಿನ ಪುಸ್ತಕವು ಕನ್ನಡ ಲಿಪಿಯಲ್ಲಿದ್ದು ಇಪ್ಪತ್ತೊಂದುವರೆ ಪುಟಗಳಷ್ಟು ವಿಸ್ತಾರವಾಗಿದೆ. ಕಿರುಪುಸ್ತಕದಲ್ಲಿ ಮೂರು ಭಾಗಗಳಿವೆ. ಭಾಗ 'ಎ'ಯಲ್ಲಿ ಪಿಶಾಚಿ, ಭೂತ ಹಾಗೂ ಪ್ರೇತ ಮೊದಲಾದ ಕ್ಷುಲ್ಲಕ ದೈವಗಳನ್ನು ಕ್ರಮಾಗಿ ಸಂಕ್ಷಿಪ್ತವಾಗಿ ವರ್ಣನೆ, ಭಾಗ 'ಬಿ'ಯಲ್ಲಿ ಗರಡಿ, ಭೂತಸ್ಥಾನ, ಭೂತಕೊಟ್ಯ ಹಾಗೂ ಬಿರ್ಮಸ್ಥಾನ ಗುಡಿಗಳ ವಿವರ, ಭಾಗ 'ಸಿ'ಯಲ್ಲಿ ಉತ್ಸವಗಳು, ಆಚರಣೆಗಳು ಮೊದಲಾದ ಆರಾಧನ ಕ್ರಮಗಳ ಬಗ್ಗೆ ವಿವರವಿದೆ. ಮೊದಲಿಗೆ ಪ್ರತಿಯೊಂದು ವಿಷಯದ ಪ್ರತ್ಯೇಕ ಪ್ರತ್ಯೇಕವಾದ ವಿವರಣೆ ಅಥವಾ ವ್ಯಾಖ್ಯೆ ದೊರಕುತ್ತದೆ. ಅದರಿಂದ ಯಾವುದೇ ನಿರ್ದಿಷ್ಟ ಉತ್ಸವದ ದಿನ, ಸ್ಥಳ, ಏರ್ಪಡಿಸುವವರು, ಆಚರಣೆಯಲ್ಲಿ ಭಾಗವಹಿಸುವವರು, ಆಚರಣೆಯಲ್ಲಿ ಭಾಗವಹಿಸಿದವರ ಬಗ್ಗೆ ಮಾಹಿತಿ ಇದೆ. ಸಮಯೋಚಿತವಾಗಿದ್ದಲ್ಲಿ ಒಂದೇ ಉತ್ಸವದ ವಿವಿಧ ರೀತಿಗಳನ್ನು ವಿವರಿಸಲಾಗಿದೆ. *ಉದಾ:* ಕೋಲ. ಎರಡನೆಯದಾಗಿ

ಉತ್ಸವಾಚರಣೆಯ ವಿವಿಧ ಕಾರ್ಯಕ್ರಮಗಳ ವಿವರಣೆಯಿದೆ. ಸಂದರ್ಭದಲ್ಲಿ ವಿವಿಧ ಮುಖವಾಡಗಳು, ಆಯುಧಗಳು, ಪೋಷಾಕುಗಳು, ಮತ್ತಿತ್ತರ ಸಾಮಾಗ್ರಿಗಳು ಉಲ್ಲೇಖಿಸಲ್ಪಟ್ಟಿವೆ.”[60] (1986:10)

1898ರಲ್ಲಿ **ಎ.ಸಿ.ಬರ್ನೆಲ್‌ನ ‘ದಿ ಡೆವಿಲ್ ವರ್‌ಷಿಪ್ ಆಫ್ ದಿ ತುಳುವಾಸ್’** ಪ್ರಬಂಧಗಳ ಮಾಲಿಕೆಯು ಪ್ರಕಟವಾಯಿತು.[61] ಮೂಲಭೂತವಾಗಿ ಸಂಶೋಧನ ಪ್ರಬಂಧಗಳ ಮಾಲಿಕೆಯು ತುಳು ಪಾಡ್ದನಗಳ ಸಂಕಲನವಾಗಿದೆ. ಭೂತಗಳ 26 ಪಾಡ್ದನಗಳು ಇಂಗ್ಲಿಷಿನಲ್ಲಿವೆ. ಪ್ರಬಂಧದಲ್ಲಿ ಉಲ್ಲೇಖಿಸಿರುವ ಪಾಡ್ದನಗಳ ತುಳು ಮೂಲವನ್ನು ರೋಮನ್ ಲಿಪಿಯಲ್ಲೂ ಹಾಗೂ ಅದರ ಇಂಗ್ಲಿಷ್ ಅನುವಾದವನ್ನೂ ನೀಡಲಾಗಿದೆ. ಸಂಗ್ರಹದ ಬಗ್ಗೆ ಬರ್ನೆಲ್ ಅಭಿಪ್ರಾಯ, “This contains collection o the Tulu incantations, used at the ceramonies o Bhutha worship as practiced in South Canara, an which are Mogling’s (at mangalore) the next ive were written down by a Tantry (Tulu Brahman), at the Mangalore Tahashildar’s requeat or me remainder were collected by the agents. I sent to dierent places and several were dictated by a blind Pombada, Namad Kanta, who also given me inormation as to where other such compositions could be hered. They are all oral and contain many words not now in use. Pombadas are averse ti reciting them to strangers. The igures show the dress o the priest to dances and who is supposed to personate the Bhuta they are rom actual observation by people in my service.” ತುಳು ಪಾಡ್ದನಗಳನ್ನು ಸಂಗ್ರಹಿಸಿದ ವಿಧಾನವನ್ನು ಬರ್ನೆಲ್ ಪ್ರಬಂಧಗಳಲ್ಲಿ ಹೇಳಿಕೊಂಡಿದ್ದಾನೆ.

ಎರಡನೆಯ ಪ್ರಬಂಧವು ‘On Bhutas, By the late Rev. a Manner’. ಮೂರನೆಯ ಪ್ರಬಂಧವು “Description o a Bhuta incantation as practice in South Canara (Madras presidency, witnessed by A.C. B and J. H. on March 23rd 1872, at Mnagalore”. ಈ ಭಾಗದಲ್ಲಿ ಎ.ಸಿ.ಬರ್ನೆಲ್ ಮಾಡಿದ ಕ್ಷೇತ್ರಕಾರ್ಯದ ಅನುಭವಗಳ ವಿವರವಿದೆ. ನಾಲ್ಕನೇ ಪ್ರಬಂಧವು “Extracts rom Burnell’s notes and the commentary thereon made ater witnessing the orcing ceremonies”. ಐದನೇ ಪ್ರಬಂಧವು “Igures o Bhutas rom Tulu-Land”. ನಾಲ್ಕು ಹಾಗೂ ಐದನೆಯ ಪ್ರಬಂಧಗಳಲ್ಲಿ ಭೂತಾರಾಧನೆಯ ಸಾಂದರ್ಭಿಕ ವಿವರಣೆ, ಭೂತದ ಆಕೃತಿಗಳ ವಿವರಣೆಯಿದೆ. ಆರನೆಯ ಪ್ರಬಂಧದಲ್ಲಿ ಎ.ಮೆನ್ನರ್ ಒದಗಿಸಿದ 133 ಭೂತಗಳ ಹೆಸರಿನ ಪಟ್ಟಿಯುನ್ನು ಕೊಡಲಾಗಿದೆ. ಏಳನೇ ಪ್ರಬಂಧದಲ್ಲಿ

"The oigin of the demons by the late Rev. A. Manner" ಭೂತಗಳ ಉಗಮಕ್ಕೆ ಸಂಬಂಧಿಸಿದ ಪಾಡ್ದನವೊಂದರ ತುಳು ಮೂಲ ಹಾಗೂ ಅದರ ಇಂಗ್ಲಿಷ್ ಅನುವಾದವಿದೆ. ಪಂಜುರ್ಲಿ, ಜುಮಾದಿ, ಕೋಟಿಚೆನ್ನಯ್ಯ, ಕಲ್ಲುರ್ಟಿ, ಬೊಬ್ಬರ್ಯ, ಅತ್ತಾವರ ದೈಯ್ಯೊಂಗುಳು, ಮರುಳು ಜುಮಾದಿ, ತೊಡಕಿನಾರ್, ಕಾಳಬೈರವ ಹತ್ತು ಭೂತಗಳ ವೇಷಸಹಿತವಾಗಿರುವ ಬಣ್ಣದ ಚಿತ್ರಗಳಿವೆ. ಪ್ರಬಂಧದಲ್ಲಿ, ಬರ್ನೆಲ್ ಸಂಗ್ರಹಿಸಿದ ಪಾಡ್ದನಗಳು ಇಂತಿವೆ: ಜುಮಾದಿ, ಪಂಜುರ್ಲಿ (i) ದೇಯಿಬೈದೆದಿ, ಕೋಟಿಚೆನ್ನಯ್ಯ (ii) ಕೋಟಿಚೆನ್ನಯ್ಯ (iii) ಜಾರಂತಾಯ, ಕೊಡಮಣತ್ತಾಯ, ಕನಪಾಡಿತ್ತಾಯ, ಮುಂಡಿಪಾಡಿತ್ತಾಯ, ಅಂಬಾಡಿ ಪಂಜುರ್ಲಿ, ಪಿಲಿಚಾಮುಂಡಿ, ತೊಡಕಿನಾರ್, ಸಾರಾಲ ಜುಮಾದಿ, ಮುಡದೇರ್ (ಕಾಳಬೈರವ), ಅತ್ತಾವರ ದೈಯ್ಯೊಂಗುಳು, ಕೋಟಿಚೆನ್ನಯ (iv) ಕಲ್ಕುಡ, ಪೊಸಮಹಾರಾಯೆ, ಕಣ್ಣಲ್ಲಾಯೆ, ಜುಮಾದಿಯ ಸಂಚಾರ, ಜಾರಂತಾಯೆ, ಪೆರಾರ್‌ಬೊಳಂದಿ, ಮಿಜಾರ್‌ಕೊಡಪುಣತ್ತಾಯ, ಕಾಂತುನೆಕ್ರಿ ಭೂತ, ಮಗ್ರಂದಾಯ, ಕಲ್ಲುರ್ಟಿ, ಬೊಬ್ಬರ್ಯ, ಪಂಜುರ್ಲಿ (v) ಹಾಗೂ ವೋಡಿಲ್ತಾಯ–ಹೀಗೆ ಒಟ್ಟು 26 ಭೂತಗಳ 29 ಪಾಡ್ದನಗಳು ಪ್ರಬಂಧದಲ್ಲಿವೆ. ಪಾಡ್ದನಗಳ ಸಂಗ್ರಹದಲ್ಲಿ ಎ.ಮೆನ್ನರ್ ಸಂಗ್ರಹಿಸಿದ ಪಾಡ್ದನಗಳ ಭಿನ್ನಪಾಠಗಳೂ ಇವೆ. ಬರ್ನೆಲ್‌ನು ಭೂತಾರಾಧನೆಯ ಆಚರಣೆಗಳ ಸಾಂಸ್ಕೃತಿಕ ಸ್ವರೂಪಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಕೊಟ್ಟಿದ್ದಾನೆ. ಬರ್ನೆಲ್ ನೀಡಿರುವ ವರದಿಗೆ ಇವತ್ತು ಐತಿಹಾಸಿಕ ಮಹತ್ವವಿದೆ. 1872ನೆಯ ಇಸವಿ, ಮಾರ್ಚ್ ತಿಂಗಳ 23 ಹಾಗೂ ಅನಂತರದ ಮೂರು ರಾತ್ರಿಗಳಲ್ಲಿ (ಶುಕ್ರವಾರದಿಂದ ಮಂಗಳವಾರದವರೆಗೆ) ಮಂಗಳೂರಿನ ದೂಮಪ್ಪ (ಬಿಲ್ಲವ ಕುಟುಂಬದ ಮುಖ್ಯಸ್ಥ) ಎಂಬವರ ಮನೆಯಲ್ಲಿ ನಡೆದ ಭೂತಗಳ ಕೋಲವನ್ನು ಪ್ರತ್ಯಕ್ಷ ನೋಡಿ ಮಾಹಿತಿಗಳನ್ನು ದಾಖಲಿಸಲಾಗಿದೆ. ಇಂದಿಗೆ 123 ವರ್ಷಗಳ ಹಿಂದೆ (1872ರಿಂದ 1995ರ ಅಂತರ) ಭೂತಾರಾಧನೆಯ ಆಚರಣೆಯ ಸ್ವರೂಪ ಹೇಗಿತ್ತು ಎಂಬುದನ್ನು ತೌಲನಿಕವಾಗಿ ಅಧ್ಯಯನಿಸುವುದಕ್ಕೆ ಸಾಧ್ಯವಿದೆ. ಆ ಮೂಲಕ ಒಂದು ಕಾಲಘಟ್ಟದ ಐತಿಹಸಿಕ ಮಹತ್ವ ಹಾಗೂ ಆರಾಧನೆಯ ಸಾಂಸ್ಕೃತಿಕ ಸ್ವರೂಪವನ್ನು ಅರ್ಥೈಸುವುದಕ್ಕೆ ಅವಕಾಶವಿದೆ.”**62** (ಬರ್ನೆಲ್ 1894–97:7–11)

ಬರ್ನೆಲ್ ಸಂಗ್ರಹಿಸಿರುವ ಪಾಡ್ದನಗಳ ಪಠ್ಯಗಳಿಗೆ 123 ವರ್ಷಗಳ ಇತಿಹಾಸವಿದೆ. ಪಾಡ್ದನಗಳು ಎ.ಮೆನ್ನರ್ ಸಂಗ್ರಹಿಸಿರುವುದಕ್ಕಿಂತ 15 ವರ್ಷ ಪೂರ್ವದಲ್ಲೇ ಸಂಗ್ರಹಗೊಂಡಿವೆ. ಬರ್ನೆಲ್ ಸಂಗ್ರಹಿಸಿರುವ ಪಾಡ್ದನಗಳು ಮುಂದೆ ಮೆನ್ನರ್ ಸಂಗ್ರಹಿಸುವ ಪಾಡ್ದನಗಳಿಗೆ ಪೂರಕವಾಗಿದೆ. ಇವರಿಬ್ಬರು ಸಂಗ್ರಹಿಸಿರುವ ಪಾಡ್ದನಗಳ ಪಠ್ಯಗಳಲ್ಲಿ ಭಿನ್ನರೂಪಗಳಿವೆ.

1935ರಲ್ಲಿ **ದೇವುಡು ನರಸಿಂಹಶಾಸ್ತ್ರಿಯವರ 'ಕರ್ನಾಟಕ ಸಂಸ್ಕೃತಿ'** ಕೃತಿಯನ್ನು ಸಾಹಿತ್ಯದ ಆಧಾರದ ಮೇಲೆ ಚರ್ಚಿಸುತ್ತಾ ಹೋಗುತ್ತಾರೆ. ಆ ಮೂಲಕ ಕನ್ನಡ ಜನಪದ ಸಾಹಿತ್ಯದ ವಿವಿಧ ಮುಖಗಳಲ್ಲಿ ಕರ್ನಾಟಕದ ಸಂಸ್ಕೃತಿಯನ್ನು ಕಾಣಲು ಸಾಧ್ಯವಾಗುತ್ತದೆ. ದೇವುಡು ಸ್ವತಃ ಸಂಗ್ರಾಹಕರಲ್ಲ. ಕೃತಿಯಲ್ಲಿ ಅರ್ಚಕ ಬಿ. ರಂಗಸ್ವಾಮಿ ಯವರ ಹುಟ್ಟಿದ ಹಳ್ಳಿಯ ಹಾಡು ಕೃತಿಯನ್ನೂ, ಗರತಿಯ ಹಾಡುಗಳನ್ನೂ, ಮಲ್ಲಿಗೆ ದಂಡೆ, ಜೀವನಸಂಗೀತ ಗೀತಸಂಕಲನಗಳನ್ನೂ ಚರ್ಚೆಯುದ್ದಕ್ಕೂ ಬಳಸಿಕೊಂಡಿದ್ದಾರೆ. ಅಲ್ಲಲ್ಲಿ ಕೆಲವು ಲಾವಣಿ, ಗಾದೆ, ಒಗಟು, ಆಚಾರ–ವಿಚಾರ, ಸಂಪ್ರದಾಯಗಳಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ಕಲೆಹಾಕಿದ್ದಾರೆ.

ದೇವುಡ 'ಸಂಸ್ಕೃತಿ' ಎಂದರೆ ಏನು ಎಂಬುದಕ್ಕೆ ಹೀಗೆ ಹೇಳುತ್ತಾರೆ, "ನಮ್ಮ ಜನಾಂಗದಲ್ಲಿರುವ ನಾನಾ ಕುಲಗಳು, ಆಚಾರ ವ್ಯವಹಾರಗಳು, ಹಾಡು–ಕತೆ–ಗಾದೆಗಳು, ಆಟ–ಪಾಠ–ಊಟ ಮೊದಲಾದವುಗಳು, ವಿಶೇಷ ಪದ್ಧತಿಗಳು ಇವುಗಳಲ್ಲಿ ಅಡಗಿ ಕುಳಿತಿರುವ ಸಂಸ್ಕೃತಿಯನ್ನು ಈಚೆಗೆ ಹಿಡಿದೆಳೆದು ಪ್ರದರ್ಶಿಸುವ ಉದ್ದೇಶದಿಂದ ಇವುಗಳನ್ನೆಲ್ಲ ವಿಮರ್ಶೆ ಮಾಡುತ್ತಾ, ಸಾಧ್ಯವಾದ ಮಟ್ಟಿಗೂ ಸಾಧಾರಣವಾಗಿ ವಿವೇಚಿಸುತ್ತಾ ಮುಂದುವರಿಯುವೆವು. ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು. ಹಾರುವರೆಂದು ಹೆಚ್ಚಿಲ್ಲ ಹೊಳೆಯರೆಂದು ಕಡಿಮೆಯಿಲ್ಲ, ಕನ್ನಡನಾಡಿನಲ್ಲಿ ನೆಲೆಸಿ, ಕನ್ನಡಿಗರು ನಾವು ಎಂದು ಅಭಿಮಾನ ಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವೂ." ದೇವುಡು ಜಾನಪದವನ್ನು ಸಂಸ್ಕೃತಿ ಎಂದು ಬಳಸಿಕೊಂಡಿದ್ದಾರೆ. ಸಂಸ್ಕೃತಿಯನ್ನು ಪಾಮರ ಸಂಸ್ಕೃತಿ ವಾಸ್ತವ್ಯ ಸಂಸ್ಕೃತಿ ಹಾಗೂ ಜನತೆಯ ಸಂಸ್ಕೃತಿ ಎಂದು ಕರೆದಿದ್ದಾರೆ.

ದೇವುಡು ಕರ್ನಾಟಕ ಸಂಸ್ಕೃತಿ ಕೃತಿಯಲ್ಲಿ ಗಂಡಸರ ಹಾಡುಗಳು, ಹೆಂಗಸರ ಹಾಡುಗಳು, ಕತೆಗಳು, ಗಾದೆಗಳೂ, ಒಗಟೆಗಳೂ, ಅಚಾರ ಸಂಪ್ರದಾಯಗಳು–ಹೀಗೆ ಜಾನಪದದ ವಿವಿಧ ಪ್ರಕಾರಗಳ ಪಠ್ಯಗಳನ್ನು ಒದಗಿಸಿದ್ದಾರೆ.

ದೇವುಡು "ಜಾನಪದವು ಸ್ವತಂತ್ರವಾಗಿ ಹುಟ್ಟಿ ಬೆಳೆದುದಲ್ಲ. ಅದು ಶಿಷ್ಟ ಸಂಪ್ರದಾಯದ, ವೇದ ಪುರಾಣದಿಗಳಿಂದ ಜಿಗಿದು ಒಂದಲ್ಲ ಒಂದು ರೂಪದಿಂದ ಅಲ್ಪಸ್ವಲ್ಪ ವ್ಯತ್ಯಾಸದಿಂದ ಉಳಿದುದಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. 'ಗಂಡಸರ ಹಾಡುಗಳು' ವಿಭಾಗದಲ್ಲಿ ಲಾವಣಿಗಳು, ಸುತ್ತಿಯ ಲಾವಣಿಗಳು, ಸವಾಲು ಲಾವಣಿಗಳು, ಶೃಂಗಾರ ಪದಗಳು, ವೇದಾಂತದ ಲಾವಣಿಗಳು, ವಿನೋದ ಪದಗಳು, ಕೋಲಾಟದ ಪದಗಳು, ತುಂಡು ಪದಗಳು, ಹಾಸ್ಯದ ಪದಗಳು, ವಿಶೇಷ ಪದಗಳು ಹೀಗೆ ಹಲವು ವಿಧಗಳಲ್ಲಿ ವಿಭಾಗಿಸಿಕೊಂಡಿದ್ದಾರೆ.

‘ಹೆಂಗಸರ ಹಾಡುಗಳು’ ಎಂಬ ವಿಭಾಗದಲ್ಲಿ ಬ್ರಾಹ್ಮಣೀಯ ಹಾಡುಗಳು, ಶೂದ್ರಾಣೀಯ ಹಾಡುಗಳು ಎಂದು ವಿಭಾಗ ಮಾಡಿಕೊಡುತ್ತಾರೆ. ವಿಭಾಗಗಳಲ್ಲಿ ಅನೇಕ ಉಪವಿಭಾಗಗಳನ್ನು ಮಾಡಿದ್ದಾರೆ. ಕತೆಗಳು ವಿಭಾಗದಲ್ಲಿ ನಡೆದ ಕತೆಗಳು, ಪುರಾಣ ಕತೆಗಳು, ವಿನೋದ ಕತೆಗಳು, ಎಂಬುದಾಗಿ ವಿಭಾಗಿಸಿ ಒಟ್ಟು ಕತೆಗಳನ್ನು ಸಂಕಲನದಲ್ಲಿ ನೀಡಿದ್ದಾರೆ. ಗಾದೆಗಳೂ ಒಗಟೆಗಳೂ ಭಾಗದಲ್ಲಿ ನೂರಾರು ಗಾದೆಗಳ ಹಾಗೂ ಒಗಟೆಗಳ ಹುಟ್ಟು, ಸ್ವರೂಪ ಹಾಗೂ ಐತಿಹ್ಯಗಳನ್ನು ದಾಖಲಿಸಿದ್ದಾರೆ. ಆಚಾರ ಸಂಪ್ರದಾಯ ಭಾಗದಲ್ಲಿ ಮದುವೆ, ಅಂತ್ಯೇಷ್ಠಿ, ಬಸವಿ ಬಿಡುವುದು, ಪಾಗು, ವ್ಯವಸಾಯ ಕ್ರಮ, ದೃಷ್ಟಿದೋಷ ಊಟ ತಿಂಡಿಗಳು, ಹೂವು, ವೈದ್ಯ, ತಲೆಗೆ ಮದ್ದು, ಮೊದಲಾದ ವಿಷಯಗಳ ಕುರಿತು ಗಜೇಟಿಯರ್, ದೇಶಿ ಹಾಗೂ ವಿದೇಶಿ ವಿದ್ವಾಂಸರ ಚರ್ಚೆಗಳನ್ನು ಬಳಸಿದ್ದಾರೆ. ದೇವುಡು ಜಾನಪದ ಸಾಹಿತ್ಯವನ್ನು ಶಿಷ್ಟ ಸಾಹಿತ್ಯದಿಂದ ಬೇರ್ಪಡಿಸಿ ಬೇರೆಯೇ ಅಧ್ಯಯನ ಶಿಸ್ತೆಂದು ಕಂಡುಕೊಂಡಂತೆ ತೋರುವುದಿಲ್ಲ. ಜನಪದಗೀತೆ ಲಾವಣಿಗಳು, ಕತೆಗಳು, ಗಾದೆಗಳು ಹಾಗೂ ಒಗಟುಗಳನ್ನು ವಿಶ್ಲೇಷಿಸುವಾಗ ಪುರಾಣ ಹಾಗೂ ವೇದಗಳ ಹಿನ್ನೆಲೆಯಲ್ಲೇ ಚರ್ಚಿಸುವುದಕ್ಕೆ ಪ್ರಯತ್ನಿಸಿದ್ದಾರೆ. ಈ ದೃಷ್ಟಿಯಿಂದ ದೇವುಡು ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆಯು ಪೂರ್ವಾಗ್ರಹ ಪೀಡಿತವಾಗಿದೆ ಎಂಬ ಅಪವಾದವಿದೆ. ಜನಪದ ಕತೆಗಳ, ಹಳ್ಳಿಗಾಡಿನ ಸಂಪ್ರದಾಯಗಳ ಸ್ಪಷ್ಟ ಪರಿಚಯ ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.[64]

1936ರಲ್ಲಿ **ಪ್ರಹ್ಲಾದ ಕುಲಕರಣಿ ‘ನಾಣ್ಣುಡಿ’** ಗ್ರಂಥ ಬರವಣಿಗೆಯ ಉದ್ದೇಶವನ್ನು ಹೇಳಿಕೊಂಡಿದ್ದಾರೆ. "ಕನ್ನಡ ನಾಣ್ಣುಡಿಗಳನ್ನು ಸಂಗ್ರಹಿಸಬೇಕೆಂಬ ಇಚ್ಚೆಯಿಂದ ಈಗ ಎಂಟು ಹತ್ತು ವರ್ಷಗಳಿಂದ ಆ ಕೆಲಸವನ್ನು ಮಾಡುತ್ತಿದ್ದೆನು. ಶಾಸ್ತ್ರೀಯವಾಗಿ ಅವುಗಳ ಅಭ್ಯಾಸವು ಆಗಬೇಕೆಂದು ಮನದಲ್ಲಿ ಬಂದಿತು. ಅದರ ಫಲವಾಗಿ ಬೆಳಗಾವಿಯ ಅರುಣೋದಯ ಪತ್ರಿಕೆಯಲ್ಲಿ ಒಂದೆರಡು ಲೇಖನಗಳೂ ಪ್ರಕಟವಾದುವು. ಧಾರವಾಡದ ಇತಿಹಾಸ ಪರಿಶೋಧಕ ಮಂಡಲದವರು ತಮ್ಮದೊಂದು ಪಾಕ್ಷಿಕ ಸಭೆಯಲ್ಲಿ ನನ್ನ ಉಪನ್ಯಾಸವನ್ನೇರ್ಪಡಿಸಿ ವಿಷಯದಲ್ಲಿ ಹೆಚ್ಚು ವಿಚಾರ ಮಾಡಲು ಅವಕಾಶ ಕಲ್ಪಿಸಿಕೊಟ್ಟರು. ಕನ್ನಡದಲ್ಲಿ ವಿಷಯದಲ್ಲಿ ಗ್ರಂಥಗಳು ಇಲ್ಲದ್ದರಿಂದ ಆ ಕೊರತೆಯನ್ನು ಪೂರಯಿಸಬೇಕೆಂದು ಚಿಕ್ಕ ಹೊತ್ತಿಗೆಯನ್ನು ಮುಂದಿರಿಸಿದ್ದೇನೆ." (ನಾಣ್ಣುಡಿ–1936: ಅರಿಕೆಭಾಗ) ಕುಲಕರಣಿ ಗಾದೆಗಳನ್ನು ಓದಿ ತಿಳಿದುಕೊಂಡ ಹಾಗೂ ಸಂಗ್ರಹಿಸಿದ ಅನುಭವಗಳನ್ನು ಗ್ರಂಥದಲ್ಲಿ ವಿಶ್ಲೇಷಿಸುವುದಕ್ಕೆ ಪ್ರಯತ್ನಿಸಿದ್ದಾರೆ. ಕನ್ನಡದ ಏಳ್ಗೆಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿರಿಸಿದ ಆಲೂರ ವೆಂಕಟರಾಯರಿಗೆ ಕೃತಿ ಅರ್ಪಿಸಲಾಗಿದೆ. ಕನ್ನಡದ ಗಾದೆಗಳನ್ನು ಸಂಗ್ರಹ ರೂಪವಾಗಿ, ವಿಶ್ಲೇಷಣಾತ್ಮಕವಾಗಿ, ವಿವರಣಾತ್ಮಕವಾಗಿ ಪ್ರಕಟಿಸಿದ

ಹಲವು ಕೃತಿಗಳನ್ನು ಆಧಾರವಾಗಿಟ್ಟುಕೊಂಡು, ಮತ್ತೆ ಗಾದೆಗಳನ್ನು ವಿವರಿಸುವುದಕ್ಕೆ ಗ್ರಂಥವನ್ನು ಆರು ಭಾಗ ಮಾಡಿಕೊಂಡಿದ್ದಾರೆ. 1. ಹೆಸರು, 2. ಲಕ್ಷಣ, 3. ಉತ್ಪತ್ತಿ, 4. ಮಹತ್ವ, 5. ಅರ್ಥ ವಿಪರ್ಯಾಸ ಹಾಗೂ 6. ಕೊನೆಯ ಮಾತು. ಗ್ರಂಥಸ್ಥ ಉಲ್ಲೇಖಗಳು, ಚಾರಿತ್ರಿಕ ಘಟನೆಗಳು, ಮೌಖಿಕ ವಿವರಣೆಗಳನ್ನು ಬಳಸಿಕೊಂಡು ಗಾದೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಪರಿಷತ್ಪತ್ರಿಕೆ, ಸಾಮತಿಸಂಗ್ರಹ, ಶಬ್ದಮಣಿದರ್ಪಣಂ, ಚನ್ನಬಸವ ಪುರಾಣ, ಭರತೇಶವೈಭವ, ಮೋಹನ ತರಂಗಿಣಿ ಇತ್ಯದಿ ಉಲ್ಲೇಖ ಒಂದೆಡೆ ಒಟ್ಟು ಗೂಡಿಸುವ ಕೆಲಸ ಆಗಿದೆ. 'ಹೆಸರು' ಭಾಗದಲ್ಲಿ 'ನಾಣ್ಣುಡಿ'ಗಿರುವ ಬೇರೆ ಬೇರೆ ಹೆಸರುಗಳಾದ ಲೋಕೋಕ್ತಿ, ಸಾಮತಿ, ಶಾಸ್ತ್ರ, ಗಾದೆ ಇತ್ಯಾದಿ ಸಮಾನಾರ್ಥಕ ಸಂಸ್ಕೃತ ಪದಗಳನ್ನು, ಅಪಭ್ರಂಶಗಳನ್ನು, ಛಂದೋಬದ್ಧ ಶಾಸ್ತ್ರ ಪದಗಳನ್ನು, ಪದ್ಯಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ನಾಣ್ಣುಡಿಯನ್ನು ವಿವರಿಸಿದ್ದಾರೆ. 'ನಾಣ್ಣುಡಿ' ಎಂಬುದು 'ನಾಡು' 'ನುಡಿ' ಎಂಬ ಎರಡು ಪದಗಳ ಸೇರುವಿಕೆಯಿಂದಾಗುತ್ತದೆ ಎಂದು ಕೇಶಿರಾಜ ಶಬ್ದಮಣಿ ದರ್ಪಣದ ಹೇಳಿಕೆಯನ್ನು ಉಲ್ಲೇಖಿಸಲಾಗಿದೆ.

ಭಾಗ ಎರಡು ನಾಣ್ಣುಡಿಗಳ 'ಲಕ್ಷಣ'. ನಾಣ್ಣುಡಿಗಳು ಬಳಕೆಯಾಗುವುದು ಎರಡು ರೀತಿ. ಒಂದು ಹೋಲಿಕಗಳ ಮೂಲಕ. ಇನ್ನೊಂದು ಉಪಮಾನಗಳ ಮೂಲಕ. ಇವೆರಡೂ ರೀತಿಯಲ್ಲಿ ಬಳಕೆಯಾಗುವ ನಾಣ್ಣುಡಿಗಳು ಕಾವ್ಯಗಳಲ್ಲಿ ಪ್ರಯೋಗವಾಗಿರುತ್ತದೆ. ಕಾವ್ಯದಲ್ಲಿ ಬಳಕೆಯಾದ 10 ನಾಣ್ಣುಡಿಗಳನ್ನು ಪಟ್ಟಿಮಾಡಿರುತ್ತಾರೆ. ನಾಣ್ಣುಡಿ ನಾಲ್ಕು ಗುಣಗಳು 1. ಸ್ವತಂತ್ರವಾದ ವಾಕ್ಯರೂಪದಲ್ಲಿರುವುದು, 2. ಅನುಭವಯಿಕ್ತವಾಗಿರುವುದು, 3. ಸ್ಯೂತ್ರರೂಪದಲ್ಲಿರುವುದು, 4. ಅಲಂಕಾರಯುಕ್ತವಾಗಿರುವುದು.

ಭಾಗ ಮೂರರಲ್ಲಿ ನಾಣ್ಣುಡಿಗಳ ಉತ್ಪತ್ತಿಯ ಚರ್ಚೆಯಿದೆ. "ನಾಣ್ಣುಡಿಗಳು ಪ್ರತಿಯೊಂದು ಜನಾಂಗದಲ್ಲಿಯೂ ಅದು ನಾಗರಿಕ ಸ್ಥಿತಿಯಲ್ಲಿರಲಿ, ಅನಾಗರಿಕ ಸ್ಥಿತಿಯಲ್ಲಿರಲಿ–ಪ್ರಚಾರದಲ್ಲಿರುವವು. ಇದನ್ನು ನೋಡಲು ಭಾಷೆಯೊಂದಿಗೆಯೇ ನಾಣ್ಣುಡಿಗಳು ಉತ್ಪನ್ನವಾದುವೆಂದು ಹೇಳಬೇಕಾಗುತ್ತದೆ." (ನಾಣ್ಣುಡಿ 1936:16)

ನಾಣ್ಣುಡಿಗಳಲ್ಲಿ ಎರಡು ಪ್ರಕಾರಗಳಿವೆ. 1. ಉಪಮಾನ ವಾಕ್ಯ, 2. ಉಪದೇಶ ವಾಕ್ಯ. ಉಪಮಾನ ವಾಕ್ಯಗಳು ಸಂಗತಿಯೊಂದನ್ನು ವರ್ಣಿಸಿ ಹೇಳುವುದಕ್ಕೆ ಸಹಕಾರಿಯಾಗುತ್ತದೆ. *ಉದಾ:* ಅಡಲಾರದಾಕೆಗೆ ಒಲೆ ಡೊಂಕು, ಕುಣಿಯಲಾರದಾಕೆಗೆ ನೆಲಡೊಂಕು.

ನಾಣ್ಣುಡಿ ಮೂಲಕ ಉಪದೇಶಗಳು – *ಉದಾ:* 1. ಅಟ್ಟಕನ ಉಣಬಾರದು, ಸುಟ್ಟಕನ ಹೂಡಬಾರದು, 2. ಹೊತ್ತಿರುವಾಗ ಗೊತ್ತು ಸೇರು. ಜಾಗರೂಕತೆಯಿಂದ,

ಬುದ್ಧಿ ಚಾತುರ್ಯದಿಂದ, ತನ್ನ ಅನುಭವಗಳನ್ನು ಇನ್ನೊಬ್ಬನಿಗೆ ತಿಳಿಹೇಳುವ ಹಲವಾರು ಗಾದೆಗಳಿವೆ.

ಹೋಲಿಕೆಯಾಗಿ ಹೇಳುವ ನಾಣ್ಣುಡಿಗಳನ್ನು ಪಟ್ಟಿಮಾಡುತ್ತಾರೆ. ಹೋಲಿಕೆಗೆ ಬಳಸುವ ನಾಣ್ಣುಡಿಗಳ ಸಂದರ್ಭ ರೀತಿ ಇದೆ. ಒಂದು ವ್ಯಕ್ತಿಯ ವಿಚಿತ್ರ ಸಂಗತಿಗಳಿಂದ ಉಂಟಾದಂತೆ ಸೃಷ್ಟಿಯಲ್ಲಿ ಇಲ್ಲವೆ ಜನಸಮಾಜದಲ್ಲಿ ಕಂಡುಬರುವ ಒಂದು ಸಾಮಾನ್ಯ ಸಂಗತಿಯಿಂದಲೂ ಬರುತ್ತವೆ. ಪುರಾಣೇತಿಹಾಸಗಳಲ್ಲಿಯ ಸಂಗತಿಗಳಿಂದಲೂ ಉಂಟಾಗುತ್ತವೆ (ನಾಣ್ಣುಡಿ 1936:20)

ಉದಾ: 1. ಕಳ್ಳನ ಜೀವ ಹುಳ್ಳ ಹುಳ್ಳಗೆ, 2. ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ. ಹೀಗೆಯೇ ಜನಸಾಮಾನ್ಯರಲ್ಲಿ ಪ್ರಚಾರದಲ್ಲಿರುವ ಕತೆಗಳೂ ಇವೆ. *ಉದಾ:* ಜಾಣನಿಗೆ ಮೂರು ಕಡೆಗೆ, ಹೆಡ್ಡನಿಗೆ ಒಂದೇ ಕಡೆಗೆ ಷಟ್ಪದಿ ಗ್ರಂಥಗಳು, ವೀರಶೈವ ವಚನಗಳು, ಸಾಂಗತ್ಯಗಳು, ಶತಕಗಳು, ದಾಸರ ಪದಗಳು ಮೊದಲಾದ ಗ್ರಂಥಗಳಲ್ಲಿ ಪ್ರಚಾರದಲ್ಲಿರುವ ನುಡಿಗಳ ನಾಣ್ಣುಡಿಗಳಾಗಿ ಬಳಕೆಗೆ ಬಂದಿದೆ. ಇವುಗಳ ಜೊತೆಗೆ ಅನ್ಯಭಾಷೆಯಲ್ಲಿ ಪ್ರಯೋದಲ್ಲಿರುವ ಗಾದೆಗಳನ್ನು ಉದಾಹರಣೆ ಮೂಲಕ ವಿವರಿಸಲಾಗಿದೆ.

ಭಾಗ ನಾಲ್ಕರಲ್ಲಿ ನಾಣ್ಣುಡಿಯ ಮಹತ್ವದ ವಿವರವಿದೆ. ಮಾತು, ಗಾದೆ, ವಾಕ್ಯ, ವಾಣಿ–ಮೊದಲಾದ ಪದಗಳ ಉಲ್ಲೇಖವಿರುವ ನಾಣ್ಣುಡಿಗಳನ್ನು ಒಟ್ಟು ಮಾಡಲಾಗಿದೆ. ಕನ್ನಡದ ಒಂದು ನಾಣ್ಣುಡಿ, ಇಂಗ್ಲಿಷ್, ಮರಾಟಿ, ಉರ್ದು, ಪಾರಸಿ ಮೊದಲಾದ ಭಾಷೆಗಳಲ್ಲಿ ಪ್ರಯೋಗವಿರುವ ಉದಾಹರಣೆಯಿದೆ. "ಬೇರೆಬೇರೆ ದೇಶಗಳವರ ಉದ್ಯೋಗ ವ್ಯವಹಾರ, ರೀತಿ ನೀತಿ, ಆಹಾರ–ವಿಹಾರ, ಸಂಸ್ಕೃತಿ ಮೊದಲಾದವುಗಳಲ್ಲಿ ದೇಶ ಕಾಲ ಪರಿಸ್ಥಿತಿಗನುಸರಿಸಿ ಹೆಚ್ಚು ಕಡಿಮೆಯಾಗುತ್ತಿರುತ್ತದೆ. ನಾಣ್ಣುಡಿಗಳು ದೇಶ ಕಾಲ ಪರಿಸ್ಥಿತಿಗನುಸರಿಸಯೇ ಹುಟ್ಟಿದವುಗಳಿರುವುದರಿಂದ ಅವುಗಳಲ್ಲಿ ಆಯಾ ದೇಶದ ಸಂಸ್ಕೃತಿಯು ಅಡಗಿದೆ."(ನಾಣ್ಣುಡಿ 1936:29–30) *ಉದಾ:* 1. ಅಂಗೈ ಹಾಗೆ ಹೊಲ ಮಾಡಿದರೆ, ಮುಂಗೈ ತುಂಬ ತುಪ್ಪ, 2. ಕೋಟೆ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು.

ಒಕ್ಕಲುತನವನ್ನೇ ಹೆಚ್ಚು ಜನ ಅವಲಂಬಿಸಿರುವುದು ಹಳ್ಳಿಗಳಲ್ಲಿ ಸಾಮಾನ್ಯ. ಜೋಳ, ನವಣೆ, ರಾಗಿ, ನೆಲ್ಲು, ಹಾರಕ, ಬರಗು, ಕಂಬು, ಸಾಮೆ, ಗೋಧಿ–ಮೊದಲಾದ ನವಧಾನ್ಯಗಳನ್ನು ಬೆಳೆಯುತ್ತಾರೆ. ಹೀಗೆ ಬೆಳೆದ ದವಸಧಾನ್ಯಗಳನ್ನು ಜನಪದ ಕವಿಗಳು, ದಾಸರುಗಳು ವಿವರಿಸಿದ್ದಾರೆ. *ಉದಾ:* ಕನಕದಾಸರ 'ರಾಮ ಧಾನ್ಯ ಚರಿತ್ರೆ' ಕಾವ್ಯದಲ್ಲಿ ಆಗುವ ಕೆಲವು ವಾಗ್ವಾದಗಳಿವೆ.

ಉದಾ: 1. ಯಾವ ರಾಯ ಬಂದರೂ ರಾಗಿ ಬೀಸುವುದು ತಪ್ಪಿದ್ದಲ್ಲ, 2. ಹಳ್ಳಿಯ ದೇವರ ತಲೆ ಒಡೆದು ದಿಲ್ಲಿಯ ದೇವರ ಡೊಳ್ಳು ಬೆಳೆಸಿದರು.

ಭಾಗ ಐದರಲ್ಲಿ ನಾಣ್ಣುಡಿ ಅರ್ಥ ವಿಪರ್ಯಾಸ ಹೊಂದು ಬಗ್ಗೆ ಇದೆ. *ಉದಾ:* 1. ಹಂಪೆಗೆ ಹೋಗುವುದಕ್ಕಿಂತ ತಮ್ಮ ಕೊಂಪೆಯಲ್ಲಿರುವುದು ಲೇಸು, 2. ಸಮಗಾರ ದೇವರಿಗೆ ಮೊಚ್ಚೆಯ ಪೆಟ್ಟು

"ನಾಣ್ಣುಡಿಗಳೂ ದೇಶಿಗಳೂ ಭಾಷೆಗೆ ಜೀವಾಳ. ಇವುಗಳು ಬೆಳೆದು ಬಂದಷ್ಟು ಭಾಷೆಯು ಪ್ರಗತಿಯನ್ನು ಹೊಂದುವುದು. ಪರಭಾಷೆಯವರು ಇವುಗಳ ಅಭ್ಯಾಸಮಾಡಿ ಸಂಖ್ಯೆಯನ್ನು ಬೆಳೆಸಿಕೊಂಡಿದ್ದಾರೆ. ತಮ್ಮ ಭಾಷೆಗೆ ಕಳೆ ತಂದಿದ್ದಾರೆ. ಜರ್ಮನ್ ಭಾಷೆಯಲ್ಲಿ ಸುಮಾರು ಒಂದು ಲಕ್ಷ ನಾಣ್ಣುಡಿಗಳು ಇರುವವೆಂದು ಹೇಳುವರು. ನಮ್ಮ ಜನತೆಗೆ ಇವುಗಳ ಮಹತ್ವವು ಇನ್ನೂ ತಿಳಿದು ಬಂದಿಲ್ಲ. ಇವುಗಳ ಮಹತ್ವವನ್ನರಿತ ಒಬ್ಬಿಬ್ಬರು ಒಂದೆರಡು ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಆದರೆ ಅವುಗಳ ಉಪಯೋಗವನ್ನು ನಮ್ಮವರು ಅಷ್ಟೊಂದು ಮಾಡಿಕೊಂಡಿಲ್ಲ. ಕನ್ನಡದಲ್ಲಿ ನಾಣ್ಣುಡಿಗಳ ಸಂಖ್ಯೆಯು ಕಡಿಮೆಯೆಂದಲ್ಲ. ಕನ್ನಡದಲ್ಲಿ ನಾಣ್ಣುಡಿಗಳು ಇಪ್ಪತ್ತೈದು ಸಾವಿರಕ್ಕೆ ಮಿಕ್ಕಿವೆಯೆಂದು ನನ್ನ ಊಹೆ. ಕನ್ನಡ ಭಾಷೆಯು ಸುರಕ್ಷಿತರೆನಿಸುವವರು ಮೊದಲಿನಿಂದಲೂ ನಾಣ್ಣುಡಿಗಳ ಕಡೆಗೆ ಕೊಡತಕ್ಕಷ್ಟು ಗಮನಕೊಟ್ಟಿಲ್ಲ. ಇದಕ್ಕೆ ಕೆಲವು ಕಾರಣಗಳೂ ಉಂಟು. ನಮ್ಮ ಮೊದಲಿನ ಭಾಷಾ ಪಂಡಿತರು ಕನ್ನಡಕ್ಕಿಂತ ಸಂಸ್ಕೃತಕ್ಕೆ ಪ್ರಾಧಾನ್ಯ ಕೊಟ್ಟು ತಮ್ಮ ಭಾಷೆಯಲ್ಲಿ, ಕೃತಿಗಳಲ್ಲಿ ಸಂಸ್ಕೃತ ಶಬ್ದಗಳನ್ನೂ ಸುಭಾಷಿತಗಳನ್ನೂ ನ್ಯಾಯಗಳನ್ನೂ ತುಂಬುತ್ತಿದ್ದರು. ಇದರ ವಿರುದ್ಧವಾಗಿ ಕೆಲವರು ಬಂಡೆಬ್ಬಿಸಿದರೂ ಅದು ಅಷ್ಟು ಪ್ರಭಾವಶಾಲಿಯಾಗಲಿಲ್ಲ. ಈಗಾದರೂ ಆಗಿನ ಸಂಸ್ಕೃತದ ಮಾನವು ಇಂಗ್ಲಿಷ್ ಭಾಷೆಗೆ ಬಂದಿದೆ. ಅಚ್ಚಕನ್ನಡ ಸಂಸ್ಕೃತಿಯು ಮೊದಲಿನಿಂದಲೂ ಹಳ್ಳಿಗಳಲ್ಲಿ ಬೆಳೆದು ಬಂದು ಅಲ್ಲಿಯೇ ಅಡಗಿಕೊಂಡಿದೆ. ಇಂದಿನ ಸುಶಿಕ್ಷಿತರಿಗೆ ಇನ್ನೂ ಅದರ ಸಂಪರ್ಕವು ಅಗತ್ಯಕ್ಕಷ್ಟು ಆಗಿಲ್ಲ. ಈಗೀಗ ಎಲ್ಲಿಯೋ ಅದರ ಕಡೆಗೆ ಕಣ್ಣು ತೆಗೆದು ನೋಡತೊಡಗಿದರೆ ನಮ್ಮ ನಾಣ್ಣುಡಿಗಳು ಇಂದು ಹಳ್ಳಿಯ ಹೆಣ್ಣುಮಕ್ಕಳ ಬಾಯಲ್ಲಿ ಮಾತ್ರ ಉಳಿದಿವೆ. ಇಂದಿನ ಜೀವನದಲ್ಲಿ ಮೊದಲಿನ ಸೊಗಸೂ ಹುರುಪೂ ಇಲ್ಲ. ಅವು ಅಳಿಯುತ್ತ ನಡೆದಿರುವುದರಿಂದ ಅವುಗಳ ಕೂಡ ಸೊಗಸಿನ ಭಾಷೆಯೂ ಅಳೆಯುತ್ತ ನಡೆದಿದೆ. ಹೀಗೆಯೇ ನಡೆದರೆ ಕೆಲವು ದಿವಸಗಳಲ್ಲಿಯೇ ನಾವು ನಮ್ಮ ಭಾಷೆಯಲ್ಲಿಯ ಅಪೂರ್ವ ಭಂಡಾರಕ್ಕೆ ಎರವಾಗಬೇಕಾಗುವುದು. ಸಾಹಿತಿಗಳು ಇದರ ವಿಚಾರವನ್ನು ಮಾಡಬೇಕು. ಕನ್ನಡಿಗರು ಬೇಗನೆ ಎಚ್ಚರವಾಗಿ ಹಿಂದಿನದನ್ನು ಕಾಯ್ದುಕೊಳ್ಳಲಿ. ಹೊಸ ಕಾಲಕ್ಕೆ ತಕ್ಕುವಾದ ನಾಣ್ಣುಡಿಗಳನ್ನು ಸೃಷ್ಟಿಸಿಕೊಂಡು ತಮ್ಮ ಭಾಷೆಯನ್ನು ಬೆಳೆಯಿಸಿಕೊಳ್ಳಲಿ" (ನಾಣ್ಣುಡಿ

1936:53–54) ಎಂದು ಕನ್ನಡ ನಾಡಿನ ಜನತೆಗೆ ಎಚ್ಚರಿಕೆ ಕೊಟ್ಟಿದ್ದಾರೆ.

"ಎಚ್.ಕೆ. ಮಲ್ಲಪ್ಪನವರ 'ಕನ್ನಡ ಗಾದೆಗಳ ಜೋರ್ಣೋದ್ಧಾರ' (1924) ಲೇಖನದ ನಂತರ ಗಾದೆಗಳ ಕುರಿತಂತೆ ಬಹು ದೀರ್ಘವಾದ ವಿವರಣೆ, ವಿಶ್ಲೇಷಣೆ ಕೃತಿಯಲ್ಲಿ ಬಂದಿದೆ." (ನಾಣ್ಣುಡಿ:1936) ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟದ ಅಧ್ಯಯನಕ್ಕೆ ಮೌಲಿಕವಾಗಿದ್ದು, ಕೃತಿ ಪ್ರಕಟವಾಗುವವರೆಗೆ ಗಾದೆಗಳ ಉತ್ಪತ್ತಿ, ಹೆಸರು, ಮಹತ್ವ, ಗುಣ ಹಾಗೂ ಪ್ರಯೋಗದ ಸಂದರ್ಭವನ್ನು ಹೇಳಿದ್ದಾರೆ. ಕನ್ನಡದಲ್ಲಿ ಆ ಸಂದರ್ಭಕ್ಕೆ ಇದು ಮೊದಲ ಪ್ರಯತ್ನ. ಎಚ್.ಕೆ. ಮಲ್ಲಪ್ಪನವರ ಲೇಖನವನ್ನು ಉಲ್ಲೇಖಿಸಬಹುದಾದರೂ ಇಷ್ಟು ದೀರ್ಘವಾದ ವಿಶ್ಲೇಷಣೆ ಅಲ್ಲಿಲ್ಲ.

ನಾಣ್ಣುಡಿಗಳ ಪ್ರಯೋಗದ ಸಾಧ್ಯ-ಸಾಧ್ಯತೆಯ ವ್ಯಾಪ್ತಿಯಲ್ಲಿ ಸಾಮಗ್ರಿಗಳನ್ನು ಕಲೆಹಾಕಲಾಗಿದೆ. ನಾಣ್ಣುಡಿಗಳ ವಿಶ್ಲೇಷಣೆ, ಕಾರ್ಯದ ಚರ್ಚೆಯಿದೆ. "ಭಾಷೆಯಲ್ಲಿರುವ ಶಬ್ದಗಳಿಗಿರುವ ಅರ್ಥವು ಅನೇಕ ಕಾರಣಗಳ ಮೂಲಕ ಬದಲಾಗುತ್ತಿರುತ್ತದೆ. ಒಮ್ಮೊಮ್ಮೆ ಮೂಲ ಅರ್ಥಕ್ಕೆ ವಿರುದ್ಧವಾಗಿ ಅರ್ಥವು ಬಂದುದನ್ನೂ ನೋಡಬಹುದು. 'ಸಿತ-ಸಿತಿ' ಎಂಬುದು ಸಂಸ್ಕೃತ ಭಾಷೆಯಲ್ಲಿಯ ಒಂದು ಶಬ್ದ. ಇದಕ್ಕೆ ಒಂದಕ್ಕೊಂದು ವಿರುದ್ಧವಾದ ಬಿಳಿ, ಕಪ್ಪು ಎಂಬ ಎರಡರ್ಥಗಳೂ ಇರುವುವು."(ನಾಣ್ಣುಡಿ 1936:48) ಕನ್ನಡದಲ್ಲಿ ಭಾಷೆ ಬಗ್ಗೆ ಆದ ಸಂಗ್ರಹ ಕಡಿಮೆ. ನಾಣ್ಣುಡಿಗಳು ನಾಡಿನ ಹೆಣ್ಣುಮಕ್ಕಳ ಬಾಯಲ್ಲಿ ಮಾತ್ರ ಉಳಿದಿವೆ. ಅವುಗಳನ್ನು ಬೇಗನೆ ಎಚ್ಚರಾಗಿ ಕಾಯ್ದುಕೊಳ್ಳಬೇಕೆಂದು ಎಚ್ಚರಿಕೆ ಕೊಡುತ್ತಾರೆ.

1936ರಲ್ಲಿ **ಭಾಸ್ಕರನಂದ ಸಾಲೆತ್ತೂರು 'ಏನ್‌ಷಿಯಂಟ್ ಕರ್ನಾಟಕ ಸಂ.1, ಹಿಸ್ಟರಿ ಆಫ್ ತುಳುವಾಸ್' ಗ್ರಂಥ**ವು ತುಳುನಾಡಿನ ಇತಿಹಾಸವನ್ನು ಒಳಗೊಂಡಿದೆ. ಗ್ರಂಥದಲ್ಲಿ ಆರು ಅಧ್ಯಾಯಗಳಿವೆ. 1. ಲೆಜೆಂಡರಿ ಬಿಗಿನಿಂಗ್ಸ್, 2. ದಿ ಆಳೂಪ ಡೈನಾಸ್ಟಿ, 3. ಫಾರಿನ್ ರಿಲೇಷನ್ಸ್, 4. ವಿಲೇಜ್ ಆರ್‌ಗನೈಸೇಶನ್, 5. ರಿಲೀಜನ್ ಹಾಗೂ 6. ಲೈಫ್ ಇನ್ ಆರ್ಲಿ ತುಳುವಾ. ಹಳೆಗನ್ನಡ, ತುಳುವರ ಗ್ರಾಮಗಳು ಹಾಗೂ ಅಳೂಪುರ ಆಳ್ವಿಕೆಯ ಭೌಗೋಳಿಕ ವಿವರಗಳ ಟಿಪ್ಪಣಿಯಿದೆ. ಆರನೆಯ ಅಧ್ಯಾಯ 'ಲೈಫ್ ಇನ್ ಅರ್ಲಿ ತುಳುವಾ'ವು ಪ್ರಧಾನವಾಗಿ ತುಳು ಜಾನಪದಕ್ಕೆ ಸಂಬಂಧಿಸಿದ್ದಾಗಿದೆ. ತುಳು ಪಾಡ್ದನಗಳ ಆಧಾರದಿಂದಲೇ ಬರೆದೆನೆಂದು ಸಾಲೆತ್ತೂರು ಹೇಳಿಕೊಂಡಿದ್ದಾರೆ. ಎ.ಸಿ. ಬರ್ನೆಲ್, ಎ.ಮೆನ್ನರ್ ಹಾಗೂ ಗಣಪತಿ ರಾವ್ ಐಗಳ್ ಸಂಗ್ರಹಿಸಿರುವ ಪಾಡ್ದನಗಳ ಪಠ್ಯಗಳು ಸಾಲೆತ್ತೂರರ ಅಧ್ಯಯನಕ್ಕೆ ಆಕರಗಳಾಗಿವೆ. ಅಧ್ಯಾಯದುದ್ದಕ್ಕೂ 'ಇಂಡಿಯನ್ ಆಂಟಿಕ್ವೇರಿ' ಪತ್ರಿಕೆಯ ಸಂಪುಟಗಳನ್ನು ಬಳಸಿಕೊಂಡ ವಿವರಗಳಿವೆ.

'ಲೈಫ್ ಇನ್ ಅರ್ಲಿ ತುಳುವಾ' ಅಧ್ಯಾಯದಲ್ಲಿ 13 ಭಾಗಗಳಿವೆ. 1. The different peoples o Tuluva, 2. Seasons and state o Agricultural, 3. Commerce, 4. Dress and ornaments 5. War, 6. Amusements, 7. Means of communication, 8. Source of Revenue, 9. Education 10. Religion, 11. Customs and Manners, 12. A picture of a Tuluva Household, 13.The Budu or Manorial House of a Tuluva chietain.

ಸಾಲೆತ್ತೂರು ತುಳುನಾಡಿನ ಇತಿಹಾಸಕ್ಕೆ ಒತ್ತುಕೊಟ್ಟಿದ್ದಾರೆ. ತುಳು ಜನರ ಬೇರೆಬೇರೆ ಮನೆತನಗಳ ಬಗ್ಗೆ, ತುಳುವರ ಕೃಷಿಪದ್ಧತಿಗಳು, ವ್ಯಾಪಾರ ಕೇಂದ್ರಗಳು, ಉಡುಪು-ಒಡವೆಗಳು, ಸಂಪರ್ಕ ಸಾಧನಗಳು, ಕಾಡಿನ ಸಂಪತ್ತು, ವಿದ್ಯೆ, ಧರ್ಮ, ರೂಢಿಸಂಪ್ರದಾಯಗಳು ಹಾಗೂ ಬೂಡು ಮನೆತನಗಳ ಮುಖ್ಯಸ್ಥರ ಬಗೆಗೆ ಪಾಡ್ದನಗಳಲ್ಲಿ ಉಲ್ಲೇಖವಿದೆ. ಚಾರಿತ್ರಿಕ ದಾಖಲೆಗಳನ್ನು ವಿವರಿಸುವ ಆಕರ ಗ್ರಂಥ.

1945ರಲ್ಲಿ **ಮಳಿಯ ತಿಮ್ಮಪ್ಪಯ್ಯ**ನವರ ಸಂಶೋಧನಾತ್ಮಕ ಲೇಖನಗಳ ಸಂಕಲನ **'ಪಾರ್ತಿಸುಬ್ಬ'**ವನ್ನು ಮಂಗಳೂರಿನ ಬಾಳಿಗ ಎಂಡ್ ಸನ್ಸ್, ಬಾಸೆಲ್ ಮಿಷನ್ ಪ್ರೆಸ್ಸ್ ಮೂಲಕ ಪ್ರಕಟಿಸಿದರು. ಪಾರ್ತಿಸುಬ್ಬ ಕವಿಯ ಚಾರಿತ್ರಿಕಾದಿ ವಿವೇಚನೆ, ಯಕ್ಷಗಾನ ಕಲೆಯ ಸ್ವರೂಪ ನಿರೂಪಣಾದಿ ಸೂಚಕವಾದ ಭೂಮಿಕೆ ಹಾಗೂ ಆ ಕವಿಯ ರಾಮಾಯಣ ಪ್ರಬಂಧಸಾರ ಇತ್ಯಾದಿ ಸಂಶೋಧನಾತ್ಮಕ ಪ್ರಬಂಧಗಳ ಸಂಕಲನ.

ಮುನ್ನುಡಿಯಲ್ಲಿ "ಪ್ರಬಂಧವನ್ನು ಬರೆಯಬೇಕೆಂದು ಭಾವಿಸಿ ಹಲಗಾಲವಾಯಿತು. ಇದರೊಳಗೆ ವರ್ಣಿತನಾದ ಪಾರ್ತಿಸುಬ್ಬನೆಂದರೆ ಕನ್ನಡ ಪ್ರಾಂತಕ್ಕೆ ಸೇರಿದ ಕುಂಬಳೆಯಲ್ಲಿ ಸುಮಾರು ಕ್ರಿ.ಶ. 1750ರಲ್ಲಿ ಜನಿಸಿ, ಸುಮಾರು 1815-20ರ ವರೆಗೆ ಬಾಳಿದವನು. ಅನೇಕ ಯಕ್ಷಗಾನ ಪ್ರಬಂಧಗಳನ್ನು ಬರೆದ ಉತ್ತಮ ಕವಿಯಿಲ್ಲದೆ ಸ್ವತಃ ಭಾಗವನ್ನು ಆಗಿದ್ದನು. ಪುಸ್ತಕದೊಳಗೆ ಪ್ರಮುಖವಾಗಿ ಭೂಮಿಕೆ-ಪ್ರಬಂಧಸಾರ ಎಂಬ ಎರಡು ಭಾಗಗಳಿವೆ. ಮೊದಲನೆಯದರಲ್ಲಿ ಪ್ರಾಂತದ ಪುರಾತನ ಗ್ರಂಥಕಾರರ ಗೊತ್ತು ಗುರುಗಳನ್ನು ದಿಗ್ದರ್ಶನವೆಸಗಿ, ಮತ್ತೆ ಪಾರ್ತಿಸುಬ್ಬ-ಕವಿಯ ಕುಲ-ಕಾಲ-ದೇಶಾದಿಗಳನ್ನೂ, ಜನಪದ ಸಾಹಿತ್ಯ ಶಿರೋಮಣಿಯಾದ ಯಕ್ಷಗಾನ ಪ್ರಬಂಧದ ಸ್ವರೂಪ ಅದರ ಪುರಾತನತತ್ವಾದಿಗಳನ್ನೂ ಮೇಳ-ಮೇಳಗಾರಿಕೆ ಮೊದಲಾದುವನ್ನೂ ಸಾಧಾರಣವಾಗಿ ಇಂದಿನಿಂದ ಹಿಂದಿನ ಗುರಿ ತೋರುವವರೆಗೂ ವಿಸ್ತರಿಸಿದ್ದೇನೆ. ಜನಪದ ಸಾಹಿತ್ಯದ ಉಗಮಸ್ಥಾನಕ್ಕಿಂತಲೂ ಹಿಂದಿನದೆಂಬುದು ನನ್ನ ವಿಸ್ಮೃತಿಯಲ್ಲಿ ವ್ಯಕ್ತವಾಗುವುದು. ಇಡೀ ಭಾರತ ಭೂಮಿಯ ಜಾನಪದ ಸಾಹಿತ್ಯದ ಚಾರಿತ್ರಿಕ ಗ್ರಂಥವನ್ನು ಬರೆಯುವ ಸಂದರ್ಭ ಒದಗಬಹುದು. ಆಗ, ಅದಕ್ಕೆ ಪ್ರಮುಖಾಂಗವಾಗಿ ದಕ್ಷಿಣ ಭಾರತದ ಜಾನಪದ ಸಾಹಿತ್ಯವೇ

ಮಿರುಗಬಹುದೆಂದು ನನಗಂತೂ ತೋರುತ್ತಿದೆ. ಆ ಸಂದರ್ಭದಲ್ಲಿ, ಕನ್ನಡ, ತೆಲುಗು, ತಮಿಳು, ಮಲೆಯಾಳಗಳೆಂಬ ಸಾಹಿತ್ಯ ಪ್ರಚುರತೆಯುಳ್ಳ ನಾಲ್ಕು ದೇಶಭಾಷೆಗಳ ಜನಪದ ಸಾಹಿತ್ಯಗಳನ್ನು ಸಾದ್ಯಂತವಾಗಿ ವಿವೇಚಿಸಿ ಬರೆದ ಗ್ರಂಥಗಳ ಅವಶ್ಯಕ ಒದಗಿಯೇ ಒದಗುವುದು. ಜನಾಂಗದ ಜೀವಂತವಾದ ಸಂಸ್ಕೃತಿ, ಮಾರ್ಗೀಯ ಸಾಹಿತ್ಯದೊಳಗಿನದಕ್ಕಿಂತಲೂ ಸ್ಫುಟಿಕತರವಾಗಿ ಜನಪದ ಸಾಹಿತ್ಯದೊಳಗೆ, ಪ್ರತಿಬಿಂಬಿಸುವುದಲ್ಲವೆ? ಆದರಿಂದ, ಅಖಂಡ ಕನ್ನಡ ನಾಡಿಗೆ ಮಾತ್ರ ಸಂಬಂಧವಾದ ಜನಪದ ಸಾಹಿತ್ಯ ಅಲ್ಲದೆ ಯಕ್ಷಗಾನ ಸಾಹಿತ್ಯ ಎಂಬ ವಿವೇಚನಾಪೂರ್ಣವಾದ ಒಂದು ಕನ್ನಡ ಗ್ರಂಥವನ್ನು ಬರೆವುದು ಅತ್ಯಾವಶ್ಯಕ. ಅಂಥ ಗ್ರಂಥವೇ ಇದಾಗಲಾರದು. ಆ ಗ್ರಂಥವನ್ನು ಬರೆದವರಿಗೆ ಇದು ಒಂದಿಷ್ಟು ನೆರವಾಗಬಹುದು. ಗ್ರಂಥದ ಎರಡನೆಯ ಭಾಗವಾದ 'ಪ್ರಬಂಧಸಾರ'ದೊಳಗೆ ಸಂದರ್ಭಕ್ಕನುವಾಗಿ ಹತ್ತು ಒಳಭೇದಗಳಿವೆ. ಅಲ್ಲಿ ಪಾರ್ತಿಸುಬ್ಬನ ರಾಮಾಯಣ–ಪ್ರಸಂಗಗಳಿಂದ ಶಿರೋರತ್ನಗಳಾಗಿ ಹೊಳೆದ ಹಲವು ಹಾಡುಗಳನ್ನು ಉದ್ಧರಿಸಿ ಕಾಣಿಕೆಗೊಟ್ಟಿರುತ್ತೇನೆ." (ಮುಳಿಯ ತಿಮ್ಮಪ್ಪಯ್ಯ 1945:ಮುನ್ನುಡಿ 5–6)

ಪಾರ್ತಿಸುಬ್ಬನ ಕಾಲ, ದೇಶ, ಕೃತಿಗಳ ಚರ್ಚೆಯಿದೆ. "ಕನ್ನಡ ನಾಡಿಗೆ–ವಿಶೇಷವಾಗಿ ದಕ್ಷಿಣಕನ್ನಡಕ್ಕೆ – ಈತನ ಪಾರ್ತಿಸುಬ್ಬ ಎಂಬುದು ಇಂದಿಗೂ ಬಳಕೆಯ ಹೆಸರಾಗಿ ಬಿಟ್ಟಿದೆ. ಕವಿಯ ಬಾಲ್ಯಯೌವನಗಳಲ್ಲಂತೂ ಕನ್ನಡ ನಾಡಿನೊಳಗೆ ಉತ್ತರ–ದಕ್ಷಿಣಗಳೆಂಬ ಪ್ರಾಂತಭೇದಗಳು ಇದ್ದಿಲ್ಲವೆಂದು ನನ್ನ ನಿರ್ಧಾರ. ಆದ್ದರಿಂದಲೇ ಎಂದು ತೋರುತ್ತಿದೆ ಈತನ ರಾಮಾಯಣ–ಯಕ್ಷನಗಾನ ಪ್ರಬಂಧಗಳನ್ನು ಈಗಲೂ ಉತ್ತರಕನ್ನಡ ಜಿಲ್ಲೆಯ ಮೇಳದವರು ಆಟವಾಡುತ್ತಾರೆಂದು ತಿಳಿದು ಬಂದಿದೆ. ಅದು ಇತ್ತೀಚೆಗೆ ಬಳಕೆಗೆ ಬಂದುದಲ್ಲ. ಹಿಂದಿನ ಕಾಲದಿಂದಲೇ ರೂಢವಾಗುತ್ತಾ ಬಂದುದು. ಇಲ್ಲಿಯ ಮೇಳಗಾರರೊಳಗೆ ಹಲವರಿಗೆ ತಾವು ಆಡುವ ಪ್ರಬಂಧಕಾರನ ಗೊತ್ತುಗುರಿಯಾದರೂ ಸರಿಯಾಗಿ ಮನದಟ್ಟಾಗಿರುವಂತೆ ತೋರುವುದಿಲ್ಲ. ಹಾಗೆ ಅತ್ತಣ ಕಡೆಗಳಲ್ಲಿ ಕವಿ ಅಪರಿಚಿತನಾಗಿ ಬಿಡಲಿಕ್ಕೆ ಜಿಲ್ಲೆ ಇಬ್ಭಾಗವಾಗಿರುವುದೇ ಪ್ರಧಾನ ಕಾರಣವೆಂಬಲ್ಲಿ ಸಂದೇಹವಿಲ್ಲ. ವಿಜಯನಗರ ಪತನದಿಂದಿತ್ತ ಕನ್ನಡ ದೇಶದ ಪ್ರಜಾವರ್ಗದ ಆತ್ಮಶಕ್ತಿ ಕುಗ್ಗಿ ಹೋಗುತ್ತಾ ಬಂದಿದೆಯಷ್ಟೆ. ಕ್ರಿ.ಶ.1799ರಲ್ಲಿ ಟಿಪ್ಪುಸುಲ್ತಾನನು ಹತನಾದನು. ಅಂದಿನಿಂದ ಕನ್ನಡಲ್ಲೆ ಪರವಶವಾಯಿತು. ಕಂಪನಿ ಸರಕಾರದ ಎಣಿಕೆಗನುವಾಗಿ ಉತ್ತರ ಕನ್ನಡವು ಬೊಂಬಾಯಿ ಪ್ರಾಂತಕ್ಕೆ ಸೇರಿದರೆ, ದಕ್ಷಿಣ ಕನ್ನಡವು ಮದರಾಸಿನಲ್ಲಿ ಸಂದುಗೂಡಿತು. ಅದು ಮೊದಲುಗೊಂಡು ನಮ್ಮೊಳಗಿನ ಹಲವು ನಿಕಟ ಸಂಬಂಧಗಳಂತೆ ಸಾಹಿತ್ಯ ಸಂಬಂಧವೂ ಸಡಿಲವಾಗುತ್ತಾ ಬಂತು." (1945:2)

ಪ್ರಬಂಧಸಾರ ಭಾಗದಲ್ಲಿ ರಾಮಪಟ್ಟಾಭಿಷೇಕ, ಪಂಚವಟಿ, ವಾಲಿಸಂಹಾರ, ಸೇತುಬಂಧನ, ಅಂಗದ ಸಂಧಾನ, ಕುಂಭಕರ್ಣನ ಕಾಳಗ, ಇಂದ್ರಜಿತು ಕಾಳಗ, ರಾವಣನ ವಧೆ ಹಾಗೂ ಎದೆಯಾರತಿ ಮುಂತಾದ ಭಾಗಗಳಲ್ಲಿ 47 ರಾಗ, ತಾಳಗಳುಳ್ಳ 265 ಹಾಡುಗಳನ್ನು ಉದಾಹರಣೆಯೊಂದಿಗೆ ಅಲ್ಲಲ್ಲಿ ಹಾಡಿನ ಕಥಾ ಸಾರಾಂಶವನ್ನು ನೀಡಲಾಗಿದೆ.

ಪಾರ್ತಿಸುಬ್ಬನನ್ನು 'ನನ್ನ ಎದೆಯಾರತಿ' ಎಂಬ ಚೌರಸ ರಗಳೆ ಹಾಡನ್ನು ಕೊಡಲಾಗಿದೆ. ಇದಾದ ನಂತರದ ಭಾಗದಲ್ಲಿ ಮೂರು ಅನುಬಂಧಗಳಿವೆ. ಮೊದಲನೆಯ ಅನುಬಂಧವು ಕೃಷ್ಣರಾಜವಡಯರವರು ಬರೆದ ಪತ್ರವಾಗಿದೆ. ಅನುಬಂಧ ಎರಡರಲ್ಲಿ ಭೂಮಿಕೆ ಭಾಗದಲ್ಲಿ ಉದ್ಧರಿಸಿರುವ ಗದ್ಯಪದ್ಯಗಳ ಸೂಚಿಯಿದೆ. ಪ್ರಬಂಧ ಸಾರದಲ್ಲಿ ಬಳಕೆಯಾಗಿರುವ 265 ಪದ್ಯಗಳ ಆಕಾರಾದಿಸೂಚಿಯಿದೆ. ಅನುಬಂಧ ಮೂರರಲ್ಲಿ ಪ್ರಬಂಧರಚನೆಗೆ ನೆರವಾದ ಗ್ರಂಥಗಳ ಪಟ್ಟಿಯಿದೆ.

1870ರಲ್ಲಿ **ವಿ.ಎನ್.ನರಸಿಮ್ಮೈಯ್ಯಂಗಾರ್** ಬರೆದ **'ದಿ ಭೂತಾಸ್ ಆಫ್ ನಾಗರ ಮಲನಾಡ್ ಇನ್ ಮೈಸೂರು'** ಎಂಬ ಲೇಖನವು 1872ರಲ್ಲಿ **'ಇಂಡಿಯನ್ ಆ್ಯಂಟಿಕ್ವೇರಿ'** ಪತ್ರಿಕೆಯ ಪ್ರಥಮ ಸಂಚಿಕೆ (ಪುಟ:282–284)ಯಲ್ಲಿ ಪ್ರಕಟವಾಯಿತು. ಮಲೆನಾಡಿನ ಜನರ ನಂಬಿಕೆಗಳು, ಭೂತಾರಾಧನೆಯ ಕ್ರಮಗಳು, ಜನರ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳು ಯಾವ ಬಗೆಯವಾಗಿದ್ದವು ಎಂಬುದನ್ನು ತುಂಬ ಸಮರ್ಪಕವಾಗಿ ಪ್ರಸ್ತಾಪಿಸಿದ್ದಾರೆ. ನರಸಿಂಹ ಅಯ್ಯಂಗಾರ್ ಒಬ್ಬ ಜನಗಣತಿ ಅಧಿಕಾರಿಯಾಗಿದ್ದ ಕಾರಣ ಮಲೆನಾಡಿನ ಜನಪದರನ್ನು ಉದ್ದೇಶಿಸಿ "ಜಾನಪದದಲ್ಲಿ ಭೂತಾರಾಧನೆಯಂಥ ಮೂಢನಂಬಿಕೆ ಹಾಗೂ ಆಚರಣೆಗಳು ಬೆಳೆಯುವಲ್ಲಿ ಸರಕಾರವೂ ತಕ್ಕಮಟ್ಟಿಗೆ ಸಹಾಯಕವಾಗಿದೆ ಎಂದು ಸೂಚಿಸಲು ಇವರು ಹಿಂಜರಿದಿಲ್ಲ" (ಇಂಡಿಯನ್ ಆ್ಯಂಟಿಕ್ವೇರಿ 1872 :282–284) ಎಂದಿದ್ದಾರೆ. ಮೈಸೂರು ರಾಜ್ಯದ ಮಲೆನಾಡು ಭಾಗಗಳಾದ ಸೊರಬ, ಸಾಗರ, ಅನಂತಪುರ, ನಗರ, ಕೌಲೇದುರ್ಗ, ಕೊಪ್ಪ, ವಸ್ತಾರ, ಚಿಕ್ಕಮಗಳೂರು ಹಾಗೂ ಲಕ್ಕವಳ್ಳಿ ಮೊದಲಾದ 9 ಪ್ರದೇಶಗಳ ಕಡೆಗಿರುವ ಭೂತಗಳ ನಂಬಿಕೆಯ ವಿವರಗಳಿವೆ. ಭೂತಗಳನ್ನು ಗಂಡುಭೂತ, ಹೆಣ್ಣು ಭೂತಗಳೆಂದು ವಿಭಾಗಿಸಿದ್ದಾರೆ. ಬ್ರಹ್ಮ, ರಣ, ಜಟ್ಟಿಗ, ಕಪ್ಪಿನ ಭೂತ, ಹಾಗೂ ಕ್ಷೇತ್ರಪಾಲ ಗಂಡು ಭೂತಗಳೆಂದೂ ಚೌಡಿ, ಮಾತಂಗಿ, ಉರಿಕುಮಾರಿ, ಪಂಜುರ್ಲಿ, ರಣಪಂಜುರ್ಲಿ, ಧೂಮವತಿ ಹಾಗೂ ಕಲ್ಲುರಳ್ಳಿ (ಕಲ್ಲುರ್ಟಿ) ಮೊದಲಾದ ಹೆಣ್ಣು ಭೂತಗಳನ್ನು ಉಲ್ಲೇಖಿಸಿದ್ದಾರೆ. ಭೂತಾರಾಧನೆಯ ಆಚರಣಾತ್ಮಕ ವಿವರಗಳು, ಕೆಲವು ಆಚರಣೆ ನಡೆವ ಸ್ಥಳಗಳು,

ಭೂತಗಳಿಗೆ ಸಂಬಂಧಿಸಿದ ಕತೆಗಳನ್ನು ಒಳಗೊಂಡಿದ್ದು, ಭೂತಾರಾಧನೆಗೆ ಅರ್ಥಪೂರ್ಣವಾದ ಚಾರಿತ್ರಿಕ ಹಿನ್ನೆಲೆಯನ್ನು ಒದಗಿಸಿದೆ.

1872ರಲ್ಲಿ **ವಿ.ಎನ್. ನರಸಿಂಹಯ್ಯಂಗಾರ್** ಸಂಗ್ರಹಿಸಿರುವ **'ಲೆಜೆಂಡ್ಸ್ ಆಫ್ ದ ಒರಿಜಿನ್ ಆಫ್ ದ ತುಂಗಭದ್ರ ರಿವರ್'** ಇಂಡಿಯನ್ ಆಂಟಿಕ್ವೇರಿಯಲ್ಲಿ ಪ್ರಕಟವಾಯಿತು. ಪುರಾಣ ಕತೆಗಳಲ್ಲಿ ತುಂಗಭದ್ರ ನದಿಯ ಕುರಿತಂತೆ ಸಿಗುವ ಉಲ್ಲೇಖ ಹಾಗೂ ನೇತ್ರಾವತಿ, ಕುಮಾರದಾರ, ಕಾವೇರಿ ಮೊದಲಾದ ಕರ್ನಾಟಕದ ಇತರ ನದಿಗಳ ಬಗೆಗೂ ಪುರಾಣದ ಕತೆಗಳೊಂದಿಗೆ ಹೋಲಿಕೆಯಿರುವುದರ ಬಗ್ಗೆ ಚರ್ಚೆಯಿದೆ, ತುಂಗಭದ್ರ ನದಿಯ ಮೂಲದ ಸಂಕ್ಷಿಪ್ತವಾದ ವಿವರ ಲೇಖನದಿಂದ ದೊರೆಯುತ್ತದೆ.

1873ರಲ್ಲಿ **ಜೆ.ಎಫ್. ಕಿಟ್ಟೆಲ್ 'ಕೂರ್ಗ್ ಸೂಪರ್‌ಸ್ಟೀಶನ್ಸ್'** ಎಂಬ ಲೇಖನ ಬರೆದರು. ಲೇಖನವು ಇಂಡಿಯ ಆಂಟಿಕ್ವೇರಿ ಸಂಪುಟ ಎರಡರ ಫೆಬ್ರವರಿ ಹಾಗೂ ಜೂನ್ ಸಂಚಿಕೆಯಲ್ಲಿ ಪ್ರಕಟವಾಯಿತು. ಜೂನ್ ಸಂಚಿಕೆಯಲ್ಲಿ 'ದ ಡೆಮನ್ಸ್ ಇನ್ ಕೂರ್ಗ್' ಎಂದು ಪ್ರಕಟಿಸಿದರು. ಫೆಬ್ರವರಿ ಸಂಚಿಕೆಯ ಲೇಖನದಲ್ಲಿ ಕೊಡಗಿನ 52 ಭಿನ್ನ ಬುಡಕಟ್ಟು ಸಮುದಾಯಗಳಲ್ಲಿ ಲಭ್ಯವಿರುವ ನಂಬಿಕೆಗಳು ಹಾಗೂ ಮಲಯಾಳ, ತುಳು, ಕನ್ನಡ ಹಾಗೂ ಬ್ರಾಹ್ಮಣರಲ್ಲಿ ಪ್ರಯೋಗವಾಗುವುದನ್ನು ಚರ್ಚಿಸಲಾಗಿದೆ.

ಕಿಟ್ಟೆಲ್ ಎರಡು ವಿಭಾಗದಲ್ಲಿ ಚರ್ಚಿಸಿದ್ದಾರೆ. ಮೊದಲನೆಯದರಲ್ಲಿ ಕೊಡವರ ಪೂರ್ವಿಕರ ಆಚರಣೆಗಳು ಹಾಗೂ ಎರಡನೆಯದರಲ್ಲಿ ಕೊಡವರ ದೈವಗಳ ಆಚರಣೆಗಳ ವಿವರವಿದೆ. 'ದ ಡೆಮನ್ ಇನ್ ಕೂರ್ಗ್' (1873: ಸಂ 1. 2. 168–171) ಭಾಗದಲ್ಲಿ ಗಂಡು ಹಾಗೂ ಹೆಣ್ಣು ದೈವಗಳ ಹೆಸರು, ಆಚರಣೆಯ ಸ್ಥಳಗಳನ್ನು ವಿವರಿಸಲಾಗಿದೆ. ಅಯ್ಯಪ್ಪ, ಸಾಸವು, ಕುಟ್ಟಿಚಾತ, ಕರುವಾಳ, ಗುಳಿಗ, ಕೊರಗ, ಕಲ್ಲುಗುಟ್ಟಿ (ಕಲ್ಲು–ಕುಟ್ಟಿ) ಪಂಜುರುಳಿ (ಪಂ–ಉರುಳಿ), ಕುರುಂಡ, ತಮ್ಮಚ–ಮೊದಲಾದ 9 ಗಂಡು ದೈವಗಳನ್ನು ಹಾಗೂ ಚಾಮುಂಡಿ ಅಥವಾ ಚವುಂಡಿ (ಚಾವು–ಉಂಡಿ), ಕರಿಂಗಾಳ (ಕರಿ–ಕಾಳಿ), ಭದ್ರಕಾಳಿ, ಕುಂದಮ್ಮ (ಕುಂದ–ಅಮ್ಮ), ಕರಿಂಗೋರತಿ (ಕರಿ–ಕೊರತಿ), ಕಲ್ಲುರುಟಿ (ಕಲ್ಲು–ಉರುಟಿ), ನುಚ್ಚುಟ್ಟಿ (ನುಚ್ಚು–ಉಟ್ಟಿ), ನಂಜವ್ವ (ನಂಜು–ಅವ್ವ), ನೀಲಿ ಅವ್ವ, ಪೊನ್ನಂಗಾಲಮ್ಮೆ (ಪೊನ್ನು–ಆನ್–ಕಾಲು–ಅಮ್ಮೆ) ಮೊದಲಾದ ಹೆಣ್ಣು ದೈವಗಳನ್ನು ಹೆಸರಿಸಲಾಗಿದೆ. 'ಬೀರಾಸ್' ಎಂಬೊಂದು ಜಾತಿಯ ದೈವದ ನಂಬಿಕೆಯಿದೆ. ಕೊಡವರ ನಂಬಿಕೆ, ಆಚರಣೆ, ದೇವತೆಗಳು–ದೆವ್ವಗಳ ಪಟ್ಟಿಗಳನ್ನು ಇಂಡಿಯನ್ ಆಂಟಿಕ್ವೇರಿಯಲ್ಲಿ ಪ್ರಕಟವಾಗಿದೆ. ಆ ಕಾಲದಲ್ಲಿ ಕೊಡಗಿನಲ್ಲಿ ರೂಢಿಯಲ್ಲಿದ್ದ ಒಟ್ಟು ಇಪ್ಪತ್ತು ಪ್ರಧಾನ ದೈವ ಹಾಗೂ ದೇವತೆಗಳ ಹೆಸರು, ಹಿರಿಮೆ, ಮಹಿಮೆ, ಆರಾಧನೆ–ಆಚರಣೆ ಕ್ರಮಗಳನ್ನು

ಹಾಗೂ ಭೂತಾರಾಧನೆಗೂ ಕೊಡವರ ಪಿತೃಪೂಜೆಗೂ ಇರುವ ಸಂಬಂಧಗಳನ್ನು ಚರ್ಚಿಸಿದ್ದಾರೆ.

1874ರಲ್ಲಿ **ಕರ್ನಲ್ ಮೆಕೆಂಝಿಯ 'ದಿ ವಿಲೇಜ್ ಫೀಸ್ಟ್'** ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯಲ್ಲಿ ಪ್ರಕಟವಾಯಿತು.[65] 17–6–1873ರಂದು ಮೆಕೆಂಝಿ ಬೆಂಗಳೂರಿನ ಅಕ್ಕಿತಿಮ್ಮನ ಹಳ್ಳಿಯೆಂಬಲ್ಲಿ ವಾಸವಿದ್ದಾಗ ಪಕ್ಕದ ಊರಿಂದ ಟಾಮ್–ಟಾಮ್ ಶಬ್ದ ಆತನ ಕಿವಿಗೆ ಬಿತ್ತು.[66] ಹಾಗೆ ಗೆಳೆಯರೊಂದಿಗೆ ಹಳ್ಳಿಗೆ ಹೋದಾಗ ಅಲ್ಲಿ ಗ್ರಾಮದೇವತೆಯೊಂದರ ಹಬ್ಬದ ಏರ್ಪಾಡಾಗಿತ್ತು. ಮೆಕೆಂಝಿಗೆ ಹಬ್ಬ ವಿಚಿತ್ರ ಹಾಗೂ ಕುತೂಹಲಕಾರಿಯಾಗಿ ಕಂಡಿತು. ಆತ ಅಲ್ಲಿ ಕಂಡ ದೃಶ್ಯಗಳನ್ನು ಕೇಳಿದ ಪದಗಳನ್ನು ಕುತೂಹಲಕಾರಿಯಾಗಿ ವೀಕ್ಷಿಸಿ, ಅವುಗಳನ್ನು ಕಣ್ಣಿಗೆ ಕಟ್ಟುವಂತೆ ಬರೆದು ಪ್ರಕಟಪಡಿಸಿದ. ಆ ಕಾಲದ ಶ್ರೇಣೀಕೃತ ವ್ಯವಸ್ಥೆಯನ್ನೂ ಮೆಕೆಂಝಿ ಗಮನಿಸಿಕೊಳ್ಳುತ್ತಾನೆ. ಶಾನುಬೋಗನನ್ನೂ ಬ್ಯಾಂಡ್–ವಾಲಗದೊಂದಿಗೆ ಹಬ್ಬಕ್ಕೆ ಕರಕೊಂಡದ್ದು ಆತನಿಗೆ ವಿಶೇಷವಾಗಿ ಕಂಡಿರಬೇಕು. ನಂತರ ಒಂದು ಅಡು ಅಥವಾ ಕುರಿಯನ್ನು ಬಲಿಕೊಡುತ್ತಾರೆ. ಆಮೇಲೆ ಬ್ಯಾಂಡ್–ವಾಲಗ ಮುಂದುವರಿಯುತ್ತದೆ. ಮುಂದೆ ಕೆಂಡದ ಕೊಂಡ ಹಾಯುತ್ತಾರೆ. ಆದರೆ ಗಂಡಕಳಕೊಂಡವರು ಭಾಗವಹಿಸುವುದಕ್ಕೆ ಅವಕಾಶವಿಲ್ಲ. ಕೊನೆಯದಾಗಿ, ಗ್ರಾಮದ ಆರಂಭದಲ್ಲಿ ವಾಸವಿರುವ ಹೊಲೆಯರ ಹಟ್ಟಿಯ ಕಡೆಗೆ ಎಲ್ಲರೂ ಹೋಗುತ್ತಾರೆ. ಆಚರಣೆಯ ಸಂದರ್ಭದಲ್ಲಿ ಹೆಂಗಸರು ನಡುನಡುವೆ ದನಿ ಎತ್ತಿ ಜನಪದ ಗೀತೆಗಳನ್ನು ಹಾಡುತ್ತಾರೆ.[67] ಹಬ್ಬದಾಚರಣೆಯ ವಿಧಿ–ನಿಷೇಧಗಳು, ಅಗಸಗಿತ್ತಿಯೊಬ್ಬಳು ಪಂಜುಹಿಡಿದು ಮಾಡುವ ದೇವರ ಸೇವಾ ವಿಧಾನ ಹಾಗೂ ಆಕೆ ಪಡೆದ ಮಾಂಸದ ಮಿರಾಸಿನ ವಿವರಗಳನ್ನು ಮೆಕೆಂಝಿ ಪ್ರತ್ಯಕ್ಷದರ್ಶಿಯಾಗಿ ಬರೆಯುತ್ತಾನೆ.

ಮೆಕೆಂಝಿ ಮಾಡಿರುವ ಕೆಲಸ ಜಾನಪದ ಅಧ್ಯಯನದ ಆರಂಭ. ನಂತರ ಕಿಟ್ಟೆಲ್ ಕೊಡಗಿನ ಮೂಡನಂಬಿಕೆಗಳನ್ನು ಪಟ್ಟಿ ಮಾಡುವಾಗ ಕೊಡವರ ದೈವಾರಾಧನೆಯ ವಿವರಣೆಯಿದೆ. ಮೆಕೆಂಝಿ ಒಂದು ಇಡೀ ರಾತ್ರಿ ನೋಡಿದ ಆಚರಣೆಯನ್ನು ವೀಕ್ಷಿಸಿದ ಹಬ್ಬದ ವಿವರಗಳನ್ನು ಕಾಲಘಟ್ಟದ ಹಿನ್ನೆಲೆಯಲ್ಲಿ ತೌಲನಿಕವಾಗಿ ಅಧ್ಯಯನಿಸುವುದಕ್ಕೆ ಆಕರ ಸಾಮಗ್ರಿಯಾಗಿ ಒದಗಿಸಿದ್ದಾನೆ. ಮೆಕೆಂಝಿ ಸಂಗ್ರಹಣೆ ಮಾಡಿರುವ ಸಂದರ್ಭವನ್ನೂ ಸ್ಪಷ್ಟಪಡಿಸಿರುವುದರಿಂದ ಲೇಖನಕ್ಕೆ ಐತಿಹಾಸಿಕ ಮಹತ್ವವಿದೆ.

1875ರಲ್ಲಿ **ಎಂ.ಜೆ. ವಾಲ್‌ಹೌಸ್ 'On behal o the Bhutas- Devil and ghost worship in western India'** ಎಂಬ ಲೇಖನವು 'Journal o the Anthropological institute o great Britain and Ireland-Vol. V (December

14, London)' ಪತ್ರಿಕೆಯ ಪ್ರಕಟವಾಯಿತು. ಭೂತಾರಾಧನೆಗೆ ಸಂಬಂಧಪಟ್ಟಂತೆ ನಡೆಯುವ ಆಚರಣೆಗಳನ್ನು ವಿವರಣೆಯಿದ್ದು, ವೈದಿಕ ದೇವತೆಗಳನ್ನು ಪೂಜಿಸುವುದರ ಜೊತೆಗೆ ಕೌಟುಂಬಿಕ ಮಟ್ಟದಲ್ಲಿ ಭೂತ, ಪ್ರೇತ, ಪಿಶಾಚಿಗಳನ್ನು ನಂಬಿ ಆರಾಧಿಸುವ ಕುರಿತು ಪ್ರಸ್ತಾಪವಿದೆ. ಅಸಾಮಾನ್ಯ ವ್ಯಕ್ತಿಗಳು ಆತ್ಮಹತ್ಯೆ, ಕೊಲೆ ಇಂತಹ ಕಾರಣಗಳಿಂದ ಆಕಸ್ಮಿಕವೂ ಅಸಹಜವೂ ಆದ ರೀತಿಯಲ್ಲಿ ಸತ್ತು ಭೂತಗಳಾಗುತ್ತಾರೆ. ಭೂತಗಳ ಆರಾಧನೆಯ ಮೊದಲು ಮಾಡುವ ಹಲವು ಆಚರಣಾ ಕ್ರಮಗಳನ್ನು ಹಾಗೂ ಆರಾಧನೆಯ ಸಾಂದರ್ಭಿಕ ಮಾಹಿತಿಯನ್ನು ವಿವರಿಸಲಾಗಿದೆ.[71]

1919ರಲ್ಲಿ **ಎಚ್.ಕೆ. ಮಲ್ಲಪ್ಪನವರು** ಬರೆದ **'ಕನ್ನಡ ಗಾದೆಗಳ ಜೀರ್ಣೋದ್ಧಾರ'** ಲೇಖನವು 1921ರ ಪರಿಷತ್ ಪತ್ರಿಕೆಯಲ್ಲಿ (ಜುಲೈ ಸಂಚಿಕೆ) ಪ್ರಕಟವಾಯಿತು. ಗಾದೆಗಳ ಪ್ರಕಟವಾದ ಮೊತ್ತಮೊದಲ ಬರಹವಾಗಿದ್ದು, ಗಾದೆಗಳ ರಕ್ಷಣೆಯ ಬಗ್ಗೆ ಕಳಕಳಿಯ ಮಾತುಗಳನ್ನಾಡಿದ್ದಾರೆ. "ಗಾದೆಗಳ ಸ್ವಾರಸ್ಯವನ್ನೂ ಸಾರಸ್ಯವನ್ನೂ ಮಾಧುರ್ಯವನ್ನೂ ಮನೋಹರತೆಯನ್ನೂ ಪದಲಾಲಿತ್ಯವನ್ನೂ ಭಾವ ಗಾಂಭಿರ್ಯವನ್ನೂ ವಾಕ್ ಸೂಕ್ಷ್ಮತೆಯನ್ನೂ ವ್ಯಾಪ್ತದ ಸತ್ಯತೆಯನ್ನೂ ಕೇಳದೆ ಇರುವ ಕನ್ನಡಿಗನೇ ಅಪೂರ್ವ. ನೋಡುವವರಿಗೆ ಗಾದೆಗಳು ಏನೋ ಒಂದೆರಡು ಚುಟುಕಾ ಮಾತುಗಳ ಸಮುದಾಯದಂತೆ ತೋರಬಹುದು. ಆದರೆ ಅಜ್ಞಾನಾಂಧಕರದಲ್ಲಿ ಮಲಗಿ ಗಾಢನಿದ್ರೆಯನ್ನು ಮಾಡುತ್ತ ಗೊರಿಕೆ ಹೊಡೆಯುವವನಿಗೆ ಚುರುಕಾಗುವಂತಹ ಚಮತ್ಕಾರಗಳನ್ನು ಗಾದೆಗಳು ಹೊಂದಿರುವದೆಂದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಯಾವುದಾದರೂ ಒಂದು ಒಳ್ಳೆಯ ಗ್ರಂಥವನ್ನು ಓದಿ, ಅಥವಾ ಒಂದು ಉಪನ್ಯಾಸವನ್ನು ಕೇಳಿ ನಾವು ಗ್ರಹಿಸಬಹುದಾದ ನೀತಿಯನ್ನು ಗಾದೆಗಳು ಕಾಲವಿಳಂಬವಾಗದಂತೆಯೂ ಮನಸ್ಸಿಗೆ ಜುಗುಪ್ಸೆಯುಂಟಾಗದಂತೆಯೂ 'ಚುಟಿಕೆಯಲ್ಲಿ ಚಪ್ಪರ ಹಾಕಿದರು' ಎನ್ನುವಂತೆ ಚುಟ್ಟನೆ ಮನಸ್ಸಿಗೆ ತಟ್ಟುವಂತೆ, ತಟ್ಟನೆ ಹೃದಯ ನಾಟುವಂತೆ ಅಡಿ ಕಡೆಗೆ ಕಾರ್ಯದಲ್ಲಿ ಆಸಕ್ತಿಯನ್ನುಂಟು ಮಾಡುವುದು." (1921:134–135)

"ಹಿತ್ತಲ ಗಿಡ ಮದ್ದಲ' ಎನ್ನುವಂತೆ, ನಮ್ಮ ದೇಶದೆಲ್ಲೇನಿದೆ? ನಮ್ಮ ಭಾಷೆಯಲ್ಲೇನಿದೆ? ನಮ್ಮ ನಾಣ್ಣುಡಿಗಳಲ್ಲೇನಿದೆ? ಇವೆಲ್ಲ 'ಕಾಕಮ್ಮನ ಕಗ್ಗದ ಕತೆಗಳೇ' ಸರಿ ಎಂದು ಅಲ್ಲಗಳೆದು 'ದೂರದ ಬೆಟ್ಟ ನುಣ್ಣಗೆ' ಎನ್ನುವ ಹಾಗೆ ನಮಗೆ ಅಜಗಜ ನ್ಯಾಯದಂತಿರುವ ಅನ್ಯರ ನಡೆನುಡಿಗಳನ್ನೇ ಮಿತಿಮೀರಿ ಆಚರಿಸಿ ಈಗ ಸಾವು ಹುಟ್ಟು ಬಣ್ಣವನ್ನೇ ಕಳೆದುಕೊಳ್ಳುವ ಸ್ಥಿತಿಗೆ ಬರುತ್ತ ಇದ್ದೇವೆ. 'ಮನೆಯಲ್ಲಿ ಬೆಣ್ಣೆಯಿದ್ದು ತುಪ್ಪಕ್ಕೆ ಅರಸಿದರು' ಎಂಬಂತೆ ನಮ್ಮ ನಾಡಿನ ಮರಗಳ ಮೇಲೆಯೇ ಮಾಗಿ ಹೊಂಬಣ್ಣವನ್ನು ಹೊಂದಿ, ತೊಟ್ಟು ಕಳಚಿಕೊಂಡು ಕೆಳಗೆ ತಾನಾಗಿಯೇ ಬಿದ್ದು ನಮ್ಮ ಬಾಯಿಗಳಲ್ಲಿ ನೀರ್ಗರೆಸುವಂತಹ

ರಸಭರಿತವಾದ ಹಣ್ಣು ಹಂಪಲುಗಳನ್ನು ನಾವು ಅಲಕ್ಷ್ಯ ಮಾಡಿದಂತೆ." (1921:135–136)

ಎಚ್.ಕೆ. ಮಲ್ಲಪ್ಪನವರಿಗೆ ಕನ್ನಡ ಸಂಸ್ಕೃತಿ, ಭಾಷೆಯ ಮೇಲಿರುವ ಅಭಿಮಾನ ಅಪೂರ್ವವಾದದ್ದು. ಗಾದೆಗಳು ನಮ್ಮಿಂದ ದೂರವಾಗುತ್ತಿವೆ ಎಂಬರ್ಥ ಬರುವಂತೆ ಜನರಿಗೆ ಕೇಳಿಕೊಂಡಿದ್ದಾರೆ. "ಈಗಲಾದರು ನಾವು 'ಊರೆಲ್ಲ ಸೂರೆಯಾದ ಮೇಲೆ ಅಗಸೇ ಬಾಗಿಲು ಮುಚ್ಚಿದರು' ಎಂಬ ನಾಣ್ಣುಡಿ ಮಾತಿಗೆ ಗುರಿಯಾಗದೆ. ನಮ್ಮ ಕರ್ನಾಟಕ ಜನನಿಯ ನಾಣ್ಣುಡಿಗಳನ್ನು ಅಭಿಮಾನದಿಂದ ಆಚರಣೆಯಲ್ಲಿಟ್ಟುಕೊಂಡು ಬಂದರೆ ನಮಗೆ ಆತ್ಮ–ಗೌರವವುಂಟಾಗುವುದಲ್ಲದೆ ಅನ್ಯರೂ ಕೂಡ ನಮ್ಮನ್ನೂ ನಮ್ಮ ನಾಣ್ಣುಡಿಗಳನ್ನೂ ಗೌರವಿಸುವರು. ಆದುದರಿಂದ ನಾಣ್ಣುಡಿಗಳನ್ನು ಜಳ್ಳೆಂದು ಜರೆಯದೆ ಅವುಗಳನ್ನು ಪ್ರಕಾಶಕ್ಕೆ ತರುವ ಪ್ರಯತ್ನವನ್ನು ಮಾಡಬೇಕು. ನಮ್ಮ ಪೂರ್ವಜರು ಹೇಳುತ್ತಿದ್ದ ಕನ್ನಡ ಗಾದೆಗಳು ಈಚೀಚೆಗೆ 'ಕಿವಿಯ ಹತ್ತಿರ ಒಡಕು ಜಾಗಟೆಯನ್ನು ಬಾರಿಸಿದರು' ಎನ್ನುವ ಹಾಗೆ ಆಗಿರುವುವು. ಹಾಗೊಂದು ಹೀಗೊಂದು ಕಳೆದುಳಿದಿರುವ ನಾಣ್ಣುಡಿಗಳನ್ನು ಹೇಳುವವರು ಇಲ್ಲ, ಕೇಳುವವರು ಇಲ್ಲ. ಇವುಗಳನ್ನು ಪೂರ್ತಿಯಾಗಿ ನಿರ್ಮೂಲ ಮಾಡುವುದು ಕನ್ನಡ ಭಾಷೆಯ ಕೆಲ ಮಂಗಗಳಿಗೆ ಭಂಗವನ್ನುಂಟು ಮಾಡಿದಂತೆ ಆಗುವುದು. ಆದುದರಿಂದ ಖಿಲವಾಗಿ ಹೋಗುತ್ತಿರುವ ಕನ್ನಡ ಗಾದೆಗಳನ್ನು ಜೋರ್ಣೋದ್ಧಾರ ಮಾಡಲು ಪ್ರತಿಯೊಬ್ಬ ಕನ್ನಡಿಗನೂ ಬದ್ಧಕಂಕಣವಾಗಿ ನಿಲ್ಲಬೇಕು"(1921:136) ಎನ್ನುತ್ತಾರೆ.

ಮಲ್ಲಪ್ಪನವರು ಸಂಗ್ರಹಿಸಿರುವ ಗಾದೆಗಳನ್ನು 1. ಪಾರಲೌಕಿಕ, 2. ನೈತಿಕ, 3. ಸಾಮಾಜಿಕ. 4. ವ್ಯವಸಾಯ. 5. ವಾಣಿಜ್ಯ, 6. ಕೈಗಾರಿಕೆ – ಆರು ರೀತಿಯಲ್ಲಿ ಗಾದೆಗಳನ್ನು ಉದಾಹರಣೆಯಾಗಿಟ್ಟುಕೊಂಡು ವರ್ಗೀಕರಿಸಿದ್ದಾರೆ. ಗಾದೆಯನ್ನು ಸಂರಕ್ಷಣೆ ಮಾಡಬೇಕು ಎಂದು ಹೇಳುವ ಲೇಖನದಲ್ಲಿ ಗಾದೆಗಳು 'ಹಿತ್ತಲ ಗಿಡ ಮದ್ದಲ್ಲ' ಅನ್ನುವಂತೆಯೇ ಅವುಗಳನ್ನು ಆಧಾರವಾಗಿಟ್ಟುಕೊಂಡು, ಉದಾಹರಿಸಿಕೊಂಡು 50ರಷ್ಟು ಗಾದೆಗಳನ್ನು ಬಳಸಿಕೊಂಡಿದ್ದಾರೆ. ಗಾದೆಗಳ ಬರವಣಿಗೆ ಪ್ರಥಮವೆನಿಸಿದರೂ ಜನಪದರಿಗೆ ತಲುಪಲಿಲ್ಲವೆಂಬ ಅಭಿಪ್ರಾಯವಿದೆ. ಗಾದೆಗಳನ್ನು ವರ್ಗೀಕರಿಸಿಕೊಂಡಿರುವುದು, ಸಂರಕ್ಷಿಸಬೇಕಾಗಿರುವ ಅಗತ್ಯ ಗಾದೆಯ ಅಳಿವು–ಉಳಿವಿನ ಪ್ರಶ್ನೆ.

1919ರ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾದ 'ಪಂಜನಗೂಡಿನ ಲಾವಣಿ' ಸಂಪಾದಕರೇ ತಾತ್ಸಾರ ಮಾಡಿ "ಇಂತಹ ಲಾವಣಿಗಳಲ್ಲಿ ಭಾಷಾ ಸೌಷ್ಠವವೆಂಬುದು ಗಗನ ಕುಸುಮಪ್ರಾಯವಾಗಿರುವುದು" ಟೀಕಿಸಿದ್ದೂ ಉಂಟು. ಆಗಿನ ಕಾಲದ ಜನಪದದ

ಕುರಿತು ಪ್ರಾಜ್ಞರ ಮನೋಭಾವವನ್ನು ತಿಳಿಸುತ್ತಿದ್ದರೆ; 'ಮತ್ತೆ ಕಳಿಸಿಕೊಡಿರಿ' ಎಂಬ ಅದೇ ಸಂಪಾದಕರ ಸೂಚನೆಯಲ್ಲಿ ಕಳಕಳಿಯೂ ಇತ್ತೆಂಬುದನ್ನು ಲಕ್ಷಿಸಬಹುದು.[68]

1923ರ ಬಿಜಾಪುರದ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಚೆನ್ನಮಲ್ಲಪ್ಪ ಹಾಗೂ ಪಿ.ಧೂಲಾ ಸಾಹೇಬರು ಜನಪದ ಸಾಹಿತ್ಯ ಪ್ರಬಂಧದಲ್ಲಿ ಕನ್ನಡ ಜನಪದ ಸಾಹಿತ್ಯದ ಬಗ್ಗೆ ಬರೆದಿರುವ ವಿವರ್ಶಾ ಲೇಖನಗಳಲ್ಲಿ ಇವುಗಳೇ ಪ್ರಥಮ. ಚನ್ನಮಲ್ಲಪ್ಪನವರ 'ಬೀಸುವಕಲ್ಲಿನ ಹಾಡು' ಹಾಗೂ ಧೂಲಾ ಸಾಹೇಬರ 'ಲಾವಣಿಯ ಲಾವಣ್ಯ' ಪ್ರಬಂಧ ಸಹಸ್ರಾರು ಜನರಿಂದ ಪ್ರಶಂಸೆಯನ್ನು ಪಡೆದುವು. ಇದರಿಂದ ಜನಪದ ಸಾಹಿತ್ಯದ ಕುರಿತು ಜನಜಾಗೃತಿ ಮೂಡಲು ಮುನ್ಸೂಚಿಯಾಯಿತು. ಅಲ್ಲಿ ಕೂಡಿದ್ದ ಸಹಸ್ರಾರು ಜನಪದರ ಅಭಿಮಾನ ಗೌರವಾಧಾರಗಳಿಗೆ ಪಾತ್ರವಾದುದಲ್ಲದೆ, ವಿದ್ವಾಂಸರ ಮೆಚ್ಚುಗೆಯನ್ನು ಗಳಿಸಿದರು. ಜಾನಪದ ಸಾಹಿತ್ಯ ಸಾಹಿತ್ಯ ಕುರಿತು ವಿದ್ವಾಂಸರಲ್ಲಿದ್ದ ಕೀಳು ಮನೋಭಾವಕ್ಕೆ ತಕ್ಕ ವಿವರಗಳನ್ನು ಕೊಡುವುದಕ್ಕೆ ಪ್ರಯತ್ನಿಸಿದರು.

1923ರಲ್ಲಿ **ಬೆಟಗೇರಿ ಕೃಷ್ಣಶರ್ಮ**ರ ಉತ್ತರ ಕರ್ನಾಟಕದ ಕೋಲಾಟ ಪದ **'ಕೆರೆಗೆಹಾರ'** ತ್ರಿಪದಿ ಹಾಡುಗಳು ಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಯಿತು. ಇದೊಂದು ಕಥನಗೀತೆ. ತೀ.ನಂ. ಶ್ರೀಕಂಠಯ್ಯನವರು ಅಭಿಪ್ರಾಯದಂತೆ, "ಹುಡುಗರು, ದೊಡ್ಡವರು, ಹೆಂಗಸರು, ಗಂಡಸರು, ಸಾಮಾನ್ಯರು, ವಿದ್ವಾಂಸರು ಎಲ್ಲರ ಮೇಲೂ ಇದು ಉಂಟುಮಾಡುವ ಗಾಢ ಪರಿಣಾಮವನ್ನು ಕಂಡು ಕೃತಿರತ್ನದ ಮಹಿಮೆ ದಿನ ದಿನಕ್ಕೆ ಹೆಚ್ಚಾಗಿ ನನಗೆ ಮನದಟ್ಟಾಗಿದೆ.[69] (ಸಮಾಲೋಕನ 1958:88) ಗಿರಡ್ಡಿ ಗೋವಿಂದರಾಜರು 'ಕೆರೆಗೆಹಾರ' ಹಾಡುಗಳ ಬಗ್ಗೆ ಹೇಳಿದ ಮಾತುಗಳು, "ಜನಪದ ಕವಿಗಳೆಲ್ಲ ತಮ್ಮ ಸಾಮಾಜಿಕ ವ್ಯವಸ್ಥೆಗೆ ಒಪ್ಪಿತವಾಗಿದ್ದ ಮೌಲ್ಯಗಳನ್ನು ತಾವೂ ಒಪ್ಪಿಕೊಂಡರು. ಸಮಾಜವು ಒಪ್ಪಿಕೊಂಡ ಮೌಲ್ಯಗಳನ್ನು ಇವರು ಪ್ರತಿಭಟಿಸಲೇ ಇಲ್ಲ. ಇದಕ್ಕೆ ಮುಖ್ಯ ಮೂರು ಕಾರಣಗಳಿವೆ. 1. ಭಾರತೀಯ ಕರ್ಮತತ್ವ, 2. ಮೌಲ್ಯಗಳು ಜನರ ಪಾಲಿಗೆ ತೀರ ಸರಳಗೊಳಿಸಿದ ನೀತಿಗಳಾಗಿದ್ದುದು, 3. ಜನಪದ ಕವಿ ಬದುಕಿದ ಸಮಾಜ ಸಮಷ್ಟಿ ಪ್ರಜ್ಞೆ, ಹೆಚ್ಚು ಜೀವಂತವಾಗಿದ್ದ ಸಮಾಜ, ಹೀಗೆ ಜನಪದ ಕಾವ್ಯದಲ್ಲಿ ಮೌಲ್ಯ ವಿವೇಚನೆ ದೃಷ್ಟಿಕೋನ ವ್ಯಕ್ತಿಯತ್ತ ಅಲ್ಲ ಸಮಾಜದತ್ತ ಅಭಿಮುಖವಾಗುತ್ತದೆ. ಕೆರೆಗೆಹಾರದ ಇಡೀ ಕಥೆಯ ದುರಂತವೇ ಒಂದು ಮೂಢನಂಬಿಕೆಯ ಮೇಲೆ ನಿಂತಿದೆ. ಇಷ್ಟೆಲ್ಲ ದುರಂತ ಪ್ರಜ್ಞೆಯಿದ್ದು ಕವಿ ಇಡಿಯ ಕಥೆಯನ್ನು ಹೇಳುವ ರೀತಿಯಲ್ಲಿರುವ ನಿರ್ಲಿಪ್ತತೆ ಆಶ್ಚರ್ಯವಾಗಿದೆ. ನಿರ್ಲಿಪ್ತತೆಯೇ ಕವಿತೆಯ ಗುಣವೂ ಹೌದು." (1971:41–54)

'ಕೆರೆಗೆ ಹಾರ' ತ್ರಿಪದಿ ಹಾಡುಗಳ ಬಗ್ಗೆ ತೀ.ನಂ. ಶ್ರೀ ಕಂಠಯ್ಯನವರ ಹಾಗೂ ಗಿರಡ್ಡಿ ಗೋವಿಂದ ರಾಜರ ಎರಡು ಉತ್ತಮವಾದ ವಿಮರ್ಶಾ ಲೇಖನಗಳು ಪ್ರಕಟವಾಗಿದೆ. ಭಾರತೀಯ ಕಾವ್ಯ ಮೀಮಾಂಸೆಯಂತಹ ವಿದ್ವತ್‌ಪೂರ್ಣವಾದ ಆಚಾರ್ಯ ಗ್ರಂಥದಲ್ಲಿ ಸಂಸ್ಕೃತ ಲಾಕ್ಷಣಿಕರ ಕಾವ್ಯತತ್ವಗಳ ಸ್ಪಷ್ಟನೆಗಾಗಿ ಇಪ್ಪತ್ತೈದು ವರ್ಷಗಳ ಹಿಂದೆಯೇ ನಾಲ್ಕು ಜನಪದ ತ್ರಿಪದಿಗಳನ್ನು ಬಳಸಿರುವುದು, ಜನಪದ ಸಾಹಿತ್ಯಕ್ಕೆ ಸಂದಿರುವ ಗೌರವವಾಗಿದೆ.

1924ರ ಪರಿಷತ್ ಪತ್ರಿಕೆಯಲ್ಲಿ (ಸಂ.8, ಸಂ:4) **ಹಲಸಂಗಿ ಚೆನ್ನಮಲ್ಲಪ್ಪ**ನವರು ಬರೆದ **'ಹಳ್ಳಿಯ ಹಾಡುಗಳು'** ಲೇಖನ ಪ್ರಕಟವಾಯಿತು. ಇಲ್ಲಿ ನಾಲ್ಕು ಹಾಡುಗಳನ್ನು ವಿಶ್ಲೇಷಣೆಯಿದೆ. 1. ಕನ್ನಡ ಕಂದವ್ವನ ಲಾಲಿ, 2. ರತಿ ಪ್ರಲಾಪ, 3. ತಾಯಿಯ ಕರುಳು (ಮುಟ್ಟು–'ಬಾರವ್ವ ಜಾಣೆ' ಎಂಬಂತೆ) ಹಾಗೂ 4. ಕೃಷ್ಣ ರುಕ್ಮಿಣಿಯರ ಲೆತ್ತದ ಹಾಡು. 'ಕನ್ನಡ ಕಂದವ್ವನ ಲಾಲಿ' ಹಾಡು 'ಹಳ್ಳಿಯ ಹಿರಿತನದ' ಬಗ್ಗೆ ರಚನೆಗೊಂಡಿದೆ. "ಇದೀಗಿನ ಕಾಲದಲ್ಲಿ ಹಳ್ಳಿಯನ್ನು ಕಾಡಿಗೆ ಬಗೆದು ಹಳ್ಳಿಗಾಡು ಎಂದು ಏಳಿಸಿ ನುಡಿಯುವವರನೇಕರಾದರು. ಇದು ಹಳ್ಳಿಯೇ? ಹಳ್ಳಿಯಲ್ಲ; ಕನ್ನಡನಾಡಿಗೆ ಬರಲಿಕ್ಕಿರುವ ಹಿರಿ ಹಗಲಿನ ಮುಂಬೆಳಗಿನಲ್ಲಿ ಮೂಡಿ ಮಿನುಗುತ್ತಿರುವ ಬೆಳ್ಳಿ, ಕನ್ನಡ ತಾಯಿಯ ವಿಶ್ರಾಂತಿ ಮಂಟಪಕ್ಕೆ ಹಬ್ಬಿದ ಹಳ್ಳಿ. ಜಗತ್ತಿನ ಸೌಂದರ್ಯವೇ ಹಳ್ಳಿ; ಅಲ್ಲಿಯ ಸೊಬಗು ಇನ್ನೆಲ್ಲಿಯೂ ಸಿಕ್ಕದು. ಇಂತಹ ಹೃದಯಹಾರಿಯಾದ ನಂದನವನದ ಕೋಗಿಲೆಗಳ ಹಾಡು ಕವಿಗೆ ಸವಿಯಾಗದೆ ಏನು ಮಾಡೀತು. ಹಳ್ಳಿಯಾಗದೆ ಪಟ್ಟಣವಾಗಲಿಲ್ಲ; ಸಣ್ಣದು ಬೆಳೆದು ದೊಡ್ಡದಾದುದೇನೋ ನಿಜ. ಎಳತಿನಲ್ಲಿರುವ ಸವಿಯು ಬೆಳೆದುದರಲ್ಲಿಲ್ಲ. ಮುದ್ದು ಮಗುವಿನಲ್ಲಿರುವ ಎಳನೋಟದ ಸೊಬಗು ಮುದಿ ಮುತ್ತಯ್ಯನಲ್ಲೆಲ್ಲಿಂದ ಬಂದೀತು. ಆದರೆ ಕೂಸಿನ ನುಡಿಯು ತೊದಲಾಗಿರಬಹುದು. ಏನಿದ್ದರೂ ಅದು ಚೆಂದವಾಗಿಯೇ ತೋರುವುದು." (1924:271–272)

ಗಂಡಸರ ಹಾಡುಗಳು ಹಾಗೂ ಹೆಣ್ಣು ಮಕ್ಕಳ ಹಾಡುಗಳೆಂದು ಹಳ್ಳಿಯ ಹಾಡುಗಳನ್ನು ವಿಭಾಗಿಸಿಕೊಳ್ಳಲಾಗಿದೆ. "ಕರಡಿಯ ಹಾಡು (ತುರಾ ಲಾವಣಿ), ಡಪ್ಪಿನ ಹಾಡು (ಕಲ್ಗಿ ಮುಂತಾದ ಲಾವಣಿಗಳು), ಕಾಮನ ಹಾಡುಗಳು, ಹಂತಿಯ ಚುಟುಕಿಗಳು, ಗೊಂದಲದ ಹಾಡುಗಳು, ಏಕತಾರಿಯನ್ನು ಹಿಡಿದು ಹಾಡುವ ಅನುಭವದ ಪದಗಳು– ಇವೇ ಮೊದಲಾದವು ಗಂಡಸರ ಬಾಯಲ್ಲಿಳಿದಿವೆ. ಇದಲ್ಲದೆ ಉತ್ತರ ಕರ್ನಾಟಕದಲ್ಲಿ ಕುರುಬರು ಡೊಳ್ಳು ಹೊಡೆದು ಹಾಡುತ್ತಿರುತ್ತಾರೆ. ಸುಮಾರು ಮೂರು ಸಾವಿರ ನುಡಿಗಳನ್ನುಳ್ಳ 'ಬೀರನ ಹಾಡುಗಳು' ಎಂಬುದೊಂದು ಅರವತ್ತು ಸಂಧಿಗಳನ್ನೊಳಗೊಂಡ ರಸವತ್ತಾದ ಗ್ರಾಮ್ಯಕಾವ್ಯವು ಕುರುಬರಲ್ಲಿದೆ. ಇದನ್ನು ಆರು ರಚಿದರೋ ತಿಳಿಯದು.

ಇಂದಿನವರೆಗೆ ಇದನ್ನು ಆರೂ ಬರೆದಿಡಲಿಲ್ಲ; ಪರಂಪರಾಗತವಾಗಿಯೇ ನಡೆದು ಬಂದಿದೆ. ಮುಸಲ್ಮಾನರು ಮೊಹರಂ ತಿಂಗಳಲ್ಲಿ 'ರಿವಾಯತ'ಗಳೆಂಬ ಹಾಡುಗಳನ್ನು ಹಾಡುತ್ತಾರೆ. ಮುಸಲ್ಮಾನರಲ್ಲಾಗಿ ಹೋದ ಶರಣರ ಚರಿತ್ರಕ್ಕೆ ಸಂಬಂಧಪಟ್ಟವುಗಳಲ್ಲದೆ ಬೆಡಗಿನ ಹಾಡುಗಳೂ ಕೂಡ ಆಗ ಹೇಳಲ್ಪಡುತ್ತವೆ. ಹಾಡುಗಳು ಮೈಸೂರು ನಾಡಿನಲ್ಲಿ ಬಳಕೆಯಲ್ಲಿವೆಯೋ ಇಲ್ಲವೋ ಎಂಬುದನ್ನು ನಾನರಿಯೆನು." (1924:272–273) ಹೆಣ್ಣುಮಕ್ಕಳ ಹಾಡುಗಳನ್ನು ವಿವರಿಸುತ್ತಾ, "ನಮ್ಮ ಉತ್ತರ ಕರ್ನಾಟಕದ ಅ ಹಳ್ಳಿಯ ಹೆಣ್ಣು ಮಕ್ಕಳು ತಮ್ಮ ಗಂಡನ ಹೆಸರನ್ನು ಹೇಳುವಾಗ ಹಾಕುವ ಒಗಟೆಗಳಲ್ಲಿ ತಿಳಿಗನ್ನಡ ಸುರಿಮಳೆಯೇ ಸುರಿಯುತ್ತಿರುತ್ತದೆ. ಇಂತಹ ಒಗಟೆಗಳನ್ನೂ ಹಾಡುಗಳನ್ನೂ ಸಂಗ್ರಹಿಸಿ ಅಚ್ಚು ಹಾಕಿಸಿದರೆ ಸಾಮನ್ಯರಿಗಲ್ಲದೆ ಹೊಸದಾಗಿ ಹುಟ್ಟುವ ಕವಿಗಳಿಗೂ ಕೂಡ ಬಹಳ ಉಪಯೋಗವಾಗುತ್ತದೆ." (1924:276) ಎಂದಿದ್ದಾರೆ.

ಗಂಡಸರ ಹಾಗೂ ಹೆಣ್ಣುಮಕ್ಕಳ ಹಾಡುಗಳೆಂದು ಹಳ್ಳಿಯ ಹಾಡುಗಳನ್ನು 1924ರ ಸಂದರ್ಭದಲ್ಲಿ ವರ್ಗೀಕರಿಸಿ ವಿವರಿಸಿದ್ದಾರೆ. ಚೆನ್ನಮಲ್ಲ (ಮಧುರ ಚೆನ್ನ) ಅವರಿಗೆ ಹಳ್ಳಿಯ ಸಾಹಿತ್ಯವು ಕನ್ನಡಕ್ಕೇನೂ ಕಡಿಮೆಯಿಲ್ಲವೆಂದು ತೋರಿಸಿ ಕೊಡುವುದು ಮುಖ್ಯವಾಗಿತ್ತು. ಗ್ರಾಮಸಾಹಿತ್ಯವೂ ಸಹ ಶಾಸನಗಳಂತೆ ಪುಸ್ತಕ ರೂಪದಲ್ಲಿ ಮೆರೆಯಬಹುದು ಎಂಬುದನ್ನು ಜನತೆಗೆ ಮನದಟ್ಟು ಮಾಡುತ್ತಾರೆ. ಕನ್ನಡ ನಾಡಿನ ಹಳ್ಳಿಯ ಸಾಹಿತ್ಯವು ಯಾಕೆ ಬೆಳಕು ಕಂಡಿಲ್ಲವೆಂಬುದನ್ನು ಕಳಕಳಿಯಿಂದ ಹೇಳಿಕೊಂಡಿದ್ದಾರೆ. "ಮಹಾರಾಷ್ಟ್ರದಲ್ಲಿ ಅನಂತಫಂದಿ ಮೊದಲಾದವರ ಲಾವಣಿಗಳು ಅಚ್ಚಾಗಿ ಎಷ್ಟೋ ದಿನಗಳಾದವು. ಬಂಗಾಳದ ಡಾಕಾ ಸಾಹಿತ್ಯ ಪರಿಷತ್ತ ಕೆಲಸವನ್ನು ಚೆನ್ನಾಗಿ ನೆರವೇರಿಸಿ ಗ್ರಾಮ ಸಾಹಿತ್ಯವನ್ನು ವೃದ್ಧಿಪಡಿಸಿರುವಂತೆ. ಆದರೆ ನಮ್ಮ ಕನ್ನಡ ನಾಡಿನಲ್ಲಿ ಇಂತಹ ಪುಸ್ತಕಗಳು ಇನ್ನೂ ಹೊರಬೀಳಲಿಲ್ಲ. ಈಗೀಗ ಕೆಲವು ಪ್ರಕಟವಾಗಿದ್ದರೂ ಅವು ಹಳ್ಳಿಯವರ ಕೃತಿಗಳಲ್ಲ, ಸುಶಿಕ್ಷಿತರು ರಚಿಸಿದಂತೆ. ನಿಜವಾದ ಗ್ರಾಮಸಾಹಿತ್ಯವು ಇನ್ನೂ ಅಚ್ಚುಕೂಟವನ್ನು ಕಾಣಲಿಲ್ಲ. ಕನ್ನಡ ವಾಙ್ಮಯದಲ್ಲಿ ಇದೊಂದು ದೊಡ್ಡ ಕೊರತೆಯೇ ಸರಿ. ಹೊಸಹೊಸ ಗ್ರಂಥಗಳನ್ನು ಪ್ರಸಿದ್ಧಪಡಿಸಿ ವಾಙ್ಮಯವನ್ನು ಬೆಳೆಯಿಸುವೆವೆಂದು ಹೇಳಿಕೊಳ್ಳುವ ಪುಣ್ಯಾತ್ಮರನ್ನು ಬೇಡಿಕೊಳ್ಳುವುದೇನೆಂದರೆ; ಮೊದಲು ಕೊರತೆಗಳನ್ನು ಸರಿಪಡಿಸಿರಿ; ಆಮೇಲೆ ಬೆಳೆಯಿಸುವುದಕ್ಕೆ ಪ್ರಯತ್ನಿಸಿರಿ. ಉಳಿಸುವುದಕ್ಕೆ ಬೆಳೆಯಿಸಿರಿ; ಇಲ್ಲದಿದ್ದರೆ ರೋಗದಿಂದ ನರಳುವ ಮಗುವನ್ನು ಅಸಲಿ, ಬಿಂದಲಿ ಮೊದಲಾದ ಒಡವೆಗಳಿಂದ ಅಲಂಕರಿಸುವುದರಲ್ಲಿ ತೊಡಗಿ ಔಷಧೋಪಚಾರಕ್ಕೆ ಅಸಡ್ಡೆ ಮಾಡಿದಂತಾಗುವುದು" (1924:272) ಒಂದು ರೀತಿಯಲ್ಲಿ ಗ್ರಾಮಸಾಹಿತ್ಯವನ್ನು ಸಂರಕ್ಷಿರುವ ಹೊಣೆಯ ಮಾತುಗಳನ್ನು ಚೆನ್ನಮಲ್ಲನವರು ಆಡಿದ್ದಾರೆ. ಇದು ಕನ್ನಡ

ಜಾನಪದದ ಮೊದಲ ಘಟ್ಟದ ಸಂದರ್ಭದಲ್ಲಿ ಅನಿವಾರ್ಯ ಕೆಲಸವೂ ಆಗಿತ್ತು. ಮುಂದೆ ಗೆಳೆಯರ ಬಳಗದವರು ಸಂಗ್ರಹಿಸಿರುವ 'ಗರತಿಯ ಹಾಡು'(1931) 'ಮಲ್ಲಿಗೆ ದಂಡೆ' (1933) ಸಂಕಲನಗಳು ಇದೇ ಉದ್ದೇಶದಲ್ಲಿ ಹೊರಬಂದುವು. ಗ್ರಾಮಸಾಹಿತ್ಯದ ಸಾಂಸ್ಕೃತಿಕ ಮಹತ್ವವನ್ನು ಕನ್ನಡದ ಜನತೆಗೆ ಸಾರುವುದು ಇವರ ಉದ್ದೇಶವಾಗಿತ್ತು.

1925ರಲ್ಲಿ **ಮಾಸ್ತಿ ವೆಂಕಟೇಶ ಅಯ್ಯಂಗಾರರ 'ಕನ್ನಡನಾಡಿನ ಲಾವಣಿ ಸಾಂಗತ್ಯ'** ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ (ಸಂ.9, ಸಂಚಿಕೆ: 3:235–254) ಯಲ್ಲಿ ಪ್ರಕಟವಾಯಿತು. 1919ರಲ್ಲಿ ಮಾಸ್ತಿಯವರು ಸರಕಾರಿ ಅಧಿಕಾರದಲ್ಲಿ ಸೇವೆ ಸಲ್ಲಿಸುತ್ತಿರುವಾಗ ನಾಡಿನ ನಾನಾ ಭಾಗಗಳನ್ನು ಸಂದರ್ಶಿಸುವ ಸೌಲಭ್ಯ ಬಂದೊದಗಿತು. ಆ ಸಂದರ್ಭದಲ್ಲಿ ಬಿಡುವಿನ ವೇಳೆಯಲ್ಲಿ ಕಂಡ, ಕೇಳಿದ, ಅನಂದಿಸಿದ ಜನಪದ ಸಾಹಿತ್ಯದ ತುಣುಕುಗಳನ್ನು ಸಂಗ್ರಹಿಸತೊಡಗಿದರು. ಅವುಗಳ ವೈವಿಧ್ಯವನ್ನು ಅರ್ಥಮಾಡಿಕೊಂಡು ಲೇಖನವನ್ನು ಬರೆದರು. ಅವರ ಸಂಗ್ರಹಕ್ಕೆ ಹಾಡುಗಳು, ಲಾವಣಿಗಳು ಪೂರ್ತಿಯಾಗಿ ದೊರೆಯದಿದ್ದರೂ ಅಲ್ಲಲ್ಲಿ ನೆನಪಿನಲ್ಲಿ ಉಳಿದ ಒಂದೆರಡು ಸಾಲುಗಳನ್ನು ಆಧರಿಸಿ ಅವುಗಳನ್ನು ಉದ್ಧರಿಸಿಕೊಂಡು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಸಂಗ್ರಹಿಸಿದ ಹಾಡುಗಾಲ್ಲಿ 'ಅರ್ಜುನ ಜೋಗಿ' ಲಾವಣಿಯು ಪೂರ್ಣಪಠ್ಯ ಕಲ್ಪನೆಗೆ ಒಳಗೊಂಡಿದೆ. 'ಅರ್ಜುನ ಜೋಗಿ' ಸಂಗ್ರಹಿಸಿದ ಶ್ರೇಯಸ್ಸು ಇವರದ್ದು.

ಎಂಟು ಭಾಗಗಳಾಗಿ ವಿಭಾಗಿಗೊಂಡ ಪ್ರಬಂಧದ ಮೊದಲ ಭಾಗದಲ್ಲಿ ಸಂಗ್ರಹಣೆಗೆ ತೊಡಗಿದ ಸಂದರ್ಭ ನಿರೂಪಕರೊಂದಿಗೆ ಮಾಡಿದ ಸಂಭಾಷಣೆಯನ್ನು ಹೇಳಿಕೊಂಡಿದ್ದಾರೆ. "ಈಗ ಹದಿನಾಲ್ಕು ವರ್ಷಗಳ ಹಿಂದೆ ನಾನು ಕಾಲೇಜಿನಲ್ಲಿ ಓದುತ್ತಿದ್ದ ಕಾಲದಲ್ಲಿ ಒಂದು ಬೇಸಗೆಯ ರಜಾ ಬಂದಾಗ ನಮ್ಮ ಊರಿಗೆ ಹೋಗಿದ್ದ ಸಂದರ್ಭದಲ್ಲಿ ಒಂದು ದಿನ ನಾನೂ ನನ್ನ ಸ್ನೇಹಿತರೂ ಕೆಲವರು ಊರಕೊಳದ ಬಳಿ ಸ್ನಾನಕ್ಕೆಂದು ಹೋಗಿ ಕುಳಿತಿರಲು, ಆ ದಾರಿಯಲ್ಲಿ ಗಂಡಸೊಬ್ಬನೂ, ಹೆಂಗಸೊಬ್ಬಳೂ ಇಬ್ಬರು ಜೋಗಿಗಳು ಬಂದರು. ಹೆಂಗಸು ಒಂದು ಜೋಳಿಗೆಯನ್ನು ಹೆಗಲ ಮೇಲೆ ತೂಗು ಹಾಕಿಕೊಂಡಿದ್ದಳು; ಗಂಡಸು ಒಂದು ಜೇನೀ ಬುರುಡೆಯನ್ನು ಹಿಡಿದುಕೊಂಡಿದ್ದನು. ಇಂಗ್ಲಿಷರ 'ಬ್ಯಾಲಡ್ಡು'ಗಳನ್ನು ಓದಿ ಅವರ ಸಾಹಿತ್ಯದಲ್ಲಿ ಅದಕ್ಕೆ ಇರುವ ಪ್ರಾಶಸ್ತ್ಯವನ್ನು ಆಂಗ್ಲೇಯ ಸಾಹಿತ್ಯ ಚರಿತ್ರೆಯಲ್ಲಿ ಆಗ ತಾನೆ ಓದಿ ತಿಳಿದಿದ್ದುದರಿಂದ, ನನಗೆ ನಮ್ಮ ಸೀಮೆಯ ಗೀತೆಗಳನ್ನು ಸಂಗ್ರಹಿಸಬೇಕೆಂದು ಒಂದು ಆಸೆ ಆ ಕಾಲದಲ್ಲಿ ತಲೆದೋರಿತ್ತು. ನವೀನವಾದ ಆ ಉತ್ಸಾಹದಿಂದ ನಾನು ಜೋಗಿಯನ್ನು ಕರೆದು ಹಾಡುತ್ತೀಯಾ ಎಂದು ಕೇಳಿದೆನು. ಅವನು ಹಾಡುವವನಲ್ಲ; ಆ ಹೆಂಗಸು ಹಾಡುವವಳು. ಕೊನೆಗೆ ಕುಳಿತು, ಇವನು ಜೇನೀ ಬುರುಡೆಯ ಸ್ವರದಲ್ಲಿ ಹಾಡಿನ ಮಾತು ತಿಳಿಯಲಿಲ್ಲ. ಬುರುಡೆಯನ್ನು

ನುಡಿಸದೆ ಬರಿಯ ಹಾಡನ್ನು ಹೇಳೆಂದು ಕೇಳಿದೆನು. ಹೆಂಗಸು ಕೊಂಚ ಕಾಲ ಒಪ್ಪಲಿಲ್ಲ. ಬಹಳ ಒತ್ತಾಯ ಮಾಡಿ ಕೇಳಿದ ಮೇಲೆ ಬಹು ಅಸಮ್ಮತಿಯಿಂದ ಒಂದು ನುಡಿಯನ್ನು ನುಡಿದಳು." (ಸಂಪುಟ 9, ಸಂಚಿಕೆ 3:233) ಮಾಸ್ತಿಯವರು ತೊಡಗಿರುವ ಕ್ಷೇತ್ರಕಾರ್ಯದ ಅನುಭವ ಮಹತ್ಮಪೂರ್ಣವಾಗಿದೆ. ಈ ಭಾಗದಲ್ಲಿ ತೆಲುಗು ಭಾಷೆಯ ಎರಡು ನುಡಿಗಳನ್ನು ಸಂಗ್ರಹಿಸಿ ಅವುಗಳ ಹಿನ್ನೆಲೆಯನ್ನು ವಿವರಿಸುತ್ತಾರೆ. ಒಂದು ಕಡೆ ಕುರುಡನ ಹೆಂಡತಿ, ಇನ್ನೊಂದು ಕಡೆ ಕದಿರಿಗಿನ ಹೆಂಡತಿ ಮುದ್ದಲ ಗುಮ್ಮನಿಗೆ ಹೇಳುವ ಮಾತಿದು. ಹಾಡಿನ ಲಯ, ಛಂದಸ್ಸುಗಳ ಕುರಿತೂ ಮಾಸ್ತಿಯವರು ವಿವರಿಸಿದ್ದಾರೆ.

ಭಾಗ ಎರಡರಲ್ಲಿ, "ಇಂಥ ಲಾವಣಿಗಳು ಕನ್ನಡದಲ್ಲಿಯೂ ಅನೇಕವಾಗಿ ಇವೆ. ಮೈಸೂರಿನ ಕಡೆ ರಸ್ತೆಗಳಲ್ಲಿ ಸಾಲು ಸಾಲಾಗಿ ಗಾಡಿಗಳನ್ನು ಹೊಡೆದುಕೊಂಡು ಹೋಗುವ ಜನರು ರಾತ್ರಿಯನ್ನು ಸುಲಭವಾಗಿ ಕಳೆಯುವುದಕ್ಕೂ ಎಚ್ಚರಿಕೆಯಾಗಿರುವುದಕ್ಕೂ ಸಹಾಯವಾಗಿ ಲಾವಣಿಗಳನ್ನು ಹೇಳಿಕೊಂಡು ಹೋಗುವುದುಂಟು. ರಾತ್ರಿಯ ಪ್ರಯಾಣಗಳಲ್ಲಿ ಇವರಲ್ಲಿ ಒಂದು ಗಾಡಿಯವನು ಮೊದಲರ್ಧವನ್ನು ಹೇಳುವುದು, ಇನ್ನೊಂದು ಗಾಡಿಯವನು ಇನ್ನರ್ಧವನ್ನು ಹೇಳುವುದು. ಹೀಗೆ ಸವಾಲ್–ಜವಾಬಿನಲ್ಲಿ ಇವರು ಹಾಡುವ ಧ್ವನಿಯನ್ನು ಮೈಸೂರು ಕಡೆಯ ಜನರು ಅನೇಕರು ಕೇಳಿರಬೇಕು." (ಪರಿಷತ್ಪತ್ರಿಕೆಯ 1925:ಸಂ.9,ಸಂ.3:234)

ಭಾಗ ಮೂರರಲ್ಲಿ ಮಲೆನಾಡಿನಲ್ಲಿ ದೀಪಾವಳಿ ಹಬ್ಬದ ದಿವಸ ಹಾಡುವ ನುಡಿಗಳನ್ನು ಸಂಗ್ರಹಿಸಿ ಅವುಗಳ ಬಗ್ಗೆ ವಿವರಣೆಗಳನ್ನು ಹಾಗೂ ದೀಪಾವಳಿ ಹಬ್ಬ ಆಚರಣೆಯ ವಿಧಿಕ್ರಮಗಳನ್ನು ನಿರೂಪಿಸಿದ್ದಾರೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಊರವರೆಲ್ಲರೂ ಸೇರಿ ಕೋಲಾಟ ಆಡುತ್ತಾರೆ. ಮಾಸ್ತಿಯವರು ಕ್ಷೇತ್ರಕಾರ್ಯ ಮಾಡುವಾಗ "ಒಂದು ರಾತ್ರಿ ಆಳದೂರಿನಲ್ಲಿ ಮುಸಾಫರ ಬಂಗಲೆಯಲ್ಲಿ ಇಳಿದಿದ್ದಾಗ ದೂರದ ಗುಡ್ಡ ಒಂದರಿಂದ ನಾಟ್ಯದ ವಿಚಿತ್ರಗಾನವು ಕೋಲಾಟದ ಶಬ್ಧದೊಂದಿಗೆ ಸುಮಾರು ಹತ್ತು ಗಂಟೆಯ ಹೊತ್ತಿನಲ್ಲಿ ಕೇಳಿಬಂತು."(1925:235) ಆಲದೂರಿನ ಹಳ್ಳಿಯ ಸುತ್ತ ಒಂದೇ ರಾತ್ರಿ ಹಾಡುವ ಹಾಡುಗಳನ್ನು ಕೇಳಿಸಿಕೊಂಡು ಈ ಭಾಗದಲ್ಲಿ ವಿವರಿಸಿದ್ದಾರೆ.

ಭಾಗ ನಾಲ್ಕರಲ್ಲಿ ಕೊಟ್ಟಿಗೆಹಾರ (ಚಿಕ್ಕಮಗಳೂರು)ದ ಮಲೆನಾಡಿನ ಕೆಲವು ಭಾಗಗಳಲ್ಲಿ ಹಾಡುವ ಹಾಡುಗಳನ್ನು ಮಾಸ್ತಿಯವರು ಕೇಳಿಸಿಕೊಂಡರು. "ಈ ಕಡೆ ಚರಿತ್ರೆಗೆ ಸಂಬಂಧಪಟ್ಟ ಹಾಡುಗಳು ಬಹಳವಾಗಿ ಇವೆಯೆಂದು ಕೇಳಿದ್ದೆವು. ಆದರೆ ಅವು ಯಾವುವೂ ದೊರೆಯಲಿಲ್ಲ. ಒಂದು ಮಾತ್ರ ಸುಲ್ತಾನರ ಹಾಡು ಎಂದು ಹೇಳಿದರು." (1925:239)

ಮಾಸ್ತಿಯವರು ಚರಿತ್ರೆಗೆ ಸಂಬಂಧಪಟ್ಟ ವಿವರಗಳನ್ನು ಗಮನದಲ್ಲಿಟ್ಟುಕೊಂಡು ಹೈದರಾಲಿಯ ದುರ್ಗದ ಹಳ್ಳಿಯಲ್ಲಿ ರಾಣಿ ವೀರಮ್ಮಾಜಿಯನ್ನು ಸೆರೆ ಹಿಡಿದ ವಿವರಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಮುಂದೆ ಇದೇ ಭಾಗದಲ್ಲಿ ಯಲ್ಲಮ್ಮ ದೇವರ ಕಥೆಯನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಕೊಟ್ಟಿಗೆಹಾರದಲ್ಲಿ ಕೇಳಿದ ಕೋಲಾಟದ ಹಾಡುಗಳನ್ನು ಸಂಗ್ರಹಿಸಿದರು. ಹಾಡುಗಳಲ್ಲಿ ಎರಡು ನೀತಿಯ ಹಾಡುಗಳನ್ನು ಸಂಗ್ರಹಿಸಿ ವಿವರಿಸಿದ್ದಾರೆ.

ಭಾಗ ಐದರಲ್ಲಿ ಮಲೆನಾಡಿನಲ್ಲಿ ಕೋಲಾಟದ ಸಂದರ್ಭದಲ್ಲಿ ಹಾಡುವ ಹಾಸ್ಯದ ಹಾಡುಗಳನ್ನು ಸಂಗ್ರಹಿಸಿದರು. ಅದು ಒಂದು ಬಗನಿ ಮರವನ್ನು ಕುರಿತದ್ದು. ಮಲೆನಾಡಿನ ಜನಕ್ಕೆ ಬಗನಿ ಹೆಂಡದ ಮೇಲೆ ಬಹಳ ಪ್ರೀತಿ. ಉತ್ತರ ಕರ್ನಾಟಕದ ಕಡೆ ಚಲುಮರದವ್ವನ ಬಗ್ಗೆ ಉಪಾಸನೆ ಇರುವಂತೆ ಮಲೆನಾಡಿನಲ್ಲಿ ಬಗನಿಮರದವ್ವನ ಮೇಲೆ ಹಾಡುಗಳನ್ನು ಕಟ್ಟಿ ಬಗೆಬಗೆಯ ನಡೆನುಡಿಗಳನ್ನು ಹಾಡುತ್ತಾರೆ.

ಭಾಗ ಆರರಲ್ಲಿ ಬಯಲು ಪ್ರದೇಶದ ಎರಡು ಹಾಡುಗಳ ಕುರಿತು ಕೆಲವು ಮಾತುಗಳನ್ನು ಹೇಳುತ್ತಾರೆ. ಸಂಗ್ರಹಿಸುವ ಎರಡೂ ಹಾಡುಗಳು ಹುಬ್ಬಳ್ಳಿಯ ಕಡೆಯದೆಂದು ತೋರುತ್ತದೆ. ಭಾಷೆಯು ಧಾರವಾಡದ ಕಡೆಯ ಭಾಷೆಯಂತಿದೆ ಎಂದು ಹೇಳಿಕೊಂಡಿದ್ದಾರೆ. ಜನಪದ ಕವಿಯ ಹಾಸ್ಯ ರಸಜ್ಞತೆಯ ಬಗ್ಗೆ ಎಷ್ಟು ಹೊಗಳಿದರೂ ಸಾಲದು. ಅವರ ಪದ್ಯಗಳಲ್ಲಿ ಸ್ವಭಾವವಾಗಿಯೂ ಒಂದು ವಿಧವಾದ ಸ್ವರಸಾಮರಸ್ಯವೂ ಉಂಟಾಗಿದೆ ಎಂದು ಹೇಳುತ್ತಾರೆ.

ಭಾಗ ಏಳರಲ್ಲಿ **'ಅರ್ಜುನಜೋಗಿ'ಯ ಲಾವಣಿ** ವಿವರವಿದೆ. ಹಾಡನ್ನು ಒಬ್ಬ ಭಿಕ್ಷುಕನಂತೆ ಕಾಣುವ ಜೋಗಿಯಿಂದ ಸಂಗ್ರಹಿಸಿಕೊಂಡಿದ್ದಾರೆ. "ಅವನು ತಲೆಯಿಂದ ಕಾಲುವರೆಗೆ ಒಂದು ಬಣ್ಣಬಣ್ಣದ ಸೋಗೆಯನ್ನು ಹಾಕಿಕೊಂಡು, ಕೆಂಪು ಒಡಲಿನಲ್ಲಿ ಬಿಳಿಯ ಚುಕ್ಕೆಯ ಒಂದು ಪಾಗನ್ನು ತಲೆಗೆ ಸುತ್ತಿದನು. ಅದರಲ್ಲಿ ಒಂದೆರಡು ನವಿಲುಗರಿ. ಮುಖದ ಮೇಲೆ ಅಂಗಾರ, ವಿಭೂತಿ, ಕುಂಕುಮ, ಅರಸಿನಗಳಿಂದ ಚುಕ್ಕೆಗಳನ್ನು ಹಚ್ಚಿಕೊಂಡಿದ್ದನು. ಕೈಯಲ್ಲಿ ಒಂದು ಕನ್ನಡಿ. ಅವನಿಗೆ ಹಾಡುಗಳು ಬರಬೇಕೆಂದು ತೋರಿದ್ದರಿಂದ ನಾನು ಏನಯ್ಯ ಎಂದು ಕೇಳಿದನು. ಒಂದೆರಡು ಬರುತ್ತವೆಯೆಂದು ಹೇಳಿದನು. ಸ್ವಲ್ಪವನ್ನು ಹೇಳಿಸಿ ಕೇಳಿದ್ದರಲ್ಲಿ ಬಹಳ ಚೆನ್ನಾಗಿದ್ದಿತು. ಆಮೇಲೆ ಅವನನ್ನು ಕೂಡಿಸಿಕೊಂಡು ಎಲ್ಲಾ ಹಾಡನ್ನು ಕೇಳೋಣವೆಂದು ನೋಡಿದರೆ ಅದು ಎಷ್ಟು ಹೊತ್ತಿಗೂ ಮುಗಿಯಲಿಲ್ಲ. ಆದದ್ದರಿಂದ ಅದರಲ್ಲಿ ಕೊಂಚ ಭಾಗವನ್ನು ಬರೆದು ಗುರುತು ಹಾಕಿಕೊಂಡೆನು" (1925:246) ಎಂದು ಮಾಸ್ತಿಯವರು ಅರ್ಜುನಜೋಗಿಯ ಹಾಡು ಸಂಗ್ರಹಿಸಿದ ಅನುಭವವನ್ನು ಹೇಳಿಕೊಂಡಿದ್ದಾರೆ. 'ಇದು ಭಾರತದಲ್ಲಿರುವ

ಕಥೆಯಲ್ಲ; ಜನಸಾಮಾನ್ಯದ ಕವಿಯೊಬ್ಬನು ಕಟ್ಟಿದ್ದು' ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅರ್ಜುನ ಜೋಗಿಗೆ ಸಂಬಂಧಿಸಿದ ವಿಸ್ತಾರವಾದ ಒಂದು ಪಠ್ಯವನ್ನು ಅಲ್ಲಲ್ಲಿ ಪುರಾಣದ ಕಥೆಗಳೊಂದಿಗೆ ಹೋಲಿಕೆ ಮಾಡಿ, ವಿಶ್ಲೇಷಣೆ ಮಾಡಲಾಗಿದೆ.

ಭಾಗ ಎಂಟರಲ್ಲಿ ಶಿಷ್ಟ ಕವಿಗಳ ಕಾವ್ಯ ಸಾಮರ್ಥ್ಯವನ್ನು ವಿವರಿಸುತ್ತಾರೆ. "ಕವಿತೆಯು ಜೀವನದ ನಿಸರ್ಗ ಕುಸುಮ; ಪಾಂಡಿತ್ಯದ ಕೃತಕ ಫಲವಲ್ಲ. ಇದು ನಮ್ಮವರಿಗೆ ತಿಳಿಯದೆ ಇದ್ದ ವಿಷಯವಲ್ಲ. ಕವಿತೆಯು ರಸ ಪ್ರಮುಖವಾದ ಮಾತು. ಭಾವ ಪ್ರಮುಖವಾದ ಮಾತಲ್ಲ. ಇದನ್ನು ನಮ್ಮವರು ತಿಳಿದಿದ್ದರು. ಅದರಿಂದಲೇ ನಮ್ಮ ಸಾಹಿತ್ಯ ಶಾಸ್ತ್ರಗಳಲ್ಲಿ ನಮ್ಮ ಪೂರ್ವಿಕರು ರಸ ನಿರೂಪಣಕ್ಕೆ ಅಷ್ಟು ಹೆಚ್ಚಾದ ಅವಕಾಶವನ್ನು ಕೊಟ್ಟಿರುವರು. ಆದರೆ ಈಚೆಗೆ ನಾವು ಇದನ್ನು ಮರೆತಿದ್ದೇವೆ. ಉತ್ತಮ ಕಾವ್ಯದಿಂದ ಲಕ್ಷಣಗಳನ್ನು ಕಲಿತೆವು; ಆಮೇಲೆ ಆ ಲಕ್ಷಣದಂತೆ ಬರೆದರೆಯೇ ಉತ್ತಮ ಕಾವ್ಯವೆಂದು ಹಠ ಮಾಡುತ್ತಿದ್ದೇವೆ. ನ್ಯಾಯವಾಗಿ ನೋಡಿದರೆ ಕಾವ್ಯವು ಧರಿಸಬಹುದಾದ ರೂಪಗಳಿಗೆ ಮೊದಲು ಕೊನೆಯಿಲ್ಲ. ಯಾವ ರೂಪವನ್ನು ಅದು ಧರಿಸಿದರೂ ರಸವನ್ನೊಳಗೊಂಡಿದ್ದರೆ ಉತ್ತಮ ಕಾವ್ಯ. ಹೇಳುವವನ ಭಾವನೆಯು ಓದುವವನ ಮನಸ್ಸನ್ನು ತಟ್ಟುವುದಾದರೆ ಆ ಕಾವ್ಯವು ಸಾರ್ಥಕವಾಯಿತು." (1925:252)

ಮಾಸ್ತಿಯವರ 'ಕನ್ನಡ ಲಾವಣಿ ಸಾಂಗತ್ಯ' ಲೇಖನವು ಕನ್ನಡ ಜಾನಪದ ಅಧ್ಯಯನಕ್ಕೆ ಮಹತ್ವದ ಘಟ್ಟವನ್ನು ಒದಗಿಸಿದೆ. ಲೇಖನದಲ್ಲಿ ಕೆಲಸಗಾರರ ಹಾಡುಗಳ ಚರ್ಚೆ, ಹಾಡುಗಾರರ ಸ್ವಂತ ವಿಚಾರಗಳನ್ನೊಳಗೊಂಡ ಸಂವಾದಗಳೊಂದಿಗೆ ಮಾಸ್ತಿಯವರ ಸ್ವಾನುಭಾವವೂ ಸೇರಿಕೊಂಡಿದೆ.

1928ರಲ್ಲಿ **ಪ್ರಹ್ಲಾದ ನರೇಗಲ್ಲರ 'ಜನಪದ ಗೀತಗಾಯತ್ರಿ'** ಜಯಕರ್ನಾಟಕ ಮಾಸಪತ್ರಿಕೆಯಲ್ಲಿ ತ್ರಿಪದಿಗಳ ಬಗೆಗೆ ಪ್ರಕಟವಾದ ಮೊದಲ ಲೇಖನ. 'ಜನಪದ ತ್ರಿಪದಿಗಳತ್ತ ಮೊದಲು ಗಮನಸೆಳೆದಾಕೆ ನಮ್ಮ ಮನೆಯಲ್ಲಿ ಜೋಳ ಬೀಸುತ್ತಾ ಹಾಡುತ್ತಿದ್ದ ಜನಪದ ಗಾಯತ್ರಿ'ಯೆಂದು ಹೇಳುತ್ತಾ, ಅದೂವರೆಗೂ ಜನಪದ ಗೀತೆಗಳು ತ್ರಿಪದಿಗಳೇ ಎಂಬ ಅಂಶ ಅವರಿಗೆ ತಿಳಿದಿರಲಿಲ್ಲವಂತೆ. ಅವರೇ ಹೇಳುವಂತೆ "ನನಗೆ ಬೀಸುವ ಹಾಡುಗಳು ತ್ರಿಪದಿಗಳೆಂದು ತಿಳಿದ ದಿವಸವೇ ನನ್ನ ಮಗುವನ್ನು ತೊಟ್ಟಿಲಲ್ಲಿಟ್ಟು ತೂಗುವಾಗ ನನ್ನ ತಾಯಿ ಹಾಡಿದ ಲಾಲಿ ಪದಗಳು ಕಿವಿಗೆ ಬಿದ್ದುವು."

1930ರಲ್ಲಿ **ಬೆಟಗೇರಿ ಕೃಷ್ಣಶರ್ಮ**ರ ಲೇಖನವು ಜಯಕರ್ನಾಟಕ ಪತ್ರಿಕೆ (ಸಂ.15, ಸಂ.1) ಯಲ್ಲಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ (ಎಪ್ರಿಲ್ ಸಂಚಿಕೆ 190) ಯಲ್ಲಿ ಪ್ರಕಟವಾಯಿತು. ಜಯಕರ್ನಾಟಕ ಪತ್ರಿಕೆಯಲ್ಲಿ **'ಹಳ್ಳಿಯ ಹಾಡುಗಳು'** ಎಂಬುದಾಗಿಯೂ ಪರಿಷತ್ಪತ್ರಿಕೆಯಲ್ಲಿ 'ಹಳ್ಳಿಗರ ಹಾಡುಗಳು' ಎಂಬುದಾಗಿಯೂ

ಪ್ರಕಟವಾಯಿತು. ಎರಡೂ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ ಒಂದೇ ಸ್ವರೂಪ ಆಗಿದ್ದರೂ, ಪರಿಷತ್ಪತ್ರಿಕೆಯಲ್ಲಿ ಪ್ರಕಟವಾದ ಲೇಖನವು ಹೆಚ್ಚು ವ್ಯಾಪ್ತಿಯನ್ನೊಳಗೊಂಡಿದೆ.

ಜನಪದ ಗೀತೆಗಳನ್ನು ಆಧರಿಸಿ ಅರವತ್ತೈದು ತ್ರಿಪದಿಗಳಿವೆ. ಜನಪದ ಜೀವನದ ಸ್ವಾರಸ್ಯವನ್ನು ಪ್ರತಿಪದಿಸುವುದಕ್ಕಾಗಿ ಅವರಲ್ಲಿರುವ ಆಸ್ಥೆ ಹಾಗೂ ಅನುಭವಗಳನ್ನು ಸ್ಪಷ್ಟಪಡಿಸಲಾಗಿದೆ. **'ಗರತಿಯ ಹಾಡು'** (1931) ಪ್ರಕಟವಾಗುವ ಮೊದಲೇ ಬೆಟಗೇರಿಯವರು ತ್ರಿಪದಿಗಳನ್ನು ಕನ್ನಡ ಜನತೆಗೆ ಪರಿಚಯಿಸಿಬಿಟ್ಟರು. ಈ ಹಾಡುಗಳನ್ನು 'ಬೀಸುವ ಕಲ್ಲಿನ ಪದಗಳು' ಎಂದು ಕರೆಯುತ್ತಾರೆ. ಹಾಡುಗಳ ಭಾಷಾ ವೈವಿಧ್ಯ, ಛಂದಸ್ಸು, ಹಾಡು ಹೇಳುವ ರೀತಿ ಇತ್ಯಾದಿ 6 ಭಾಗಗಳಿದ್ದು ಮೊದಲ ಐದು ಭಾಗಗಳು ಹಾಡುಗಳ ಪ್ರಾಚೀನ ಉಲ್ಲೇಖ, ಹಾಡುವವರು, ಗುಣಧರ್ಮಗಳ ಚರ್ಚೆಯಿದೆ.

ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿರುವ ಹಾಡುಗಳನ್ನೇ ಆಧರಿಸಿ ಅಲ್ಲಲ್ಲಿ ಕೆಲವು ಹಾಡುಗಳಿಗೆ ವ್ಯಾಖ್ಯಾನಗಳನ್ನು ಕೊಟ್ಟಿದ್ದಾರೆ.

"ಚಿಕ್ಕ ನನ್ನ ಮೈದುನ ಚಿಕ್ಕ ಹೊಳೆ, ದಂಡೆಯಲಿ ಚಿಕ್ಕಾಡು ಕೊಂದು ಅಳುತಾನೆ, ನನ ತಮ್ಮ ಹುಲಿಕೊಂದು ದೊರೆಯು ನಗುತಾನೆ" (ಜಯಕರ್ನಾಟಕ :1930:58) "ಅಲ್ಲದಂತಹ ಅತ್ತೆ ಬೆಲ್ಲದಂತಹ ಮಾವ, ನೆಲ್ಲಿಕಾಯಂತ ನಗೆಹೆಣ್ಣಿಯಿದ್ದರೆ, ಮಲ್ನಾಡ ತವರ ಮರತೇನ" (1930:60).

ಬೆಟಗೇರಿಯವರ ಸಂಗ್ರಹದ ಹಾಡುಗಳನ್ನು ತಿದ್ದಿ, ತೀಡಿ ಪ್ರಕಟಿಸಲಾಗಿದೆ. ಉತ್ತರ ಕರ್ನಾಟಕದ ಇನ್ನಿತರ ಸಂಗ್ರಹಗಳಾದ ಮಲ್ಲಿಗೆದಂಡೆ (1933), ಗರತಿಯ ಹಾಡು (1931), ಹಳ್ಳಿಯ ಹಾಡು (1933) ಮೊದಲಾದವುಗಳಲ್ಲಿ ಪ್ರಾದೇಶಿಕ ಭಾಷೆ, ಒತ್ತು-ಗತ್ತು, ಧಾಟಿಗಳನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. ಮೊದಲ ಘಟ್ಟದ ಅಧ್ಯಯನಕ್ಕೆ ಈ ರೀತಿಯ ಸಂಗ್ರಹಗಳು ಚಾರಿತ್ರಿಕ ದಾಖಲೆಯಾಗಿವೆ.

ಬೆಟಗೇರಿಯವರ ಲೇಖನದ ವಿಂಗಡಣೆಯ ಆರನೆಯ ಭಾಗದಲ್ಲಿ ತಾಯಿ, ತಂದೆ, ಮಗ, ಮಗಳು, ತಂಗಿ, ಅಣ್ಣ, ತಮ್ಮ, ದಾಂಪತ್ಯ ಪ್ರೇಮ, ಅನುಕೂಲ ಸಂಬಂಧದ ಆಶೆ, ಪ್ರತಿಕೂಲ ಸಂಬಂಧ, ಅತ್ತಿಗೆ, ಸಂತಾನದ ಬಯಕೆ, ಲೋಕಾನುಭವ, ಹಾರಯ್ಕೆ ಇತ್ಯಾದಿ ಸಂಸಾರಕ್ಕೆ ಸಂಬಂಧಿಸಿದ ಹಾಡುಗಳಿವೆ. ಈ ಹಾಡುಗಳು ಗರತಿಯ ಬಾಳಲ್ಲಿ ಆದರ್ಶವನ್ನು ಪ್ರತಿಬಿಂಬಿಸುವಂತಹವುಗಳು.

ಬೆಟಗೇರಿಯವರಿಗೆ ಕನ್ನಡ ಜನಪದ ಸಂಸ್ಕೃತಿಯನ್ನು ಸಂಗ್ರಹಿಸುವ ಕಳಕಳಿಯ ಹೊಣೆಯಿತ್ತು. ಬೀಸುವಕಲ್ಲಿನ ಪದಗಳನ್ನು ಸಂಗ್ರಹಿಸಿ ವಿಶ್ಲೇಷಿಸುವುದು ಮಾತ್ರವಲ್ಲ ಅವುಗಳಿಂದ ಜನಪದ ಗೀತೆಗಳನ್ನು ಸಂಗ್ರಹಿಸುವುದಕ್ಕೆ ಕನ್ನಡ ಜನತೆಗೆ ಸ್ಫೂರ್ತಿ ಒದಗಬೇಕೆಂಬುದಾಗಿತ್ತು. "ಇಂತಹ ಹಾಡುಗಳು ನಮ್ಮ ನಾಡಿನಲ್ಲಿ ಹುಡುಕಿದರೆ

ರಾಶಿರಾಶಿಯಾಗಿ ಸಿಕ್ಕುವುವು. ಬಡವರಾದವರ ಬಾಳುವೆಯ ಗೋಳಾಟ, ಹೊಟ್ಟೆಯ ಹೋರೆಯ ಹೋರಾಟಗಳಲ್ಲಿಯೂ ಸಿರಿವಂತರ ಸೋಮಾರಿತನ, ಆಲಸಿಕೆ, ಆಡಂಬರಗಳಲ್ಲಿಯೂ ನಮ್ಮ ಪರಂಪರೆಯ ಹುರುಳುಳ್ಳ ಭಾಗವೆಷ್ಟೋ ಹಾಳಾಗಿ ಹೋಗುತ್ತಲಿದೆ. ಈಗಾಗಲೇ ಅದೆಷ್ಟೋ ಹೋಗಿಯೂ ಬಿಟ್ಟಿದೆ. ಎಲ್ಲದರಂತೆ ಹಳ್ಳಿಯ ಹಾಡುಗಳ ಹಾಡೂ ಆಗಿದೆ" (ಪರಿಷತ್ಪತ್ರಿಕೆ 1930:65)

1930ರಲ್ಲಿ ಜಯಕರ್ನಾಟಕ ಪತ್ರಿಕೆಯ ಸಂಪುಟ 9ರಲ್ಲಿ **ಬಿ.ಎಂ.ಶ್ರೀಕಂಠಯ್ಯ** ಹಾಗೂ **ಮಾಸ್ತಿ ವೆಂಕಟೇಶ ಐಯ್ಯಂಗಾರರ 'ಜನಪದ ಸಾಹಿತ್ಯದ ಮಹತ್ವ'** ಲೇಖನ ಪ್ರಕಟವಾಯಿತು. ಜನಪದ ಸಾಹಿತ್ಯದ ಬಿ.ಎಂ.ಶ್ರೀಯವರು "ಶಾಸ್ತ್ರಬಲದಿಂದಲೂ ಸಂಸ್ಕೃತ ಪ್ರತಿಭೆಯಿಂದಲೂ ರಚಿತವಾದ ಪ್ರೌಢ ಸಾಹಿತ್ಯವೇ ಸಾಹಿತ್ಯವೆಂದೂ, ಹಳ್ಳಿಗಳಲ್ಲಿಯೂ, ಬೀದಿಗಳಲ್ಲಿಯೂ, ಜನಸಾಮಾನ್ಯರು ಹಾಡಿಕೊಳ್ಳುವ ಹಾಡುಗಳು ಸಾಹಿತ್ಯವಲ್ಲವೆಂದೂ ಪಂಡಿತರ ಭಾವನೆ. ಮಧುರ ಕವಿಯ ಅಭಿಪ್ರಾಯಕ್ಕೆ ವಿರೋಧವಾಗಿ ಕವಿತ್ವದ ಮೂಲವನ್ನೂ, ಆದಿಚರಿತ್ರೆಯನ್ನೂ, ಪರಿಶೋಧಿಸಿರತಕ್ಕವರು ಹೇಳುವುದೇನೆಂದರೆ, ಮೊದಲು ಹುಟ್ಟಿದುದು ಜನವಾಣಿ, ಅದು ಬೆಳೆದು ಪರಿಷ್ಕೃತವಾಗಿ ವೃದ್ಧಿಯಾದುದು ಕವಿವಾಣಿ, ಜನವಾಣಿ ಬೇರೆ: ಕವಿವಾಣಿ ಹೂವು, ಕಾಡು ಜನರೂ, ಒಕ್ಕಲಿಗರೂ, ಹೆಂಗಸರೂ, ಮಕ್ಕಳೂ ಶಾಸ್ತ್ರಕಾವ್ಯಗಳ ಪರಿಚಯವೇ ಇಲ್ಲದ ಜನಸಾಮಾನ್ಯರೆಲ್ಲರೂ ಹಾಡಿನ ಮಟ್ಟನ್ನು ಎಂದರೆ ಅಷ್ಟುಮಟ್ಟಿಗೆ ಛಂದಸ್ಸನ್ನು ಬಲ್ಲರು. ಹಿಂದಿನಿಂದ ಬಂದ ಹಾಡನ್ನು ತಲೆಮರೆಯಾಗಿ ಕಲಿತು ಹೇಳುವುದಲ್ಲದೆ, ಹೊಸ ಹಾಡನ್ನು ಕಟ್ಟಬಲ್ಲರು"(1930–31:673) ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಾಸ್ತಿಯವರು ಹೇಳುವಂತೆ, "ಕಾವ್ಯದ ವಸ್ತು ಕೇವಲ ಐಶ್ವರ್ಯವಂತರ ಬಾಳು ಮಾತ್ರವಲ್ಲ ಕೇವಲ ಶೃಂಗಾಲೀಲೆ ಮಾತ್ರವಲ್ಲ ಎನ್ನುವುದೂ ಸಾಮಾನ್ಯ ಜನರ ಬದುಕಿನ ಬೇನೆ ಬೇಗೆಗಳೂ, ನಲುಮೆ ನಗೆಯಾಟಗಳೂ ಕಾವ್ಯದಲ್ಲಿ ಸುಂದರವಾಗಿ ರೂಪುಗೊಳ್ಳಬಹುದು. ಸುಸಂಸ್ಕೃತರಾದ ಜನರನ್ನು ಮುಟ್ಟಬಹುದೂ ಎನ್ನುವುದು ಜನರಿಂದ ಕಾಣುತ್ತದೆ"(1930–31:675)

1931ರಲ್ಲಿ **ಮಾಸ್ತಿ ವೆಂಕಟೇಶ ಅಯ್ಯಂಗಾರರ 'ಫೋಕ್‌ಸಾಂಗ್ಸ್ ಇನ್ ದಿ ಕರ್ನಾಟಕ'** ಪ್ರಬಂಧವು ಮದ್ರಾಸಿನ ತ್ರಿವೇಣಿ ಪತ್ರಿಕೆಯಲ್ಲಿ ಪ್ರಕಟವಾಯಿತು. ಮಾಸ್ತಿಯವರು ಈ ಪ್ರಬಂಧ ಬರೆವಾಗ ಸೆನ್ಸಸ್ ಸುಪರಿಂಟೆಂಡೆಂಟ್ ಇನ್ ಮೈಸೂರು–ಬೆಂಗಳೂರು ಹುದ್ದೆಯಲ್ಲಿದ್ದರು. ತ್ರಿವೇಣಿ ಪತ್ರಿಕೆಯವರು ತಮ್ಮ ಓದುಗರಿಗೆ, ಕರ್ನಾಟಕದ ಜನಪದ ಗೀತೆಗಳನ್ನು ಓದುವುದಕ್ಕೆ ಲಭ್ಯವಾಗುವಂತಹ ಯೋಜನೆಯೊಂದನ್ನು ಹಮ್ಮಿಕೊಂಡಿದ್ದರು.

ಯೋಜನೆಯ ಪ್ರಕಾರ ಉತ್ತರ ಕರ್ನಾಟಕದ ಜನಪದ ತ್ರಿಪದಿಗಳನ್ನು ಅನುವಾದಿಸಿಕೊಡುವ ಸಲುವಾಗಿ ಮಾಸ್ತಿಯವರು ಧಾರವಾಡದ ಗೆಳೆಯರ ಗುಂಪಿನವರು ಸೇರಿ ಸಂಗ್ರಹಿಸಿದ ಗರತಿಯ ಹಾಡುಗಳನ್ನು ಅನುವಾದಿಸಿಕೊಟ್ಟರು. ಗರತಿಯ ಬದುಕಿನ ವಿವರಗಳುಳ್ಳ 30 ನಮೂನೆಯ ಉತ್ತಮ ಹಾಡುಗಳನ್ನು ಅನುವಾದಿಸಿದ್ದಾರೆ.

ದೇವರ ಸ್ತುತಿಯ ಹಾಡೊಂದರ ಅನುವಾದ ಹೀಗಿದೆ: "ಮಾದೇವ ನಿನ ಹೊರತು ನಾನ್ಯಾರ ನಂಬಿಲ್ಲ । ನಾ ಮಾಡೆನೆಂಬ ಅಳವಿಲ್ಲ । ಮಲ್ಲಯ್ಯ । ನೀ ನಡಿಸು ನನ್ನ ಸುರವೆಲ್ಲ ॥ (ಗರತಿಯ ಹಾಡು:1990:40) "Mahadeva, I have no other, God but you; nor do I think it, Is mysel that shall do this, And that; O strong one, do Thou conduct everything." (Triveni 1931:658)

ಗರತಿಯೊಬ್ಬಳ ಬದುಕಿನ ಸುತ್ತ ಹಾಡುವ, ತಾಯಿಮಗಳ ಸಂಬಂಧ, ಅತ್ತೆ ಸೊಸೆ ಸಂಬಂಧ, ತಾಯಿಯಿಲ್ಲದ ತವರು ಮನೆ ಹೀಗೆ ಸಂಸಾರದ ಗುಟ್ಟನ್ನು ಒಳಗೊಂಡ 47 ಹಾಡುಗಳನ್ನು ಮಾಸ್ತಿಯವರು ಅನುವಾದಿಸಿದ್ದಾರೆ.

1931ರಲ್ಲಿ ಪ್ರಕಟವಾದ **ತೀ.ನಂ.ಶ್ರೀಕಂಠಯ್ಯನವರ 'ಮಕ್ಕಳಿಗೆ ಹೇಳುವ ಕಥೆಗಳು'** 1958ರಲ್ಲಿ ಅವರ 'ಸಮಾಲೋಕನ' ಗ್ರಂಥದಲ್ಲೂ ಸೇರ್ಪಡೆಯಾಗಿದೆ. ವಯಸ್ಸು ಗತಿಸಿದಂತೆಲ್ಲಾ ಮಾತಾಡುವ ಚಾಪಲ್ಯವನ್ನು ಹೆಚ್ಚಿಸಿ ಕೊಳ್ಳುವ ಅಜ್ಜಿಯು, ಮೊಮ್ಮಕ್ಕಳ ಕುತೂಹಲವನ್ನು ತಣಿಸುವುದಕ್ಕೆ ಹೇಳುವ ಕಥೆಗಳ ಸ್ವಾರಸ್ಯವೇನೆಂಬುದನ್ನು ಇಲ್ಲಿ ವಿವರಿಸಿದ್ದಾರೆ. ಕಥೆಗಳು ಮಕ್ಕಳ ಶಿಕ್ಷಣವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ– ಇವುಗಳು ಇವತ್ತು ಅತಿವೇಗದಲ್ಲಿ ನಾಶವಾಗುವುದಕ್ಕೆ ಮೊದಲು ಸಂಗ್ರಹಿಸಿಕೊಳ್ಳಬೇಕೆಂದು ಅಭಿಪ್ರಯಪಟ್ಟಿರುತ್ತಾರೆ. ಕಥೆಗಳು ಮಕ್ಕಳ ಶಿಕ್ಷಣವನ್ನು ಅಭಿವೃದ್ಧಿಪಡುಸುವುದರ ಜೊತೆಗೆ– ಇವುಗಳು ಇವತ್ತು ಅತೀವೇಗದಲ್ಲಿ ನಾಶವಾಗುವುದಕ್ಕೆ ಕುತೂಹಲವನ್ನು ಕೆರಳಿಸುತ್ತವೆ. ಮಕ್ಕಳ ಜ್ಞಾಪಕಶಕ್ತಿಯನ್ನು ವಿಕಾಸಗೊಳಿಸುತ್ತವೆ. ಮಕ್ಕಳ ಕಲ್ಪನಾ ಶಕ್ತಿಯನ್ನು ಕುದುರಿಸುತ್ತವೆ. ಹಾಗೂ ಸಂಭಾಷಣಾ ಚಾತುರ್ಯವನ್ನು ಬೆಳೆಸುತ್ತವೆ. ಎಲ್ಲಾ ಅಂಶಗಳು ಕತೆಗಳಿಂದ ದೊರಕುತ್ತವೆ. ಈ ಪ್ರಬಂಧದ ಉದ್ದೇಶವೆಂದರೆ ಆ ಕಾಲದಲ್ಲಿ ಬಳಕೆಯಲ್ಲಿದ್ದ ಪಠ್ಯಪುಸ್ತಕಗಳ ಕೃತಕತೆ. ಕೊಲೆಪಾತಕ ಪದ್ಧತಿ ಎಷ್ಟು ಬೇಗ ತಪ್ಪಿಹೋದರೆ ನಮ್ಮ ವಿದ್ಯಾಭ್ಯಾಸಕ್ಕೆ ಅಷ್ಟುಕ್ಷೇಮ. 'ಬಾಲ ಹೋಯ್ತು ಚಾಕು ಬಂತು ಡುಂಡುಂ... ಎಂಬ ಜನಪದ ಕತೆಯೊಂದರಲ್ಲಿ ಕ್ರೂರಪ್ರಾಣಿಗಳಿಂದ ಕೋತಿ ಬದುಕಿಕೊಂಡದ್ದನ್ನು ಊರೆಲ್ಲಾ ಡಂಗುರ ಸಾರುವುದು ಮಕ್ಕಳಿಗೆ ಮನೋರಂಜಕವಾಗಿದೆ. ಮಕ್ಕಳಿಗೆ ಹೇಳುವ ಕಥೆಗಳ ಒಟ್ಟು ಸಂದರ್ಭ, ಅವುಗಳನ್ನು ಆಸಕ್ತಿಯಿಂದ ಮಕ್ಕಳು ಓದುವ, ಮಕ್ಕಳ ಜ್ಞಾನಶಕ್ತಿ ವೃದ್ಧಿಯಾಗುವ

ಸಮರ್ಪಕವಾದ ಪ್ರಯೋಜನದ ಪ್ರಬಂಧದಲ್ಲಿದೆ, ಕನ್ನಡ ಜಾನಪದಕ್ಕೆ ಚಾರಿತ್ರಿಕ ಚೌಕಟ್ಟನ್ನು ಒದಗಿಸಿಕೊಟ್ಟಿದೆ.

1936ರಲ್ಲಿ **ಮಾಸ್ತಿ ವೆಂಕಟೇಶ ಆಯ್ಯಂಗಾರರ 'ಕರ್ನಾಟಕ ಜನಪದ ಸಾಹಿತ್ಯ'** ಪ್ರಬಂಧವು ಪ್ರಬುದ್ಧ ಕರ್ನಾಟಕದ ಸಂ.18, ಸಂ.1ರಲ್ಲಿ ಪ್ರಕಟವಾಯಿತು. ಹದಿನೈದು ಭಾಗಗಳಿವೆ. ಜನಪದ ಗೀತೆಗಳ ವೈವಿಧ್ಯ ಹಾಗೂ ಅವುಗಳ ಸೊಬಗಿನ ಬಗೆಗೆ ರಚನೆಗೊಂಡಿದೆ. ಜಾನಪದ ಅಧ್ಯಯನದ ಬಗೆಗೆ ಭಾಗ ಒಂದರಲ್ಲಿ, "ಜನತೆಯ ಕೃತಿಯಲ್ಲಿ ಒಂದು ವಿಶೇಷ, ಪಾಂಡಿತ್ಯದ ಕಾವ್ಯ ಬಹು ಕಡಮೆಯ ರೀತಿಯದಾದಾಗ ಬರಿಯ ವೇಷವಾಗುತ್ತದೆ. ಬಹು ನಿಕೃಷ್ಟವಾದ ಜನತೆಯ ಕಾವ್ಯಕ್ಕಾದರೂ ಇಂಥ ಕವಿತೆಯನ್ನು ಕೈಬಿಡುವ ಸಹಜತೆ ಅಂಟಿಕೊಂಡಿರುತ್ತದೆ. ಬೆಲೆಯದಾದರೂ ಬೆಲೆಯಿಲ್ಲದಾದರೂ ಜನತೆಯ ಕವಿತೆ ಕಾರಣದಿಂದ ಗಮನಕ್ಕೆ ಅರ್ಹವಾದದ್ದು. ಅದು ಜನತೆಯ ಸಹಜವಾದ ನುಡಿ. ಜನರ ಕ್ಷೇಮವನ್ನು ಬಯಸುವವರೆಲ್ಲ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು. ಮನಸ್ಸು ಕೊಟ್ಟು ತಿಳಿಯಬೇಕು" (1936:ಸಂ.18, ಸಂ.1:3) ಎಂದು ಚರ್ಚಿಸಿದ್ದಾರೆ.

ಭಾಗ ಎರಡರಲ್ಲಿ ಕನ್ನಡ ಜಾನಪದದಲ್ಲಿ ಈ ವರೆಗೆ ಆಗಿರುವ ವೈವಿಧ್ಯಮಯ ಅಧ್ಯಯನಗಳು, ಭಾಗ ಮೂರರಲ್ಲಿ ಜಾನಪದ ಅಧ್ಯಯನಕ್ಕೆ ಎಂದಿನಿಂದ ಪ್ರಚಾರ ದೊರಕಿರು ಕುರಿತು, "ಅಧ್ಯಯನದ ಕುರಿತಂತೆ ಜನತೆಯ ಕಾವ್ಯದ ಅರ್ಥವನ್ನು ತಿಳಿಯುವುದಕ್ಕೆ ಅನೇಕ ವೇಳೆ ಅಭ್ಯಾಸ ಇರಬೇಕು. ಮುಖ್ಯವಾಗಿ ಇದು ಹಾಡುವ, ಕೇಳುವ ಕೃತಿ; ಬಲ್ಲವರು ಹಾಡಿ ಸಹೃದಯರು ಕೇಳಿ ಅರ್ಥವಾಗುವ ಕವಿತೆ. ವಿದ್ಯಾವಂತರೆನ್ನುವ ನಾವು ಕವಿತೆಗೆ ಬಹು ವೇಳೆ ಬಲ್ಲವರೂ ಅಲ್ಲ ಸಹೃದಯರೂ ಅಲ್ಲ" (1936:ಸಂ.18, ಸಂ.1:4) ಎಂದು ಹೇಳುತ್ತಾರೆ.

ಭಾಗ ನಾಲ್ಕು, ಐದರಲ್ಲಿ 'ಕನ್ನಡ ನಾಡಿನ ಲಾವಣಿ ಅಗತ್ಯ' ಪ್ರಬಂಧದಲ್ಲಿ ಹೇಳಿರುವ ತೆಲುಗಿನ ಹಾಡುಗಳ ಚರ್ಚೆಯನ್ನೇ ಮುಂದುವರಿಸುತ್ತಾರೆ. ಭಾಗ ಆರರಲ್ಲಿ ತಾಯಿ ಮಗುವಿನ 'ಜೋಗುಳ ಹಾಡು', ಭಾಗ ಏಳರಲ್ಲಿ ಹೆಣ್ಣು ಮಗುವಿನ ಬಗ್ಗೆ ಜನಪದರು ಇಟ್ಟಿರುವ ತಾತ್ಸಾರ ಭಾವನೆಗಳು ವ್ಯಕ್ತವಾಗುತ್ತವೆ. ಮುಂದಿನ ಏಳು ಭಾಗಗಳಲ್ಲಿ ಗರತಿಯ ಹಾಡು ತ್ರಿಪದಿ ಸಂಗಹದಲ್ಲಿನ ಹಾಡುಗಳನ್ನು ಆಯ್ದುಕೊಂಡಿದ್ದಾರೆ. ಕೊನೆಯಲ್ಲಿ ಪಂಜೆಮಂಗೇಶರಾಯರು ಸಂಗ್ರಹಿಸಿರುವ 'ಶ್ರೀರಂಗಪಟ್ಟಣದ ಲಾವಣಿ' ಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾದ ಸೀರಾಲಾವಣಿ, ನಂಜನಗೂಡಿನ ದೈವದ ಹಾಡುಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ. ಈ ಹಾಡುಗಳು ಊರಿನ ಚರಿತ್ರೆ, ಸ್ಥಳಗಳ ಐತಿಹ್ಯ, ಮಹಾತ್ಮೆ, ಹಾಗೂ ಇತಿಹಾಸವನ್ನು ಅಧ್ಯಯನಿಸುವುದಕ್ಕೆ ಸಹಕಾರಿಯಾಗಿದೆ.

1939ರಲ್ಲಿ ಕನ್ನಡನುಡಿ ಪತ್ರಿಕೆಯ ಆಗಸ್ಟ್ ಸಂಚಿಕೆಯಲ್ಲಿ **ಪಿ.ಕುಲಕರ್ಣಿ**ಯವರು **'ಕರ್ನಾಟಕ ಜನಪದ ಸಾಹಿತ್ಯ'** ಪ್ರಬಂಧವನ್ನು ಬರೆದರು. ಕುಲಕರ್ಣಿಯವರು ಬಾಲ್ಯದ ನೆನಪುಗಳನ್ನು ಹೇಳಿಕೊಳ್ಳುತ್ತಾರೆ. ರಾಜರಾಣಿಯರ ಕತೆ, ರಾಕ್ಷಸ ದೇವತೆಗಳ ಕತೆ, ಗುಬ್ಬಕ್ಕ, ಕಾಗೆಕ್ಕಗಳ ಕತೆಗಳನ್ನು ಅಜ್ಜನೂ ಅಜ್ಜಿಯೂ ಮೊಮ್ಮಕ್ಕಳಿಗೆ ಹೇಳಿ ವಿನೋದಗೊಳಿಸುತ್ತಿದ್ದರು. "ಯಾವುದೋ ಒಂದು ಕಾಲದಲ್ಲಿ ಯಾರೋ ಒಬ್ಬರು ಇಂತಹ ಕತೆಯೊಂದನ್ನು ಹೇಳಿದರು. ಆಮೇಲೆ ಆ ಕತೆಯು ಜನರ ಬಾಯಲ್ಲಿಯೇ ಉಳಿದು ಬೆಳೆಯುತ್ತಾ ಬಂತು. ಅದನ್ನು ಯಾರು ಗ್ರಂಥದಲ್ಲಿ ಬರೆದಿಟ್ಟಿಲ್ಲ. ಬೇಸರ ಬಂದ ಸಮಯದಲ್ಲಿ ಕತೆ ಹೇಳಿ ಹೊತ್ತು ಕಳೆಯುವ ನಮಗೆಲ್ಲ ಅವುಗಳನ್ನು ಮೊದಲು ಯಾರು ಯಾರಿಗೆ ಹೇಳಿದರು ಎಂಬುದು ಗೊತ್ತಾಗುವುದಿಲ್ಲ. ಇದೇ ರೀತಿ ಲಾವಣಿಗಳು, ತತ್ವಪದಗಳು, ಜೋಗುಳದ ಹಾಡುಗಳು, ಮದುವೆಯ ಹಾಡುಗಳು, ದೇವರ ಹಾಡುಗಳು ಜನರಲ್ಲಿ ರೂಢಿಗತವಾಗಿವೆ. ಇವುಗಳನ್ನು ಯಾರು ರಚಿಸಿದರು? ಎಷ್ಟು ದಿನಗಳ ಹಿಂದೆ ರಚಿಸಿದರು? ಹಾಡುಗಳು ಮೊದಲು ರಚಿತವಾದ ಸ್ಥಿತಿಯಲ್ಲಿಯೇ ಉಳಿದಿವೆಯೇ ಹಾಗೂ ಕಾಲಕಾಲಕ್ಕೆ ಅವುಗಳಲ್ಲಿ ಹೆಚ್ಚು ಕಡಿಮೆಯಾಗುತ್ತವೆಯೇ" (1939:358) ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾರೆ.

ಕುಲಕರ್ಣಿಯವರು ಕನ್ನಡ ಜಾನಪದ ಅಧ್ಯಯನಕ್ಕೆ ವಿಚಾರ ವಿಮರ್ಶೆಗಳ ಅರ್ಥಪೂರ್ಣ ಚೌಕಟ್ಟನ್ನು ಒದಗಿಸಿಕೊಟ್ಟಿದೆ. "ಜಾನಪದ ಸಾಹಿತ್ಯದಲ್ಲಿ ಇದ್ದುದೆಲ್ಲವೂ ಎಲ್ಲಾ ಲಾವಣಿಗಳೂ ಎಲ್ಲಾ ಹಾಡುಗಳೂ ಎಲ್ಲಾ ಕತೆಗಳೂ ಅತ್ಯುತ್ತಮ ಕಾವ್ಯವರ್ಗಕ್ಕೆ ಸೇರಿದುವು ಎಂಬ ತಪ್ಪು ತಿಳುವಳಿಕೆಯನ್ನು ಯಾರೂ ಮಾಡಿಕೊಳ್ಳಬಾರದು. ಜನಪದ ಸಾಹಿತ್ಯದಲ್ಲಿ ಗ್ರಂಥಸ್ಥ ಸಾಹಿತ್ಯದಲ್ಲಿರುವಂತೆ ಅಥವಾ ಅದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಬೀಳಾದ, ಕೀಳಾದ ಭಾಗವು ಇದೆ. ಕೆಲವೊಂದು ಹಾಡುಗಳು ಅಂತು ಬಹಳ ಅಶ್ಲೀಲವಾಗಿರುತ್ತವೆ" (1939:367) ಎಂಬುದಾಗಿ ಜಾನಪದ ಅಧ್ಯಯನಕಾರರಿಗೆ ಹೇಳಿಕೊಂಡಿದ್ದಾರೆ.

1939ರಲ್ಲಿ **ಆರ್.ವಿ. ಜಾಗಿರ್‌ದಾರರ 'ಕರ್ನಾಟಕ ಸಂಸ್ಕೃತಿಯ ಒಂದು ಸ್ವರೂಪ'** ಲೇಖನ ಕನ್ನಡನುಡಿ ಪತ್ರಿಕೆಯ ಎಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾಯಿತು. ಜಾಗಿರ್‌ದಾರರು ಕರ್ನಾಟಕ ಸಂಸ್ಕೃತಿಯ ವಿಷಯಗಳ ತೊಡಕುಗಳ ಬಗ್ಗೆ ಬರೆಯುತ್ತಾ. ಸಂಸ್ಕೃತಿ ಹಾಗೂ ಪ್ರಗತಿ ಎರಡೂ ಶಬ್ದಗಳನ್ನು ಶಬ್ದಕೋಶದಲ್ಲಿ ಹಾಗೂ ನಿಘಂಟುಗಳಲ್ಲಿ ಬಳಸಿರುವುದು ಅಸಮಾಧಾನವನ್ನು ತಂದಿದೆಯೆಂದು, "ಕನ್ನಡ ಸಾಹಿತ್ಯವನ್ನು ಗಮನದಲ್ಲಿರಿಸಿಕೊಂಡು ಸಾಹಿತ್ಯದ ಮೂರು ವಿಭಾಗಗಳನ್ನು ಗುರುತಿಸುತ್ತಾರೆ. ಈ ಮೂಲಕ ಜೈನ, ವೀರಶೈವ ಹಾಗೂ ವೈಷ್ಣವ ಸಾಹಿತ್ಯ ಇತಿಹಾಸದ ದೃಷ್ಟಿಯಿಂದ

ಅನುಕೂಲಕರ ವಿಭಾಗ. ಸಂಸ್ಕೃತಿಯು ದೃಷ್ಟಿಯಿಂದ ಇದು ಅತೃಪ್ತಿಕರ" (1939:23–24)ವೆಂದು ಕರ್ನಾಟಕ ಸಂಸ್ಕೃತಿಯು ಪ್ರಾಚೀನತೆಯು ಬಗ್ಗೆ ಹೇಳಿಕೊಂಡಿದ್ದಾರೆ.

1940ರಲ್ಲಿ 25ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ **ಸಾವಿತ್ರಿಬಾಯಿ ನಾಗನಗೌಡರ** ಮಹಿಳಾಗೋಷ್ಟಿಯ ಅಧ್ಯಕ್ಷ ಭಾಷಣವು ಕನ್ನಡ ಜಾನಪದ ಅಧ್ಯಯನಕ್ಕೆ ಐತಿಹಾಸಿಕ ಮಹತ್ವವನ್ನು ತಂದುಕೊಟ್ಟಿದೆ. ಹಳ್ಳಿಯ ಹಾಡುಗಳಿಗೆ ಹೆಣ್ಣುಮಕ್ಕಳೇ ಕಾರಣವೆಂದು ಸಾರುತ್ತಾ, ಭಾಷಣವನ್ನು 9 ಭಾಗಗಳಾಗಿ ವಿಭಾಗಿಸಿ ಮಾತನಾಡಿದ್ದಾರೆ. 1. ಸ್ತ್ರೀ ದೃಷ್ಟಿಯಿಂದ ಸಾಹಿತ್ಯ ನಿರ್ಮಾಣದ ಅವಶ್ಯಕತೆ, 2. ಇತಿಹಾಸ ಪ್ರಸಿದ್ಧರಾದ ಕನ್ನಡಿತಿಯರು, 3. ಹಳ್ಳಿಯ ಹಾಡುಗಳಿಗೆ ಹೆಣ್ಣುಮಕ್ಕಳೇ ಕಾರಣ, 4. ಹೊಸಕನ್ನಡ ಸಾಹಿತ್ಯಕ್ಕೆ ಹೆಣ್ಣು ಮಕ್ಕಳ ಸೇವೆ, 5. ನಮ್ಮಲ್ಲಿ ಕವಿಯಿತ್ರಿಯರೂ ನಾಟಕಕಾರ್ತಿಯರೂ ಹೆಚ್ಚಬೇಕು, 6. ಹೆಣ್ಣು ಮಕ್ಕಳಲ್ಲಿ ಸಾಕ್ಷರತಾ ಪ್ರಚಾರವಾಗಬೇಕು: ಪರಭಾಷೆಗಳ ಮೋಹ ಹೋಗಬೇಕು, 7. ಹಳ್ಳಿಹಳ್ಳಿಯಲ್ಲಿಯೂ ಸಾಹಿತ್ಯಮಯ ವಾತಾವರಣ ಕಲ್ಪಿಸಬೇಕು, 8. ಸಾಹಿತ್ಯದಲ್ಲಿ ಪ್ರತಿಭೆಯುಳ್ಳ ಹೆಣ್ಣುಮಗಳಿಗೆ ಅನುಕೂಲತೆಗಳನ್ನು ಒದಗಿಸಬೇಕು, 9. ಕನ್ನಡ ಜನಾಂಗದ ಜನನಿಯರ ಮೇಲಣ ಹೊಣೆ ಇತ್ಯಾದಿ ವಿಚಾರಗಳನ್ನು ಭಾಷಣದಲ್ಲಿ ಹೆಣ್ಣು ಮಕ್ಕಳ ಸಮಸ್ಯೆಯನ್ನೇ ಗಮನದಲ್ಲಿರಿಸಿಕೊಂಡು ಮಾತನಾಡಿದ್ದಾರೆ.

1943ರಲ್ಲಿ ಪ್ರಬುದ್ಧ ಕರ್ನಾಟಕದಲ್ಲಿ **ಎಂ.ಆರ್.ಲಕ್ಷ್ಮಮ್ಮರ 'ಕೊಂತೆಮ್ಮನ ಪದ'**ವು ಜನಪದ ಸಾಹಿತ್ಯ ವಿಮರ್ಶೆಗೆ ಹೆಣ್ಣುಮಕ್ಕಳಿಂದ ಬಂದ ಮೊತ್ತಮೊದಲ ಲೇಖನ.

1944ರಲ್ಲಿ 28ನೆಯ ಕನ್ನಡ ಸಾಹಿತ್ಯ ಸಮ್ಮೇಳನವಾಯಿತು. ಸಮ್ಮೇಳನದ ಜನಪದ ಸಾಹಿತ್ಯಗೋಷ್ಠಿಯ ಮೊದಲ ಭಾಷಣವನ್ನು **ಚನ್ನಪ್ಪ ಉತ್ತಂಗಿ**ಯವರೂ, ಅಧ್ಯಕ್ಷ ಭಾಷಣವನ್ನು ಸಿಂಪಿಲಿಂಗಣ್ಣನವರೂ ಮಾಡಿದರು. ಇವರಿಬ್ಬರೂ ಕನ್ನಡ ಕಾವ್ಯಗಳಲ್ಲಿ ಜನಪದ ಸಾಹಿತ್ಯವನ್ನು ಉಲ್ಲೇಖಿಸಿ ಸಮೀಕ್ಷೆಯೊಂದನ್ನು ಮುಂದಿಟ್ಟರು. ಜೊತೆಗೆ ಸಂಸ್ಕೃತಿ ಹಾಗೂ ಪ್ರಕೃತಿಗಳ ಪ್ರಭಾವವನ್ನು ವಿವರಿಸಿದ್ದಾರೆ. ಚನ್ನಪ್ಪ ಉತ್ತಂಗಿಯವರು, "ಜನಪದ ಸಾಹಿತ್ಯವು ಸಂಸ್ಕೃತಿಯ ಫಲವಾಗಿದ್ದು ಕನ್ನಡ ಜನಪದ ಸಾಹಿತ್ಯದ ಬೇರುಗಳಾದರೂ ಬಹು ಆಳಕ್ಕಿಳಿದಿವೆ. ಇದರ ನೆಲೆಯನ್ನು ಕನ್ನಡಿಗರಿಗೆ ಕಣ್ಣಾಗಿಸಬೇಕೆಂಬುದೇ ಭಾಷಣದ ಮುಖ್ಯ ಉದ್ದೇಶವಾಗಿದೆ" (1944:ಸಂ.29, ಸಂ.3–4)ಯೆಂದು ಅಭಿಪ್ರಾಯಪಟ್ಟಿದ್ದಾರೆ. "ಜನರಿಗಾಗಿ ಜನಜೀವನವನ್ನು ಜನಸಾಮಾನ್ಯರು ತಿರುಳುಗನ್ನಡದಲ್ಲಿ ರಸವತ್ತಾಗಿ ಚಿತ್ರಿಸಿದ್ದೇ ಜನಪದ ಸಾಹಿತ್ಯ. ಸಾಹಿತ್ಯವು ಬಹುಪ್ರಾಚೀನವಾದುದು. ಇದು 9ನೆಯ ಶತಮಾನದಲ್ಲಿತ್ತೆಂದು ನೃಪತುಂಗನ ಕವಿರಾಜಮಾರ್ಗದಿಂದ ತಿಳಿದುಬರುತ್ತದೆ. ಇದಕ್ಕಿಂತ ಕೆಲವು ಶತಮಾನಗಳ ಹಿಂದೆಯೇ

ಇದು ಇದ್ದಿರಬೇಕೆಂದು ಶಾಸನಗಳಿಂದ ಊಹಿಸಬಹುದಾಗಿದೆ. 7ನೆಯ ಶತಮಾನದಲ್ಲಿ ಬಾದಾಮಿಯ ಒಂದು ಶಾಸನದಲ್ಲಿ ಜನಪದ ಸಾಹಿತ್ಯದ ಛಂದಸ್ಸಿನ ತ್ರಿಪದಿಯು ಮೊದಲ ಬಾರಿ ದೊರೆಯುತ್ತದೆ" (1944:ಸಂ.29, ಸಂ.3–4) ಯೆಂದು ಹೇಳುತ್ತಾರೆ. ಕನ್ನಡ ಸಂಸ್ಕೃತಿಯ ಸಂಬಂಧವನ್ನು ಹೇಳುವುದರ ಜೊತೆಗೆ ಜನಪದ ಸಾಹಿತ್ಯ ಹಾಗೂ ಶಿಷ್ಟ ಸಾಹಿತ್ಯವನ್ನು ಭಾಷಣದುದ್ದಕ್ಕೂ ಅವಲೋಕಿಸಲಾಗಿದೆ. ಜನಪದ ಸಾಹಿತ್ಯ ಕೆಲಸದ ಬಗ್ಗೆ ಮುಂದೇನು ಮಾಡಬಹುದೆಂಬ ಆತಂಕದ ಮಾತುಗಳನ್ನಾಡುತ್ತಾರೆ. "ಜನಪದ ಸಾಹಿತ್ಯವು ಹಿಂದಿನಂತೆ ಹೊಸ ಹೊಸದಾಗಿ ಹೊಸ ಮನ್ವಂತರದಲ್ಲಿ ನಿರ್ಮಾಣವಾಗುತ್ತಿಲ್ಲ. ಇದರ ಕಾರಣವೇನೂ ತಿಳಿಯದು. ಪಾಶ್ಚಾತ್ಯ ನಾಗರಿಕತೆಯ ಫಲವಾಗಿ ಹಳ್ಳಿಗಳಲ್ಲಿ ಸಹ ನಮ್ಮ ಒನಿಕೆ, ಬೀಸುಕಲ್ಲುಗಳು ಮೂಲೆಗೆ ಬಿದ್ದಿರುವದೊಂದು ಕಾರಣವಿರಬಹುದು. ಇದರಲ್ಲಿ ನಿಜಾಂಶವಿದ್ದರೂ ಈಗಿನ ಜನಪದಕ್ಕೆ ಹಳೆಯ ಸಾಹಿತ್ಯವು ಕಣ್ಮರೆಯಾಗಿ ಅದರ ಬಗೆಗೆ ಮರೆಯುಂಟಾಗಿರುವದೇ ಮುಖ್ಯ ಕಾರಣವೆಂದು ಹೇಳಬೇಕು. ಆದುದರಿಂದ ಕನ್ನಡಾಭಿಮಾನಗಳಾದ ಆಧುನಿಕ ವಿದ್ಯಾವಂತರು ಕಡೆಗೆ ವಿಶೇಷವಾಗಿ ಲಕ್ಷ್ಯಕೊಟ್ಟು, ಜನಪದ ಸಾಹಿತ್ಯವನ್ನೆಲ್ಲ ಸಂಶೋಧಿಸಿ ಸಂಸ್ಕರಿಸಿ, ಜನತೆಯ ಮುಂದಿಟ್ಟರೆ ಕೊರತೆಯು ನೀಗುವುದರಲ್ಲಿ ಸಂದೇಹವಿಲ್ಲ." (1944:ಸಂ.29, ಸಂ.3–4)

ಸಿಂಪಿ ಲಿಂಗಣ್ಣವರು ಅಧ್ಯಕ್ಷಭಾಷಣ ಮಾಡುತ್ತಾ ಜನಪದ ಸಾಹಿತ್ಯವು ಜನಾಂಗದ ಜೀವಾಳ ಎನ್ನುತ್ತಾರೆ. "ಹೆಣ್ಣು ಮಕ್ಕಳಹಾಡು, ಲಾವಣಿ, ಗಾದೆ, ಒಡಪು ಇವುಗಳೆಲ್ಲ ಜನಪದ ಸಾಹಿತ್ಯವೆನಿಸುತ್ತವೆ. ಜನಪದ ಸಾಹಿತ್ಯವು 'ಹಾಳರ್ಧಹೊಲೆಯರ ಬೀಳರ್ಧ ಹೆಂಗಳೆಯರ' ವಾಣಿಯಾಗಿದೆ. ಅಂದು ಬಹುಸಂಖ್ಯಾಕರ ಒಳನುಡಿಯಾಗಿದೆ; ಅಶಿಕ್ಷಿತ ಜನಾಂಗದ ಕೈಗೋಲಾಗಿದೆ; ಅದಕ್ಕೆ ಕರ್ಣೋಪಕರ್ಣಗಳಿಂದ ಬೆಳೆದುಳಿದು ಬಂದ ಅಮರ ಸಾಹಿತ್ಯವೆಂದೂ, ಪಂಡಿತ ಮನ್ನಣೆಯನ್ನು ಆಶಿಸದೆ ಲೋಕಮಾನ್ಯವಾಗಿ ಬದುಕಿದ ಜೀವ ಸಾಹಿತ್ಯವೆಂದೂ ಕರೆಯಬಹುದು." (1944:ಸಂ.29, ಸಂ.3–49)

1945ರಲ್ಲಿ **ಎಂ.ಎಸ್. ಅನಂತಪದ್ಮನಾಭರ 'ಕೊಡಗಿನ ಜನಪದ ಸಾಹಿತ್ಯ'** ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ (ಸಂ.30, ಸಂ.3–4)ಯಲ್ಲಿ ಪ್ರಕಟವಾಯಿತು. ಅವರ ಪ್ರಕಾರ, "ಕೊಡಗು ದೇಶದ ಮೂಲನಿವಾಸಿಗಳು ಕೊಡಗರೆಂಬುದು ನಿರ್ವಿವಾದದ ಸಂಗತಿ. ಸಾಧಾರಣವಾಗಿ ಒಂದು ಸಾವಿರ ವರ್ಷಗಳಿಂದೀಚೆಗೆ ಕೊಡಗು ದೇಶದ ಕೊಡಗರ ಹೆಸರು ಶಾಸನಗಳಿಂದಲೂ, ಚರಿತ್ರೆಯಿಂದಲೂ ತಿಳಿದು ಬಂದಿದೆ. ಕೊಡಗರ ಧರ್ಮ, ಸಂಸ್ಕೃತಿ, ರೀತಿ, ನೀತಿ ಇವುಗಳು ದಕ್ಷಿಣ ಹಿಂದೂಸ್ಥಾನದ ಇತರ ಹಿಂದೂಗಳಿಗಿಂತ ಸ್ವಲ್ಪ ಭಿನ್ನವಾಗಿದೆ. ಮೂಲನಿವಾಸಿಗಳಾದ ಕೊಡಗರನ್ನು ಕೊಡವರು, ಅಮ್ಮಕೊಡವರು, ಆದಿಕೊಡವರೆಂದೂ, ಮೂರು ಪಂಗಡಗಳ ನಡವಳಿಕೆಗಳೂ ಕೊಡಗು

ಭಾಷೆಯಲ್ಲೇ ಪದ್ಯರೂಪದಲ್ಲಿವೆ. ಅವರ ಪದ್ಧತಿಗಳೂ, ಧರ್ಮಗಳೂ, ಕಥೆಗಳೂ, ವಿವಿಧ ವಿಷಯಗಳೂ, ಚಾಟುಗಳೂ, ಎಲ್ಲವೂ ರಗಳೆ ಛಂದಸ್ಸಿನಲ್ಲೇ ರಚಿತವಾಗಿವೆ. ಸಾಮಾನ್ಯವಾಗಿ ಹಾಡುವವರು, ಒಂದೇ ರಾಗದಲ್ಲಿ ವಿವಿಧ ತಾಳಗಳಲ್ಲಿ, ನಾಲ್ಕು ಜನರು, ಒಬ್ಬಿಬ್ಬರು ಪಕ್ಷಗಳಾಗಿ ಹಾಡುತ್ತಾರೆ. ಪದಗಳಲ್ಲಿ ಹೇಳದ ವಿಷಯವಿಲ್ಲ." (1944:ಸಂ.30, ಸಂ.3–4)

ಕೊಡವರ ಕುಲದೇವತೆ ಕಾವೇರಿಮಾತೆ. ಕಾವೇರಿಯ ಬಗ್ಗೆ ಕೊಡಗು ಭಾಷೆಯಲ್ಲೇ ಹಾಡುತ್ತಾರೆ. ಕಾವೇರಿ ಮನೆಮಾತೆಯಾದುದರಿಂದ ವರ್ಷದ ಪ್ರಥಮ ಪೂಜೆಯನ್ನು ಕುಲದೇವತೆಗೆ ಅರ್ಪಿಸುತ್ತಾರೆ. ಕಾವೇರಿಯ ಹುಟ್ಟು, ಹರಿಯುವ ಸ್ಥಳ, ಕಾವೇರಿ ಪುರಾಣವನ್ನೊಳಗೊಂಡ ಹಾಡು ದೀರ್ಘವಾಗಿದ್ದು, ಅದರ ಸಂಕ್ಷಿಪ್ತ ರೂಪವನ್ನು ಮಾದರಿಯಾಗಿ ಕೊಟ್ಟಿದ್ದಾರೆ. ಮಕ್ಕಳನ್ನು ತೂಗುವಾಗ ಹಾಡುವ ಲಾಲಿ ಅಥವಾ ಜೋ ಜೋ ಹಾಡುಗಳು, ಮಗು ವಯಸ್ಸಿಗೆ ಬಂದಾಗ ಮದುವೆ ಮಾಡುವುದಕ್ಕಾಗಿ ಕನ್ಯಾನ್ವೇಷಣೆಗೆ ತೊಡಗುವುದು, ಮದುವೆ, ಮನೆಯ ಯಜಮಾನಿಕೆ ಮೊದಲಾದ ಜವಾಬ್ದಾರಿ ಕೆಲಸಗಳನ್ನು ನಿರ್ವಹಿಸುವುದು ಇತ್ಯಾದಿ ಸನ್ನಿವೇಶಗಳು ರಸವತ್ತಾಗಿ ಸಂಕ್ಷಿಪ್ತರೂಪದಲ್ಲಿ ಹಾಡುವ ಮಾದರಿಯಲ್ಲಿವೆ. ಹುತ್ತರಿಯು ಇವರ ಬಹುಮುಖ್ಯ ಹಬ್ಬ. ಈ ಸಂದರ್ಭದಲ್ಲಿ ಊರವರೆಲ್ಲರೂ ಸೇರಿಕೊಂಡು ಆಟ ಆಡುತ್ತಾರೆ. ಹಬ್ಬ–ಮದುವೆ ಹಾಗೂ ಎಲ್ಲಾ ಶುಭಕಾರ್ಯಗಳಂದು ಹಾಡುವ ಹಾಡುಗಳ ಸಂಕ್ಷಿಪ್ತರೂಪವನ್ನು ಪ್ರಬಂಧದಲ್ಲಿ ನೀಡುತ್ತಾರೆ. ನಡಕೇರಿಯಂಡ ಚಿನ್ನಪ್ಪನವರು ಸಂಗ್ರಹಿಸಿದ 'ಪಟ್ಟೋಲೆ ಪಳಮೆ'(1919)ಯಿಂದ ಮಾದರಿ ಹಾಡುಗಳನ್ನು ಆಯ್ದುಕೊಂಡಿದ್ದಾರೆ.

1894ರಲ್ಲಿ **ರೆ.ಫ.ಕಿಟ್ಟೆಲ್‌ರು 'ಕನ್ನಡ–ಇಂಗ್ಲಿಷ್ ಡಿಕ್ಷನರಿ'** ಸತತ 15 ವರ್ಷಗಳಲ್ಲಿ ವಿಷಯ ಸಂಗ್ರಹಣೆ, ಜೋಡಣೆ ಹಾಗೂ ವಿಶ್ಲೇಷಣೆಗಳನ್ನೊಳಗೊಂಡ ಅರ್ಥಕೋಶವನ್ನು ರಚಿಸಿದರು. ನಾಲ್ಕು ಸಂಪುಟಗಳ ಅರ್ಥಕೋಶದಲ್ಲಿ ಗ್ರಾಮೀಣ ಜನರ ಆಡುನುಡಿಗಳಲ್ಲಿ ಬಳಕೆಯಾಗುತ್ತಿದ್ದ 4260 ಗಾದೆಗಳಿವೆ. ಇಲ್ಲಿನ ಗಾದೆಗಳನ್ನು ಮಹಾರಾಷ್ಟ್ರದ ದಕ್ಷಿಣಭಾಗ, ಮೈಸೂರು ಹಾಗೂ ಕನ್ನಡ ಜಿಲ್ಲೆಗಳಲ್ಲಿ ಸಂಗ್ರಹಿಸಿರುವುದೆಂದು ಹೇಳಿಕೊಂಡಿದ್ದಾರೆ. 'Most o them are old and very instructive, some adopted rom Tulu, and some o late origin.'70 (1974:117)

ಕೊನೆ ಟಿಪ್ಪಣಿಗಳು:

1. ಈ ಬೀಸುವ ವೇಳೆಯನ್ನು ಬೆಟಗೇರಿ ಕೃಷ್ಣಶರ್ಮರವರು ತಮ್ಮ 'ಹಳ್ಳಿಗರ ಹಾಡುಗಳು' ಎಂಬ ನಿಬಂಧದಲ್ಲಿ ಹೀಗೆ ವಿವರಿಸಿದ್ದಾರೆ; "ಬೀಸುವ ವೇಳೆಯೆಂದರೆ ಸಾಮಾನ್ಯವಾಗಿ ರಾತ್ರಿಯ ಕೊನೆಯ ಜಾವದ ಸಮಯ. ಆಗ ಎಲ್ಲೆಲ್ಲಿಯೂ ಶಾಂತತೆಯ ಸಮ್ರಾಜ್ಯವು ನೆಲೆಗೊಂಡಿರುವುದು. ಸೃಷ್ಟಿಯು ತನ್ನ ನೈಸರ್ಗಿಕ ಸಂಗೀತಮಯ ವಾತಾವರಣದಿಂದ ಮೊದಲೇ ಕೂಡಿಕೊಂಡಿರುವುದು. ಅದರಲ್ಲಿಯೇ ಬೀಸುವ ಕಲ್ಲು ಎಡೆಬಿಡದೆ ಮಂತ್ರಷಡ್ಜದಲ್ಲಿ ಸ್ವರವನ್ನು ಹಿಡಿದು ನಡೆದಿರುವುದು. ನಾಗರ ಹೆಡೆಯಂತೆ ನಲಿನಲಿದು ಬೀಸುವ ನಾರಿಯರು ಆ ಸ್ವರದಲ್ಲಿ ಸ್ವರವನ್ನು ಬೆರೆಯಿಸಿ, ಕೈ ಬಳೆಗಳ ಗಲಕು ಗಲಕು ಎಂಬ ಸಪ್ಪಳವೇ ತಾಳಗಳನ್ನು ಹಾಕುತ್ತಿರಲು, ವೀಣೆ, ಕೊಳಲುಗಳನ್ನು ಮೂದಲಿಸುವ ಮಂಜುಳ ಕಂಠದಿಂದ ಚೆಲುವು ಒಳವುಗಳನ್ನು ಬಣ್ಣಿಸಿ ಹಾಡುತ್ತಿರುವರು. ಅಂತಹ ಸಂಗೀತ ಸಂಯೋಗವು ಅದರ ಮನವನ್ನು ಸೆಳೆದುಕೊಳ್ಳದಿರದು? ಅಳುತ್ತಿರುವ ಎಳೆಯ ಹಸುಳೆಗಳು ಆ ಸಂಗೀತವನ್ನು ಕೇಳಿ ಅಳುವುದನ್ನು ನಿಲ್ಲಿಸಿ ಸಮಾಧಾನಗೊಂಡು ನಿದ್ದೆ ಹೋಗುವುವು. ಅರೆ ನಿದ್ದೆಯಲ್ಲಿರುವವರು ಆ ಸಂಗೀತದಿಂದ ಸೂಸುತ್ತಿರುವ ಸಂತೋಷರಂಗದಲ್ಲಿ ಓಲಾಡಿ ಓಲಾಡಿ ಮೈಮರೆಯುತ್ತಲಿರುವರು. ಮನಸ್ಸಿನ ದುಗುಡವನ್ನು ಹೊಡೆದೋಡಿಸಿ ಅದನ್ನು ಪ್ರಸನ್ನತೆಯ ಕಡೆಗೆ ತಿರುಗಿದಿಸುವುದು, ಮೋಹಿನೀ ಮಂತ್ರವು, ಇಂತಹ ಸಂತೋಷವನ್ನು ನಿತ್ಯನಿತ್ಯವೂ ಅನುಭವಿಸಿತ್ತಿರುವವರೆಂತಹ ಪುಣ್ಯ ಶಾಲಿಗಳೋ ಜೀವಿತಕಾಲದಲ್ಲಿ ಒಮ್ಮೆಯಾದರೂ ನಾವದನ್ನು ಅನುಭವಿಸಿಯೇ ತೀರಬೇಕು"(1931:14) ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ನೋಡಿ:ಪರಿಷತ್ಪತ್ರಿಕೆ, ಎಪ್ರಿಲ್ 1930:53

2. 1935ನೆಯ ಇಸವಿ ಕನ್ನಡ ಜಾನಪದ ಗೀತಸಾಹಿತ್ಯ ಸಂಚಯ, ಅಧ್ಯಯನದ ದೃಷ್ಟಿಯಿಂದ ಮತ್ತೊಂದು ಮಹತ್ವದ ಘಟ್ಟ, –ಆಗ ಜನಪದ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಲು ಉತ್ಸಾಹಿಗಳು ಹಾತೊರೆಯುತ್ತಿದ್ದಂತೆಯೇ ವಿವಿಧ ಪತ್ರಿಕೆಗಳು ಈ ಸಾಹಿತ್ಯ ಪ್ರಕಟನೆಗೆ ಪೈಪೋಟಿ ನಡೆಸಿದುವು. ವಿಶೇಷವಾಗಿ ಧಾರವಾಡದ ಜಯಕರ್ನಾಟಕ, ಜಯಂತಿ, ಮೈಸೂರಿನ ಪ್ರಬುದ್ಧ ಕರ್ನಾಟಕ ಹಾಗೂ ಕನ್ನಡ ನುಡಿ, ಸಾಹಿತ್ಯ ಪರಿಷತ್, ಪತ್ರಿಕೆಯಂಥ ಪ್ರೌಢ ಪತ್ರಿಕೆಗಳು, ತಮ್ಮ ಸಾಹಿತ್ಯಿಕ ಧೋರಣೆಕುರಿತಂತೆ ಪ್ರಕಟಿಸುತ್ತಿದ್ದ ಜಾಹೀರಾತುಗಳು ಗಮನಾರ್ಹ. ಇಂಥ ಪ್ರಚಾರ, ಪ್ರಚೋದನೆಗಳಿಂದ ಅನೇಕಮಂದಿ ಗೀತ ಸಾಹಿತ್ಯ ಸಂಗ್ರಹಕ್ಕೆ ತೊಡಗಿದರು. ಎಂಬುದನ್ನು ಗಮನಿಸಬೇಕಾದುದು ಮುಖ್ಯವಾಗಿತ್ತದೆ.

3. 1940ರಿಂದ ಒಂದೆರಡು ವರ್ಷಕಾಲ ನನ್ನ ಕೃಷ್ಣಮೂರ್ತಿ ಹಳೆಯಬೀಡಿನಲ್ಲಿ ನೆಲಸಿ ಗ್ರಾಮಸೇವೆಯ ಕೆಲಸಗಳಲ್ಲಿ ತೊಡಗಿದ್ದನು. ಆಗ ಸರ್ಕಾರದವರಿನ್ನೂ ಗ್ರಾಮ ಸುಧಾರಕರನ್ನು ನೇಮಿಸುವ ಏರ್ಪಾಟು ಮಾಡಿರಲಿಲ್ಲ. ಆಗ ಹಾಸನದ ಜಿಲ್ಲಾಧಿಕಾರಿಗಳಾಗಿದ್ದ ಎನ್.ಎಸ್.ಹಿರಿಯಣ್ಣಯ್ಯ, ಎಂ.ಎ. ಅವರು ಅವನಿಗೆ ತುಂಬ ಬೆಂಬಲ ಕೊಟ್ಟರು. ನಮ್ಮ ಶ್ರೀಮನ್ಮಹಾರಾಜರಾದ ಶ್ರೀಮದ್ ಜಯ ಚಾಮರಾಜ ಒಡೆಯರ್ ಬಹದ್ದೂರ್ ಮಹಾಸ್ವಾಮಿಯವರು ಬೇಲೂರು ಕಡೆ ದಯಮಾಡಿಸಿದ್ದಾಗ ಅವರಿಗೆ ಹಳ್ಳಿಯ ಹಾಡುಗಳ ವಿಷಯವಾಗಿ ಇರುವ ಅಭಿಮಾನವನ್ನರಿತು ಶ್ರೀ ಹಿರಿಯಣ್ಣಯ್ಯನವರು ನಮ್ಮ ಪ್ರಯತ್ನವನ್ನು ಮಹಾಸ್ವಾಮಿಯವರಿಗೆ ಶ್ರುತಪಡಿಸಿದ್ದಲ್ಲದೆ ಈ ಪದಗಳ ಸಂಗ್ರಹದ ಹಸ್ತಪ್ರತಿಯೊಂದನ್ನು ಅವರಿಗೆ ಅರ್ಪಿಸಲು ಅವಕಾಶ ಮಾಡಿಕೊಟ್ಟರು. (1947:10 ಬಿನ್ನಹ)

4. 1943ರಲ್ಲಿ ಮತಿಘಟ್ಟ ಸಹೋದರರು ನಾಡಪದಗಳನ್ನು ಸಂಗ್ರಹಿಸಿದರು. ಕನ್ನಡ ಜನಪದ ಸಾಹಿತ್ಯ ಸಂಗ್ರಹಗಳಲ್ಲಿ ಇದೊಂದು ಶ್ರೇಷ್ಠ ಸಂಕಲನ. ವಿಶ್ರುತವೂ ವೈವಿಧ್ಯಪೂರ್ಣವೂ ಆದ ಈ ಸಂಕಲನವನ್ನು ವಿದ್ವಾಂಸರು ಕನ್ನಡ ಜನಪದ ಗೀತ ಸಂಕಲನಗಳ ಆಚಾರ್ಯಕೃತಿಯೆಂದು ಕರೆದಿದ್ದಾರೆ. ಬಯಲು

ಪ್ರದೇಶದ ಹಾಡುಗಳನ್ನು ಒಂದು ಅನುಕ್ರಮದಲ್ಲಿ ಹಾಯುವ ಮೇಲ್ಪಂಕ್ತಿಯನ್ನು ಇಲ್ಲಿ ಅನುಸರಿಸಲಾಗಿದೆ. ಎಲ್ಲಾ ಸಂದರ್ಭಗಳ ಮತ್ತು ಎಲ್ಲಾ ವಿಷಯಗಳ ಕುರಿತಂತೆ ಗೀತೆಗಳನ್ನು ಕಲೆಹಾಕಲಾಗಿದೆ. ಮುಖ್ಯವಾಗಿ ಉತ್ತರದೇವಿ ಹಾಗೂ ತಿಂಗಳು ಮಾವನ ಪದಗಳ ಸಮಗ್ರಕತೆಗಳು ಇಲ್ಲಿವೆ.

5. ನೋಡಿ:ಎಲ್.ಗುಂಡಪ್ಪ 1947:299–302

6. ಇಲ್ಲಿ ಚರಿತ್ರೆಗೆ ಸಂಬಂಧಿಸಿದ ಲಕ್ಕಣ್ಣ–ಈರಣ್ಣರ ಒಂದು ಹಳೆಯ ಕಥೆಯನ್ನು ಗಮನಿಸಬಹುದು. ನೋಡಿ:ಎಲ್.ಗುಂಡಪ್ಪ 1947:153–157

7. "ಜಾನ್‌ಲೇಡನ್ ಎಂಬಾತ ಸ್ಕಾಟ್ಲೆಂಡಿನ ಕವಿಯೊಬ್ಬನು ಶ್ರೀರಂಗಪಟ್ಟಣದ ಕಡೆಗಾಲವನ್ನು ಕುರಿತ ಎರಡು ಕವನಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿರುವನೆಂಬ ಸಂಗತಿಯನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದ ಶ್ರೀಮಾನ್ ಬಿ. ನಾಗೇಶ್‌ರಾವ್ ಅವರು ತಿಳಿಸಿದರು. ಆ ಕವನಗಳನ್ನು ಓದಿ ನೋಡಿದಾಗ ಒಂದು ಕನ್ನಡದಿಂದಲೂ ಇನ್ನೊಂದು ಹಿಂದುಸ್ಥಾನಿಯಿಂದಲೂ ಭಾಷಾಂತರಿಸಿದ್ದೆಂದು ತಿಳಿಯಿತು. ಅವೆರಡನ್ನೂ ಮತ್ತೆ ಕನ್ನಡಿಸಿ ಇಲ್ಲಿ ಕೊಟ್ಟಿದ್ದೇನೆ. ಈ ಜಾನ್‌ಲೇಡನ್ ಕವಿ ಶ್ರೀರಂಗಪಟ್ಟಣ ಇಂಗ್ಲಿಷರ ಕೈಗೆ ಬಿದ್ದ ತರುಣದಲ್ಲೇ(1803ರ ಸುಮಾರಿನಲ್ಲಿ) ಮೈಸೂರಿಗೆ ಬಂದು ಕಮಿಷನರುಗಳ ವೈದ್ಯನಾಗಿ ಕೆಲವು ಕಾಲ ಇದ್ದನು. ಇವನು ತನ್ನ ತಾಯ್ನಾಡಿನಲ್ಲಿ ಜನಪದ ಸಾಹಿತ್ಯವನ್ನು ಕೂಡಿಸಿ ಬೆಳಕಿಗೆ ತರಲು ವಿಶೇಷ ಪ್ರಯತ್ನ ಮಾಡುತ್ತಿದ್ದನು. ಸರ್ ವಾಲ್ಟರ್‌ಸ್ಕಾಟ್ ಕವಿಗೆ ಆ ಕೆಲಸದಲ್ಲಿ ತುಂಬ ನೆರವಾಗಿದ್ದನು. ಇಲ್ಲಿಯೂ ಇವನ ಮನದೊಲವು ಸ್ವಾಭಾವಿಕವಾಗಿ ನಾಡಹಾಡುಗಳ ಕಡೆಗೇ ತಿರುಗಿತ್ತು. ಅಂಥವನು, ಹೊಸದಾಗಿ ಬಂದ ಸೋಲಿನ ಸಂಕಟದಿಂದ ಕುದಿಯುತ್ತ ತಮ್ಮ ಮನದಲಳನ್ನು ಹೊರ ಹರಿಸಿದ ಜನತೆಯ ಕವನಗಳಾಯ್ದುಕೊಂಡದ್ದು ಆಶ್ಚರ್ಯವಲ್ಲ. ಆ ತರುಣ ಕವಿ 1811ರಲ್ಲಿ ತನ್ನ 36ನೆಯ ವಯಸ್ಸಿನಲ್ಲಿ ತೀರಿಹೋದನಂತೆ." ನೋಡಿ:ಎಲ್.ಗುಂಡಪ್ಪ 1947:149 ಆದರೆ ಕೆಲವರು ವಿದ್ವಾಂಸರ ಪ್ರಕಾರ ಜಾನ್‌ಲೇಡನ್ ಶ್ರೀರಂಗಪಟ್ಟಣಕ್ಕೆ ಬ್ರಿಟಿಷ್ ಸೈನ್ಯದ ಜೊತೆ ಅಧಿಕಾರಿಯಾಗಿ ಬಂದ ಎಂಬ ಅಭಿಪ್ರಾಯವಿದೆ.

8. ಇದೇ ಸಂದರ್ಭದಲ್ಲಿ ಕರ್ನಲ್ ಮೆಕೆಂಝಿ ಯು ಮೈಸೂರು ಪ್ರಾಂತದಲ್ಲಿ ಟಿಪ್ಪುವಿನ ವಿರುದ್ಧ ಮೌಖಿಕ ರೂಪದಲ್ಲಿದ್ದ ಪ್ರಚಾರಗಳನ್ನು ಕೈಫಿಯತ್ತುಗಳಾಗಿ ಸಂಗ್ರಹಿಸಿದ. ಜೊತೆಗೆ ಮೈಸೂರು ಪ್ರಾಂತದ ಭೂ–ಪರಿವೀಕ್ಷಣೆ, ದಕ್ಷಿಣ ಭಾರತದ ಭೂಪಟಗಳನ್ನು ಸಂಗ್ರಹಿಸಿ ಮೇಲಾಧಿಕಾರಿಗಳಿಗೆ ವರದಿ ಮಾಡಿದ. ಹೀಗೆ ದೇಶೀ ರಾಜರ ರಾಜ್ಯಾಡಳಿತ ಬಗೆಗೆ ಜನಭಿಪ್ರಾಯ ಹೇಗೆ ವಿರೋಧ ಮನೋಭಾವ ಹೊಂದಿತ್ತು ಮತ್ತು ಆ ಮೂಲಕ ದೇಶೀ ರಾಜರ ಆಡಳಿತವನ್ನು ಹೇಗೆ ಮೊಟಕುಗೊಳಿಸಬಹುದೆಂಬ ಉಪಾಯ ಕಂಪನಿ ಸರಕಾರದ್ದಾಗಿತ್ತು.

9. "ಟಿಪ್ಪುಸುಲ್ತಾನನ ವೀರಲಾವಣಿಗಳು ಕನ್ನಡ ಮತ್ತು ಉರ್ದು ಭಾಷೆಗಳಲ್ಲಿ ದೊರೆಯುತ್ತವೆ. ಅವುಗಳನ್ನು ಈಗಾಗಲೇ ಸಂಗ್ರಹಿಸಿ ಇಂಗ್ಲಿಷಿಗೂ ಭಾಷಾಂತರ ಮಾಡಿಕೊಳ್ಳಲಾಗಿದೆ. ನಮ್ಮ ನಾಡಿನ ಕೆಚ್ಚು ಈ ಮೇರೆಗೆ ಭಾರತದ ತುಂಬೆಲ್ಲ ಹರಡಿದೆ. ಹೊರದೇಶದಲ್ಲಿಯೂ ಬೆಳಗಿದೆ. ಕನ್ನಡಿಗರು ಅಭಿಮಾನಪಟ್ಟುಕೊಳ್ಳುವ ಸಂಗತಿ ಇದು." ನೋಡಿ: ಉದ್ಧೃತ:ಲಕ್ಷ್ಮಣ ತೆಲಗಾವಿ 1987:48.

10. ಕಳೆದ ಶತಮಾನದ ಆದ್ಯಸಂಗ್ರಾಹಕರಲ್ಲಿ ಜಾನ್ ಫೆಯ್ತ್‌ಫುಲ್ ಫ್ಲೀಟ್ ಸಹ ಒಬ್ಬ. ರೈಸ್, ಕಿಟ್ಟೆಲ್, ಗೋವರ್ ಮೊದಲಾದವರಂತೆ ಇವನೂ ಸಹ ಕನ್ನಡ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದವನು. ಐತಿಹಾಸಿಕ ಲಾವಣಿಗಳನ್ನು ಮೊತ್ತಮೊದಲು ಸಂಗ್ರಹಿಸಿದ ಕೀರ್ತಿ ಆತನದು. ನೂರು ವರ್ಷಗಳ ಹಿಂದೆ ಫ್ಲೀಟ್ ಕೆಲಕಾಲ ಇಂಡಿಯನ್ ಆಂಟಿಕ್ವೇರಿ ಪತ್ರಿಕೆಯ ಸಂಪಾದಕನಾಗಿದ್ದನು. ಆ ಅವಧಿಯಲ್ಲಿ,

ಹಿಂದೆ ಸಂಗ್ರಹಿಸಿಟ್ಟುಕೊಂಡಿದ್ದ ಒಂದೊಂದೇ ಲಾವಣಿಗಳನ್ನು ಆಗಾಗ ಪ್ರಕಟಿಸತೊಡಗಿದ. ಹೀಗೆ 1885ರಿಂದ 1890ರ ನಡುವೆ ಐದು ಲಾವಣಿಗಳನ್ನು ಪ್ರಕಟಿಸಿದ.

11. ಭಾರತದಲ್ಲಿ ತಮ್ಮ ಕರ್ತವ್ಯ ಮುಗಿದ ಮೇಲೆ ಸ್ವದೇಶಕ್ಕೆ ಮರಳಿಹೋದ ಫ್ಲೀಟ್ ತನ್ನಲ್ಲಿದ್ದ ಹಸ್ತಪ್ರತಿಗಳನ್ನು ಇಡಿಯಾಗಿ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂಗೆ ತನ್ನ ಸ್ವ–ಇಚ್ಚೆಯಿಂದ 1917 ಅಕ್ಟೋಬರ್ 13ರಂದು ನೀಡಿದ. ಅವು ಈಗಲೂ ಅಲ್ಲಿ ಇವೆ. ಈ ಹಸ್ತಪ್ರತಿ ಸಂಗ್ರಹದಲ್ಲಿ ಒಂದು ಪತ್ರ ಇದೆ. ಅದು ಶಾಲಾ ಮುಖ್ಯೋಪಾಧ್ಯಾಯರೊಬ್ಬರು ಬರೆದ ಪತ್ರ. ಆ ಪತ್ರದೊಂದಿಗಿದ್ದ ಆರು ಲಾವಣಿಗಳು ಯಾವುವೆಂಬುದಕ್ಕಿಂತ ಫ್ಲೀಟರು ಸಮಯಾಭಾವದಿಂದಾಗಿ ಇತರರಿಂದಲೂ ಲಾವಣಿಗಳನ್ನು ಸಂಗ್ರಹಿಸಿ ತರಿಸಿ, ಅನಂತರ ತನ್ನ ಬಿಡುವಿನ ವೇಳೆಯಲ್ಲಿ ಅಭ್ಯಾಸಮಾಡುತ್ತಿದ್ದ. ಇದೇ ಸಂಗತಿಯನ್ನು ಅಂದರೆ ಶಾಲಾಮಾಸ್ತರರಿಂದ ಹಾಡುಗಳನ್ನು ಸಂಗ್ರಹಿಸಿ ತರಿಸಿಕೊಳ್ಳುತ್ತಿದ್ದ ಸಂಗತಿಯನ್ನು ಶ್ರೀನಿವಾಸ ಹಾವನೂರ ಅವರು ಲೇಖನವೊಂದರಲ್ಲಿ ಪ್ರಸ್ತಾಪಿಸಿದ್ದಾರೆ. ಫ್ಲೀಟರ ಹಸ್ತಪ್ರತಿ ಸಂಗ್ರಹದಲ್ಲಿರುವ ಆ ಪತ್ರವನ್ನು ಇಲ್ಲಿ ಉಲ್ಲೇಖಿಸಬಹುದು–

"ಮೆಹರಬಾನ್ ಎ–ಇ–ಸಾ......–ಬಹದ್ದೂರ
ದೆಪುಣಭಾಗ ಇವರ ಹುಜೂರಿಗೆ–
ನಾರಾಯಣ ಅಯ್ಯಾಜಿ ಹೆಡಮಾಸ್ತರ ತಾಲ್ಕು
ಬಾದಾಮಿ ಈತನು ಬರಕೊಳ್ಳುವ ರೆಪೊರಟು–
ಮೆಹರ್ಬಾನರವರ ಹುಕುಂಮಿನ ಮೇರಿ ಆರು
ಲಾವಣಿ ಪದಗಳಂನು ಬರದು ಇದರ
ಲಗತು ಇಟ್ಟು ರವಾನೆ ಮಾಡಿಯಿದ್ದೇನೆ
ಸಂನಿಧಿಗೆ ಬಂದು ಮುಟ್ಟಿದ್ದಕ್ಕೆ ಹುಕುಂ
ದೊರಿಯುವ–ಮೆಹರ್ಬಾನಗಿ ಆದೀತೆಂದು
ಆಸಿಸುತ್ತೇನೆ, ಮೆಹರ್ಬಾನ ರವರ ಚಿತ್ತಕ್ಕೆ
ಅರಿಕೆಯಿರಬೇಕು ತಾ॥ 6ನೇ ಪೆಭ್ರುಆರಿ ಸನ್ 1874 ಇಸಮಿ"

12. ನೋಡಿ:ಜಾನ್ ಫೆಯ್ತ್‌ಫುಲ್ ಫ್ಲೀಟ್ 1885:293

13. ನೋಡಿ: ಜಾನ್ ಫೆಯ್ತ್‌ಫುಲ್ ಫ್ಲೀಟ್ 1885:ಸಂ.19:2

14. ನೋಡಿ: ಜಾನ್‌ಫೆಯ್ತ್‌ಫುಲ್ ಫ್ಲೀಟ್ 1886:ಸಂ.15:389

15. ನೋಡಿ: ಕ್ಯಾತನ ಹಳ್ಳಿ ರಾಮಣ್ಣ 1991:9–11–49

16. ನೋಡಿ: ಜಾನ್ ಫೆಯ್ತ್‌ಫುಲ್ ಫ್ಲೀಟ್ 1887:ಸಂ.16:356

17. ಕತ್ತಿ, ಕಟಾರಿ, ಕೈಚೂರಿ, ಚಾಕು, ಗುರ್ದಿ, ಸುರಾಯಿ, ಸಿತಕ್ರ, ಬಾಲಿಯ, ಬರ್ಚಿ, ಬಿಚ್ಚುಗತ್ತಿ, ಬಾಣ, ಬಿಲ್ಲು, ಪಚಾತ, ಕರುಲಿ, ತೇಗ, ಚಾಪ, ಗೊಡ್ಲಿ ಶಸ್ತ್ರ, ತೋಪು, ತುಬಾಕಿ, ಹೊಡೆಯುವ ಮದ್ದುಗುಂಡು ಏನನ್ನೂ ಬಿಡದಂತೆ ಸಂಗ್ರಹಿಸಿಡುವುದು ಆಜ್ಞೆಯ ತಿರುಳಾಗಿತ್ತು. ನೋಡಿ:ಕ್ಯಾತನಹಳ್ಳಿ ರಾಮಣ್ಣ 1991:12

18. ನೋಡಿ:ಜಾನ್ ಫೆಯ್ತ್‌ಫುಲ್ ಫ್ಲೀಟ್ 1889:ಸಂ.18:353

19. ಈ ಘಟನೆಯನ್ನು ಫ್ಲೀಟರು ವಿವರಿಸಿರುವಂತೆ ಗ್ರಹಿಸುವುದು ಸೂಕ್ತ. ಯಾಕೆಂದರೆ ಈ ಲಾವಣಿಯಲ್ಲಿರುವ ಘಟನೆಗಳು ಇತಿಹಾಸಕ್ಕೆ ಸಂಬಂಧಿಸಿರುವುದರಿಂದ ವಿವರಣೆಗಳಷ್ಟರಿಂದಲೇ ಲಾವಣಿಯ ಅರ್ಥ ಸ್ಪಷ್ಟವಾಗುವುದು ಕಷ್ಟ.

20. ನೋಡಿ:ಜಾನ್ ಫೆಯ್ತ್‌ಫುಲ್ ಫ್ಲೀಟ್ 1890:ಸಂ.18:353

21. ಫ್ಲೀಟರು ತಮ್ಮ ಸಂಗ್ರಹದಲ್ಲಿ ಟಿಪ್ಪಣಿಯೊಂದನ್ನು ಹೀಗೆ ಕೊಟ್ಟಿದ್ದಾರೆ. *Krishnagauda Kurtikoti's Dandka copied out by Himself at cimigeri, 12th May 1874.

22. ಭೂತಗಳ ಆರಾಧನೆಯ ಕುರಿತ ವಿವರಣೆಯನ್ನು ಎ.ಮೆನ್ನರ್ ನಿರ್ದಿಷ್ಟ ಗುಂಪುಗಳಾಗಿ ನಮೂದಿಸಿದ್ದಾನೆ. ನೋಡಿ. ಚಿನ್ನಪ್ಪಗೌಡ ಕೆ. 1990:43–44

23. ನೋಡಿ: ಐ.ಮಾ.ಮುತ್ತಣ್ಣ: 1992:339, 340, 377ನೆಯ ಪುಟಗಳು

24. ಹಾ.ಮಾ.ನಾಯಕ ಅವರು ಸಂಪಾದಿಸಿರುವ ಕನ್ನಡ ಜಾನಪದ ಗ್ರಂಥಸೂಚಿ (1974–19) ಕೃತಿಯಲ್ಲಿ 'ತುರುಲಾವಣಿ–ಜವಾಬು' ಹಾಡುಗಳ ಸಂಗ್ರಹದ ಉಲ್ಲೇಖ ಮಾಡಿದ್ದಾರೆ. ಅಧ್ಯಯನದ ಸಂದರ್ಭದಲ್ಲಿ ಈ ಸಂಗ್ರಹ ಲಭ್ಯವಾಗಿಲ್ಲ.

25. "ಮೈಸೂರು ಭಾಗದ ಪ್ರಸಿದ್ಧ ಲಾವಣಿಕಾರ ಪುಟ್ಟಣ್ಣನವರ ಸಾಕುಮಗನೇ ಯಿುಂ.ವೀರಮುದ್ದಯ್ಯ. ಈತನನ್ನು ಮೈಸೂರು ಈರಮುದ್ದಿ ಎಂದು ಕರೆಯುತ್ತಾರೆ. ಈತನು ಲಾವಣಿಯ ಕೊನೆಯಲ್ಲಿ 'ಶೇಷನ್‌ಗಿರಿ ಹರಿದಾಸರ ಪದವಿದೋ ಮೆರೆಯುತ್ತಿದೆ ಅಲ್ಲಾ' ಎಂದು ಬರೆಯುತ್ತಾನೆ. ಈರಮುದ್ದಿ ಮತ್ತು ಶೇಷನ್‌ಗಿರಿ ಹರಿದಾಸರು ಎಂಬ ಎರಡು ಹೆಸರುಗಳೂ ಲಾವಣಿಯ ಕರ್ತೃವಿನ ಬಗ್ಗೆ ಸಂದೇಹವನ್ನು ಮೂಡಿಸುತ್ತವೆ. ಈರಮುದ್ದಿ ಎಂಬವರೇ ಶೇಷನ್‌ಗಿರಿ ಹರಿದಾಸರಾಗಿದ್ದಾರೆ? ಎಂಬುದಕ್ಕೆ ಸಮರ್ಥನೆ ದೊರೆಯುವುದಿಲ್ಲವೆಂದು ಜೀ.ಶಂ.ಪರಮಶಿವಯ್ಯ"(1979:318) ಹೇಳಿದ್ದಾರೆ. ನೋಡಿ:ಲಕ್ಷ್ಮಣ ತೆಲಗಾವಿ 1987:40–41

26. ನೋಡಿ:ಲಕ್ಷ್ಮಣ ತೆಲಗಾವಿ 1897:40

27. ನೋಡಿ:ಸೂರ್ಯನಾಥ ಕಾಮತ್ ಯು.1992:612

28. ಹಲವಾರು ಶ್ರೀನಿವಾಸ ಜೋಯಿಸ ಎಂಬವರು ಚಿತ್ರದುರ್ಗದ ಪ್ರೌಢ ಪಾಠಶಾಲೆಯಲ್ಲಿ ಚಿತ್ರಕಲಾ ಅಧ್ಯಾಪಕರು ಕೆಲವು ಸಾಹಿತ್ಯ ಕೃತಿಗಳ ಕರ್ತೃಗಳು ಆಗಿದ್ದರು. ಅವರ ಪ್ರೇರಣೆಯಿಂದ ಸಿ.ರಂಗಯ್ಯನವರು ಗೋವಿನ ಕತೆಯ ಧಾಟಿಯಲ್ಲಿ ಸಾಂಗತ್ಯ ರಚನೆ ಮಾಡಿದರು. ಜೋಯಿಸರು ಬರೆದ 'ಭರಮಣ್ಣ' ಎಂಬ ಲೇಖನವು 1936ರ ನವಂಬರ್ 30ರ ಸತ್ಯವಾಣಿ ವಾರಪತ್ರಿಕೆಯ ಸಂಚಿಕೆಯಲ್ಲಿ ಪ್ರಕಟವಾಯಿತು. ಈ ಲೇಖನದ ಪ್ರಭಾವದಿಂದ 1938ರ ಮಾರ್ಚ್ ತಿಂಗಳಿನ ನಮ್ಮ ಪುಸ್ತಕ ಪತ್ರಿಕೆಯಲ್ಲಿ ಸಿ.ರಂಗಯ್ಯನವರು ಸಂಗ್ರಹಿರುವ 'ಭರಮಣ್ಣ ಸಾಂಗತ್ಯ' ಪ್ರಕಟವಾಯಿತು.

29. ನೋಡಿ:ಲಕ್ಷ್ಮಣ ತೆಲಗಾವಿ 1987:29–31

30. 'ಕನ್ನಡ ಗಾದೆಗಳು'(1847) ಸಂಗ್ರಹದ ಒಂದೇ ಒಂದು ಪ್ರತಿ ಲಭ್ಯವಿದ್ದು, ಅದು ಕಲ್ಲಚ್ಚು ಪ್ರತಿಯಾಗಿದೆ.

31. 'ಕನ್ನಡ ಗಾದೆಗಳು'(1852) ಕಲ್ಲಚ್ಚು ಪ್ರತಿಯು ಮಂಗಳೂರಿನ ಥಿಯಾಸಾಫಿಕಲ್ ಕಾಲೇಜು–ಬಲ್ಮಠ ಲೈಬ್ರರಿಯಲ್ಲಿ ಲಭ್ಯವಿದೆ.

32. ಈ ಎರಡೂ ಸಂಗ್ರಹಗಳನ್ನು ಹರ್ಮನ್ ಮೊಗ್ಲಿಂಗ್ (1811–1875) ಸಂಗ್ರಹಿಸಿರುವನೆಂದು ಹಲವಾರು ಕನ್ನಡ ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಶ್ರೀನಿವಾಸ ಹಾವನೂರ ಅವರು. "ಜನತೆಯೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡು, ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಸುತ್ತಾಡುತ್ತಿದ್ದಾಗ, ಜನತೆಯ ಬಾಯಲ್ಲಿಯ ಪಡೆನುಡಿಗಳು ಅವನನ್ನು ಆಕರ್ಷಿಸಿದವು. ಸರಿ, ಆತ ತನ್ನ ಬಿಡುವಿನ ವೇಳೆಯಲ್ಲಿ ಅವನ್ನೆಲ್ಲ ಕಲೆಹಾಕಿದ. ಕನ್ನಡ ಲೋಕೋಕ್ತಿಗಳ ಸಾಮಾಜಿಕ ಮಹತ್ವವನ್ನು ಅರಿತವರಲ್ಲಿ ಮೊದಲಿಗನಾಗಿ, ಮೂರು ಸಾವಿರ ಗಾದೆಗಳನ್ನು 1847 ರಷ್ಟು ಹಿಂದೆಯೇ ಪ್ರಕಟಿಸಿದ್ದನು. ಇಂದು ಗಾದೆಗಳ ವಿವಿಧ ಸಂಗ್ರಹಗಳು ನಾನಾ ರೀತಿಯಲ್ಲಿ ಹೊರಬರುತ್ತವೆ. ಆದರೆ ಮೊಗ್ಲಿಂಗನಂತೆ ಜನಪದದಿಂದ ನೇರವಾಗಿ, ಅವುಗಳನ್ನು ಸಂಗ್ರಹಿಸಿದವರು ಎಷ್ಟು ಜನ?" (1974:111) ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

33. 1841ರಿಂದ 1882ರ ವರೆಗಿನ 41 ವರ್ಷಗಳ ಅವಧಿಯಲ್ಲಿ ಮಂಗಳೂರಿನಲ್ಲಿ ಬಾಸೆಲ್ ಮಿಷನ್ ಪ್ರೆಸ್ ಮತ್ತು ಕೊಡಿಯಾಲಬೈಲ್ ಪ್ರೆಸ್ ಕಾರ್ಯ ಪ್ರವೃತ್ತವಾಗಿತ್ತು ಎಂಬ ಉಲ್ಲೇಖ ದೊರೆಯುತ್ತದೆ. ಈ ಸಂದರ್ಭದಲ್ಲಿ ವೈಗಲ್ ಮತ್ತು ಫ್ಲೆಬ್‌ಸ್ತ್ ದೊನೆದಾ ಆ ಪ್ರೆಸ್‌ಗಳ ಮುದ್ರಣ ಕಾರ್ಯಾಲಯಕ್ಕೆ ಪ್ರಮುಖರಾಗಿದ್ದರು. ಈ ಸಂದರ್ಭದಲ್ಲಿ 7–8 ಭಾಷೆಗಳಲ್ಲಿ ಮುದ್ರಣ ಕಾರ್ಯ ಆಗಿದೆಯೆಂದು ಶ್ರೀನಿವಾಸ ಹಾವನೂರ ಅವರು ಅಭಿಪ್ರಾಯ ಪಟ್ಟಿರುತ್ತಾರೆ. (1974:568)

34. ನೋಡಿ: ಶ್ರೀ ಕೃಷ್ಣಭಟ್ ಅರ್ತಿಕಜೆ 1983:ಪ್ರಸ್ತಾವನೆ

35. ನೋಡಿ: ಅದೇ 1983:16–18

36. ನೋಡಿ: ಐ.ಮಾ.ಮುತ್ತಣ್ಣ 1992:377

37. 1886ರಲ್ಲಿ ಜರ್ಮನ್ ಮಿಶನರಿ ಜೆ.ಎಫ್.ವೈಲ್‌ನು ಕೊಡವ ಗಾದೆಗಳನ್ನು ಸಂಗ್ರಹಿಸಿದನು. ಉಲ್ಲೇಖ: ಸೂರ್ಯನಾಥ ಕಾಮತ್ 1992:612 ಆದರೆ '1840ರ ಕಾಲಘಟ್ಟದಲ್ಲಿ ಹರ್ಮನ್ ಮೊಗ್ಲಿಂಗನೂ ಸಹ ಕೊಡಗಿನಲ್ಲಿ ಸಂಚರಿಸುವಾಗ ಹಲವು ವಿಷಯಗಳನ್ನು ಸಂಗ್ರಹಿಸಿ ಜರ್ಮನ್ ಮಿಶನ್ ಕೊಟ್ಟಿದ್ದಾನೆ.' ನೋಡಿ: ಉಲ್ಲೇಖ: ಐ.ಮಾ.ಮುತ್ತಣ್ಣ 1992:168

38. ನೋಡಿ: ಉದ್ಧೃತ:ಐ.ಮಾ.ಮುತ್ತಣ್ಣ 1992:64

39. ಜಿಗಳೆಯನ್ನು ಜಿಗುಟೆ (ಜಿಗುಳೆ)/ಜಿಗಣೆ ಎಂದು ಕರೆಯುತ್ತಾರೆ. ಇದು ರಕ್ತವನ್ನು ಹೀರುವ ಜಲವಾಸಿಯಾದ ಒಂದು ಹುಳ (ನೋಡಿ:ಸಂಕ್ಷಿಪ್ತ ಕನ್ನಡ ನಿಘಂಟು 1977:264) ಇಂಗ್ಲಿಷಿನಲ್ಲಿ ಜಿಗಳೆಗಳನ್ನು 'ಲೀಚಸ್' ಎಂದು ಕರೆಯಲಾಗಿದೆ. ಹಿಂದೂಸ್ಥಾನಿ: ಜೋಕ್ ದಖ/ಜೋಕ್; ತಮಿಳು: ಅಟ್ಟೆಯಿ; ತೆಲುಗು:ಜಲಗುಲು, ಅಟ್ಟಲು; ತುಳು:ಪಾವೊರಿ/ಉಂಬುರು; ಮಲಯಾಳ: ಅಟ್ಟ–ಜಿಗಳೆಗಳು ಹಿಂದುಸ್ಥಾನದಲ್ಲಿ ವಿಶೇಷವಾಗಿ ಮಳೆಗಾಲದಲ್ಲಿ ಕೊಳಚಿ ಕೆರೆಗಳ ನರೆಯಲ್ಲಿ ಸಿಗುವವು. (ರೋಗ ಚಿಕಿತ್ಸೆಯು 1930:18–ಅಡಿಟಿಪ್ಪಣಿ)

40. ನೋಡಿ:ರೋಗ ಚಿಕಿತ್ಸೆಯು 1930:79

41. ಸಂಗ್ರಾಹಕರು ಹೀಗೆ ಹೇಳಿಕೊಂಡಿದ್ದಾರೆ. 'ಈ ಸಂದರ್ಭದಲ್ಲಿ ನನಗೆ ಅಂಗಡಿ ಔಷಧಗಳು ಪುಸ್ತಕ ಲಭ್ಯವಾಗಲಿಲ್ಲ'

42. ಕರ್ನಲ್ ಮೆಕೆಂಝಿ ಯು 1754ರಲ್ಲಿ ಸ್ಕಾಟ್‌ಲ್ಯಾಂಡಿನ ಲೂಯಿ ದ್ವೀಪದಲ್ಲಿ ಜನಿಸಿದ. ಆತನ ತಂದೆ ಸ್ಟಾರ್ನ್‌ವೇಯ ಪ್ರಥಮ ಪೋಸ್ಟ್ ಮಾಸ್ಟರ್ ಆಗಿದ್ದ ಮಾರ್ಡೋಕ್ ಮೆಕೆಂಝಿ . ತಾಯಿ

ಬಾರ್ಬರಾ ಮೆಕೆಂಝಿ . 1783ರಲ್ಲಿ ಕರ್ನಲ್ ಮೆಕೆಂಝಿ ಯು ಭಾರತಕ್ಕೆ ಬಂದ. 1821ರ ಮೇ 8 ರಂದು ಕಲ್ಕತ್ತೆಯ ಸ್ವಗೃಹದಲ್ಲಿ ನಿಧನವಾದ.

43. ನೋಡಿ: ಉದ್ಧೃತ, ಪುರುಷೋತ್ತಮ ಬಿಳಿಮಲೆ 1985:1–2

44. ನೋಡಿ: ಪುರುಷೋತ್ತಮ ಬಿಳಿಮಲೆ 1985:3; ಕಲಬುರ್ಗಿ ಎಂ.ಎಂ. 1994:10

45. ನೋಡಿ:ಪುರುಷೋತ್ತಮ ಬಿಳಿಮಲೆ 1985:14–15; ಕೆ.ಕುಶಾಲಪ್ಪಗೌಡ, ಕೆ.ಚಿನ್ನಪ್ಪಗೌಡ 1983:1–2

46. ನೋಡಿ: ಪುರುಷೋತ್ತಮ ಬಿಳಿಮಲೆ 1985:26–39. ಇಲ್ಲಿ ಮೆಕೆಂಝಿ ಸಂಗ್ರಹಿಸಿರುವ 161 ಕೈಫಿಯತ್ತುಗಳ ವಸ್ತು ವಿವರಗಳನ್ನು ಕೊಡಲಾಗಿದೆ.

47. 'ಪಟ್ಟೋಲೆ ಪಳಮೆ' (1924)ಯ ಬಗೆಗೆ ಟಿ.ಪಿ.ವಿಜಯ ಅವರು ಹೀಗೆ ಹೇಳುತ್ತಾರೆ. 'ಪಟ್ಟು+ಓಲೆ=ಪಟ್ಟೋಲೆ. ಪಟ್ಟು ಎಂದು ರೇಷ್ಮೆ. ಪಟ್ಟೋಲೆ ಎಂದರೆ ರೇಷ್ಮೆಯೊಳಗಿನ ಓಲೆ ಎಂದರ್ಥ. ಬಾಯಿಂದ ಬಾಯಿಗೆ ಹರಿದು ಬರುವ ಮಾತುಗಳನ್ನು ಕೊಡವ ಭಾಷೆಯಲ್ಲಿ 'ಪಳಮೆ' ಎನ್ನುತ್ತಾರೆ. ಅಂಥ ಪಳಮೆಯ ಓಲೆಯನ್ನು ರೇಷ್ಮೆ ಬಟ್ಟೆಯಿಂದ ಹೊದೆಯಲಾಗಿದೆ ಎನ್ನುವ ಸಾಂಕೇತಿಕತೆ ಇಲ್ಲಿದೆ"(1995:79) ಹೆಚ್ಚಿನ ವಿವರಗಳಿಗೆ ನೋಡಿ: ತಂಬಂಡ ಪೂಣಚ್ಚ ವಿಜಯ 1995:78–98.

48. ತಿರ್‌ಚಂಬರಪ್ಪ, ಬೆಂದ್ರು ಕೋಲಪ್ಪ, ಇಗ್ಗ್‌ತಪ್ಪ, ಪಾಲೂರಪ್ಪ, ತಿರುನೆಲ್ಲಿ ಪೆಮ್ಮೆಯ ಮತ್ತು ಪನ್ನೆಂಗಾಲ ತಮ್ಮೆ ಮೊದಲಾದ ದೇವತೆಗಳಿಗೆ ಈ ಹಾಡನ್ನು ಹಾಡುವರು. ಮತ್ತು ಈ ಹಾಡಿನಲ್ಲಿ ಐಯಪ್ಪ, ನಾಗಣ್ಣ (ನಾತ) ಮತ್ತು ಕಲ್ಲಕೆರೆ ದೇವಿಯ ಹಾಡೂ ಸಹ ಇವೆ. (1985:271)

48. ಐವಮಕ್ಕ ದೇಬುವರೆಂದರೆ ವತ್ತ್‌ಲಪ್ಪ, ಪುತ್ತ್‌ಲಮ್ಮೆ, ಒಗರೆಲೆಪ್ಪ, ರುದ್ರಗುಪ್ಪೆಲಮ್ಮೆಯ ಮೊದಲಾದ ದೇವತೆಗಳು ಮತ್ತು ರುದ್ರಗುಪ್ಪೆಯಲ್ಲಿಯ ಎರಡು ಹೆಣ್ಣು ದೇವತೆಗಳು ಒಂದೇ ಸ್ಥಳದಲ್ಲಿ ನೆಲೆಗೊಂಡಿರುವ ಉಲ್ಲೇಖವು ಈ ಹಾಡಿನಲ್ಲಿದೆ (1975:313).

49. ಮದೇರಪ್ಪ ಅಪ್ಪಂಗಿರಿಯಪ್ಪ ಮತ್ತು ಪೊರಮಲೆ ಭಗವತಿಯೇ ಈ ಮೂವರು ಮಕ್ಕದೇಬುವರು, ಭಗವತಿಯು ಎಂಟು ಗ್ರಾಮಗಳಲ್ಲಿಯೂ ನೆಲೆಗೊಂಡಿರುವಳು (1975:325)

50. ಕಾಕೋಟ್ ಅಚ್ಚಯ್ಯ ಮತ್ತು ಅಕ್ಕವ್ವ ಎಂಬ ಇಬ್ಬರು ದೇವತೆಗಳು. ಈ ಮಧ್ಯೆ ಕಾರಿಕೊಟ್ಟನೆಂಬ ಚಾಂಡಳನು ಕಾಕೋಟ್ ಅಚ್ಚಯ್ಯನ ಅಪ್ಪಣೆಯಂತೆ ದೇವಸ್ವರೂಪವನ್ನು ಹೊಂದಿ ಇವರ ಹತ್ತಿರವೇ ನಿಂತಿರುತ್ತಾನೆ. (1975:332)

51. ಕೊಡಗಿನ ಅನೇಕ ಕಡೆಗಳಲ್ಲಿ ಶಾಸ್ತಾವು ಪೂಜಿಸಲ್ಪಡುತ್ತಾನೆ. ಅವುಗಳಲ್ಲಿ ಕಡಿಯತ್ತು ನಾಡಿನಲ್ಲಿರುವ ಮಲೆಸಾಸ್ತಾವು, ಎಡೆನಾಲ್ಕು ನಾಡಿನಲ್ಲಿರುವ ಪೆರುವಾಳು ಶಾಸ್ತಾವೇ ಪಾಡಿನಾಲ್ಕು ನಾಡಿನಲ್ಲಿರುವ ಮಕ್ಕಿಶಾಸ್ತಾವೇ ಪ್ರಾಮುಖ್ಯತೆಯನ್ನು ಹೊಂದಿದವುಗಳು. ಶಾಸ್ತಾವುವನ್ನು ಕೊಡಗು ಭಾಷೆಯಲ್ಲಿ ಸಾರ್‍ತಾವು ಎನ್ನುವರು (1975:342).

52. ಮೂಡಾಯಿ ಹೊಳೆಯಲ್ಲಿ ಸಿಕ್ಕಿದ ಬಿಂಬವು 1909ನೇ ಎಪ್ರಿಲ್ 9ರಲ್ಲಿ ಕದ್ದು ಹೋಯಿತು. ಈ ದೇವಸ್ಥಾನವನ್ನು ಟಿಪ್ಪುಸುಲ್ತಾನನು ಲೂಟಿ ಮಾಡಿದ ತರುವಾಯವು ಸಹ ಈ ಬಿಂಬವು ಕಾಣದೆ ಇದ್ದು ಕೆಲವು ವರುಷಗಳ ಮೇಲೆ ಸಿಕ್ಕಿತಾಗಿ ಹೇಳುವರು. ಅದೇ ರೀತಿ ಈ ದೇವರ ನಗನಾಣ್ಯವೆಲ್ಲವೂ ಕದ್ದು ಹೋದರೂ ಈ ಬಿಂಬವು ಆ ಊರೊಳಗೆ ಇದೆ ಎಂದು ಗ್ರಾಮಸ್ಥರು ಇನ್ನೂ ನಂಬಿಕೊಂಡಿರುವರು. ಈ ದೇವರ ಹಬ್ಬವು ಎರಡು ವರುಷಕೊಂದಾವರ್ತಿ ನಡೆಯುತ್ತದೆ. ಆಗ

ದೇವಸ್ಥಾನದ ಹಟ್ಟಿಯಲ್ಲಿ ಒಂದು ಸಣ್ಣ ಕಲ್ಲುಗುಡ್ಡೆ ಹಾಕುವರು. ಈ ಕಲ್ಲುಗುಡ್ಡೆಯನ್ನು ಎಣಿಸಿದರೆ ಈ ದೇವರು ಬಂದು ಎಷ್ಟು ವರುಷವಾಯಿತೆಂದು ಗೊತ್ತಾಗುವುದು. ಈ ದೇವರಿಗೆ ಕನ್ನಡದಲ್ಲಿ ಕ್ಷೇತ್ರಪಾಲ ದೇವರೆಂದು ಹೇಳುವರು. (1975:364–365)

53. ಈ ಹಾಡು ಕಟ್ಟುಕಥೆಯಂತೆ ಕಂಡುಬರುತ್ತದೆ. ಇದರಲ್ಲಿ ಕಟ್ಟುಕಥೆಯಂತೆ ಕಂಡುಬರುತ್ತದೆ. ಇದರಲ್ಲಿ ನಾರಾಯಣ ದೇವರು ನೀಲಕನ್ನಿ ಮಾದೇವಿಯನ್ನು ಕನ್ನಿಯಡ ಕಾಮ್ಮೆಯನ್ನು ಮಾದೇವಿಯನ್ನೂ ಮದುವೆಯಾದದ್ದನ್ನು ಸೇರಿಸಿ ಹಾಡುತ್ತಾನೆ. (1975:361)

54. ಇವನು ಕಲಿಯಾಟಂಡ ಅಜ್ಜಪ್ಪನೆಂದು ಕೊಡಗು ದೇಶದಲ್ಲಿ ಪ್ರಸಿದ್ಧಿಗೊಂಡು ದೇವತಾ ಸ್ವರೂಪವನ್ನು ಹೊಂದಿ ಪೂಜಿಸಲ್ಪಟ್ಟಿದ್ದಾನೆ.

55. ನಡಕೇರಿಯಂಡ ಮನೆಯವರು ವಂಶವೃಕ್ಷದಲ್ಲಿ ಆದಿಪುರುಷನಾಗಿರುವ ಐಯ್ಯಣ್ಣನಿಗಿಂತ ಈ ಹಾಡಿನಲ್ಲಿರುವ ದೇವೈಯ್ಯ ಕಾರುವಣ್ಣನೆಂಬುವರು ಎಷ್ಟು ಪೂರ್ವಿಕರೆಂದು ಬರೆದಿಟ್ಟ ದಾಖಲೆ ಇಲ್ಲ. ಈ ದೇವೈಯ್ಯನನ್ನು ಹೂಣಿಟ್ಟು ಕಟ್ಟಿದ ಕೈ ಮಡವೇ ಅವರ ಹಳೆ ಕೈ ಮಡವೆನ್ನಲ್ಪಡುವುದು. (1975:429–10)

56. ಕೈಯ್ಯಂದಿರ ಅಪ್ಪೈಯ್ಯನು ಸತ್ತಮೇಲೆ ಇವನ ಮನೆತನದಲ್ಲಿ ಹಿರಿಯವನನ್ನು ಪೆರಿಯಮೋಲಿ ಎಂದು ಕರಿಯುತ್ತಾ ಇದ್ದರು. ಈ ಮನೆತನವು ಕ್ಷೀಣವಾದುದರಿಂದ ಈ ಪೆರಿಯತನವನ್ನು ಪೊದವಾಡದ ಈ ಕೇರಿಯಲ್ಲಿ (ಪೇರಿಯಂಗಟ್ಟಿನಲ್ಲಿ) ಯಾರು ಹಿರಿಯರೋ ಅವನಿಗೆ ಕೊಡುತ್ತಾ ಇದ್ದು ಈಚೆಗೆ ಕೆಲವು ವರುಷಗಳಿಂದ ಇದು ಬಿದ್ದೇರಿಯಂಡ ಮನೆತನದಲ್ಲಿಯೇ ನಿಂತಿತ್ತು. ಅದನ್ನು ಈಗ ನಡೆಸುವುದಿಲ್ಲ. ಒಬ್ಬ ಪೆರಿಯ ಮೋಲಿ ಸತ್ತಮೇಲೆ ಇನ್ನೊಬ್ಬನನ್ನು ಪೆರಿಯಮೋಲಿ ಮಾಡಬೇಕಾದರೆ ಕೈಯ್ಯಂದಿರ ಮನೆ ದಳದಲ್ಲಿರುವ ಮುಂದಿನ ಜಾಗದಲ್ಲಿ ಮಾಡುವರು. ಇದನ್ನು ಮದುವೆಯಂತೆ ಅಟ್ಟಹಾಸದಲ್ಲಿ ನಡೆಸುವರು. ಪೆರಿಯ ಮೋಲಿ ಎಂದು ಹೆಸರು ಹಾಕಿದ ಮೇಲೆ ಅವನನ್ನು ಯಾರೊಬ್ಬರೂ ಹೆಸರೆತ್ತಿ ಕರಿಯಕೂಡದು. ಇವನನ್ನು ಅರಪಟ್ಟು ದೇವಸ್ಥಾನದ ಹಬ್ಬದ ದಿವಸ ಬೋಯಿಗಳು ಹೊತ್ತುಕೊಂಡು ದೇವಸ್ಥಾನಕ್ಕೆ ಹೋಗುವರು.

57. ಕೋವಿರ ಅಪ್ಪೈಯಂಡ ಎಂಬ ಹೆಸರಿನ ಚಾಂಡಾಳನನ್ನು ಕಡಿದು ಹಾಕಿದ ಸ್ಥಳವು 'ಆರಡಿಗುಡ್ಡೆ' ಎಂದು ಕರೆಯಲ್ಪಡುತ್ತದೆ. ಪ್ರಯಾಣಸ್ಥರು ಈ ಗುಂಪೆಗೆ ಸೊಪ್ಪು ಹಾಕಿದರೆ ಆಲಸ್ಯವು ಕಡಿಮೆಯಾಗುವುದೆಂದು ಹೇಳುವರು. ಈ ಗುಡ್ಡೆಗೆ ಹಾಕಿದ ಸೊಪ್ಪನ್ನು ವರುಷಕ್ಕೊಂದು ದಿನ ಮಡೆಯಂಡ ಹೊಲೆಯರು ಸುಡುವರು. ಈ ಅಪ್ಪೈಯ್ಯನು ಅಂಬು ತಗಲಿದಾಗ ಹಾರಿದ ಗುರುತೆಂದು 'ಆರಡಿಗುಡ್ಡೆ'ಯ ಹತ್ತಿರ ಒಂದು ಕಲ್ಲನ್ನು ತೋರಿಸುತ್ತಿದ್ದರು. ಆ ಕಲ್ಲಿನಲ್ಲಿ ಕಾಲುಬೆರಳುಗಳ ಗುರುತಿನ ಹಾಗೆ ಇದ್ದವು. ಈಗ ಅದನ್ನು ರಸ್ತೆ ಕೆಲಸ ಮಾಡುವವರು ತೆಗೆದುಬಿಟ್ಟಿರುತ್ತಾರೆ.

58. ಈ ಅಪ್ಪೈಯ್ಯನು ಹಾರಿದ ಗುರುತೆಂದು ಕೆಲವು ಕಲ್ಲುಗಳನ್ನು ಚೆಂಬೆ ಬೆಳಿಯೂರು ಗ್ರಾಮದಲ್ಲಿ ತೋರಿಸುವರು. ಇವುಗಳು ಅಮಾನುಷಕೃತ್ಯವಾಗಿ ಕಾಣುತ್ತೆ.

59. 1986ರ ಫೆಬ್ರವರಿ 22ರಿಂದ 26ರವರೆಗೆ ಉಡುಪಿಯಲ್ಲಿ ನಡೆದ ಕರಾವಳಿ ಕರ್ನಾಟಕದ ಆರಾಧನ ರಂಗಭೂಮಿಯ ಬಗೆಗಿನ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಹೈಡ್ರನ್ ಬ್ರೂಕ್ನರ್ ಮಂಡಿಸಿರುವ 'ಬಾಸೆಲ್ ಮಿಶನ್ ಮತ್ತು ಭೂತಾರಾಧನ ಪದ್ಧತಿ'(1986) ಲೇಖನದಿಂದ ಆಯ್ದುಕೊಳ್ಳಲಾಗಿದೆ. ನೋಡಿ: ವಿಷ್ಣುಭಟ್ ಪಾದೆಕಲ್ಲು 1986:10.

60. 'ದಿ ಡೆವಿಲ್ ವರ್‌ಷಿಪ್ ಆಫ್ ದಿ ತುಳುವಾಸ್' ಕೃತಿಯನ್ನು ಆತನ ಸ್ನೇಹಿತನಾದ ಆರ್.ಸಿ.ಟೆಂಪಲ್ ಎಂಬಾತನು 1894–1897ರ ಅವಧಿಯಲ್ಲಿ ಇಂಡಿಯನ್ ಆ್ಯಂಟಿಕ್ವೆರಿ ಪತ್ರಿಕೆಯ 23,24,25 ಮತ್ತು 26ನೆಯ ಸಂಚಿಕೆಗಳಲ್ಲಿ ಬಿಡಿಬಿಡಿಯಾಗಿ ಪ್ರಕಟಿಸಿದನು. ಎ.ಸಿ.ಬರ್ನೆಲ್‌ನು ಈ ಪ್ರಬಂಧಗಳನ್ನು 1882ಕ್ಕಿಂತ ಮೊದಲೇ ರಚಿಸಬೇಕೆಂದು ಊಹಿಸಬಹುದು. ಯಾಕೆಂದರೆ ಬರ್ನೆಲ್ 1882ರಲ್ಲಿ ಮರಣ ಹೊಂದಿರುತ್ತಾನೆ. ಆತ ಬರೆದ ಪ್ರಬಂಧಗಳ ಹಸ್ತಪ್ರತಿಯನ್ನು ಆರ್.ಸಿ.ಟೆಂಪಲ್‌ನು ಪುಸ್ತಕ ರೂಪದಲ್ಲಿ ಪ್ರಕಟಿಸಿದನು.

61. ಎಂ. ಸಿ. ಬರ್ನೆಲ್‌ನು ಸಂಗ್ರಹಿಸಿರುವ ಭೂತಾರಾಧನೆಯ ವಿವರಗಳಿಗೆ ನೋಡಿ:ಉದ್ಧೃತ:ಕೆ.ಚಿನ್ನಪ್ಪಗೌಡ 1990:59

62. ನೋಡಿ: ಪರಮಶಿವಯ್ಯ ಜೀ.ಶಂ.1979:43

63. ಅಧ್ಯಾಯ ಮೂರರಲ್ಲಿ ಅಧ್ಯಯನದ ಆಕರಗಳು ಮತ್ತು ಅವುಗಳ ವರ್ಗೀಕರಣವನ್ನು ಚರ್ಚಿಸಲಾಗಿದೆ.

64. 1874, ಇಂಡಿಯನ್ ಆಂಟಿಕ್ವೆರಿ ಸಂ.3, ಜನವರಿ ಸಂಚಿಕೆ:6–7

65. ಪ್ರಸ್ತುತ ಲೇಖನದಲ್ಲಿ ಮೆಕೆಂಝಿ ಯು 17–6–1873ರಂದು ಗ್ರಾಮದೇವತೆಯ ಹಬ್ಬವನ್ನು ವೀಕ್ಷಿಸಿದ್ದನೆಂಬುದು ತಿಳಿದುಬರುತ್ತದೆ. ಬಹುಶಃ ಮೆಕೆಂಝಿ ಯು 17–6–1773ರಂದು ಗ್ರಾಮದೇವತೆಯ ಪ್ರದರ್ಶನವನ್ನು ವೀಕ್ಷಿಸಿರಬೇಕೆಂದು ಊಹಿಸಬಹುದು. 1874ರಲ್ಲಿ ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯಲ್ಲಿ ಪ್ರಕಟವಾಗಿರುವುದರಿಂದ ಸಂಪಾದಕರು 1873 ಎಂದು ತಿದ್ದಿಕೊಂಡಿರಬೇಕು.

66. ಈ ಲೇಖನದಲ್ಲಿ ಮೆಕೆಂಝಿ ಪ್ರದರ್ಶನದ ವಿವರಗಳನ್ನು ಮಾತ್ರಕೊಟ್ಟಿರುತ್ತಾನೆ. ಆತ ಅಲ್ಲಿ ಕೇಳಿದ ಜನಪದ ಗೀತೆಗಳನ್ನೂ ನುಡಿಗಟ್ಟುಗಳನ್ನೂ ಲೇಖನದ ಜೊತೆಗೆ ಕೊಡುತ್ತಿದ್ದರೆ–ಇನ್ನೂ ಅರ್ಥಪೂರ್ಣವಾಗುತ್ತಿತ್ತು.

67. ನೋಡಿ: ಕೆ.ಚಿನ್ನಪ್ಪಗೌಡ: 1990:1–2

68. ನೋಡಿ: ಸೋಮಶೇಖರ ಇಮ್ರಾಪುರ 1979:29–30

69. 1948ರಲ್ಲಿ ಕೆರೆಗೆಹಾರ ಹಾಡುಗಳ ಸಂಗ್ರಹದ ಕುರಿತಂತೆ ತೀ.ನಂ.ಶ್ರೀಯವರು ಮತ್ತು ಗಿರಡ್ಡಿಯವರು ಒಂದು ವಿಮರ್ಶಾಲೇಖನವನ್ನು ಬರೆದರು. ನೋಡಿ: ಉದ್ಧೃತ: ತೀ.ನಂ.ಶಂಕರನಾರಾಯಣ 1978:92–97

70. ಕಿಟ್ಟೆಲ್ ಗಾದೆಗಳನ್ನು ಅರ್ಥಕೋಶದಲ್ಲಿ ಬಳಸಿಕೊಂಡ ಔಚಿತ್ಯದ ಕುರಿತಂತೆ ಕನ್ನಡದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಗಳು ನಡೆದಿವೆ. ನೋಡಿ: ಉದ್ಧೃತ:ರಾಗೌ 1974 ಮುನ್ನುಡಿ ಭಾಗ.

ಭಾಗ 5

ವಿಶ್ಲೇಷಣೆ

ಜಾನಪದ ಅಧ್ಯಯನದ ಮುಖ್ಯ ಪ್ರವೃತ್ತಿಗಳು

ಹಿಂದೆ ಹೇಳಿದಂತೆ ಕರ್ನಾಟಕ ಜಾನಪದಕ್ಕೆ ಸಂಬಂಧಿಸಿದಂತೆ ಪ್ರಕಟವಾದ ಸುಮಾರು 50 ಕೃತಿಗಳನ್ನು ವಿವರವಾಗಿ ಪರಿಚಯಿಸುವುದರ ಜೊತೆಗೆ ಸುಮಾರು 30ರಷ್ಟು ಜಾನಪದಕ್ಕೆ ಸಂಬಂಧಿಸಿದ ಲೇಖನಗಳನ್ನು ಗಮನಿಸಲಾಗಿದೆ. ಪ್ರತೀ ಕೃತಿಗಳ ಸಂಪಾದಕರು ತಮ್ಮ ಸಂಗ್ರಹಗಳ ಬಗೆಗೆ ಯಾವ ಮಾತುಗಳನ್ನು ಉಲ್ಲೇಖಿಸಿರುವುದು ಹಾಗೂ ಜಾನಪದದ ಬಗೆಗೆ ಆಯಾ ಲೇಖಕರು ಹೊಂದಿರುವ ಧೋರಣೆಗಳೇನು ಎಂಬುದು ಸ್ಪಷ್ಟವಾಗಿವೆ. ಮೊದಲಘಟ್ಟದ ಕನ್ನಡ ಜಾನಪದ ಅಧ್ಯಯನದಲ್ಲಿ ಸಂಗ್ರಹಗಳ ಹಾಗೂ ಅಧ್ಯಯನಗಳ ಮುಖ್ಯ ಪ್ರವೃತ್ತಿಗಳನ್ನೂ ಅಂಥ ಪ್ರವೃತ್ತಿಗಳ ಹಿಂದಿನ ಸೈದ್ಧಾಂತಿಕ ನೆಲೆಗಳನ್ನು ವಿಶ್ಲೇಷಿಸಿ, ವಿಶ್ಲೇಷಣೆಗೆ ಬೇಕಾದ ಚೌಕಟ್ಟನ್ನು ಆರಂಭದಲ್ಲಿ ರೂಪಿಸಲಾಗಿದೆ.

ಹಾಡುಗಳ ಪ್ರಾಧಾನ್ಯ

ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಪ್ರಕಟವಾದ ಕೃತಿಗಳು ಹಾಗೂ ಲೇಖನಗಳು ಹೆಚ್ಚಾಗಿ ಜಾನಪದದ ಯಾವ ಪ್ರಕಾರಕ್ಕೆ ಸಂಬಂಧಿಸಿದೆ ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ ತುಂಬ ಕುತೂಹಲಕರವಾದ ಉತ್ತರವೊಂದು ದೊರೆಯುತ್ತದೆ. ಜಾನಪದ ಅಧ್ಯಯನಕ್ಕೆ ಸಂಬಂಧಿಸಿದಂತೆ ಶೇಕಡ 84ರಷ್ಟು ಕೃತಿಗಳು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರಕಟವಾದರೆ, ಶೇಕಡ 6ರಷ್ಟು ಕೃತಿಗಳು ಭೌತಿಕ ಜಾನಪದಕ್ಕೆ ಸಂಬಂಧಿಸಿದೆ ಹಾಗೂ

ಶೇಕಡ 10ರಷ್ಟು ಕೃತಿಗಳು ಸಾಮಾಜಿಕ ಆಚರಣೆಗೆ ಸಂಬಂಧಿಸಿದಂತೆ ಪ್ರಕಟವಾಗಿವೆ. ಅಂಕಿ ಅಂಶಗಳು ತಾವೇ ಸ್ಪಷ್ಟಪಡಿಸುವಂತೆ ಆ ಕಾಲದ ವಿದ್ವಾಂಸರ ಸಾಹಿತ್ಯಿಕ ಒಲವನ್ನು ಸೂಚಿಸುತ್ತವೆ. ಪ್ರದರ್ಶನ ಕಲೆಗಳಿಗೆ ಸಂಬಂಧಿಸಿದ ಆಸಕ್ತಿಗಳ ಗೈರುಹಾಜರಿಯನ್ನು ಸೂಚಿಸುತ್ತದೆ. ಹಾಡುಗಳ ಕುರಿತಂತೆ 26 ಕೃತಿಗಳು, ಜನಪದ ಕತೆ ಹಾಗೂ ಐತಿಹ್ಯಗಳಿಗೆ ಸಂಬಂಧಿಸಿದಂತೆ 5 ಕೃತಿಗಳು, ಗಾದೆಗಳಿಗೆ ಸಂಬಂಧಿಸಿದಂತೆ 8 ಕೃತಿಗಳು, ಒಗಟುಗಳಿಗೆ ಸಂಬಂಧಿಸಿದಂತೆ 3 ಕೃತಿಗಳು ಬಂದಿವೆ.

ಅಂಕಿ ಅಂಶಗಳ ಪ್ರಕಾರ, ಸಾಂಸ್ಕೃತಿಕವಾಗಿ ಮಹತ್ವದ ಕೆಲವು ವಿಷಯಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಮುಖ್ಯವಾಗಿ ವಿದ್ವಾಂಸರುಗಳು ಸ್ಥೂಲವಾಗಿ ಜಾನಪದ ಸಾಹಿತ್ಯದ ಕಡೆಗೆ ಹಾಗೂ ಸೂಕ್ಷ್ಮವಾಗಿ ಸಾಹಿತ್ಯದಲ್ಲಿನ ಹಾಡುಗಳ ಕಡೆಗೆ ಯಾಕೆ ವಾಲಿಕೊಂಡರು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಸಾಮಾನ್ಯವಾಗಿ ಪ್ರಾಟೆಸ್ಟೆಂಟ್ ಮನೋಧರ್ಮವು ಗದ್ಯದ ವಿಕಾಸಕ್ಕೆ ಕಾರಣವಾಗುತ್ತದೆ. ದಕ್ಷಿಣಕನ್ನಡದ ಬಾಸೆಲ್ ಮಿಶನ್‌ನ ಪ್ರಾಟೆಸ್ಟೆಂಟರು ತಮ್ಮ ಪ್ರಕಟನೆಗಳ ಮೂಲಕ ಗದ್ಯದ ಬೆಳವಣಿಗೆಗೆ ಕಾರಣರಾದರು ಎಂಬ ಅಂಶ ಈಗಾಗಲೇ ಪ್ರಕಟವಾಗಿದೆ. ಡಾ.ಬಿ.ದಾಮೋದರ ರಾಯರ ಪ್ರಕಾರ, "ಕನ್ನಡ ಕಾದಂಬರಿಯ ಉಗಮಕ್ಕೆ ಮುನ್ನ ಅದಕ್ಕೆ ಬೇಕಾದ ಗದ್ಯದ ವ್ಯವಸಾಯ ಮಾಡಿದವರಲ್ಲಿ ಪ್ರಾಟೆಸ್ಟೆಂಟರ ಪಾತ್ರ ಕಿರಿದಲ್ಲ. ಇಂಗ್ಲೆಂಡಿನಲ್ಲಿ ರಿನೇಸಾನ್ಸ್ ಆದ ನಂತರ ಪ್ರಾಟೆಸ್ಟೆಂಟ್ ಮೈಂಡ್ ಪ್ರಶ್ನಿಸುವ, ಪ್ರತಿಭಟಿಸುವ ಮನಸ್ಸು ಗದ್ಯದ ವಿಕಾಸಕ್ಕೆ ಒಂದು ಬಲವಾದ ಕಾರಣವಾಯಿತು. ಅದೇ ಪ್ರಾಟೆಸ್ಟೆಂಟ್ ಮನಸ್ಸು ಕಾದಂಬರಿಯ ಉಗಮಕ್ಕೂ ಕಾರಣವಾಯಿತು. ತನ್ನ ಮುಂದಿರುವ ವಸ್ತುವನ್ನು ಒಪ್ಪಿಕೊಂಡು ಅದೇ ಕಾಲದಲ್ಲಿ ಅದನ್ನು ಪ್ರಶ್ನಿಸುವ ಧೋರಣೆ ಕಾದಂಬರಿಕಾರನಿಗೆ ಅತ್ಯಗತ್ಯ. ಜಾರ್ಜ್ ಆರ್‌ವೆಲ್ ಒಂದು ಪ್ರಬಂಧದಲ್ಲಿ ಪ್ರಾಟೆಸ್ಟೆಂಟ್ ಕಲ್ಚರ್ ಹೊರಟು ಹೋದರೆ, ಉತ್ತಮ ಗದ್ಯ ಇನ್ನು ಬರುವುದಿಲ್ಲ. ಕಾದಂಬರಿಯು ಇನ್ನು ನಿಂತು ಹೋಗುತ್ತದೆ ಎಂಬ ಮಾತನ್ನು ಹೇಳುತ್ತಾನೆ"(1992:24) ಎಂಬ ಅಭಿಪ್ರಾಯವಿದೆ. ಈ ಮಾತಿನ ಪ್ರಕಾರ ಪ್ರಾಟೆಸ್ಟೆಂಟ್ ಅಂದರೆ ಪ್ರತಿಭಟಿಸುವ ಮನಸ್ಥಿತಿಗೂ ಗದ್ಯಕ್ಕೂ ಸಂಬಂಧವಿದೆ. ಇದನ್ನೇ ಇನ್ನೊಂದು ರೀತಿಯಿಂದ ಮಂಡಿಸುವುದಾದರೆ ಪ್ರೊಟೆಸ್ಟೆಂಟ್ ಅಲ್ಲದ ಮನೋಸ್ಥಿತಿಯೊಂದು ಗದ್ಯಕ್ಕೆ ವಿರುದ್ಧವಾದ ಹಾಡುಗಳನ್ನು ಒಪ್ಪಿಕೊಳ್ಳಲೇ ಬೇಕು. ಕನ್ನಡ ನವೋದಯ ಸಂದರ್ಭದಲ್ಲಿ ಜನಪ್ರಿಯವಾಗಿದ್ದ ಭಾವಗೀತಾ ಪ್ರಕಾರದ ಉಗಮ ಹಾಗೂ ವಿಕಾಸದ ನೆಲೆಯಲ್ಲಿ ಕೆಲವು ವಿದ್ವಾಂಸರು ಚರ್ಚಿಸಿದ್ದುಂಟು. (ನಾಗರಾಜ್ ಡಿ.ಆರ್.1987, ಅನಂತನಾರಾಯಣ ಎಸ್. 1970:511–519) ಜಾನಪದಕ್ಕೆ ಸಂಬಂಧಿಸಿಕೊಂಡು ಚರ್ಚೆಯನ್ನು ಇನ್ನಷ್ಟು ಮುಂದುವರಿಸಲು ಸಾಧ್ಯವಿದೆ.

ವಸಾಹತು ಆಡಳಿತವು ಭಾರತದಲ್ಲಿ ಹೊಸಬಗೆಯ ರಚನೆಗಳನ್ನು ಹುಟ್ಟುಹಾಕಿದ ಕುರಿತು ಈಗಾಗಲೇ ಚರ್ಚಿಸಲಾಗಿದೆ. ವಸಾಹತು ಶಿಕ್ಷಣವು ದೇಸೀ ಸಂಸ್ಕೃತಿಯೊಂದರ ವಿರುದ್ಧವಾಗಿಯೇ ಕ್ರಿಯಾಶೀಲವಾಗಿರುವುದು ಹೌದಾದರೂ ಅದು ದೇಸೀ ಸಂಸ್ಕೃತಿಯ ಕುರಿತಾಗಿ ಜನರಲ್ಲಿ ಒಂದು ಬಗೆಯ ಅರಿವು ಮತ್ತೆ ಜವಾಬ್ದಾರಿಯನ್ನು ಹುಟ್ಟುಹಾಕುತ್ತದೆ. "ತಮ್ಮನ್ನು ಆಳುತ್ತಿರುವ ಜನರ ಸಂಸ್ಕೃತಿ ತಮ್ಮ ಸಂಸ್ಕೃತಿಗಿಂತ ಶ್ರೇಷ್ಠವಾದುದು ಎಂಬ ಅಂತರ್ಗತ ಅರಿವಿನಿಂದಲೇ ಪ್ರಕ್ರಿಯೆ ಆರಂಭವಾಗುತ್ತದೆ."(ಡಿ.ಆರ್.ನಾಗರಾಜ್ 1987:372) ಇದು ಭಾರತದಲ್ಲಂತೂ ರಾಷ್ಟ್ರೀಯ ಚಳುವಳಿಯನ್ನೇ ಹುಟ್ಟುಹಾಕಿತು. ಚಳುವಳಿಯು ಜನರನ್ನು ಅವರ ಇತಿಹಾಸದ ಕಡೆಗೆ ಭಾವುಕವಾಗಿ ಕರೆದೊಯ್ಯುತ್ತದೆ ಹಾಗೂ ಜನರು ಇತಿಹಾಸವನ್ನು ತೀರಾ ಉದಾರವಾಗಿ ನೋಡಲು ಪ್ರೇರೇಪಿಸುತ್ತದೆ. ಆಳುವ ವರ್ಗದ ಒತ್ತಡಕ್ಕೆ ವಿರುದ್ಧವಾಗಿ ಇವರು ತಮ್ಮ ಸಂಸ್ಕೃತಿಯ ವಿವರಗಳನ್ನು ನಿಷ್ಠೆಯಿಂದ ಮಂಡಿಸುತ್ತಾರೆ. ತಮ್ಮ ಸಂಸ್ಕೃತಿಯೂ ಶ್ರೇಷ್ಠವೆಂದು ಅ-ವಿಮರ್ಶಾತ್ಮಕವಾಗಿ ಕೊಂಡಾಡುತ್ತಾರೆ. ಇಂಥಲ್ಲಿ ತಮ್ಮ ಸಂಸ್ಕೃತಿಯನ್ನು ವಿಮರ್ಶಿಸಲು ಬೇಕಾದ ವೈಚಾರಿಕ ಎಚ್ಚರವೊಂದನ್ನು ಇತಿಹಾಸ ಕೊಡಮಾಡುವುದಿಲ್ಲ. ಬದಲಾಗಿ ಭೂತಕಾಲದ ಕಡೆಗೆ ಆಸ್ಥೆಯಿಂದ ನೋಡುವ, ಸಂಸ್ಕೃತಿಯ ವಿವರಗಳನ್ನು ಗಾಢವಾಗಿ ಪ್ರೀತಿಸುವ ನೆಲೆಯೊಂದು ನಿರ್ಮಾಣವಾಗುತ್ತದೆ. ಆ ನೆಲೆಗಳ ಮೂಲಕವೇ ಜನರು ಬಾಹ್ಯ ಒತ್ತಡಗಳನ್ನು ಮೀರಲು ಪ್ರಯತ್ನಿಸುತ್ತಾರೆ. ಹಾಗೂ ನಾಡಿನ ಅಂತಃಕಾರಣವನ್ನು ಸ್ಪರ್ಶಿಸಲು ಪ್ರಯತ್ನಿಸುತ್ತಾರೆ. ಆ ಮನೋಧರ್ಮವು ಹಾಡುಗಳ ಬಗೆಗೆ ಅಸೀಮವಾದ ಮೋಹವನ್ನು ಪ್ರಕಟಿಸುತ್ತದೆ.

19-20ನೆಯ ಶತಮಾನದಲ್ಲಿ ಹಾಡುಗಳ ಕುರಿತಾಗಿ ವಿಶೇಷ ಒಲವು ಪ್ರಕಟವಾಗಿರುವುದು ಈ ಹಿನ್ನೆಲೆಯಲ್ಲಿಯೇ. ಇಂಗ್ಲೆಂಡ್ ಹಾಗೂ ಫ್ರಾನ್ಸ್‌ನಲ್ಲಿ ಕಂಡುಬಂದ ನವೋದಯ ಸಂದರ್ಭದಲ್ಲಿಯೂ ಇಂಥದೇ ಬೆಳವಣಿಗೆ ಕಂಡದ್ದನ್ನು ಎಸ್.ಅನಂತನಾರಾಯಣ ದಾಖಲಿಸಿದ್ದಾರೆ. (1970:913)

ಹಾಡುವಿಕೆಗೆ ಮಹತ್ತ್ವ

ಪಾಶ್ಚಾತ್ಯರ ಆಳ್ವಿಕೆಯ ಜೊತೆಗೆ ಪಾಶ್ಚಾತ್ಯ ಸಂಸ್ಕೃತಿಯೂ ಭಾರತದಾದ್ಯಂತ ಹಬ್ಬಿತು. ಇದರಿಂದ ದೇಸೀ ವಿದ್ವಾಂಸರಿಗೆ ತಮ್ಮ ಸಂಸ್ಕೃತಿಯೇ ಶ್ರೇಷ್ಠವೆಂದು ಸಾರುವ ಹೊಣೆಗಾರಿಕೆ ಬಂದೊದಗಿತ್ತು. ಹಾಗೆಯೇ ದೇಸೀ ವಿದ್ವಾಂಸರೆಲ್ಲರಲ್ಲೂ ನಮ್ಮ ಸಂಸ್ಕೃತಿಯ ಬಗೆಗೆ ಜಾಗೃತಿ ಮೂಡಿಸುವ ಕೆಲಸ ಪ್ರಧಾನವಾಯಿತು. ಈ ನೆಲೆಯಲ್ಲಿ ಗರತಿಯ ಹಾಡು, ಹಳ್ಳಿಯ ಹಾಡು ಮೊದಲಾದ ಸಂಕಲನಗಳ ಹಾಡುಗಳ ಸಹಾಯದಿಂದ ಸಂಸ್ಕೃತಿಯ ಬಗೆಗೆ ಪ್ರೀತಿ ಹುಟ್ಟಿಸುವ ಕೆಲಸವನ್ನು ಮಾಡಲಾಯಿತು.

ಮೊದಲಹಂತದ ಸಂಗ್ರಾಹಕರಲ್ಲಿ ಹಲವರು ಒಳ್ಳೆಯ ಹಾಡುಗಾರರೂ ಆಗಿದ್ದರು ಎಂಬ ಅಂಶ ಕೇವಲ ಆಕಸ್ಮಿಕವಲ್ಲ. 'ರಾಷ್ಟ್ರೀಯ ಚಳುವಳಿಗಳು ಸದಾ ಹಾಡುಗಾರರನ್ನು ಹುಟ್ಟು ಹಾಕುತ್ತವೆ' ಎಂಬ ಮಾತನ್ನು ಹಾಡುಗಳ ಹಿನ್ನೆಲೆಯಲ್ಲಿ ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ.

ರಮ್ಯ ಶೀರ್ಷಿಕೆಗಳು

ದೇಸೀ ವಿದ್ವಾಂಸರು ಸಂಗ್ರಹಿಸಿರುವ ಹಾಡುಗಳ ಸಂಕಲನಗಳ ಶೀರ್ಷಿಕೆಯಲ್ಲೂ ರಮ್ಯತೆಯಿದೆ. ಗರತಿಯ ಹಾಡು, ಮಲ್ಲಿಗೆದಂಡೆ, ಜೀವನ ಸಂಗೀತ, ಹುಟ್ಟಿದ ಹಳ್ಳಿ–ಹಳ್ಳಿಯ ಪದಗಳು, ನಾಡಪದಗಳು ಹೀಗೆ ಅನೇಕ ಶೀರ್ಷಿಕೆಗಳಲ್ಲಿ ಒಂದು ರೀತಿಯ ನವೋದಯ ಕಲ್ಪನೆ ಅಡಗಿದೆ. ಕನ್ನಡ ನವೋದಯ ಸಾಹಿತ್ಯದಲ್ಲಿಯೂ ಇಂಥ ರಮ್ಯ ಶೀರ್ಷಿಕೆಗಳು ಹೇರಳವಾಗಿ ಲಭಿಸುತ್ತವೆ. ಶೀರ್ಷಿಕೆಗಳೇ ವಿದ್ವಾಂಸರು ಜಾನಪದವನ್ನು ಇಚ್ಛಿಸಿದ ರೀತಿಯನ್ನು ಸಂಕೇತಿಸುತ್ತವೆ.

ಸ್ತ್ರೀ ಪ್ರಾಧಾನ್ಯ

ಸ್ವಾತಂತ್ರ್ಯಪೂರ್ವ ಜಾನಪದ ಸಂಗ್ರಹಗಳಲ್ಲಿ ಸ್ತ್ರೀ ಪ್ರಾಧಾನ್ಯವನ್ನು ನಿಚ್ಚಳವಾಗಿ ಗುರುತಿಸಬಹುದು. ಸ್ತ್ರೀಯನ್ನು ಗರತಿಯಾಗಿ ಗುರುತಿಸಿದ ವಿದ್ವಾಂಸರು ಗರತಿಯನ್ನು ಹಾಡಿ ಹೊಗಳುವ, ಆಕೆಯ ನೈತಿಕ ಶುದ್ಧತೆಯ ಬಗೆಗೆ ವಿಶೇಷ ಎಚ್ಚರ ತೋರುವ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಹಾಗೂ ಅಂತಹ ಹಾಡುಗಳನ್ನು ಮನದುಂಬಿ ಕೊಂಡಾಡಿದ್ದಾರೆ. ಬಾಗಿಲ ತಡೆಯುವ ಪದಗಳು, ಆರತಿ ಪದಗಳು, ಗರತಿಯ ಹಾಡುಗಳು, ಹಳ್ಳಿಯ ಹಾಡುಗಳು, ಮಲ್ಲಿಗೆದಂಡೆ, ಹೆಣ್ಣುಮಕ್ಕಳ ಪದಗಳು, ಮೊದಲಾದ ಸಂಕಲನಗಳು ಗರತಿಯನ್ನೇ ತಮ್ಮ ನಿರೂಪಣೆಯ ಕೇಂದ್ರದಲ್ಲಿರಿಸಿಕೊಂಡಿವೆ. ಇಲ್ಲವೇ ಗರತಿಯರಿಂದ ಸಂಗ್ರಹಿಸಿಸಲ್ಪಟ್ಟಿವೆ. ಹಾಡುಗಳನ್ನು ಸಂಪಾದಿಸಿದ ವಿದ್ವಾಂಸರು ತಮ್ಮ ಸಂಕಲನದ ಮುನ್ನುಡಿಗಳಲ್ಲಿ ಗರತಿಯನ್ನು ಮನದುಂಬಿಸಿ ಕೊಂಡಾಡಿದ್ದಾರೆ. ಆಕೆಯ ತ್ಯಾಗ ಮನೋಭಾವ, ಅವಿರತ ದುಡಿಮೆ, ಕುಟುಂಬವನ್ನು ಸಂರಕ್ಷಿಸುವ ಮನೋಭಾವ ಮೊದಲಾದುವುಗಳನ್ನು ಸಾಕಷ್ಟು ವಿವರವಾಗಿ ಪರಿಚಯಿಸಲಾಗಿದೆ. ಕನ್ನಡ ಜಾನಪದ ವಿದ್ವಾಂಸರು ತಮ್ಮ ಸಂಗ್ರಹಗಳಲ್ಲಿ ಮಹಿಳೆಯ ಕುರಿತಾಗಿ ಬಗೆಯ ಉದಾರವಾದಿ ಧೋರಣೆಯನ್ನು ಯಾಕೆ ಪ್ರಕಟಿಸಿದರೆಂಬುದನ್ನು ವಿಶ್ಲೇಷಿಸಿಕೊಳ್ಳುವುದು ಅಗತ್ಯ.

ವಾಸ್ತವವಾಗಿ ಜಾನಪದದಲ್ಲಿ ಕಂಡುಬರುವ ಧೋರಣೆಯು ಒಟ್ಟಾರೆಯಾಗಿ ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿಯೂ ನಿಜವಾಗಿದೆ. ಮುಖ್ಯವಾಗಿ ಕನ್ನಡ ಕಾದಂಬರಿಯ ಮೊದಲ ಹಂತದ ಬೆಳವಣಿಗೆಯನ್ನು ನೆನಪಿಸಿಕೊಳ್ಳಬಹುದು. ಅಲ್ಲಿಯೂ ಸ್ತ್ರೀ ಕೇಂದ್ರಿತವಾದ

ಕಾದಂಬರಿಗಳೇ ಪ್ರಕಟವಾಗಿರುವುದನ್ನು ಗಮನಿಸಬಹುದು. ಇಂದಿರಾ (1908), ಇಂದಿರಾಬಾಯಿ (1899), ಭಾಗೀರಥಿ (1900), ವಾಗ್ದೇವಿ (1905), ರೋಹಿಣಿ (1906), ಪ್ರಬುದ್ಧ ಪದ್ಮನಯನೆ (1898), ಮುಸುಕು ತೆಗೆಯೆ ಮಾಯಂಗನೆ (1930), ಸೀಮಾಂತಿನಿ (1907) ಮೊದಲಾದುವನ್ನು ಉಲ್ಲೇಖಿಸಬಹುದು. 19ನೆಯ ಶತಮಾನದ ಕೊನೆಯಭಾಗ ಹಾಗೂ 20ನೆಯ ಶತಮಾನದ ಮೊದಲ ದಶಕಗಳಲ್ಲಿ ಕನ್ನಡಕ್ಕೆ ಅನುವಾದಗೊಂಡ ಕೃತಿಗಳೂ ಸ್ತ್ರೀ ಕೇಂದ್ರಿತವಾಗಿದ್ದುವು. ದುರ್ಗೇಶನಂದಿನಿ (1885) ದೇವಿ ಚೌಧುರಾಣಿ ಮೊದಲಾದುವು ಇದಕ್ಕೆ ಉದಾಹರಣೆ. ಮುದ್ದಣನ ಮನೋರಮೆಯ ಪಾತ್ರಚಿತ್ರಣದಲ್ಲಿಯೇ ಇದರ ಸೂಚನೆಗಳು ನಮಗೆ ಸಿಗುತ್ತವೆ.

ಇವುಗಳನ್ನು ಒಟ್ಟಾರೆಯಾಗಿ ಗಮನಿಸಿದಾಗ ಆ ಕಾಲದ ವಿದ್ವಾಂಸರಿಗೆ ಮಹಿಳೆಯರ ಪಾತ್ರವನ್ನು ಗಮನಿಸದೆ ಇರಲಾಗುತ್ತಿರಲಿಲ್ಲ ಎಂಬ ಅಂಶ ತಾನೇ ಸ್ಪಷ್ಟವಾಗುತ್ತದೆ. ಈ ಕುರಿತು ಪುರುಷೋತ್ತಮ ಬಿಳಿಮಲೆಯವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ. "ನಮ್ಮ ಪ್ರಾಚೀನ ಸಂಸ್ಕೃತಿಯಲ್ಲಿ ಸ್ತ್ರೀಗೆ ಅಂಥ ಮಹತ್ತ್ವ ಏನು ಇದ್ದಿರಲಿಲ್ಲ. 19ನೆಯ ಶತಮಾನದ ಬರಹಗಾರರಿಗೆ ಆಕೆ ಮುಖ್ಯ ವಸ್ತುವಾದಳು. ಇದಕ್ಕೆ ನಿರ್ದಿಷ್ಟ ಕಾರಣಗಳಿರಲೇಬೇಕು. ನಿಜದ ಸಮಾಜದಲ್ಲಿ ಹೆಣ್ಣು ಸಮಸ್ಯೆಯಾಗಿರುವ ಸ್ಥಿತಿಯನ್ನೇ ಇವು ಸೂಕ್ಷ್ಮವಾಗಿ ಧ್ವನಿಸುತ್ತವೆ. 19ನೆಯ ಶತಮಾನದ ಉತ್ತರಾರ್ಧದಲ್ಲಿ ನಡೆದ ಸಾಮಾಜಿಕ ಅವಸ್ಥಾಂತರಗಳ ಕಾರಣದಿಂದ ಮಹಿಳೆಗೆ ಒಂದು ಬಗೆಯ ಚಲನೆ ಆರಂಭವಾಗಿತ್ತು. ಚಲನೆ ತೀವ್ರವಾಗಿ ಅನುಭವಕ್ಕೆ ಬಂದ ಹಲವರು ತಮ್ಮ ಕೃತಿಗಳಲ್ಲಿ ಹೊಸ ಸ್ತ್ರೀ ಪರಿಕಲ್ಪನೆಯನ್ನು ರೂಢಿಸಿಕೊಂಡು ಸಮಸ್ಯೆಯನ್ನು ಪರಿಹರಿಸಿಕೊಂಡರು." (1992:12) ಪ್ರಬಂಧದ ಆರಂಭದಲ್ಲಿ ಈಗಾಗಲೇ ಚರ್ಚಿಸಿದ ಹಾಗೆ ವಸಾಹತುಶಾಹಿ ಆಡಳಿತದಿಂದಾಗಿ ಕನ್ನಡ ಸಂಸ್ಕೃತಿಯಲ್ಲಿ ಹೊಸ ಬಗೆಯ ಬೆಳವಣಿಗೆ ಕಾಣಿಸಿಕೊಂಡಿತು. ಅಂಥ ಬೆಳವಣಿಗೆಯಲ್ಲಿ ಸ್ತ್ರೀ ಶಿಕ್ಷಣ ಬಹಳ ಪ್ರಧಾನವಾದುದು. ಕರ್ನಾಟಕದ ಸ್ತ್ರೀಯರು ಮೊದಲ ಬಾರಿಗೆ ಶಿಕ್ಷಣ ಕ್ಷೇತ್ರದತ್ತ ವಾಲಿಕೊಂಡರು. ಕ್ರೈಸ್ತ ಮಿಷನರಿಗಳು ಸ್ತ್ರೀ ಶಿಕ್ಷಣದ ಪರವಾಗಿದ್ದರು. ಹಾಗೂ ಮಹಿಳೆಯರು ಸಾರ್ವಜನಿಕ ಕೆಲಸಮಾಡುವುದನ್ನು ಬೆಂಬಲಿಸುತ್ತಿದ್ದರು. ಅಂಕಿ–ಅಂಶಗಳು ಹೇಳುವಂತೆ 1913ರ ಹೊತ್ತಿಗೆ ಸುಮಾರು 12,000 ಹುಡುಗಿಯರು ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಹಾಗೂ ಸುಮಾರು 2000 ಮಹಿಳೆಯರು ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಲು ಆರಂಭಿಸಿದರು. (ಶಿವರಾಮ ಪಡಿಕ್ಕಲ್ 1987:65) ಇಂಥ ಸಂದರ್ಭದಲ್ಲಿ ಬಾಲ್ಯವಿವಾಹ, ಸತಿಪದ್ಧತಿ, ವಿಧವಾವಿವಾಹ ಮೊದಲಾದುವು ತೀವ್ರವಾದ ಚರ್ಚೆಗೆ ಒಳಗಾದುವು. ಧಾರ್ಮಿಕ ಸುಧಾರಣವಾದಿಗಳು ಭಾರತೀಯ ಸಮಾಜದಲ್ಲಿ ಮಹಿಳೆಯರಿಗೆ ನೀಡಲಾದ

ಸ್ಥಾನಮಾನದ ಕಲ್ಪನೆಯನ್ನು ಪುನರ್ ವಿಮರ್ಶಿಸಲು ಒತ್ತಡ ಹೇರಿದ್ದರು. ಈ ಬಗೆಯ ಚರ್ಚೆಗಳು ಹಾಗೂ ವಾದಗಳು ಅಂತಿಮವಾಗಿ ಮೂರು ಬಗೆಯ ಪರಿಣಾಮವನ್ನು ಸಮಾಜದ ಮೇಲೆ ಬೀರಿತು.

ಒಂದು, ವಸಾಹತುಪೂರ್ವದ ಭಾರತೀಯ ಸಮಾಜದಲ್ಲಿದ್ದ ಮಹಿಳೆಯ ಪರವಾಗಿ ವಾದಿಸುವುದು. ಎರಡು, ಮಹಿಳೆಯ ಬಗ್ಗೆಯೆ ಪೂರ್ಣಕ್ರಾಂತಿಕಾರದ ನಿಲುವನ್ನು ತಳೆಯುವುದು. ಮೂರು, ಹೊಸ ತಿಳುವಳಿಕೆಯ ಹಿನ್ನೆಲೆಯಲ್ಲಿ ಮಹಿಳೆಯ ಸ್ಥಾನಮಾನವನ್ನು ಪುನರ್ ನಿಗದಿ ಮಾಡುವುದು. ಇದರಲ್ಲಿ ಮೊದಲನೆಯ ಹಾಗೂ ಮೂರನೆಯ ಪರಿಣಾಮವನ್ನು ನಾವು ಜಾನಪದ ಸಂಗ್ರಹಗಳಲ್ಲಿ ಕಾಣಬಹುದು. ಗರತಿಯ ಹಾಡಿನಲ್ಲಿರುವ ಎಲ್ಲ ತ್ರಿಪದಿಗಳೂ ಬದಲಾಗಿತ್ತಿರುವ ಮಹಿಳೆಯ ಸ್ಥಾನಮಾನಗಳನ್ನು ಮತ್ತೆ ಸಂಪ್ರದಾಯಕ್ಕೆ ಒಗ್ಗಿಸುವ ಪ್ರಯತ್ನ ಮಾಡಿದೆ. ಇಂಥ ಪ್ರಯತ್ನವೇ "ಹೆಣ್ಣುಮಕ್ಕಳದೇ ನಿಜವಾದ ಕಾವ್ಯ. ಉಳಿದುದು ಕಾವ್ಯದ ಛಾಯೆ. ನಿಜವಾಗಿಯೂ ಒಬ್ಬ ಆದಿಮಾಯೆ ತಾಯಿ, ತಂಗಿ, ಅಕ್ಕ, ಹೆಂಡತಿ, ಮಗಳಾಗಿ ಜೀವನವನ್ನು ಆಡಿಸಲು ನಿಂತಂತೆ ಭಾಸವಾಗಿಬಿಡುವುದು. ಆ ಹೃದಯ, ದುಃಖ ಸಹಿಷ್ಣುತೆ, ವಜ್ರಕುಸುಮ, ಅಸಾಧಾರಣೋಕ್ತಿ, ಧ್ವನಿ ಪ್ರಾಣವಾದ ಸ್ವಭಾವ, ಸರಳ ವಸ್ತು, ಸಹಜ ನಿವೇದನ ಪದ್ಧತಿ–ಒಂದೇ ಎರಡೇ ಇವೆಲ್ಲ ಹೆಣ್ಣಿಗೆ ಹುಟ್ಟುಗುಣವಾಗಿವೆ" (ಬೇಂದ್ರೆ 1931:ಮುನ್ನುಡಿ) ಎಂಬಂತಹ ಮಾತುಗಳನ್ನು ಹುಟ್ಟು ಹಾಕಿದೆ. ಗರತಿಯ ಬಗೆಗಿನ ಇಂಥ ನಿಲುವುಗಳು ವಾಸ್ತವವಾಗಿ ಆ ಕಾಲದಲ್ಲಿ ಮಹಿಳೆಯವರ ಬದುಕಿನಲ್ಲಾದ ಸ್ಥಿತ್ಯಂತರಗಳನ್ನೇ ಸಂಕೇತಿಸುತ್ತದೆ.

ನೀತಿ ಪ್ರಾಧಾನ್ಯ

ಮೊದಲ ಹಂತದಲ್ಲಿ ಪ್ರಕಟವಾದ ಕೃತಿಗಳನ್ನು ಗಮನಿಸಿದರೆ ಆ ಕೃತಿಗಳಲ್ಲಿ ಒಂದು ಬಗೆಯ ನೈತಿಕ ಬದ್ಧತೆಯನ್ನು ಗುರುತಿಸಬಹುದು. ಆ ಕಾಲದ ಸಂಗ್ರಾಹಕರು ತಮ್ಮ ಮುನ್ನುಡಿಗಳಲ್ಲಿ ಈ ಕುರಿತು ಹೇಳಿಕೊಂಡಿದ್ದಾರೆ. ಇಲ್ಲಿನ ನೈತಿಕ ಪರಿಕಲ್ಪನೆಯು ಆ ಕಾಲದ ಉದೀಯಮಾನ ಮಧ್ಯಮವರ್ಗದ ಲೋಕದೃಷ್ಟಿಯಿಂದ ನಿಷ್ಪನ್ನವಾಗಿದೆ. ಇದು ವಸಾಹತು ಪೂರ್ವ ಭಾರತದ ನೈತಿಕತೆಯ ಪರವಾಗಿಲ್ಲ. ಹಾಗೆಯೇ ವಸಾಹತೀಕರಣಗೊಂಡ ಸಂಸ್ಕೃತಿಯ ಕ್ರಾಂತಿಕಾರಿ ನೈತಿಕತೆಯೂ ಅಲ್ಲ. ಬದಲಾಗಿ ಇವೆರಡರ ನಡುವಿನ ಸ್ಥಿತಿಯೊಂದನ್ನು ಸಂಕೇತಿಸುತ್ತದೆ. ರಾಷ್ಟ್ರೀಯ ಮಟ್ಟದಲ್ಲಿ ಈ ಬಗೆಯ ನೈತಿಕತೆಯನ್ನು ಹುಟ್ಟು ಹಾಕಿದವರು ಭಾರತೀಯ ಇಂಗ್ಲಿಷ್ ವಿದ್ಯಾವಂತ ವರ್ಗಕ್ಕೆ ಸೇರಿದ ಜನರು. ರಾಜಾರಾಂ ಮೋಹನರಾಯ್, ಲಾಲ ಲಜಪತರಾಯ್, ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ಮಹರ್ಷಿ ಅರವಿಂದ ಮೊದಲಾದವರು

ಈ ಬಗೆಯ ಚಿಂತನೆಯನ್ನು ಹುಟ್ಟು ಹಾಕಿದ್ದಾರೆ. ಇವರುಗಳು 19ನೆಯ ಶತಮಾನದ ಭಾರತೀಯ ಚಿಂತನಾಕ್ರಮವನ್ನು ರೂಪಿಸಿದ ಬಗೆಯನ್ನು ಈಗಾಗಲೇ ಚರ್ಚಿಸಲಾಗಿದೆ. ಪಾಶ್ಚಾತ್ಯ ವೈಚಾರಿಕ ನೆಲೆಗಳಿಂದ ಭಾರತೀಯ ವಿಚಾರಗಳನ್ನು ವ್ಯಾಖ್ಯಾನಿಸಿ ಹೊಸಬಗೆಯ ನೈತಿಕತೆಯೊಂದನ್ನು ಇವರು ಪ್ರತಿಪಾದಿಸಿದರು. ಪರಂಪರಾಗತ ವೇದಾಂತ ಮೂಲ ಮೌಲ್ಯಗಳ ಬಗೆಗೆ ಇವರಲ್ಲಿ ಜಗಳವಿಲ್ಲ. ಹಾಗೆಯೇ ಪಾಶ್ಚಿಮಾತ್ಯ ವೈಚಾರಿಕತೆಯೊಂದಿಗೂ ಇವರಿಗೆ ತೀವ್ರವಾದ ಭಿನ್ನಾಭಿಪ್ರಾಯವೇನೂ ಇರಲಿಲ್ಲ. ಹಾಗಾಗಿ ಇವೆರಡನ್ನೂ ಬೆರೆಸಿದ ಹೊಸ ನೈತಿಕತೆಯೊಂದನ್ನು ಪ್ರತಿಪಾದಿಸಲು ಇವರಿಗೆ ಸಾಧ್ಯವಾಯಿತು. ಮೊದಲ ಹಂತದಲ್ಲಿ ಪ್ರಕಟವಾದ ಸಂಗ್ರಹಗಳಲ್ಲಿರುವ ಹಾಡುಗಳು, ಗಾದೆಗಳು, ಹಾಗೂ ಕತೆಗಳು ಈ ಬಗೆಯ ಮಧ್ಯಮ ವರ್ಗೀಯ ನೈತಿಕತೆಯನ್ನು ಚೆನ್ನಾಗಿ ಪ್ರಕಟಿಸುತ್ತವೆ. ವಾಸ್ತವವಾಗಿ ಉದಾರವಾದಿ ಮಾನವತಾವಾದವೇ ಕೆಲಸ ಮಾಡಿದೆ. ಅಸ್ಪೃಶ್ಯರಿಗೆ ಅನ್ಯಾಯವಾಗಿದೆ. ಮಹಿಳೆ ಶೋಷಣೆಗೊಳಗಾಗಿದ್ದಾಳೆ ಎಂಬಂತಹ ವೈಚಾರಿಕತೆ ಇವರಲ್ಲಿತ್ತು. ಹಾಗಾಗಿ ಅಂಥವರ ಕಡೆಗೆ ವಿದ್ವಾಂಸರು ಮೊದಲ ಬಾರಿಗೆ ಮುಖ ತಿರುಗಿಸಿಕೊಂಡರು ಹಾಗೂ ಅಲ್ಲಿ ರಚನೆಯಾದ ಜಾನಪದವನ್ನು ಹಾಡಿ ಹೊಗಳಿದರು. ಮಹಿಳೆಗೆ ಅನ್ಯಾಯವಾಗಿದೆ ಎಂದು ಹೇಳುತ್ತಲೇ ಅದರ ಜೊತೆಜೊತೆಗೆ 'ಗಂಜಿಯ ಕುಡಿದರೆ ಗಂಡನ ಮನೆಕೆಲಸ' ಎಂಬಂಥ ಹಾಡುಗಳನ್ನು ಕೊಂಡಾಡಿದರು. ಗಾದೆಗಳಲ್ಲಿ ಪ್ರಕಟವಾದ ನೀತಿಯನ್ನು ಹಾಗೂ ಜೀವನಾನುಭವವನ್ನು ಎತ್ತಿಹಿಡಿದರು. ಗಾದೆಗಳ ಬಗೆಗೆ ಮೊದಲ ಹಂತದಲ್ಲಿ ಸುಮಾರು 14 ಕೃತಿಗಳು ಪ್ರಕಟವಾಗಿವೆ ಎಂಬ ಅಂಶವೇ ಸಂಗ್ರಾಹಕರ ನೈತಿಕ ಬದ್ಧತೆಗೆ ಮಾಡಿದ ವ್ಯಾಖ್ಯಾನವಾಗಿದೆ. ಎಚ್.ಎಸ್.ಅಚ್ಚಪ್ಪನವರು ಗಾದೆಗಳ ಬಗ್ಗೆ ಬರೆದ ಭಾಷೆವನ್ನು ಉಲ್ಲೇಖಿಸಿದರೆ ಆ ಕಾಲದ ವಿದ್ವಾಂಸರ ನೈತಿಕ ದೃಷ್ಟಿಕೋನ ಸ್ಪಷ್ಟವಾದೀತು. "ಅನೇಕ ಗಾದೆಗಳು ಗುಪ್ತಗಾಮಿನಿಯಾಗಿ ಭಾರತದ ಜನಾಂಗಗಳನ್ನು ನಡೆಸುತ್ತಿರುವ ಸನಾತನ ಸಂಸ್ಕೃತಿಗೆ ಸಂಬಂಧಿಸಿದವು. ದೇಹ ಪೋಷಣೆ, ವಂಶಪರಿಪಾಲನೆ, ದಯೆ, ದಾನ, ಅಹಿಂಸೆ, ದೇಶಪ್ರೇಮ, ಗುರುಹಿರಿಯರ ಶೂಶ್ರೂಷೆ, ಪಾತಿವ್ರತ್ಯ, ಮಾತೃಭಕ್ತಿ ಮುಂತಾದ ಜಗದ್ವ್ಯಾಪಿಗಳಾದ ಸಮಸ್ಯೆಗಳಿಗೆ ಅನ್ವಯಿಸುವ ಗಾದೆಗಳು ಸಂಗ್ರಹದಲ್ಲಿ ನೂರಾರಿವೆ. ಇವುಗಳನ್ನು ಮನನ ಮಾಡಿದರೆ ನಮ್ಮ ಜನರ ಧರ್ಮ ದೃಷ್ಟಿ ಎತ್ತಕಡೆ ಬಾಗಿದೆ, ಅವರ ನ್ಯಾಯ–ಅನ್ಯಾಯ ವಿಮರ್ಶೆ ಯಾವ ಆಧಾರಗಳ ಮೇಲೆ ನೆಲೆಸಿದೆ; ಅವರನ್ನು ತಿವಿದೆಚ್ಚರಿಸುತ್ತಿರುವ ಗೊತ್ತುಗುರಿಗಳು ಯಾವುದು ಎಂಬುದೆಲ್ಲಾ ಮನದಟ್ಟಾಗುತ್ತವೆ." (1994:5–6) ಈ ಮಾತುಗಳು ಗಾದೆಗಳ ಸಂಗ್ರಾಹಕರ ಉದ್ದೇಶವನ್ನು ತಾವಾಗಿಯೇ ಸ್ಪಷ್ಟಪಡಿಸುತ್ತದೆ. ಸಮಾಜವನ್ನು ತಿದ್ದುವ, ಪರಿಷ್ಕರಿಸುವ ಬದಲಾದ ಸಂದರ್ಭಕ್ಕೆ ಪುನರ್ ಹೊಂದಾಣಿಕೆ ಮಾಡುವ ಉದ್ದೇಶ ವಿದ್ವಾಂಸರಿಗಿರುವುದು ಸ್ಪಷ್ಟ.

ಪ್ರಣಯ ಪ್ರಾಧಾನ್ಯ

ಸಂಗ್ರಹಗಳ ಪರಿಶೀಲನೆಯಲ್ಲಿ ಸ್ಪಷ್ಟವಾಗಿರುವಂತೆ ಜಾನಪದ ಸಂಗ್ರಹಗಳಲ್ಲಿ ಪ್ರಣಯ ಸಂಬಂಧಿ ಹಾಡುಗಳಿಗೆ ಸಂಗ್ರಾಹಕರು ಪ್ರಾಧ್ಯಾನ್ಯ ನೀಡಿದ್ದಾರೆ. ಗಂಡು ಹೆಣ್ಣಿನ ನಡುವಿನ ಸಂಬಂಧದಲ್ಲಿ ವಿವಾಹೇತರ ಸಂಬಂಧಗಳ ಬಗೆಗೆ ಸಂಗ್ರಾಹಕರು ಮಹತ್ವ ನೀಡಿರುವುದು ಕುತೂಹಲದ ವಿಚಾರವಾಗಿದೆ.

ಈ ಬಗೆಯ ಒಲವು ಮೂಲತಃ ಭಾರತೀಯ ಗ್ರಂಥಸ್ಥ ಧರ್ಮವನ್ನು ನಿರಾಕರಿಸುವಂತಹದಲ್ಲ. ಬದಲು ಪ್ರಣಯದ ಮೂಲಕ ಮಾನವನಿಗೆ ಹೊಸ ಚೈತ್ಯನವನ್ನು ತಂದುಕೊಡುವಂತಹದ್ದಾಗಿದೆ. ನೈಜ ಜೀವನದಲ್ಲಿ ಅನೈತಿಕವೆಂದು ಪರಿಗಣಿಸಬಹುದಾದ ವಿವಾಹೇತರ ಸಂಬಂಧಗಳನ್ನು ಹಾಡಿನಲ್ಲಿ ಕಟ್ಟಿಕೊಡುತ್ತ ಸಂಭ್ರಮಿಸುವ ರೀತಿ ಎದ್ದು ತೋರುತ್ತದೆ. ಇದು ಒಟ್ಟು ಭಾರತೀಯ ಹೇಗೋ ಹಾಗೇ ಕನ್ನಡ ಸಂಪ್ರದಾಯಕ್ಕೂ ಅನ್ವಯಿಸುವ ಮಾತಾಗಿದೆ.

ಗ್ರಾಮಜೀವನದ ಬಗೆಗೆ ಒಲವು

ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಭಾರತೀಯರ ಚಿಂತನಾಕ್ರಮವು ಸ್ಥೂಲವಾಗಿ ಗ್ರಾಮಜೀವನದ ಪರವಾಗಿತ್ತು. ಗಾಂಧಿಯವರ ಪ್ರಭಾವವೇ ಅದಕ್ಕೆ ಪ್ರಮುಖ ಕಾರಣವಾಗಿದೆ. ವಸಾಹತು ಆಡಳಿತ ತಂದಿತ್ತ ಆಧುನಿಕತೆ ಹಾಗೂ ಆಧುನಿಕತೆಯ ಪರಿಣಾಮವಾಗಿ ಕಾಣಿಸಿಕೊಂಡ ನಗರ ಸಂಸ್ಕೃತಿಯ ವಿರುದ್ಧವಾಗಿ ಗಾಂಧಿಯವರು ಭಾರತದ ಹಳ್ಳಿಗಳನ್ನು ನಿಲ್ಲಿಸಿದರು. ಗಾಂಧಿಯವರೊಂದಿಗೆ ಬೆಳೆದುಬಂದ ರಾಷ್ಟ್ರೀಯ ಹೋರಾಟವು ಕೂಡಾ ಗ್ರಾಮಜೀವನದ ಪರವಾದ ನಿಲುವುಗಳನ್ನು ತಳೆದಿತ್ತು. ಆ ಕಾಲದಲ್ಲಿ ಭಾರತಾದಾದ್ಯಂತ ಕಾಣಿಸಿಕೊಂಡ ಬರಹಗಾರಾರು ಕೂಡ ಇಂಥಾ ಚಿಂತನಾ ಕ್ರಮದಿಂದ ಹೊರತಾಗಿರುವುದಕ್ಕೆ ಸಾಧ್ಯವಿರಲಿಲ್ಲ. ಕನ್ನಡ ನವೋದಯ ಬರಹಗಳಲ್ಲಿ ಗ್ರಾಮೀಣ ಪ್ರಜ್ಞೆ ಅಸಾಧರಣವಾಗಿ ಕಾಣಿಸಿಕೊಂಡಿದೆ. ಗ್ರಾಮೀಣ ಜೀವನದಲ್ಲಿ ಕಂಡುಬರುವ ಮುಗ್ದತನ, ಪ್ರೇಮ, ಪ್ರಕೃತಿಗೆ ಹೊಂದಿಕೊಂಡಿರುವ ರೀತಿ ಇವೆಲ್ಲವನ್ನೂ ಜಾನಪದ ಸಂಗ್ರಾಹಕರು ವಿಶೇಷ ಆಸ್ಥೆಯಿಂದ ಕೊಂಡಾಡಿದ್ದಾರೆ. ಈ ಬಗೆಯ ನಿಲುವುಗಳು ಅ–ವಿಮರ್ಶಾತ್ಮಕವಾಗಿರುವುದನ್ನು ಅಲ್ಲಗಳೆಯುವಂತಿಲ್ಲ. ಯಾಕೆಂದರೆ ಗ್ರಾಮಜೀವನದಲ್ಲಿನ ಬಿಕ್ಕಟ್ಟುಗಳೂ ಜಾತಿಯ ವೈರುಧ್ಯಗಳು ಮೊದಲಾದುವನ್ನು ಸಂಗ್ರಾಹಕರು ಗಮನಿಸಿಲ್ಲ. ಆಧುನಿಕತೆಯ ಹೊಡೆತಕ್ಕೆ ಸಿಕ್ಕಿ ನಾಶವಾಗುತ್ತಿದೆ ಎನ್ನಲಾಗುವ ಗ್ರಾಮೀಣ ಪರಿಸರದ ಬಗೆಗೆ ಮುಗ್ದ ಹಳಹಳಿಕೆ ಮಾತ್ರ ಸಂಗ್ರಹಗಳಲ್ಲಿ ಢಾಳಾಗಿ ಕಾಣಿಸಿಕೊಂಡಿದೆ.

ಚರಿತ್ರೆಯ ಬಗೆಗೆ ಭಾವುಕ ಒಲವು

ಪಾಶ್ಚಾತ್ಯ ವಿದ್ವಾಂಸರು ಹಾಗೂ ದೇಸೀ ವಿದ್ವಾಂಸರು ವರ್ತಮಾನದಲ್ಲಿ ಕಂಡು ಬಂದ ಬಿಕ್ಕಟ್ಟುಗಳನ್ನು ಚರಿತ್ರೆಯ ಮೂಲಕ ತುಂಬಿಕೊಳ್ಳುವುದಕ್ಕೆ ಪ್ರಯತ್ನಪಟ್ಟರು. ಚರಿತ್ರೆಯಲ್ಲಿಯ ಘಟನೆಗಳನ್ನು ವರ್ತಮಾನದಲ್ಲಿ ವೈಭವೀಕರಿಸುವುದರ ಜೊತೆಗೆ ಅವುಗಳನ್ನು ಕೊಂಡಾಡುವ ಕೆಲಸವನ್ನೂ ಮಾಡಿದರು. ಜಾನ್‌ಲೇಡನ್, ಫ್ಲೀಟ್, ಹಲಸಂಗಿ ಸಹೋದರರು ಎಲ್.ಗುಂಡಪ್ಪ ಮೊದಲಾದವರು ಸಂಗ್ರಹಿಸುವ ಲಾವಣಿಗಳು ಇದೇ ರೀತಿಯ ಅಂಶಗಳನ್ನು ಒಳಗೊಂಡಿವೆ. ಇದೇ ರೀತಿಯ ಕೆಲಸ ಕನ್ನಡ ಕಾದಂಬರಿಕಾರರಲ್ಲೂ ಕಂಡುಬರುತ್ತದೆ. (ಶಿವರಾಮ ಪಡಿಕ್ಕಲ್ 1987)

ಸೌಂದರ್ಯವಾದಿ ದೃಷ್ಟಿಕೋನ

ಪ್ರಕೃತಿಯ ಚೆಲುವನ್ನು ಕೀರ್ತಿಸುವ ಹಾಗೆ ಹೆಣ್ಣಿನ ಚೆಲುವನ್ನು ಹಾಡಿ ಹೊಗಳುವಂತಹ ಪದಗಳು ಸಂಗ್ರಹಗಳಲ್ಲಿ ಅತಿಶಯವಾದ ಸ್ಥಾನ ಪಡೆದಿದೆ. ಇಲ್ಲಿಯ ಸೌಂದರ್ಯದ ದೃಷ್ಟಿಕೋನವು ಪುರುಷ ಪಕ್ಷಪಾತಿಯಾದುದು. ಅಂದರೆ ಸೌಂದರ್ಯವನ್ನು ಗಂಡಿನ ದೃಷ್ಟಿಕೋನದ ಮೂಲಕ ನೋಡಲಾಗಿದೆ. ಹೀಗಾಗಿ ಹೆಣ್ಣಿನ ಚೆಲುವು ತೀರ ಪ್ರಧಾನ ನೆಲೆಗೆ ಬಂದಿದೆ. ಉಳಿದಂತೆ ಕೃಷಿ ಭೂಮಿಯ ಚೆಲುವು, ಸಂರಕ್ಷಕ ದೈವದ ಚೆಲುವು, ಪ್ರಕೃತಿಯ ಚೆಲುವು ಹಾಡುಗಳಿಗೆ ವಸ್ತುವಾಗಿದೆ. ಈಗಾಗಲೇ ಸ್ಪಷ್ಟವಾಗಿರುವಂತೆ ಈ ಬಗೆಯ ಸೌಂದರ್ಯ ಗ್ರಹಿಕೆ ತೀರ ಉದಾರವಾದದ್ದು ಹಾಗೂ ಬಹುಮಟ್ಟಿಗೆ ಸಂಸ್ಕೃತಿಯ ಮೇಲ್‌ಸ್ಥಾನವನ್ನು ಮಾತ್ರ ಸ್ಪರ್ಶಿಸುವಂತದ್ದಾಗಿದೆ.

ದೇಸೀ ಛಂದಸ್ಸಿನ ಕಡೆಗೆ ಒಲವು

ಬಹುತೇಕ ಎಲ್ಲ ಬಗೆಯ ಕೆಲಸದ ಹಾಡುಗಳು ತ್ರಿಪದಿಯಲ್ಲಿವೆ. ಹಾಗೂ ಪ್ರಣಯದ ಹಾಡುಗಳು ಲಾವಣಿ ಛಂದಸ್ಸಿನಲ್ಲಿವೆ. ಕನ್ನಡ ಜಾನಪದದಲ್ಲಿ ತ್ರಿಪದಿ ಹಾಗೂ ಲಾವಣಿ ಛಂದಸ್ಸಿನ ಸಂಖ್ಯೆಯೂ ಹೆಚ್ಚಾಗಿವೆ. ಸಂಗ್ರಾಹಕರು ಎರಡು ಛಂದಸ್ಸಿನಲ್ಲಿರುವ ಹಾಡುಗಳ ಬಗೆಗೆ ವಿಶೇಷ ಒಲವು ತೋರಿದ್ದಾರೆ. ಎಂದರೆ ಕೆಲಸದ ಹಾಡುಗಳ ಹಾಗೂ ಪ್ರಣಯಭಾವದ ಕಡೆಗೆ ಹೆಚ್ಚು ವಾಲಿಕೊಂಡಿದ್ದಾರೆಂದೇ ಅರ್ಥ.

ದಾಖಲಾತಿಯ ಉತ್ಸಾಹ

ಭಾರತವು ಮೂಲತಃ ಮೌಖಿಕ ಪರಂಪರೆಯನ್ನೇ ಪ್ರಧಾನವಾಗಿ ಉಳ್ಳಂತಹ ದೇಶವಾಗಿದೆ. ದೇಶಕ್ಕೆ ವಸಾಹತು ಆಡಳಿತವು ಆಧುನಿಕತೆಯನ್ನು ತಂದುಕೊಟ್ಟಿತು,

"ಆಧುನಿಕ ಎನ್ನುವುದೇ ಮೌಖಿಕತೆಗೆ ವಿರೋಧಿ ಕಲ್ಪನೆ ಎನ್ನುವುದು ಗಮನಿಸಬೇಕಾದ ಅಂಶ" (ಪ್ರಸನ್ನ 1994:3) ಸಾಕ್ಷರತೆಯ ಹೆಚ್ಚಳ ಹಾಗೂ ಕೈಗಾರಿಕೀಕರಣವು ಮೌಖಿಕ ಸಂಪ್ರದಾಯವನ್ನು ನಿರ್ನಾಮಗೊಳಿಸುತ್ತವೆ. ಹಾಗೂ ಮೌಖಿಕ ರೂಪಗಳನ್ನು ಬರಹದ ಮೂಲಕ ದಾಖಲಿಸಲೂ ಹಾಗೂ ವಿಶ್ಲೇಷಿಸಲು ಪ್ರಯತ್ನಿಸುತ್ತದೆ. ಮೌಖಿಕ ಪರಂಪರೆಯ ಪುನಾರಾವರ್ತನೆಗೆ ಅವಕಾಶವಿಲ್ಲ. ಭಾರತೀಯ ಸಂಸ್ಕೃತಿಯು ಮೊದಲಿಂದಲೂ ಪುಸ್ತಕ ಕೇಂದ್ರಿತವಾಗಿರಲಿಲ್ಲ ಎಂಬ ಅಂಶವನ್ನು ಈಗಾಗಲೇ ವಿದ್ವಾಂಸರು ಸಮರ್ಥವಾಗಿ ವಿಶ್ಲೇಷಿಸಿದ್ದಾರೆ. (ಕೀರ್ತಿನಾಥ ಕುರ್ತಕೋಟಿ:1994:35) ಆದರೆ ವಸಾಹತು ಆಡಳಿತವು ಸಂಸ್ಕೃತಿಯನ್ನು ಪುಸ್ತಕ ಕೇಂದ್ರಿತವಾಗಿ ಮಾರ್ಪಡಿಸಲು ಒತ್ತಡ ಹೇರಿತು. ಕೀರ್ತಿನಾಥ ಕುರ್ತಕೋಟಿಯವರು ಹೀಗೆ ಬರೆಯುತ್ತಾರೆ. "ಎಲ್ಲೆಲ್ಲಿ ಕ್ರೈಸ್ತಧರ್ಮ ಬಂತೋ ಅಲ್ಲೆಲ್ಲಾ ಪುಸ್ತಕಕ್ಕೆ ಸಾಂಸ್ಕೃತಿಕ ಪ್ರಭುತ್ವ ಬಂತು. ವಾರನ್‌ಹೇಸ್ಟಿಂಗ್ಸ್ ಗೌರ್ನರ್ ಜನರಲ್ ಆದ ಕೂಡಲೇ ಆತನು ಮಾಡಿದ ಮೊದಲ ಕೆಲಸ, ಭಗವದ್ಗೀತೆಯನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿಸಿದ್ದು. ಭಾಷಾಂತರಕ್ಕೆ ಕಾರಣ ವಿಚಿತ್ರವಾದದ್ದು. ಬ್ರಿಟಿಷ್ ನ್ಯಾಯಾಲಯಗಳಲ್ಲಿ ಆಣೆ ಮಾಡಲು ಒಂದು ಗ್ರಂಥ ಬೇಕಾಗಿತ್ತು. ಕ್ರಿಶ್ಚಿಯನ್ನರಿಗೆ ಬೈಬಲ್, ಮುಸ್ಲಿಮರಿಗೆ ಕುರಾನ್ ಇದ್ದಂತೆ ಹಿಂದೂಗಳಿಗೆ ಯಾವ ಗ್ರಂಥವೂ ಇರಲಿಲ್ಲ. ಪಂಡಿತರೊಬ್ಬರ ಹೇಳಿಕೆಯಂತೆ ಭಗವದ್ಗೀತೆಯನ್ನು ಕಾರ್ಯಕ್ಕೆ ಆರಿಸಿಕೊಳ್ಳಲಾಯಿತು. ಆದರೆ ಬೈಬಲ್‌ಗೂ ಭಗವದ್ಗೀತೆಗೂ ಬಹಳ ವ್ಯತ್ಯಾಸವಿದೆ. ಭಗವದ್ಗೀತೆಯನ್ನು ಇಲ್ಲಿಯವರೆಗೂ ಹಿಂದುಗಳ ಏಕೈಕ ಧಾರ್ಮಿಕ ಗ್ರಂಥವೆಂದು ನಾವು ಸ್ವೀಕರಿಸಿಲ್ಲ. ಆ ಪಂಡಿತ ವೇದಗಳು ಅಂತ ಸಲಹೆ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಹೇಸ್ಟಿಂಗ್ಸ್‌ನ ಕಾಲದಲ್ಲಿ ವೇದಗಳು ಬರವಣಿಗೆಯಲ್ಲಿ ಲಭ್ಯವಿರಲಿಲ್ಲ. ಆಗಲೇ ನಮ್ಮ ಮಾತುಗಳು, ನಮ್ಮ ಬರವಣಿಗೆಗಳು ಬೇರೆಯಾದುದ್ದು." (1994:35) ಮೇಲಿನ ಮಾತುಗಳು ಸ್ಪಷ್ಟಪಡಿಸುವಂತೆ ಬ್ರಿಟಿಷ್ ಆಡಳಿತಶಾಹಿಯು ಬರಹದ ಮೂಲಕ ದಾಖಲಾಗುವ ವಿಷಯಗಳಿಗೆ ಮಾತ್ರ ಮಹತ್ವ ನೀಡಿತು. ಬ್ರಿಟಿಷ್ ಶಿಕ್ಷಣ ಪದ್ಧತಿಯು ಕೂಡ ಬರಹದ ಬಗೆಗೆ ನಮ್ಮ ನಂಬುಗೆಯನ್ನು ಇನ್ನಷ್ಟು ಬಲಗೊಳಿಸಿತು. ಬರವಣಿಗೆ ಹಾಗೂ ಬಾಯಿಮಾತುಗಳನ್ನು ಬ್ರಿಟಿಷ್ ಆಡಳಿತ ವ್ಯವಸ್ಥೆಯು ಪೂರ್ತಿಯಾಗಿ ಬೇರ್ಪಡಿಸಿತು. ಬಾಯಿ ಮಾತಿಗಿಂತ ಬರವಣಿಗೆ ಹೆಚ್ಚು ಸ್ಥಿರವೆಂದು ಭಾವಿಸಲಾಯಿತು.

ಇಂಥ ಧೋರಣೆ ಬಲಿಯುತ್ತಿದ್ದಂತೆ ಮೌಖಿಕ ರೂಪದಲ್ಲಿದ್ದ ಜಾನಪದವು ಬರಹದ ರೂಪಕ್ಕಿಳಿಯಿತು. ಮೆಕೆಂಝಿಯ ಆರಂಭಿಕ ಪ್ರಯತ್ನಗಳೆಲ್ಲವೂ ಇದಕ್ಕೆ ಉತ್ತಮವಾದ ಉದಾಹರಣೆಯಾಗಿದೆ. ಪಾಶ್ಚಾತ್ಯ ವಿದ್ವಾಂಸರು ಇಂಥ ಕೆಲಸಗಳನ್ನು ನಡೆಸಲೇಬೇಕಾದ ಒತ್ತಡಕ್ಕೆ ಆಗಲೇ ಒಳಗಾಗಿದ್ದರು. ಏಕೆಂದರೆ ಯುರೋಪಿನಲ್ಲಿ ಹಾಗಾಗಿರುವುದನ್ನು

ಅವರಾಗಲೇ ಗಮನಿಸಿದ್ದರು. ಪಾಶ್ಚಾತ್ಯ ವಿದ್ವಾಂಸರ ದಾಖಲಾತಿ ಕೆಲಸಗಳನ್ನು ವಸಾಹತು ಶಿಕ್ಷಣಕ್ಕೊಳಗಾದ ದೇಸೀ ವಿದ್ವಾಂಸರು ಮುಂದುವರಿಸಿದರು. ಹೀಗೆ ಜಾನಪದವನ್ನು ಅಕ್ಷರಮಾಧ್ಯಮದ ಮೂಲಕ ದಾಖಲಿಸುವ ಉತ್ಸಾಹ ಬರುವುದಕ್ಕೆ ವಸಾಹತು ಶಿಕ್ಷಣವೇ ಕಾರಣವಾಯಿತು.

ಜಾನಪದ ಕಣ್ಮರೆಯಾಗುವ ಭಯ

ಆಧುನಿಕತೆಯ ಹೊಡೆತಕ್ಕೆ ಸಿಕ್ಕಿ ಜಾನಪದವು ನಿರ್ನಾಮವಾಗುತ್ತದೆ ಎಂಬ ಭಯವನ್ನು ಮೊದಲ ಹಂತದ ವಿದ್ವಾಂಸರೆಲ್ಲ ಪ್ರಕಟಪಡಿಸಿದ್ದುಂಟು. ಕೈಗಾರೀಕರಣದ ಮೂಲಕ ಬೆಳೆದ ಆಧುನಿಕ ಯುರೋಪ್ಯನ್ ಸಮಾಜವು ಜಾನಪದವನ್ನು ಕಳಕೊಂಡ ಅನುಭವ ಅಂಥ ವಿದ್ವಾಂಸರ ಮುಂದಿತ್ತು. ಬ್ರಿಟಿಷರು ತಂದ ಶಿಕ್ಷಣ ಪದ್ಧತಿ ನ್ಯಾಯಾಂಗ ವ್ಯವಸ್ಥೆ ಹಾಗೂ ಆಡಳಿತ ವ್ಯವಸ್ಥೆಯು ಸಂಪೂರ್ಣವಾಗಿ ಅಕ್ಷರದ ಮಹತ್ವವನ್ನು ಎತ್ತಿಹಿಡಿಯುತ್ತಿದ್ದುದನ್ನು ಆ ಕಾಲದಲ್ಲಿ ಯಾರಾದರೂ ಗಮನಿಸಬಹುದಾಗಿತ್ತು. ಅಕ್ಷರ ಮಾಧ್ಯಮವು ಹೆಚ್ಚೆಚ್ಚು ಜನಪ್ರಿಯವಾಗುತ್ತಿದ್ದಂತೆ ಬಾಯಿ ಮಾತಿನ ಮೂಲಕ ಉಳಿದು ಬಂದ ಜಾನಪದವು ಅಳಿದು ಹೋಗುತ್ತದೆ ಎಂಬ ನಿಲುವಿಗೆ ನಮ್ಮ ವಿದ್ವಾಂಸರು ತಲುಪಿದ್ದಾರೆ. ಭಯದಲ್ಲಿ ಜಾನಪದವನ್ನು ಬೇಗಬೇಗನೆ ಸಂಗ್ರಹ ಮಾಡುವ ಹಾಗೂ ಬರಹದ ಮೂಲಕ ಅದನ್ನು ಉಳಿಸುವ ಕೆಲಸದತ್ತ ವಾಲಿಕೊಂಡಿದ್ದಾರೆ. ಜಾನಪದವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ ಎಂಬ ಮಾತುಗಳು ವಿದ್ವಾಂಸರು ಮಾಡಿದ ಸಂಗ್ರಹಗಳ ಮುನ್ನುಡಿಯಲ್ಲಿ ಮತ್ತೆ ಮತ್ತೆ ಕಾಣಿಸಿಕೊಂಡವು ಎಂಬುದನ್ನು ನೆನಪಿಸಿಕೊಳ್ಳಬಹುದು.

ವಸಾಹತೀಕರಣವು ಪ್ರಬಲಿಸುತ್ತಿರುವ ಕಾಲಘಟ್ಟದಲ್ಲಿ ವಿದ್ವಾಂಸರು ನಡೆಸಿದ ಜಾನಪದ ಕೆಲಸಗಳನ್ನು ವಸಾಹತುಶಾಹಿಯ ಅನುಭವಕ್ಕೆ ಜಾನಪದ ವಿದ್ವಾಂಸರು ತೋರಿದ ಪ್ರತಿಭಟನೆ ಎಂದು ಕರೆಯಲು ಸಾಧ್ಯವಿದೆ. ಇದು ಬಹುಮಟ್ಟಿಗೆ ಗ್ರಾಮೀಣ ಸಂಸ್ಕೃತಿಯನ್ನು ತೀವ್ರವಾಗಿ ಪ್ರೀತಿಸುವುದರ ಮೂಲಕ ಹುಟ್ಟಿಕೊಂಡ ಪ್ರತಿಕ್ರಿಯೆಯಾಗಿದೆ. ವಸಾಹತು ಆಡಳಿತವೆನ್ನುವುದು ಕೇವಲ ಆರ್ಥಿಕತೆಗೆ ಸಂಬಂಧಪಟ್ಟ ಪದವಲ್ಲ. ಬದಲು ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮವನ್ನು ಹೊಂದಿರುವ ಪದವಾಗಿದೆ. ವಸಾಹತು ಆಡಳಿತವು ತನ್ನ ದೇಶದ ಮೌಲ್ಯಗಳನ್ನು ಬೇರೆ ಬೇರೆ ಮಾಧ್ಯಮಗಳ ಮೂಲಕ ಜನರ ಮೇಲೆ ಹೇರಲು ಪ್ರಯತ್ನಿಸುತ್ತದೆ. ಹಾಗೂ ಸಹಜವಾಗಿಯೇ ಅದು ದೇಸೀಯ ಸಂಸ್ಕೃತಿಗಿಂತ ಮೇಲ್‌ಗೈ ಪಡೆಯುತ್ತದೆ. ಈ ಹಂತದಲ್ಲಿ ಜಾಗೃತಗೊಂಡ ದೇಸೀ ಮನಸ್ಸುಗಳು ಪಾಶ್ಚಾತ್ಯ ವೈಚಾರಿಕತೆಗೆ ವಿರುದ್ಧವಾಗಿ ದೇಸೀ ಮೂಲದ ವೈಚಾರಿಕತೆಯನ್ನು ಎತ್ತಿಹಿಡಿಯುತ್ತದೆ. ತನ್ನ ಗತ ಇತಿಹಾಸವನ್ನು ವೈಭವೀಕರಿಸಿ ವಸಾಹತು ಆಡಳಿತ

ಮುಂದಿರಿಸುತ್ತದೆ. ಹಾಗೂ ವರ್ತಮಾನದ ದುಃಖವನ್ನು ಮರೆಯ ಬಯಸುತ್ತದೆ. ಈ ಹಂತದಲ್ಲಿ ವಸಾಹತೀಕರಣಕ್ಕೆ ಪ್ರತಿಕ್ರಿಯೆಯಾಗಿ ಹಿಂದೂ ಪುನರುತ್ಥಾನವಾದವು ಕಾಣಿಸಿಕೊಂಡಿತು. ಹಿಂದೂ ಧರ್ಮವನ್ನು ಸುಧಾರಿಸಿ ಅದನ್ನು ಪಾಶ್ಚಿಮಾತ್ಯ ತಾತ್ವಿಕತೆಯ ಆಕ್ರಮಣದ ವಿರುದ್ಧವಾಗಿ ನಿಲ್ಲಿಸುವ ಕೆಲಸವನ್ನು ರಾಜಾರಾಂ ಮೋಹನರಾಯ, ದಯಾನಂದ ಸರಸ್ವತಿ, ಅರವಿಂದ, ರಾಮಕೃಷ್ಣ ಪರಮಹಂಸ ಮೊದಲಾದವರನ್ನು ಈಗಾಗಲೇ ಗಮನಿಸಲಾಗಿದೆ. ಇಂಥ ರಾಷ್ಟ್ರೀಯ ಪ್ರವೃತ್ತಿಗೆ ಪೂರಕವಾಗಿ ಜಾನಪದ ವಿದ್ವಾಂಸರುಗಳು ಜಾನಪದ ಮಾಹಿತಿಗಳನ್ನು ಹಿಂದೂಧರ್ಮದ ಮೂಲ ಮೌಲ್ಯಗಳೆಂದು ಭಾವಿಸಿ ಅದನ್ನು ಉದಾತ್ತಗೊಳಿಸಿ ವಸಾಹತೀಕರಣದ ವಿರುದ್ಧವಾಗಿ ನಿಲ್ಲಿಸಿದರು. ಹಾಗೆ ನೋಡಿದರೆ ಇವರೆಲ್ಲರೂ ತಮ್ಮ ಸಂಸ್ಕೃತಿಯ ಪರವಾಗಿ ವಾದ ಮಾಡಲೇಬೇಕಾದ ಅನಿವಾರ್ಯ ಸ್ಥಿತಿಯಲ್ಲಿದ್ದರು. ವಿದ್ವಾಂಸರುಗಳು ತಮ್ಮ ಪ್ರಸ್ತಾವನೆಗಳಲ್ಲಿ ಜಾನಪದವನ್ನು ಹಿಂದೂಧರ್ಮದ ಅಂಗವೆಂದು ಭಾವಿಸಿದ್ದುಂಟು. ಇದು ವಸಾಹತು ಆಡಳಿತಕ್ಕೆ ಇವರು ತೋರಿದ ಆಳವಾದ ಪ್ರತಿಭಟನೆಯಾಗಿದೆ. ಈ ಕುರಿತು ಪುರುಷೋತ್ತಮ ಬಿಳಿಮಲೆಯವರು ಹೀಗೆ ಅಭಿಪ್ರಾಯ ಪಡುತ್ತಾರೆ. "ಇಂಗ್ಲಿಷ್ ಶಿಕ್ಷಣ ಕ್ರಮದಲ್ಲಿ ತರಬೇತಾದ ನಮ್ಮ ಉದೀಯಮಾನ ಮಧ್ಯಮ ವರ್ಗದ ಬುದ್ಧಿ ಜೀವಿಗಳು ರಾಷ್ಟ್ರೀಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ಸಂದರ್ಭದಲ್ಲಿ ತಮ್ಮ ಜೀವನ ಕ್ರಮವನ್ನು ಹೊಸತಾಗಿ ಸಮರ್ಥಿಸಿಕೊಂಡ ವಿಧಾನವಿದು. ಜಾನಪದ ವಿದ್ವಾಂಸರ ಆತ್ಮ ಸಮರ್ಥನೆಯ ದಾಟಿಯಲ್ಲಿ ಇದು ಸ್ಪಷ್ಟ. ಕರ್ನಾಟಕದಲ್ಲಿ ಇದು ಕೊಡಗಿನಲ್ಲಿಯೇ ಮೊದಲು ಕಾಣಿಸಿಕೊಂಡದ್ದು ಆಕಸ್ಮಿಕವೇನೂ ಅಲ್ಲ. ಬದಲು ತಾಂತ್ರಿಕವಾಗಿ ಅದು ಸಹಜವೇ ಆಗಿತ್ತು. ಏಕೆಂದರೆ ಟಿಪ್ಪುವಿನ ಪತನಾನಂತರ(1799) ಕೊಡಗು ವಸಾಹತೀಕರಣ ಪ್ರಕ್ರಿಯೆಗೆ ಒಳಗಾಗುತ್ತ ಬಂದು 1834ರ ಹೊತ್ತಿಗೆ ಚಿಕ್ಕ ವೀರರಾಜೇಂದ್ರನ ಪತನದೊಂದಿಗೆ ತೀವ್ರ ಸ್ಥಿತಿಗೆ ಅದು ಮುಟ್ಟಿತು. ಕೊಡವರೂ ಪಾಶ್ಚಾತೀಕರಣಕ್ಕೆ ಸುಲಭವಾಗಿ ತಮ್ಮನ್ನು ತೆರೆದುಕೊಂಡರು. ಇಂಥ ಸಂದರ್ಭವೊಂದರಲ್ಲಿ ಚಿಣ್ಣಪ್ಪನವರಲ್ಲಿ ದೇಸೀಯ ಸಂಸ್ಕೃತಿಯ ಬಗೆಗೆ ಒಂದು ಬಗೆಯ ಆತಂಕಪೂರಿತ ಕಳಕಳಿ ಕಂಡು ಬಂದರೆ ಆಶ್ಚರ್ಯವೇನಿಲ್ಲ. ಕರಾವಳಿಯಲ್ಲಿ ಮುಳಿಯ ತಿಮ್ಮಪ್ಪಯ್ಯನವರು ಯಕ್ಷಗಾನದ ಬಗ್ಗೆ ಬರೆದಾಗಲೂ ಇಂಥದ್ದೇ ನಿಲುವು ಹೊಂದಿದ್ದರು. ಹಾಗೆ ನೋಡಿದರೆ ಆ ಕಾಲದ ಉದೀಯಮಾನ ಮಧ್ಯಮವರ್ಗದ ಚಿಂತಕರೆಲ್ಲರೂ ತಮ್ಮ ವರ್ತಮಾನಕ್ಕೆ ಅರ್ಥ ತಂದುಕೊಂಡದ್ದು ಹೀಗೆಯೇ ಆಗಿದೆ. ಈಗಾಗಲೇ ಸ್ಪಷ್ಟಪಡಿಸಿರುವಂತೆ ಈ ಬಗೆಯ ಕೆಲಸಗಳು ವಸಾಹತೀಕರಣ ಪ್ರಕ್ರಿಯೆಗೆ ಒಂದು ಬಗೆಯ ಪ್ರತಿಭಟನೆಯೂ ಹೌದು."(1992:26)

ಸಂಘರ್ಷಾತೀತ ನಿಲುವುಗಳು

ಭಾಷಾವಾರು ಪ್ರಾಂತ್ಯಗಳ ರಚನೆ ಹಾಗೂ ರಾಷ್ಟ್ರೀಯ ಹೋರಾಟ ಜೊತೆಜೊತೆಯಾಗಿಯೇ ನಡೆದಾಗ ಉಂಟಾಗಬಹುದಾಗಿದ್ದ ಸಂಘರ್ಷವನ್ನು ಭಾರತವು ಪರಿಹರಿಸಿಕೊಂಡದ್ದು ಅದರ ಇತಿಹಾಸದ ಒಂದು ಮಹತ್ವದ ಘಟನೆಯಾಗಿದೆ. ಕರ್ನಾಟಕವು ಏಕೀಕರಣವಾಗುತ್ತಲೇ ಅದು ಅಖಿಲಭಾರತ ಮಟ್ಟದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯೊಂದಿಗೆ ತನ್ನನ್ನು ಗುರುತಿಸಿಕೊಂಡಿತು. ಕರ್ನಾಟಕವನ್ನು 'ಭಾರತಮಾತೆಯ ತನುಜಾತೆ' ಎಂದು ಕರೆದು ಅದನ್ನು ಸಂಘರ್ಷಾತೀತಗೊಳಿಸಲಾಯಿತು. ಕನ್ನಡ ಕವಿಗಳು ಕಲ್ಪಿಸಿದ ಕನ್ನಡಮ್ಮನ ಕಲ್ಪನೆಯು ಭಾರತಾಂಬೆಯ ಕಲ್ಪನೆಗೆ ವಿರುದ್ಧವಾಗಿರಲಿಲ್ಲ. ನಾಡಿಗೆ ಸಂಬಂಧಿಸಿದಂತೆ ಕಂಡುಬಂದ ಕಲ್ಪನೆಯು ನಾಡಿನ ಸಂಸ್ಕೃತಿಯ ಸಂದರ್ಭದಲ್ಲಿಯೂ ನಿಜವಾಯಿತು. ಮೂಲತಃ ಜಾತಿಪದ್ಧತಿಯ ಶ್ರೇಣೀಕರಣಕ್ಕೆ ಒಳಗಾಗಿದ್ದ ಸಂಸ್ಕೃತಿಯು 'ಮಡಿಮೈಲಿಗೆ'ಯ ನಿರಂತರತೆಯನ್ನು ಕಾಯ್ದುಕೊಂಡು ಬಂದಿದೆ. ಸಂಸ್ಕೃತಿಯ ಮೇಲ್ತುದಿಯಲ್ಲಿದ್ದಾರೆಂದು ಭಾವಿಸಲಾದ ವೈದಿಕರು ಮಡಿಯನ್ನು ಪ್ರತಿನಿಧಿಸಿದರೆ, ಶ್ರೇಣೀಕರಣದ ಕೆಳಬದಿಯಲ್ಲಿರುವ ಅಸ್ಪೃಶ್ಯರು ಮೈಲಿಗೆಯನ್ನು ಸಂಕೇತಿಸುತ್ತಾರೆ. 'ಮಡಿ' 'ಮೈಲಿಗೆ'ಯ ವಿರೋಧ ದ್ವಂದ್ವವು ಒಂದು ನಿರ್ದಿಷ್ಟ ಸಮಾಜದೊಳಗಡೆ ಪರಸ್ಪರ ಸಂಘರ್ಷ ಹಾಗೂ ಸಮನ್ವಯವನ್ನು ನಿರಂತರವಾಗಿ ಉಳಿಸಿಕೊಂಡು ಬಂದಿತು. ಆದರೆ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಜಾತಿಗಳ ನಡುವಣ ಸಂಘರ್ಷ ಗೌಣವಾಯಿತು. ಹಾಗೂ ಬ್ರಿಟಿಷರು ಎಂಬ ಸಮಾನ ವೈರಿಯ ವಿರುದ್ಧ ಹೋರಾಡಲು ಇವೆಲ್ಲವೂ ತಾತ್ಕಾಲಿಕವಾಗಿ ಒಂದಾದವು. ಜಾತಿಯ ಬಗೆಗೆ ಗಾಂಧೀ ಮೊದಲುಗೊಂಡು ಇತರ ರಾಷ್ಟ್ರನಾಯಕರೆಲ್ಲ ಹೊಂದಿದ್ದ ಧೋರಣೆಗಳು ಜಾತಿಗಳ ನಡುವಣ ಸಂಘರ್ಷವನ್ನು ಗೌಣಗೊಳಿಸುವುದೇ ಆಗಿತ್ತು. ಅಸ್ಪೃಶ್ಯರನ್ನು 'ಹರಿಜನ' ಎಂದು ಕರೆದು ಗೌರವಿಸಲಾಯಿತು. ಈ ತರಹದ ನಿಲುವುಗಳು ನಮ್ಮ ಸಮಾಜ ರಚನೆಯನ್ನು ಮೂಲಭೂತವಾಗಿ ಬದಲಾಯಿಸಲು ಅಸಮರ್ಥವಾದರೂ ಮಾನಸಿಕವಾಗಿ ತಾತ್ಕಾಲಿಕ ಉಪಶಮನವನ್ನು ನೀಡಿದ್ದಂತೂ ನಿಜ. ಇಂಥ ದೃಷ್ಟಿ ಧೋರಣೆಗಳು ಕನ್ನಡ ಜಾನಪದದ ಮೊದಲ ಹಂತದ ಕೆಲಸಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ವಿದ್ವಾಂಸರು ಒಟ್ಟಾಗಿ ಭಾರತೀಯ ಸಂಸ್ಕೃತಿಯನ್ನು ಏಕಾಕೃತಿ ಮಾದರಿಯಾಗಿ ಗ್ರಹಿಸಲು ಪ್ರಯತ್ನಿಸಿದ್ದಾರೆ. ವಿದ್ವಾಂಸರು ಕನ್ನಡ ಸಂಸ್ಕೃತಿಯನ್ನು 'ದೇಸಿ' ಸಂಸ್ಕೃತಿಯೆಂದು ಗುರುತಿಸಿರುವರಾದರೂ ಅದನ್ನು ವೈದಿಕರದ್ದೆನ್ನಲಾದ 'ಮಾರ್ಗ' ಸಂಸ್ಕೃತಿಯ ವಿರುದ್ಧವಾಗಿ ನಿಲ್ಲಿಸಿಲ್ಲ. (ದೇವುಡು:1935) ಅವರ ಪ್ರಕಾರ "ಕರ್ನಾಟಕ ಸಂಸ್ಕೃತಿಯ ರೂಪಾಂತರ ಅಥವಾ ಪ್ರತಿಬಿಂಬ ಅವೆರಡರ ನಿಕಟ ಸಂಬಂಧವಿದೆ.

ಮಾತ್ರವಲ್ಲ ಸಂಸ್ಕೃತಿಗೆ ಸಿಕ್ಕಿರುವ ಎಲ್ಲರೂ ಒಂದೇ ಅಚ್ಚಿನಲ್ಲಿ ಬಿದ್ದು ಒಂದೇ ಜಾತಿಯ ತಂತಿಯಾಗುವುದಕ್ಕೆ ಸಿದ್ಧವಾಗುತ್ತಿರುವ ಒಂದೇ ಲೋಹದ ತುಂಡುಗಳು." (ದೇವುಡ 19335:27) ಸಂಸ್ಕೃತಿಯ ಸ್ವರೂಪವನ್ನು ಹೀಗೆ ಸಂಘರ್ಷಾತೀತಗೊಳಿಸುವ ಪ್ರವೃತ್ತಿಯನ್ನು ಆ ಕಾಲದ ಇತರ ವಿದ್ವಾಂಸರಲ್ಲಿಯೂ ಕಾಣಬಹುದು. ಇವರು ತಮ್ಮ ಬರಹಗಳಲ್ಲಿ ಬ್ರಾಹ್ಮಣ ಸಂಸ್ಕೃತಿಯನ್ನೂ ದಲಿತ ಸಂಸ್ಕೃತಿಯನ್ನೂ ಒಟ್ಟಾಗಿಯೇ ಇರಿಸುತ್ತಾರೆ. ವೈದಿಕ ಮತ್ತು ಅವೈದಿಕ ಸಂಸ್ಕೃತಿಯನ್ನು ಒಟ್ಟಿಗೆ ಕೊಂಡಾಡುತ್ತಾರೆ. ಹಾಗೂ ಕಾಡು ಜನರಲ್ಲಿ ಹೆಂಗಸರಲ್ಲಿ ಶಾಸ್ತ್ರಕಾವ್ಯಗಳ ಲೋಕದೃಷ್ಟಿಯನ್ನು ಗುರುತಿಸುತ್ತಾರೆ. ಬಿ.ಎಂ.ಶ್ರೀ., ಬೇಂದ್ರೆ, ಮಾಸ್ತಿ, ಮಧುರಚೆನ್ನ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಲ್.ಗುಂಡಪ್ಪ ಮೊದಲಾದವರು ಜಾನಪದ ಸಂಗ್ರಹಗಳಿಗೆ ಬರೆದ ಮುನ್ನುಡಿಗಳಲ್ಲಿ ಈ ಬಗೆಯ ನಿಲುವುಗಳು ಕಂಡುಬರುತ್ತವೆ. ಇಂಥ ವಾದಗಳು ಇಂದು ಬೇರೆ ಬಗೆಯ ಚರ್ಚೆಗಳಿಗೆ ಎಡೆಮಾಡಿಕೊಡುತ್ತಿದೆ. ಈಗ ಭಾರತೀಯ ಸಂಸ್ಕೃತಿಯನ್ನು ಅದರ ಬಹುಮುಖತೆಯಲ್ಲಿ ಗುರುತಿಸಲು ಹಾಗೂ ಮಂಡಿಸಲು ಪ್ರಯತ್ನಿಸಲಾಗುತ್ತಿದೆ. ಆದರೆ ಚಾರಿತ್ರಿಕವಾಗಿ ವಸಾಹತೀಕರಣಕ್ಕೆ ವಿರುದ್ಧವಾಗಿ ಜಾನಪದ ವಿದ್ವಾಂಸರು ಭಾರತೀಯ ಸಂಸ್ಕೃತಿಗೆ ಏಕರೂಪವನ್ನೀವ ಕೆಲಸವನ್ನು ಮಾಡಿದ್ದಾರೆ. ಈ ಅರ್ಥದಲ್ಲಿ ಅಂಥ ಧೋರಣೆಗಳು ಚಾರಿತ್ರಿಕವಾಗಿ ಅಗತ್ಯವಾಗಿತ್ತು. ಹೀಗೆ ನೋಡಿದಾಗ ಮೊದಲಹಂತದಲ್ಲಿ ಕೆಲಸಮಾಡಿದ ಕನ್ನಡ ಜಾನಪದ ವಿದ್ವಾಂಸರು ತಮ್ಮ ಕಾಲದ ಅಗತ್ಯವನ್ನೂ ಬಹಳ ಜವಾಬ್ದಾರಿಯಿಂದ ಅರ್ಥಮಾಡಿಕೊಂಡಿದ್ದರು ಎಂದು ಹೇಳಬಹುದು.

ಪರಿಷ್ಕರಣದ ಕೆಲಸಗಳು

ಜಾನಪದದ ಮೊದಲಹಂತದ ಸಂಗ್ರಾಹಕರು ತಾವು ಸಂಗ್ರಹಿಸಿದ ಹಾಡುಗಳನ್ನು ಪ್ರಕಟಿಸುವ ಮುನ್ನ ಸಾಕಷ್ಟು ಪರಿಷ್ಕರಿಸಿಕೊಂಡಿದ್ದಾರೆ. ಇದರ ಬಗೆಗೆ ಆಯಾ ಸಂಗ್ರಾಹಕರು ತಮ್ಮ ಮುನ್ನುಡಿಗಳಲ್ಲಿ ಕೆಲವು ಸೂಚನೆಗಳನ್ನು ನೀಡಿದ್ದಾರೆ. ಸೂಚನೆಗಳ ಆಧಾರದಿಂದ ಯಾವ ಬಗೆಯ ಪರಿಷ್ಕರಣೆಗಳನ್ನು ನಡೆಸಿದ್ದಾರೆಂದು ಸುಸ್ಪಷ್ಟವಾಗಿ ಹೇಳುವುದು ಕಷ್ಟ. ಆದರೂ ಬಹುಮಟ್ಟಿಗೆ ಭಾಷಾ ಪ್ರಯೋಗದಲ್ಲಿನ ತಿದ್ದುವಿಕೆ ಈ ಹಂತದಲ್ಲಿ ನಡೆದಿದೆ ಎಂದು ಹೇಳಬಹುದು. ಗ್ರಾಮೀಣ ಜನರು ಬಳಸಿದ ಪದಪ್ರಯೋಗಗಳ ಬಗೆಗೆ ವಿದ್ವಾಂಸರಿಗೆ ಒಳವಿತ್ತು ನಿಜ. ಜೊತೆಗೆ ಈ ಬಗೆಯ ಪ್ರಯೋಗಗಳನ್ನು ಶಿಷ್ಟ ಕನ್ನಡದ ಅಥವಾ ಗ್ರಾಂಥಿಕ ಕನ್ನಡದ ಜೊತೆಗೆ ಹೋಲಿಸಿ ನೋಡುವ ಉತ್ಸಾಹವು ಅವರಲ್ಲಿತ್ತೆಂಬುದೂ ನಿಜ. ಹೀಗೆ ಮಾಡಿದಾಗ 'ಗ್ರಾಮ್ಯಪದ'ಗಳನ್ನು 'ಶಿಷ್ಟ'ವಾಗಿಸುವ ಕೆಲಸ ನಡೆಯುತ್ತದೆ. ಈ ಕಾರಣದಿಂದಲೇ ಅನೇಕ ಸಂಗ್ರಹಗಳಲ್ಲಿ ಒಂದೇ ಬಗೆಯ

ಪದ ಪ್ರಯೋಗಗಳು ಸಿಗುತ್ತವೆ. ಗರತಿಯ ಹಾಡಿನಲ್ಲಿರುವ ತ್ರಿಪದಿಗಳು ಇದಕ್ಕೆ ಅತ್ಯುತ್ತಮವಾದ ಉದಾಹರಣೆಯಾಗಿದೆ. ಸಂಕಲನದ ಭಾಷೆ ಒಂದೇ ಅಚ್ಚಿನಲ್ಲಿ ಎರಕ ಹೊಯ್ದಂತಿದೆ. ಪ್ರಾದೇಶಿಕ ವ್ಯತ್ಯಾಸಗಳೆಲ್ಲ ಗೌಣವಾಗಿವೆ. ಇಂಥ ಪರಿಷ್ಕರಣೆಗಳು ತ್ರಿಪದಿಯ ಸಂದರ್ಭದಲ್ಲಿ ನಡೆದಹಾಗೆ ಲಾವಣಿಗಳ ಸಂದರ್ಭದಲ್ಲಿ ನಡೆದಂತಿಲ್ಲ. ಇದಕ್ಕೆ ಕಾರಣಗಳನ್ನು ಊಹಿಸುವುದು ಕಷ್ಟ. ಪ್ರಾಸ, ಛಂದಸ್ಸು ಹಾಗೂ ಭಾಷಾ ಪ್ರಯೋಗದ ಸಂದರ್ಭದಲ್ಲಿ ಸಂಗ್ರಾಹಕರು ಕೈಯಾಡಿಸಿರುವುದು ಮಾತ್ರ ಮೇಲ್ನೋಟಕ್ಕೆ ವಿಧಿತವಾಗಿರುತ್ತದೆ.

ಬಂಧುತ್ವದ ನವೀಕರಣ

ವಸಾಹತು ಆಡಳಿತವು ನಮ್ಮ ಬಾಂಧವ್ಯದ ರೀತಿ ನೀತಿಯ ಮೇಲೆ ಅಸಾಮಾನ್ಯವಾದ ಪರಿಣಾಮವನ್ನು ಬೀರಿ ಬಂಧುತ್ವದಲ್ಲಿ ಒಂದು ಬಗೆಯ ಬಿಕ್ಕಟ್ಟುಗಳನ್ನು ನಿರ್ಮಿಸಿದೆ. ಅವಿಭಕ್ತ ಕುಟುಂಬಗಳೆಲ್ಲ ವಿಭಕ್ತ ಮನೆಗಳಾಗಿ ಮಾರ್ಪಟ್ಟದ್ದು ಇದಕ್ಕೆ ಸಾಕ್ಷಿ. ಶಿಕ್ಷಣ ಪಡೆದವರು ಉದ್ಯೋಗಸ್ಥರಾಗುವುದರ ಮೂಲಕ ಹೊಸ ಬಗೆಯ ಬಾಂಧವ್ಯಗಳನ್ನು ಏರ್ಪಡಿಸಿಕೊಂಡರು. ಇಂಥ ಬದಲಾವಣೆಗಳಿಗೆ ಪ್ರತಿಕ್ರಿಯಿಸಿದ ಸಾಂಪ್ರದಾಯಿಕ ಜನರು ತಮ್ಮ ಮೂಲ ಬಂಧುತ್ವದ ರೀತಿ ನೀತಿಗಳಿಗೆ ಮರುಳುವ ಉತ್ಸಾಹವನ್ನು ತೋರಿದರು.

ಜನಪದ ಹಾಡುಗಳಲ್ಲಿ ಅಂಥ ಒಲವಿರುವಂತಹವುಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಅಣ್ಣ–ತಂಗಿ, ತಾಯಿ–ಮಗಳು, ಗಂಡ–ಹೆಂಡತಿ, ಅಣ್ಣ–ತಮ್ಮ, ಅಜ್ಜ–ಮೊಮ್ಮಗ, ಅಜ್ಜ–ಅಜ್ಜಿ, ಮಾವ–ಸೊಸೆ ಮೊದಲಾದ ಸಂಬಂಧಗಳು ಹಾಡುಗಳಲ್ಲಿ ಮತ್ತೆ ಪುನಃಸ್ಥಾಪನೆ ಹೊಂದಿದವು. ಸಂಗ್ರಹಗಳಲ್ಲಿ ಕಂಡುಬಂದ ಬಂಧುತ್ವದ ಸ್ಥಿತ್ಯಂತರವನ್ನೇ ಸಂಕೇತಿಸುತ್ತವೆ.

ಕುಟುಂಬ ಕೇಂದ್ರಿತ ವರ್ಗೀಕರಣ

ದೇಸೀ ವಿದ್ವಾಂಸರು ಪಾಶ್ಚಾತ್ಯ ಸಂಸ್ಕೃತಿಗೆ ವಿರುದ್ಧವಾಗಿ ಹಾಗೂ ಪಾಶ್ಚಾತ್ಯ ವಿದ್ಯಾಭ್ಯಾಸಕ್ಕೆ ವಿರುದ್ಧವಾಗಿ ನಮ್ಮ ದೇಸೀ ಸಂಸ್ಕೃತಿ, ಸಾಹಿತ್ಯದಲ್ಲೂ ಗುಣಮಟ್ಟವಿದೆ ಎಂಬುದನ್ನು ಹೇಳುವುದಕ್ಕಾಗಿ ಕೆಲವೊಂದು ಸಂಗ್ರಹಗಳನ್ನು ಹೊರತಂದರು. ಹೀಗೆ ಸಂಗ್ರಹಿಸುವಾಗ ಒಂದು ಕುಟುಂಬಕ್ಕೆ ಸೀಮಿತವಾದ ಅಪ್ಪ. ಅಮ್ಮ, ಮಗ, ಮಗಳು, ಸೊಸೆ, ನಾದಿನಿ, ಅತ್ತೆ ಮೊದಲಾದ ಪಾತ್ರಗಳನ್ನು ವರ್ಗೀಕರಿಸಿಕೊಂಡರು. ಗರತಿಯ ಹಾಡು, ಮಲ್ಲಿಗೆದಂಡೆ, ನಾಡಪದಗಳು ಮೊದಲಾದ ಸಂಕಲನಗಳಲ್ಲಿ ಈ ರೀತಿಯ ವರ್ಗೀಕರಣ ಕ್ರಮವನ್ನು ಕಂಡುಕೊಂಡದ್ದು ಗಮನೀಯ. ಇದು ವಸಾಹತು ಪೂರ್ವ ಭಾರತದಲ್ಲಿದ್ದ ಕುಟುಂಬ ಕೇಂದ್ರಿತ ಚಿಂತನೆಯನ್ನು ಪ್ರಸ್ತುತಪಡಿಸುತ್ತದೆ.

ದೇಸೀ ವಿದ್ವಾಂಸರ ಚಾರಿತ್ರಿಕ ಅಗತ್ಯ

ದೇಸೀ ಬೌದ್ಧಿಕ ಚಾಕಚಾಕ್ಯತೆಯನ್ನು ನಿರ್ಣಯಿಸುವ ಗಾದೆ, ಒಗಟು, ಒಡಪುಗಳನ್ನು ಸಂಗ್ರಹಿಸುವ ಹಂಬಲ ದೇಸೀ ವಿದ್ವಾಂಸರಲ್ಲಿತ್ತು. ಕಿಟ್ಟೆಲ್ 1894ರಲ್ಲಿ 'ಕನ್ನಡನುಡಿ ಕೋಶ' ರಚನೆ ಮಾಡುವಾಗ ಕನ್ನಡದ ಗಾದೆಗಳನ್ನು ಕೇಳಿ ಬೆರಗಾಗಿ ಕೋಶದಲ್ಲಿ 4,000ರಷ್ಟು ಗಾದೆಗಳನ್ನು ಬಳಸಿಕೊಂಡರು. ಗಾದೆಗಳೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಕನ್ನಡ ಸಂಸ್ಕೃತಿಯನ್ನು ಪ್ರತಿನಿಧಿಸುವಂತಹಗಳು. ದೇಸೀ ಬೌದ್ಧಿಕತೆಯ ಸಂಗ್ರಹ ಹಾಗೂ ಮಂಡನೆಯು ದೇಸೀ ವಿದ್ವಾಂಸರ ಚಾರಿತ್ರಿಕ ಅಗತ್ಯವೇ ಆಗಿತ್ತು ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ.

ದೇಸೀ ವೈದ್ಯದ ಮಂಡನೆ

ಪಾಶ್ಚಾತ್ಯರ ಆಡಳಿತದಿಂದಾಗಿ ಇಂಗ್ಲಿಷ್ ಔಷಧಿ ಪ್ರಚಾರಕ್ಕೆ ಬಂತು. ಹೀಗಾಗಿ ದೇಸೀ ವೈದ್ಯರಿಗೆ ತಮ್ಮ ಸ್ಥಾನವನ್ನು ಭದ್ರಪಡಿಸುವ ಹಾಗೂ ಆ ಮೂಲಕ ಇಂಗ್ಲಿಷ್ ವೈದ್ಯಪದ್ಧತಿಯನ್ನು ನಿರಾಕರಿಸುವ ಜವಾಬ್ದಾರಿ ಒದಗಿತ್ತು. ನಾಟಿ ಔಷಧಿಯನ್ನು ಜನರಿಗೆ ಮನದಟ್ಟು ಮಾಡುವುದು ಪಂಡಿತರಿಗೆ ಅನಿವಾರ್ಯವೆಂದು ಕಂಡು ಬಂತು. ಸಂತೆ, ಜಾತ್ರೆ, ಹಬ್ಬ-ಹರಿದಿನಗಳಲ್ಲಿ ಜನರ ಮಧ್ಯೆ ಪಂಡಿತರು ನಾಟಿ ಔಷಧಿಯ ಮಹತ್ವವನ್ನು ಪ್ರಚಾರ ಮಾಡಿದರು. ಮುಖ್ಯವಾಗಿ ಹೆಂಗಸರು ಹಾಗೂ ಮಕ್ಕಳ ಕಾಯಿಲೆಗಳ ಬಗೆಗೆ ಪ್ರಚಾರಕೊಟ್ಟರು. ಈ ಅಂಶಗಳನ್ನು ಗಮನಿಸುವಾಗ ಇದೇ ಸಂದರ್ಭದಲ್ಲಿ ಪ್ರಕಟವಾದ 'ಗರತಿಯ ಹಾಡು' ಸಂಕಲನವು ಸಾರುವ ಸ್ತ್ರೀ ನೈತಿಕತೆಯನ್ನು ವೈದ್ಯ ಸಂಕಲನಗಳೂ ಹೊಂದಿದ್ದವು. ಹೀಗೆ ಊರಿಗೊಬ್ಬ ಹಳ್ಳಿವೈದ್ಯನಲ್ಲಿದ್ದ ಅನುಭವವು ಪುಸ್ತಕ ರೂಪದಲ್ಲಿ ಅಕ್ಷರಸ್ಥರಿಗೆ ಬೆಳಕಿಗೆ ಬಂತು. 1930ರ ಸಂದರ್ಭಕ್ಕೆ ಮೂರು ವೈದ್ಯ ಸಂಗ್ರಹಗಳು ಪ್ರಕಟವಾಗಿದ್ದುವು ಎಂಬ ವಿಚಾರ ಈ ನಿಟ್ಟಿನಲ್ಲಿ ಅತ್ಯಂತ ಮಹತ್ತ್ವದ್ದಾಗಿದೆ.

ಪ್ರಾದೇಶಿಕ ಅಸಮತೋಲನ

ಕರ್ನಾಟಕದಲ್ಲಿ ಜಾನಪದ ಸಂಗ್ರಹಕಾರ್ಯ ಅತೀ ಹೆಚ್ಚು ಕಂಡುಬರುವುದು ಉತ್ತರಕರ್ನಾಟಕದಲ್ಲಿ, ನಂತರ ಕರಾವಳಿ ಕರ್ನಾಟಕದಲ್ಲಿ, ಕೊನೆಯದಾಗಿ ದಕ್ಷಿಣ ಕರ್ನಾಟಕ ಭಾಗದಲ್ಲಿ. ಯಾಕೆ ಉತ್ತರ ಕರ್ನಾಟಕ ಭಾಗದಲ್ಲೇ ಹೆಚ್ಚು ಸಂಗ್ರಹಕಾರ್ಯ ನಡೆದುವೆಂಬುದಕ್ಕೆ ಕಾರಣಗಳಿವೆ. ಒಂದು, ಉತ್ತರ ಕರ್ನಾಟಕವು ಮುಂಬೈ ಕರ್ನಾಟಕ ಆಡಳಿತಕ್ಕೆ ಒಳಪಟ್ಟಿತ್ತು. ಎರಡು, ರಾಷ್ಟ್ರೀಯ ಹೋರಾಟದ ನಾಯಕ ಸಂಘಟನೆ, ಕರ್ನಾಟಕ ಏಕೀಕರಣದ ಪ್ರಭಾವ ಈ ಭಾಗದಲ್ಲಿ ಹೆಚ್ಚಾದದ್ದು. ಇದೇ ಸಂದರ್ಭದಲ್ಲಿ

ಗಳಗನಾಥರು, ಶಾಂತರಸರು, ಆಲೂರು ವೆಂಕಟರಾಯರು, ರೈಸ್ ಮೊದಲಾದವರು 1850ರ ಕಾಲಘಟ್ಟದಲ್ಲಿ ಇದೇ ಭಾಗದ ಇಂಗ್ಲಿಷ್ ಆಡಳಿತಾಧಿಕಾರಿಗಳಾಗಿದ್ದರು. ನಂತರ ಕರಾವಳಿ ಕರ್ನಾಟಕದಲ್ಲಿ ಸಂಗ್ರಹಗಳ ಪ್ರಾಮುಖ್ಯತೆ ಕಂಡು ಬರುತ್ತದೆ. ಪಾಶ್ಚಾತ್ಯ ವಿದ್ವಾಂಸರು, ಕ್ರೈಸ್ತಮತ ಪ್ರಚಾರಕರು ಕರ್ನಾಟಕದ ಕರಾವಳಿಯಲ್ಲಿ 1880ರ ಕಾಲಘಟ್ಟದಲ್ಲಿ 'ತುಳುವ್ಯಾಕರಣ', ತುಳುವಿನಲ್ಲಿ 'ಮತ್ತಾಯನ ಸುವಾರ್ತೆ' ಅನುವಾದಗಳನ್ನು ಪ್ರಕಟಿಸಿದರು. ಇದೇ ಸಂದರ್ಭದಲ್ಲಿ ಮೆನ್ನರ್, ಬ್ರಿಗೆಲ್, ಮೊಗ್ಲಿಂಗ್ ಮುಂತಾದವರು ನುಡಿಕೋಶಕ್ಕಾಗಿ ತುಳುಗಾದೆ, ಪಾಡ್ದನಗಳ ಸಂಗ್ರಹ ಕಾರ್ಯಕ್ಕೆ ತೊಡಗಿದರು. ಇದೇ ಕಾಲಘಟ್ಟದಲ್ಲಿ ತುಳುನಾಡಿನ ಭೂತಾರಾಧನೆ ಕುರಿತು ನಡೆದ ಚರ್ಚೆಗಳು 'ಇಂಡಿಯನ್ ಅಂಟಿಕ್ವೇರಿ' ಪತ್ರಿಕೆಯಲ್ಲಿ ಪ್ರಕಟವಾದುವು. ವಿದೇಶದಿಂದ ಬರುತ್ತಿದ್ದ ವಿದ್ವಾಂಸರೆಲ್ಲ ಕರಾವಳಿಯ ಮಂಗಳೂರಿಗೆ ಮೊದಲು ಬಂದಿಳಿಯುತ್ತಿದ್ದರು. ಭೌಗೋಳಿಕವಾಗಿ ಸಂಪದ್ಭರಿತವಾದ ಕೊಡಗು, ಮಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ಕರ್ನಾಟಕದ ಇತರ ಭಾಗಗಳಲ್ಲಿ ತಮ್ಮ ಮತಪ್ರಚಾರ, ಮುದ್ರಣಯಂತ್ರ ಕಾರ್ಯ ಚಟುವಟಿಕೆಗಳನ್ನು ಆರಂಭಿಸಿದರು. ಬಹುಶಃ ಮಂಗಳೂರು ಹಾಗೂ ಕೊಡಗಿನ ಭೌಗೋಳಿಕ ವಾತಾವರಣದಲ್ಲಿ ಸಮತೋಲನವಿದ್ದುದರಿಂದ ಆ ಪರಿಸರವನ್ನು ಕೇಂದ್ರವಾಗಿರಿಸಿದ್ದಿರಬೇಕು. ಇದೇ ಕಾಲಘಟ್ಟದಲ್ಲಿ ದಕ್ಷಿಣಕರ್ನಾಟಕದಲ್ಲಿ ಉತ್ತರ ಕರ್ನಾಟಕ ಹಾಗೂ ಕರಾವಳಿ ಕರ್ನಾಟಕಕ್ಕಿಂತ ಭಿನ್ನವಾದ ವಾತಾವರಣ ನಿರ್ಮಾಣವಾಗಿತ್ತು. ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟ ಪ್ರದೇಶದಲ್ಲಿ ಬ್ರಿಟಿಷರ ವಿರುದ್ಧ ಅಥವಾ ಮತಾಂತರದ ವಿರುದ್ಧ ಅಥವಾ ಸಂಸ್ಕೃತಿಯನ್ನು ಪುನರ್‌ರಚಿಸುವ ಅವಶ್ಯಕತೆ ನಿಧಾನವಾಗಿ ಕಂಡು ಬಂತು. ಈಸ್ಟ್ ಇಂಡಿಯಾ ಕಂಪನಿಯ ವಸಾಹತು ಆಡಳಿತದ ಆಕ್ರಮಣ ನಿಧಾನವಾಗಿ ಪ್ರಬಲವಾಗುವುದರ ಜೊತೆಗೆ ಮೈಸೂರರಸರು ತಮ್ಮ ಪ್ರಾಬಲ್ಯವನ್ನು ಕಳಕೊಂಡರು. ಈ ಪರಿಣಾಮದಿಂದ 1920ರ ನಂತರ ದಕ್ಷಿಣ ಕರ್ನಾಟಕ ಭಾಗದಲ್ಲಿ ಸಂಗ್ರಹಣೆಯ ಕೆಲಸ ಆರಂಭವಾಯಿತು. ಆದರೂ ಅಷ್ಟೇನು ಹೇಳಿಕೊಳ್ಳುವಂತಹ ಕೆಲಸವಾದದ್ದು ವಿರಳ.

ಪಾಶ್ಚಾತ್ಯ ಹಾಗೂ ದೇಸೀಯ ವಿದ್ವಾಂಸರ ಆಸಕ್ತಿಗಳಲ್ಲಿನ ಭಿನ್ನತೆಗಳು

ಈಗಾಗಲೇ ಸ್ಪಷ್ಟಪಡಿಸಿರುವಂತೆ ವಸಾಹತು ಆಡಳಿತ ಸಂದರ್ಭದಲ್ಲಿ ಪಾಶ್ಚಾತ್ಯ ವಿದ್ವಾಂಸರು ಹಾಗೂ ದೇಸೀಯ ವಿದ್ವಾಂಸರು ಬಹುಮಟ್ಟಿಗೆ ಜೊತೆಜೊತೆಯಾಗಿಯೇ ಕೆಲಸ ಮಾಡಿದರು. ಇವರು ನಡೆಸಿದ ಕೆಲಸಗಳನ್ನು ಒಟ್ಟಾರೆಯಾಗಿ ಗಮನಿಸಿದಾಗ ಪಾಶ್ಚಾತ್ಯ ವಿದ್ವಾಂಸರು ಕನ್ನಡ ಜಾನಪದದ ಧಾರ್ಮಿಕ ವಿವರಗಳತ್ತಲೂ ದೇಸೀ ವಿದ್ವಾಂಸರು ಜಾನಪದದ ಲೌಕಿಕ ವಿವರಗಳತ್ತಲೂ ವಾಲಿಕೊಂಡಿರುವುದು ಎದ್ದು ಕಾಣುತ್ತದೆ. ವ್ಯತ್ಯಾಸ ಯಾಕೆ ಕಾಣಿಸಿಕೊಂಡಿತು ಎಂದು ವಿಶ್ಲೇಷಿಸಿಕೊಳ್ಳುವುದು ಅಗತ್ಯ.

ಭಾರತಕ್ಕೆ ಯುರೋಪಿಯನ್ನರು ಸಮುದ್ರಮಾರ್ಗವಾಗಿ ಪ್ರವೇಶ ಮಾಡುವ ಹೊತ್ತಿಗೆ (16ನೆಯ ಶತಮಾನ) ಯುರೋಪ್ ಬಹುಮಟ್ಟಿಗೆ ಆಧುನೀಕರಣಕ್ಕೆ ಒಳಗಾಗಿತ್ತು. ಯುರೋಪಿಯನ್ನರು ಜಗತ್ತಿನ ಬೇರೆಬೇರೆ ಕಡೆ ಸ್ಥಾಪಿಸಿದ ವಸಾಹತುಗಳಿಂದ ಹೇರಳವಾದ ಸಂಪತ್ತನ್ನು ತಮ್ಮ ದೇಶಕ್ಕೆ ಕೊಂಡು ತಂದದ್ದರಿಂದ ಯುರೋಪಿನಾದ್ಯಂತ ತೀವ್ರಗತಿಯಲ್ಲಿ ಕೈಗಾರಿಕೆಗಳು ಬೆಳೆದವು. ಇದರೊಂದಿಗೆ ವಿಜ್ಞಾನವು ಜನಪ್ರಿಯವಾಗಿ ಯುರೋಪಿನ ಹಳೆಯ ನಂಬಿಕೆಗಳೆಲ್ಲ ಕುಸಿದವು. ಅದರ ಜಾಗದಲ್ಲಿ ವೈಚಾರಿಕತೆ ಬೆಳೆಯಿತು. ಸಮಾಜದ ಆರ್ಥಿಕ ಪ್ರಗತಿ ತಂದಿತ್ತ ಭೌತವಾದಿ ಚಿಂತನೆಗಳು ಎಷ್ಟು ಪ್ರಖರವಾಗಿ ಬೆಳೆದುವೆಂದರೆ ಯುರೋಪಿಯನ್ನರಿಗೆ ಅಂಥ ವಾದಗಳಿಂದ ಬಿಡುಗಡೆ ಬೇಕಾಗಿತ್ತು. ಕಡಲನ್ನು ದಾಟಿ ಭಾರತಕ್ಕೆ ಬಂದ ಯುರೋಪಿಯನ್ ಚಿಂತಕರಿಗೆ ಇಲ್ಲಿನ ಅಧ್ಯಾತ್ಮ ಇಷ್ಟವಾಗುವುದಕ್ಕೆ ಕಾರಣ ಯುರೋಪಿನ ಚರಿತ್ರೆಯಲ್ಲಾದ ಆರ್ಥಿಕ ಬದಲಾವಣೆ. ಹೀಗಾಗಿ ಒಬ್ಬ ದೇಸೀ ವಿದ್ವಾಂಸನಿಗಿಂತಲೂ ಹೆಚ್ಚಾಗಿ ಪಾಶ್ಚಾತ್ಯ ವಿದ್ವಾಂಸರು ಜಾನಪದದ ಧಾರ್ಮಿಕ ಆವರಣಗಳನ್ನು ಪ್ರವೇಶಿಸಿದರು. ಸಹಜವಾಗಿಯೇ ಅದನ್ನು ಕೊಂಡಾಡಿದರು. ಹೀಗೆ ಮಾಡುವುದರ ಮೂಲಕ ಯುರೋಪಿನಲ್ಲಿ ಧರ್ಮ ಪ್ರಚಾರಕರಾಗಿದ್ದರು. ಹಿಂದೂಧರ್ಮದ ಸ್ಥಾನದಲ್ಲಿ ಕ್ರಿಶ್ಚಿಯಾನಿಟಿಯನ್ನು ನಿಲ್ಲಿಸುವುದು ಅವರ ಉದ್ದೇಶವಾಗಿತ್ತು. ಇದಕ್ಕಾಗಿ ಮತಾಂತರವೇ ಮೊದಲಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಸಂದರ್ಭದಲ್ಲಿ 'ಹಿಂದೂಧರ್ಮ'ದ ರೀತಿ ನೀತಿಗಳನ್ನು ಆ ಧರ್ಮದ ಜಾನಪದದ ಮೂಲಕ ಅರ್ಥ ಮಾಡಿಕೊಳ್ಳುವ ಪ್ರಯತ್ನ ಅವರದಾಗಿತ್ತು. ಕಿಟ್ಟೆಲ್ ಗ್ರಾಮದೇವತೆಯ ಹಬ್ಬವೊಂದನ್ನು ವರ್ಣಿಸುವುದು, ವಾಲ್‌ಹೌಸ್ ಭೂತಾರಾಧನೆಯನ್ನು ವಿವರಿಸುವುದು ಈ ಹಿನ್ನೆಲೆಯಲ್ಲಿಯೆ. ಆದರೆ ದೇಸೀ ವಿದ್ವಾಂಸರಿಗೆ ಇಂಥ ಹಂಗೇನಿರಲಿಲ್ಲ. ಧಾರ್ಮಿಕತೆ ಅವರ ಜೀವನದ ಅನಿವಾರ್ಯ ಅಂಗವೇ ಆಗಿದ್ದುದರಿಂದ ಅದರ ಬಗ್ಗೆ ಚಿಂತನೆ ನಡೆಸುವ ಅಗತ್ಯ ಅವರಿಗೆ ಬೀಳಲಿಲ್ಲ. ಅದರ ಬದಲು ಅಂತಹ ಆವರಣವನ್ನು ಭೇದಿಸಿ ಅದರಿಂದ ಹೊರಬಂದು ಲೌಕಿಕ ಲೋಕವನ್ನು ತಿಳಿಯಬೇಕಾಗಿತ್ತು. ವಸಾಹತು ವೈಚಾರಿಕತೆಯು ಇಂತಹ ಲೌಕಿಕ ನೋಟವೊಂದನ್ನು ವಿದ್ವಾಂಸರಿಗೆ ದಯಪಾಲಿಸಿತು. ಇದರಿಂದಾಗಿ ದೇಸೀ ವಿದ್ವಾಂಸರು ಪ್ರೀತಿ ಪ್ರೇಮಗಳಂತಹ ಲೌಕಿಕ ವಿವರಗಳತ್ತ ಹೆಚ್ಚು ವಾಲಿಕೊಂಡರು.

ಸಾಹಿತ್ಯ ಕೇಂದ್ರಿತ ಚರ್ಚೆಗಳು

ಮೊದಲಘಟ್ಟದಲ್ಲಿ ಸಂಗ್ರಹಣೆಗೊಂಡ ಹಾಡು, ಲಾವಣಿ, ಗಾದೆ, ಒಗಟು, ಕಥೆಗಳ ಸಂಕಲನಗಳನ್ನು ಗಮನದಲ್ಲಿರಿಸಿಕೊಂಡು ಹಲವು ವಿಮರ್ಶಾ ಲೇಖನಗಳು ಪ್ರಕಟವಾದುವು. ಈ ವಿಮರ್ಶೆಗಳನೇಕವು ಸಾಹಿತ್ಯ ಕೇಂದ್ರಿತವುಳ್ಳವುಗಳು. ರೊಮ್ಯಾಂಟಿಕ್

ನಿಲುವುಳ್ಳವುಗಳು ಹಾಗೂ ವಿವರಗಳ ಹಿಂದಿನ ಸೈದ್ಧಾಂತಿಕ ಗ್ರಹಿಕೆಯನ್ನು ಪರಿಶೀಲಿಸಲಾರದ ಸ್ಥಿತಿಯಲ್ಲಿ ರಚಿತವಾದವುಗಳಾಗಿವೆ.

ಜಾನಪದ ಸಂಗ್ರಹಗಳ ಬಗೆಗೆ ವಿಮರ್ಶೆ ಬರೆಯದವರೆಲ್ಲರೂ ಸಾಹಿತ್ಯದ ವಿದ್ವಾಂಸರುಗಳು. ಬಿ.ಎಂ.ಶ್ರೀ., ತೀ.ನಂ.ಶ್ರೀ., ಮಾಸ್ತಿ, ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ ಮೊದಲಾದವರೆಲ್ಲರೂ ಕನ್ನಡ ಸಾಹಿತ್ಯವನ್ನು ಒಂದಲ್ಲ ಒಂದು ನೆಲೆಯಲ್ಲಿ ಕನ್ನಡ ಜಾನಪದದ ಮೂಲಕ ನಿರ್ವಚಿಸಿಕೊಂಡಿದ್ದಾರೆ. ಹಾಗಾಗಿ ಕನ್ನಡ ಜನಪದ ಗೀತೆಗಳ ಹಾಗೂ ಜಾನಪದದ ಇನ್ನಿತರ ಪ್ರಕಾರಗಳ ಬಗೆಗೆ ರೊಮ್ಯಾಂಟಿಕ್ ನಿಲುವುಗಳನ್ನು ಹೊಂದಿದ್ದರು. ಅವರಿಗೆ ಕನ್ನಡ ಜಾನಪದದ ಸಾಂಸ್ಕೃತಿಕ ಮಹತ್ತ್ವವನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ.

ಹಾಡುವಿಕೆಗೆ ಮಾರು ಹೋದ ಇವರಿಗೆ ಗರತಿಯ ಹಾಡಿನಲ್ಲಿ ಚಿತ್ರಿತಳಾದ 'ಗರತಿ'ಯ ಬಗೆಗೆ ಒಳನೋಟ ಕೊಡುವುದಕ್ಕಾಗಲಿ, ಆಕೆಯ ಬದುಕಿನ ನಿಜ ಸಮಸ್ಯೆಗಳನ್ನು ಅರ್ಥೈಸುವುದಕ್ಕಾಗಲೀ ಸಾಧ್ಯ ಆಗಲಿಲ್ಲ. ಜೀವನ ಸಂಗೀತ ಸಂಕಲನದ ಲಾವಣಿಗಳ ಶೃಂಗಾರಕ್ಕೆ ವಿದ್ವಾಂಸರು ಮನಸೋತರು. ಈ ಹಿನ್ನೆಲೆಯಲ್ಲಿಯೇ ಭಾಗೀರಥಿ ಕೆರೆಗೆ ಹಾರವಾದಗಲೂ ವಿದ್ವಾಂಸರಿಗೆ ಸಂಭ್ರಮಿಸಲು ಸಾಧ್ಯವಾಯಿತು. ಗರತಿ ಹೊಸ್ತಿಲು ದಾಟಲಾರದಾದಳು. ಅಸಲಜಾತಿ ಹೆಣ್ಣು ಸೂಳೆಯಾಗೇ ಉಳಿದಳು. ಈ ಬಗೆಯ ದೃಷ್ಟಿಕೋನವು ಪುರುಷಕೇಂದ್ರಿತವಾಗಿರುವುದು ಕೂಡಾ ಮುಖ್ಯವಾದ ವಿಚಾರವಾಗಿದೆ. ಮೊದಲ ಹಂತದಲ್ಲಿ ಜಾನಪದದ ಬಗೆಗೆ ಪ್ರಕಟವಾದ ಲೇಖನಗಳು ಅವುಗಳ ಸಾಹಿತ್ಯಿಕ ಮಹತ್ವವನ್ನು ಪ್ರಕಟಿಸುವುದಕ್ಕೆ ಮಾತ್ರ ಸೀಮಿತವಾಗಿದೆ ಎಂಬುದು ಮುಖ್ಯವಾಗಿದೆ.

ಸಾಂದರ್ಭಿಕ ವಿವರಗಳ ಗೈರುಹಾಜರಿ

ಮೊದಲಘಟ್ಟದಲ್ಲಿ ಸಂಗ್ರಹಗೊಂಡ ಹಾಡುಗಳಲ್ಲಿ ಸಾಂದರ್ಭಿಕ ವಿವರಗಳಿಲ್ಲ. ಪಾಶ್ಚಾತ್ಯ ವಿದ್ವಾಂಸ ಫ್ಲೀಟ್ ಸಂಗ್ರಹಿಸಿದ ಲಾವಣಿಗಳಲ್ಲಿ ಸ್ವಲ್ಪಮಟ್ಟಿಗೆ ಸಾಂದರ್ಭಿಕ ವಿವರಗಳಿವೆ. ದೇಸೀ ವಿದ್ವಾಂಸರು ಸಂಗ್ರಹಿಸಿದ ಜೀವನ ಸಂಗೀತ ಲಾವಣಿ ಸಂಗ್ರಹದಲ್ಲಿ ಹಾಡಿದವರ ಹೆಸರುಗಳನ್ನು ಕೊಡಲಾಗಿದೆಯಾದರೂ ಅವುಗಳ ಬಗೆಗೆ ನಿಖರವಾದ ತೀರ್ಮಾನ ಕಷ್ಟ. ಆಧುನಿಕ ಕಾಲಘಟ್ಟದಲ್ಲಿ ಜಾನಪದವನ್ನು ಸಂಗ್ರಹಿಸುವಾಗ ಕಾಲ, ದೇಶ, ವ್ಯಕ್ತಿ, ಸ್ಥಳಗಳ ವಿವರಗಳೊಂದಿಗೆ ನೋಡಲಾಗುತ್ತಿದೆ. ಈ ಅರ್ಥದಲ್ಲಿ ಆಧುನಿಕ ಅಧ್ಯಯನಕಾರರಿಗೆ ಸಂಗ್ರಹಗಳು ಸೀಮಿತವಾಗಿ ಮಾತ್ರ ಸಹಕರಿಸುತ್ತವೆ.

ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟ

ಮೊದಲಘಟ್ಟದ ಜಾನಪದ ಕೆಲಸಗಳು ತಮ್ಮದೇ ಆದ ರೀತಿಯಲ್ಲಿ ವಿಶಿಷ್ಟವಾಗಿವೆ. ಈಗ ಕಳೆದ ಶತಮಾನದ ಕೊನೆಯಲ್ಲಿ ಹಾಗೂ ಈ ಶತಮಾನದ ಆರಂಭದಲ್ಲಿ ನಿಂತು ಕಳೆದ ಶತಮಾನದ ಪೂರ್ವಾರ್ಧ ಮತ್ತು ಅದಕ್ಕಿಂತ ಹಿಂದಿನ ಅವಧಿಯಲ್ಲಿ ನಡೆದ ಜಾನಪದ ಕೆಲಸಗಳನ್ನು ಅವಲೋಕಿಸಿದಾಗ ಅವುಗಳಲ್ಲಿ ಸಾಕಷ್ಟು ದೋಷಗಳು ಕಂಡುಬರುವುದು ಸಹಜ. ಆಧುನಿಕತೆ ಹಾಗೂ ತಂತ್ರಜ್ಞಾನ ನಮ್ಮ ಹಳ್ಳಿಗಳನ್ನು ಇನ್ನೂ ಪೂರ್ಣವಾಗಿ ಆಕ್ರಮಿಸಿಕೊಳ್ಳದ ಸಂದರ್ಭ ಆದಾದ್ದರಿಂದ ಆ ಕಾಲದ ಸಂಗ್ರಹಗಳು ಕೆಲವು ಮಿತಿಗೆ ಒಳಗಾಗುವುದು ಅನಿವಾರ್ಯವಾಗಿತ್ತು. ವಸಾಹತು ಆಡಳಿತ ಹಾಗೂ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಆ ಕಾಲದ ವಿದ್ವಾಂಸರು ಕೆಲಸ ಮಾಡುತ್ತಿದ್ದುದರಿಂದ ಅವರ ಕೆಲಸಗಳು ಕನ್ನಡ ನವೋದಯದ ನೈತಿಕತೆಗೆ ಬದ್ಧವಾಗದೆ ಇರಲು ಸಾಧ್ಯವಿರಲಿಲ್ಲ. ಜಾನಪದದ ಬಗೆಗೆ ಖಚಿತ ತಿಳುವಳಿಕೆ ಮೂಡುವ ಮುನ್ನವೇ ಯಾವ ಸಂಘ ಸಂಸ್ಥೆಗಳ ಸಹಾಯವಿಲ್ಲದೆಯೇ ಆ ಕಾಲದ ವಿದ್ವಾಂಸರು ಮಾಡಿದ ಕೆಲಸಗಳ ವ್ಯಾಪ್ತಿಯನ್ನು ಗಮನಿಸಿದರೆ ಇಂದು ನಮಗೆ ಆಶ್ಚರ್ಯವಾಗುತ್ತದೆ. ದೇಸೀ ಸಂಸ್ಕೃತಿಯ ಬಗೆಗೆ ವಿದ್ವಾಂಸರು ತೋರಿದ ಒಲವು ಇಂದಿಗೂ ನಮಗೆ ಮಹತ್ತ್ವದಾಗಿಯೇ ಕಾಣುತ್ತದೆ. ಕನ್ನಡ ಜಾನಪದದ ಮೇಲೆ ಪ್ರೀತಿ ಹಾಗೂ ಗೌರವ ಹುಟ್ಟುವಂತೆ ಅವರೆಲ್ಲರೂ ಕೆಲಸ ಮಾಡಿದ್ದಾರೆ. ಬೇರೆ ಬೇರೆ ಕಾರಣಗಳಿಗೆ ನಿರಾಕರಣೆಗೆ ಒಳಗಾದ ಕ್ಷೇತ್ರವೊಂದರಲ್ಲಿ ಕೆಲಸ ಮಾಡುವುದರ ಮೂಲಕ ಕನ್ನಡ ಸಂಸ್ಕೃತಿಗೆ ಹೊಸ ಆಯಾಮವನ್ನು ನೀಡಿದ್ದಾರೆ. ಹಾಗೆ ಮಾಡುತ್ತಲೇ ಪಸರಿಸುತ್ತಿದ್ದ ಪಾಶ್ಚಾತ್ಯೀಕರಣಕ್ಕೆ ತಮ್ಮ ವಿರೋಧವನ್ನು ಸೂಚಿಸಿದ್ದಾರೆ. ಇಂದಿಗೂ ನಾವು ಮೆಲುಕು ಹಾಕಬಹುದಾದ, ಚರ್ಚಿಸಬಹುದಾದ, ಗಂಭೀರವಾಗಿ ವಿಶ್ಲೇಷಿಸಿಕೊಳ್ಳಬಹುದಾದ ಅನೇಕ ಪಠ್ಯಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ತಾವು ಬದುಕಿದ ಕಾಲಘಟ್ಟದ ಅವಶ್ಯಕತೆಗಳನ್ನು ಬಹಳ ಜವಾಬ್ದಾರಿಯಿಂದ ಅರ್ಥಮಾಡಿಕೊಂಡು ಅದಕ್ಕೆ ಪ್ರತಿಕ್ರಿಯಿಸಿದ ಮೊದಲ ಘಟ್ಟದ ವಿದ್ವಾಂಸರು ಕನ್ನಡ ಜಾನಪದ ಅಧ್ಯಯನಕ್ಕೆ ಸುಭದ್ರವಾದ ಅಡಿಗಲ್ಲನ್ನು ಹಾಕಿದ್ದಾರೆ.

*****

ಭಾಗ 6

ಫಲಶ್ರುತಿ

ಭಾಗ 6 :

'ಕನ್ನಡ ಜಾನಪದ ಅಧ್ಯಯನದ ಮೊದಲ ಘಟ್ಟ' (1800–1950)ದ ಕುರಿತು ಬೇರೆಬೇರೆ ಹಂತಗಳಲ್ಲಿ ಚರ್ಚೆಯನ್ನು ವಿಸ್ತರಿಸಿ ನೋಡಿದಾಗ ಕೆಳಗಿನ ನಿರ್ಧಾರಗಳನ್ನು ಕಂಡುಕೊಳ್ಳಬಹುದು.

ಮೊದಲ ಭಾಗದಲ್ಲಿ ಪ್ರಸ್ತಾವನೆ ಹಾಗೂ ಉದ್ದೇಶಗಳ ವಿವರ ನೀಡಲಾಗಿದೆ. ಈ ಭಾಗದಲ್ಲಿ ಸೈದ್ಧಾಂತಿಕ ನೆಲೆಗಳ ವಿಶ್ಲೇಷಣೆ ನಡೆಸಲಾಗಿದೆ. ಈ ಅರ್ಥದಲ್ಲಿ ಒಂದು ಕಡೆ ಮಾಹಿತಿಗಳ ಸೈದ್ಧಾಂತಿಕ ವಿಶ್ಲೇಷಣೆ ನಡೆಸಲು ಬದ್ಧವಾಗಿದೆ. ಮಾಹಿತಿಗಳ ಸಂಗ್ರಹವು ವ್ಯಾಪಕವಾದ ಕ್ಷೇತ್ರಕಾರ್ಯದ ಸಹಾಯದಿಂದ ನಡೆದರೆ ಅವುಗಳ ಅಧ್ಯಯನವು ಸಮಕಾಲೀನ ಜ್ಞಾನಶಾಖೆಗಳು ಕೊಡಮಾಡಿದ ತಿಳುವಳಿಕೆಯನ್ನು ಆಧರಿಸಿ ನಡೆದಿದೆ. ಅಂದರೆ ಅಧ್ಯಯನದಲ್ಲಿ ಏನು ನಡೆದಿದೆಯೆಂಬುದನ್ನು ಮೊದಲು ವಿವರಿಸಿಕೊಳ್ಳಲಾಗಿದೆ. ಅನಂತರದ ಹಂತದಲ್ಲಿ ಅವು ಯಾಕೆ ನಡೆದಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಶತಮಾನದ ಪ್ರಮುಖ ಅಧ್ಯಯನಗಳ ಕಾರ್ಯ ಹಾಗೂ ಕಾರಣಗಳ ನಡುವಿನ ವಿಶ್ಲೇಷಣೆಗೆ ಒತ್ತು ಕೊಡುತ್ತಿರುವುದರಿಂದ ಅಧ್ಯಯನದ ವಿಧಾನಗಳ ಮಿತಿಗಳ ಬಗ್ಗೆಯೂ ಚರ್ಚಿಸಲಾಗಿದೆ.

ಎರಡನೆಯ ಭಾಗದಲ್ಲಿ ಮೊದಲಘಟ್ಟದ ಕನ್ನಡ ಜಾನಪದ ಅಧ್ಯಯನದ ಸಾಂಸ್ಕೃತಿಕ ಹಿನ್ನೆಲೆಯ ಸುದೀರ್ಘ ಚರ್ಚೆಯಿದೆ. ಇಂಥ ಚರ್ಚೆಗೆ ಬೇಕಾದ ಪ್ರೇರಣೆಗಳನ್ನು ಸಾಹಿತ್ಯಿಕ ಅಧ್ಯಯನದಿಂದ ಪಡೆದುಕೊಳ್ಳಲಾಗಿದೆ. 'ಮೊದಲ ಘಟ್ಟ' ಎಂದು ಭಾವಿಸಲಾದ 1800–1950ರ ನಡುವಣ ಅವಧಿಯು ನಾಡು ತೀವ್ರಗತಿಯಲ್ಲಿ ವಸಾಹತೀಕರಣಕ್ಕೆ ಒಳಪಟ್ಟ ಕಾಲವಾಗಿದೆ. ಹಾಗೂ ಈ ಕಾರಣಕ್ಕೆ ರಾಷ್ಟ್ರೀಯ ಹೋರಾಟ ಹುಟ್ಟಿಕೊಂಡು ಜನರು ಸಾಂಸ್ಕೃತಿಕ ಅನನ್ಯತೆಯ ಹುಡುಕಾಟಕ್ಕೆ ತೊಡಗಿದ ಸಂದರ್ಭವಾಗಿದೆ. ಚಾರಿತ್ರಿಕ ಸಂದರ್ಭವು ಜಾನಪದ ಸಂಗ್ರಹ ಅಧ್ಯಯನಗಳ ಮೇಲೆ ನಿರ್ಣಾಯಕವಾದ ಪರಿಣಾಮವನ್ನು ಬೀರಿರಲೇಬೇಕು ಎಂಬ ಪ್ರಮೇಯವನ್ನು ಆಧರಿಸಿ ಅಂಥ ಸ್ಥಿತಿಯನ್ನು ವಿಶ್ಲೇಷಿಸಲಾಗಿದೆ. ಬದಲಾದ ಚಾರಿತ್ರಿಕ ಸನ್ನಿವೇಶವೊಂದನ್ನು ಎದುರಿಸಲು ಜಾನಪದ ವಿದ್ವಾಂಸರುಗಳು ಯಾವ ಬಗೆಯ ಪ್ರಯತ್ನಗಳಲ್ಲಿ ತಲ್ಲೀನರಾದರು ಎಂಬ ಸೂಕ್ಷ್ಮವಾದ ಪರಿಶೀಲನೆ ನಡೆಸಲಾಗಿದೆ. ಪರಿಶೀಲನೆಯ ಪರಿಣಾಮವಾಗಿ ಕರ್ನಾಟಕದ ಉದೀಯಮಾನ ಮಧ್ಯಮವರ್ಗದ ವೈಚಾರಿಕತೆಯೇ ಜಾನಪದ ಅಧ್ಯಯನವನ್ನು ನಿಯಂತ್ರಿಸಿದೆ ಎಂಬ ನಿರ್ಣಯವು ಈ ಶತಮಾನದ ಮೊದಲ ಭಾಗದಲ್ಲಿ ಕರ್ನಾಟಕದ ವಿದ್ಯಾವಂತ ವರ್ಗವು ತನ್ನ ಸಾಂಸ್ಕೃತಿಕ ಅನನ್ಯತೆಯ ಹುಡುಕಾಟಕ್ಕಾಗಿ ನಡೆಸಿದ ಪ್ರಯತ್ನವೊಂದರ ಪರಿಶೀಲನೆಯೇ ಆಗಿದೆ.

ಮೂರನೆಯ ಭಾಗದಲ್ಲಿ ಸ್ವಾತಂತ್ರ್ಯಪೂರ್ವ ಜಾನಪದ ಸಂಗ್ರಹಗಳ ವಿಮರ್ಶಾತ್ಮಕ ಪರಿಶೀಲನೆಯಿದೆ. ಈ ವರೆಗೆ ನಡೆದ ಅಧ್ಯಯನಗಳು ಅಸಮಗ್ರವೂ, ಅಸಮರ್ಪಕವೂ ಆಗಿರುವುದನ್ನು ಸ್ಥಾಪಿಸಿ ಅಧ್ಯಯನದ ಅಗತ್ಯವನ್ನು ಮನಗಾಣಿಸಲಾಗಿದೆ. ಅನಂತರ ಸ್ವಾತಂತ್ರ್ಯಪೂರ್ವಕಾಲ ಘಟ್ಟದಲ್ಲಿ ಪ್ರಕಟವಾದ ಸಂಗ್ರಹಗಳನ್ನು ಅವುಗಳ ವಸ್ತು ರೂಪವನ್ನು ಗಮನದಲ್ಲಿರಿಸಿಕೊಂಡು 1. ಜಾನಪದ ಸಾಹಿತ್ಯ ಸಂಗ್ರಹಗಳು, 2. ಭೌತಿಕ ಜಾನಪದದ ಕುರಿತಾದ ಸಂಗ್ರಹಗಳು, 3. ಸಾಮಾಜಿಕ ಆಚರಣೆಗಳ ಕುರಿತಾದ ಸಂಗ್ರಹಗಳು ಹಾಗೂ 4. ಪ್ರದರ್ಶನ ಕಲೆಗಳ ಕುರಿತಾದ ಸಂಗ್ರಹಗಳೆಂದು ವರ್ಗೀಕರಿಸಲಾಗಿದೆ. ಹೀಗೆ ಕನ್ನಡ ಜಾನಪದ ಯಾವ ಪ್ರಕಾರದಲ್ಲಿ ಹೆಚ್ಚು ಕೆಲಸ ನಡೆದಿದೆ ಹಾಗೂ ಯಾವ ಪ್ರಕಾರದಲ್ಲಿ ಕಡಿಮೆ ಕೆಲಸ ನಡೆದಿದೆಯೆಂದು ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಅಧ್ಯಯನಕ್ಕೆ ಲಭ್ಯವಿರುವ ಮಾಹಿತಿಗಳನ್ನು ಪೂರ್ತಿಯಾಗಿ ವಿಂಗಡಿಸಿಕೊಳ್ಳಲಾಗಿದೆ.

ನಾಲ್ಕನೆಯ ಭಾಗದಲ್ಲಿ ಸುಮಾರು 70 ಕೃತಿಗಳ ಸಂಕ್ಷಿಪ್ತ ಪರಿಚಯವಿದೆ. ಪ್ರತಿಯೊಂದು ಸಂಗ್ರಹಗಳ ಉದ್ದೇಶ, ವಸ್ತು, ವರ್ಗೀಕರಣ ವಿಧಾನ, ಮುನ್ನುಡಿ ಹಿನ್ನುಡಿಗಳಲ್ಲಿ ಸಂಪಾದಕರ, ಇತರರ ಮಾತುಗಳನ್ನು ವಿವರವಾಗಿ ಗಮನಿಸಲಾಗಿದೆ. ಆಯಾ ಸಂಗ್ರಾಹಕರ

ಮಾತುಗಳನ್ನು ಉದ್ಧರಿಸುವುದರ ಜೊತೆಗೆ ತಮ್ಮ ಸಂಗ್ರಹಗಳ ಬಗೆಗೆ ಸಂಪಾದಕರೇ ಹೊಂದಿರುವ ನಿಲುವುಗಳನ್ನು ಖಚಿತಪಡಿಸಲಾಗಿದೆ.

ಕೊನೆಯ ಭಾಗದಲ್ಲಿ ನಾಲ್ಕನೆಯ ಭಾಗದಲ್ಲಿ ವಿವರಿಸಲಾದ ಕೃತಿಗಳ ಸೈದ್ಧಾಂತಿಕ ನೆಲೆಯ ವಿಶ್ಲೇಷಣೆಯಿದೆ. ಎರಡನೆಯ ಭಾಗದಲ್ಲಿ ರೂಪಿಸಿಕೊಂಡ ಪ್ರಮೇಯವನ್ನು ಲಭ್ಯವಿರುವ ಕೃತಿಗಳ ಸಾಕ್ಷಿಯಲ್ಲಿ ಪರಿಶೀಲಿಸಿ, ಪ್ರಮೇಯವನ್ನು ರುಜುವಾತುಪಡಿಸಲಾಗಿದೆ. ವಿಶ್ಲೇಷಣೆಯಲ್ಲಿ ಮೊದಲ ಹಂತದ ಸಂಗ್ರಹಗಳು ಹಲವು ಗುಣಲಕ್ಷಣಗಳನ್ನು ಪ್ರಕಟಿಸುತ್ತಿವೆ. ಅವುಗಳು; 1. ಹಾಡುಗಳ ಪ್ರಾಧಾನ್ಯ, 2. ಹಾಡುವಿಕೆಯ ಪ್ರಾಧಾನ್ಯ, 3. ರಮ್ಯ ಶೀರ್ಷಿಕೆಗಳತ್ತ ಒಲವು, 4. ಸ್ತ್ರೀ ಪ್ರಾಧಾನ್ಯ, 5. ನೀತಿ ಪ್ರಾಧಾನ್ಯ, 6. ಪ್ರಣಯ ಪ್ರಾಧಾನ್ಯ, 7. ಗ್ರಾಮ ಜೀವನದ ಬಗೆಗೆ ಒಲವು, 8. ಚರಿತ್ರೆಯ ಬಗೆಗೆ ಭಾವುಕ ಒಲವು, 9. ದೇಸೀ ಛಂದಸ್ಸಿನ ಬಗೆಗೆ ಒಲವು, 10. ಸೌಂದರ್ಯವಾದಿ ದೃಷ್ಟಿಕೋನ, 11. ದಾಖಲಾತಿಯ ಉತ್ಸಾಹ, 12. ಜಾನಪದ ಕಣ್ಮರೆಯಾಗುತ್ತಿರುವ ಭಯ, 13. ವಸಾಹತೀಕರಣಕ್ಕೆ ತೀವ್ರ ಪ್ರತಿಭಟನೆ, 14. ಸಂಘರ್ಷಾತೀತ ನಿಲುವುಗಳು, 15. ಪರಿಷ್ಕರಣೆ ನಡೆಸುವಿಕೆ, 16. ಬಂಧುತ್ವದ ನವೀಕರಣ, 17. ಕುಟುಂಬ ಕೇಂದ್ರಿತ ವರ್ಗೀಕರಣ, 18. ದೇಸೀ ಭೌದ್ಧಿಕತೆಯ ಮಂಡನೆ, 19. ದೇಸೀ ವೈದ್ಯದ ಮಂಡನೆ, 20. ಸಾಹಿತ್ಯ ಕೇಂದ್ರಿತ ಚರ್ಚೆ, 21. ಸಾಂದರ್ಭಿಕ ವಿವರಗಳ ಗೈರು ಹಾಜರಿ.

ಜಾನಪದ ಸಂಗ್ರಹ ಕಾರ್ಯಗಳಲ್ಲಿ ಪ್ರಾದೇಶಿಕ ಅಸಮತೋಲನ ಕಾಣಿಸಿಕೊಂಡಿರುವುದನ್ನು ಪರಿಶೀಲಿಸಲಾಗಿದೆ. ಪಾಶ್ಚಾತ್ಯ ಹಾಗೂ ದೇಸೀ ವಿದ್ವಾಂಸರ ಕೆಲಸಗಳಲ್ಲಿ ಕಂಡು ಬರುವ ಮುಖ್ಯ ವ್ಯತ್ಯಾಸಗಳನ್ನು ವಸಾಹತು ಆಡಳಿತದ ಚಾರಿತ್ರಿಕ ಸಂದರ್ಭದಲ್ಲಿರಿಸಿ ಗುಣಲಕ್ಷಣಗಳ ಸ್ವರೂಪವನ್ನು ಕಂಡುಕೊಳ್ಳಲು ಸಾಧ್ಯವಿದೆ. ಮೊದಲ ಘಟ್ಟದ ಜಾನಪದ ಸಂಗ್ರಹಗಳು ಕನ್ನಡ ನವೋದಯದ ನೈತಿಕತೆಗೆ ಬದ್ಧವಾಗುತ್ತಾ ಪಾಶ್ಚಾತ್ತೀಕರಣಕ್ಕೆ ತಮ್ಮ ವಿರೋಧವನ್ನು ಸೂಚಿಸಿವೆ. ಸಂಗ್ರಾಹಕರು ತಾವು ಬದುಕಿದ ಕಾಲಘಟ್ಟದ ಅವಶ್ಯಕತೆಗಳನ್ನು ಬಹಳ ಜವಾಬ್ದಾರಿಯಿಂದ ಅರಿತುಕೊಂಡು ಕನ್ನಡ ಜಾನಪದ ಅಧ್ಯಯನಕ್ಕೆ ಸುಭದ್ರವಾದ ಅಡಿಗಲ್ಲನ್ನು ಹಾಕಿದ್ದರು. ಈ ಅರ್ಥದಲ್ಲಿ ಈ ಶತಮಾನದ ಮೊದಲ ಭಾಗದಲ್ಲಿ ಕಂಡು ಬಂದ ಸಾಮಾಜಿಕ ಸ್ಥಿತ್ಯಂತರಗಳ ಚರ್ಚೆಯು ಜಾನಪದ ಸಂಗ್ರಹಗಳನ್ನು ಆಧರಿಸಿ ನಡೆಸಿದೆಯೆಂದು ಹೇಳಬಹುದು.

*****

ಭಾಗ 7

ಅನುಬಂಧ : ಒಂದು

ಪದಸೂಚಿ

ಅಕ್ಕ ನಾಗಮ್ಮನ ಜೋಗುಳ ಪದ–147

ಅಕ್ಕಮಹಾದೇವಿ ಹಾಡು–81

ಅಕ್ಕಿ ತಿಮ್ಮನಹಳ್ಳಿ–27

ಅಂಗಡೀ ಔಷಧ–184

ಅಜ್ಜಿಕಥೆ–5

ಅಂಟಿ ಆರ್ನೆ–26

ಅಂಟಿಕ್ವಿಟಿ–01

ಅತಿಸಾರ–189

ಅತ್ತಾವರ ದೆಯ್ಯೊಂಗುಳು–218

ಅತ್ತೆಮನೆಯ ಕಾಟ–79

ಅನಿಬೆಸೆಂಟ್–19

ಅನ್ನಾ ಲಿಬರ್ಟಾ ಡಿ'ಸೋಜಾ–164, 165

ಅಂಬಲಿಕೆ ಹಿರಿಯಣ್ಣ–43

ಅಬೆ ದುಬೊಯಿಯ–27, 56, 169, 197, 200

ಅರ್ಚಕ ಬಿ. ರಂಗಸ್ವಾಮಿ–77

ಅರ್ಜುನ ಜೋಗಿ–237

ಅರ್ಜುನ ಜೋಗೀ ಹಾಡು–237

ಅಲನ್ ಡಂಡಸ್–51

ಅಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್–27

ಅಸಲಜಾತ ಹೆಣ್ಣು–156

ಆಕಳ ಹಾಡು–81

ಆಚರಣೆ–60

ಆಡಳಿತ ಮತ್ತು ವ್ಯವಹಾರ–12

ಆದಾಯ ತೆರಿಗೆ–142

ಆಧುನಿಕತೆ–03

ಆನ್ ಭೂತಾಸ್–151

ಆರೋಗ್ಯ ಸೂತ್ರಂ–184

ಆರ್.ಎಸ್. ಬಾಗ್ಸ್–52

ಆರ್.ವಿ. ಜಾಗಿರ್ದಾರ–243

ಆರ್.ಸಿ. ಟೆಂಪಲ್–151

ಆರ್ಯ ಸಮಾಜ–18

ಇಂಗ್ರ ರಾಜ್ಯದ ಮೇಲೆ ದಂಡಕ–148

ಇಂಗ್ರೆ ಸಂಸ್ಥಾನದ ಮೇಲಿನ ಪದ–147

ಇಂಡಿಯನ್ ಅಂಟಿಕ್ವೇರಿ–27, 31, 46, 139, 141, 228, 270

ಇಮಾಂ ಹುಸೇನರ ಬಲಿದಾನ–113

ಇಸೋಪನ ನೀತಿಕಥೆ–162

ಉತ್ತರದೇವಿಯ ಹಾಡು–119

ಉತ್ತರೆ ಮಳೆ–120, 125

ಉದರ ಶೂಲೆ–189

ಉಪಾದ್ರು/ಅಯ್ಯ–97

ಊಳಿಗಮಾನ್ಯ ಪದ್ಧತಿ–9, 20

ಎ ಗ್ರಾಮರ್ ಆಫ್ ದಿ ಕರ್ನಾಟಕ ಲಾಂಗ್ವೇಜ್ –14

ಎ ಸೆಲೆಕ್ಷನ್ ಆಫ್ ಕೆನರೀಸ್ ಬಾಲೆಡ್ಸ್–27, 58

ಎ ಹ್ಯಾಂಡ್ ಬುಕ್ ಆಫ್ ಕ್ಯಾನರೀಸ್ ಪ್ರೋವರ್ಬಸ್ ವಿತ್ ಇಂಗ್ಲಿಷ್ ಇಕ್ವಲೆಂಟ್ಸ್–173

ಎಂ.ಆರ್. ಲಕ್ಷ್ಮಮ್ಮ–244

ಎ.ಆರ್. ಶಿವನಾಗಪ್ಪ–162

ಎಂ.ಎಂ. ಕಲಬುರ್ಗಿ–54, 57, 199

ಎಂ.ಎನ್. ಶ್ರೀಕಂಠೇಶ ಗೌಡ–162, 164

ಎಂ.ಎಸ್. ಅನಂತ ಪದ್ಮನಾಭ–245

ಎಂ.ಕೆ. ಮಾರನ ಬಸರಿ–162

ಎ.ಕೆ. ರಾಮಾನುಜನ್–04

ಎಂ.ಜೆ. ವಾಲ್ಹೌಸ್–29

ಎಂ. ಬಿರಾದಾರ–53

ಎಂ. ಮುತ್ತೂರ ಬ್ರದರ್ಸ್–183

ಎ.ಮೆನ್ನರ್–136, 150, 217, 218, 224, 271

ಎಂ.ರಾಮರಾವ್–167, 198

ಎ.ವಿ.ನಾವಡ–48

ಎ.ಸಿ.ಬರ್ನೆಲ್–60, 217

ಎಚ್.ಎಂ.ಶಂಕರನಾರಾಯಣ ರಾವ್–162

ಎಚ್.ಎಸ್.ಅಚ್ಚಪ್ಪ–167, 177, 261

ಎಚ್.ಕೆ.ಮಲ್ಲಪ್ಪ–61, 215, 231

ಎನ್.ಅನಂತ ರಂಗಾಚಾರ್–58, 135

ಎನ್.ಆರ್.ನಾಯಕ–56

ಎರಡು ಕತೆಗಳು–166

ಎಲ್.ಗುಂಡಪ್ಪ–58, 133

ಎಳ್ಳಮಾಸೀ ಹಾಡು–81

ಏಸುಕ್ರಿಸ್ತನ ಅವತಾರ–14

ಐತಿಹ್ಯ–4, 51, 141, 164, 204

ಐದು ಐತಿಹಾಸಿಕ ಲಾವಣಿ–137, 138, 150,

ಒಕ್ಕಲಿಗರ ಹಾಡು–129

ಒಗಟು–ಒಡಪು–63, 179

ಒನಕೆ ವಾಡು–125
ಓಲ್ಡ್‌ಡೆಕ್ಕನ್ ಡೇಸ್–59, 164, 165
ಕಡ್ಲಿ ಮಟ್ಟಿ ಸ್ಟೇಷನ್ ಮಾಸ್ತರ–162
ಕಥೆ ಹಾಗೂ ಶಾಸ್ತ್ರದ ಹಾಡುಗಳು–119
ಕಥೆಯ ಹಾಡು–81
ಕನ್ನಡ ಆರತಿ ಸಂಗ್ರಹ–63,67
ಕನ್ನಡ ಒಗಟುಗಳ ಅಧ್ಯಯನ–34
ಕನ್ನಡ ಗಾದೆಗಳ ಜೀರ್ಣೋದ್ಧಾರ–230
ಕನ್ನಡ ಗಾದೆಗಳು–27, 167, 177
ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ–36
ಕನ್ನಡ ಜನಪದ ಗೀತೆಗಳು–02
ಕನ್ನಡ ಜಾನಪದ ಗ್ರಂಥಸೂಚಿ–02, 36
ಕನ್ನಡ ಜಾನಪದಕ್ಕಾಗಿ ದುಡಿದವರು–45
ಕನ್ನಡ ಜಾನಪದಕ್ಕೆ ಸ್ವಾತಂತ್ರ್ಯಪೂರ್ವ ದೇಶೀ ವಿದ್ವಾಂಸರ ಕೊಡುಗೆ–46
ಕನ್ನಡ ಲಾವಣಿ ಸಂಗ್ರಹ–27
ಕನ್ನಡ ಲಾವಣಿ ಸಾಂಗತ್ಯ–39, 138
ಕನ್ನಡ–ಇಂಗ್ಲಿಷ್ ಡಿಕ್ಷನರಿ–246
ಕನ್ನಡನಾಡಿನ ಲಾವಣಿ ಸಾಂಗತ್ಯ–235
ಕಂಪೇರಿಟಿವ್ ಗ್ರಾಮರ್ ಆಫ್ ಡ್ರವಿಡಿಯನ್ ಲಾಂಗ್ವೇಜಸ್–64
ಕರಾವಳಿ ಪ್ರದೇಶದ ಜನಪದ ಸಾಹಿತ್ಯ ಪ್ರಕಾರ–54
ಕರೀ ಹುಡುಗಿ–159
ಕರ್ನಲ್ ಮೆಕೆಂಝಿ–04, 26, 197, 200
ಕರ್ನಾಟಕ ಜನಪದ ಸಾಹಿತ್ಯ–44, 242
ಕರ್ನಾಟಕ ಜಾನಪದ ಅಧ್ಯಯನ–31
ಕರ್ನಾಟಕ ಲೋಕೋಕ್ತಿ ನಿಧಾನ–34, 167, 176
ಕರ್ನಾಟಕ ಸಂಸ್ಕೃತಿ–34, 218
ಕರ್ನಾಟಕ ಸಂಸ್ಕೃತಿಯ ಒಂದು ಸ್ವರೂಪ–243
ಕರ್ನಾಟಕದ ಕೈಫಿಯತ್ತು–197, 199
ಕರ್ನಾಟಕದಲ್ಲಿ ಜಾನಪದ ಅಧ್ಯಯನದ ಪ್ರಗತಿ–42
ಕಲೇವಾಲಾ–26
ಕಲ್ಕುಡೆ–150
ಕಲ್ಲುರ್ಟಿ–150
ಕಾಂತುನೆಕ್ರಿ–150
ಕಾಪಸೆ ರೇವಪ್ಪ–79
ಕಾರ್ಲೆಕ್ರಾಹ್ನ–26
ಕಾರ್ಲ್‌ಮಾರ್ಕ್ಸ್–13
ಕಾವೇರಿ ಸಂಕ್ರಮಣ–211
ಕಿಟೆಲ್–228
ಕಿತ್ತೂರ ಚೆನ್ನವ್ವನ ಪದ–147
ಕಿತ್ತೂರಚೆನ್ನವ್ವನ ಸೊಸೆ–146
ಕಿವುಡರ ಹಾಡು–84
ಕುಟಿಲವಾತ–190
ಕುಟುಂಬ ಕೇಂದ್ರಿತ ವರ್ಗೀಕರಣ–269

ಕುಡಾವಾಳಿ ಮಂಗ್ಲ–209
ಕುತ್ತಿ ನಿಪ್ಪದ್–209
ಕುಂಪಣಿ ಸರಕಾರದ ದಂಡಕಾ–148
ಕುಂಪಣಿ ಸರಕಾರದ ಪೂರ್ವಣಿ ದಂಡಿಕಾ–148
ಕುರ್‌ಂಗೋದಿ ಮಿರಿಪ ಪದ್ಧತಿ–210
ಕೂರ್ಗ್ ಸಾಂಗ್ಸ್–64
ಕೂರ್ಗ್ ಸೂಪರ್ ಸ್ಟೀಷನ್–213, 228
ಕೆ.ಆರ್. ಲಿಂಗಪ್ಪ–31, 58
ಕೆ. ಕುಶಾಲಪ್ಪ ಗೌಡ–198
ಕೆ. ಚಿನ್ನಪ್ಪ ಗೌಡ–198
ಕೆ. ಮರುಳಸಿದ್ಧಪ್ಪ–38
ಕೆ.ವಿ. ರಮೇಶ್–203
ಕೆಥೋಲಿಕ್ ಪ್ರೆಸ್–14
ಕೆನರಾ–10
ಕೆನರೀಸ್ ಫೋಕ್ಸಾಂಗ್ಸ್–27, 32
ಕೆರೆಗೆ ಹಾರ–232, 273
ಕೆಲವು ಹಳ್ಳಿಯ ಹಾಡು–84
ಕೇಳಿ ಪೋನಯಂಡ ಪಾಡ್–212
ಕೈಲ್ ಪೊಳ್ದು–211
ಕೊಡಗರ ಪದ್ಧತಿ–209
ಕೊಡಗಿನ ಜನಪದ ಸಾಹಿತ್ಯ–245
ಕೊಡವ ಪಡಿಮ–167, 171
ಕೊಡವ ಫೋಕ್ಸಾಂಗ್ಸ್–27
ಕೊಡವ, ತುಳು ಹಾಗೂ ತೊದ ಭಾಷಾ ವ್ಯಾಕರಣ–151
ಕೊಂತೆಮ್ಮನ ಪದ–244
ಕೊದಿಮಂಗ್ಲ–209
ಕೊರವಂಹಾಡು–53
ಕೊಲ್ಲಾಪರು ಮಹಾರಾಜನ ಪದ–153
ಕೋಟಿ ಚೆಂಣಯೆ–218
ಕೋಲಾಟದ ಪದಗಳು–93, 213, 219
ಕೋಲಾರ ನಾಡೂ ಕತೆಗಳು–166
ಕೋಲು ಹಾಡು–148, 298
ಕ್ಯಾತನಹಳ್ಳಿ ರಾಮಣ್ಣ–138, 139, 141, 146, 147, 161
ಕ್ಯಾನರೀಸ್ ಪ್ರೋವರ್ಬ್–167, 173
ಕ್ಯಾನರೀಸ್ ಸಾಂಗ್ಸ್–64, 66
ಖಾದಿ ಸ್ವರಾಜ್ಯಕ್ಕೆ ಹಾದಿ–123
ಖ್ಯಾಲಿ–153
ಗಂಡ, ಹೆಂಡತಿ, ಪ್ರೇಮ, ಸಂಸಾರ–109
ಗದ್ಯಕತೆ–162
ಗರತಿಯ ಹಾಡು–24, 33, 39, 58, 72, 74, 238, 257, 258
ಗರುಡ–93
ಗಲಗಲಿ ದೇಸಾಯಿ ಪದ–147
ಗಾದೆ–59
ಗಾದೆಗಳು–27
ಗಿಡ್ಡಪೋರಿ–159

ಗಿರಡ್ಡಿ ಗೋವಿಂದರಾಜ–232
ಗಿರಿಜಾ ಕಲ್ಯಾಣ–128, 130
ಗಿರಿಜಾದುರ್ಗದ ಪೋವಾಡ–148
ಗೀತೆಗಳು–58
ಗುಮಟೆ ಕುಣಿತ–54
ಗುಳ್ಳವ್ವನ ಹಾಡು–53
ಗೇಬ್ರಿಯಲ್ ಬರ್ಗೇರ–59, 172
ಗೋಕುಲಾಷ್ಟಮಿ–159
ಗೋಪಾಳ ದುರದುಂಡಿ–160
ಗೋರೂರು ರಾಮಸ್ವಾಮಿ ಅಯ್ಯಂಗಾರ್ – 39, 105
ಗೌರಮ್ಮನ ಮದುವೆ–119, 121, 130
ಗೌರಮ್ಮನಿಗೆ ಸೊಗಿಲಕ್ಕಿ ಇಕ್ಕಿದ್ದು–128
ಗೌರಿಯ ಕಲ್ಯಾಣ–128
ಗೌರಿಹುಣ್ಣಿಮೆ–53
ಗ್ರಾಮಜೀವನದ ಒಲವು–262
ಗ್ರಾಮದೇವತೆ (ವಿಲೇಜ್ ಫೀಸ್ಟ್)–27, 61
ಗ್ರೇಟ್ ಬ್ರಿಟನ್–10
ಕಲ್ಗಿತುರಾಯಿ–154
ಚಂದ್ರಶೇಖರ ಕಂಬಾರ–200
ಚರಿತ್ರೆಗೆ ಸಂಬಂಧಿಸಿದ ಪದ–124
ಚರಿತ್ರೆಯ ಬಗ್ಗೆ ಭಾವುಕ ಒಲವು–263
ಚಾಮುಂಡಿ–92, 93, 221, 228
ಚಾರ್ಲ್ಸ್ ಇ. ಗೋವರ್–27, 32, 40, 64, 65, 66
ಚಿಕ್ಕವರದಶೆಟ್ಟಿ–152
ಚಿತ್ರದುರ್ಗದ ಲಡಾಯಿ–152
ಚೆನ್ನಪ್ಪ ಉತ್ತಂಗಿ–31, 244
ಚೌಡಕಿ ಹಾಡು–53
ಜಕಣಿಯರ ಕಥೆಗಳು–81
ಜನಪದ ಕಥೆ–26, 59
ಜನಪದಕಥೆಯ ವರ್ಗಗಳು–26
ಜನಪದ ಗೀತಗಾಯತ್ರಿ–238
ಜನಪದ ಧರ್ಮ–54
ಜನಪದ ಲೇಖನಗಳು–61
ಜನಪದ ವಾಙ್ಮಯ–54
ಜನಪದ ವಿಜ್ಞಾನ–54
ಜನಪದ ವಿಮರ್ಶಾ ಕೃತಿಗಳು–61
ಜನಪದ ವೀರ ಸಾಹಿತ್ಯ: ಚಾರಿತ್ರಿಕ ವಿವೇಚನೆ–44, 55
ಜನಪದ ವೈದ್ಯ–51, 54, 60
ಜನಪದ ಸಾಹಿತ್ಯ ನಡೆದು ಬಂದ ದಾರಿ–41
ಜನಪದ ಸಾಹಿತ್ಯದ ಆಶಯ ಸೂಚಿ–26
ಜಯಲಕ್ಷ್ಮೀ ಸೀತಾಪುರ–45
ಜವಾಹರಲಾಲ್ ಹಂಡೂ–48, 55
ಜಾಣಾರ ದೇವಿ–93
ಜಾತಕ ಕತೆ–59, 167

ಜಾನಪದ–31, 55

ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ–25, 55

ಜಾನಪದ ಕಣ್ಮರೆಯಾಗುವ ಭಯ–265

ಜಾನಪದ ಗೀತಾಂಜಲಿ–39

ಜಾನಪದ ಚಿಂತನ–43

ಜಾನಪದ ವೀಕ್ಷಣೆ–43

ಜಾನ್ ಎಫ್.ಫ್ಲೀಟ್–135, 137, 138

ಜಾನ್ ಲೇಡನ್–135, 136, 148,

ಜಾನ್‌ಹ್ಯಾಂಡ್–14

ಜಾರಂತಾಯೆ–218

ಜಿ.ಪಿ.ರಾಜರತ್ನಂ–162, 167

ಜಿ.ವಿ.ಡಿ.–43

ಜಿಗಳೆ–188

ಜೀ.ಶಂ.ಪರಮಶಿವಯ್ಯ–27, 30, 50

ಜೀವನ ಸಂಗೀತ–24, 58, 136, 156, 160, 273

ಜೀವನ ಹಾಡು–84

ಜುಮಾದಿ–150

ಜೇಕಬ್ ಗ್ರಿಮ್–26

ಜೇನುಹುಳು–166

ಜೈನರ ಹಾಡು–81

ಜೋಕುಮಾರನ ಹಾಡು–53

ಜೋಗುಳ ಪದ–140

ಜೋಗುಳ ಹಾಡು–242

ಜೋಜೋ ಶಂಭುಲಿಂಗಾ–147

ಜೋಯಿ ಪಾಟ್–212

ಜ್ಯೋತಿ ಹೊಸೂರ–37, 49

ಟಿಪ್ಪು ಸುಲ್ತಾನನ ಬೀಳಿನ ಹಾಡು–136

ಟಿಪ್ಪುಸುಲ್ತಾನ–226

ಡಯರೋಕ–189

ಡಿ.ಆರ್.ನಾಗರಾಜ್–20, 257

ಡಿ.ಕೆ.ರಾಜೇಂದ್ರ–32

ಡೇನಿಪ್ಸ್ ಲುಥೇರನ್ ಮಿಷನ್–15

ತತ್ವಲಾವಣಿಯ ಪದ–162

ತಲುವೇಲು ನಾನ್ನೂರು–34

ತಿಂಗಳು ಮಾವನ ಪದಗಳು–116

ತಿಂಗಳು ಮಾವನ ಪೂಜೆ–112, 117

ತೀ.ನಂ.ಶಂಕರನಾರಾಯಣ–38

ತೀ.ನಂ.ಶ್ರೀಕಂಠಯ್ಯ–38, 62, 133, 273

ತೀವ್ರಗಾಮಿ(ರಾಡಿಕಲ್)–21

ತುರಾಲಾವಣಿ–59

ತುಳಸಿ ಪೂಜೆ ಕುಣಿತ–54

ತುಳು ಗಾದೆಗಳ ಸಂಗ್ರಹ–59, 151, 170, 171, 172

ತುಳು ವ್ಯಾಕರಣ–151, 170

ತುಳುವಾಲ ಬಲಿಯೇಂದ್ರ–214, 197

ತೇಲಪಂಡ ಶಾಂಭವಾ ನಂದಸ್ವಾಮಿ–161

ತೊಟ್ಟಿಲ ತೂಗುವ ಜೋಗುಳ ಪದ–128
ತೊಡಕಿನಾರ್–218
ತೌಳವಗಾಥಾ ಮಂಜರಿ–172, 173
ದಡೆಮನ್‌ಇನ್ ಕೂರ್ಗ್–228
ದ.ರಾ.ಬೇಂದ್ರೆ–69
ದಕ್ಷಿಣ ಭಾರತದ ಜಾನಪದ ಅಧ್ಯಯನಗಳು –ಅಭಿವೃದ್ಧಿ ಹಾಗೂ ಬೆಳವಣಿಗೆ–48
ದಕ್ಷಿಣಕನ್ನಡಜಿಲ್ಲೆಯ ಕೈಫಿಯತ್ತು–198
ದಕ್ಷಿಣಭಾರತದಜನಪದ ಗೀತೆಗಳು–67
ದಾಖಲಾತಿಯ ಉತ್ಸಾಹ–263
ದಾಸ–65
ದಿ ಒರಿಜಿನ್‌ಆಫ್ ಡೆಮನ್ಸ್–151
ದಿ ಡೆವಿಲ್ ವರ್ಷಿಪ್ ಆಫ್ ದಿ ತುಳುವಾಸ್ –61, 151, 215
ದಿ ಫೋಕ್ ಸಾಂಗ್ಸ್ ಆಫ್ ಸದರ್ನ್ ಇಂಡಿಯಾ–64
ದಿ ಭೂತಾಸ್‌ಆಫ್ ನಾಗರ ಮಲನಾಡ್ ಇನ್ ಮೈಸೂರು–227
ದಿ ವಿಲೇಜ್ ಫೀಸ್ಟ್–229
ದಿವ್ಯಮಾತೃಕೆ–15
ದೀವಳಿಗೆ ಹಬ್ಬದ ಲಾವಣಿ–152
ದೂಮಾವತಿ–151
ದೇ.ಜವರೇಗೌಡ–39
ದೇಯಿಬೈದೆದಿ–151
ದೇವತಾ ಸ್ತುತಿ–80
ದೇವತೆಯ ಪಾಟ್–212
ದೇವನೊಂದಿಗೆ ಗೆಳೆತನ–107
ದೇವುಡು ನರಸಿಂಹ ಶಾಸ್ತ್ರಿ–61, 218
ದೇಸೀ ಛಂದಸ್ಸಿನ ಒಲವು–263
ದೇಸೀ ವಿದ್ವಾಂಸರ ಚಾರಿತ್ರಿಕ ಅಗತ್ಯ–270
ದೇಸೀ ವೈದ್ಯದ ಮಂಡನೆ–270
ದೈವಪರೀಕ್ಷೆ–15
ದ್ರೌಪದಿಯ ಹಾಡು–79
ದ್ವಾರಪಾಲ ಚೆನ್ನಪ್ಪಾ ಜಡಿ–152
ಥಿಯೋಸೋಫಿಕಲ್ ಸೊಸೈಟಿ–22
ಧೀಮಂತವರ್ಗ–22
ನಂ.ತಪಸ್ವೀಕುಮಾರ್–34
ನಂಜನಗೂಡಿನ ಲಾವಣಿ–242
ನಂಜಪ್ಪ ಹಾಡು–121
ನಂಜುಂಡ ಜೋಗಿ–128
ನಂಜುಂಡನ ಪದಗಳು–96
ನಡಕೇರಿಯಂಡ ಚಿಣ್ಣಪ್ಪ–197,207
ನಂದೋಳ್ಗೆ ಶೀನಪ್ಪ ಹೆಗ್ಗಡೆ–60, 197,
ನಂಬಿಕೆ–51
ನಮ್ಮಜಾನಪದ ಸಮೀಕ್ಷೆ–54
ನರಗುಂದ ಮೇಲಿನ ಹಾಡು–147
ನರಗುಂದ ವೆಂಕಟೇಶನ ದಂಡಕ–148

ನರಿಮಂಗ್ಲ–209
ನಾ.ಕಸ್ತೂರಿ–177
ನಾಗರಪಂಚಮಿ–156
ನಾಡಪದಗಳು–136, 258
ನಾಣ್ಣುಡಿ–220, 230, 231
ನೀತಿ ಪ್ರಾಧಾನ್ಯ–260
ನೂತನ ಸಹಸ್ರಗಾಥಾ ಕುಸುಮ ಮಂಜರಿ –173
ಪಚ್ಚಡಕ್ ನಡಪದ್–209
ಪಂಜುರ್ಲಿ–150, 217, 227
ಪಟ್ಟದೇವರು ಹಿರೇಮಠ ಹುಲಕುಂದ–162
ಪಟ್ಟೋಲೆ ಪಳಮೆ–46, 60207,208
ಪಂಡಿತ ಲೋರಿ ದೊರೆ–184
ಪತ್ರಿಕೋದ್ಯಮ–08
ಪರಕೀಯ–21
ಪರಿಷ್ಕರಣದ ಕೆಲಸ–268
ಪಳಂಜೊಲ್ಲ್–213
ಪಾಡಿ ಪೊಳುದು–212
ಪಾಡ್ದನ–150, 151, 213, 217
ಪಾಡ್ದನ ಸಂಗ್ರಹ–136
ಪಾಡ್ದನೊಳು–151, 171
ಪಾಪ್ಯುಲರ್ ಆಂಟಿಕ್ವಿಟಿ–01
ಪಾರ್ತಿಸುಬ್ಬ–225, 226, 227
ಪಾಶ್ಚಾತ್ಯ ಹಾಗೂ ದೇಸೀಯ ವಿದ್ವಾಂಸರ ಆಸಕ್ತಿಗಳಲ್ಲಿನ ಭಿನ್ನತೆ–271
ಪಾಳೆಗಾರಿಕೆ–11
ಪಾಳೆಯಗಾರರ ಕೋಲು ಪದ–162
ಪಿ.ಕುಲಕರ್ಣಿ–242
ಪಿ.ಧೂಲಾ ಸಾಹೇಬ–232
ಪಿರಿಯಾಪಟ್ಟಣದ ಲಾವಣಿ–152
ಪಿಲಿಚಾಮುಂಡಿ–218
ಪುದಿಯರಿ–66
ಪುರುಷೋತ್ತಮ ಬಿಳಿಮಲೆ–198, 259, 266
ಪೇಶ್ವೆ–10
ಪೊಸಭೂತ–150
ಪೊಸಮಹಾರಾಯೆ–150, 218
ಪೊಳಲಿ ಬಾಲಕೃಷ್ಣ ಶೆಟ್ಟಿ–206
ಪ್ರಣಯ ಪ್ರಾಧಾನ್ಯ–262
ಪ್ರದರ್ಶನ ಕಲೆ–52, 215
ಪ್ರಹ್ಲಾದ ಕುಲಕರಣಿ–220
ಪ್ರಹ್ಲಾದ ನರೇಗಲ್ಲ–238
ಪ್ರಾಟೆಸ್ಟೆಂಟ್ ಮನೋಧರ್ಮ–256
ಪ್ರಾದೇಶಿಕ ಅಸಮತೋಲನ–270
ಪ್ರಾರ್ಥನೆ–156
ಪ್ಲಾಸೀ ಕದನ–09
ಫರ್ಡಿನಾಂಡ್ ಕಿಟೆಲ್–32

ಫೋಕ್–ಫೋಕ್ಲೋರ್–40

ಫೋಕ್ಲೋರ್–02

ಫೋಕ್ಸಾಂಗ್ಸ್ ಆಫ್ ಸೌತ್ ಇಂಡಿಯಾ–32

ಫೋಕ್ಸಾಂಗ್ಸ್ ಇನ್ ದಿ ಕರ್ನಾಟಕ–62

ಫ್ರೆಂಚ್‌ಕ್ರಾಂತಿ–01

ಫ್ಲೀಟ್ ಸಂಗ್ರಹಿಸಿದ ಲಾವಣಿ–139

ಬಟಾವ್ ಲಾವಣಿ–153

ಬಟ್ಟೆಪಾಟ್–210

ಬಂಧುತ್ವದ ನವೀಕರಣ–269

ಬರದ ಹಾಡು–81

ಬಸವನ ಅಷ್ಟಮಿಯ ಹಾಡು–131

ಬಸವನ ಪೂಜೆ–131

ಬಾ.ಶಿವರಾವ್–183

ಬಾಗಿಲು ತಡೆಯುವ ಪದಗಳು–131

ಬಾಗೇಣದ ಹಾಡು–53

ಬಾದಾಮೀ ಕಲೆ ಕೆಡವಿದ ಪದ–147

ಬಾಂದಿನವರ ಹಾಡು–124

ಬಾಸೆಲ್ ಮಿಷನ್–15

ಬಾಸೆಲ್ ಮಿಷನ್ ಪ್ರೆಸ್–172

ಬಿ.ಎಂ.ಶ್ರೀ.–29, 68, 75, 110, 111, 240, 268, 273

ಬಿ.ಎನ್.ರಂಗಸ್ವಾಮಿ–56, 58, 84, 88

ಬಿ.ಎಸ್.ಗದ್ದಗೀಮಠ–04, 41

ಬೀಗರ ಹಾಡು–81, 111, 130, 131

ಬೀರನ ಹಾಡುಗಳು–233

ಬೀಸುವಕಲ್ಲಿನ ಹಾಡು–232

ಬುಕ್–ಪೋಸ್ಟ್–11

ಬೆಟಗೇರಿ ಕೃಷ್ಣಶರ್ಮ–41, 62, 216, 273

ಬೆವರಿನ ಆಳು–105, 108

ಬೆಳಕು ಹಬ್ಬ–212

ಬೊಬ್ಬರ್ಯ–151, 218

ಬ್ರಹ್ಮಸಮಾಜ–17

ಬ್ರಾಹ್ಮಣರ ಹಾಡು–128

ಬ್ರಿಟಿಷ್ ಫೋಕ್ಲೋರಿಸ್ಟಿಕ್ ಹಿಸ್ಟರಿ–34

ಭಾಟಗೀ ಹಾಡು–81

ಭಾರತದಲ್ಲಿ ಬ್ರಿಟಿಷ್ ಆಡಳಿತ–199

ಭಾರತೀಯ ಆಧ್ಯಾತ್ಮವಾದ–19

ಭಾರತೀಯಜಾನಪದ ಸಮೀಕ್ಷೆ–37

ಭಾವಗೀತೆ–28, 80, 81, 111

ಭಾಸ್ಕರಾನಂದ ಸಾಲೆತ್ತೂರು–61, 224, 225

ಭೀಮಕವಿ–24

ಭೂಗಂದಾಯಇತ್ಯರ್ಥ ಪದ್ಧತಿ–12

ಭೂತವಿದ್ಯೆ–151

ಭೂತಸೇವೆ–215, 216

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು–197, 204, 205, 206

ಭೂಲೋಕದಲ್ಲಿ ಯಮ–166

ಭೋಜನದ ರಗಳೆ–131

ಭೌತಿಕ ಜಾನಪದ–225,276

ಮಕ್ಕಳ ಒಡಪು–59, 180, 181, 183

ಮಕ್ಕಳಿಗೆ ಹೇಳುವ ಕಥೆಗಳು–59, 62, 216

ಮಂಗ್ಯನ ಹಾಡು – 84

ಮಗ್ರಂದಾಯೆ–151

ಮಂಡ್ಯ:ಜನಪದ ಕೊಡುಗೆ–45

ಮಂಡ್ರೋಲ ಸಾಹೇಬರ ಪದ–147

ಮತಿಘಟ್ಟ ಕೃಷ್ಣಮೂರ್ತಿ–46, 110

ಮದುವೆ ಹಾಡು–53, 66, 79, 120, 132, 243

ಮಧುರ ಚೆನ್ನ–31, 46, 79, 268

ಮಧ್ಯಮ ವರ್ಗೀಯ–18

ಮನೆಮದ್ದು–60, 183, 192, 195

ಮಲ್ಲಯ್ಯನ ಮಾನೋರ್ಮಿ–119

ಮಲ್ಲಿಕಾರ್ಜುನ ಲಕ್ಕೆ–41

ಮಲ್ಲಿಗೆದಂಡೆ–24, 39, 239, 258, 269

ಮಹಾರಾಜರ ಮರಣ ಲಾವಣಿ–152, 153

ಮಳೆರಾಯ ಹಾಡು–53

ಮಾ.ಗಾ. ಶೆಟ್ಟಿ ಬಂಕಿಕೋಡ್ಲ–94

ಮಾಯಿಕೊಂಡದ ಮುತ್ತಿಗೆ–59

ಮಾರಿಹಬ್ಬ–123

ಮಾಸ್ತಿ ವೆಂಕಟೇಶ ಅಯ್ಯಂಗಾರ್–24, 29, 33, 39, 43, 46, 62, 74, 133, 177, 240

ಮಿಷನರಿ ಅವಧಿ–48

ಮು.ವೆಂಕಟಕೃಷ್ಣ–166

ಮುಡದೇರಾಕಾಳ ಬೈರವೆ–151

ಮುದ್ರಣಯಂತ್ರ–08, 13

ಮುಮ್ಮಡಿ ಕೃಷ್ಣರಾಜ ಒಡೆಯರ್–16

ಮುಳಿಯ ತಿಮ್ಮಪ್ಪಯ–226, 266

ಮೂಗೂರ ದೇಶೀಶಲಿಂಗ–95

ಮೆಕೆಂಝಿ ಕೈಫಿಯತ್ತು–31, 35, 46, 56, 197, 198, 215, 229, 264

ಮೇರಿ ಫ್ರೇರೆ–56, 59, 162

ಮೈಸೂರು ರಾಜಮನೆತನ–95

ಮೊಗಲ್ ಸಾಮ್ರಾಜ್ಯ–09, 14, 23

ಮೊದಲ ಆಂಗ್ಲೋ–ಮರಾಠ ಯುದ್ಧ–10

ಮೊಹರಂ ಹಾಡು–113, 233

ಮೌಖಿಕ ಜಾನಪದ–63

ಮೌಜವಾರ್ ಪದ್ಧತಿ–12

ಮೌನಮಿ ಪದ–100

ಮೌನಮಿಯ ಚೌಪದ–94, 97, 99, 135

ಮ್ಯಾನ್ವಲ್‌ಆಫ್ ಕೂರ್ಗ್–66

ಯಸ್.ವಿ. ರಂಗಣ್ಣ–58, 84

ಯು.ಬಿ. ನರಸಿಂಗರಾವ್–60, 173

ಯುರೋಪ ಖಂಡದ ಮಹಾಯುದ್ಧದ ಲಾವಣಿ ಪದಮಾಲಿಕೆ–152

ರಕ್ತಬೋಳ–190, 191, 196

ರಂಗಪ್ಪ ನಾಯಕನ ಅಡಾವೂಡಿ–124, 126

ರಂಗಯ್ಯಶೆಟ್ಟಿ–150

ರಂಗಸ್ವಾಮಿ–56, 58, 77, 78, 84, 85, 100, 101, 104

ರಚನಾ ನಿರಸನ–22

ರಚನೀಕರಣ–22

ರಣಧೀರ ಹಿರೇ ಮದಕರಿ ನಾಯಕ–59

ರಮ್ಯ ಶೀರ್ಷಿಕೆ–258

ರಾಗಿಕಲ್ಲಿನ ಪದಗಳು–118

ರಾಜರಾಣಿಯ ಕಥೆಗಳು–81

ರಾಜಾರಾಮ್ ಮೋಹನರಾಯ್–18, 260

ರಾಬರ್ಟ್ ಕಾಲ್ಡವೆಲ್–64

ರಾಮಕೃಷ್ಣ ಪರಮಹಂಸ–260, 266,

ರಾಮಚಂದ್ರ ವೆಂಕಟೇಶ ಕರಗುದರಿ–84

ರಾಮೇಗೌಡ–42, 50

ರಾಷ್ಟ್ರೀಯತೆ ಅವಧಿ–48

ರಿಚರ್ಡ್ ಎಂ.ಡಾರ್ಸನ್–34

ರೈತವಾರಿ ಪದ್ಧತಿ–12

ರೋಗಚಿಕಿತ್ಸೆಯು–60

ರೋಗಪರೀಕ್ಷೆ–183

ಲಕ್ಕಣ್ಣ–ಈರಣ್ಣ–111, 126

ಲಕ್ಷ್ಮಣ ತೆಲಗಾವಿ–44, 100

ಲಂಡನ್ ಮಿಷನ್–15

ಲಾಲ ಲಜಪತರಾಯ–21

ಲಾವಣಿ–24, 33, 44,

ಲಾವಣಿ ಸಂಗೀತ ನಕ್ಷೆ–139

ಲಾವಣಿಯ ಲಾವಣ್ಯ–232

ಲಾವಣೀ ಪದ ಸಂಗ್ರಹವು–150

ಲಾವಣೀ ಪದಗಳು–152

ಲಿಂಗಣ್ಣನವರ ರಾಮಲಿಂಗಣ್ಣ–152

ಲಿಯೊನಾರ್ಥೊ ಸಿನ್ನಾಮಿ–13

ಲೆಜೆಂಡ್ಸ್ ಆಫ್ ದ ಒರಿಜಿನ ಆಫ್ ದ ತುಂಗಭದ್ರ ರಿವರ್–228

ವತ್ಸಲಾ ಹರಣ–159

ವಸಾಹತೀಕರಣ–16, 20, 26, 47, 260, 265, 266. 276

ವಾಸ್ಕೋಡಿಗಾಮ–09

ವಿ.ಎನ್. ನರಸಿಂಹಯ್ಯಂಗಾರ್–31, 61, 215

ವಿಠೋಬ ವೆಂಕಟನಾಯಕ ತೊರ್ಕೆ–33, 58, 76

ವಿಲಿಯಂ ಕೇರಿ–14

ವಿಲ್ವಟ್ ಎಲಿಯೆಟ್–162
ವಿಲ್ಹೆಲ್ಮ್ ಗ್ರಿಮ್–26
ವೆಂಕಟರಾವ್ ಕೋರಡ್ಕಲ್–60,
ವೆಂಕಟಾಚಲಂ ಶೆಟ್ಟಿ–152
ವೇರಿಂಗ ದೊರೆ–191
ಶಂ.ಬಾ. ಜೋಶಿ–34, 183,
ಶಂಕರನಾರಾಯಣ ಕೂಡ್ಲಿಕರ್–58, 63
ಶಬ್ದಾರ್ಥ ಕೋಶ–28
ಶಿವಲಿಂಗ ಶೆಟ್ಟಿ–152
ಶೃಂಗಾರ ಲಾವಣಿ–136, 156
ಶೈಕ್ಷಣಿಕ ಅವಧಿ–55
ಶೋಭಾನದ ಹಾಡು–53
ಶ್ಯಾಮಲಾ, ಶ್ಯಾಮರಾವ್, ಎಚ್. ಜೋಶಿ–60, 179
ಶ್ರೀಕೃಷ್ಣ ಭಟ್ ಅರ್ತಿಕಜೆ–42, 170
ಶ್ರೀನಿವಾಸ ಹಾವನೂರು–14, 168
ಶ್ರೀರಂಗ ಪಟ್ಟಣದ ಕೆಡುಗಾಲ–58, 136, 242
ಶ್ರೀರಂಗಪಟ್ಟಣ–94
ಶ್ರೀರಾಮಪುರ ಪ್ರೆಸ್–14
ಸಖಿ–154
ಸಂಗೊಳ್ಳಿ ರಾಯಣ್ಣನ ದಂಗೆ–141
ಸಂಗ್ಯನ ಅಪರಾಧ ಮತ್ತು ಸಾವು–145
ಸಂಘರ್ಷಾತೀತ ನಿಲುವು–267
ಸಚಿತ್ರ ಮಹೋಹರ ಲಾವಣಿ ಪದಗಳು–162
ಸಂತ ಫ್ರಾನ್ಸಿಸ್ ಕ್ಸೇವಿಯರ್–15
ಸತ್ಯಪ್ಪಾ ನಿಂಗಪ್ಪಾ ಹುಲಕುಂದ–162
ಸತ್ಯವೇದ ಪರೀಕ್ಷೆ–15
ಸದ್ಬೋಧಚರಿತ ರಾಷ್ಟ್ರೀಯಆನಂದ ಲಾವಣಿ–162
ಸಂಪಿಗೆ ತೆನಿಯಂಥ ಹುಡುಗ–159
ಸಂಪ್ರದಾಯ–60
ಸಮಾಲೋಕನ–241
ಸರ್. ವಿಲಿಯಂ ಜೋನ್ಸ್–27
ಸರ್ಜಪ್ಪ ನಾಯಕ–124
ಸವಾಲ್ ಜವಾಬು–152
ಸಂಸಾರದ ಕತೆ–166
ಸಂಸ್ಕೃತಿ–219
ಸಹಸ್ರಗಾಥಾಮೃತ ಕಲಶವು–171
ಸಹಸ್ರಾರ್ಥ ತುಳು ಗಾದೆಗಳು–42, 167, 170, 171, 172
ಸಾಂದರ್ಭಿಕ ವಿವರಗಳ ಗೈರುಹಾಜರಿ–273
ಸಾಮತಿ ಸಂಗ್ರಹ–167, 172
ಸಾಮಾಜಿಕ ಆಚರಣೆ–60, 197
ಸಾರಾಳ ಜುಮಾದಿ–150
ಸಾವಿತ್ರಿಬಾಯಿ ನಾಗನ ಗೌಡ–244
ಸಾಂಸ್ಕೃತಿಕ ಅನನ್ಯತೆ–21, 22

ಸಾಹಿತ್ಯ ಕೇಂದ್ರಿತ ಚರ್ಚೆ–272
ಸಿ.ಪಿ. ಕೃಷ್ಣಕುಮಾರ್–137
ಸಿ.ಸಂಗಪ್ಪ–173
ಸಿಂಪಿ ಲಿಂಗಣ್ಣ–32, 46, 136
ಸಿರಾಜುದೌಲ–09
ಸುಕೃತ ಮಂತ್ರಗಳು–15
ಸುಗ್ಗಿಕುಣಿತ–53
ಸುಬೋಧ ಪತ್ರಿಕೆ–162
ಸುಲ್ತಾನನ ದೌಲತ್ತು ಹೋದದ್ದು–113
ಸುವ್ವಿಯ ಹಾಡು–120, 125
ಸುಶೀಲಾ ಪಟ್ಟಣಶೆಟ್ಟಿ–36
ಸೂತಕ–211
ಸೊಳ್ಳೆಪಾಟ್–161
ಸ್ವಾಮಿ ವಿವೇಕಾನಂದ–19
ಸ್ತ್ರೀ ಪ್ರಾಧಾನ್ಯ–258
ಹಚ್ಚೆ ಹುಯ್ಯುವುದು–122
ಹಣವಂತ ಗೋವಿಂದ ಜೋಶಿ–172
ಹತ್ತಿನಾಡ ಸಂಜೀವನ–123
ಹರ್ಮನ್ ಮೋಗ್ಲಿಂಗ್–27
ಹಲಗಲಿಯ ಪದ–147
ಹಲಗಲಿಯ ಬೇಡರು–143
ಹಲಸಂಗಿ ಗೆಳೆಯರು–24
ಹಲಸಂಗಿ ಚೆನ್ನಮಲ್ಲಪ್ಪ–233
ಹಸ್ತಪ್ರತಿಗೆ ಮೈಕ್ರೋಫಿಲ್ಮ್ ರೂಪ–140
ಹಳ್ಳಿಯ ಪದಗಳು–100
ಹಳ್ಳಿಯ ಬಾಳು–105
ಹಳ್ಳಿಯ ಹಾಡು–76, 84, 85, 92, 233
ಹಾ.ಮಾ.ನಾಯಕ–04, 26, 49
ಹಾಡುಗಳ ಪ್ರಾಧಾನ್ಯ–257
ಹಾಡುವಿಕೆಗೆ ಮಹತ್ವ–257
ಹಾಸ್ಯದ ಹಾಡು–84
ಹಿಂದೂ ಪುನರುತ್ಥಾಬವಾದ–18
ಹಿಂದೂ ಮ್ಯಾನರ್ಸ್ ಕಸ್ಟಮ್ಸ್ ಆಂಡ್ ಸೆರೋಮೊನಿಸ್–16, 169, 200
ಹಿಂದೂ ರಮ್ಯಕತೆ–164
ಹಿಸ್ಟರಿಆಫ್ ತುಳುವಾಸ್–224
ಹುಟ್ಟಿದ ಹಳ್ಳಿ–ಹಳ್ಳಿಯ ಹಾಡುಗಳು–78
ಹುತ್ತರಿ–66, 211
ಹುಲ್ಲೂರು ಶ್ರೀನಿವಾಸ ಜೋಯಿಸ–162
ಹೆಂಗಸರ ಹಾಡುಗಳು–219
ಹೆಣ್ಣುಮಕ್ಕಳ ಹಾಡುಗಳು–133, 134
ಹೈದರಾಬಾದ್ ನಿಜಾಮ–10
ಹೊಸ ವಿಚಾರ ಸರಣಿ–16
ಹೊಸ ಶಿಕ್ಷಣ ಪದ್ಧತಿ–16

ಭಾಗ 7

ಅನುಬಂಧ : ಎರಡು

ಮೊದಲ ಘಟ್ಟದಲ್ಲಿ ಪ್ರಕಟವಾದ ಕೃತಿಗಳು ಹಾಗೂ ಲೇಖನಗಳ ಕಾಲಾನುಕ್ರಮ ಗ್ರಂಥ ವಿವರ

1792

1. ಲೆ.ಕರ್ನಲ್ ಮೆಕೆಂಜಿ ಸಂಗ್ರಹಿಸಿರುವ ಕರ್ನಾಟಕದ 134 ಕೈಫಿಯತ್ತುಗಳು

1803

2. ಜಾನ್‌ಲೇಡನ್ ಸಂಗ್ರಹಿಸಿರುವ 'ಶ್ರೀರಂಗ ಪಟ್ಟಣದ ಕೆಡುಗಾಲ' ವೆಂಬ ಹೆಸರಿನ ಎರಡು ಲಾವಣಿಗಳು

1816

3. 'Hindu manners, customs and ceremonies', A. J. Dubois, London : clarendon Press (Print-1897)

1826

4. 'Legends of shrine of Harihara in the province of Mysore; Thomas Foulkes'

1847

5. 'ಕನ್ನಡ ಗಾದೆಗಳು' ಮಂಗಳೂರು: ಬಾಸೆಲ್ ಮಿಷನ್ ಪ್ರೆಸ್ (1852ರಲ್ಲಿ ಮರುಮುದ್ರಣ)

1870

6. 'The Bhutas of Nagra Malanadin Maisur', Narasinhayyangar U. N. Indian Antiquary Vol. I, PP 282-284.

1871

7. 'The Folksongs of Southern India', Charles E. Grover, Indian Antiquary Vol. I, Jan 5. Pp:28.

1871

8. 'A Grammar of the Tulu Language', Brigel K.J., Stolz (Mangalore)
9. 'The Legends of Thunga- Bhadra River', Narasinhayyangar U.N., Indian Antiquary Vol:I, PP: 212-213.
10. 'On the Dravidian Element in Sanskrit Dictionaries', Kittel R. F. , Indian Antiqueary Vol.I, PP 235.

1873

11. 'Coorg Superstitions', R.F.Kittle , Indian Antiqueary Vol. II, PP:47
12. 'The Demons in coorg', R.F.Kittel, Indian Antiqueary, Vol:II, PP:161-171
13. 'Marriage in coorg', R. F. Kittel, Indian Antiqueary, Vol:II, PP:182
14. 'Legends of Menhirs of Mysore:on the Karnataka Visnava Dasas', Kittel R. F., Indian Antiquary Vol:II, PP:307.
15. 'Marasa Vakkaligaru', Narasinhayyangar V.N., Indian antiquary Vol:II, PP:50-52
16. 'The Kuwadi of the Hassan District', Karnal Mekenzi, Indian Antiquary Vol:II, PP: 65-68.

1874

17. 'The Village Feast', Karnal Mekenzi, Indian Antiquary Vol:III, Jan; PP: 6-9
18. **'ಸಹಸ್ರ ಗಾಥಾಮೃತ ಕಲಶವು'** (ಒನ್ ಥೌಂಸಡ್ ಕೆನರೀಸ್ ಪ್ರೋವರ್ಬ್ಸ್) ಮಂಗಳೂರು:ಬಾಸೆಲ್ ಮಿಶನ್ ಬುಕ್ ಎಂಡ್ ಟ್ರಾಕ್ಸ್ ಡಿಪಾಜಿಟರಿ

19. 'ಸಹಸ್ರಾರ್ಧ ತುಳು ಗಾದೆಗಳು', ಮಂಗಳೂರು: ಬಾಸೆಲ್ ಮಿಷನ್ ಪ್ರೆಸ್

20. 'On behalf of the Bhutas –Devil and ghost worship in Western India', Walhouse M. J., London : Journal of Anthropological Institute of Great Britain & Ireland, Vol:V

1881

21. 'Old Deccan day's or hindoo Fairy legends –current in southern India', Marry E. Isabella Frere, New Delhi: As in Educational Services.

1885

22. 'A Selection of Kanaries Ballada', Fleet J. F., Indian Antiquary.

Vol: XIV, PP: 293 (1885)

Vol: XV, PP: 349 (1886)

Vol: XVI, PP: 356 (1887)

Vol: XVIII, PP:353 (1889

Vol: XIX, PP:413 (1890)

1886

23. 'ಪಾಡ್ದನೊಳು', (ತುಳು ಪಾಡ್ದನಗಳ ಸಂಗ್ರಹ) ಮೆನ್ನರ್ ಎ. ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು

24. 'ಕೊಡವ ಪಡಿಮೆ', ಮಂಗಳೂರು: ಬಾಸೆಲ್ ಮಿಷನ್

1888

25. 'Folklore in Southern India', Mahalings Natesha Sastri

1889

26. 'The Proverbs in Tulu', Committee of Missionaries. Mangalore:Basel Mission Press.

27. 'Coorg Folklore', Gomme G.L.

1890

28. Tales of the sun or folklore of south India, Georgina Kings cote and Natesa Sastri.

1891

29. 'ಭೂತಸೇವೆ', ಮಂಗಳೂರು:ಬಾಸೆಲ್ ಮಿಷನ್ ಪ್ರೆಸ್
30. 'ಲಾವಣೀ ಪದ ಸಂಗ್ರಹವು – 1ನೇ ಭಾಗ', ಮದ್ರಾಸು: ಶಾರದಾ ಮುದ್ರಣಾಲಯ್.

1893

31. 'ಬಾಗಿಲು ತಡೆಯುವ ಪದಗಳು', ಬೆಂಗಳೂರು:ಬುಕ್ ಡಿಪೋ, ಮುದ್ರಾಕ್ಷರ ಶಾಲೆ.
32. 'ದಕ್ಷಿಣ ಭಾರತದ ಜನಪದ ಕಥೆಗಳು', ನಟೇಶ್ ಶಾಸ್ತ್ರಿ.

1894

33. 'District Mannual of South Kanara Vol-I', Sturrock., (Ed), Madras.
34. 'Popular Canarese Proverbs and their English Equivalents', Shadraeh Iman and Narasinha Rao. U. Mangalore Basel Mission Press.
35. 'ಅರ್ಜುನ ಜೋಗಿ ಹಾಡು', ಸುಬ್ಬಾಶಾಸ್ತ್ರಿ, ಬೆಂಗಳೂರು: ಶ್ರೀ ರಾಜೇಶ್ವರಿ ಮುದ್ರಾಕ್ಷರ ಶಾಲೆ.
36. 'ತೌಳವ ಗಾಥ ಮಂಜರಿ', ಮಂಗಳೂರು:ಬಾಸೆಲ್ ಮಿಶನ್ ಪ್ರೆಸ್
37. 'The Devil Worship of the Tuluvas', Barnel A.C., 1894 to 1897 Indian Antiquary Volumes (Editor : temple A. C)

1900

38. '1900 ಕಾಲಘಟ್ಟದಲ್ಲಿ ಶ್ರೀಕಂಠೇಶ ಗೌಡರು ಸಂಗ್ರಹಿಸಿರುವ ಜನಪದ ಕಥೆಗಳು', ಶ್ರೀಕಂಠೇಶಗೌಡರ ಕೃತಿಗಳು ಭಾಗ.1 ಮೈಸೂರು:ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ.

1902

39. 'ತುರಾಲಾವಣಿ–ಜವಾಬುಗಳು', ಚಿಕ್ಕವರದ ಶೆಟ್ಟಿ, ಎಂ.ಆರ್. ವೆಂಕಟಾಚಲಂ ಶೆಟ್ಟಿ, ಮೈಸೂರು:ಶ್ರೀ ಕೋದಂಡರಮ ವಿಲಾಸ ಪ್ರೆಸ್

1903

40. 'ಬುಕ್ ಆಫ್ ಪ್ರೋವರ್ಬ್ಸ್', ಮಂಗಳೂರು:ಬಾಸೆಲ್ ಮಿಷನ್ ಬುಕ್ ಎಂಡ್ ಟ್ರಸ್ಟ್ ಡಿಪಾಜಿಟರಿ
41. 'ತ್ರಿ ಹಂಡ್ರೆಡ್ ಕೆನರೀಸ್ ಪ್ರೋವರ್ಬ್ಸ್', ಮಂಗಳೂರು:ಬಾಸೆಲ್ ಮಿಷನ್ ಬುಕ್ ಆಂಡ್ ಟ್ರಸ್ಟ್ ಡಿಪಾಜಿಟರಿ

1905

42. 'ಚಿತ್ರದುರ್ಗದ ಲಡಾಯಿ ಲಾವಣಿ', ಲಿಂಗಣ್ಣನವರ ರಾಮಲಿಂಗಣ್ಣ, ಬೆಂಗಳೂರು: ಬುಕ್ ಡಿಪೋ, ಮಂಡಿ
43. 'ಸಾಮತಿ ಸಂಗ್ರಹ – ಕನ್ನಡ ಗಾದೆಗಳೂ, ಅವುಗಳ ಸಮಾನಾರ್ಥಕ ಇಂಗ್ಲಿಷ್ ನುಡಿಗಳು' (1894ರಲ್ಲಿ ಇದರ ಮೊದಲ ಮುದ್ರಣ ಪ್ರಕಟ) ಹಣವಂತ ಗೋವಿಂದ ಜೋಶಿ, ಬೆಳಗಾಂ: ಬೆಳಗಾಂ ಸಮಾಚಾರ ಪ್ರೆಸ್

1908

44. 'ಕನ್ನಡ ಆರತಿಗಳ ಸಂಗ್ರಹ', (ಹೆಣ್ಣು ಮಕ್ಕಳ ಹಾಡುಗಳ ಪ್ರಥಮ ಸಂಗ್ರಹ) ಶಂಕರ ನಾರಾಯಣ ಕೂಡ್ಲಿಕರ್

1909

45. 'ಭಾರತೀಯ ಜನಪದ ಕಥೆಗಳು', ಗೋರ್ದನ್ ಇ.ಎಂ.

1911

46. 'ನೂತನ ಸಹಸ್ರಗಾಥ ಕುಸುಮ ಮಂಜರಿ', ಸಂಗಪ್ಪ ಸಿ., ಮೈಸೂರು: ಕ್ರೌನ್ ಪ್ರೆಸ್ಸ್

1912

47. 'ಲಾವಣಿಪದಗಳು', ಶಿವಲಿಂಗ ಶೆಟ್ಟಿ ಗೋಪಾಳ ದುರದುಂಡಿ, ಬಳ್ಳಾರಿ
48. 'ಎ ಹ್ಯಾಂಡ್ ಬುಕ್ ಆಫ್ ಕೆನರೀಸ್ ಪ್ರೋವರ್ಬ್ಸ್ ವಿತ್ ಇಂಗ್ಲಿಷ್ ಎಲಿಮೆಂಟ್ಸ್', ಯು.ಬಿ.ನರಸಿಂಗರಾವ್, ಮಂಗಳೂರು:ಬಾಸೆಲ್ ಮಿಶನ್ ಬುಕ್ ಆಂಡ್ ಟ್ರಸ್ಟ್ ಡಿಪಾಜಿಟರಿ

1915

49. 'ಲಾವಣಿ ಪದಗಳು', ಬಳ್ಳಾರಿ:ಕೃಷ್ಣ ಮಂದಿರ ಬುಕ್ ಡಿಪೋ

1917

50. 'ಹಳ್ಳಿಯ ವೈದ್ಯ', ಎಂ.ಜಿ.ಮುತ್ತೂರ ಬ್ರದರ್ಸ್, ಬೆಳಗಾಂ:ಕಿತ್ತೂರು

1918

51. 'ಯುರೋಪ ಖಂಡದ ಮಹಾಯುದ್ಧದ ಲಾವಣಿ ಪದ ಮಾಲಿಕೆ', ದ್ವಾರಪಾಲ ಜಿನ್ನಾಪ್ಪ ಜಡಿ, ಬೆಳಗಾಂ
52. 'ಕಲ್ಗಿ–ತುರಾ ಸಂಪ್ರದಾಯದ ಲಾವಣಿಗಳು'

1919

53. 'ಕರ್ನಾಟಕ ಲೋಕೋಕ್ತಿ ನಿಧಾನ', ಮಂಗಳೂರು:ಕನರೀಸ್ ಮಿಷನ್ ಬುಕ್ ಎಂಡ್ ಟ್ರಾಕ್ಟ್ ಡಿಪಾಸಿಟರಿ (1500 ಗಾದೆಗಳು)
54. 'ಲಾವಣಿಗಳು', ಶ್ರೀಕಂಠೇಶ ಗೌಡ, ಬೆಂಗಳೂರು: ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ.
55. 'ಲಾವಣಿಗಳು', ರಾವ್ ಬಹದ್ದೂರ್, ಸಿ. ಹನುಮಂತೇಗೌಡ, ಬೆಂಗಳೂರು: ಕರ್ನಾಟಕ ಸಾಹಿತ್ಯ ಪರಿಷತ್ಪ ಪತ್ರಿಕೆ, ಸಂ.4, ಸಂ.2:ಪು.137–141
56. 'ಕನ್ನಡ ನಾಣ್ಣುಡಿಗಳಲ್ಲಿ ಅರ್ಧ ಗಂಟೆಯ ಕಾಲಕ್ಷೇಪ', ಮಲ್ಲಪ್ಪ ಎಚ್.ಕೆ. ಬೆಂಗಳೂರು (24 ಪುಟದ ಈ ಕೃತಿಯಲ್ಲಿ ನಾಣ್ಣುಡಿ ಕುರಿತ ವಿವೇಚನೆ ಮಾಡಲಾಗಿದೆ)
57. 'ನಂಜನಗೂಡು ಲಾವಣಿ', ಬೆಂಗಳೂರು: ಕರ್ನಾಟಕ ಸಾಹಿತ್ಯ ಪರಿಷತ್ಪಪತ್ರಿಕೆ, ಸಂ.3, ಸಂ.4, ಪು:60–61
58. 'ಕನ್ನಡ ಗಾದೆಗಳ ಜೋರ್ಣೋದ್ಧಾರ', ಮಲ್ಲಪ್ಪ ಎಚ್.ಕೆ., ಬೆಂಗಳೂರು: ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ

1923

59. 'ಲಾವಣಿಗಳ ಲಾವಣ್ಯ', ಧೂಲಾಸಾಹೇಬ ಪಿ., 9ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಓದಿದ ಪ್ರಬಂಧ
60. 'ಬೀಸುವ ಕಲ್ಲಿನ ಹಾಡುಗಳು', ಮಧುರಚೆನ್ನ, ವಿಜಾಪುರದಲ್ಲಿ ನಡೆದ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಓದಿದ ಪ್ರಬಂಧ.
61. 'ಕೆರೆಗೆ ಹಾರ', ಬೆಟಗೇರಿ ಕೃಷ್ಣಶರ್ಮ, ಜಯಕರ್ನಾಟಕ ಪತ್ರಿಕೆ

1924

62. 'ಹಳ್ಳಿಯ ಹಾಡುಗಳು', ಚೆನ್ನಮಲ್ಲಪ್ಪ ಹಲಸಂಗಿ, ಬೆಂಗಳೂರು: ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಸಂ.8, ಸಂ.4, ಪು:271–278

63. 'ಕೊಡವರ ಪಟ್ಟೋಲೆ ಪಳಮೆ', ಚಿಣ್ಣಪ್ಪ ನಡಕೇರಿಯಂಡ, ಬೆಂಗಳೂರು : ವೈ.ಬಿ. ಸುಬ್ಬಯ್ಯ ಆಂಡ್ ಸನ್ಸ್, ಪ್ರಿಂಟರ್ಸ್.

1925

64. 'ಕನ್ನಡ ಲಾವಣಿಗಳ ಸಾಂಗತ್ಯ', ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ.6, ಸಂ.4 (ಜನವರಿ), ಪು:223–254.

65. ಸಾಹಿತ್ಯ ಸಮ್ಮೇಳನದಲ್ಲಿ ಜನಪದ ಕುರಿತು ಜಾಗ್ರತೆ ಮೂಡಿಸಿದ ಮಾತುಗಳು ಬೆಳಗಾವಿ (1925), ಗುಲ್ಬರ್ಗಾ (1928), ಮೈಸೂರು (1938) ಈ ಮೂರು ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಮಾತನಾಡಿದ ಭಾಷಣ: ದ.ರಾ.ಬೇಂದ್ರೆ

1927

66. 'ಫೋಕ್‌ಸಾಂಗ್ಸ್ ಆಫ್ ದಿ ತುಳುವಾಸ್', ಬಿ.ಎ. ಸಾಲೆತ್ತೂರ್

67. 'ಸಾವಿರ ಮಾತಿನ ಸರದಾರ(1000 ಗಾದೆಗಳು)' ಬಸಯ್ಯ ವಿರೂಪಾಕ್ಷಯ್ಯ ಮಠದ, ಗದಗ ಶ್ರೀ ಗುರುಲಿಂಗ ಜಂಗಮ ಗ್ರಂಥ, ಪ್ರಸಾರಕ ಸಂಘ

1928

68. 'ತ್ರಿಪದಿ, ಪ್ರಹ್ಲಾದ ನರೇಗಲ್ಲ', ಧಾರವಾಡ: ಜಯಕರ್ನಾಟಕ ಪತ್ರಿಕೆ

69. 'ಜನಪದ ಗೀತ ಗಾಯತ್ರಿ', ಪ್ರಹ್ಲಾದ ನರೇಗಲ್ಲ, ಧಾರವಾಡ:ಜಯ ಕರ್ನಾಟಕ ಪತ್ರಿಕೆ ಸಂ.6, ಸಂ.9, (ಜುಲೈ) ಪು:488.

1929

70. 'ಜಾನಪದ ಸಾಹಿತ್ಯ', ತೀ.ನಂ., ಶ್ರೀಕಂಠಯ್ಯ, ಧಾರವಾಡ: ಜಯಕರ್ನಾಟಕ ಪತ್ರಿಕೆ.

71. 'ತುಳುವಾಲ ಬಲಿಯೇಂದ್ರ', ನಂದೋಳ್ಗೆ ಶೀನಪ್ಪ ಹೆಗ್ಗಡೆ, ಮಂಗಳೂರು: ಶ್ರೀ ನಿತ್ಯಾನಂದ ಗ್ರಂಥಾಲಯ.

72. 'ತುರಾಲವಣಿ ಮೈಸೂರು ಈರಮುದ್ದಿ', ಮೈಸೂರು: ಜೀವರತ್ನಾಕರ ಬುಕ್ ಡಿಪೋ.

1930

73. 'ರೋಗ ಚಿಕಿತ್ಸೆಯು', ಶಿವರಾವ್. ಬಾ. ಮಂಗಳೂರು: ಬಾಸೆಲ್ ಮಿಷನ್ ಪ್ರೆಸ್ ಮತ್ತು ಬುಕ್ ಡಿಪೋ.

74. 'ಹಳ್ಳಿಯ ಹಾಡುಗಳು', ಬೆಟಗೇರಿ ಕೃಷ್ಣಶರ್ಮ, ಜಯಕರ್ನಾಟಕ ಪತ್ರಿಕೆ (ಎಪ್ರಿಲ್) ಸಂ.15, ಸಂ.1, ಪು:45–65

75. 'ಜನಪದ ಸಾಹಿತ್ಯದ ಮಹತ್ತ್ವ', ಮಾಸ್ತಿ ವೆಂಕಟೇಶ ಅಯ್ಯಂಗಾರ ಮತ್ತು ಬಿ.ಎಂ.ಶ್ರೀಕಂಠಯ್ಯ, ಜಯಕರ್ನಾಟಕ ಪತ್ರಿಕೆ, ಸಂ.9

1931

76. 'ಕನ್ನಡ ಒಗಟುಗಳು', (ವಿವಾಹ ಕಾಲದಲ್ಲಿ ಹಾಡುವ ಪದ್ಯರೂಪದ ಒಗಟುಗಳು) ಶ್ಯಾಮಲ ಶ್ಯಾಮರಾವ್, ಎಚ್.ಜೋಶಿ, ಅಥಣಿ.

77. 'ಗರತಿಯ ಹಾಡು', (800 ತ್ರಿಪದಿಗಳಿವೆ) ಹಲಸಂಗಿ ಸಹೋದರರ ಸಂಗ್ರಹ, ಮಧುರ ಚೆನ್ನ, ಕಾಪಸೆರೇವಪ್ಪ, ಸಿಂಪಿಲಿಂಗಣ್ಣ, ಪಿ.ಧೂಲಾ ಸಾಹೇಬ ಹುಬ್ಬಳ್ಳಿ:ಸಾಹಿತ್ಯ ಭಂಡಾರ.

78. 'ಕರ್ನಾಟಕದ ಜನತೆಯ ಸಂಸ್ಕೃತಿ', ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಂಗಳೂರು:ಜೀವನ ಕಾರ್ಯಾಲಯ

79. 'ಮಕ್ಕಳಿಗೆ ಹೇಳುವ ಕಥೆಗಳು', ತೀ.ನಂ.ಶ್ರೀಕಂಠಯ್ಯ, ಮೈಸೂರು:ವಿದ್ಯಾದಾಯಿನಿ.

80. 'ಫೋಕ್‌ಸಾಂಗ್ಸ್ ಇನ್ ದ ಕರ್ನಾಟಕ', ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮದ್ರಾಸ್:ತ್ರಿವೇಣಿ ಇಂಗ್ಲಿಷ್ ನಿಯತಕಾಲಿಕೆ, (ನವೆಂಬರ್) ಸಂ.4, 12–16

1933

81. 'ಹಳ್ಳಿಯ ಹಾಡುಗಳು' (150 ತ್ರಿಪದಿಗಳು) ವಿಠೋಬ ವೆಂಕಟನಾಯಕ ತೊರ್ಕೆ, ಉತ್ತರಕನ್ನಡ:ಗೋಕರ್ಣನಂದಿನೀ ಮುದ್ರಣಾಲಯ

82. 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡುಗಳು', ಅರ್ಚಕ ಬಿ. ರಂಗಸ್ವಾಮಿ, (1971ರಲ್ಲಿ ಮರುಮುದ್ರಣ) ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ

83. 'ಜೀವನ ಸಂಗಾತಿ', ಸಿಂಪಿಲಿಂಗಣ್ಣ, ಪಿ. ಧೂಲಾಸಾಹೇಬ ಚಡಚಣ: ಶ್ರೀ ಅರವಿಂದ ಗ್ರಂಥಾಲಯ, ಜಯಕರ್ನಾಟಕ ಗ್ರಂಥಮಾಲೆ.

84. 'ಸೊಳ್ಳೆಪಾಟ್', ತೊಲುಪಂಡ ಶಾಂಭವಾನಂದ

85. 'ಕೋಲು ಹಾಡುಗಳು', (ಗಣಪತಿ ಮೇಳದ ಪದ್ಯಗಳು ರಾಮಚಂದ್ರ ವೆಂಕಟೇಶ ಕರ ಗುದರಿ, ಹುಬ್ಬಳ್ಳಿ, ಶಂಕರವಿಲಾಸ ಪ್ರಿಂಟಿಂಗ್ ಪ್ರೆಸ್.

86. 'ಕನ್ನಡ ಒಗಟುಗಳು', ಶ್ಯಾಮಲಾ, ಶ್ಯಾಮರಾವ್ ಎಚ್.ಜೋಶಿ ಅಥಣಿ

1935

87. ‘ಕೆಲವು ಹಳ್ಳಿಯ ಹಾಡುಗಳು’, ಬಿ.ಎನ್.ರಂಗಸ್ವಾಮಿ, ಪ್ರಬುದ್ಧ ಕರ್ನಾಟಕ: ಸಂ.16, ಸಂ.2 ಪು:72–73
88. ‘ಹಳ್ಳಿಯ ಹಾಡುಗಳು’, ಎಸ್.ವಿ.ರಂಗಣ್ಣ, ಪ್ರಬುದ್ಧ ಕರ್ನಾಟಕ: ಸಂ.16, ಸಂ.2, ಪು:31–36
89. ‘ಮಲ್ಲಿಗೆದಂಡೆ’, ಕಾಸಪೆ ರೇವಪ್ಪ, ಧಾರವಾಡ: ಬೆಳಗಾವಿ ರಾಮಚಂದ್ರರಾಯರು
90. ‘ಕರ್ನಾಟಕ ಸಂಸ್ಕೃತಿ’, ದೇವುಡು ನರಸಿಂಹ ಶಾಸ್ತ್ರಿ, ಬೆಂಗಳೂರು:ಶಾರದಾ ಪ್ರಕಟಣಾಲಯ

1936

91. ‘ನಾಣ್ಣುಡು’, ಪ್ರಹ್ಲಾದ ನರೇಗಲ್ಲ, ಕುಲಕರ್ಣಿ, ಬೆಳಗಾಂ
92. ‘ವೀರಮಣಿ ಓಬವ್ವ’, ರಂಗಯ್ಯ ಸಿ. ಸತ್ಯವಾಣಿ ವಾರಪತ್ರಿಕೆಯಿಂದ
93. ‘ಕೋಲಾರ ನಡೂ–ಕತೆಗಳು’, (ಕೋಲಾರ ಜಿಲ್ಲೆಯ ಜನಪ್ದ ಜೀವನ), ವೆಂಕಟಕೃಷ್ಣಪ್ಪ ಮು. ಬೆಂಗಳೂರು: ಸತ್ಯಶೋಧನ ಪ್ರಕಟಣ ಮಂದಿರ
94. ‘ತತ್ವಲಾವಣಿ ಪದಗಳು’, (ಬೇರೆ ಬೇರೆ ವಿಷಯಗಳನ್ನು ಕುರಿತ ಲಾವಣಿ ಪದಗಳು) ಗುರುವಲಿ ಅಹಮದ್ ಸಹಾಯ ಮವಲಾ ಅಲಿ ಹುಬ್ಬಳ್ಳಿ: ವಾಗ್ವಿಲಾಸ ಬುಕ್ ಡಿಪೊ

1937

95. ‘ಮೈಸೂರಿನ ಜನಪದ ಕುಣಿತಗಳು ಮತ್ತು ಆಟಗಳು’, ನಾ.ಕಸ್ತೂರಿ
96. ‘ಸಚಿತ್ರ ಮನೋಹರ ಲಾವಣಿ ಪದಗಳು’, ಶಿವನಾಗಪ್ಪ ಎ.ಆರ್. ಹುಬ್ಬಳ್ಳಿ: ವಾಗಿವಲ್ವಾಸ ಬುಕ್ ಡಿಪೋ.
97. ‘ಗರತಿಯ ಹಾಡು’, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪ್ರಬುದ್ಧ ಕರ್ನಾಟಕ: ಸಂ.18 ಸಂ. 3, ಪು:3–37
98. ‘ಕರ್ನಾಟಕದ ಜನಪದ ಸಾಹಿತ್ಯ’, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪ್ರಬುದ್ಧ ಕರ್ನಾಟಕ, ಸಂ.18, ಸಂ.1, ಪು:3–28

1938

99. ‘ಹಳ್ಳಿಯ ಹಾಡುಗಳು’, ಗೋರೂರು ರಾಮಸ್ವಾಮಿ ಅಯ್ಯಂಗಾರ್, ಮೈಸೂರು: ಶಾರದಾ ಮಂದಿರ, ರಾಮಯ್ಯರ್ ರಸ್ತೆ.

100. 'ಹಳ್ಳಿಯ ಹಾಡುಗಳು', ಬಿ.ಎನ್.ರಂಗಸ್ವಾಮಿ

101. 'ಒಕ್ಕಲಿಗರ ಹಾಡು', ಮ.ಗ.ಶೆಟ್ಟಿ, ಬಂಕಿಕೋಡ್ಲ

1938

102. 'ಕರ್ನಾಟಕ ಜನಜೀವನ', ಬೆಟಗೇರಿ ಕೃಷ್ಣಶರ್ಮ ಧಾರವಾಡ, ಜಯಂತಿ ಕಾರ್ಯಾಲಯ

103. 'ಜಾನಪದ ಸಾಹಿತ್ಯ ಸಂಗ್ರಹ', (ಬೀಸುವ ಕಲ್ಲಿನ ತ್ರಿಪದಿ ಪದಗಳು) ಕೃಷ್ಣ ರಂಗೋ ಕುಲಕರ್ಣಿ, ಅರಭಾವಿ: ಎಸ್.ಎಸ್ ಸೊಪ್ಪಿಮಠ

104. 'ಹಳ್ಳಿಯ ಹಾಡುಗಳು', ಮತಿಘಟ್ಟ ಕೃಷ್ಣಮೂರ್ತಿ, ಬೆಂಗಳೂರು: ಕನ್ನಡ ನುಡು ಪತ್ರಿಕೆ

105. 'ಕರ್ನಾಟಕ ಜಾನಪದ ಸಾಹಿತ್ಯ', ವಿ.ಜಿ.ಕುಲಕರ್ಣಿ, ಬೆಂಗಳೂರು: ಕನ್ನಡ ನುಡಿ ಪತ್ರಿಕೆ

106. ಕರ್ನಾಟಕ ಸಂಸ್ಕೃತಿಯ ಸ್ವರೂಪ', ಆರ್. ವಿ. ಜಾಗಿರ್‌ದಾರ್, ಕನ್ನಡ ನುಡಿ ಪತ್ರಿಕೆ, ಎಪ್ರಿಲ್ ಸಂಚಿಕೆ

1940

107. 'ಹಳ್ಳಿಯ ಪದಗಳು', ಬಿ.ಎನ್.ರಂಗಸ್ವಾಮಿ, ಮೈಸೂರು:ದಿ ಪ್ರೊಗ್ರೆಸ್ ಬುಕ್‌ಸ್ಟಾಲ್

108. 'ಮಾನೌಮಿ ಚೌಪದ', ಅನಂತ ರಂಗಾಚಾರ್ ಎನ್., ಜಯಕರ್ನಾಟಕ ಪತ್ರಿಕೆ (1961ರಲ್ಲಿ ಮೈಸೂರು ಶಾರದಾ ಮಂದಿರ ರಾಮಯ್ಯ ರಸ್ತೆ ಇಲ್ಲಿ ಮರುಮುದ್ರಣವಾಯಿತು)

109. 'ಮಾಯಕೊಂಡದ ಮುತ್ತಿಗೆ ಅಥವಾ ರಣಧೀರ ಹಿರೇ ಮದಕರಿ ನಾಯಕ', ಜಯಂತಿ ಪತ್ರಿಕೆ, ಸಂ.3, ಪು:140

110. 'ನಾಡಪದಗಳು', ಬಿಂದುಮಾಧವ ಬಿ.

111. 'ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಭಾಷಣ', ಸಾವಿತ್ರೀ ಬಾಯಿ ನಾಗನಗೌಡ, ಬೆಂಗಳೂರು: ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ (ಅಕ್ಟೋಬರ್–ಡಿಸೆಂಬರ್) ಸಂ.25, ಸಂ.4, ಪು:234–34

112. 'ಈಸೋಪನ ನೀತಿಕತೆಗಳು', (ಕರ್ನಾಟಕ ಟ್ರಾನ್ಸ್‌ಲೇಶನ್ ಆಫ್ ಇಸೋಫ್ಸ್ ಫೆಬಲ್ಸ್) ವಾಲ್ಟರ್ ಎಲಿಯಟ್, ಮದ್ರಾಸ್, ಅಸ್ಲಿಯನ್ ಮಿಶನ್ ಪ್ರೆಸ್

1941

113. 'ಸದ್ಬೋಧಚರಿತ ರಾಷ್ಟ್ರೀಯ ಆನಂದ ಲಾವಣಿಗಳು', ಪಟ್ಟದೇವರು ಹಿರೇಮಠ, ಹುಲಕುಂದ:ಸತ್ಯಪ್ಪ ನಿಂಗಪ್ಪಾ
114. 'ದಿ ಮೈಸೂರ್ ಟ್ರೈಬ್ಸ್ ಆಂಡ್ ಕ್ಯಾಸ್ಟ್ಸ್', ಎಲ್.ಎ. ಕ್ರಿಷ್ಣ ಅಯ್ಯರ್
115. 'ಜಾನಪದ ಗೀತೆಗಳು', ಮಿರ್ಜಿ ಅಣ್ಣರಾಯ, ಜೀವನ ಪತ್ರಿಕೆ
116. 'ರಾಯನರಿ ಮೊದಲಾದ ಎಂಟು ಕಥೆಗಳು', ಜಾತಕ ಕತೆಗಳು, ಜಿ.ಪಿ.ರಾಜರತ್ನಂ (ಅನುವಾದ) ಬೆಂಗಳೂರು: ಶಾಕ್ಯ ಸಾಹಿತ್ಯ ಮಂಟಪ, ಮಲ್ಲೇಶ್ವರ

1943

117. 'ಮನೆಮದ್ದು', ವೆಂಕಟರಾವ್ ಕೋರಡ್ಕಲ್ ಉಡುಪಿ, ನವಭಾರತ ಪುಸ್ತಕ ಭಂಡಾರ (ಈ ಕೃತಿಯು 1948, 55, 67, 93 ರಲ್ಲಿ ಮರುಮುದ್ರಣ ಕಂಡಿದೆ)
118. 'ಹಳ್ಳಿಯ ಬಾಳು', ಗೊರೂರು ರಾಮಸ್ವಾಮಿ ಅಯ್ಯಂಗಾರ್
119. 'ಕೊಂತೆಮ್ಮನ ಪದ', ಎಂ.ಆರ್.ಲಕ್ಷ್ಮಮ್ಮ, ಪ್ರಬುದ್ಧ ಕರ್ನಾಟಕ ಪತ್ರಿಕೆ
120. 'ಕನ್ನಡ ಜಾನಪ್ದ ಸಾಹಿತ್ಯ', ಬಿ.ಎಸ್.ಲಕ್ಷ್ಮೀದೇವಿ, ಕನ್ನಡ ನುಡಿ ಪತ್ರಿಕೆ
121. 'ವಿವಿಧ ದೇಶದ ಜನಪದ ಕತೆಗಳು', ವರದರಾಜ ಹುಯಿಲಗೋಳ

1944

122. 'ಪಾಳೆಯಗಾರರ ಕೋಲುಪದಗಳು', ಸುಬೋಧ ಪತ್ರಿಕೆ
123. 'ರಾಜಕುಮಾರನ ಕನಸು', ಎಂ.ರಾಮರಾವ್, (ಸರ್ಬಿಯಾ ದೇಶದ ಕಥೆಗಳು) ಮೈಸೂರು:ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ
124. 'ಕನ್ನಡ ಗಾದೆಗಳು', ಎಚ್.ಎಸ್.ಅಚ್ಚಪ್ಪ, ಮೈಸೂರು: ಜಯನಗರ
125. 'ಜನಪದ ಸಾಹಿತ್ಯ ಗೋಷ್ಠಿಯ ಆರಂಭದ ಭಾಷಣ', ಉತ್ತಂಗಿ ಚನ್ನಪ್ಪ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ.29, 68–79
126. 'ಜನಪದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷ ಭಾಷಣ', ಸಿಂಪಿಲಿಂಗಣ್ಣ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ.29, ಪು.84

1945

127. 'ಪಾರ್ತಿಸುಬ್ಬ' (ಯಕ್ಷಗಾನ ಪ್ರಸಂಗ) ಮುಳಿಯ ತಿಮ್ಮಪ್ಪಯ್ಯ, ಮಂಗಳೂರು: ಬಾಳಿಗ ಎಂಡ್ ಸನ್ಸ್, ರಥಬೀದಿ

128. ‘ಹೊಸಮಾದರಿಯ ಒಗಟುಗಳು’, ನಾರಾಯಣ್ ರಾವ್, ಸೀತಾಬಾಯಿ ದೇಶಪಾಂಡೆ, ಹೊಂಬಾಳಿ ಬಂಧುಗಳು, ಗದಗ.

129. ‘ಕೊಡಗಿನ ಜನಪದ ಸಾಹಿತ್ಯ’, ಎಂ.ಎಸ್.ಅನಂತ ಪದ್ಮನಾಭ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ.30 ಸಂ.3–4 ಪು:26–38

130. ‘ಎರಡು ಕತೆಗಳು’, ಎಂ.ರಾಮರಾವ್, ಮೈಸೂರು: ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿ

1946

131. ‘ತತ್ವಲಾವಣಿಯ ಪದಗಳು’, (22 ಲಾವಣಿ ಪದಗಳಿವೆ) ಮಾರನ ಬಸರಿ ಎಂ.ಕೆ.ಹುಬ್ಬಳ್ಳಿ: ಶ್ರೀ ಬಸವೇಶ್ವರ ಪುಸ್ತಕ ಭಂಡಾರ

132. ‘ಶೃಂಗಾರ ಲಾವಣಿ ಪದಗಳು’, ಮಾರನ ಬಸರಿ ಎಂ.ಕೆ. ಹುಬ್ಬಳ್ಳಿ: ಶ್ರೀ ಬಸವೇಶ್ವರ ಪುಸ್ತಕ ಭಂಡಾರ

133. ‘ಮಕ್ಕಳ ಒಡಪುಗಳು’, ಶಂ.ಬಾ.ಜೋಷಿ

134. ‘ಒಡಪುಗಳು’, ಶಂ.ಬಾ.ಜೋಷಿ, ಧಾರವಾಡ: ಮನೋಹರ ಗ್ರಂಥಮಾಲೆ

1947

135. ‘ವಿವಿಧ ದೇಶದ ಜಾನಪದ ಕಥೆಗಳು’, ವರದರಾಜ ಹುಯಿಲಗೋಳ

136. ‘ನಾಡ ಪದಗಳು’, ಎಲ್. ಗುಂಡಪ್ಪ, ಬೆಂಗಳೂರು: ಮೋದಿ ಪವರ್ ಪ್ರಿಂಟಿಂಗ್ ವರ್ಕ್ಸ್

137. ‘ಆರು ಹಂಸಗಳು’, ಎಚ್.ಎಂ.ಶಂಕರನಾರಯಣ ರಾವ್, ಮೈಸೂರು: ಕಾವ್ಯಾಲಯ

138. ‘ಜೀವರಸ’, ರಾಮರಾವ್ ಎಂ.ಬೆಂಗಳೂರು: ಸತ್ಯಶೋಧನ ಪ್ರಕಟನ ಮಂದಿರ

139. ‘ಚಿಪಿಗನ ಸಹವಾಸ’, ಎಂ.ರಾಮರಾವ್, ಬೆಂಗಳೂರು: ಸತ್ಯಶೋಧನ ಪ್ರಕಟಣ ಮಂದಿರ

140. ‘ರಾಜಕುಮಾರಿಯ ಸೋಲು’, ಚಿದಂಬರಂ ಕೂಡಲಿ, ಮೈಸೂರು: ಕಾವ್ಯಾಲಯ

141. ‘ಮಂಜಿನ ಮಣಿ’, (ಗ್ರಿಮ್ ಸಹೋದರರ ಹನ್ನೊಂದು ಕಥೆಗಳು), ಎಂ.ರಾಮರಾವ್ ಬೆಂಗಳೂರು: ಸತ್ಯಶೋಧನ ಪುಸ್ತಕ ಭಂಡಾರ

142. ‘ಚಕ್ರವರ್ತಿಯ ಕೋಗಿಲೆ’, (ಹ್ಯಾನ್ಸ್ ಕ್ರಿಶ್ಚಿಯನ್ ಆ್ಯಂಡರ್ ಸನ್ನರ ಏಳು ಕಥೆಗಳು) ಎಂ.ರಾಮರಾವ್ ಬೆಂಗಳೂರು: ಸತ್ಯಶೋಧನ ಪ್ರಕಟಣ ಮಂದಿರ

143. 'ಜನಸಾಮಾನ್ಯರ ಸಾಹಿತ್ಯದ ಸ್ವರೂಪ ದರ್ಶನ', (ಹರಪ್ಪನಹಳ್ಳಿಯಲ್ಲಿ ನಡೆದ 30ನೆಯ ಸಾಹಿತ್ಯ ಸಮ್ಮೇಳನ ಜನಪದ ಗೋಷ್ಠಿಯ ಅಧ್ಯಕ್ಷ ಭಾಷಣ), ಬೆಟಗೇರಿ ಕೃಷ್ಣ ಶರ್ಮ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

144. 'ಜನಪದ ಸಾಹಿತ್ಯ', ದ.ರಾ.ಬೇಂದ್ರೆ, ಜೀವನ ಪತ್ರಿಕೆ, ಸಂ.8, (ಈ ಲೇಖನವು ಬೆಂದ್ರೆಯವರ ಸಾಹಿತ್ಯದಲ್ಲಿ ವಿರಾಟ ಸ್ವರೂಪ' ಸಂಕಲನದಲ್ಲಿದೆ)

1948

145. 'ಹೆಣ್ಣು ಮಕ್ಕಳ ಪದಗಳು', ತೀ.ನಂ.ಶ್ರೀಕಂಠಯ್ಯ, ಮೈಸೂರು: ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ

146. 'ಜನಪದ ಸಾಹಿತ್ಯದಲ್ಲಿ ಸೌಂದರ್ಯ', ಶಿವೇಶ್ವರ ದೊಡ್ಡಮನಿ, ಜೀವನ ಪತ್ರಿಕೆ

147. 'ಮಾನೌಮಿ ಪದಗಳು', ಕೆ.ಆರ್.ಲಿಂಗಪ್ಪ, ಮೈಸೂರು: ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ

148. 'ಹಳ್ಳಿಯ ಹಾಡು', ಗೋಪಾಲನ್ ಎಂ.ಎಸ್. ಮೈಸೂರು: ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ

ಭಾಗ 7

ಅನುಬಂಧ : ಮೂರು

ಪರಾಮರ್ಶನ ಗ್ರಂಥ

1. ಅನಂತನಾರಾಯಣ ಎಸ್, 1970. 'ನವೋದಯ ಮತ್ತು ಜಾನಪದ ಸಾಹಿತ್ಯ', (ಹೊನ್ನ ಬಿತ್ತೇವು ಹೊಲಕೆಲ್ಲ) ತರೀಕೆರೆ:ಅಖಿಲ ಕರ್ನಾಟಕ ಜಾನಪದ ಸಾಹಿತ್ಯ ಸಮ್ಮೇಳನ
2. ಅನಂತರಾಮಯ್ಯ ಆರ್.ಎಲ್.(ಅನು) 1974. 'ಸ್ವಾತಂತ್ರ್ಯದ ಹೋರಾಟ:ಹೊಸ', ದೆಹಲಿ:ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
3. ಅಮೂರ ಜಿ.ಎಸ್. 1983. 'ಕನ್ನಡ ಕಾದಂಬರಿಯ ಬೆಳವಣಿಗೆ', ಬೆಂಗಳೂರು:ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ
4. ಅಶೀಶ್ ನಂದಿ, 1995. 'ಪ್ರಸ್ತುತ ಭಾರತ ಮತ್ತು ದೇಶೀಯ ಜ್ಞಾನ ಪರಂಪರೆಗಳು–ಒಂದು ಚರ್ಚೆ' (ಮಾತುಕತೆ (ಸಂ). ಜಶವಂತ್ ಜಾಧವ), ಹೆಗ್ಗೋಡು: ನೀನಾಸಮ್.
5. ಕಲಬುರ್ಗಿ ಎಂ.ಎಂ.(ಸಂ) 1994. 'ಕರ್ನಾಟಕ ಕೈಫಿಯತ್ತುಗಳು', ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
6. ಕಲಬುರ್ಗಿ ಎಂ.ಎಂ., 1990. 'ಫ್ಲೀಟ್ ಸಂಗ್ರಹಿಸಿದ ಸ್ವಾತಂತ್ರ್ಯ ಸಮರದ ಲಾವಣಿ ಸಾಹಿತ್ಯ', (ವಜ್ರದೀಪ್ತಿ–ನೆನಪಿನ ಸಂಚಿಕೆ) ಅಖಿಲ ಕರ್ನಾಟಕ 60ನೆಯ ಸಾಹಿತ್ಯ ಸಮ್ಮೇಳನ.
7. ಕಾಪಸೆ ಜಿ.ಎಸ್. 1976. 'ಮಧುರಚೆನ್ನ–ಜೀವನ ಹಾಗೂ ಕೃತಿಗಳ ಸಮೀಕ್ಷೆ', ಧಾರವಾಡ:ಕರ್ನಾಟಕ ವಿಶ್ವವಿದ್ಯಾಲಯ.

8. ಕೀರ್ತಿನಾಥ ಕುರ್ತಕೋಟಿ 1989. 'ಸಂಸ್ಕೃತಿ ಸ್ಪಂದನ', ಧಾರವಾಡ:ಮನೋಹರ ಗ್ರಂಥಮಾಲೆ.

9. ಕೀರ್ತಿನಾಥ ಕುರ್ತಕೋಟಿ 1994. 'ಅಭಿಜಾತ ಕಾವ್ಯ ಹಾಗೂ ಮೌಖಿಕ ಸಂಪ್ರದಾಯ'(ರುಜುವಾತು ಸಂ.35 (ಸಂ) ಯು.ಆರ್.ಅನಂತಮೂರ್ತಿ), ಹೆಗ್ಗೋಡು:ಕವಿಕಾವ್ಯ.

10. ಕುಶಾಲಪ್ಪ ಗೌಡ ಕೆ., ಚಿನ್ನಪ್ಪ ಗೌಡ ಕೆ., 1983. 'ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಯತ್ತುಗಳು', ಉಜಿರೆ:ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ.

11. ಕೋಟ್ಯಾಳ ಬಿ.ಎಸ್., 1989. 'ಜಾನಪದ ಸಾಹಿತ್ಯದಲ್ಲಿ ಶೃಂಗಾರ ನಿರೂಪಣೆ', ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.

12. ಕೃಷ್ಣಕುಮಾರ್ ಸಿ.ಪಿ., 1967. 'ಸ್ವಾತಂತ್ರ್ಯೋತ್ತರ ಜಾನಪದ ಸಾಹಿತ್ಯ ಸಂಗ್ರಹ' (ಹೊನ್ನ ಬಿತ್ತೇವ ಹೊಲಕೆಲ್ಲ) ತರೀಕೆರೆ:ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನ.

13. ಕೃಷ್ಣಕುಮಾರ್ ಸಿ.ಪಿ, 1975. 'ಜಾನಪದ ಗೀತೆ', ಮೈಸೂರು:ಸಂವಹನ ಶಿವರಾಂಪೇಟೆ.

14. ಕೃಷ್ಣಕುಮಾರ್ ಮತಿಘಟ್ಟ, (ಸಂ) 1975. 'ಗೀತೆಗಳು' (ಸಂಪುಟ 1), ಬೆಂಗಳೂರು:ಗುರುಮೂರ್ತಿ ಪ್ರಕಾಶನ.

15. ಕೃಷ್ಣರಾವ್ ಕಪಟರಾಳ್, 1970. 'ಕರ್ನಾಟಕ ಸಂಸ್ಕೃತಿಯ ಸಂಶೋಧನೆ', ಮೈಸೂರು:ಉಷಾ ಸಾಹಿತ್ಯ ಮಾಲೆ.

16. ಕೃಷ್ಣರಾವ್ ಎಂ.ವಿ., 1959. 'ಕರ್ನಾಟಕದ ಚರಿತೆ'. ಬೆಂಗಳೂರು: ರಾವ್ ಅಂಡ್ ಸನ್ಸ್, ಜಯನಗರ.

17. ಕೃಷ್ಣಶರ್ಮ ಬೆಟಗೇರಿ, 1969. 'ನಮ್ಮ ಸಂಸ್ಕೃತಿ ಪರಂಪರೆ', ಧಾರವಾಡ: ಸಮಾಜ ಪುಸ್ತಕಾಲಯ.

18. ಕೃಷ್ಣಶರ್ಮ ಬೆಟಗೇರಿ, 1976. 'ಕನ್ನಡ ಜಾನಪದ ಸಾಹಿತ್ಯ', ಧಾರವಾಡ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.

19. ಕೃಷ್ಣಶರ್ಮ ಬೆಟಗೇರಿ, 1971. 'ಅಧ್ಯಕ್ಷರ ಭಾಷಣ', (ಅಖಿಲ ಕರ್ನಾಟಕ ಮೂರನೆಯ ಜಾನಪದ ಸಮ್ಮೇಳನ) ನಾಗಮಂಗಲ.

20. ಗದ್ದಗಿಮಠ ಬಿ.ಎಸ್., 1952. 'ನಾಲ್ಕು ನಾಡಪದಗಳು', ಬೆಂಗಳೂರು: ಲಿಂಗರಾಜು ಕಾಲೇಜು.

21. ಗದ್ದಗಿಮಠ ಬಿ.ಎಸ್., 1963. 'ಕನ್ನಡ ಜಾನಪದ ಗೀತೆಗಳು', ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ

22. ಗೋಪಾಲ ಬಾ.ರಾ., 1986. 'ಕರ್ನಾಟಕ ಇತಿಹಾಸ', ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ.

23. ಗೋಪಾಲಕೃಷ್ಣರಾವ್ ಕೆ.ಎಲ್.(ಅನು) 1988. 'ಭಾರತದ ಇತಿಹಾಸ', ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್, ಪ್ರೈವೇಟ್ ಲಿಮಿಟೆಡ್.

24. ಗೋವಿಂದ ರಾಜ ಗಿರಡ್ಡಿ, 1971. 'ಜನಪದ ಕಾವ್ಯ', ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.

25. ಚಂದ್ರಶೇಖರ ಕಂಬಾರ, 1980. 'ನಮ್ಮ ಜಾನಪದ', ಬೆಂಗಳೂರು: ಅಭಿಜಾತ ಗ್ರಂಥಮಾಲೆ.

26. ಚಂದ್ರು ಕಾಳೇನಹಳ್ಳಿ, 1978. 'ನಗರ ಜಾನಪದ', ಮೈಸೂರು: ಭಾರತೀ ಪ್ರಕಾಶನ.

27. ಚನ್ನಬಸಪ್ಪ ಗೊ.ರು., ರಾಮೇಗೌಡ ಬೈರಮಂಗಲ, ಮತ್ತು ಶಿವಶಂಕರ್ ಚಕ್ಕೆರೆ (ಸಂ) 1991. 'ಜಾನಪದ ದರ್ಶನ', ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

28. ಚಿದಾನಂದಮೂರ್ತಿ ಎಂ., 1987. 'ಕನ್ನಡ ಸಂಸ್ಕೃತಿ:ನಮ್ಮ ಹೆಮ್ಮೆ', ಬೆಂಗಳೂರು:ಸಾಹಿತಿಗಳ ಕಲಾವಿದರ ಬಳಗ.

29. ಚಿದಾನಂದಮೂರ್ತಿ ಎಂ., 1991. 'ಕರ್ನಾಟಕ ಸಂಸ್ಕೃತಿ', ಬೆಂಗಳೂರು:ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ.

30. ಚಿನ್ನಪ್ಪ ಗೌಡ ಕೆ., 1989. 'ಪನಿಯಾರ'(ಅಖಿಲ ಭಾರತ ತುಳು ಸಮ್ಮೇಳನದ ನೆನಪಿನ ಸಂಚಿಕೆ) ಮಂಗಳೂರು:ತುಳುಕೂಟ(ರಿ).

31. ಚಿನ್ನಪ್ಪ ಗೌಡ ಕೆ., 1990. 'ಭೂತಾರಾಧನೆ–ಜಾನಪದೀಯ ಅಧ್ಯಯನ', ಮಂಗಳಗಂಗೋತ್ರಿ:ಮದಿಪು ಪ್ರಕಾಶನ.

32. ಚಿನ್ನಪ್ಪ ಗೌಡ ಕೆ., 1993. 'ದಕ್ಷಿಣಕನ್ನಡ ಜಿಲ್ಲೆಯ ಜಾನಪದ ಅಧ್ಯಯನ–ಪ್ರಕಟವಾಗಿರುವ ಒಲವುಗಳು'(ತೇರು), ಕುಂದಾಪುರ:6ನೇ ಜಿಲ್ಲಾ ಸಾಹಿತ್ಯ ಸಮ್ಮೇಳನ.

33. ಜಯಲಕ್ಷ್ಮೀ ಸೀತಾಪುರ, 1987. 'ಐದು ಜಾನಪದ ಪ್ರಬಂಧಗಳು', ಮೈಸೂರು: ಪ್ರತಿಭಾ ಪ್ರಕಾಶನ.

34. ಜವರೇಗೌಡ ದೇ.(ಸಂ), 1978. ‘ಜನಪದ ಗೀತಾಂಜಲಿ’ (ಕನ್ನಡ ಜನಪದ ಗೀತೆಗಳ ಸಂಕಲನ) ನವದೆಹಲಿ:ಕೇಂದ್ರ ಸಾಹಿತ್ಯ ಅಕಾಡೆಮಿ.

35. ಜವರೇಗೌಡ ದೇ., 1981. (ಫೆಬ್ರವರಿ). ‘ಪುಸ್ತಕ ಪ್ರಪಂಚ’, ಸಂ.35, ಸಂ.7, ಮೈಸೂರು:ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ.

36. ಜವರೇಗೌಡ ದೇ., 1989. ‘ಜಾನಪದ ಸೌಂದರ್ಯ’, ಮೈಸೂರು: ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾವರ್ದಕ ಟ್ರಸ್ಟ್.

37. ಜಿ.ಎ.ಡಿ., 1982. ‘ಕನ್ನಡದಲ್ಲಿ ಜಾನಪದ ಕಲ್ಪನೆ ಮತ್ತು ಇತರ ಲೇಖನಗಳು’, ತುಮಕೂರು: ತೇಜಸ್ವಿನಿ ಪ್ರಕಾಶನ.

38. ಜಿ.ಎ.ಡಿ., 1984. ‘ಜಾನಪದ ಚಿಂತನ’, ತುಮಕೂರು: ತೇಜಸ್ವಿನಿ ಪ್ರಕಾಶನ, ಸಿದ್ಧಗಂಗಾ.

39. ಜ್ಯೋತಿ ಹೊಸೂರ, 1974. ‘ಕನ್ನಡ ಜಾನಪದ ಸಾಹಿತ್ಯದ ವಿಮರ್ಶಾ ಕೃಷಿ)ಜಾನಪದ ಸಾಹಿತ್ಯ ದರ್ಶನ: ಭಾಗ–1’ (ಸಂ.) ಆರ್.ಸಿ. ಹಿರೇಮಠ) ಧಾರವಾಡ:ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.

40. ಜ್ಯೋತಿ ಹೊಸೂರ, 1971. ‘ಕನ್ನಡ ಜಾನಪದದ ಮುಖ್ಯ ವಿಭಾಗಗಳು’, (ಕರ್ನಾಟಕ ಭಾರತಿ, ಸ್ವಾತಂತ್ರ್ಯೋತ್ಸವ ಸಂಚಿಕೆ:ಸಂ.4) ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.

41. ಜ್ಯೋತಿ ಹೊಸೂರ, 1987, ‘ಜಾನಪದ ಉಪಾಸನೆ’, ಬೆಳಗಾವಿ: ಕಾಲಗತಿ ಪ್ರಕಾಶನ, ರಾಯ ಭಾಗ.

42. ಡಿ.ವಿ.ಜಿ., 1953. ‘ಸಂಸ್ಕೃತಿ’, ಮೈಸೂರು: ಕಾವ್ಯಾಲಯ ಪ್ರಕಾಶನ

43. ಡಿಸೋಜ ನಾ., 1985. ‘ಕರ್ನಾಟಕದಲ್ಲಿ ಕ್ರೈಸ್ತ ಧರ್ಮ’, (ಅವಲೋಕನ: ಕರ್ನಾಟಕ ಪರಂಪರೆಯ ಸಮೀಕ್ಷೆ (ಸಂ.) ಎಚ್ಚೆಸ್ಕೆ), ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ.

44. ದೇವೇಂದ್ರ ಕುಮಾರ ಹಕಾರಿ, 1993. ‘ಜಾನಪದ ಸಮೀಕ್ಷೆ’ (ಶೇಷಗಿರಿ ರಾವ್ ಎಲ್.ಎಸ್.(ಸಂ.) ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ) ಬೆಂಗಳೂರು: ಉದಯಭಾನು ಕಲಾಸಂಘ.

45. ತಪಸ್ವೀಕುಮಾರ್ ನಂ., 1970. ‘ಜನಪದ ಸಂಸ್ಕೃತಿ’, ಮೈಸೂರು: ಪ್ರಬುದ್ಧ ಪ್ರಕಾಶನ.

46. ತಪಸ್ವೀಕುಮಾರ್, 1972. 'ಕನ್ನಡ ಗಾದೆಗಳ ಸಮೀಕ್ಷೆ', ಮೈಸೂರು: ಪ್ರಸಾರಾಂಗ, ಮಾನಸ ಗಂಗೋತ್ರಿ.

47. ತಪಸ್ವೀಕುಮಾರ್ ನಂ., 1979. 'ಕನ್ನಡ ಒಗಟುಗಳ ಸಮೀಕ್ಷೆ'. ಮೈಸೂರು: ಪ್ರಸರಾಂಗ, ಮಾನಸಗಂಗೋತ್ರಿ.

48. ತಪಸ್ವೀಕುಮಾರ್ ನಂ., 1981. 'ಕನ್ನಡ ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ', ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

49. ತಪಸ್ವೀಕುಮಾರ್ ನಂ., 1982. 'ಕನ್ನಡ ಜಾನಪದಗೀತೆಗಳು ಸಾಂಸ್ಕೃತಿಕ ಅಧ್ಯಯನ', ಮೈಸೂರು: ಪ್ರಸರಾಂಗ, ಮೈಸೂರು ವಿಶ್ವವಿದ್ಯಾನಿಲಯ.

50. ದಾಮೋದರ ರಾವ್ ಬಿ., 1992. 'ಆಯಾಮಗಳು', ಶಿವಮೊಗ್ಗ: ಪರಿಸರ ಸಾಹಿತ್ಯ ಪ್ರಕಾಶನ.

51. ದೇವೇಂದ್ರಕುಮಾರ್ ಹಕಾರಿ, 1993. 'ಜಾನಪದ ಸಮೀಕ್ಷೆ', (ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ (ಸಂ) ಶೇಷಗಿರಿ ರಾವ್ ಎಲ್.ಎಸ್.) ಬೆಂಗಳೂರು: ಉದಯಭಾನು ಕಲಾ ಸಂಘ.

52. ನಾಗರಾಜ ಡಿ.ಆರ್., 1983. 'ಅಮೃತ ಮತ್ತು ಗರುಡ', ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ.

53. ನಾಗರಾಜ್ ಡಿ.ಆರ್., 1987. 'ಶಕ್ತಿ ಶಾರದೆಯ ಮೇಳ: ಆಧುನಿಕ ಕನ್ನಡ ಕಾವ್ಯದ ಅಧ್ಯಯನ', ಸಾಗರ:ಅಕ್ಷರ ಪ್ರಕಾಶನ.

54. ನಾಗರಾಜಯ್ಯ ಹಂಪ, 1982. 'ಜಾನಪದ ಅಧ್ಯಯನದ ವಿಚಾರ ಸಂಕಿರಣ', ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

55. ನಾಯಕ ಎನ್.ಆರ್., 1982. 'ಕಾರವಾರ ಜಿಲ್ಲೆಯ ಜನಪದ ಗೀತೆಗಳು', ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.

56. ನಾಯಕ ಎನ್.ಆರ್., 1985. 'ಜಾನಪದ ಸಿಂಹಾವಲೋಕನ', ಹೊನ್ನಾವರ: ಜಾನಪದ ಪ್ರಕಾಶನ ಉತ್ತರ ಕನ್ನಡ ಜಿಲ್ಲೆ.

57. ನಾಯಕ ಎನ್.ಆರ್., 1987. 'ಜಾನಪದ ಮೆಲುಕು', ಹೊನ್ನಾವರ ಉತ್ತರ ಕನ್ನಡ: ಜಾನಪದ ಪ್ರಕಾಶನ.

58. ನಾಯಕ ಹಾ.ಮಾ, 1971. 'ಜಾನಪದ ಸ್ವರೂಪ', ಮೈಸೂರು: ತ.ವೆಂ. ಸ್ಮಾರಕ ಗ್ರಂಥಮಾಲೆ.

59. ನಾಯಕ ಹಾ.ಮಾ., 1974. 'ಕನ್ನಡ ಜಾನಪದ ಗ್ರಂಥಸೂಚಿ', ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.

60. ನಾಯಕ ಹಾ.ಮಾ. (ಸಂ.) 1975. 'ಬಿಡುಗಡೆ ಬೆಳ್ಳಿ', ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ.

61. ನಾವಡ ಎ.ವಿ., 1993. 'ಜಾನಪದ ಸಮಾಲೋಚನ', ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

62. ಪಂಚಮುಖಿ ಆರ್.ಎಸ್., 1953. 'ಕರ್ನಾಟಕದ ಜನಪದ ಗೀತೆಗಳು', ಧಾರವಾಡ: ಕನ್ನಡ ರೀಸರ್ಚ್ ಇನ್‌ಸ್ಟಿಟ್ಯೂಟ್.

63. ಪರಮಶಿವಯ್ಯ ಜೀ.ಶಂ., 1967. 'ಜಾನಪದ ಸಾಹಿತ್ಯ ಸಮೀಕ್ಷೆ', ಮೈಸೂರು: ಮೋಹನ ಪ್ರಕಾಶನ, ಕೃಷ್ಣ ಮೂರ್ತಿಪುರಂ.

64. ಪರಮಶಿವಯ್ಯ ಜೀ.ಶಂ., 1967. 'ನಮ್ಮ ಜನಪದ ಸಾಹಿತ್ಯ', ಮೈಸೂರು: ಸಾಹಿತ್ಯ ಸದನ, ಸರಸ್ವತೀಪುರಂ.

65. ಪರಮಶಿವಯ್ಯ ಜೀ.ಶಂ., 1967. 'ಸ್ವಾತಂತ್ರ್ಯಪೂರ್ವ ಕನ್ನಡ ಜನಪದ ಸಾಹಿತ್ಯ', (ಹೊನ್ನ ಬಿತ್ತೇವು ಹೊಸಲಕ್ಕೆಲ್ಲ), ತರೀಕೆರೆ: ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನ.

66. ಪರಮಶಿವಯ್ಯ ಜೀ.ಶಂ., 1969. 'ಜಾನಪದ ಅಧ್ಯಯನ' (ಪ್ರಬುದ್ಧ ಕರ್ನಾಟಕ, ಚಿನ್ನದ ಸಂಚಿಕೆ, ಸಾಹಿತ್ಯ ಸಂಪುಟ) ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

67. ಪರಮಶಿವಯ್ಯ ಜೀ.ಶಂ., 1979. 'ಜಾನಪದ', ಮೈಸೂರು: ಸಾಹಿತ್ಯಸಾಧನ, ಮಾನಸಗಂಗೋತ್ರಿ.

68. ಪರಮಶಿವಯ್ಯ ಜೀ.ಶಂ., 1979. 'ದಕ್ಷಿಣ ಕರ್ನಾಟಕ ಕಾವ್ಯ ಪ್ರಕಾರಗಳು', ಮೈಸೂರು:ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

69. ಪರಮಶಿವಯ್ಯ ಜೀ.ಶಂ., ಮಾಡ್ತ ವಿಲಿಯಂ, (ಸಂ.) 1989. 'ಕರ್ನಾಟಕ ಜಾನಪದ', ಬೆಂಗಳೂರು:ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

70. ಪುರುಷೋತ್ತಮ ಬಿಳಿಮಲೆ, 1985. 'ಮೆಕೆಂಜಿ ಕೈಫಿಯತ್ತುಗಳು', ಪುತ್ತೂರು: ರಾಜೇಶ್ ಪವರ್ ಪ್ರೆಸ್.

71. ಪರಮಶಿವಯ್ಯ ಜೀ.ಶಂ., 1990. 'ಆಡಳಿತ ಭಾಷೆಯಾಗಿ ಕನ್ನಡ ಸಮಸ್ಯೆ ಮತ್ತು ಪರಿಹಾರ'(ಮಾನವಿಕ ಕರ್ನಾಟಕ ಸಂ.20, ಸಂ.4) ಮೈಸೂರು:ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

72. ಪುರುಷೋತ್ತಮ ಬಿಳಿಮಲೆ, 1992. 'ಶಿಷ್ಟ ಪರಿಶಿಷ್ಟ' (ವಿಮರ್ಶಾ ಲೇಖನಗಳು) ಮಂಗಳೂರು:ಮದಿಪು ಪ್ರಕಾಶನ, ಮಂಗಳ ಗಂಗೋತ್ರಿ.

73. ಪುರುಷೋತ್ತಮ ಬಿಳಿಮಲೆ, 1992. 'ಕನ್ನಡ ಜಾನಪದಕ್ಕೆ ಸ್ವಾತಂತ್ರ್ಯಪೂರ್ವ ದೇಶೀಯ ವಿದ್ವಾಂಸರ ಕೊಡುಗೆ', (ಕವಿಮಾರ್ಗ:ಸಂ.5, ಸಂ.1, 2) ಕಲುಬುರ್ಗಿ:ಕವಿಮಾರ್ಗ ಪತ್ರಿಕೆ.

74. ಪುರುಷೋತ್ತಮ ಬಿಳಿಮಲೆ,1993, ಕನ್ನಡ ಜಾನಪದಕ್ಕಾಗಿ ದುಡಿದವರು (ಪ್ರಜಾವಾಣಿ ವಿಶೇಷಾಂಕ) ಬೆಂಗಳೂರು: ಡೆಕ್ಕನ್ ಹೆರಾಲ್ಡ್ ಪ್ರೆಸ್ 66, ಮಹಾತ್ಮಾಗಾಂಧಿ ರಸ್ತೆ.

75. ಪುರುಷೋತ್ತಮ ಬಿಳಿಮಲೆ, 1993. 'ಕೊರಗರ ಸಂಸ್ಕೃತಿ', ಬೆಂಗಳೂರು:ಕರ್ನಾಟಕ ಸಾಹಿತ್ಯ ಅಕಾಡೆಮಿ.

76. ಪೂರ್ಣಚಂದ್ರ ತೇಜಸ್ವಿ ಕೆ.ಪಿ., 1974. 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' (ಸಂಕ್ರಮಣ–60) ಧಾರವಾಡ: ಸಂಕ್ರಮಣ ಪ್ರಕಾಶನ.

77. ಪ್ರಧಾನ ಗುರುದತ್ತ, (ಅನು.) 1990. 'ಆಧುನಿಕ ಯುಗದಲ್ಲಿ ಭಾರತೀಯ ತತ್ವಶಾಸ್ತ್ರ', (ಮೂಲ:ವಿ.ಬೋದ್ರೇವ್) ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್, ಪ್ರಗತಿ ಪ್ರಕಾಶನ.

78. ಪ್ರಭಾಕರ್ ಪೀಟರ್ ವಿಲ್ಸನ್, 1989. 'ದಕ್ಷಿಣ ಕನ್ನಡದಲ್ಲಿ ಬಾಸೆಲ್ ಮಿಷನ್', ಪುತ್ತೂರು: ಕನ್ನಡ ಸಂಘ, ವಿವೇಕಾನಂದ ಕಾಲೇಜು.

79. ಪ್ರಸನ್ನ, 1994. 'ಸತ್ಯನಿಷ್ಠತೆ ಹಾಗೂ ವಸ್ತು ನಿಷ್ಠತೆ' (ರುಜುವಾಸು ಸಂ.35(ಸಂ.), ಯು.ಆರ್. ಅನಂತಮೂರ್ತಿ), ಹೆಗ್ಗೋಡು: ಕವಿ–ಕಾವ್ಯ.

80. ಬಿರಾದಾರ ಮಗು, 1987. 'ಜಾನಪದ ಜೀವಾಳ', ಕಲಬುರುಗಿ: ಪುಸ್ತಕ ಅಕಾಡೆಮಿ.

81. ಬೇಂದ್ರೆ ದ.ರಾ., 1974. 'ಸಾಹಿತ್ಯದ ವಿರಾಟ್ ಸ್ವರೂಪ', ಧಾರವಾಡ: ಸಮಾಜ ಪುಸ್ತಕಾಲಯ

82. ಮರುಳ ಸಿದ್ಧಪ್ಪ ಕೆ., (ಅನು.) 1974. 'ಭಾರತೀಯ ಜಾನಪದ ಸಮೀಕ್ಷೆ', ಬೆಂಗಳೂರು:ಬೆಂಗಳೂರು ವಿಶ್ವವಿದ್ಯಾಲಯ.

83. ಮಲ್ಲಿಕಾರ್ಜುನ ಎಸ್.ಲಠ್ಠೆ., 1979. 'ಜಾನಪದ ದೀಪ್ತಿ (ಭಾಗ 1)', ಹುಬ್ಬಳ್ಳಿ:ಮನೋಹರ ಪಬ್ಲಿಕೇಶನ್ಸ್ ಮತ್ತು ಪ್ರಿಂಟರ್ಸ್.

84. ಮಲ್ಲಿಕಾರ್ಜುನ ಎಸ್.ಲಠ್ಠೆ., 1982. 'ಜಾನದೀಪ್ತಿ (ಭಾಗ 2)', ಬೆಳಗಾವಿ:ಬಾಬೂರಾವ ಹಿಡಮಗ್ಗಿ ಸ್ಮಾರಕ

85. ಮಹದೇವ ಬಣಕಾರ, 1986. 'ಆಂಗ್ಲರ ಆಡಳಿತದಲ್ಲಿ ಕನ್ನಡ', ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

86. ಮುತ್ತಣ್ಣ ಐ.ಮಾ., 1987. 'ಭಾರತದ ಸಾಹಿತ್ಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸರ ಕೊಡುಗೆ', ಮೈಸೂರು: ಶ್ರೀ ಇಲೆಕ್ಟ್ರಿಕಲ್ ಪ್ರೆಸ್, ಜಯನಗರ.

87. ಮುತ್ತಣ್ಣ ಐ.ಮಾ.,, 1992. '19ನೆಯ ಶತಮಾನದಲ್ಲಿರುವ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ', ಮೈಸೂರು:ಶ್ರೀ ಶಕ್ತಿ ಎಲೆಕ್ಟ್ರಿಕಲ್ ಪ್ರೆಸ್.

88. ರಹಮತ್ ತರೀಕೆರೆ, 1993. 'ಪ್ರತಿಸಂಸ್ಕೃತಿ', ಬೆಂಗಳೂರು: ಕನ್ನಡ ಸಂಘ, ಕ್ರೈಸ್ಟ್ ಕಾಲೇಜು.

89. ರಾಘವೇಂದ್ರರಾವ್ ಎಚ್.ಎಸ್.,(ಸಂ.) 1993. 'ಸಿರಿಗನ್ನಡ–ವಸಂತ ಸಂಚಿಕೆ', ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

90. ರಾಘವೇಂದ್ರರಾವ್ ಎಚ್.ಎಸ್., 1994. 'ಕನ್ನಡ ಅಧ್ಯಯನ(ಸಂ.1,ಸಂ.2)', ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

91. ರಾಜಗೋಪಾಲ್ ಟಿ.ಎಸ್., 1983. 'ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ', ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

92. ರಾಜಶೇಖರ ಪಿ.ಕೆ., 1990. 'ಜನಪದ ವೀರಕಾವ್ಯ:ಪಿರಿಯಾಪಟ್ಟಣದ ಕಾಳಗ', ಮೈಸೂರು: ಹೊನ್ನೂರು ಜನಪದ ಗಾಯಕರು.

93. ರಾಜೇಂದ್ರ ಚೆನ್ನಿ, 1989. 'ದೇಶಿವಾದ', ಬೆಂಗಳೂರು:ಕ ರ್ನಾಟಕ ಸಾಹಿತ್ಯ ಅಕಾಡೆಮಿ.

94. ರಾಜೇಂದ್ರ ಡಿ.ಕೆ., 1970. 'ಜಾನಪದ ಸಮೀಕ್ಷೆ'. ಮೈಸೂರು: ಗೀತಾ ಬುಕ್ ಹೌಸ್.

95. ರಾಜೇಂದ್ರ ಡಿ.ಕೆ., 1973. 'ಜಾನಪದ ಸಂಚಯ'. ಮೈಸೂರು: ತ.ವೆಂ.ಸ್ಮಾರಕ ಗ್ರಂಥಮಾಲೆ.

96. ರಾಮಕೃಷ್ಣ ಶೆಟ್ಟಿ ಟಿ., 1988. 'ತುಳು ಸಂಪೊತ್ತು', ನ್ಯೂಡೆಲ್ಲಿ: ತುಳುವೆರ್ ಪ್ರಕಾಶನಾಲಯ.

97. ರಾಮಣ್ಣ ಕ್ಯಾತನಹಳ್ಳಿ, 1991. 'ಫ್ಲೀಟರ್ ಸಂಗ್ರಹಿಸಿದ ಐತಿಹಾಸಿಕ ಲಾವಣಿಗಳು', ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

98. ರಾಮಚಂದ್ರಪ್ಪ ಬರಗೂರು, (ಸಂ.) 1992. 'ಶಂ.ಬಾ. ಜೋಶಿಯವರ ಸಂಸ್ಕೃತಿ ಚಿಂತನೆ', ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.

99. ರಾಮಚಂದ್ರಪ್ಪ ಬರಗೂರು, 1994. 'ಸಂಸ್ಕೃತಿ ಉಪಸಂಸ್ಕೃತಿ', ಮೈಸೂರು: ಭೂಮಿ ಬಳಗ.

100. ರಾಮಾನುಜಂ ಪಿ.ಎಸ್. (ಪ್ರ.ಸಂ.) 1992. 'ಕರ್ನಾಟಕದ ಪರಂಪರೆ, ಭಾಗ 1–2', ಬೆಂಗಳೂರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

101. ರಾಮಾನುಜನ್ ಎ.ಕೆ., 1995. 'ಗಾದೆಗಳು', ಧಾರವಾಡ:ಕರ್ನಾಟಕ ವಿಶ್ವವಿದ್ಯಾಲಯ.

102. ರಾಮರಾವ್ ಬಿ., 1927. 'ಬಳ್ಳಾರಿಯ ಕೈಫಿಯತ್ತು', ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ಪತ್ರಿಕೆ ಸಂ.11

103. ರಾಮೇಗೌಡ, 1968. 'ನಮ್ಮ ಗಾದೆಗಳು', ಮೈಸೂರು: ಗೀತಾ ಬುಕ್ ಹೌಸ್.

104. ರಾಮೇಗೌಡ, (ಸಂ.) 1969. 'ಕಿಟ್ಟೆಲ್ ಕೋಶದ ಗಾದೆಗಳು', ಮೈಸೂರು:ಉಷಾ ಸಾಹಿತ್ಯ ಮಾಲೆ.

105. ರಾಮೇಗೌಡ, 1974. 'ಜನಪದ ಸಂಕೀರ್ಣ', ಮೈಸೂರು:ಗಂಗಾ ಪ್ರಕಾಶನ, ವಾಣಿ ವಿಲಾಸಪುರಂ.

106. ರುದ್ರಪ್ಪ ಕೆ., 1994. 'ಬಳ್ಳಾರಿಯ ಜಿಲ್ಲೆಯ ಜನಪದ ಸಾಹಿತ್ಯ', ಪುರ:ಶ್ರೀ ಸಿದ್ಧವೀರ ಶಿವಾಚಾರ್ಯ ಜ್ಞಾನ ಪ್ರಕಾಶನ.

107. ಲಕ್ಷ್ಮಣ ತೆಲಗಾವಿ, 1987. 'ಜಾನಪದ ವೀರ ಸಾಹಿತ್ಯ, ಚಾರಿತ್ರಿಕ ವಿವೇಚನೆ', ಚಿತ್ರದುರ್ಗ: ವಾಲ್ಮೀಕಿ ಸಾಹಿತ್ಯಸಂಪದ, ಹರ್ತಿಕೋಟೆ.

108. ವಾದಿರಾಜ ಭಟ್ಟ ಕನರಾಡಿ, 1971. 'ಪಾಡ್ದನಗಳು', ಕಿನ್ನಿಗೋಳಿ: ಯುಗಪುರುಷ ಪ್ರಕಟಣಾಲಯ.

109. ವಾಲಿ ಎಂ.ಎನ್., 1990. 'ಸಿಂಪಿಲಿಂಗಣ್ಣನವರ ಜೀವನ ಹಾಗೂ ಸಾಹಿತ್ಯ'. ವಿಜಾಪುರ:ಭುವನೇಶ್ವರದ ಪ್ರಕಾಶನ.

110. ವಿಜಯ ತಂಬಂಡ ಪೂಣಚ್ಚ, 1995. 'ವಸಾಹತುಕಾಲದ ಕೊಡಗಿನ ಸಾಂಸ್ಕೃತಿಕ ಅಭಿವ್ಯಕ್ತಿಯಾಗಿ ಪಟ್ಟೋಲೆ ಪಳಮೆ: ಒಂದು ಹಿನ್ನೋಟ', (ಅರಿವು ಬರಹ–ತ್ರೈಮಾಸಿಕ, ಸಂಚಿಕೆ 8), ಕೊಣಾಜೆ:ಮಂಗಳ ಗಂಗೋತ್ರಿ.

111. ವಿವೇಕ ರೈ ಬಿ.ಎ., 1977. 'ತೌಳವ ಸಂಸ್ಕೃತಿ', ಮೈಸೂರು: ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್.

112. ವಿವೇಕ ರೈ ಬಿ.ಎ., 1987. 'ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು'. ಮಂಗಳೂರು: ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ.

113. ವೀರಣ್ಣ ದಂಡೆ, 1993. 'ಕನ್ನಡ ಜಾನಪದ ಪ್ರಜ್ಞೆ', ಕಲಬುರ್ಗಿ: ಕವಿಮಾರ್ಗ ಪ್ರಕಾಶನ.

114. ಸೂರ್ಯನಾಥ್ ಕಾಮತ್, (ಸಂ.) 1988. 'ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು', ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.

115. ವಿಷ್ಣುಭಟ್ ಪಾದೆಕಲ್ಲು, 1986. 'ಬಾಸೆಲ್ ಮಿಶನ್ ಮತ್ತು ಭೂತಾರಾಧನ ಪದ್ಧತಿ' (ಅಪ್ರಕಟಿತ: ಕರಾವಳಿ ಕರ್ನಾಟಕದ ಆರಾಧನ ರಂಗಭೂಮಿ) ಉಡುಪಿ: ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ.

116. ವೆಂಕಟರಮಣಯ್ಯ ಟಿ.ವಿ., (ಸಂ.) 1963. 'ಕನ್ನಡ ಗಾದೆಗಳ ಕೋಶ', ಕಲ್ಕತ್ತ: ನ್ಯಾಷನಲ್ ಲೈಬ್ರರಿ.

117. ವೆಂಕಟರಾಯ ಆಲೂರ, 1981. 'ಬಿಡಿನುಡಿ ಸಂಚಯ' (ಸಂ. ವರದರಾಜ ಹುಯಿಲಗೋಳ) ಧಾರವಾಡ: ವಿಜಯಾ ಮುದ್ರಣಾಲಯ.

118. ಶಂಕರನಾರಾಯಣ ತೀ.ನಂ. (ಸಂ.) 1985. 'ದ್ರಾವಿಡ ಜಾನಪದ', ಬಿ.ಆರ್. ಪ್ರಾಜೆಕ್ಟ್.: ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ.

119. ಶಿವರುದ್ರಪ್ಪ ಜಿ.ಎಸ್., 1982. 'ಹಿನ್ನೆಲೆ', ಬೆಂಗಳೂರು: ಕಲ್ಲಯ್ಯ ಆಂಡ್ ಸನ್ಸ್ ಅರಳಪೇಟೆ.

120. ಶಿವಾನಂದ ಗುಬ್ಬಣ್ಣನವರ, 1991. 'ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ', ಧಾರವಾಡ: ಅಕ್ಷರ ಪ್ರಕಾಶನ.

121. ಶಿವರಾಮು, 1967. 'ಕನ್ನಡದ ಕಡುಗಲಿಗಳು', ಬೆಂಗಳೂರು: ರಾಷ್ಟ್ರೋತ್ಥಾನ ಸಾಹಿತ್ಯ, ದಕ್ಷಿಣಾಂತ ಮಾರ್ಗ.

122. ಶಂಕರನಾರಾಯಣ ತೀ.ನಂ., 1978. 'ಜಾನಪದ ವಿಚಾರ', ಬೆಂಗಳೂರು: ಹಂಸಧ್ವನಿ ಪ್ರಕಾಶನ, ರಾಜಾಜಿನಗರ.

123. ಶಂ.ಬಾ.ಜೋಶಿ, 1966. 'ಕರ್ನಾಟಕ–ಸಂಸ್ಕೃತಿಯ ಪೂರ್ವ–ಪೀಠಿಕೆ: ದ್ವಿತೀಯ ಭಾಗ (ಕರ್ನಾಟಕದ ವೀರಕ್ಷತ್ರಿಯರು–ಹಟ್ಟಿಕಾರರು:ದನಗಾರರು)', ಧಾರವಾಡ: ಸಮಾಜ ಪುಸ್ತಕಾಲಯ, ಶಿವಾಜಿಬೀದಿ.

124. ಶಿವಮೂರ್ತಿ ಶಾಸ್ತ್ರಿ ಬಿ., 1974. 'ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ', ಬೆಂಗಳೂರು: ಶರಣ ಸಾಹಿತ್ಯ ಪ್ರಕಟಣಾಲಯ, ರಾಜಾಜಿನಗರ.

125. ಶಿವರಾಮು ಕಾಡನಕುಪ್ಪೆ, 1976. 'ಜನಪದ ಸಾಹಿತ್ಯದ ಅಧ್ಯಯನ – ಒಂದು ಟಿಪ್ಪಣಿ' (ಸಿ.ಪಿ.ಕೆ. (ಸಂ.) ಹಬ್ಬಲಿ ಅವರ ರಸಬಳ್ಳಿ), ಮೈಸೂರು: ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲಾ ಸಮಿತಿ.

126. ಶಿವರಾಮಕಾರಂತ ಕೆ., 1971. 'ಜಾನಪದ ಗೀತೆಗಳು', ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

127. ಶಿವರಾಮ ಪಡಿಕ್ಕಲ್, 1987. 'ಕನ್ನಡ ಕಾದಂಬರಿಯ ಮೊದಲ ಹೆಜ್ಜೆ' (ಮಂಗಳೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಪಿಎಚ್.ಡಿ. ಮಹಾಪ್ರಬಂಧ: ಅಪ್ರಕಟಿತ) ಮಂಗಳೂರು: ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ.

128. ಶಿವರುದ್ರಪ್ಪ ಜಿ.ಎಸ್.,(ಸಂ.) 1988. 'ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ', ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.

129. ಶಿವಾನಂದ ಗುಬ್ಬಣ್ಣನವರ, 1991. 'ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ', ಧಾರವಾಡ: ಅಕ್ಷಯ ಪ್ರಕಾಶನ.

130. ಶಿವರಾಮಕಾರಂತ ಕೆ., 1971. 'ಜಾನಪದ ಗೀತೆಗಳು', ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

131. ಶೇಷಗಿರಿರಾವ್ ಎಲ್.ಎಸ್., 1992. 'ಮಾಸ್ತಿಜೀವನ ಮತ್ತು ಸಾಹಿತ್ಯ', ಬೆಂಗಳೂರು: ಮಾಸ್ತಿ ಶತಮಾನೋತ್ಸವ ಸಮಿತಿ.

132. ಶ್ರೀಕಂಠಯ್ಯ ತೀ.ನಂ., 1931. 'ಮಕ್ಕಳಿಗೆ ಹೇಳುವ ಕಥೆಗಳು', ಮೈಸೂರು: ವಿದ್ಯಾದಾಯಿನಿ.

133. ಶ್ರೀಕಂಠಯ್ಯ ತೀ.ನಂ., 1948, 'ಕೆರೆಗೆ ಹಾರ', ಬೆಂಗಳೂರು: ಪೌರವಾಣಿ ವಿಶೇಷ ಸಂಚಿಕೆ.

134. ಶ್ರೀಕಂಠಯ್ಯ ತೀ.ನಂ., 1958, 'ಸಮಾಲೋಕನ', ಮೈಸೂರು: ಶಾರದಾ ಮಂದಿರ.

135. ಶ್ರೀಕಂಠಯ್ಯ ತೀ.ನಂ., 1970. 'ಕಾವ್ಯಾನುಭವ', ಮೈಸೂರು: ಶಾರದಾ ಮಂದಿರ.

136. ಶ್ರೀಕಂಠ ಶಾಸ್ತ್ರೀ ಎಸ್., 1954. 'ಭಾರತೀಯ ಸಂಸ್ಕೃತಿ', ಮೈಸೂರು: ಮೈಸೂರು ವಿಶ್ವ ವಿದ್ಯಾಲಯ

137. ಶ್ರೀನಿವಾಸ ಹಾವನೂರು, 1974. 'ಹೊಸಗನ್ನಡ ಅರುಣೋದಯ', ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.

138. ಶ್ರೀನಿವಾಸ ಹಾವನೂರು, 1982. 'ಫ್ಲೀಟ್ ಸಂಗ್ರಹಿಸಿದ್ದ ಕೆಲವು ಅಪೂರ್ವ ಹಾಡುಗಳು' (ಡಾ. ಬೆಟಗೇರಿ ಕೃಷ್ಣಶರ್ಮ ಅಭಿನಂದನ ಗ್ರಂಥ) ಬೆಳುವಾಲ: ರಾಯಭಾಗ.

139. ಶ್ರೀಕೃಷ್ಣ ಭಟ್ ಅರ್ತಿಕಜೆ, 1983. 'ಸಹಸ್ರಾರ್ಧ ತುಳು ಗಾದೆಗಳ', ಪುತ್ತೂರು: ಸಮೀರ ಪ್ರಕಾಶನ.

140. ಶ್ರೀಕೃಷ್ಣ ಭಟ್ ಅರ್ತಿಕಜೆ, 1988. 'ಜನಪ್ರಿಯ ತುಳು ಗಾದೆಗಳು'. ಕಿನ್ನಿಗೋಳಿ: ಯುಗಪುರುಷ ಪ್ರಕಟಣಾಲಯ, ದಕ್ಷಿಣಕನ್ನಡ ಜಿಲ್ಲೆ.

141. ಸತ್ಯನಾಥ ಟಿ.ಎಸ್., 1988. 'ಕನ್ನಡ ಜಾನಪದ:ಕೆಲವು ಮುಖಗಳು', ಬೆಂಗಳೂರು: ಶಾರದ ಪ್ರಕಾಶನ.

142. ಸಿ.ಸಿ.ಎ.ಪೈ., 1978. 'ಜಾನಪದ ವೈಜ್ಞಾನಿಕ ಕ್ಷೇತ್ರ ಕಾರ್ಯ', ಧಾರವಾಡ: ವ್ಯಾಸಂಗ ವಿಸ್ತರಣ ಪ್ರಕಟನಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ.

143. ಸುಂಕದ ಆರ್.ಎಸ್., 1991. 'ಕನ್ನಡ ಸಾಹಿಯ ಸಂಸ್ಕೃತಿ ದರ್ಶನ', ಧಾರವಾಡ:ಸಮಾಜ ಪುಸ್ತಕಾಲಯ

144. ಸುಂದರಂ, ಆರ್ವೀಯಸ್, 1976. ಜನಪದ ಸಾಹಿತ್ಯದ ಮೂಲತತ್ವಗಳು, ಮೈಸೂರು: ಅರ್ಕಾವತಿ ಪ್ರಕಾಶನ.

145. ಸುಬ್ಬಯ್ಯಶೆಟ್ಟಿ ಪೆರುವಾಯಿ, 1976. 'ತುಳು ಗಾದೆಗಳು', ಮಂಗಳೂರು: ಮಂಗಳೂರು ವಿಶ್ವವಿದ್ಯಾನಿಲಯ.

146. ಸುಶೀಲಾಪಟ್ಟಣ ಶೆಟ್ಟಿ, 1974. 'ಕನ್ನಡ ಜನಪದ ಸಾಹಿತ್ಯದ ಸಂಕಲನ ಕೃಷಿ' (ಜಾನಪದ ಸಾಹಿತ್ಯ ದರ್ಶನ ವಿಭಾಗ–1 (ಸಂ.), ಆರ್.ಸಿ. ಹಿರೇಮಠ) ಧಾರವಾಡ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.

147. ಸೂರ್ಯನಾಥ ಕಾಮತ ಯು., 1988. 'ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು', ಹುಬ್ಬಳ್ಳಿ: ಬುಲ್ಲಿ ಬಿಂದು ಮಾಧವ ಸ್ಮಾರಕ ಪ್ರತಿಷ್ಠಾನ.

148. ಸೂರ್ಯನಾಥ ಕಾಮತ್ ಯು., (ಸಂ.) 1992. 'ಭಾರತದ ಗ್ಯಾಸೆಟಿಯರ್', ಕರ್ನಾಟಕ: ಕೊಡಗು ಜಿಲ್ಲೆ.

149. ಸೋಮಶೇಖರ ಇಮ್ರಾಪುರ, 1979. 'ನಮ್ಮ ಜಾನಪದ ಸಮೀಕ್ಷೆ', ಧಾರವಾಡ: ಚೇತನಾ ಪ್ರಕಾಶನ.

150. ಸೋಮಶೇಖರ ಇಮ್ರಾಪುರ, 1985. 'ಭಾಷಿಕ ಮತ್ತು ಸಾಹಿತ್ಯಿಕ ಬಗೆಗಳು' (ಶಂಕರನಾರಾಯಣ ತೀ.ನಂ.(ಸಂ.) ದ್ರಾವಿಡ ಜಾನಪದ), ಬಿ.ಆರ್.ಪ್ರಾಜೆಕ್ಟ್: ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ.

151. ಸೋಮಶೇಖರ ಇಮ್ರಾಪುರ, 1986. 'ಜನಪದ ಹಾಡುಗಳಲ್ಲಿ ನರಗುಂದ ಬಾಬಾಸಾಹೇಬ', ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.

152. ಹರಿದಾಸ ಭಟ್ಟ ಕು.ಶಿ.(ಸಂ.) 1982. 'ಸ್ವಾತಂತ್ರ್ಯಪೂರ್ವ ತುಳು ಸಾಹಿತ್ಯ', ಉಡುಪಿ:ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ. ಜಿ.ಎಂ. ಕಾಲೇಜು.

153. ಹರಿದಾಸ ಭಟ್ಟ ಕು.ಶಿ., 1993. 'ಕರ್ನಾಟಕ ಜಾನಪದ ಅಧ್ಯಯನ – ನಿನ್ನೆ, ಇಂದು, ನಾಳೆ', (ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ 1991ರ ಫೆ.24–25ಕ್ಕೆ ನೀಡಿದ ಬೇಂದ್ರೆ ಸ್ಮಾರಕ ದತ್ತಿ ಉಪನ್ಯಾಸ) ಉಡುಪಿ.

154. ಹಿರಿಯಣ್ಣ ಅಂಬಳಿಕೆ, 1987. 'ಕರ್ನಾಟಕದ ಜಾನಪದ ಅಧ್ಯಯನ', (ಸಂ.) ಪರಮಶಿವಯ್ಯ ಜೀ.ಶಂ., ವಿಲಿಯಂ ಮಾಡ್ತಾ) ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

155. ಹಿರಿಯಣ್ಣ ಅಂಬಳಿಕೆ, 1987. 'ಜಾನಪದ ಹಿನ್ನೆಲೆ', ಮೈಸೂರು: ಪ್ರಜ್ವಲ ಪ್ರಕಾಶನ.

156. ಹಿರಿಯಣ್ಣ ಅಂಬಳಿಕೆ, 1989. 'ಕರ್ನಾಟಕದಲ್ಲಿ ಜಾನಪದ ಅಧ್ಯಯನ ನಡೆದು ಬಂದ ದಾರಿ', (ಕರ್ನಾಟಕ ಜಾನಪದ (ಸಂ.) ಪರಮಶಿವಯ್ಯ ಜೀ.ಶಂ.ವಿಲಿಯಂ ಮಾಡ್ತಾ) ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

157. ಹಿರಿಯಣ್ಣ ಅಂಬಳಿಕೆ, 1992. 'ಸೈದ್ಧಾಂತಿಕ ಜಾನಪದ', ಮೈಸೂರು: ಪ್ರಜ್ವಲ ಪ್ರಕಾಶನ.

158. ಹಿರಿಯಣ್ಣ ಅಂಬಳಿಕೆ, 1994. 'ಜಾನಪದ ಲೋಚನ', ಮೈಸೂರು: ಪ್ರಜ್ವಲ ಪ್ರಕಾಶನ.

159. ಹಿರೇಮಠ ಆರ್.ಸಿ.,(ಸಂ.) 1997. 'ಜಾನಪದ ಸಾಹಿತ್ಯ ದರ್ಶನ–ಭಾಗ: 1', ಧಾರವಾಡ:ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.

160. ಹುಂಡೇಕಾರ ಸಾ.ಮ.,(ಸಂ.) 1985. 'ವಿಜಾಪುರ ಜಿಲ್ಲೆ–ಜಾನಪದ ದರ್ಶನ ಸ್ಮರಣ ಸಂಚಿಕೆ', ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

161. ಹೆಗಡೆ ಜಿ.ಎಂ., 1991. 'ಮಾಸ್ತಿಯವರ ವಿಮರ್ಶೆ:ಒಂದು ಅಧ್ಯಯನ', ಧಾರವಾಡ:ಶ್ರೀಮಾತಾ ಪ್ರಕಾಶನ, ವರಕವಿ ಬೇಂದ್ರೆ ಮಾರ್ಗ, ಸಾಧನಕೇರಿ.

162. Dundes, Alan (Ed) 1965. 'The Study of Folklore', New Jersey: prentice-Hall Inc

163. Dundes, Alan, 1975. 'Analytic Essays in Folklore', The Haque-Mouton.

164. Gurupreet Mohajan, 1992. 'Explanation and understanding Human Sciences', Delhi:Oxford University Press

165. Gururaja Bhat P., 1975. 'Studies in Tuluva –History Culture', Kallianpur:South Kanara, Karnataka.

166. Hall Stuart, 1992. 'Formations of Modernity', Cambridge: Polity Press in Association with open University.

167. Handoo, Jawaharlal, 1977. 'A Bibliography of Indian Folk Literature', Mysore: Central Institute of Indian Languages.

168. Handoo, Jawaharlal, 1978. 'Current Trends in Folklore', Mysore: University of Mysore.

169. Handoo, Jawaharlal, 1989. 'Folklore:An Introduction', Mysore: Central Institute of Indian Languages, Manasa-Gangotri.

170. Handoo, Jawaharlal, 1991. 'South Indian Folklore Studies: Growth and Development', (Encyclopedia of the Folk Culture of Karnataka (Ed), Krishnamurthi Hanoor), Madras: Institute of Asian Studies, Thiruvanmiyur.

171. Pretti J. Anttonen, 1993. 'Folklore modernity and Post Modernism', (In Nordic Frontiers (Ed) Pertti J Anttonen and Reimand Kvideland) Turku: Nordic Institute of Folklore.

172. Richard Dorson M., 1972. 'Foolklore and Folklife – an Introduction', Chicago: University of Chicago Press.

*****